ಕನ್ನಡದಲ್ಲಿ ಮಕ್ಕಳ ಕಥನ ಸಾಹಿತ್ಯ: ಫ್ಯಾಂಟಸಿಯ ಸ್ವರೂಪ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ಶಿವಲಿಂಗಪ್ಪ ಕೆ.

ಮಾರ್ಗದರ್ಶಕರು
ಡಾ. ರಹಮತ್ ತರೀಕೆರೆ
ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಷಾ ನಿಕಾಯ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೨೦

ಕನ್ನಡದಲ್ಲಿ ಮಕ್ಕಳ ಕಥನ ಸಾಹಿತ್ಯ: ಫ್ಯಾಂಟಸಿಯ ಸ್ವರೂಪ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಶಿವಲಿಂಗಪ್ಪ ಕೆ.

ಮಾರ್ಗದರ್ಶಕರು

ಡಾ. ರಹಮತ್ ತರೀಕೆರೆ

ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಷಾ ನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೨೦

ಮಾರ್ಗದರ್ಶಕರ ದೃಢೀಕರಣ ಪತ್ರ

'ಕನ್ನಡದಲ್ಲಿ ಮಕ್ಕಳ ಕಥನ ಸಾಹಿತ್ಯ: ಫ್ಯಾಂಟಸಿಯ ಸ್ವರೂಪ' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಶಿವಲಿಂಗಪ್ಪ ಕೆ.** ಇವರು ನನ್ನ ಮಾರ್ಗದರ್ಶನದಲ್ಲಿ ಪಿಎಚ್.ಡಿ., ಪದವಿಗಾಗಿ ಸಿದ್ಧಪಡಿಸಿದ್ದು, ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಭಾಷಾನಿಕಾಯದ **ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ** ಪಿಎಚ್.ಡಿ., ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ. ರಹಮತ್ ತರೀಕೆರೆ
ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

ದಿನಾಂಕ: 18.06.2020
ಸ್ಥಳ : ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

‘ಕನ್ನಡದಲ್ಲಿ ಮಕ್ಕಳ ಕಥನ ಸಾಹಿತ್ಯ: ಫ್ಯಾಂಟಸಿಯ ಸ್ವರೂಪ’ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ರಹಮತ್ ತರೀಕೆರೆ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಭಾಷಾನಿಕಾಯದ **ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ** ಪಿಎಚ್.ಡಿ., ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸಂಶೋಧಕರು

[signature]

ಶಿವಲಿಂಗಪ್ಪ ಕೆ.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ದಿನಾಂಕ: 18.06.2020

ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಸ್ವರೂಪ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ಮಹತ್ವ

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ವಿಧಾನ

ಅಧ್ಯಾಯ : ಒಂದು

ಅಧ್ಯಯನದ ಸ್ವರೂಪ

ಪ್ರಸ್ತಾವನೆ

'ಫ್ಯಾಂಟಸಿ' ಎಂಬ ಶಬ್ದವು ಕನ್ನಡಕ್ಕೆ ಹೊಸತಾಗಿದ್ದರೂ, ಅದರ ಅರ್ಥ ಮತ್ತು ಬಳಕೆ ಪ್ರಾಚೀನವಾಗಿದೆ. ಇದು ಶತ ಶತಮಾನಗಳಿಂದ ಪ್ರತಿ ಸಮಾಜದ ಅವಿಭಾಜ್ಯವಾಗಿ ಹೋಗಿದೆ. ಮನುಷ್ಯ ತಾನು ಹೇಳಿಕೊಂಡ ಕಥೆ, ಕಾವ್ಯಗಳಲ್ಲಿ ವಾಸ್ತವ ಬದುಕನ್ನು ಮೀರಿಸಿದ ಚಿತ್ರಣಗಳನ್ನು ನೀಡಿದ ಪುರಾಣ, ಜನಪದಗಳಲ್ಲಿ ಅದೊಂದು ಭಾಗವಾಗಿ ಇರುವುದನ್ನು ಕಾಣಬಹುದು. ಫ್ಯಾಂಟಸಿ ತನ್ನದೇ ಆದ ಕಲ್ಪನಾತ್ಮಕ ಜಗತ್ತನ್ನು ಅನಾವರಣ ಮಾಡುತ್ತದೆ. ಹೊಸದೊಂದು, ವಿಶಿಷ್ಟವಾದುದನ್ನು ಊಹಿಸಿಕೊಳ್ಳಲೆಂದೇ ಇದು ಉದ್ದೇಶಿತವಾಗಿರುತ್ತದೆ. ಇದು ಮೂಲತಃ ಮನರಂಜನೆಗಾಗಿ ರಚಿತವಾಗಿರುತ್ತದೆ. ಕಥೆಯ ಸ್ವರೂಪಕ್ಕೆ ತಕ್ಕಂತೆ ಹೊಂದಿಕೆಯಾಗಿರುತ್ತದೆ. ಆದರೆ ಅದು ಸಮುದಾಯದ ಮನರಂಜನೆಯ ಉದ್ದೇಶಗಳಾಚೆಗೂ ಚಲಿಸಿ, ವಾಸ್ತವೇತರ ಲೋಕದ ಕನಸು ಕಲ್ಪನೆಗಳನ್ನು ಒಳಗೊಂಡಿರುತ್ತದೆ. ಈ ಕನಸು ಕಲ್ಪನೆಗಳಲ್ಲಿ ಅದರ ಜೀವನಮೌಲ್ಯಗಳೂ ಆದರ್ಶದ ಕಲ್ಪನೆಗಳೂ ರೂಪವನ್ನು ಪಡೆಯುತ್ತವೆ. ಬಹುತೇಕ ದೈವಿಕ ಲೌಕಿಕ ಪುರಾಣಗಳು ಸೃಷ್ಟಿಯಾಗುವುದು ಹೀಗೇ. ಹೀಗೆ ಫ್ಯಾಂಟಸಿಯು ಒಂದು ಸಮುದಾಯದ ಮಾಟಗಾರಿಕೆ, ಪ್ರಕೃತಿ, ದೈವಗಳು, ಪ್ರಾಣಿ ಪಕ್ಷಿಗಳು ಎಲ್ಲವನ್ನೂ ತನ್ನೊಳಗೆ ಇರಿಸಿಕೊಂಡ ಅದ್ಭುತಲೋಕ ಇದಾಗಿದೆ.

ಫ್ಯಾಂಟಸಿ ಪರಿಭಾಷೆಯನ್ನು ಮೊಟ್ಟ ಮೊದಲು ಬಳಸಿ ಆಧುನಿಕ ಫ್ಯಾಂಟಸಿಯ ಪಿತಾಮಹ ಎನಿಸಿಕೊಂಡವನು ಜಾನ್ ಟಾಲ್ಕಿನ್. ಅವನ 'ದಿ ಲಾರ್ಡ ಆಫ್ ರಿಂಗ್ಸ್' ಕೃತಿಯು ಪುಟ್ಟದಾದ ಫ್ಯಾಂಟಸಿ ಲೋಕವೊಂದನ್ನು ತೆರೆದಿಡುವ ಮೂಲಕ ಹೊಸ ಪರಿಭಾಷೆಗೆ ನಾಂದಿ ಹಾಡಿ ಸಾಂಸ್ಕೃತಿಕ ಸಂಚಲನವನ್ನು ಉಂಟುಮಾಡಿತು. ಈ ಕೃತಿಯ ಮೂಲಕ ಫ್ಯಾಂಟಸಿಗೆ ಇರುವ ಗಟ್ಟಿತನವನ್ನು ಸಾಬೀತು ಮಾಡಿತು ಕೂಡ. ಈ ಪದ ಕೇಳಿದೊಡನೆ ಇದೊಂದು ಅತಿವಾಸ್ತವ ಲೋಕದ ಕಲ್ಪನೆಗಳ ಗುಚ್ಛವೆನಿಸುತ್ತದೆ. ಆದರೂ ಫ್ಯಾಂಟಸಿ ಎಂದರೆ ಬರೀ ಅತಿವಾಸ್ತವವೇ ಕಲ್ಪನೆಯೇ? ಅದು ಮಕ್ಕಳ ಸಾಹಿತ್ಯ ಲೋಕದಲ್ಲಿ ವಹಿಸುವ ಪಾತ್ರವೇನು? ಇದರ ಪರಿಣಾಮಗಳು ಏನಾಗಿವೆ? ಈ ಪ್ರಶ್ನೆಗಳಿಗೆ ಪ್ರಸ್ತುತ ಅಧ್ಯಯನದಲ್ಲಿ ಉತ್ತರ ಹುಡುಕುವ ಪ್ರಯತ್ನ ಮಾಡಲಾಗುತ್ತದೆ.

ಇಂಗ್ಲಿಷ್ ಒಳಗೊಂಡಂತೆ ಯೂರೋಪಿಯನ್ ಭಾಷೆಗಳಲ್ಲಿ ಫ್ಯಾಂಟಸಿಯ ಕುರಿತು ತುಂಬಾ ಚರ್ಚೆಗಳು ಆಗಿದ್ದರೂ ಭಾರತದ ಪ್ರಾದೇಶಿಕ ಭಾಷೆಗಳಲ್ಲಿ ಹುಟ್ಟಿಕೊಂಡ ಫ್ಯಾಂಟಸಿ ಪರಿಕಲ್ಪನೆ ಮಾತ್ರ ತುಂಬಾ ಭಿನ್ನವಾದುದು. ಭಾರತದಲ್ಲಿ ಯೂರೋಪಿಯನ್ ಭಾಷೆಗಳಲ್ಲಿರುವ ಫ್ಯಾಂಟಸಿಯನ್ನು ಅನುಸರಿಸದೆ ಪರಂಪರೆಯಲ್ಲಿರುವ ಪುರಾಣ, ಚರಿತ್ರೆ, ಜನಪದ ಕಥೆಗಳ ಕಲ್ಪನಾ ಜಗತ್ತಿನ ಹಿನ್ನೆಲೆಯಲ್ಲಿಯೇ ಮಕ್ಕಳ ಸಾಹಿತ್ಯ ರಚನೆಯಾಯಿತು. ಕನ್ನಡ ಮಕ್ಕಳ ಸಾಹಿತ್ಯವೂ ಇದೇ ಹಿನ್ನೆಲೆಯಲ್ಲಿಯೇ ರೂಪುಗೊಂಡಿತು. ಪಂಚತಂತ್ರ, ಜನಪದ ಸಾಹಿತ್ಯ, ಪುರಾಣಗಳು ಕನ್ನಡ ಮಕ್ಕಳ ಸಾಹಿತ್ಯದ ಮೇಲೆ ತುಂಬಾ ಪ್ರಭಾವಿಸಿದವು.

ಹತ್ತೊಂಬತ್ತನೇ ಶತಮಾನದ ಕೊನೆಯಲ್ಲಿ ಮತ್ತು ಇಪ್ಪತ್ತನೇ ಶತಮಾನದ ಆರಂಭದಲ್ಲಿ ಇಂಗ್ಲಿಷಿನ ರಮ್ಯ ಸಾಹಿತ್ಯವು ಪ್ರೌಢ ಬರವಣಿಗೆಗೆ ಪ್ರಭಾವಿಸಿದಷ್ಟು ಮಕ್ಕಳ ಸಾಹಿತ್ಯಕ್ಕೆ ಪ್ರಭಾವಿಸಲಿಲ್ಲ. ಶೈಕ್ಷಣಿಕ ಉದ್ದೇಶದ ಹಿನ್ನೆಲೆಯಲ್ಲಿ ಆರಂಭಗೊಂಡ ಮಕ್ಕಳ ಸಾಹಿತ್ಯ ಬರವಣಿಗೆ ನಂತರ ಪ್ರಕಾರವಾಗಿ ಬೆಳೆಯಲು ಜನಪದ ಸಾಹಿತ್ಯ, ಪಂಚತಂತ್ರ ಕೃತಿಗಳು ತುಂಬಾ ಪ್ರಭಾವಿಸಿದವು. ಇದುವರೆಗೆ ಬಂದ ಒಟ್ಟು ಮಕ್ಕಳ ಸಾಹಿತ್ಯ ರಚನೆಯಲ್ಲಿ ಇವುಗಳ ಪಾಲು ಅಗ್ರಗಣ್ಯ. ಹೀಗೆ ಫ್ಯಾಂಟಸಿ ಹೆಸರು ಹೇಳಿಕೊಳ್ಳದೆ ದೇಸೀ ನೆಲೆಯಲ್ಲಿ ಹುಟ್ಟಿಕೊಂಡ ಮಕ್ಕಳ ಕಥನ ಸಾಹಿತ್ಯವು ಕನ್ನಡದ ವಿಶೇಷತೆಯಾಗಿದೆ. ಪ್ರತಿ ಭಾಷಿಕ ಸಮುದಾಯವೂ ತನ್ನದೇ ಆದ ಫ್ಯಾಂಟಸಿಯ ಪರಿಕಲ್ಪನೆಯನ್ನು ಹೊಂದಿರುತ್ತದೆ. ಈ ಪರಿಕಲ್ಪನೆಯು ಆ ಸಮುದಾಯದ ಆಲೋಚನಕ್ರಮ, ಲೋಕದೃಷ್ಟಿಯನ್ನು ಒಳಗೊಂಡಿರುತ್ತದೆ. ಆದರೆ ಅದು ಬೇರೆಬೇರೆ ದೇಶಗಳ ಸಾಹಿತ್ಯಗಳಿಗೆ ತೆರೆದುಕೊಂಡಾಗ, ಪ್ರಭಾವಗಳನ್ನು ಸ್ವೀಕರಿಸುತ್ತದೆ ಮತ್ತು ತನ್ನ ಫ್ಯಾಂಟಸಿಯ ಪರಿಕಲ್ಪನೆಯನ್ನು ಮರುಹುಟ್ಟಿಸಿಕೊಳ್ಳುತ್ತದೆ.

ಪ್ರಸ್ತುತ ಪ್ರಬಂಧವು ಕನ್ನಡ ಮಕ್ಕಳ ಕಥನ ಸಾಹಿತ್ಯವನ್ನು ಆಕರವಾಗಿಸಿಕೊಂಡು ವಿಶ್ಲೇಷಣೆ ಮಾಡಿದೆ. ಇಲ್ಲಿ ಕಥೆ, ಕಾದಂಬರಿಗಳನ್ನು ಪ್ರಧಾನವಾಗಿರಿಸಿ ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಪ್ರಬಂಧಕ್ಕೆ ಆಕರವಾಗಿರುವ 'ಕಥೆ' ಪದವು ಅಲ್ಲಲ್ಲಿ ಕತೆ ಎಂದೂ ಬಳಕೆಯಾಗುತ್ತಾ ಹೋಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ನಿಘಂಟುವಿನಲ್ಲಿ ಎರಡೂ ಪದಗಳನ್ನು ನೀಡಿದೆ. ಹೀಗಾಗಿ ಎರಡನ್ನೂ ಬಳಸಿಕೊಂಡು ಕಥನದೊಳಗಿನ ಫ್ಯಾಂಟಸಿಯನ್ನು ವಿಶ್ಲೇಷಣೆ ಮಾಡಲಾಗಿದೆ.

೧.೧. ಅಧ್ಯಯನದ ಉದ್ದೇಶ

ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಕುರಿತು ಸಂಶೋಧನೆಗಳು ಆಗಿರುವುದು ತುಂಬಾ ವಿರಳ. ಆದರೂ ಬಹುತೇಕ ಸಂಶೋಧನೆಗಳು ಮಕ್ಕಳ ಸಾಹಿತ್ಯ ಚರಿತ್ರೆಯನ್ನು ಪರಿಚಯಿಸುವ, ವ್ಯಕ್ತಿ ಅಧ್ಯಯನಗಳಿಗೆ ಸೀಮಿತವಾಗಿವೆ. ಆದರೆ ಈ ಪ್ರಕಾರದ ಗಂಭೀರತೆಯನ್ನು ಎತ್ತಿ ಹಿಡಿಯುವ ಸಂಶೋಧನೆಗಳು ನಡೆದಿರುವುದು ಕಡಿಮೆ. ಮಕ್ಕಳ ಸಾಹಿತ್ಯ ಕುರಿತು ಅಗತ್ಯವಾಗಿ ಮಾತನಾಡಬೇಕಾದ

ಈ ಹೊತ್ತಿನಲ್ಲಿ ಆ ಕುರಿತ ಸಂಶೋಧನೆಗಳು ಹೆಚ್ಚೆಚ್ಚು ಆಗಬೇಕಾಗಿದೆ. ಕಲ್ಪನೆ ಎನ್ನುವುದು ಮಕ್ಕಳ ಲೋಕದ ವಾಸ್ತವ. ಮಕ್ಕಳು ಅಸಾಧ್ಯವಾದುದನ್ನು ಸಾಧ್ಯವಾಗಿಸುವ ಪ್ರಯತ್ನದಲ್ಲಿ ಊಹಾತೀತವಾದ ಹಲವಾರು ಕಲ್ಪನೆಗಳಿಗೆ ತೆರೆದುಕೊಳ್ಳುತ್ತಾರೆ. ಅವರ ಅನಂತವಾದ ಕಲ್ಪನಾ ಲೋಕವನ್ನೆಲ್ಲಾ ನಮ್ಮ ಮುಂದಿರುವ ಕಥೆಗಳು ಹೇಳುವುದಿಲ್ಲ. ಆದರೆ ಅವು ಆ ಕಲ್ಪನಾ ವಿಶಿಷ್ಟವಾದ ಜಗತ್ತನ್ನು ಅನಾವರಣ ಮಾಡುವಲ್ಲಿ ಅನವರತ ಶ್ರಮಿಸಿವೆ. ಸಂಶೋಧನೆಯ ದೃಷ್ಟಿಯಿಂದ ಈ ಕಥಾಜಗತ್ತನ್ನು ವಿವರಿಸುವ, ವಿಶ್ಲೇಷಿಸುವ, ವ್ಯಾಖ್ಯಾನಿಸುವ ಅಗತ್ಯ ಎಂದಿಗಿಂತ ಇಂದು ಇದೆ.

ಕನ್ನಡದಲ್ಲಿ ಇದುವರೆಗೆ ಮಕ್ಕಳ ಸಾಹಿತ್ಯ ಕುರಿತು ಬಂದ ಅಧ್ಯಯನಗಳು ಆಶಯವಾರು ಬಂದಿರುವುದು ಕಡಿಮೆ. ಪರಿಕಲ್ಪನೆಗಳನ್ನು ಇಟ್ಟುಕೊಂಡು ವಿಸ್ತೃತವಾದ ಚರ್ಚೆಗಳು, ಸಂಶೋಧನೆಗಳ ಅವಶ್ಯಕತೆ ಕನ್ನಡಕ್ಕೆ ಇದೆ. ಅದರಲ್ಲೂ ಮಕ್ಕಳ ಕಥನ ಸಾಹಿತ್ಯದಲ್ಲಿನ ಫ್ಯಾಂಟಸಿ ಸ್ವರೂಪಗಳ ಕುರಿತು ವಿಶ್ಲೇಷಣೆಗಳು ನಡೆದಿಲ್ಲ. ಈ ಪರಿಕಲ್ಪನೆಯನ್ನು ಬೇರೆ ಬೇರೆ ಕಥನ ಮಾದರಿಗಳ ಮೂಲಕ ವಿಶ್ಲೇಷಿಸುವ ಉದ್ದೇಶವನ್ನು ಪ್ರಸ್ತುತ ಪ್ರಬಂಧದಲ್ಲಿ ಇಟ್ಟುಕೊಳ್ಳಲಾಗಿದೆ. ಇದರ ಜತೆಗೆ ಜನಪದವೇ ಮಕ್ಕಳ ಕಥೆಗಳ ಕೇಂದ್ರವಾಗಿದ್ದರೂ ಕಾಲ ಕಾಲಕ್ಕೆ ಬಂದ ಬರಹಗಳು ಅದರೊಂದಿಗೆ ನಡೆಸಿದ ಅನುಸಂಧಾನಗಳನ್ನು ಚರ್ಚಿಸುವುದು; ಕಲ್ಪನೆಯೇ ಪ್ರಧಾನವಾಗಿಸಿ ಬರೆದ ಕಥೆಗಳ ತಾತ್ವಿಕ ಹಿನ್ನೆಲೆಯನ್ನು ಅರ್ಥೈಸುವುದು; ಮಕ್ಕಳ ಕಲ್ಪನಾಲೋಕಕ್ಕೂ ಮಕ್ಕಳ ಸಾಹಿತ್ಯದಲ್ಲಿ ರಚಿತವಾದ ಕಲ್ಪನಾಲೋಕಕ್ಕೂ ಇರುವ ವ್ಯತ್ಯಾಸವನ್ನು ಸಂಶೋಧಿಸುವುದು; ಪ್ರೌಢ ಸಾಹಿತ್ಯದೊಂದಿಗೆ ಮಕ್ಕಳ ಸಾಹಿತ್ಯ ರಚನೆಯ ಮನೋಧರ್ಮ ಫ್ಯಾಂಟಸಿ ಸ್ವರೂಪದಲ್ಲಿ ಹೇಗೆ ಮಿಳಿತಗೊಂಡಿದೆಯೆಂಬುದನ್ನು ಚರ್ಚಿಸುವುದು; ಆಧುನಿಕ ಪ್ರಭಾವಗಳು ಫ್ಯಾಂಟಸಿ ಬರವಣಿಗೆಯನ್ನು ನಿರ್ವಹಿಸಿದ ರೀತಿಯನ್ನು ವಿಶ್ಲೇಷಿಸುವುದು; ಮಕ್ಕಳ ಸಾಹಿತ್ಯ ರಚನೆಯಲ್ಲಿ ವರ್ಗ ಸಂಘರ್ಷ ವಿಚಾರಗಳನ್ನು ಕುರಿತು ಚರ್ಚಿಸುವುದು; ಕಥೆಗಳನ್ನು ಬರೆಯುವಾಗ ವಸ್ತು ಮತ್ತು ಪಾತ್ರಗಳ ಆಯ್ಕೆಯಲ್ಲಿ ತೋರಿದ ಮನೋವೈಜ್ಞಾನಿಕ ತಿಳುವಳಿಕೆಯನ್ನು ವಿಶ್ಲೇಷಿಸುವುದು; ಇಲ್ಲಿಯವರೆಗೆ ಬಂದಿರುವ ಮಕ್ಕಳ ಸಾಹಿತ್ಯ ಕುರಿತ ಸಂಶೋಧನೆಗಳನ್ನು ಗ್ರಹಿಸಿಕೊಂಡು ಭಿನ್ನವಾದ ನೆಲೆಯಲ್ಲಿ ಅಧ್ಯಯನ ಮಾಡುವುದು. ಇವು ಈ ಸಂಶೋಧನ ಪ್ರಬಂಧದ ಪ್ರಮುಖ ಉದ್ದೇಶಗಳಾಗಿವೆ.

೧.೨. ಅಧ್ಯಯನದ ಮಹತ್ವ

ಮಕ್ಕಳ ಸಾಹಿತ್ಯವು ಎಲ್ಲಾ ಸಾಹಿತ್ಯ ಪ್ರಕಾರಗಳಂತೆ ತನ್ನ ಪ್ರಾಮುಖ್ಯತೆಯ ಅಗತ್ಯವನ್ನು ಸಾರುವ ಕಾಲದಲ್ಲಿ ನಾವಿಂದು ಇದ್ದೇವೆ. ಮಕ್ಕಳ ಕುರಿತು ಕಥೆ, ಕಾವ್ಯ, ನಾಟಕಗಳು ನಿರಂತರವಾಗಿ ಬರುತ್ತಿವೆ. ಆದರೆ ಅವುಗಳನ್ನು ವಿಮರ್ಶೆಯ ಕಣ್ಣಿನಿಂದ ನೋಡುವವರ ಸಂಖ್ಯೆ ಕಡಿಮೆ ಇದೆ. ಅದಕ್ಕೆ ನೀಡುವ ಅನೇಕ ಕಾರಣಗಳಲ್ಲಿ ಈ ಪ್ರಕಾರದ ಗಟ್ಟಿತನದ ಕುರಿತು ಮೂಡುವ ಪ್ರಶ್ನೆಯೂ ಪ್ರಮುಖವಾದುದು. ಕನ್ನಡ ಮಕ್ಕಳ ಸಾಹಿತ್ಯಕ್ಕೆ ಶತಮಾನಗಳ ಇತಿಹಾಸವಿಲ್ಲ. ಆದರೆ ಅದರ

ಸೃಷ್ಟಿಗೆ ಕಾರಣವಾದ ಮೂಲ ಪ್ರೇರಣೆಗಳಿಗೆ ಸಾವಿರಾರು ವರ್ಷಗಳ ಪರಂಪರೆಯಿದೆ. ಇಂದು ಮಕ್ಕಳಿಗಾಗಿ ನೀಡುತ್ತಾ ಬರುತ್ತಿರುವ ಜನಪದ, ಪುರಾಣ, ಪಂಚತಂತ್ರ ಕಥೆಗಳು ಬಹಳ ಹಿಂದಿನವು. ಈ ಹಿನ್ನೆಲೆಯಲ್ಲಿ ಆಧುನಿಕ ಕಾಲದ ಮಕ್ಕಳ ಸಾಹಿತ್ಯದ ವಿಶಿಷ್ಟತೆಯನ್ನು ಹುಡುಕುವುದು, ಅದರಲ್ಲೂ ಫ್ಯಾಂಟಸಿಯಲ್ಲಿ ಅದು ಮಾಡಿರುವ ಸಾಧನೆಗಳನ್ನು ಗುರುತಿಸುವುದು ಮಹತ್ವದ ಕಾರ್ಯವಾಗಿದೆ. ಯಾಕೆಂದರೆ, ಮಕ್ಕಳ ಸಾಹಿತ್ಯವು ಮಕ್ಕಳಿಗೆ ಕೇವಲ ಮನರಂಜನೆ ಒದಗಿಸಲು ಅಥವಾ ಬರೀ ನೀತಿ ಹೇಳಲು ಮಾತ್ರ ಇಂದು ಬಳಕೆಯಾಗುತ್ತಿಲ್ಲ. ಪ್ರೌಢರ ಸಾಹಿತ್ಯದಂತೆ ಅದು ಎಲ್ಲ ಮಟ್ಟದ ಓದುಗರು ಸಹ ಆಸ್ವಾದಿಸುವ ಮಟ್ಟಕ್ಕೆ ಒಂದು ಪ್ರಕಾರವಾಗಿ ಬೆಳೆದಿದೆ. ಕುವೆಂಪು ಅವರ 'ಕಿಂದರಜೋಗಿ'ಯು ಇದಕ್ಕೆ ನಿದರ್ಶನವಾಗಿದೆ. ಅದರಲ್ಲೂ ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಬಂದಿರುವ ಫ್ಯಾಂಟಸಿ ಪ್ರಕಾರದ ಬರಹಗಳು ಯಥೇಚ್ಛವಾಗಿಲ್ಲ. ಆದರೂ ಗುಣದ ದೃಷ್ಟಿಯಿಂದ ಬಂದಿರುವ ಮೌಲಿಕ ಕೃತಿಗಳನ್ನು ಅಧ್ಯಯನ ಮಾಡುವ ಅಗತ್ಯವಿದೆ. ಆ ಹಿನ್ನೆಲೆಯಲ್ಲಿ ಕನ್ನಡ ಮಕ್ಕಳ ಕಥನ ಸಾಹಿತ್ಯದ ಫ್ಯಾಂಟಸಿ ಸ್ವರೂಪದ ಅಧ್ಯಯನವನ್ನು ಇಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಅದರಲ್ಲೂ ಕನ್ನಡಕ್ಕೆ ಹೊಸತಾಗಿರುವ 'ಫ್ಯಾಂಟಸಿ' ಪರಿಕಲ್ಪನೆಯ ಮೂಲಕ ಮಕ್ಕಳ ಕಥನ ಸಾಹಿತ್ಯದ ಸ್ವರೂಪಗಳನ್ನು ವಿಶ್ಲೇಷಣೆ ಮಾಡುವುದು ಮಹತ್ವದ ಕಾರ್ಯವಾಗಿದೆ. ಇದು ಕನ್ನಡ ಮಕ್ಕಳ ಸಾಹಿತ್ಯವು ಒಟ್ಟಾರೆ ಕನ್ನಡ ಸಾಹಿತ್ಯದಲ್ಲಿ ಹೇಗೆ ವಿಶಿಷ್ಟವಾಗಿದೆ ಎಂದು ಸಾಬೀತು ಮಾಡುವ ಯತ್ನವೂ ಆಗಿದೆ.

೧.೩. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಕನ್ನಡ ಮಕ್ಕಳ ಕಥನ ಸಾಹಿತ್ಯವನ್ನು ಫ್ಯಾಂಟಸಿ ಪರಿಕಲ್ಪನೆಯ ಮೂಲಕ ವಿಶ್ಲೇಷಿಸುವ ಅಧ್ಯಯನವನ್ನು ಕೈಗೊಳ್ಳುತ್ತಿದೆ. ಹಾಗಾಗಿ ಆಕರಗಳ ವಿಷಯದಲ್ಲಿ ಇದು ಕನ್ನಡಕ್ಕೆ ಸೀಮಿತಗೊಂಡಿದೆ. ಆದರೆ ಆಧುನಿಕ ಮಕ್ಕಳ ಸಾಹಿತ್ಯದ ಆಶಯ ಮತ್ತು ರೂಪವನ್ನು ಬೇರೆಬೇರೆ ಬಗೆಯಲ್ಲಿ ಪ್ರಭಾವಿಸಿರುವ ಪ್ರಾಚೀನ ಭಾರತದ ಮಕ್ಕಳ ಸಾಹಿತ್ಯವನ್ನೂ ಹಿನ್ನೆಲೆಯಲ್ಲಿ ಚರ್ಚಿಸಲಾಗುವುದು. ಇದರ ಜೊತೆಗೆ ಇದರ ವ್ಯಾಪ್ತಿಗೆ ಕನ್ನಡಕ್ಕೆ ಅನುವಾದಗೊಂಡ ಕತೆ, ಕಾದಂಬರಿಗಳನ್ನು ಸಹ ವಿಶ್ಲೇಷಣೆ ಮಾಡಲಾಗುವುದು. ಯಾಕೆಂದರೆ ಫ್ಯಾಂಟಸಿ ಪರಿಭಾಷೆಯು ಮೂಲತಃ ಕನ್ನಡದ್ದಲ್ಲ; ಈ ಪರಿಭಾಷೆಯನ್ನು ಕನ್ನಡೀಕರಿಸದೆ ಹಾಗೆಯೇ ಉಳಿಸಿಕೊಂಡು ಸಂಶೋಧನೆ ನಡೆಸಿರುವುದರಿಂದ ಪಾಶ್ಚಾತ್ಯ ಸಾಹಿತ್ಯದ ಕೃತಿಗಳ ಉಲ್ಲೇಖಗಳು, ಪ್ರಸ್ತಾಪಗಳು ಸಹಜವಾಗಿ ಬಂದಿವೆ. ಇದರ ಜತೆಗೆ ಶಿಷ್ಟ ಸಾಹಿತ್ಯದ ಕೃತಿಗಳು, ಜನಪದದ ನೇರ ಮತ್ತು ರೂಪಾಂತರ ಕಥೆಗಳು ಮತ್ತು ಅನುವಾದಿತ ಮಕ್ಕಳ ಕಥೆಗಳನ್ನು ಫ್ಯಾಂಟಸಿ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಪ್ರಾಸಂಗಿಕವಾಗಿ ಚರ್ಚಿಸಲಾಗುವುದು.

ಪ್ರಸ್ತುತ ಅಧ್ಯಯನಕ್ಕೆ ಆಯ್ದುಕೊಂಡ ಸಾಹಿತ್ಯವನ್ನು ಐದು ಪ್ರತ್ಯೇಕ ಘಟಕಗಳಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಇಲ್ಲಿನ ಪ್ರತಿ ಘಟಕಗಳು ಸ್ವತಂತ್ರವಾಗಿವೆ. ಹಾಗಾಗಿ ಆಕರಗಳ ಹರಹು ವಿಸ್ತೃತವಾಗಿದೆ. ಆಧುನಿಕ ಮಕ್ಕಳ ಸಾಹಿತ್ಯವು ತನ್ನ ಬೆನ್ನಹಿಂದಿನ ಪರಂಪರೆಯಂತಿರುವ ಜನಪದ, ಪುರಾಣ, ಪಂಚತಂತ್ರದ ಕತೆಗಳನ್ನು ಆಧಾರವಾಗಿಸಿಕೊಂಡು ರಚನೆಯಾಗಿದೆ. ಈ ಪರಂಪರೆಗಳು ಕೊಟ್ಟಿರುವ ಪ್ರೇರಣೆ ಮತ್ತು ಮಾಡಿರುವ ಪ್ರಭಾವಗಳನ್ನು ಅಧ್ಯಯನ ಮಾಡುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಪರಂಪರೆಯ ಪ್ರಭಾವ, ಪ್ರೇರಣೆಗಳನ್ನು ಪ್ರತ್ಯೇಕ ಘಟಕಗಳಾಗಿ ಮತ್ತು ಬೇರೆ ಸ್ವರೂಪದ ಅಧ್ಯಯನಗಳ ಸಂದರ್ಭದಲ್ಲೂ ಚರ್ಚಿಸಲಾಗಿದೆ.

'ಮಕ್ಕಳ ಸಾಹಿತ್ಯ' ಎನ್ನುವ ಪದ ಇಂಗ್ಲಿಷ್‌ನ ಚಿಲ್ಡ್ರನ್ ಲಿಟರೇಚರ್ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಬಳಕೆಯಾಗುತ್ತಾ ಬರುತ್ತಿದೆ. ಈ ಪದದಲ್ಲಿರುವ 'ಮಕ್ಕಳು' ಎನ್ನುವ ಪದವು ಮಕ್ಕಳಿಗಾಗಿ ಎನ್ನುವುದನ್ನು ಪ್ರತಿಪಾದಿಸುತ್ತದೆಯೇ ಹೊರತು; ಮಕ್ಕಳು ಬರೆದದ್ದು ಎಂದಲ್ಲ. ದೊಡ್ಡವರು ಮಕ್ಕಳಿಗಾಗಿ ರಚಿಸಿದ ಸಾಹಿತ್ಯವೇ ಮಕ್ಕಳ ಸಾಹಿತ್ಯ ಎಂದು ಜಗತ್ತಿನಾದ್ಯಂತ ಒಪ್ಪಿಕೊಂಡಾಗಿದೆ. ಕನ್ನಡವನ್ನು ಒಳಗೊಂಡಂತೆ ಭಾರತದಲ್ಲಿ ಈ ಕುರಿತು ಹೆಚ್ಚು ವಿಸ್ತೃತ ಅಧ್ಯಯನಗಳು ಇದುವರೆಗೆ ನಡೆದಿಲ್ಲ. ಈಗೀಗ ಒಂದಷ್ಟು ಹೊಸ ಪ್ರಯತ್ನಗಳು ಮಕ್ಕಳ ಸಾಹಿತ್ಯವನ್ನು ವ್ಯಾಖ್ಯಾನೀಕರಿಸಲು ಆಗುತ್ತಿವೆ.

ಇಂಗ್ಲಿಷಿನಲ್ಲಿ ಪೆರ್ರಿ ನೂಡಲ್‌ಮನ್('ದಿ ಹಿಡನ್ ಅಡಲ್ಟ್'), ಹಾಲಿಂಡೇಲ್('ಸೈನ್ಸ್ ಆಫ್ ಚೈಲ್ಡಿಶ್ ಇನ್ ಚಿಲ್ಡ್ರನ್ ಬುಕ್ಸ್'), ಪೀಟರ್ ಹಂಟ್("ಆ್ಯನ್ ಇಂಟರ್ಡಕ್ಷನ್ ಟು ಚಿಲ್ಡ್ರನ್ ಲಿಟರೇಚರ್') ಮೊದಲಾದವರು ಈ ಕುರಿತು ವಿಸ್ತೃತವಾದ ಅಧ್ಯಯನ ಮಾಡಿರುವ ವಿದ್ವಾಂಸರಾಗಿದ್ದಾರೆ. ಇವರು ತಮ್ಮ ಸಂಶೋಧನೆಗಳಲ್ಲಿ ಮಕ್ಕಳ ಸಾಹಿತ್ಯವೆಂದರೆ ಮಕ್ಕಳು ಬರೆದುದಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಮಕ್ಕಳು ಬರೆದ ಸಾಹಿತ್ಯವನ್ನು ವಿಶ್ಲೇಷಣೆ ಮಾಡಿಲ್ಲ. ಇದಲ್ಲದೆ ಕನ್ನಡದಲ್ಲಿ ಇದುವರೆಗೆ ಬರೆದಿರುವ ಮಕ್ಕಳ ಬರಹಗಳಲ್ಲಿ ಫ್ಯಾಂಟಸಿ ಕಥನಗಳು ಯಾವೂ ಇಲ್ಲದಿರುವುದೂ ಇಲ್ಲಿ ಮಕ್ಕಳು ಬರೆದುದನ್ನು ಕೈಬಿಡಲು ಕಾರಣವಾಗಿದೆ.

ಜನಪದ, ಪುರಾಣ ಪರಂಪರೆಗಳೆರಡೂ ಕನ್ನಡ ಮಕ್ಕಳ ಸಾಹಿತ್ಯವನ್ನು ಬಹುವಾಗಿ ಪ್ರಭಾವಿಸಿವೆ. ಇವುಗಳ ಮೂಲ ಸಾಹಿತ್ಯವನ್ನು ಇಲ್ಲಿ ಆಕರವನ್ನಾಗಿ ತೆಗೆದುಕೊಂಡಿಲ್ಲ. ಆದರೆ ಇವುಗಳನ್ನು ಆಧಾರವಾಗಿಟ್ಟುಕೊಂಡು ಕನ್ನಡದ ಮಕ್ಕಳ ಸಾಹಿತಿಗಳು ರಚಿಸಿದ ಕೃತಿಗಳನ್ನು ಅಧ್ಯಯನದ ವ್ಯಾಪ್ತಿಯಲ್ಲಿ ಇರಿಸಿಕೊಳ್ಳಲಾಗಿದೆ. ಭಾರತದಲ್ಲಿ ಪಾಶ್ಚಿಮಾತ್ಯ ಶೈಕ್ಷಣಿಕ ವ್ಯವಸ್ಥೆಯು ಆರಂಭವಾದ ಹತ್ತೊಂಬತ್ತು-ಇಪ್ಪತ್ತನೇ ಶತಮಾನದ ಮೊದಲ ಘಟ್ಟಗಳಲ್ಲಿ ಬಂದ ಸಾಹಿತ್ಯದ ಉದ್ದೇಶವು ಮಕ್ಕಳನ್ನು ನೀತಿವಂತರನ್ನಾಗಿ ಮಾಡುವುದಾಗಿತ್ತು. ಇದಕ್ಕೆ ಕಾರಣ, ಈ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವಲ್ಲಿ ಕ್ರೈಸ್ತ ಮಿಶನರಿಗಳ ಪಾತ್ರವು ಪ್ರಧಾನವಾಗಿತ್ತು. ಆದರೂ ಮೊದಲ ಘಟ್ಟದ ಮಕ್ಕಳ

ಸಾಹಿತ್ಯದಲ್ಲೂ ಮೂಲದಲ್ಲಿದ್ದ ವಾಸ್ತವೇತರ ಲೋಕದ ಪುರಾಣ ಪರಂಪರೆ, ಜನಪದದಲ್ಲಿನ ಮಾಂತ್ರಿಕ ಜಗತ್ತು ಮುಂದುವರೆಯಿತು. ಪಂಜೆ ಮಂಗೇಶರಾಯರು, ಎಂ.ಎಸ್.ಪುಟ್ಟಣ್ಣ, ಜಿ.ಪಿ.ರಾಜರತ್ನಂ, ಮೇವುಂಡಿ ಮಲ್ಲಾರಿ, ಕುವೆಂಪು, ಹೊಯ್ಸಳ, ದೇವುಡು, ಚಂದ್ರಶೇಖರ ಕಂಬಾರ ಮೊದಲಾದ ಲೇಖಕರು ಇಂಥ ಬರಹಗಳನ್ನು ಸೃಷ್ಟಿಸಿದರು. ಇವನ್ನು ಸಾಮುದಾಯಿಕ ಫ್ಯಾಂಟಸಿ ಎಂದು ಕರೆಯಬಹುದು. ಅದನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಜನಪದ ಸಾಹಿತ್ಯದಲ್ಲಿ ಅನೇಕ ಸಲ ಅಸಹಾಯಕರು, ದುರ್ಬಲರು, ಮಕ್ಕಳು ಗೆಲ್ಲುವ ಸಂದರ್ಭಗಳು ಬಂದಾಗ ಅದೆಲ್ಲವುದೂ ಕನಸಿನಲ್ಲಿ ಸಾಧ್ಯವಾಗುವ ಮಾದರಿಯಲ್ಲಿ ಫ್ಯಾಂಟಸಿ ಕಥನಗಳು ರಚನೆಗೊಂಡಿವೆ. ಇದು ಮಕ್ಕಳಲ್ಲಿ ಪಲಾಯನದ ಗುಣವನ್ನು ಬೆಳೆಸುತ್ತದೆ. ಹಾಗಾಗಿ ಫ್ಯಾಂಟಸಿಯು ನಕಾರಾತ್ಮಕ ಸಂಗತಿಗಳಿಗೂ ಕಥನಗಳಲ್ಲಿ ಬಳಕೆಯಾಗಿರುವುದನ್ನು ಪ್ರಸ್ತುತ ಪ್ರಬಂಧದಲ್ಲಿ ಗುರುತಿಸಲಾಗಿದೆ.

ಕನ್ನಡದ ಮಕ್ಕಳ ಸಾಹಿತ್ಯವಷ್ಟೇ ಅಲ್ಲ, ಯಾವುದೇ ಭಾಷೆಯ ಮಕ್ಕಳ ಸಾಹಿತ್ಯಕ್ಕೆ ಪ್ರಾಣಿಜಗತ್ತು ಅತ್ಯಗತ್ಯ. ಈ ಜಗತ್ತಿನ ಕಥೆಗಳಿಗೆ ಮೂಲದಂತಿರುವುದು ಪಂಚತಂತ್ರ ಕಥೆಗಳು. ಆದರೆ ಮೂಲದಲ್ಲಿ ಮಕ್ಕಳಿಗಲ್ಲದ ಈ ಕಥೆಗಳನ್ನು ಮಕ್ಕಳಿಗಾಗಿ ಎನ್ನುವಂತೆ ಅನೇಕರು ರಚಿಸಿದ್ದಾರೆ. ಇದಕ್ಕೆ ಅದರಲ್ಲಿನ ಅದ್ಭುತವಲ್ಲದಿದ್ದರೂ ಪ್ರಾಣಿಜಗತ್ತಿನ ಲೋಕ ಮಕ್ಕಳನ್ನು ಅಗತ್ಯವಾಗಿ ಸೆಳೆದುಬಿಡುವ ಫ್ಯಾಂಟಸಿ ಪ್ರಪಂಚವನ್ನು ಹೊಂದಿರುತ್ತದೆ. ಹಾಗೆಯೇ ಆಧುನಿಕ ಲೇಖಕರೂ ಪ್ರಾಣಿ ಪಕ್ಷಿಗಳ ಲೋಕವನ್ನು ತಮ್ಮ ಸಾಹಿತ್ಯದಲ್ಲಿ ಹೊಸ ಆಶಯಗಳ ಹಿನ್ನೆಲೆಯಲ್ಲಿ ಬಳಸಿಕೊಂಡಿದ್ದಾರೆ. ಅವರಲ್ಲಿ ಗೋಪಾಲರಾವ್ ಬಿ., ಎನ್. ಗೋಪಾಲಕೃಷ್ಣ ಉಡುಪ ಮೊದಲಾದ ಲೇಖಕರ ಕೃತಿಗಳನ್ನು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಹೀಗೆ ಪರಂಪರೆ ಮತ್ತು ವರ್ತಮಾನದ ಸಂದರ್ಭದಲ್ಲಿ ಹುಟ್ಟಿಕೊಂಡ ಈ ಲೋಕದ ಕಥೆಗಳನ್ನು ಫ್ಯಾಂಟಸಿ ಪರಿಭಾಷೆಯಲ್ಲಿ ಚರ್ಚಿಸಲಾಗಿದೆ.

ಕನ್ನಡ ಮಕ್ಕಳ ಸಾಹಿತ್ಯ ಭಾರತದ ಇತರೆ ಭಾಷೆಯ ಸಾಹಿತ್ಯದಂತೆ ಪರಂಪರೆಯನ್ನು ಬಿಟ್ಟು ನಡೆದಿದ್ದು ಕಡಿಮೆ. ಆದರೆ ಪಾಶ್ಚಾತ್ಯ ಭಾಷೆಗಳಲ್ಲಿ ಮಕ್ಕಳ ಸಾಹಿತ್ಯ ಪ್ರಕಾರಗಳಲ್ಲಿ ಪರಂಪರೆಗಿಂತ ಭಿನ್ನವಾದ ಟಾಲ್ಕಿಯಾನ್‌ನ 'ಹಾಬ್ಬಿತ್' ಫಿಲಿಪ್ ಪುಲ್‌ಮನ್ ಅವರ 'ಹಿಸ್ ಡಾರ್ಕ್ ಮೆಟಿರೀಯಲ್ಸ್' ಮುಂತಾದ ಗಮನಾರ್ಹವಾದ ಪ್ರಯೋಗಗಳು ನಡೆದವು. ಆ ಬಗೆಯ ಹೊಸ ಕಲ್ಪನಾಲೋಕವನ್ನು ಸೃಷ್ಟಿಸುವ ಪ್ರಯೋಗಗಳು ಕನ್ನಡದಲ್ಲಿ ನಡೆದಿರುವುದು ವಿರಳ. ಆದರೆ ಆ ತರಹದ ಕ್ಲಾಸಿಕ್ ಎನ್ನುವ ಕಥೆ, ಕಾದಂಬರಿಗಳು ಅನುವಾದಗಳಾಗಿ ಕನ್ನಡಕ್ಕೆ ಬಂದಿವೆ. ಅವೆಲ್ಲವೂ ಪ್ರಸ್ತುತ ಫ್ಯಾಂಟಸಿ ಪರಿಭಾಷೆಗೆ ತಕ್ಕುದಾಗಿ ಕೂಡ ಇವೆ. ಕನ್ನಡ ಮಕ್ಕಳ ಸಾಹಿತ್ಯದ ಕೃತಿಗಳ ತೌಲನಿಕ ಅಧ್ಯಯನ ಮಾಡುವವರಿಗೆ ಈ ಬಗೆಯ ಕಥನಗಳ ಚರ್ಚೆ ಪೂರಕವಾಗಬಹುದು. ಇಂಗ್ಲಂಡ್, ಸ್ವೀಡನ್, ಇಟಲಿ ದೇಶದ ಕೃತಿಗಳು, ಭಾರತದ ಇಂಗ್ಲಿಷ್, ಪ್ರಾದೇಶಿಕ ತೆಲುಗು ಭಾಷೆ ಒಳಗೊಂಡಂತೆ ಒಟ್ಟು ಏಳು ಕೃತಿಗಳನ್ನು ಇಲ್ಲಿ ಅಧ್ಯಯನದ ವ್ಯಾಪ್ತಿಗೆ ತಂದುಕೊಳ್ಳಲಾಗಿದೆ.

ಕನ್ನಡದಲ್ಲಿ ಮಕ್ಕಳಿಗಾಗಿ ಇದುವರೆಗೆ ಬಂದ ಸಾಹಿತ್ಯದಲ್ಲಿ ಈ ಮೇಲೆ ಉಲ್ಲೇಖಿಸಿದ ವ್ಯಾಪ್ತಿಗಳನ್ನು ಮೀರಿ ಹೊಸ ಹೊಸ ಪ್ರಯತ್ನಗಳು ಹೊಸ ತಲೆಮಾರಿನ ಬರಹಗಾರರಿಂದ ಆಗಿವೆ. ಬದಲಾದ ಕಾಲಘಟ್ಟಕ್ಕೆ ತಕ್ಕಂತೆ ಫ್ಯಾಂಟಸಿಯ ತಂತ್ರ, ಸ್ವರೂಪಗಳು ಮತ್ತು ಕಥನದ ಆಶಯಗಳಲ್ಲಿ ಬದಲಾವಣೆಗಳನ್ನು ಕಾಣುತ್ತೇವೆ. ಹಾಗೆ ರಚನೆಯಾದ ಸಾಹಿತ್ಯವು ಜನಪದ, ಪ್ರಾಣಿ ಕಥೆಗಳಿಗೆ ಹೊಸ ಪರಿಕಲ್ಪನೆಗಳನ್ನು ನೀಡಲು ಪ್ರಯತ್ನಿಸಿದೆ. ಅವುಗಳಲ್ಲಿ ಆನಂದ ಪಾಟೀಲ, ಕೃಷ್ಣಮೂರ್ತಿ ಬಿಳಿಗೆರೆ, ಮತ್ತೂರು ಸುಬ್ಬಣ್ಣ, ರಾಜಶೇಖರ ಭೂಸನೂರ ಮಠ, ಗಣೇಶ ನಾಡೋರ, ತಮ್ಮಣ್ಣ ಬೀಗಾರ ಮೊದಲಾದವರ ರಚನೆಗಳು ಪ್ರಮುಖವಾಗಿವೆ. ಇಂದಿನ ತಂತ್ರಜ್ಞಾನ ಯುಗದ ಮಕ್ಕಳಿಗೆ ವೈಜ್ಞಾನಿಕ ಪರಿಕಲ್ಪನೆಗಳು, ಆವಿಷ್ಕಾರಗಳು ತಿಳಿಯಪಡಿಸುವ ಕಥನ ಮಾದರಿಗಳು ಹುಟ್ಟಿಕೊಂಡಿವೆ ಅವನ್ನು ಪ್ರಸ್ತುತ ಅಧ್ಯಯನ ಒಳಗೊಂಡಿದೆ.

ಇಪ್ಪತ್ತೊಂದನೇ ಶತಮಾನವು ತಂತ್ರಜ್ಞಾನವಿಲ್ಲದೆ ಇಲ್ಲವೆನ್ನುವಷ್ಟು ತಂತ್ರಜ್ಞಾನದ ವ್ಯಾಪ್ತಿಗೆ ಒಳಪಟ್ಟಿದೆ. ಈ ಕಾಲದ ಮಕ್ಕಳು ಕೂಡ ಅದರ ಭಾಗವಾಗಿದ್ದಾರೆ. ಇಂತಹ ಮಕ್ಕಳನ್ನು ಉದ್ದೇಶವಾಗಿಟ್ಟುಕೊಂಡು ಲೇಖಕರೂ ಸಾಹಿತ್ಯವನ್ನು ನೀಡುವ ತಮ್ಮ ಮಾಧ್ಯಮಗಳನ್ನು ಬದಲಿಸಿಕೊಂಡಿದ್ದಾರೆ. ಫ್ಯಾಂಟಸಿಯ ಕಥೆಗಳನ್ನು ತಂತ್ರಜ್ಞಾನದ ಮಾಧ್ಯಮದ ಮೂಲಕ ಮಕ್ಕಳಿಗೆ ಬಹು ಇಷ್ಟವಾಗುವಂತೆ ತಲುಪಿಸಲು ಇಂದು ಸಾಧ್ಯವಾಗಿದೆ. ಹಾಗಾಗಿ ತಂತ್ರಜ್ಞಾನದ ಸ್ವರೂಪದಲ್ಲಿ ಇರುವ ಕನ್ನಡದ ಮಕ್ಕಳ ಕಥೆ, ಕಾದಂಬರಿಗಳನ್ನು, ಅನುವಾದವಾಗಿ ಯೂಟ್ಯೂಬ್, ಗೂಗಲ್‌ಗಳಲ್ಲಿ, ಸಿನಿಮಾ, ಕಾಮಿಕ್ಸ್‌ಗಳಲ್ಲಿ ಸಿಗುವ ಬರಹಗಳನ್ನು ಇಲ್ಲಿ ವಿಶ್ಲೇಷಣೆಗೆ ಆಯ್ದುಕೊಳ್ಳಲಾಗಿದೆ.

೧.೪. ಅಧ್ಯಯನ ವಿಧಾನ

ಪ್ರಸ್ತುತ ಅಧ್ಯಯನದ ಪೂರ್ವದಲ್ಲಿ ರೂಪಿಸಿಕೊಂಡ ಸಿದ್ಧ ಚೌಕಟ್ಟಿನೊಂದಿಗೆ ಅದಕ್ಕೆ ಪೂರಕವಾದ ಮಾಹಿತಿಯನ್ನು ಆರಿಸಿಕೊಂಡು ವಿಶ್ಲೇಷಿಸಲಾಯಿತು. ಫ್ಯಾಂಟಸಿ ಪರಿಭಾಷೆಯಲ್ಲಿ ಕನ್ನಡದ ಕಥನಗಳನ್ನು ವಿಶ್ಲೇಷಣೆ ಮಾಡುವಾಗ ಎದುರಾದ ಸಮಸ್ಯಾತ್ಮಕ ಸಂಗತಿಗಳನ್ನು ವರ್ಗೀಕರಿಸಿಕೊಂಡು ಅಧ್ಯಯನ ಮಾಡಲಾಯಿತು. ಇದೊಂದು ಸಿದ್ಧ ಮಾದರಿಯ 'ಅನ್ವಯೀಕರಣ' ಎನ್ನಬಹುದು. ಈ ಅಧ್ಯಯನದಲ್ಲಿ ಬಹುಮುಖಿ ಆಯಾಮಗಳಿಂದ ಫ್ಯಾಂಟಸಿ ಸ್ವರೂಪಗಳ ತಾತ್ವಿಕತೆಯನ್ನು ವಿಷಯದಲ್ಲಿ ಅಳವಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಮಕ್ಕಳ ಕತೆಗಳಲ್ಲಿ ಕಂಡುಬರುವ ಫ್ಯಾಂಟಸಿಯ ಸ್ವರೂಪಗಳನ್ನು ವಿಂಗಡಿಸಿಕೊಂಡು, ಪ್ರತ್ಯೇಕವಾಗಿ ಅವುಗಳನ್ನು ವಿವಿಧ ಅಧ್ಯಾಯಗಳಲ್ಲಿ ಚರ್ಚಿಸಿ, ವರ್ಗೀಕರಿಸಿ, ಭಾರತದ ಹೊರಗೆ, ಒಳಗೆ, ಕನ್ನಡದಲ್ಲಿ ನಡೆದ ಪ್ರಯೋಗಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಕನ್ನಡದ ಕೆಲವು ಮಹತ್ವದ

ಫ್ಯಾಂಟಸಿ ಪ್ರಯೋಗಗಳನ್ನು ಉದಾಹರಣೆಯಾಗಿ ನೀಡುವಾಗ ಅದರಲ್ಲಿ ತಾತ್ವಿಕ ವಿಷಯಗಳನ್ನು ಅನುಲಕ್ಷಿಸಿ ಅಧ್ಯಯನ ಮಾಡಲಾಗಿದೆ.

ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಜನಪದ, ಪಂಚತಂತ್ರ, ಪುರಾಣ ಮತ್ತು ಆಧುನಿಕ ಫ್ಯಾಂಟಸಿಯ ವಿಶಿಷ್ಟತೆ, ಇವು ಮಕ್ಕಳ ಕಥಾ ಸಾಹಿತ್ಯದಲ್ಲಿ ಫ್ಯಾಂಟಸಿ ಪರಿಕಲ್ಪನೆಯನ್ನು ಒಳಗೊಳ್ಳುವ ಭಾಗವಾಗಿ ಒಂದರ ಮೇಲೆ ಇನ್ನೊಂದು ಪ್ರಭಾವಿಸಿಕೊಂಡು ಬಂದ ರೀತಿಯನ್ನು ಹೋಲಿಕೆ ಮಾಡಿ ನೋಡಲಾಗಿದೆ. ಮತ್ತು ಅವುಗಳ ಸಹಸಂಬಂಧವನ್ನು ವಿಶ್ಲೇಷಣೆ ಮಾಡಲಾಗಿದೆ.

ಮಕ್ಕಳ ಕಥೆಗಳನ್ನು ಅವುಗಳಲ್ಲಿ ಅಡಗಿರುವ ಸಮಾನತೆ, ಪರಿಸರ ಪ್ರಜ್ಞೆ, ಜಾತ್ಯತೀತ ಮುಂತಾದ ಮೌಲ್ಯಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗುವುದು. ಕಥೆಗಳನ್ನು ವಿಶ್ಲೇಷಣೆ ಮಾಡುವಾಗ ಮಾರ್ಕ್ಸ್‌ವಾದಿ, ಸ್ತ್ರೀವಾದಿ ಚಿಂತನೆಗಳ ತಿಳುವಳಿಕೆ ಪ್ರಯೋಜನ ಪಡೆದು ಈ ಕಥೆಗಳನ್ನು ವಿಶ್ಲೇಷಣೆ ಮಾಡಲಾಗಿದೆ.

ಫ್ಯಾಂಟಸಿಯ ಆಶಯಗಳನ್ನು ಚರ್ಚಿಸುವಾಗ ಜನಪದ ಮತ್ತು ಆಧುನಿಕ(ವಾಸ್ತವ)ಮಾದರಿಯ ಕಥೆಗಳಲ್ಲಿ ಫ್ಯಾಂಟಸಿಯನ್ನು ತೌಲನಿಕವಾಗಿ ವಿಶ್ಲೇಷಿಸಲಾಗಿದೆ.

ಜಾಗತೀಕರಣದ ಪ್ರಭಾವಗಳು, ಸಮಕಾಲೀನ ಪ್ರಜ್ಞೆ ಮತ್ತು ಜೀವನದೃಷ್ಟಿಯಂತಹ ಆಶಯಗಳ ಹಿನ್ನೆಲೆಯಲ್ಲಿ ಕಥೆಗಳನ್ನು ನಿಕಷಕ್ಕೆ ಒಳಪಡಿಸಲಾಗಿದೆ.

ಕನ್ನಡ ಪ್ರೌಢ ಸಾಹಿತ್ಯದೊಂದಿಗೆ ಮಕ್ಕಳ ಸಾಹಿತ್ಯ ಹೊಂದಿರುವ ಸಹ ಸಂಬಂಧದ ಕುರಿತು ಅಧ್ಯಯನ ಮಾಡಲಾಗಿದೆ.

ಕನ್ನಡ ಮಕ್ಕಳ ಕಥನ ಸಾಹಿತ್ಯ, ಭಾರತದ ಇತರ ಭಾಷೆಯ ಮಕ್ಕಳ ಕಥಾಸಾಹಿತ್ಯವು, ಹೊರ ದೇಶದ ಫ್ಯಾಂಟಸಿ ಕತೆಗಳೊಂದಿಗೆ ಹೊಂದಿದ ಸಂಬಂಧ ಮತ್ತು ವೈರುಧ್ಯಗಳನ್ನು ಕನ್ನಡದ ವಾತಾವರಣದಲ್ಲಿ 'ತೌಲನಿಕ'ವಾಗಿ ಅಧ್ಯಯನ ಮಾಡಲಾಗುವುದು. ಅನುಗಮನ ಮತ್ತು ನಿಗಮನ ಪದ್ಧತಿಗಳನ್ನು ಅನುಸರಿಸಿ ವಿಷಯ ಪ್ರಸ್ತುತಪಡಿಸಲಾಗಿದೆ.

ಪ್ರಸ್ತುತ ಅಧ್ಯಯನದ ಅಧ್ಯಾಯಗಳು ಬೇರೆ ಬೇರೆ ಸ್ವರೂಪ, ಉದ್ದೇಶಗಳನ್ನು ಹೊಂದಿವೆ. ತಮ್ಮ ಫ್ಯಾಂಟಸಿಯಲ್ಲಿಯೂ ಅವು ತುಂಬಾ ಭಿನ್ನತೆಯನ್ನು ಹೊಂದಿವೆ. ಅವುಗಳ ಆಶಯಗಳ ನೆಲೆಯಲ್ಲಿಯೇ ಚರ್ಚಿಸಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಮಕ್ಕಳ ಕಥನ ಸಾಹಿತ್ಯದಲ್ಲಿ ತಂತ್ರಜ್ಞಾನದ ಬೆಳವಣಿಗೆಗಳನ್ನು ಸಂಗ್ರಹಿಸುವ ಕಾರ್ಯವನ್ನು ಮಾಡಿದರೂ, ಇತಿಹಾಸ ಕಟ್ಟಿಕೊಡುವಂತಾಗುವ ಅಪಾಯವನ್ನು ತಪ್ಪಿಸಲು ಪ್ರಯತ್ನಿಸಲಾಗಿದೆ. ಫ್ಯಾಂಟಸಿ ಸ್ವರೂಪಗಳನ್ನು ಸಂಶೋಧನಾತ್ಮಕ ಹುಡುಕಾಟದ ನೆಲೆಗಳನ್ನು ಅನುಸರಿಸಿ ಹೊಸ ಮಾರ್ಗದ, ಹೊಸ ಸಂವೇದನೆಗಳನ್ನು ಹುಡುಕಲು ಯತ್ನಿಸಿದೆ.

ಅನಿಮೇಷನ್, ಕಾಮಿಕ್ಸ್ ಕಥನಗಳನ್ನು ಮತ್ತು ತಂತ್ರಜ್ಞಾನ ಸ್ವರೂಪದಲ್ಲಿ ಬಳಕೆಯಾಗುತ್ತಿರುವ ಇತರೆ ಮಕ್ಕಳ ಕಥನಗಳನ್ನು ವಿಶ್ಲೇಷಣೆ ಮಾಡುವಾಗ ಅವುಗಳಿಗೆ ಒದಗಿದ ಮಾರುಕಟ್ಟೆಯನ್ನು, ಅದರ ಏರುಪೇರುಗಳು ಉಂಟಾಗಲು ತಾತ್ವಿಕ ಕಾರಣಗಳನ್ನು ಚರ್ಚಿಸಿಲಾಗಿದೆ.

ಹೀಗೆ ಪ್ರಸ್ತುತ ಅಧ್ಯಯನವು ಮೇಲ್ಕಾಣಿಸಿದ ಅಧ್ಯಯನ ವಿಧಾನಗಳನ್ನು ಅಳವಡಿಸಿಕೊಂಡು ಕನ್ನಡ ಮಕ್ಕಳ ಕಥನ ಸಾಹಿತ್ಯದಲ್ಲಿ ಫ್ಯಾಂಟಸಿಯ ಸ್ವರೂಪಗಳ ವಿಶ್ಲೇಷಣೆಯನ್ನು ಚರ್ಚಿಸಲು ಯತ್ನಿಸುತ್ತದೆ.

ಅಧ್ಯಾಯ : ಎರಡು

ಪೂರ್ವ ಅಧ್ಯಯನಗಳ ಸಮೀಕ್ಷೆ

೨.೧. ಸಂಶೋಧನಾ ಪ್ರಬಂಧಗಳ ಸಮೀಕ್ಷೆ

೨.೨. ಪ್ರಕಟಗೊಂಡ ಪುಸ್ತಕಗಳ ಸಮೀಕ್ಷೆ

೨.೩. ಪ್ರಕಟಿತ ಲೇಖನಗಳ ಸಮೀಕ್ಷೆ

ಅಧ್ಯಾಯ : ಎರಡು

ಪೂರ್ವ ಅಧ್ಯಯನಗಳ ಸಮೀಕ್ಷೆ

ಪ್ರವೇಶ

ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಬರೆಯುವುದು, ಆ ಕುರಿತು ಮಾತನಾಡುವುದು ಮುಜುಗರದ ಸಂಗತಿ. ಅದೊಂದು ದ್ವಿತೀಯ ದರ್ಜೆಯ ಸಾಹಿತ್ಯ, ರಚನೆಯ ಫಸಲು ವಿಮರ್ಶಿಸುವಷ್ಟು ಉತ್ಕೃಷ್ಟವಾಗಿ ಬೆಳೆದಿಲ್ಲ. ಎಂದೆಲ್ಲಾ ಗ್ರಹಿಕೆಗಳಿದ್ಯಾಗೂ ಕನ್ನಡದಲ್ಲಿ ಮೌಲಿಕವಾದ ಸಾಹಿತ್ಯ ಆಯಾ ಕಾಲ, ಪರಿಸ್ಥಿತಿಗಳನ್ನು ಅರಗಿಸಿಕೊಂಡ ಅಗತ್ಯದ ಸಾಹಿತ್ಯ ತನ್ನ ತಾನೇ ಉದ್ಭವಿಸುತ್ತಲೇ ಬಂದಿದೆ. ಜೊತೆಗೆ ಈ ಕುರಿತು ಒಂದಷ್ಟು ಅಧ್ಯಯನಗಳೂ ಅಲ್ಲಲ್ಲಿ ವಿರಳವೆನ್ನುವಂತೆ ನಡೆಯುತ್ತಿವೆ. ಈ ಅಧ್ಯಯನಗಳು ಸಂಪೂರ್ಣವಾಗಿ ವಿಮರ್ಶೆಯ ಪರಿಭಾಷೆಯಲ್ಲಿ ಜರುಗದಿದ್ದರೂ ಪರಿಚಯಾತ್ಮಕವಾಗಿ ಬಂದಿವೆ. ಲೇಖನಗಳಾಗಿ ಬೆಳೆದಿವೆ. ಈ ಕ್ಷೇತ್ರದಲ್ಲಿ ದೀರ್ಘ ಕಾಲ ತೊಡಗಿಕೊಂಡವರ ಸಾಹಿತ್ಯ ಅವಲೋಕನ ರೂಪದಲ್ಲಿಯೂ ಅಭಿವ್ಯಕ್ತವಾಗಿದೆ. ವಿಶ್ವವಿದ್ಯಾಲಯದ ಪಿಎಚ್.ಡಿ., ಸಂಶೋಧನೆಯ ಭಾಗವಾಗಿಯೂ ಹಲವಾರು ಪ್ರಬಂಧಗಳು ಹೊರ ಬಂದಿವೆ. ಇವೆಲ್ಲವುಗಳು ಒಂದೇ ಆಶಯದಲ್ಲಿ ಚರ್ಚೆಯಾಗದಿದ್ದರೂ, ಫ್ಯಾಂಟಸಿಯ ಉದ್ದೇಶವನ್ನಿಟ್ಟುಕೊಂಡು ರಚನೆಯಾಗದಿದ್ದರೂ ಮಕ್ಕಳ ಸಾಹಿತ್ಯ ರಚನೆಯ ಮೂಲ ಆಶಯಗಳಲ್ಲಿ ಒಂದಾದ ಕಲ್ಪನೆಯನ್ನು ಹೊರತಾಗಿಟ್ಟು ಯಾವ ಅಧ್ಯಯನ ನಡೆದಿರಲಾರದು. ಇಷ್ಟಾಗಿಯೂ ಫ್ಯಾಂಟಸಿ ಕುರಿತಾದ ಅಧ್ಯಯನಗಳು ಇಂಗ್ಲಿಷ್ ಭಾಷೆಯಲ್ಲಿ ನಡೆದಂತೆ ಕನ್ನಡವನ್ನೂ ಸೇರಿಕೊಂಡಂತೆ ಇತರೆ ಪ್ರಾದೇಶಿಕ ಭಾಷೆಗಳಲ್ಲಿ ಇನ್ನೂ ಶೈಶವ ಅವಸ್ಥೆಯಲ್ಲಿಯೇ ಇವೆ. ಇದುವರೆಗೆ ನಡೆದ ಅಧ್ಯಯನಗಳಲ್ಲಿ ಎರಡು ರೀತಿಯ ಕ್ರಮಗಳಿವೆ. ತುಂಬಾ ಜನರಲ್ ಆಗಿ ಮಕ್ಕಳ ಸಾಹಿತ್ಯವನ್ನು ಕುರಿತು ನಡೆಸಿದ ಅಧ್ಯಯನಗಳು ಇನ್ನೊಂದು ನಿರ್ದಿಷ್ಟವಾದ ಪರಿಕಲ್ಪನೆಯನ್ನು ಇಟ್ಟುಕೊಂಡು ನಡೆಸಿದ ಅಧ್ಯಯನಗಳೆರಡನ್ನೂ ಇಲ್ಲಿ ಸಮೀಕ್ಷಿಸಲಾಗಿದೆ.

ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಆರಂಭದ ಅಧ್ಯಯನಗಳು ವ್ಯಕ್ತಿ ಅಧ್ಯಯನಕ್ಕೆ ಸೀಮಿತವಾಗಿದ್ದು ಅವುಗಳಲ್ಲಿ ದಿನಕರ ದೇಸಾಯಿ ಅವರ ಕುರಿತು, ಶ್ರೀಪಾದ ಶೆಟ್ಟಿ ಅವರ ಪ್ರಬಂಧ, ಎಂ.ಎಸ್. ಪುಟ್ಟಣ್ಣ, ಕಂಚ್ಯಾಣಿ ಶರಣಪ್ಪ ಅವರ ಕುರಿತು ಅಧ್ಯಯನಗಳು ನಡೆದಿವೆ. ಕನ್ನಡ ಮಕ್ಕಳ ಸಾಹಿತ್ಯದ ಮುನ್ನೆಲೆಗೆ ಟೊಂಕ ಕಟ್ಟಿ ನಿಂತ ಲೇಖಕ-ಸಂಘಟಕರಾದ ಸಿ.ಸು ಸಂಗಮೇಶ ಕುರಿತು

ರಾಜೇಂದ್ರ ಗಡಾದ ಅವರ ಸಂಶೋಧನಾ ಪ್ರಬಂಧವು ಸಂಗಮೇಶ ಅವರ ಮಕ್ಕಳ ಸಾಹಿತ್ಯ ಕೃಷಿಯನ್ನು ವಿಶ್ಲೇಷಿಸುವುದರ ಜೊತೆಗೆ ಕನ್ನಡ ಮಕ್ಕಳ ಸಾಹಿತ್ಯ ಚರಿತ್ರೆಯ ಪುಟಗಳನ್ನು ಅವರ ಈ ಅಧ್ಯಯನದಲ್ಲಿ ಚರ್ಚಿಸಿದೆ. ರಂಗಭೂಮಿ ಕುರಿತಾದ ನಿಂಗು ಸೊಲಗಿ ಅವರ ಮಹಾಪ್ರಬಂಧವು ಸಮಕಾಲೀನ ಸಂದರ್ಭದಲ್ಲಿ ಮಕ್ಕಳ ರಂಗಭೂಮಿಯ ಪ್ರಕ್ರಿಯೆ ಮತ್ತು ಪ್ರದರ್ಶನ ಕುರಿತಾದ ಚರ್ಚೆಗಳನ್ನು ನಡೆಸಿದೆ.

ಅಕಾಡೆಮಿಕ್ ಸಂಶೋಧನೆಗಳ ಹೊರತಾಗಿಯೂ ಮಕ್ಕಳ ಸಾಹಿತ್ಯ ಕುರಿತು ಗಂಭೀರವಾಗಿ ಅಧ್ಯಯನ ನಡೆಸುವ ಚಿಂತಕರಲ್ಲಿ ಡಾ. ಆನಂದ ಪಾಟೀಲರು ಪ್ರಮುಖರು. ಅವರ ತಮ್ಮ ನಾಲ್ಕು ಸಂಕಲನಗಳಲ್ಲಿ ಕನ್ನಡದ, ಭಾರತದ, ಜಗತ್ತಿನ ಮಕ್ಕಳ ಸಾಹಿತ್ಯ ಕೃತಿಗಳು, ಚಟುವಟಿಕೆಗಳ ಕುರಿತಾದ ಮೌಲಿಕ ವಿಶ್ಲೇಷಣೆ ನಡೆಸಿದ್ದಾರೆ. ಈ ಕುರಿತು ಅಧ್ಯಯನ ನಡೆಸುವ ಹೊಸ ತಲೆಮಾರಿನ ಸಂಶೋಧಕರಿಗೆಲ್ಲ ಈ ಅಧ್ಯಯನಗಳು ಮಾರ್ಗದರ್ಶಿ ಎನ್ನುವಂತಿವೆ. ಇದಲ್ಲದೆಯೂ ಪತ್ರಿಕೆಗಳಲ್ಲಿ ಸ್ಮರಣ ಸಂಚಿಕೆಗಳಲ್ಲಿ, ಅಭಿನಂದನ ಗ್ರಂಥಗಳಲ್ಲಿ ಪ್ರಕಟವಾದ ಸಂಶೋಧನಾ ಲೇಖನಗಳು ಮಹತ್ವವಾದವುಗಳು. ಈ ಹಿನ್ನೆಲೆಯಲ್ಲಿ ಮಕ್ಕಳ ಸಾಹಿತ್ಯಕ್ಕೆ ನೆಲೆ-ಬೆಲೆ ದೊರಕಲು ಹೆಚ್ಚೆಚ್ಚು ಅಧ್ಯಯನಗಳು ಜರುಗಬೇಕಾದ ಜರೂರತ್ತಿದೆ ಎನ್ನುವ ಆಶಯವು ಪ್ರಸ್ತುತ ಅಧ್ಯಯನಕ್ಕೆ ಇಂಬು ಕೊಟ್ಟಿದೆ.

ಪ್ರಸ್ತುತ ಅಧ್ಯಯನ ಸಮೀಕ್ಷೆಯನ್ನು ಮೂರು ನೆಲೆಯಲ್ಲಿ ವಿಭಾಗಿಸಲಾಗಿದೆ.

೨.೧. ಸಂಶೋಧನಾ ಪ್ರಬಂಧಗಳ ಸಮೀಕ್ಷೆ

೨.೧.೧. ಮಕ್ಕಳ ರಂಗಭೂಮಿ : ಪ್ರದರ್ಶನ ಪ್ರಕ್ರಿಯೆ, ನಿಂಗು ಸೊಲಗಿ

೨.೧.೨. ಮಕ್ಕಳ ಸಾಹಿತ್ಯ ಹಾಗೂ 'ಸಿಸು' ಸಂಗಮೇಶ, ರಾಜೇಂದ್ರ ಗಡಾದ

೨.೧.೩. ಮಕ್ಕಳ ಸಾಹಿತ್ಯದಲ್ಲಿ ಕಥೆಗಳ ಸ್ವರೂಪ, ಮಾದುಪ್ರಸಾದ್ ಹುಣಸೂರು

೨..೨. ಪ್ರಕಟಗೊಂಡ ಪುಸ್ತಕಗಳ ಸಮೀಕ್ಷೆ

೨.೨.೧. ಅಲರು, ಆನಂದ ಪಾಟೀಲ

೨.೨.೨. ಮುಗುಳು, ಆನಂದ ಪಾಟೀಲ

೨.೨.೩. ಮಕ್ಕಳ ಸಾಹಿತ್ಯ, ಬಸು ಬೇವಿನಗಿಡದ

೨.೨.೪. ಭಾರತೀಯ ಮಕ್ಕಳ ಸಾಹಿತ್ಯ ಸಮೀಕ್ಷೆ, ನಿರುಪಮಾ

೨.೨.೫. ಮಕ್ಕಳ ಸಾಹಿತ್ಯದಲ್ಲಿ ಫ್ಯಾಂಟಸಿ, ಎಂ ಎಸ್ ಕೆ., ಪ್ರಭು

೨.೩. ಪ್ರಕಟಿತ ಲೇಖನಗಳ ಸಮೀಕ್ಷೆ.

೨.೩.೧. ಮಕ್ಕಳ ಸಾಹಿತ್ಯಕ್ಕೆ ಆಧುನಿಕ ಮೌಲ್ಯಗಳು, ಕುವೆಂಪು

ಮೇಲ್ಕಂಡ ಕೃತಿಗಳನ್ನು ಸಮೀಕ್ಷೆ ಮಾಡುವಾಗ ಪ್ರಮುಖವಾದ ಮೂರು ಅಂಶಗಳನ್ನು ಇಟ್ಟುಕೊಂಡು ವಿಶ್ಲೇಷಣೆ ಮಾಡಲಾಗಿದೆ. ಕೃತಿಯಲ್ಲಿ ಕಂಡು ಬಂದ ಒಳಗೊಂಡ ಪ್ರಮುಖ ಅಂಶಗಳನ್ನು ಮೊದಲ ಭಾಗದಲ್ಲಿ ಹೇಳಲಾಗಿದೆ. ಆ ಕೃತಿಯ ಗುಣಾತ್ಮಕ ಅಂಶಗಳನ್ನು ಎರಡನೆಯ ಭಾಗದಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಮೂರನೆಯ ಭಾಗದಲ್ಲಿ ಕೃತಿಯ ಕೊರತೆ ಮತ್ತು ಸಾಧ್ಯತೆಗಳನ್ನು ಹೇಳುವ ಪ್ರಯತ್ನ ಮಾಡಲಾಗಿದೆ.

೨.೧. ಸಂಶೋಧನಾ ಪ್ರಬಂಧಗಳ ಸಮೀಕ್ಷೆ

೨.೧.೧. ಮಕ್ಕಳ ರಂಗಭೂಮಿ: ಪ್ರದರ್ಶನ ಪ್ರಕ್ರಿಯೆ – ನಿಂಗು ಸೊಲಗಿ

೧. ಇದೊಂದು ಮಕ್ಕಳ ರಂಗಭೂಮಿಯ ಕುರಿತಾದ ಪಿಎಚ್.ಡಿ., ಪ್ರಬಂಧವಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ಮಕ್ಕಳ ರಂಗಭೂಮಿಯ ಮನೋವಿಕಾಸದ ಮಜಲುಗಳ ಕುರಿತು ಸೊಲಗಿಯವರು ಆರು ಅಧ್ಯಾಯಗಳಲ್ಲಿ ವಿಶ್ಲೇಷಿಸಿದ್ದಾರೆ. ಮಕ್ಕಳಾಟ, ಸೃಜನಾತ್ಮಕ ಆಟ, ಪ್ರಯೋಗಶೀಲ ನಾಟಕ, ಸ್ವಪ್ನ ಹಾಗೂ ವಾಸ್ತವ ನಾಟಕ ಮುಂತಾದವುಗಳ ರಂಗಭೂಮಿಯ ಶೈಕ್ಷಣಿಕ ಸಾಧ್ಯತೆ, ರಂಗ ತಂಡದ ಚಟುವಟಿಕೆ ಮುಂತಾದವುಗಳನ್ನು ವಿಶ್ಲೇಷಿಸುವ ಮೂಲಕ ರಂಗಭೂಮಿಯ ಅಪಾರ ಸಾಧ್ಯತೆಗಳನ್ನು ಕಟ್ಟಿಕೊಟ್ಟಿದ್ದಾರೆ. ರಂಗಭೂಮಿ ಕುರಿತ ಈ ಸಂಶೋಧನೆಯಲ್ಲಿ ಫ್ಯಾಂಟಸಿ ಕುರಿತ ಹೇಳಿಕೆಯೊಂದು ಉಲ್ಲೇಖಿಸಲಾಗಿದೆ. 'ಕತೆಗಳಲ್ಲಿ ವಾಸ್ತವದ ಎಲ್ಲ ಚೌಕಟ್ಟನ್ನು ಮೀರಿ ಕಲ್ಪನಾಲೋಕಕ್ಕೆ ಸೀಮಿತಗೊಳಿಸುವ ತೀರಾ ಫ್ಯಾಂಟಸಿ ಕತೆಗಳು. ವಾಸ್ತವದ ಹತ್ತಿರಕ್ಕೆ ಸುಳಿದಾಡುವ ಅರೆ ಫ್ಯಾಂಟಸಿ ಕತೆಗಳು.. ಸೇರಿದಂತೆ ಹಲವು ಪ್ರಕಾರಗಳಿವೆ.'[೧] ಎನ್ನುವ ಮಾತಲ್ಲಿ ಫ್ಯಾಂಟಸಿಯ ಪ್ರಕಾರಗಳನ್ನೂ ಹೇಳಲಾಗಿದೆ. ಮಕ್ಕಳ ಬೆಳವಣಿಗೆಯಲ್ಲಿ ಕತೆಗಳ ಪಾತ್ರವೆಷ್ಟು ಎನ್ನುವುದನ್ನೂ ಇಲ್ಲಿ ವಿವರಿಸಲಾಗಿದೆ. 'ಮಕ್ಕಳಲ್ಲಿ ಮೌಲ್ಯಗಳನ್ನು ಬೆಳೆಸುವ ನಿಟ್ಟಿನಲ್ಲಿ ಕತೆಗಳು ನಿಧಾನವಾಗಿಯಾದರೂ ತುಂಬಾ ಆಳವಾಗಿ ಕೆಲಸ ಮಾಡುತ್ತವೆ.'[೨] ಸಂಶೋಧಕರ ಈ ಹೇಳಿಕೆ ಮಕ್ಕಳ ಕಥೆಗಳ ಮಹತ್ವವನ್ನು ತಿಳಿಸಿಕೊಡುತ್ತದೆ.

೨. ಮಕ್ಕಳ ರಂಗಭೂಮಿಯ ವಸ್ತು ವೈವಿಧ್ಯತೆಯ ಕುರಿತು ಮಾತನಾಡುವಾಗ, ಪ್ರತಿಯೊಂದನ್ನೂ ಹಿರಿದಾಗಿಯೇ ಕಾಣುವ ಗುಣ ಮಕ್ಕಳಲ್ಲಿ ಇರುತ್ತದೆ. ಆದ್ದರಿಂದ ಮಕ್ಕಳಿಗೆ ಹೇಳುವ ಕಥೆಗಳಲ್ಲಿ ಆಕಾಶದಷ್ಟು ಎತ್ತರ, ಬೆಟ್ಟದಷ್ಟು ಬಲಿಷ್ಠ, ಸಾಗರದಷ್ಟು ಆಳವೂ, ವಿಶಾಲವೂ ಎಂದೇ ಹೇಳಲಾಗುತ್ತದೆ. ಈ ಮೂಲಕ ಕಲ್ಪಿಸಿಕೊಂಡ ಎಲ್ಲವನ್ನೂ ಹಿಡಿದಿಡಲು ಫ್ಯಾಂಟಸಿ ಜಗತ್ತು ಸಹಕರಿಸುತ್ತದೆ ಎಂದು ಸಂಶೋಧಕರು ಪ್ರತಿಪಾದಿಸಿದ್ದಾರೆ. ನೃತ್ಯ, ಸಂಗೀತ, ನಾಟಕಗಳನ್ನು ಕಲ್ಪನಾ ಲೋಕದ ಸ್ವರೂಪದಲ್ಲಿಯೇ ನೀಡಬೇಕು. ನೈಜ ಜಗತ್ತಿಗೆ ಹೊರತಾದ ಮತ್ತೊಂದು ಜಗತ್ತನ್ನು ಸೃಷ್ಟಿಸಬೇಕು. ಹೀಗೆ ಸೃಷ್ಟಿಸುವ ನಾಟಕದ ಮೂಲಕ ಹೊಸ ಪ್ರಜ್ಞೆ ವಿಕಸಿಸುವಂತೆ ಮಾಡುವುದು ಲೇಖಕನ ಆದ್ಯ ಕರ್ತವ್ಯವಾಗಿದೆ. ಜೊತೆಗೆ ಮಕ್ಕಳ ನಾಟಕಗಳ ವರ್ತಮಾನದ ಬೆಳವಣಿಗೆಗಳ ಕುರಿತು ಇಲ್ಲಿ ಉಲ್ಲೇಖಿಸಲಾಗಿದೆ.

೩. ರಂಗಭೂಮಿಯಲ್ಲಷ್ಟೇ ಅಲ್ಲ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಹಿರಿದನ್ನು ಕಾಣುವ ಗುಣ ಮಕ್ಕಳಲ್ಲಿರುತ್ತದೆ. ಅದನ್ನು ರಂಗಭೂಮಿಗೆ ಸೀಮಿತಗೊಳಿಸಿರುವುದು ಸೊಲಗಿಯವರ ಅಧ್ಯಯನದ ಮಿತಿಯನ್ನು ತೋರಿಸುತ್ತದೆ. ಫ್ಯಾಂಟಸಿ ಅಸಾಧ್ಯವಾದುದಷ್ಟೇ ಅಲ್ಲ, ಅತ್ಯಂತ ಸಹಜ, ಸಾಧ್ಯವಾಗುವ ಸಂಗತಿಗಳಿಗೂ ವ್ಯಾಪಿಸಿರುತ್ತದೆ. ಪ್ರಸ್ತುತ ಅವರ ಪ್ರಬಂಧದಲ್ಲಿ ಮಕ್ಕಳ ನಾಟಕಗಳ ಕಥಾವಸ್ತುವಿನೊಳಗಿನ ಫ್ಯಾಂಟಸಿ ಧಾರೆಗಳನ್ನು ಗುರುತಿಸುವ ಸಾಧ್ಯತೆ ಇತ್ತು. ಅದನ್ನು ಸಂಶೋಧಕರು ಆ ಭಾಗದ ವಿವರಣೆಯ ಸಂದರ್ಭದಲ್ಲಿ ಫ್ಯಾಂಟಸಿ ಚರ್ಚೆಯನ್ನು ಮುನ್ನೆಲೆಗೆ ತರಬಹುದಿತ್ತು.

೨.೧.೨. ಮಕ್ಕಳ ಸಾಹಿತ್ಯ ಹಾಗೂ 'ಸಿಸು' ಸಂಗಮೇಶ – ರಾಜೇಂದ್ರ ಗಡಾದ

೧. ರಾಜೇಂದ್ರ ಗಡಾದ ಅವರು ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡ ೨.೦೦೯ ರಲ್ಲಿ ಸಲ್ಲಿಸಿದ ಪಿಎಚ್.ಡಿ., ಪ್ರಬಂಧ ಇದು. ಸಿಸು ಸಂಗಮೇಶ ಅವರ ಸಮಗ್ರ ಸಾಹಿತ್ಯವನ್ನು ಅವಲೋಕನಕ್ಕೆ ಒಳಪಡಿಸುವುದರ ಮೂಲಕ ಮಕ್ಕಳ ಸಾಹಿತ್ಯ ಪರಂಪರೆಯಲ್ಲಿ ಅವರ ಮಹತ್ವದ ಸ್ಥಾನವನ್ನು ವಿಶ್ಲೇಷಿಸುವ, ವಿಮರ್ಶಿಸುವ ಮೂಲಕ ಅವರ ಕೃತಿಗಳಿಗೆ ನ್ಯಾಯ ಒದಗಿಸಿದ್ದಾರೆ. ವ್ಯಕ್ತಿಕೇಂದ್ರಿತ ಅಧ್ಯಯನಗಳ ಸಾಲಿಗೆ ಮತ್ತೊಂದು ಸೇರ್ಪಡೆಯಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ಸಿಸು ಸಂಗಮೇಶರ ಕೃತಿಗಳ ಕುರಿತು ಮಾತನಾಡುತ್ತಾ, 'ಮಕ್ಕಳ ಮನಸ್ಸನ್ನು ಅರಳಿಸುವ, ಕುತೂಹಲವನ್ನು ಕೆರಳಿಸುವ, ಕಲ್ಪನೆಗಳನ್ನು ಕಡೆದು ರೂಪಿಸುವ, ಭಾವನೆಗಳನ್ನು ಪ್ರಚೋದಿಸುವ, ವಿಚಾರಕ್ಕೆ ಹೆಚ್ಚಿನ ಆದ್ಯತೆ ನೀಡುವ, ವಿಜ್ಞಾನವನ್ನು ತಿಳಿಸಿಕೊಡುವ, ಆನಂದವನ್ನುಂಟು ಮಾಡುವ, ಅವರಲ್ಲಿ ಸುಪ್ತವಾಗಿರುವ ಶಕ್ತಿಯನ್ನು ಜಾಗೃತಿಗೊಳಿಸುವಂತಹ ಸಾಹಿತ್ಯವನ್ನು ರಚಿಸುತ್ತಾ ಬಂದಿದ್ದಾರೆ.'[೩] ಈ ಹೇಳಿಕೆ ಸಿಸು ಸಂಗಮೇಶ ಅವರ ರಚನೆಯ ಒಟ್ಟು ಶಕ್ತಿಯನ್ನು ಒಂದು ವಾಕ್ಯದಲ್ಲಿ ಹೇಳದಂತಿದೆ.

೨. ಭಾರತೀಯ ಮಕ್ಕಳ ಸಾಹಿತ್ಯ ಪರಂಪರೆ, ಸಿಸು ಸಂಗಮೇಶರ ವ್ಯಕ್ತಿಗತ ಜೀವನ, ಅವರ ಸಾಹಿತ್ಯ ಕೃತಿಗಳ ವಿಶ್ಲೇಷಣೆ, ಅವುಗಳ ಶೈಲಿ, ತಂತ್ರ ಹಾಗೂ ಮಕ್ಕಳ ಸಾಹಿತ್ಯಕ್ಕೆ ಅವರು ನೀಡಿದ ಕೊಡುಗೆಗಳ ಕುರಿತು ಗಡಾದ ಅವರು ವಿನಯ ಪೂರ್ವಕವಾದ ಪ್ರಬಂಧವನ್ನು ರಚಿಸಿದ್ದಾರೆ. ಇಡೀ ಬರಹದಲ್ಲಿ ಸಂಗಮೇಶರ ಯಾವ ಕೃತಿಯೂ ಕಣ್ತಪ್ಪಿ ಹೋಗದಂತೆ ಎಚ್ಚರ ವಹಿಸಿರುವುದು ರಾಜೇಂದ್ರ ಗಡಾದ ಅವರ ಪ್ರಬಂಧದ ಗೆಲುವಿನ ಅಂಶಗಳಲ್ಲಿ ಒಂದಾಗಿದೆ.

೩. ಆದರೂ ಪ್ರಬಂಧದುದ್ದಕ್ಕೂ ಸಿಸು ಸಂಗಮೇಶರ ಅಗಾಧ ಸಾಹಿತ್ಯ ಸೇವೆಯನ್ನು ಗಡಾದ ಅವರು ಪರಿಚಯಿಸುವುದರಲ್ಲೇ ಪುಟ ತಿರುವಿ ಹಾಕಿದ್ದಾರೆ. ಸಿಸು ಸಂಗಮೇಶರ ತಮ್ಮ ಅವಿರತ ಸಾಹಿತ್ಯ ಮತ್ತು ಸಂಘಟನೆಗಳ ಬದ್ಧತೆ ಕುರಿತು ವಿಶ್ಲೇಷಿಸುವ ಅಗತ್ಯವಿತ್ತು. ಒಂದು ಅಧ್ಯಾಯದಲ್ಲಿ ಮಾತ್ರ ವಸ್ತು, ವಿನ್ಯಾಸ, ಶೈಲಿಗಳ ಕುರಿತು ಉದಾಹರಣೆಗಳ ಸಮೇತ ವಿವರಿಸಿದ್ದಾರೆ.

೨.೧.೩. ಮಕ್ಕಳ ಸಾಹಿತ್ಯದಲ್ಲಿ ಕಥೆಗಳ ಸ್ವರೂಪ- ಮಾದುಪ್ರಸಾದ್ ಹುಣಸೂರು

೧. ಇದೊಂದು ಮಕ್ಕಳ ಕಥಾ ಸಾಹಿತ್ಯದ ಕುರಿತಾದ ಪಿಎಚ್.ಡಿ., ಪ್ರಬಂಧವಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ಮಕ್ಕಳ ಕಥಾ ಸಾಹಿತ್ಯದ ಹಲವು ಮಜಲುಗಳ ಕುರಿತು ಮಾಧುಪ್ರಸಾದ್ ಅವರು ಎಂಟು ಅಧ್ಯಾಯಗಳಲ್ಲಿ ವಿಶ್ಲೇಷಿಸಿದ್ದಾರೆ. ಮಕ್ಕಳ ಕಥಾಸಾಹಿತ್ಯದ ಹಿನ್ನೆಲೆ, ಮೌಖಿಕ, ಲಿಖಿತ ಕಥೆಗಳ ಸ್ವರೂಪ, ಮಕ್ಕಳ ಸಾಹಿತ್ಯದ ಸ್ವರೂಪದ ಮೇಲಿನ ಪ್ರಭಾವ, ಫ್ಯಾಂಟಸಿ ಸ್ವರೂಪದ ಕಥೆಗಳು, ವಾಸ್ತವ ಸ್ವರೂಪದ ಕಥೆಗಳು, ಕಾಮಿಕ್ಸ್ ರೂಪದ ಕಥೆಗಳು, ದೀರ್ಘಕತೆ, ನೀಳ್ಗತೆ ಮತ್ತು ಕಾದಂಬರಿ ಎಂದು ವಿಭಾಗಿಸಿಕೊಂಡು ಮಕ್ಕಳ ಕಥೆಗಳ ಕುರಿತಾಗಿ ವಿದೇಶಿ ಭಾಷೆ, ಭಾರತದ ಇತರೆ ಭಾಷೆಗಳು ಯಾವ ರೀತಿ ಪ್ರಭಾವವನ್ನು ಕನ್ನಡ ಮಕ್ಕಳ ಕಥಾ ಸಾಹಿತ್ಯದ ಮೇಲೆ ಬೀರಿವೆ ಎಂಬುದರ ಕುರಿತು ವಿಶ್ಲೇಷಿಸುವ ಮೂಲಕ ಮಕ್ಕಳ ಕಥಾಸಾಹಿತ್ಯದ ಅಪಾರ ಸಾಧ್ಯತೆಗಳನ್ನು ಕಟ್ಟಿಕೊಟ್ಟಿದ್ದಾರೆ. ಕಥಾಸಾಹಿತ್ಯ ಕುರಿತ ಈ ಸಂಶೋಧನೆಯಲ್ಲಿ ಫ್ಯಾಂಟಸಿ ಕುರಿತು ಒಂದು ಅಧ್ಯಾಯದಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ಫ್ಯಾಂಟಸಿ ಉದ್ದೇಶ, ಫ್ಯಾಂಟಸಿ ನೆಲೆ, ಫ್ಯಾಂಟಸಿ ಲಕ್ಷಣಗಳು, ಫ್ಯಾಂಟಸಿ ಭಾಷೆ, ಫ್ಯಾಂಟಸಿ ಗುಣಾವಗುಣಗಳು, ಫ್ಯಾಂಟಸಿಗೆ ಪ್ರೇರಣೆ-ಪ್ರಭಾವ, ಕನ್ನಡದಲ್ಲಿ ಫ್ಯಾಂಟಸಿ ಪ್ರಯೋಗ ಮತ್ತು ಫ್ಯಾಂಟಸಿ ಬಗೆಗಳ ಕುರಿತಾಗಿ ಹಲವಾರು ಉದಾಹರಣೆಗಳನ್ನು ನೀಡುವುದರ ಮೂಲಕ ಇಲ್ಲಿ ವಿವರಿಸಲಾಗಿದೆ. 'ಓದುಗನಿಗೆ ಜಾದೂ ಎನಿಸಿದರೂ ಅವಾಸ್ತವದ ರಮ್ಯತೆ ಸೆಳೆಯುತ್ತದೆ. ವಾಸ್ತವದಲ್ಲಿ ಪ್ರಾಣಿಗಳು ಮೂಕವಾಗಿರುತ್ತವೆ. ಆದರೆ ಫ್ಯಾಂಟಸಿಯಲ್ಲಿ ಪ್ರಾಣಿಗಳದೇ ಪ್ರಪಂಚ ತೆರೆದುಕೊಳ್ಳುತ್ತದೆ. ಇಲ್ಲಿ ಮಾನವರೊಡನೆ ಅವು ಸಂಭಾಷಿಸುತ್ತವೆ. ಅವುಗಳು ಸಹ ಮನುಷ್ಯರಂತೆ ಭಾವನೆಗಳನ್ನು, ಸಂವೇದನೆಗಳನ್ನು, ವ್ಯವಹಾರಿಕತೆಯನ್ನು, ಸಂಬಂಧಗಳನ್ನು ಪ್ರಕಟಿಸಬಲ್ಲವು. ಇದು ಫ್ಯಾಂಟಸಿಯಲ್ಲಿ ಮಾತ್ರ ಸಾಧ್ಯವಾಗುವಂತದ್ದು. ಆದುದರಿಂದ ಇದರ ಘನತೆ ಮತ್ತು ಗಂಭೀರತೆಯನ್ನು ನಾವು ಪರಿಗಣಿಸಬೇಕು.'[೪] ಸಂಶೋಧಕರ ಈ ಹೇಳಿಕೆ ಮಕ್ಕಳ ಕಥೆಗಳಲ್ಲಿ ಫ್ಯಾಂಟಸಿ ಮಹತ್ವವನ್ನು ತಿಳಿಸಿಕೊಡುತ್ತದೆ.

೨. ಮಕ್ಕಳ ಕಥಾ ಸಾಹಿತ್ಯ ಕುರಿತು ಮಾತನಾಡುವಾಗ, ಮಕ್ಕಳಿಗಾಗಿ ಇರುವ ಕಥಾ ಸಾಹಿತ್ಯವನ್ನು ಸಂಪೂರ್ಣವಾಗಿ ಅವಲೋಕಿಸುವುದರ ಜೊತೆಗೆ, ಪ್ರಬುದ್ಧರ ಗದ್ಯ ಸಾಹಿತ್ಯದ ತುಲನೆಯಲ್ಲಿ ಮಕ್ಕಳಿಗಾಗಿ ಇರುವ ಕಥಾ ಸಾಹಿತ್ಯ ಹೇಗೆಲ್ಲಾ ಬೆಳೆದು ಬಂದಿತು, ಏನೆಲ್ಲ ಆಕಾರ ಪಡೆಯಿತು, ಯಾವೆಲ್ಲ ಪ್ರಭಾವಗಳನ್ನು ಅರಗಿಸಿಕೊಂಡಿತು, ಅಗತ್ಯವಾದ ವಾತಾವರಣದ ಕೊರತೆಯಿದ್ದಾಗಲೂ ಅನನುಕೂಲಗಳನ್ನು ಹೇಗೆಲ್ಲಾ ಅನುಭವಿಸಿತು, ಕಥಾಸಾಹಿತ್ಯ ಸಮೃದ್ಧಗೊಳ್ಳುವಲ್ಲಿ ಅದರ ಪರಿಣಾಮಗಳು ಹೇಗೆಲ್ಲಾ ಆದವು ಎಂಬುದರ ಕುರಿತು ಇಲ್ಲಿ ಉಲ್ಲೇಖಿಸಲಾಗಿದೆ.

ಫ್ಯಾಂಟಸಿ ಕುರಿತು ಅವರು 'ಫ್ಯಾಂಟಸಿಯು ಅವಾಸ್ತವದ ಕಲ್ಪನೆಗಳಿಂದ ಮಕ್ಕಳ ಕತೆಗಳಲ್ಲಿ ರೋಚಕತೆಯನ್ನು ಸೃಷ್ಟಿಸುತ್ತದೆ. ಫ್ಯಾಂಟಸಿಯು ಸ್ಥಾಪಿತವಾದ ನಂಬಿಕೆಗಳ ವಿರುದ್ಧದ ಸೃಷ್ಟಿಯಾಗಿದೆ.

ಪಾಶ್ಚಾತ್ಯರಂತೆ ಫ್ಯಾಂಟಸಿಯನ್ನು ವರ್ಗೀಕರಿಸಿ ನೋಡುವ ಕ್ರಮ ಭಾರತೀಯರಲ್ಲಿಲ್ಲ. ಇದರ ಅಗತ್ಯವು ಇಂದು ಇದೆ. ಫ್ಯಾಂಟಸಿಯ ಕಲ್ಪನೆಗಳಿಂದ ವಿಜ್ಞಾನದ ಶೋಧಗಳು ಉಂಟಾಗಲು ಸಾಧ್ಯವಾಗಿದೆ. ಹೊಸ ತಲೆಮಾರಿನ ಲೇಖಕರು ವಾಸ್ತವಕ್ಕೆ ಒತ್ತುಕೊಟ್ಟಂತೆಯೇ ಫ್ಯಾಂಟಸಿಯನ್ನು ಸೃಷ್ಟಿಸಿ ದೇಸೀಯತೆಯೊಂದಿಗೆ ಪ್ರಯೋಗಿಸಿ ನೋಡುತ್ತಿದ್ದಾರೆ'[೫] ಎಂದು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

೩. ಕನ್ನಡ ಕಥಾ ಸಾಹಿತ್ಯದ ಸ್ಥೂಲ ಪರಿಚಯ ನೀಡುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಆದರೆ ಇದು ಪ್ರಾತಿನಿಧಿಕವೆನ್ನುವಂತಿದೆ. ಫ್ಯಾಂಟಸಿ ವಿಧಗಳ ಬಗ್ಗೆ ಹೇಳುವಾಗ ಕಥೆಗಳ ಇನ್ನಷ್ಟು ಉದಾಹರಣೆಗಳನ್ನು ನೀಡಿ ಮತ್ತಷ್ಟು ವಿಸ್ತೃತವಾಗಿ ಚರ್ಚೆ ಮಾಡಬಹುದಿತ್ತು. ಮಕ್ಕಳ ಕಥೆಗಳಲ್ಲಿ ಫ್ಯಾಂಟಸಿ ಕುರಿತು ಸಂಶೋಧಕರ ಕೆಲಸ ಗಮನಾರ್ಹವಾದರೂ ಅದನ್ನು ಇನ್ನಷ್ಟು ವಿವರಿಸಿ-ವಿಶ್ಲೇಷಣೆ ನಡೆಸಿದ್ದರೆ ಅದನ್ನು ಮತ್ತಷ್ಟು ಮುನ್ನೆಲೆಗೆ ತರಬಹುದಿತ್ತು.

೨.೨. ಪ್ರಕಟಗೊಂಡ ಪುಸ್ತಕಗಳ ಸಮೀಕ್ಷೆ

೨.೨.೧. 'ಅಲರು' – ಆನಂದ ಪಾಟೀಲ

೧. ಪ್ರಸ್ತುತ ಕನ್ನಡ ಮಕ್ಕಳ ಸಾಹಿತ್ಯ ಕುರಿತು ನಡೆಯುವ ಚಿಂತನೆಗಳಲ್ಲಿ ಬಹುಪಾಲು ಆನಂದ ಪಾಟೀಲರದು ಇರುತ್ತದೆ. ಕನ್ನಡದ್ದಲ್ಲದೇ ಇಂಗ್ಲಿಷ್‌ನ್ನು ಒಳಗೊಂಡಂತೆ ಇತರ ಭಾರತೀಯ ಭಾಷೆಗಳ ಕುರಿತು ಇಷ್ಟೊಂದು ಗಂಭೀರವಾಗಿ ಅಧ್ಯಯನಗಳಲ್ಲಿ ತೊಡಗಿದ ವಿರಳ ಹೆಸರುಗಳಲ್ಲಿ ಪಾಟೀಲರದು ಅಗ್ರ ಪಂಕ್ತಿಯದ್ದು. ಅವರು ಇಲ್ಲಿಯವರೆಗೆ ನಾಲ್ಕು ಸಂಕಲನಗಳಲ್ಲಿ ತಮ್ಮ ಲೇಖನಗಳನ್ನು ಸಂಕಲಿಸಿಕೊಟ್ಟಿದ್ದಾರೆ. ಅವರೇ ಹೇಳಿಕೊಳ್ಳುವಂತೆ ಅವರ ಲೇಖನಗಳು ಗಂಭೀರವಾದ ವಿಮರ್ಶೆಗೆ ಇಳಿಯದಿದ್ದರೂ ಮಕ್ಕಳ ಸಾಹಿತ್ಯದ ಮೂಲ ಪರಿಕಲ್ಪನೆಗಳ ಹುಡುಕಾಟವನ್ನು ಪ್ರತಿ ಬರಹದಲ್ಲಿ ಮಾಡಿದ್ದಾರೆ.

೨. 'ಅಲರು' ಸಂಕಲನದಲ್ಲಿ ಮಕ್ಕಳ ಸಾಹಿತ್ಯದ ಪ್ರತ್ಯೇಕತೆಯ ಕುರಿತು, ಮಕ್ಕಳ ಸಾಹಿತ್ಯದಲ್ಲಿ ವಾಸ್ತವ ಏಕೆ ಬೇಕು ಎನ್ನುವುದರಿಂದ ಹಿಡಿದು ಕೆ.ವಿ.ತಿರುಮಲೇಶ, ಸುಮತೀಂದ್ರ ನಾಡಿಗ, ಆರ್.ವಿ.ಭಂಡಾರಿ, ಜೆ.ಕೆ.ರೌಲಿಂಗ್, ಜಮೈಕಾದ ಕವಿ ಜೆ.ಎಂ.ಬೆರ್ರಿಯ ವಿಶಿಷ್ಟತೆ ಹೀಗೆ ಕನ್ನಡ ಸೇರಿದಂತೆ ಅನ್ಯ ಭಾಷೆಗಳಲ್ಲಿ ನಡೆದಿರುವ ಪ್ರಯೋಗ, ಹಾಗೂ ಅಲ್ಲಿಯ ಗುಣ ಲಕ್ಷಣಗಳನ್ನು ತಿಳಿಸುವ ಮೂಲಕ ಕನ್ನಡದ ಕೃತಿಗಳಿಗೆ ಕನ್ನಡಿ ಹಿಡಿದಿದ್ದಾರೆ. ಶಶಿಧರ ವಿಶ್ವಾಮಿತ್ರ ಅವರ ಕತೆಯಾದ ಹುಲಿ ವಿಮರ್ಶೆಯಲ್ಲಿ; ಕಲ್ಪನೆಯ ಭೋಜಣ್ಣನ ಪಯಣದಲ್ಲಿ ಹುಲಿ ಅವನೊಂದಿಗೆ ಮಾತನಾಡತೊಡಗುವ ಪ್ರಕ್ರಿಯೆಯಲ್ಲಿ ಇಬ್ಬರ ಒಳತೋಟಿಗಳನ್ನು ಹೊರಗಿಡುತ್ತಾ ಹೋಗುತ್ತದೆ. 'ಇಡೀ ಕತೆ ನಡೆದಂತೆ ರೂಪಿತವಾಗದೆ, ಹೀಗೆಲ್ಲ ನಡೆಯುತ್ತಿರಬಹುದು, ಹೀಗೆ ಆಗಿರಬಹುದು, ಈಗ ಹೀಗೇ... ಅಂತೆಲ್ಲ ಕಲ್ಪನೆ ಕಟ್ಟುತ್ತ, ರಚನೆಯನ್ನು ಪಡೆದುಕೊಳ್ಳುತ್ತ ಹೋಗುತ್ತದೆ.'[೬] ವಿಮರ್ಶಕರ

ಈ ಮಾತು ಶಶಿಧರ ವಿಶ್ವಾಮಿತ್ರರ ಇಡೀ ಕಥನತಂತ್ರವನ್ನು ಹೇಳುವಂತಿದೆ. ಈ ಕೃತಿಯ ಮತ್ತೊಂದು ಮುಖ್ಯವಾದ ಲೇಖನ ಆರ್.ವಿ.ಭಂಡಾರಿಯವರ ಕಾದಂಬರಿಯ ಕುರಿತಾದದ್ದಾಗಿದೆ.

ಕನ್ನಡದ ಪ್ರಮುಖ ಮಕ್ಕಳ ಲೇಖಕರಲ್ಲಿ ಒಬ್ಬರಾದ ಭಂಡಾರಿಯವರು ರಚಿಸಿದ ವಾಸ್ತವ ಮಾದರಿ ಕಾದಂಬರಿಯನ್ನು ಪಾಟೀಲರು ಸವಿವರವಾಗಿ ವಿಶ್ಲೇಷಣೆ ಮಾಡಿದ್ದಾರೆ. 'ವಿಭಿನ್ನ ಬದುಕಿನ ಅನುಭವಗಳನ್ನು ಮಕ್ಕಳಿಗೆ ಆಪ್ತವಾಗಿ, ಹತ್ತಿರದಲ್ಲಿ ಮುಟ್ಟಿಸುವ ಅಗತ್ಯ ತುಂಬಾ ಇದೆ'[೭] ಎಂದು ಅವರು ಹೇಳುತ್ತಾರೆ. ಅವರ ಈ ಹೇಳಿಕೆ ಮಕ್ಕಳ ಸಾಹಿತ್ಯ ಇಂದು ಏನೆಲ್ಲಾ ಹೊರಳುವಿಕೆಗೆ ಚಲಿಸಬೇಕೆಂಬುದನ್ನು ಒತ್ತಿ ಹೇಳುತ್ತದೆ. ಇಂಗ್ಲಿಷ್ ಮಕ್ಕಳ ಸಾಹಿತ್ಯ ಇದಕ್ಕೆ ಪೂರಕವಾಗಿ ಅನೇಕ ಬಗೆಯಲ್ಲಿ ಅಭಿವ್ಯಕ್ತಗೊಳ್ಳುತ್ತಾ ಬರುತ್ತಿದೆ. ಜೆ.ಎಂ.ಬೆರ್ರಿ, ಜೆ.ಕೆ.ರೌಲಿಂಗ್, ಮುಂತಾದವರ ಹೊಸ ಪ್ರಯತ್ನಗಳನ್ನು ವಿವರಿಸಲಾಗಿದೆ. ಮಕ್ಕಳ ಸಾಹಿತ್ಯದ ಈ ಮಾತು ಅದರ ಪ್ರತ್ಯೇಕತೆ ಮತ್ತು ಮಹತ್ವವನ್ನು ಸಾರುವಂತಿದೆ. 'ವಿಶಾಲ ವಿಶ್ವದಲ್ಲಿದ್ದೂ ತನ್ನನ್ನು ಪ್ರತ್ಯೇಕವಾಗಿ ಕಾಣುವ ಬಗೆ ಇಲ್ಲಿದೆ.'[೮] ಲೇಖಕರ ವಿಸ್ತೃತ ಓದು ಇಡೀ ಸಂಕಲನ ಉದ್ದಕ್ಕೂ ಲೇಖನಗಳಲ್ಲಿ ವ್ಯಕ್ತವಾಗಿದೆ. ಫ್ಯಾಂಟಸಿಯ ಕುರಿತು ಪ್ರಾತಿನಿಧಿಕ ಎನ್ನುವ ವಿವರಗಳೂ ಒಳಗೊಂಡಿರುವುದು ಈ ಕೃತಿಯ ವಿಶಿಷ್ಟತೆಗಳಲ್ಲಿ ಒಂದಾಗಿದೆ.

೩. ಪ್ರಸ್ತುತ ಕೃತಿಯಲ್ಲಿ ಪಾಟೀಲರು ಶಶಿಧರ ವಿಶ್ವಾಮಿತ್ರ ಅವರ 'ಕತೆಯಾದ ಹುಲಿ' ಕಥನದ ಫ್ಯಾಂಟಸಿಯ ಕುರಿತು ಹೀಗೆ ಹೇಳುತ್ತಾರೆ. 'ಕಥೆಗಳ ಮಧ್ಯೆ ಹಾಡುಗಳು ಭಾರವೆನ್ನಿಸುತ್ತವೆ' ಎನ್ನುವ ಪಾಟೀಲರ ಮಾತೂ ಕೊಂಚ ಭಾರವೆನ್ನಿಸುತ್ತವೆ. ಫ್ಯಾಂಟಸಿಯ ಪಕಳೆಗಳು ಬಿಚ್ಚಿಕೊಳ್ಳುವುದೇ ಹೆಚ್ಚಾನು ಹೆಚ್ಚಾಗಿ ಹಾಡಿನ ಮೂಲಕ ಉದಾ: ಬೊಮ್ಮನಹಳ್ಳಿಯ ಕಿಂದರಿ ಜೋಗಿ," ಗೋವಿನ ಹಾಡು. 'ಹುಲಿ ಮತ್ತು ಭೋಜಣ್ಣನ ನಡುವೆ ನಡೆಯುವ ಈ ಸಂವಾದ ಪುಣ್ಯಕೋಟಿ ಕತೆಯ ಕುರಿತು ನಂತರ ಬೆಳೆದುಕೊಂಡ ಭಾಗವೆನ್ನುವಂತಿದೆ. ಹುಲಿಯ ಒಳತೋಟಿಗಳನ್ನು ಬಿಚ್ಚಿಡುವ, ಮನುಷ್ಯನ ನೈತಿಕತೆಯನ್ನು ಪ್ರಶ್ನಿಸುವ ಮಟ್ಟಕ್ಕೆ ಹುಲಿಯೊಂದು ಬೆಳೆದಿದೆ.' ಈ ಬಗೆಯ ಚಿಂತನೆಗಳು ಇತ್ತೀಚಿನ ಬರಹಗಳಲ್ಲಿ ಬರುತ್ತಿರುವುದನ್ನು ಗಮನಿಸಬಹುದಿತ್ತು. ಹುಲಿಯನ್ನು ಬರೀ ಕ್ರೂರವೆಂದು, ಮಾಂಸಾಹಾರಿಯೆಂದು ನೋಡುತ್ತಾ ಆ ಬೇಟೆಯ ಹಿಂದೆ ಅದರ ಉಸಿರಿನ ವಿಚಾರವು ನಗಣ್ಯವಾಗಿದೆ ಎನ್ನುವುದನ್ನೇ ನಗಣ್ಯಗೊಳಿಸಲಾಗಿದೆ. ಆದರೆ ಪ್ರಸ್ತುತ ಕಥೆಯಲ್ಲಿ ಹುಲಿಯ ಅಂತರ್ಯದೊಳಗೆ ಅಡಗಿರಬಹುದಾದ ಆತಂಕವನ್ನು ಲೇಖಕರು ಸಂಭಾಷಣಾ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ. ಇದು ಇಡೀ ಕಥನದ ಗೇಯತೆಗೆ ಸಹಾಯಕವಾಗಿದೆ. ಇದನ್ನು ವಿಮರ್ಶಕರು ಗುರುತಿಸದಿರುವುದು ಇಲ್ಲಿನ ಮಿತಿಯಾಗಿದೆ. ಮಕ್ಕಳ ಸಾಹಿತ್ಯ ಕೃತಿಯನ್ನು ಅದರದೇ ಸ್ವರೂಪದ ಮಾದರಿಯಲ್ಲಿ ಚರ್ಚಿಸುವ ಅಗತ್ಯವಿದೆ.

೨.೨.೨. 'ಮುಗುಳು' – ಆನಂದ ಪಾಟೀಲ

೧. ಹದಿಮೂರು ಲೇಖನಗಳಿರುವ 'ಮುಗುಳು' ಪಾಟೀಲರ ಮತ್ತೊಂದು ಮಹತ್ವದ ಕೃತಿಯಲ್ಲಿ ಮಕ್ಕಳ ಸಾಹಿತ್ಯ ಕುರಿತು ಹೆಚ್ಚಿನ ಗ್ರಂಥಗಳು ಬರುತ್ತಿಲ್ಲ ಎಂಬ ವ್ಯಥೆಯೊಂದಿಗೆ ಅವರ ಅನಿಸಿಕೆ, ವಿಶ್ಲೇಷಣೆ ಹೀಗೆಲ್ಲಾ ಹರಡಿಕೊಂಡಿದೆ. ಪ್ರಸ್ತುತ ಕೃತಿಯಲ್ಲಿ ದೇಶಭಾಷೆಗಳ ಹಂಗಿಲ್ಲದೆ ಲೇಖಕರ ವಿಸ್ತೃತ ಓದಿನ ವ್ಯಾಪ್ತಿಗೆ ಬಂದ ವಿಷಯಗಳ ಕುರಿತು ವಿವರವಾದ ಲೇಖನಗಳನ್ನು ಇಲ್ಲಿ ಒಟ್ಟುಗೂಡಿಸಿ ಸಂಕಲನ ಮಾಡಿದ್ದಾರೆ.

೨. 'ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಇತ್ತೀಚಿನ ಒಲವುಗಳು' ಎಂಬುದು ಸಂಕಲನದ ಮುಖ್ಯ ಲೇಖನಗಳಲ್ಲಿ ಒಂದು. ಇಪ್ಪತ್ತನೇ ಶತಮಾನದ ಮಕ್ಕಳ ಸಾಹಿತ್ಯದ ಹೊರಳುಗಳನ್ನು ಮೂರು ಹಂತಗಳಲ್ಲಿ ಗುರುತಿಸಿದ್ದಾರೆ. 'ತಟ್ಟು ಚಪ್ಪಾಳೆ ಪುಟ್ಟ ಮಗು' ಮುನ್ನುಡಿಯಲ್ಲಿ ಜಿ.ಪಿ.ರಾಜರತ್ನಂ ಅವರು ಮಕ್ಕಳ ಪದ್ಯ ಲೋಕದ 'ರಾಜ' ಮತ್ತು 'ರತ್ನ' ಎರಡೂ ಆಗಿದ್ದಾರೆ" ಎನ್ನುವ ಬೊಳುವಾರು ಅವರ ಮಾತು ಅರ್ಥಪೂರ್ಣವಾದುದು. ಮಕ್ಕಳಿಗೆ ಶಿಕ್ಷಣ ನೀಡುವ ಪರಿಕರವಾಗಿಯೂ ಪದ್ಯಗಳನ್ನು ಬಳಸಿಕೊಳ್ಳುವ ವಿಚಾರ ಅವರಲ್ಲಿ ಸ್ಫುಟವಾಗಿತ್ತು. ಕನ್ನಡದ ಮಕ್ಕಳ ಸಾಹಿತ್ಯ ಘಟ್ಟಗಳನ್ನು ಕಾಲ, ವೃತ್ತಿಗಳ ಮೂಲಕ ಗುರುತಿಸಲಾಗಿದೆ. ರಾಜರತ್ನಂ ಬರಹಗಳಲ್ಲಿ ಕುವೆಂಪು, ದಿನಕರ ದೇಸಾಯಿಯವರಿಗೆ ಹೋಲಿಸಿಕೊಂಡರೆ ವೈಚಾರಿಕ ನಿಲುವು ಬರವಣಿಗೆಯ ಹಿಂದೆ ಇರಲಿಲ್ಲ.

೩. ಕಾಲ, ವೃತ್ತಿಗಳ ಮೂಲಕ ಮಕ್ಕಳ ಸಾಹಿತ್ಯದ ಹಂತಗಳನ್ನು ಗುರುತಿಸುವುದಕ್ಕಿಂತ ಪರಿಕಲ್ಪನಾತ್ಮಕ ಪ್ರಗತಿಗಳಲ್ಲಿ ವಿಶ್ಲೇಷಿಸುವುದು ಸೂಕ್ತವೆಂದೆನಿಸುತ್ತದೆ. ವೈಚಾರಿಕ ನಿಲುವಿಲ್ಲದ ಯಾವ ಬರಹವೂ ಸಾಹಿತ್ಯವಾಗಲಾರದು. ಈ ನಿಲುವುಗಳನ್ನು ಪ್ರಮಾಣದಲ್ಲಿ ಅಳೆಯುವುದು ಸೂಕ್ತವಲ್ಲ.

೨.೨.೩. 'ಮಕ್ಕಳ ಸಾಹಿತ್ಯ' – ಬಸು ಬೇವಿನ ಗಿಡದ

೧. ಸಾಹಿತ್ಯ ಚರಿತ್ರೆಗಳು ಬರೀ ಪರಿಚಯ, ವಿವರಣೆಗಳಿಗಷ್ಟೇ ಸೀಮಿತವಾಗಿರುವಾಗ ಲೇಖಕರ ಕೃತಿಗಳನ್ನು ವಿಮರ್ಶಾತ್ಮಕವಾಗಿ ನೋಡುವ ಕಾರ್ಯವಾಗಬೇಕಿದೆ. ಆ ಹಿನ್ನೆಲೆಯಲ್ಲಿ ಮಾಡಿದ ಒಂದು ಪ್ರಯತ್ನ ಇದಾಗಿದೆ. ಕನ್ನಡ ಮಕ್ಕಳ ಸಾಹಿತ್ಯದ ಒಟ್ಟು ಫಸಲನ್ನು ಹದಿನೆಂಟು ಅಧ್ಯಾಯಗಳಲ್ಲಿ ವಿಶ್ಲೇಷಿಸಲಾಗಿದೆ. ಸಂಕಲನದ ಬಹುತೇಕ ಲೇಖಕರು ಮಕ್ಕಳ ಸಾಹಿತಿಗಳೇ ಆಗಿರುವುದು ಬರವಣಿಗೆಯ ಪರಿಧಿಗೊಂದು ಅರ್ಥವಂತಿಕೆ ಬಂದಿದೆ.

೨. ಇಂಗ್ಲಿಷ್ ಸೇರಿದಂತೆ ಅನೇಕ ಭಾಷೆಗಳಲ್ಲಿ ಮಕ್ಕಳ ಸಾಹಿತ್ಯ ಬರವಣಿಗೆ, ಬೆಳವಣಿಗೆ ತಕ್ಕಮಟ್ಟಿಗೆ ಆಗಿದೆ. ಜಗತ್ತಿನ ಎಲ್ಲಾ ದೇಶಗಳ ಮಕ್ಕಳ ಸಾಹಿತ್ಯ ಹುಟ್ಟಿದ್ದು ಪುರಾಣ ಸಾಹಿತ್ಯ, ಮತ್ತು ಪಾರಂಪರಿಕವಾಗಿ ಬಂದ ದಂತಕಥೆ ಮತ್ತು ಅತಿಮಾನುಷ ಸಂಗತಿಗಳಿಂದಲೇ ಜೊತೆಗೆ ಜನರಿಂದ ಮುಕ್ತವಾಗಿ ರಚನೆಯಾದ ಜನಪದ ಸಾಹಿತ್ಯವೂ ಇದರ ಪ್ರಬಲವಾದ ಬೇರುಗಳಲ್ಲಿ ಒಂದಾಗಿದೆ.

ಮಕ್ಕಳ ಸಾಹಿತ್ಯ ಬರೀ ಮಕ್ಕಳಿಗಾಗಿ ಅಲ್ಲ ದೊಡ್ಡವರೂ ಪ್ರತ್ಯೇಕವಾಗಿ ಅದನ್ನು ಓದಿಗೆ ತೆರೆದುಕೊಳ್ಳಬೇಕಿದೆ. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ಮಕ್ಕಳ ಸಾಹಿತ್ಯವೆಂದರೆ ಉಪದೇಶವಲ್ಲ ಬದಲಾಗಿ ಮಗುವಿನ ಕಲ್ಪನಾ ಲೋಕದ ವಿಸ್ತಾರ ಹಾಗೂ ಅದರ ವಾಸ್ತವ ಜಗತ್ತಿನ ಅರಿವು ಎಂಬ ಜಾಗೃತಿ ನಿಚ್ಚಳವಾಗತೊಡಗಿತು. ನಮ್ಮ ಬರವಣಿಗೆಗಳು ಫ್ಯಾಂಟಸಿ ಹೇಳಿವೆ, ವಾಸ್ತವ ಕಥೆಗಳನ್ನೂ ತೆರೆದಿಟ್ಟಿವೆ. ಮಕ್ಕಳು ಮುಜುಗರ ಪಡುವಂತಹ ರಚನೆಗಳು ಆಯಾ ಪ್ರದೇಶದ ಸಾಂಸ್ಕೃತಿಕ ಪರಿಸರ, ವರ್ಗ, ಶಿಕ್ಷಣ ಇವೆಲ್ಲಾ ರಚನೆಗಳ ಹಿನ್ನೆಲೆಯಲ್ಲಿ ಕೆಲಸ ಮಾಡುತ್ತವೆ. ಬಯಲು ಸೀಮೆಯ ಹಳ್ಳಿಗಾಡಿನ ಪ್ರದೇಶದಲ್ಲಿ ಮಕ್ಕಳಿಗೆ ತುಂಬಾ ಮುಕ್ತತೆ ಇದ್ದು ಮಲೆನಾಡಿನಲ್ಲಿ ಈ ಅವಕಾಶಗಳು ಒದಗಿರಲಿಕ್ಕಿಲ್ಲ.

ಪಂಜೆಯವರು ಮಕ್ಕಳಿಗಾಗಿಯೇ ಮೀಸಲೆನ್ನುವಂತೆ ಬರೆದ ಅನನ್ಯ ಬರಹಗಾರ. ಪರಂಪರೆಯ ಜಾನಪದ ಭಂಡಾರದಿಂದ ಮಕ್ಕಳಿಗಾಗಿ ಜನಪದ ಕಥೆಗಳ ಕಟ್ಟೊಂದನ್ನು ನೀಡಬೇಕಾದ ಸಂದರ್ಭದಲ್ಲಿ ಸಮರ್ಥ ಕಥೆಗಳನ್ನೇ ಆಯ್ಕೆ ಮಾಡಿದ್ದಾರೆ ಎಂದು ಸಂಶೋಧಕರು ಪಂಜೆಯವರ ಸಾಹಿತ್ಯದ ಉದ್ದೇಶವನ್ನು ಹೇಳಿದ್ದಾರೆ. 'ಮಕ್ಕಳನ್ನು ರಂಜಿಸಲು ಪಂಜೆಯವರು ಕಥೆಗಳನ್ನು ಹೆಣೆದಿದ್ದಾರೆ', 'ಇವರ ಕಥಾ ಬರವಣಿಗೆ ಪ್ರಾಥಮಿಕ ಅದರಲ್ಲೂ ಪೂರ್ವ ಪ್ರಾಥಮಿಕ ಹಂತಕ್ಕೆ ನಿಂತಿತ್ತು. ಎಲ್ಲಾ ವಯೋಮಾನದವರೆಗೂ ಚಾಚಿಕೊಳ್ಳಲಿಲ್ಲ.'[೧೦] ಎಂದು ಅವರು ಅಭಿಪ್ರಾಯ ಪಡುತ್ತಾರೆ.

ಕನ್ನಡದಲ್ಲಿ ಇಪ್ಪತ್ತನೇ ಶತಮಾನದ ಆರಂಭದಲ್ಲಿ ಮಕ್ಕಳಿಗಾಗಿ ಪರಂಪರೆಯ ಕತೆಗಳನ್ನು ಹೆಕ್ಕಿ ಕೊಟ್ಟ ಲೇಖಕರಲ್ಲಿ ಉಗ್ರಾಣ ಮಂಗೇಶರಾಯರು ಒಬ್ಬರು. ಅವರ 'ಕಂಬಳಿ' ಕಥೆಯಲ್ಲಿ 'ಕುರುಬ ಹುಡುಗನಿಗೆ ಬಿದ್ದ ಕನಸಿನಲ್ಲಿ ಹೊದ್ದುಕೊಂಡ ಕಂಬಳಿಯೇ ತಾನು ಹೇಗೆಲ್ಲಾ ಸಿದ್ಧವಾಗುತ್ತೇನೆ ಎಂದು ತನ್ನ ಕಥೆಯನ್ನು ಹೇಳುತ್ತದೆ.'[೧೧] ಎಂದು ಹೇಳುತ್ತಾರೆ. ಮಡ್ಡಮ್ಮ ಎನ್ನುವ ಗೊಂಬೆಯ ಮೂಲಕ ಕಥಾ ನಿರೂಪಣೆ ಮಾಡಿದ ಕನ್ನಡದ ವಿಶಿಷ್ಟ ಬರಹಗಾರ ಮೇವುಂಡಿ ಮಲ್ಲಾರಿಯವರ ಗುಬ್ಬಚ್ಚಿ ಗೂಡು ಸಂಕಲನದ ಕತೆಗಳು ಅಸಂಗತ ಜಗತ್ತಿನ ಲೋಕದ ಪಡಿನೆರಳಾಗಿ ಒಡಮೂಡಿವೆ. 'ತಿರುವು ಮುರುವು' ಕಥೆಯಲ್ಲಿ ಪಾಶ್ಚಾತ್ಯ ಕಥೆಗಳ ನೆರಳಿಂತೆ ಇದೆ. ಇಲ್ಲಿ ಅಸಂಗತ ಸಂಗತಿಗಳು ನಡೆಯುತ್ತಲೇ ಇರುತ್ತವೆ. ಲೂಯಿ ಕೆರೋಲ್ ಅವರ 'ಆಲೀಸ್ ಅಡ್ವೆಂಚರ್ಸ್ ಇನ್ ವಂಡರ್‌ಲ್ಯಾಂಡ್' ಕೃತಿಯ ಆಲೀಸ್‌ಳ ಹೊಸ ಜಗತ್ತಿನಂತೆ, ಹುಡುಗ ಕಿಟಕಿಯಿಂದ ಬೇರೊಂದು ಲೋಕಕ್ಕೆ ಪ್ರವೇಶ ಪಡೆಯುವ ಕಥೆ ಅತ್ಯಂತ ಸ್ವಾರಸ್ಯಪೂರ್ಣವಾದುದು.

ಈ ಕಥೆ ಕಲ್ಪನೆಯಲ್ಲಿ ಕಳೆದು ಹೋಗದೆ ಮತ್ತೆ ವಾಸ್ತವಕ್ಕೆ ಬರುತ್ತದೆ. ಕನ್ನಡದಲ್ಲಿ ರತ್ನ ಪದಗಳ ಮೂಲಕ ಹೆಸರುವಾಸಿಯಾದ ಹಿರಿಯ ಲೇಖಕರಾದ ರಾಜರತ್ನಂ ಅವರು ಮಕ್ಕಳಿಗಾಗಿ ಬಹಳಷ್ಟು ಕೃತಿಗಳನ್ನು ರಚಿಸಿದ್ದಾರೆ. ಅವರ 'ಬ್ಯಾರನ್ ಮಂಕ್ ಹೌಸ್', ನೀಲತ್ತಹಳ್ಳಿ ಕಸ್ತೂರಿಯವರ 'ತಗಡಿನ ಸಿಪಾಯಿ'(ಟಿನ್ ಸೋಲ್ಜರ್) ಕನ್ನಡದಲ್ಲಿ ಅನುವಾದ ಎನ್ನುವ ಹೊಸ ನೋಟಕ್ಕೆ

ದಾರಿಮಾಡಿದ ಬರಹಗಳಾಗಿವೆ. ನಾಡಿನ ಜನಪ್ರಿಯ ಕವಿಗಳಲ್ಲಿ ಒಬ್ಬರಾದ ಎಚ್.ಎಸ್.ವೆಂಕಟೇಶಮೂರ್ತಿಯವರು ಮಕ್ಕಳಿಗಾಗಿ ಬರೆದ ಕಥೆ, ಕವಿತೆ, ನಾಟಕಗಳು ಎಲ್ಲವೂ ಓದುಗ ವಲಯದ ಆಪ್ತ ಗೆಳೆಯರಾಗಿಬಿಟ್ಟವೆ. ಮುಗ್ಧತೆ ಮತ್ತು ರಮ್ಯತೆಯ ಜೊತೆ ಜೊತೆಗೆ ವಾಸ್ತವವೂ ಮಡುಗಟ್ಟಬೇಕು ಎನ್ನುವ ಕಾಳಜಿಯನ್ನಿಟ್ಟುಕೊಂಡ ಲೇಖಕರು ಎಚ್.ಎಸ್.ವೆಂಕಟೇಶಮೂರ್ತಿ. ಅವರ 'ಗುಬ್ಬಿ ಮರಿಯ ಹೊಸ ತರ್ಕ' ಎನ್ನುವ ಪದ್ಯದಲ್ಲಿ 'ಕಾಗೆಯ ಮರಿಯ ಜೊತೆ ಆಡಿದರೆ ಗುಬ್ಬಿ ಮರಿಯೂ ಕಪ್ಪಾಗುತ್ತೆ ಅಂತ ಅಮ್ಮ ಹೆದರಿಸಿದರೆ; ಮರಿಗುಬ್ಬಿ ನನ್ನ ಜೋಡಿ ಆಡ್ತಾ ಆಡ್ತಾ ಕಾಗೆ ಮಲ್ಲಿಗೆ ಥರ ಬೆಳ್ಳಗೆ ಆಗುತ್ತೆ, ಎಂದು ಪುರ್ರಂತ ಹಾರಿ ಹೋಯಿತು'[೨]. ಇಲ್ಲಿ ಕಪ್ಪಾದ ಕಾಗೆಗೂ ಬಿಳಿ ಮಾಡುವ ಮರಿಗುಬ್ಬಿಯ ತರ್ಕ ಪ್ರಶ್ನಾರ್ಹವಾದರೂ ಪ್ರತಿಭಟನೆಯ ಸೆಳಕು, ಹೊಸ ಆಲೋಚನೆ, ಸಮಾನ ಭಾವದ ಕಲ್ಪನೆ ಈ ಪದ್ಯದಲ್ಲಿ ಸಶಕ್ತವಾಗಿ ಮೂಡಿ ಬಂದಿದೆ.

ಮಕ್ಕಳ ಕಲ್ಪನೆಗಳಲ್ಲಿ ಹಿರಿಯರು ನಗೆ ಪಾಟಲಿಗೆ ಈಡಾಗುವುದು ಆನಂದ ಪಾಟೀಲರ 'ಡಂ ಡಂ ಊರಿಗೆ ಡಿಂ ಡಿಂ ಗಾಡಿ'ಯ ಮುಖ್ಯ ಆಶಯ. ತಪ್ಪು ಮಾಡದ ಮಗುವನ್ನು ಹೊಡೆದ ಹಿರಿಯ ರಾವಜಿಗಿಂತ ಡಂ ಡಂ ಊರಿನ ಮಜಾ. ಜೆ.ಎಂ.ಬೆರ್ರಿಯ ಪೀಟರ್ ಪ್ಯಾನ್‌ನನ್ನು ನೆನಪಿಸುತ್ತದೆ. ಬರವಣಿಗೆಯೊಂದು ಹೀಗೆ ಇರಬೇಕೆಂದುಕೊಳ್ಳುವವರಿಗೆ ಪಾಟೀಲರ ಬರವಣಿಗೆಯ ರುಚಿ ಹೊಸ ಕಹಿ ಖಾದ್ಯವೆನಿಸುವ ಸಾಧ್ಯತೆಯಿದೆ. ಕೌದಿಯ ಚಿತ್ತಾರದಲ್ಲಿ ಇಡೀ ಪ್ರಪಂಚವನ್ನೇ ಇಳಿಸುವ ಮುದುಕಿಯ ಕಲೆ ಆನಂದ ಪಾಟೀಲರ ಕಾವ್ಯದಲ್ಲಿ ಚಿತ್ತಾಕರ್ಷವಾಗಿ ಇಳಿದಿದೆ. ಇಲ್ಲಿ ಮುದುಕಿ ಮತ್ತು ಹುಡುಗಿಯ ನಡುವೆ ನಡೆಯುವ ಮಾತುಕಥೆ ಶ್ರೇಷ್ಠ ಕಾವ್ಯದ ಉದಾಹರಣೆಯಂತಿದೆ.' ಎನ್ನುವ ಬೇವಿನಗಿಡದ ಅವರ ಮಾತಿಗೆ ಸಾಕ್ಷಿಯಾಗಿ ಇಡೀ ಕಾವ್ಯ ನಿಂತಿದೆ. ಜನಪದ ಕಥೆಯೊಂದರ ಎಳೆಯಿಂದ ಉಂಟಾದ ಕತೆ ತೊಂಬತ್ತೆರಡು ಪುಟಗಳದುದ್ದಕ್ಕೂ ಇದೊಂದು ದೃಶ್ಯಕಾವ್ಯವೆನ್ನುವಂತೆ ಹಳೆಯದೊಂದು ಲೋಕಕ್ಕೆ ಒಯ್ದು ಕಥೆ ಕೇಳುವ, ಓದುವ ಸಮಯದುದ್ದಕ್ಕೂ ಫ್ಯಾಂಟಸಿಯ ಉತ್ತುಂಗದ ತುದಿಗೆ ತಲುಪಿದ ಅನುಭವವಾಗುತ್ತದೆ.

'ಹೊಸತು ತಂದ ಹತ್ತು ಹಲವರು' ಲೇಖನದಲ್ಲಿ ಕಥೆಗಳಿಗೆ ಜೀವಂತಿಕೆ ತಂದ ನೀಲಾಂಬರಿ(ಕೆ.ಪಿ.ಪುಟ್ಟಸ್ವಾಮಿ)ಯವರ ಪುಸ್ತಕಗಳು ಮಕ್ಕಳನ್ನು ರಂಜಿಸುವುದರ ಜೊತೆಗೆ ಓದುವ ಹವ್ಯಾಸವನ್ನೂ ಬೆಳೆಸುವಲ್ಲಿ ಹಾಗೂ ಮಕ್ಕಳ ಅನುಭವಲೋಕವನ್ನು ವಿಸ್ತಾರಗೊಳಿಸುವಲ್ಲಿ ಅವು ದುಡಿದಿವೆ. ಗಣೇಶ.ಪಿ.ನಾಡೋರ ಅವರು ಪ್ರಾಣಿಗಳನ್ನು ಪ್ರಧಾನವಾಗಿಟ್ಟುಕೊಂಡು ಬರೆದ, ಇತ್ತೀಚೆಗೆ ತುಂಬಾ ಒಳನೋಟಗಳನ್ನು ಹೊಂದಿರುವ ಕಥಾಸಾಹಿತ್ಯ ನಿರ್ಮಾಣ ಮಾಡಿದವರಲ್ಲಿ ಪ್ರಮುಖರು. 'ಒಮ್ಮೆ ಊರಿಗೆ ಬಂದ ಪುಗ್ಗಿಯನ್ನು ಮಾರುವವನ ಬಳಿ ಮಿಕ್ಕಿ ಮೌಸ್, ಟಿ.ವಿ, ಹೃದಯ, ಬಂದೂಕು ಮುಂತಾದ ಪುಗ್ಗಿಗಳಿದ್ಯಾಗೂ ಎಲ್ಲರೂ ಕಂಪ್ಯೂಟರ್ ಹಿಂದೆ ಬೀಳುವುದು; ಹೃದಯದ ಪುಗ್ಗಿಯನ್ನು ಯಾರೂ ಕೊಳ್ಳದಿರುವುದು ಮಾನವತ್ವ ಮರೆತ ಸಮಾಜಕ್ಕೆ ಉದಾಹರಣೆಯಾಗಿದೆ. ಕೂಲಿ ಕಾರ್ಮಿಕ ದೇವಯ್ಯನಿಂದ ಹಿಡಿದು ಸೇನೆ ಅಧಿಕಾರಿ ಕೃಷ್ಣಪ್ಪನವರೆಗೆ ಎಲ್ಲರೂ ಮಕ್ಕಳಿಗೆ

ಕಂಪ್ಯೂಟರ್ ಪುಗ್ಗಿಯನ್ನು ಕೊಡಿಸುವುದು ಸಾಫ್ಟ್‌ವೇರ್ ಸಿಸ್ಟಮ್ ಹಿಂದೆ ಹೊರಟ ಪೋಷಕರ ಹಲುಬುತನ್ನು ಸೂಚಿಸುತ್ತದೆ. ದೇಶಕ್ಕೆ ಸಲ್ಲುವ ಪ್ರಜೆಗಳನ್ನು ತಯಾರು ಮಾಡಬೇಕಾದ ಶಿಕ್ಷಣ, ವಿದೇಶಕ್ಕೆ ಹಾರುವ ಯಂತ್ರಗಳನ್ನು ನಿರ್ಮಾಣ ಮಾಡಿರುವುದರ ವಿರುದ್ಧದ ಆಕ್ರೋಶವನ್ನು ಮಾಯದ ಪುಗ್ಗಿ ಸೌಮ್ಯವಾಗಿ ಹೊರಹಾಕುತ್ತದೆ. ಜಾಗತೀಕರಣದ ಹೈಲು ಹತ್ತಿಸಿಕೊಂಡವರಿಗೆ ಚುಚ್ಚುಮದ್ದು ಕೊಡದೆ ಹುಚ್ಚು ವಾಸಿಯಾಗದು ಎನ್ನುವ ಪ್ರಜ್ಞೆಯೊಂದಿಗೆ ಬಲೂನುಗಳ ಗಾಳಿ ತೆಗೆದು ಭೂಮಿಗೆ ಬಿಡಲಾಗುತ್ತದೆ. ಮಕ್ಕಳ ಸಹಿತದ ಬಲೂನುಗಳು ಭೂಮಿಗೆ ಬೀಳುವಲ್ಲಿಯೂ ವಾಸ್ತವ ಮತ್ತು ಫ್ಯಾಂಟಸಿ ಪಾಲುದಾರಿಕೆ ಪಡೆದುಕೊಂಡಿದೆ. ಒಟ್ಟು ಕಥೆಯ ಉದ್ದಕ್ಕೂ ವಾಸ್ತವ ಸಂಗತಿಯೆನ್ನೆಲ್ಲಾ ಕಾಲ್ಪನಿಕವೆನ್ನುವಂತೆ ಹೇಳಹೊರಟು ಮತ್ತೆ ಮತ್ತೆ ವಾಸ್ತವದ ತೆಕ್ಕೆಗೆ ಪದೇ ಪದೇ ಜಾರಿ ಇದೊಂದು ಅರೆ ಫ್ಯಾಂಟಸಿಯಾಗಿ ಕಥೆಯ ನಿಟ್ಟಿನಲ್ಲಿ ಗೆದ್ದಿದೆ.

೩. ಫ್ಯಾಂಟಸಿ ಮತ್ತು ವಾಸ್ತವ ಸಂಗತಿಗಳನ್ನು ಕೊಲ್ಯಾಜ್ ಮಾಡಿ ಯಶಸ್ಸು ಕಾಣುವುದನ್ನು ರೂಢಿಸಿಕೊಳ್ಳಬೇಕಿದೆ. 'ಮಕ್ಕಳನ್ನು ರಂಜಿಸಲು ಪಂಜೆಯವರು ಕಥೆಗಳನ್ನು ಹೆಣೆದಿದ್ದಾರೆ' ಎನ್ನುವ ಸಂಶೋಧಕರ ಹೇಳಿಕೆ ಅಷ್ಟು ಸಂಮಂಜಸವಲ್ಲ. ಪಂಜೆ ಮಂಗೇಶರಾಯ ಅವರು ತಮ್ಮ 'ಗುಡು ಗುಡು ಗುಮ್ಮಟ ದೇವರು' ಕಥೆಯಲ್ಲಿ ಬರೀ ರಂಜನೆಯಷ್ಟೇ ಅಲ್ಲದೇ ಮಕ್ಕಳ ಮುಗ್ಧತೆಯನ್ನು 'ಇವರ ಕಥಾ ಬರವಣಿಗೆ ಪ್ರಾಥಮಿಕ ಅದರಲ್ಲೂ ಪೂರ್ವ ಪ್ರಾಥಮಿಕ ಹಂತಕ್ಕೆ ನಿಂತಿತ್ತು. ಎಲ್ಲಾ ವಯೋಮಾನದವರೆಗೂ ಚಾಚಿಕೊಳ್ಳಲಿಲ್ಲ'. ಎನ್ನುವ ವಿಮರ್ಶಕರ ಮಾತು ಅಸಮಂಜಸ ಹೇಳಿಕೆಯೆನಿಸುತ್ತದೆ. ಉಗ್ರಾಣ ಮಂಗೇಶರಾಯರ ಕಂಬಳಿಯ ನಿರೂಪಣೆ ಅವಾಸ್ತವ ಜಗತ್ತನ್ನು ಅನಾವರಣ ಮಾಡುವ ಬಗೆ ಮತ್ತು ಹಳ್ಳಿಗಾಡಿನ ಮುಗ್ಧ ಬಾಲಕನೊಬ್ಬ ಕಲ್ಪನೆಯನ್ನು, ತನ್ನ ಮಿತಿಯಲ್ಲಿಯೇ, ತಾನು ಉಪಯೋಗಿಸುವ, ತನ್ನೊಂದಿಗೆ ಅವಿನಾಭಾವತೆಯನ್ನು ಹೊಂದಿರುವ ಕಂಬಳಿಯ ಕುರಿತು ಮಾಡಿಕೊಳ್ಳುವುದು; ಮಕ್ಕಳು ಕಲ್ಪನೆಗಳು ಬದುಕಿನ ಒಡನಾಡಿಗಳನ್ನೇ ಪದೇ ಪದೇ ನೆನಪಿಸಿಕೊಳ್ಳುವ ಮೂಲಕ ತಮ್ಮದೇ ಅನುಭವದ ಜಗತ್ತನ್ನು ಅನಾವರಣ ಮಾಡಿಕೊಳ್ಳುತ್ತವೆ ಎನ್ನುವುದನ್ನು ಇಲ್ಲಿ ಹೇಳಬಹುದು.

ರಾಜರತ್ನಂ ಅವರ 'ಬ್ಯಾರನ್ ಮಂಕ್ ಹೌಸ್', ನೀಲತ್ತಹಳ್ಳಿ ಕಸ್ತೂರಿಯವರ 'ಟಿನ್ ಸೋಲ್ಜರ್' (ತಗಡಿನ ಸಿಪಾಯಿ) ಹೊಸ ಬಗೆಯ ಚಟುವಟಿಕೆಗೆ ದಾರಿಮಾಡಿದ ಬರಹಗಳು. ಆದರೆ ಈ ಆಮದಿಗೇ ನಿಂತಿತಲ್ಲದೇ ಅವುಗಳ ಪ್ರಭಾವದಿಂದ ಕನ್ನಡದಲ್ಲಿ ಹೊಸ ಬಗೆಯ ಕೃತಿಗಳು ಬರಲೇ ಇಲ್ಲ. ಪಕ್ಷಿ ಪ್ರಪಂಚದಲ್ಲಿ ಕಾಗೆಯನ್ನು ಯಾವಾಗಲೂ ಅನಿಷ್ಟ, ಕನಿಷ್ಠ ಎನ್ನುವ ಪರಂಪರೆಯ ಹಳೆಯ ಮೌಢ್ಯಪೂರಿತ ಅಂಶಗಳು ಪ್ರಜ್ಞಾಪೂರ್ವಕವಾಗಿಯಲ್ಲದಿದ್ದರೂ ಮಕ್ಕಳ ಮನೋಲೋಕಕ್ಕೆ ನಿಷಿದ್ಧ. ಮೇವುಂಡಿ ಮಲ್ಲಾರಿಯವರ 'ತಿರುವು ಮುರುವು' ಕಥೆಯ ಮುಗ್ಧತೆಯ ಸ್ಥಗಿತತೆ ಅತ್ಯಂತ ಆರೋಗ್ಯಕರವಾದುದು. ಗಣೇಶ ನಾಡೋರರ ಕಥೆಗಳು ಹೊಂದಿರುವ ಒಳನೋಟಗಳ್ಯಾವುವು ಎಂಬುದನ್ನು ಎಲ್ಲಿಯೂ ವಿವರಿಸಿಲ್ಲ. ಅವರ 'ಮಾಯದ ಪುಗ್ಗಿ' ಕಥೆ

ಬಹುಶಃ ಅವರ ವರ್ತಮಾನದ ನೋಟಕ್ಕೆ ಸಂಬಂಧಿಸಿದ ಒಳನೋಟಗಳು ಇದೊಂದೇ ಕಥೆಯ ಮೂಲಕವೇ ಅರಿವಾಗಿಬಿಡುವಷ್ಟು ಆಳ ಈ ಸಂಕಲನಕ್ಕಿದೆ. ಅದರಲ್ಲೂ ವಾಸ್ತವ ಸಂಗತಿಯೊಂದನ್ನು ಹೇಳುವ ಪ್ರಕ್ರಿಯೆಯಲ್ಲಿ ಫ್ಯಾಂಟಸಿಯನ್ನು ಅಭಿವ್ಯಕ್ತಿಸುವ ಪ್ರಕಾರವೊಂದಕ್ಕೆ ಉದಾಹರಣೆಯಾಗಿದೆ.

೨.೨.೪. 'ಭಾರತೀಯ ಮಕ್ಕಳ ಸಾಹಿತ್ಯ ಸಮೀಕ್ಷೆ' – ನಿರುಪಮಾ

೧. ಕರ್ನಾಟಕ ಸಾಹಿತ್ಯ ಅಕಾಡೆಮಿಗಾಗಿ ನಿರುಪಮಾ ಅವರು ರಚಿಸಿಕೊಟ್ಟಿರುವ ಈ ಕೃತಿಯಲ್ಲಿ ಕನ್ನಡವೂ ಸೇರಿದಂತೆ ಹದಿನೆಂಟು ಭಾಷೆಗಳ ಅವಲೋಕನ ಈ ಕೃತಿಯಲ್ಲಾಗಿದೆ. ಕನ್ನಡದ ಮಕ್ಕಳ ಸಾಹಿತ್ಯ ಕುರಿತು ಐವತ್ತು ಪುಟಗಳಲ್ಲಿ ಹಬ್ಬಿದ ಅಧ್ಯಯನದಲ್ಲಿ ಇಡೀ ಮಕ್ಕಳ ಸಾಹಿತ್ಯದ ಚರಿತ್ರೆಯ ಪರಿಚಯ ಮಾಡಿಕೊಟ್ಟಿದ್ದಾರೆ. ದೇಶದ ಬಹುತೇಕ ಭಾಷೆಗಳ ಮಕ್ಕಳ ಸಾಹಿತ್ಯ ಚಟುವಟಿಕೆಗಳ ಕುರಿತು ಒಂದೆಡೆ ದೊರಕುವಂತೆ ಮಾಡಿದ್ದು ಕೃತಿಯ ಹೆಗ್ಗಳಿಕೆಗಳಲ್ಲಿ ಒಂದು.

೨. ಭಾರತೀಯ ಬಾಲ ಸಾಹಿತ್ಯದ ಬೆಳವಣಿಗೆಗಳನ್ನು ಕಟ್ಟಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಿದ್ದಾರೆ. ಕನ್ನಡ ಮಕ್ಕಳ ಸಾಹಿತ್ಯ ಪರಂಪರೆಯನ್ನು ಐವತ್ತು ಪುಟಗಳಷ್ಟು ದೀರ್ಘವಾದ ಲೇಖನ ಬರೆದಿದ್ದಾರೆ. ಬಹುತೇಕ ಕಳೆದೆರಡು ಶತಮಾನಗಳಲ್ಲಿ ಕನ್ನಡ ಮಕ್ಕಳ ಸಾಹಿತ್ಯ ಸಾಗಿಬಂದ ಹಾದಿಯನ್ನು ಲೇಖಕರ ಕೃಷಿಯನ್ನು ಕಾಲಾನುಕ್ರಮದಲ್ಲಿ ವಿವರಿಸುವ ಕೆಲಸ ಮಾಡಿದ್ದಾರೆ.

೩. ಇಡೀ ದೇಶದ ಮಕ್ಕಳ ಸಾಹಿತ್ಯವನ್ನು ಪ್ರತಿನಿಧಿಸುವ ಲೇಖನಗಳ ಸಂಕಲನದಲ್ಲಿ ಇರುವ ಹದಿನೆಂಟು ಭಾಷೆಗಳ ಬರವಣಿಗೆ ಪರಿಚಯಾತ್ಮಕವಾಗಿದೆ. ಅನ್ಯ ಭಾಷೆಗಳ ಮಕ್ಕಳ ಸಾಹಿತ್ಯ ಕುರಿತು ಅಧ್ಯಯನ ಮಾಡುವವರಿಗೆ ಮಾಹಿತಿಯನ್ನು ಒದಗಿಸುವ ಕೃತಿಯಾಗಿಯಷ್ಟೇ ಇದು ನಿಂತಿದೆ.

೨.೨.೫. 'ಸಾಹಿತ್ಯದಲ್ಲಿ ಫ್ಯಾಂಟಸಿ' – ಎಂ.ಎಸ್.ಕೆ.ಪ್ರಭು

೧. ಕನ್ನಡದಲ್ಲಿ ಫ್ಯಾಂಟಸಿ ಕುರಿತು ನಡೆದ ಅಧ್ಯಯನಗಳಲ್ಲಿ ಅತ್ಯಂತ ನಿಖರವಾದುದು ಈ ಕೃತಿ. ಪಾಶ್ಚಾತ್ಯ ಪರಿಭಾಷೆಯನ್ನು ಮೊಟ್ಟ ಮೊದಲ ಬಾರಿಗೆ ಕನ್ನಡದ ಕಲ್ಪನೆ, ಅಸಂಗತ, ಅವಾಸ್ತವ ಎನ್ನುವ ಪರಿಕಲ್ಪನೆಗಳೊಂದಿಗೆ ಹೋಲಿಸಿಟ್ಟು ನೋಡಿದ ಮೊದಲಿಗರು ಎಂ.ಎಸ್.ಕೆ.ಪ್ರಭು.

೨. ಮಕ್ಕಳಿಗೆ ಅವಾಸ್ತವ ಜಗತ್ತು ಎಷ್ಟೊಂದು ಅಗತ್ಯ ಎನ್ನುವುದನ್ನು ಒತ್ತಿ ಹೇಳಿದ್ದಾರೆ. ತಮ್ಮ ಕಥೆಗಳನ್ನು ಅದೇ ರೀತಿಯಲ್ಲಿ ಬರೆದರೂ ಕೂಡ. ಈಗಾಗಲೇ ಜನಪದ, ಪರಂಪರೆಯಲ್ಲಿ ಇರುವ ಅವಾಸ್ತವ ಜಗತ್ತನ್ನು ಮಕ್ಕಳ ಬರಹಗಳಲ್ಲಿ ತರಬೇಕೆನ್ನುವ ಆಶಯದೊಂದಿಗೆ ವಾಸ್ತವ ಜಗತ್ತಿನಲ್ಲಿಯೇ ನಡೆಯುವ ಅವಾಸ್ತವ ಸಂಗತಿಯಾಗಿ ಅಭಿವ್ಯಕ್ತಿಸಬೇಕೆಂಬುದು ಎಂ.ಎಸ್.ಕೆ.ಪ್ರಭು ಚಿಂತನೆಯಾಗಿದೆ. ಅವರ 'ಪೋಕರಿ ಪಾಪಣ್ಣನ ಪರಾಕು' ಕಿರು ಕಾದಂಬರಿಯಲ್ಲಿ ಇದನ್ನು

ಸಾಬೀತುಪಡಿಸಿದ್ದಾರೆ. 'ವ್ಯಾವಹಾರಿಕ ಜಗತ್ತಿನ ನಿಯಮಗಳು, ಕಟ್ಟಳೆಗಳು, ನಂಬಿಕೆಗಳು, ವಿಧಿ ನಿಷೇಧಗಳು, ಲೋಕಾಚಾರಗಳು ವಾಸ್ತವವಾದೀ ಕಥೆಗಳ ನೆಲೆಯಾಗಿರುತ್ತವೆ; ಫ್ಯಾಂಟಸಿ ಕಥೆಗಳಲ್ಲಿ ಈ ಎಲ್ಲ ಗುಣಗಳೂ ತದ್ವಿರುದ್ಧವಾಗಿರುತ್ತವೆ.'[೧೩] ಈ ಹೇಳಿಕೆಯು ಫ್ಯಾಂಟಸಿಯ ಲಕ್ಷಣವನ್ನು ಹೇಳುತ್ತದೆ. ಫ್ಯಾಂಟಸಿ ಕಥೆಗಳ ಬಗೆಗಳನ್ನು ಗುರುತಿಸುವಾಗ, 'ಯಕ್ಷಿಣಿ ಕತೆಗಳು, ಪತ್ತೇದಾರಿ ಕತೆಗಳು, ವೈಜ್ಞಾನಿಕ ಕತೆಗಳು, ಧಾರ್ಮಿಕ–ಪೌರಾಣಿಕ ರೂಪಕ ಕತೆಗಳು, ಮನೋವೈಜ್ಞಾನಿಕ ಕಥೆಗಳು ಇವೆಲ್ಲಾ ಫ್ಯಾಂಟಸಿ ಸಾಹಿತ್ಯವೇ.'[೧೪] ಎಂದು ಗುರುತಿಸುತ್ತಾ ಪರಂಪರೆಯಲ್ಲಿ ಈ ಬಗೆಯ ಕಥೆಗಳನ್ನು ಫ್ಯಾಂಟಸಿ ನೆಲೆಯಲ್ಲಿ ಚರ್ಚಿಸದೇ ಇರುವುದರಿಂದ ಈ ಚಿಂತನೆ ಕನ್ನಡಕ್ಕೆ ಹೊಸತೆನಿಸುತ್ತದೆ.

೩. ಲೇಖನದುದ್ದಕ್ಕೂ ಫ್ಯಾಂಟಸಿಯನ್ನು ಅರ್ಥೈಸುವುದರಲ್ಲಿ ಪ್ರಭು ಅವರು ಸಮಯ ವ್ಯಯಿಸಿದ್ದಾರೆ. ಫ್ಯಾಂಟಸಿಗೆ ಅವರು ನೀಡಿರುವ ಪರ್ಯಾಯಗಳು ಒಪ್ಪತಕ್ಕವುಗಳಲ್ಲ. ಅಸಂಗತ, ಅವಾಸ್ತವವೆಲ್ಲವೂ ಫ್ಯಾಂಟಸಿಯೆಂದಿರುವುದೂ ಪ್ರಶ್ನಾರ್ಹವಾಗಿವೆ. ಪ್ರಭು ಅವರು ಹೆಚ್ಚು ಪಾಶ್ಚಾತ್ಯ ಕೃತಿಗಳ ಮೂಲಕ ಫ್ಯಾಂಟಸಿ ಪರಿಭಾಷೆಯನ್ನು ಅರ್ಥೈಸಲು ಪ್ರಯತ್ನಿಸಿದ್ದಾರೆ. ಭಾರತೀಯ ಪರಂಪರೆಯ ಪುರಾಣ, ಜನಪದ ಕಥೆಗಳ ಮೂಲಕವೂ ವಿವರಿಸುವ ಸಾಧ್ಯತೆ ಇತ್ತು. ಪ್ರಸ್ತುತ ಅಧ್ಯಯನದಲ್ಲಿ ಈ ಬಗೆಯಲ್ಲೂ ಫ್ಯಾಂಟಸಿಯನ್ನು ವಿಶ್ಲೇಷಣೆ ಮಾಡಲಾಗುತ್ತದೆ.

೨.೩. ಪ್ರಕಟಿತ ಲೇಖನಗಳ ಸಮೀಕ್ಷೆ

೨.೩.೧. ಮಕ್ಕಳ ಸಾಹಿತ್ಯಕ್ಕೆ ಆಧುನಿಕ ಮೌಲ್ಯಗಳು' – ಕುವೆಂಪು

ಕನ್ನಡದ ಪ್ರಸಿದ್ಧ ಲೇಖಕರಾದ ಕುವೆಂಪುರವರು ಈ ಲೇಖನದಲ್ಲಿ ಫ್ಯಾಂಟಸಿಯ ಕುರಿತು ಮಾತನಾಡದಿದ್ದರೂ ಮಕ್ಕಳ ಸಾಹಿತ್ಯದ ರಚನೆಗೆ ಅಗತ್ಯವಿರುವ ಮೌಲ್ಯಗಳ ಚರ್ಚಿಸಿರುವುದು ಫ್ಯಾಂಟಸಿಯ ಕುರಿತು ಬರೆಯುವಾಗ ಕೂಡ ಗಮನಿಸಬೇಕಾದ ಸಹಜ ಸಂಗತಿಯಾಗಿದೆ.

'ಮಕ್ಕಳ ಸಾಹಿತ್ಯದಲ್ಲಿರುವ ಮೂರು ವಿಧಗಳಾದ ಶೈಶವ ಸಾಹಿತ್ಯ, ಬಾಲ ಸಾಹಿತ್ಯ, ಕೌಮಾರ ಸಾಹಿತ್ಯ ಒಂದೇ ರೀತಿಯಲ್ಲ, ಒಂದೇ ವರ್ಗವಲ್ಲ. ಶೈಶವದಲ್ಲಿ ವೈಜ್ಞಾನಿಕ, ವೈಚಾರಿಕ ಅವಶ್ಯಕವಾಗಿ ಬೇಕಂತೇನಿಲ್ಲ. ಆದರೆ ಬಾಲ ಸಾಹಿತ್ಯ, ಕೌಮಾರ ಸಾಹಿತ್ಯದಲ್ಲಿ ಮಕ್ಕಳಿಗಾಗಿ ಕೊಡಬೇಕಾದ ಸಂಗತಿಗಳು, ಬೆಳೆಸಬೇಕಾದ ದೃಷ್ಟಿ ಚೆನ್ನಾಗಿ ಯೋಚಿಸಬೇಕು. ಹೊಸ ವಿಜ್ಞಾನ ವಿಚಾರಗಳನ್ನು ಸುಲಭದಲ್ಲಿ ನೀಡಬೇಕು. ಈ ವರ್ಗದಲ್ಲಿ ಬಾಲ ಸಾಹಿತ್ಯ, ಭಾವ ಸಾಹಿತ್ಯ ಇದೆ, ಬುದ್ಧಿ ಸಾಹಿತ್ಯವೂ ಇದೆ. ಬುದ್ಧಿ ಸಾಹಿತ್ಯದಲ್ಲಿ ಪೂರ್ತಿ ವಿಜ್ಞಾನ ವಿಚಾರ ಅಷ್ಟೇ ಅಲ್ಲ ವೈಚಾರಿಕ ಸಾಹಿತ್ಯವೂ ಇದೆ. 'ಕತೆ ಕೇಳುವ ಕಾಲದಲ್ಲಿ ಸ್ವಾರಸ್ಯ ಆಸ್ವಾದನೆಗೆ ವಶವಾದ ಮಗುವಿನ ಮನಸ್ಸು ತನ್ನ ವಿಚಾರಶಕ್ತಿಗೆ ತತ್ಕಾಲ ವಿರಾಮ ಕೊಡುವುದರಿಂದ ಅದರ ಲೌಕಿಕ ಜೀವನದಲ್ಲಿ ಯಾವ ತೊಂದರೆಗೂ ಒಳಗಾಗುವುದಿಲ್ಲ (ಮಕ್ಕಳಿಗೇಕೆ ವೈಚಾರಿಕತೆ)'.[೧೫] ಕುವೆಂಪು ಅವರ ಈ ಹೇಳಿಕೆ ಎಡ್ವರ್ಡ್ ಬುಲ್ಲೂ ಅವರ 'ಮಾನಸಿಕ ದೂರ' ಸಿದ್ಧಾಂತದ ತಾತ್ವಿಕ ಹಿನ್ನೆಲೆಯಲ್ಲಿ ಮಕ್ಕಳ ಸಾಹಿತ್ಯ ಕೃತಿಗಳಲ್ಲಿನ ಫ್ಯಾಂಟಸಿಯನ್ನು ವಿಶ್ಲೇಷಣೆ ಮಾಡಿರಬಹುದೆಂಬ ಊಹೆ ಬರುತ್ತದೆ.

ಲೇಖಕರಾದವರು ಮೂರು ವಿಧದ ಅವಸ್ಥೆಗಳನ್ನು ಪ್ರಜ್ಞೆಯಲ್ಲಿಟ್ಟುಕೊಂಡು ಸಾಹಿತ್ಯ ರಚಿಸಬೇಕು. ಶೈಶವದ ಭಾವ ಸಾಹಿತ್ಯ ರಚಿಸುವಾಗ ವೈಚಾರಿಕ ಸಂಗತಿಗಳು ತುಂಬಾ ನೇರವಾಗಿರುವ ಅವಶ್ಯಕತೆ ಇಲ್ಲ ಎನ್ನುವ ಮೂಲಕ ವೈಚಾರಿಕ ಮೌಲ್ಯಗಳನ್ನು ಶೈಶವ ಸಾಹಿತ್ಯದಲ್ಲೂ ಒಳಗೊಳ್ಳಬಹುದು ಎನ್ನುವ ಸೂಚನೆಯನ್ನು ನೀಡಿದ್ದಾರೆ. 'ಮಗುವನ್ನು ನೋಡುವ ರೀತಿಯಲ್ಲಿ ಪೂರ್ವ ಮತ್ತು ಪಶ್ಚಿಮ ದೇಶಗಳವರಲ್ಲಿ ವ್ಯತ್ಯಾಸವಿದೆ.' ಈ ಮಾತಿಗೂ ನಾವೂ ಸಮ್ಮತಿ ಸೂಚಿಸಬಹುದು. ನಮ್ಮಲ್ಲಿಗಿಂತ ಅಲ್ಲಿ ಬಹು ಬೇಗ ಮಕ್ಕಳಿಗೆ ಪ್ರಪಂಚದ ಅನುಭವಗಳನ್ನು ಕಲಿಸಲಾಗುತ್ತದೆ. ಅವರ ಜೀವನ ವಿಧಾನ ಹಾಗಿದೆ.

ಕನ್ನಡದ ಮಕ್ಕಳ ಸಾಹಿತ್ಯದ ಕುರಿತು ಇದುವರೆಗೆ ನಡೆದ ಸಂಶೋಧನೆಗಳನ್ನು ಆಧರಿಸಿ ಇಲ್ಲಿನ ಮುಖ್ಯ ಚಹರೆಗಳನ್ನು ಉಲ್ಲೇಖಿಸುವ ಅಗತ್ಯವಿದೆ. ಒಟ್ಟಾರೆ ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಕುರಿತು ಬಂದಿರುವ ವಿಶ್ಲೇಷಣೆಗಳ ಚಲನೆಯ ಹಾದಿಯನ್ನೂ ತಿಳಿಯುವ ಪ್ರಯತ್ನದಲ್ಲಿ ಈ ಕೆಳಗಿನಂತೆ ಕೆಲವು ಪ್ರಮುಖ ಕಣ್ನೋಟಗಳನ್ನು ಗುರುತಿಸಲಾಗಿದೆ.

ಕನ್ನಡ ಮಕ್ಕಳ ಸಾಹಿತ್ಯ ಕುರಿತು ಬಂದಿರುವ ವಿಮರ್ಶೆಯ ಪ್ರಮಾಣ ಅತ್ಯಲ್ಪವಾಗಿದೆ. ಕಾವ್ಯ, ಕಾದಂಬರಿಯಂಥ ಪ್ರಕಾರಗಳಿಗೆ ಹೋಲಿಸಿದರೆ ಮಕ್ಕಳ ಸಾಹಿತ್ಯಕ್ಕೆ ಪ್ರತ್ಯೇಕ ಸ್ಥಾನಮಾನ ನಿರ್ಮಾಣ ಆಗಿಲ್ಲ. ಮಕ್ಕಳ ಸಾಹಿತ್ಯ ವಿಮರ್ಶೆಗೆ ನಿರ್ದಿಷ್ಟ ಪರಿಭಾಷೆ ಇಲ್ಲ. ಕನ್ನಡ ಸಾಹಿತ್ಯದ ವಚನ, ಕಥೆ, ಕಾದಂಬರಿ ಪ್ರಕಾರಗಳ ಕುರಿತು ಬಂದಿರುವ ವಿಮರ್ಶೆಗಳಷ್ಟು ಮಕ್ಕಳ ಸಾಹಿತ್ಯ ಕುರಿತು ಬಂದಿಲ್ಲ. ಈ ಎಲ್ಲಾ ಮಾತುಗಳನ್ನು ಕನ್ನಡ ಮಕ್ಕಳ ಸಾಹಿತ್ಯದ ದೃಷ್ಟಿಕೋನದಿಂದ ಅವಲೋಕಿಸುವುದಾದರೆ; ಇದುವರೆಗೆ ಕನ್ನಡದಲ್ಲಿ ಪ್ರಕಟಗೊಂಡಿರುವ ಮಕ್ಕಳ ಸಾಹಿತ್ಯ ಗುಣಾತ್ಮಕವಾಗಿ ಬಂದಿಲ್ಲವೆನ್ನುವುದು ಇದಕ್ಕೆ ಒಂದು ಕಾರಣವಿರಬಹುದು. ಮತ್ತೊಂದು ಕನ್ನಡದ ಪ್ರತಿಭಾವಂತ ಲೇಖಕರು ಮಕ್ಕಳ ಸಾಹಿತ್ಯ ರಚನೆ ಮಾಡಲು ಹಿಂಜರಿಯಲಿಲ್ಲ. ಆದರೆ, ಪ್ರತಿಭಾವಂತ ಸಂಶೋಧಕರು, ವಿಮರ್ಶಕರು ಈ ಕಡೆ ಲಕ್ಷ್ಯವಹಿಸದೆ ಇದೊಂದು ದ್ವಿತೀಯ ದರ್ಜೆಯ ಪ್ರಕಾರವೆನ್ನುವಂತೆ ಅಸಡ್ಡೆ ತೋರಿರುವುದೂ ಕಾರಣವಾಗಿದೆ. ಮತ್ತು ಮಕ್ಕಳ ಸಾಹಿತ್ಯವನ್ನು ಕನ್ನಡದ ಬಹುಮುಖ್ಯ ಭಾಗವೆಂದು ಭಾವಿಸದೆ ನಿರ್ಲಕ್ಷ್ಯ ತೋರಿರುವುದೂ ಕಾರಣವಾಗಿದೆ. ಒಟ್ಟಾರೆ ಕನ್ನಡದ ಸಂಶೋಧನಾ ಕ್ಷೇತ್ರ ಇದೊಂದು ಸಂಶೋಧನಾ ಕ್ಷೇತ್ರವೆಂದು ಪರಿಗಣಿಸಿಲ್ಲ. ಹಾಗಾಗಿ ಮಕ್ಕಳ ಸಾಹಿತ್ಯ ರಚನೆ ಮಾಡುವವರೇ ಸಂಶೋಧನೆ ಮಾಡುತ್ತಿದ್ದಾರೆ. ಈ ಕಾರಣದಿಂದ ಮಕ್ಕಳ ಸಾಹಿತ್ಯ ಕುರಿತು ಸತ್ವಯುತವಾದ ಸಂಶೋಧನೆ ಆಗಿಲ್ಲ. ಹಾಗಾಗಿ ಮಕ್ಕಳ ಸಾಹಿತ್ಯ ರಚನಾಕಾರರಿಗೆ ನೀಡಬೇಕಾದ ಹಿಮ್ಮಾಹಿತಿಯನ್ನೂ ಕೊಡಲು ಸಾಧ್ಯವಾಗಿಲ್ಲ. ಇದು ಕನ್ನಡದ ಒಟ್ಟಾರೆ ಮಕ್ಕಳ ಸಾಹಿತ್ಯದ ವಿಮರ್ಶೆ ಅತ್ಯಲ್ಪ ಮತ್ತು ದುರ್ಬಲವಾದುದು ಎಂದು ಸಾಬೀತು ಪಡಿಸುತ್ತದೆ.

ಕನ್ನಡದಲ್ಲಿ ಮಕ್ಕಳ ಸಾಹಿತ್ಯಕ್ಕೆ ಈ ಮೇಲೆ ವಿವರಿಸಿದ ಕಾರಣಗಳು ತನ್ನ, ತನ್ನವರ ಸಾಹಿತ್ಯದ ರಕ್ಷಣೆಗೆ, ಸಹಾನುಭೂತಿಯಿಂದ ಲೇಖಕನೇ ವಿಮರ್ಶಕನಾಗುವ ಅನಿವಾರ್ಯತೆ

ತಂದೊಡ್ಡಿದವು. ಈ ಸಂದರ್ಭದಲ್ಲಿ ಬಂದ ವಿಮರ್ಶೆಗಳು ಮಕ್ಕಳ ಸಾಹಿತ್ಯವನ್ನು ಕಾಪಾಡುವ ಭರದಲ್ಲಿ ಟೀಕಾತ್ಮಕವಾದ ವಿವರಣೆಗಳ ಹಂತವನ್ನು ಮುಟ್ಟಲಿಲ್ಲ. ಹಾಗಾಗಿ ವಿವರಣೆ, ಸಾರಾಂಶ, ಪರಿಚಯಾತ್ಮಕವಾದ ಬರಹಗಳಿಗೇ ವಿಮರ್ಶೆ ನಿಂತುಬಿಟ್ಟಿತು. ಆದರೆ ಕನ್ನಡದಲ್ಲಿ ಆನಂದ ಪಾಟೀಲ, ಟಿ.ಎಸ್. ನಾಗರಾಜ ಶೆಟ್ಟಿ ಮುಂತಾದ ಕೆಲವು ಪ್ರಮುಖ ಲೇಖಕರು ಮಕ್ಕಳ ಸಾಹಿತ್ಯ ಕುರಿತು ಮಾಡಿರುವ ವಿಶ್ಲೇಷಣೆ, ವಿಮರ್ಶೆಗಳು ಮಕ್ಕಳ ಸಾಹಿತ್ಯದ ವಿಮರ್ಶೆಗೆ ಹೊಸ ಪರಿಭಾಷೆಯನ್ನು ಬರೆಯುವಷ್ಟಲ್ಲದಿದ್ದರೂ ಅದರದೇ ದೃಷ್ಟಿಕೋನದಿಂದ ನೋಡಬೇಕಾದ ಕ್ರಮವೊಂದನ್ನು ತಿಳಿಸಿಕೊಡುತ್ತವೆ. ಕನ್ನಡದ ಪ್ರತಿಭಾವಂತ ವಿಮರ್ಶಕರೂ ಮಕ್ಕಳ ಸಾಹಿತ್ಯದ ವಿಮರ್ಶೆಗೆ ತೊಡಗಬೇಕೆಂಬುದನ್ನು ಈ ಲೇಖಕರ ಕೃತಿಗಳು ಒತ್ತಾಯಿಸುತ್ತವೆ. ಹಾಗಾಗಿ ಲೇಖಕರೇ ವಿಮರ್ಶೆ ಮಾಡಿದಾಗ ಮಕ್ಕಳ ಸಾಹಿತ್ಯ ಕೃತಿಯೊಂದಕ್ಕೆ ಇರಬೇಕಾದ ಬಹುಮುಖ ಸಾಧ್ಯತೆಗಳನ್ನು ತೆರೆದಿಡುತ್ತದೆ.

ಮಕ್ಕಳ ಸಾಹಿತ್ಯದ ಮೂಲಧಾರೆಗಳು ಹುಟ್ಟಿಕೊಂಡ ಜನಪದ ಸಾಹಿತ್ಯದಲ್ಲಿ ಅದರ ನಿರ್ಮಾತೃಗಳ ಪಂಕ್ತಿಯಲ್ಲಿ ಮಹಿಳೆಗೆ ಪ್ರಥಮ ಪ್ರಾಶಸ್ತ್ಯದ ಸ್ಥಾನವಿದೆ. ಕನ್ನಡದ ಜನಪದ ಕಥೆ, ಕಾವ್ಯಗಳು ಈ ಹೇಳಿಕೆಯನ್ನು ಸಾಕ್ಷೀಕರಿಸುತ್ತವೆ. ಆದರೆ ಆಧುನಿಕ ಮಕ್ಕಳ ಸಾಹಿತ್ಯದ ಸೃಜನಶೀಲ ಪ್ರಕ್ರಿಯೆಯಲ್ಲಾಗಲೀ, ವಿಮರ್ಶೆಯ ನೆಲದಲ್ಲಾಗಲೀ ಮಹಿಳೆ ಸ್ಥಾನ ಪಡೆಯದಿರುವುದು ಕಂಡುಬರುತ್ತದೆ. ಇದು ಮತ್ತೊಂದು ಹೊಸ ಸಂಶೋಧನೆ ದಾರಿ ಮಾಡಿಕೊಡುವಷ್ಟು ವಿಸ್ತೃತವಲ್ಲವೇನೋ; ಆದರೆ ಮಕ್ಕಳ ಬೆಳವಣಿಗೆಯ ಪ್ರತಿ ಹಂತದಲ್ಲೂ ಪಾತ್ರವಹಿಸುವ ಮಹಿಳೆ ಸಾಹಿತ್ಯದ ಸೃಜನಶೀಲ ಕ್ರಿಯೆಯಲ್ಲಿ ಮಾತ್ರ ಗೈರಾಗಿರುವುದು ಈ ಪ್ರಕಾರದ ವೈರುಧ್ಯವಾಗಿದೆ.

ಒಟ್ಟಾರೆ, ಕನ್ನಡದಲ್ಲಿ ಮಕ್ಕಳ ಸಾಹಿತ್ಯವು ಆದ್ಯತೆಯ ಸಂಶೋಧನ ಕ್ಷೇತ್ರವಾಗಿರದೆ, ಕೆಲವೇ ಸಂಶೋಧಕರ ವೈಯಕ್ತಿಕ ಆಸಕ್ತಿಯ ಕ್ಷೇತ್ರ ಆಗಿರುವುದರಿಂದ ಮಕ್ಕಳ ಸಾಹಿತ್ಯದ ವಿಮರ್ಶಾ ಫಸಲು ಅತ್ಯಲ್ಪವಾಗಿದೆ.

ಕನ್ನಡ ಮಕ್ಕಳ ಕಥನ ಸಾಹಿತ್ಯದಲ್ಲಿ ಫ್ಯಾಂಟಸಿಯನ್ನು ಕುರಿತು ನೇರವಾಗಿ ಅಲ್ಲದಿದ್ದರೂ ಪ್ರಾಸಂಗಿಕವಾಗಿ ಆದರೂ ಈ ಮೇಲಿನ ಕೃತಿಗಳು ಚರ್ಚಿಸಲು ಪ್ರಯತ್ನಿಸಿವೆ. ಆದರೆ ಪ್ರಸ್ತುತ ಮಹಾ ಪ್ರಬಂಧವು ಕನ್ನಡದ ಮಕ್ಕಳ ಕಥನ ಸಾಹಿತ್ಯದಲ್ಲಿ ಫ್ಯಾಂಟಸಿಯ ಸ್ವರೂಪಗಳನ್ನು ವಿಶ್ಲೇಷಣೆ ಮಾಡಲು ಹೊರಡುತ್ತದೆ. ಈ ಕುರಿತು ಯಾರೂ ಸಂಶೋಧನೆ ಮಾಡದಿರುವುದು ಪ್ರಸ್ತುತ ಅಧ್ಯಯನಕ್ಕೆ ಹೆಚ್ಚು ಅಧ್ಯಯನ ಮಾಡಲು ಸಾಧ್ಯತೆ ದೊರಕಿದಂತೆ ಎಂದು ಭಾವಿಸಲಾಗಿದೆ. ಈ ಮೇಲಿನ ಪೂರ್ವ ಅಧ್ಯಯನಗಳ ಸಮೀಕ್ಷೆಯಲ್ಲಿ ಇದುವರೆಗೆ ಎತ್ತಲಾಗಿರುವ ಮಿತಿಗಳನ್ನು ಮೀರುವ ಪ್ರಯತ್ನವನ್ನು ಮಾಡಲಾಗುತ್ತದೆ. ಮತ್ತು ಇಲ್ಲಿಯವರೆಗೆ ನಡೆದ ಚರ್ಚೆಗಳಲ್ಲಿ ಪ್ರಸ್ತುತ ಅಧ್ಯಯನಕ್ಕೆ ಪೂರಕವಾದ ಸಂಗತಿಗಳನ್ನು ಪ್ರಸ್ತುತ ಅಧ್ಯಯನದ ಭಾಗವಾಗಿ ಸೇರಿಸಿಕೊಂಡು ಅಧ್ಯಯನ ಮಾಡಲಾಗುವುದು.

ಕೊನೆ ಟಿಪ್ಪಣಿಗಳು

೧. ಸಿಂಗು ಸೊಲಗಿ, ಮಕ್ಕಳ ರಂಗಭೂಮಿ ಪ್ರದರ್ಶನ ಪ್ರಕ್ರಿಯೆ, ಪು. ೨೦೧

೨. ಅದೇ, ಪು. ೨೦೨

೩. ಮಾಧುಪ್ರಸಾದ್ ಹುಣಸೂರು, ಮಕ್ಕಳ ಸಾಹಿತ್ಯದಲ್ಲಿ ಕಥೆಗಳ ಸ್ವರೂಪ, ಪು. ೧೨೩

೪. ಅದೇ, ೧೨೬

೫. ರಾಜೇಂದ್ರ ಗಡಾದ, ಮಕ್ಕಳ ಸಾಹಿತ್ಯ ಹಾಗೂ ಸಿಸು ಸಂಗಮೇಶ, ಪು. ೨೦೫

೬ ಆನಂದ ಪಾಟೀಲ, ಅಲರು, ಪು. ೧೦೬

೭ ಅದೇ, ಪು. ೯೪

೮. ಅದೇ, ಪು. ೧೧೭

೯. ಆನಂದ ಪಾಟೀಲ, ಮುಗುಳು, ಪು. ೧೪೯

೧೦. ಬಸು ಬೇವಿನಗಿಡದ, ಮಕ್ಕಳ ಸಾಹಿತ್ಯ, ಪು. ೫೦

೧೧. ಅದೇ, ಆನಂದ ಪಾಟೀಲ, ಪು. ೫೫

೧೨. ಅದೇ, ಬಸು ಬೇವಿನಗಿಡದ, ಪು. ೨೨೯

೧೩. ಪ್ರಭು.ಎಂ.ಎಸ್.ಕೆ, ಸಾಹಿತ್ಯದಲ್ಲಿ ಫ್ಯಾಂಟಸಿ, ಪು. ೦೩

೧೪. ಅದೇ, ಪು. ೦೫

೧೫. ಕುವೆಂಪು, ಕುವೆಂಪು ಸಮಗ್ರ ಗದ್ಯ, ಪು. ೭೪೭

ಅಧ್ಯಾಯ : ಮೂರು

ಫ್ಯಾಂಟಸಿಯ ಪರಿಕಲ್ಪನಾತ್ಮಕ ಚರ್ಚೆ

೩.೧. ಫ್ಯಾಂಟಸಿಯ ಪರಿಭಾಷೆ

೩.೨. ಫ್ಯಾಂಟಸಿಯ ವಿಧಗಳು

೩.೨.೧. ಲೋಯರ್ ಫ್ಯಾಂಟಸಿ

೩.೨.೨. ಹೈಯರ್ ಫ್ಯಾಂಟಸಿ

೩.೩. ಒಂದು ಪ್ರತ್ಯೇಕ ಪ್ರಕಾರವಾಗಿ ಫ್ಯಾಂಟಸಿ

೩.೪. ಭಾರತೀಯ ಪರಿಸರದಲ್ಲಿ ಪ್ಯಾಂಟಸಿ

೩.೫. ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಫ್ಯಾಂಟಸಿ ಪರಿಕಲ್ಪನೆ

ಅಧ್ಯಾಯ : ಮೂರು

ಫ್ಯಾಂಟಸಿಯ ಪರಿಕಲ್ಪನಾತ್ಮಕ ಚರ್ಚೆ

ಪ್ರವೇಶ

ವಾಸ್ತವವನ್ನು ವಾಸ್ತವದ ಚಿತ್ರಣದಲ್ಲಿಯೇ ನೀಡಿ ಕತೆಯನ್ನು ಕಲ್ಪಿಸಿಕೊಳ್ಳುವಂತೆ, ಅವಾಸ್ತವದ ಸ್ವರೂಪ ಇಟ್ಟುಕೊಂಡು ಕತೆಗಳನ್ನು ಕಲ್ಪಿಸಿಕೊಳ್ಳುವುದು ಒಟ್ಟು ಮಾನವ ಜನಾಂಗದಲ್ಲಿ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಕಾವ್ಯದಲ್ಲಿ ಕಲ್ಪನೆ ತಾನಾಗಿ ವ್ಯಾಪ್ತವಾದರೆ ಕತೆಯಲ್ಲಿ ಅದು ವಾಸ್ತವದ, ಅತಿವಾಸ್ತವದ ಅವರೆಡೂ ಮಿಳಿತವಾದ ಹಲವು ಬಗೆಗಳನ್ನು ಆಶ್ರಯಿಸುತ್ತದೆ. ಇದು ದೊಡ್ಡವರ ಕಥಾಲೋಕಕ್ಕೆ ಅನ್ವಯಿಸುವ ಹಾಗೆ ಮಕ್ಕಳ ಲೋಕಕ್ಕೂ ಅನ್ವಯಿಸುತ್ತದೆ. ಅವಾಸ್ತವದ ಹಂದರಗಳನ್ನು ಜನಪದ ಸಮುದಾಯ ಯಥೇಚ್ಛವಾಗಿ ಬಳಸಿಕೊಂಡಿದೆ. ಕನ್ನಡದ ಹೊಸಗಾಲದ ಕಥಾಲೋಕ ಇದರಿಂದ ಬಿಡುಗಡೆಗೊಂಡು ವಾಸ್ತವದ ನೆಲೆಯಲ್ಲೇ ಕಲ್ಪಿಸಿಕೊಳ್ಳುವ(ಇದನ್ನು ಕಲ್ಪಿತ ವಾಸ್ತವ ಎಂದು ಹಿರಿಯ ಕಥನ ವಿಮರ್ಶಕರಾದ ಡಾ.ಗಿರಡ್ಡಿಗೋವಿಂದರಾಜ ಅವರು ಕರೆದಿದ್ದಾರೆ.) ಬರವಣಿಗೆ ಕಾಣಿಸಿಕೊಂಡಿದೆ. ಹಾಗಿದ್ದೂ ಅವಾಸ್ತವದ ಹಂದರಗಳನ್ನೂ ಕನ್ನಡದ ಹಲವು ಲೇಖಕರು ಬಳಸಿಕೊಳ್ಳುತ್ತಾ ಪ್ರಯೋಗಗಳನ್ನು ಮುಂದಿಟ್ಟಿದ್ದು ಕಂಡು ಬರುತ್ತದೆ. ಕನ್ನಡದಲ್ಲಿ ಎಂ.ಎಸ್.ಕೆ. ಪ್ರಭು ಮೊದಲಾದವರು ಈ ಬಗೆಯ ಕಥೆಗಳನ್ನು ರಚಿಸಿದರು. ಆದರೆ ಹೆಚ್ಚಿನ ಲೇಖಕರು ಇದನ್ನು ಮುಂದುವರೆಸಲಿಲ್ಲ. ನಾಟಕದಲ್ಲಿಯೂ ಅಸಂಗತ ಕಲ್ಪನೆಗಳನ್ನು ಮುಂದಿಡುವ ಪ್ರಯೋಗಗಳು ಕನ್ನಡದಲ್ಲಿ ನಡೆದಿವೆ. ಚಂದ್ರಶೇಖರ ಪಾಟೀಲರ 'ಟಿಂಗರ ಬುಡ್ಡಣ್ಣ' ಈ ಬಗೆಯ ಪ್ರಯೋಗಗಳಲ್ಲಿ ಒಂದು. ಬಹುಶಃ ಬ್ರೆಕ್ಟ್‌ನ ಪ್ರಭಾವದಿಂದ ಇಂಥವೆಲ್ಲ ನಡೆದಿವೆ. ಫ್ರಾಂಝ್‌ಕಾಫ್ಕಾ ಮುಂತಾದ ಲೇಖಕರು ಎಕ್ಸಿಸ್ಟೆನ್ಸಿಯಾಲಿಟಿ ತಾತ್ವಿಕತೆಯ ಹಿನ್ನೆಲೆಯಲ್ಲಿ ಈ ಬಗೆಯ ಅತಿವಾಸ್ತವ ಹಂದರಗಳನ್ನು ತಂದುಕೊಂಡ ಉದಾಹರಣೆಗಳಿವೆ.

ಭಾರತೀಯ ಪರಿಸರದಲ್ಲಿ ಮಹಾಭಾರತದ, ರಾಮಾಯಣದ ಹಾಗೆಯೇ ಪುರಾಣದ ಹಲವೆಲ್ಲಾ ಕಥಾನಕಗಳನ್ನು ಮತ್ತೆ ಮತ್ತೆ ತಂದುಕೊಳ್ಳುತ್ತಾ ಮರುನಿರೂಪಣೆಗಳು ನಡೆಯುತ್ತಲೇ ಬಂದಿದೆ. ಆಗೆಲ್ಲಾ ಅಲ್ಲಿನ ಅವಾಸ್ತವ ಸಂದರ್ಭಗಳು ಹೊಸಗಾಲದ ರಚನೆಗಳಲ್ಲಿ ಸೇರಿಕೊಂಡ ಬರಹಗಳು ಬಂದಿವೆ. ಹಾಗೆಯೇ ಜನಪದ ಕತೆಗಳನ್ನೇ ಮೂಲ ಆಕರಗಳನ್ನಾಗಿಸಿಕೊಂಡು ತಮ್ಮ

ಅಭಿವ್ಯಕ್ತಿಗೆ ತೊಡಗಿದ ಚಂದ್ರಶೇಖರ ಕಂಬಾರ ಮೊದಲಾದವರು ಅಲ್ಲಿನ ಸಹಜವಾದ ಅತಿವಾಸ್ತವ ಸಂಗತಿಗಳನ್ನು ತಮ್ಮ ಬರಹಗಳಲ್ಲಿ ತಂದಿದ್ದಾರೆ.

ಮಕ್ಕಳ ಲೋಕದಲ್ಲಿ ಅತಿವಾಸ್ತವ ಸ್ವರೂಪಗಳು ಅತ್ಯಂತ ಸಹಜವಾಗಿ ಬಳಕೆಯಾಗಿರುವುದು ಕಂಡು ಬರುತ್ತದೆ. ಅದು ಪುಟಾಣಿಗಳ ಲೋಕದಲ್ಲಿ ಹೆಚ್ಚಾಗಿ ನಡೆಯುವ ಸಂಗತಿಯಾಗಿದೆ. ಮಕ್ಕಳು ಬೆಳೆಯುತ್ತಾ ಈ ಅವಾಸ್ತವದ ಕಲ್ಪನೆಗಳಿಂದ ಬಿಡಿಸಿಕೊಂಡು ವಾಸ್ತವದ ನೇರ ನಿರೂಪಣೆಯ ಗ್ರಹಿಕೆಗಳಿಗೆ ತೆರೆದುಕೊಳ್ಳತೊಡಗುತ್ತಾರೆ. ಕನ್ನಡದ ಸಂದರ್ಭದಲ್ಲಿ ಹೀಗೆ ವಾಸ್ತವಕ್ಕೆ ತೆರೆದುಕೊಂಡ ಮಕ್ಕಳ ಕಥಾಲೋಕ ಅರಳಿರಲಿಲ್ಲ. ಅದು ಈಗ ಕನ್ನಡದಲ್ಲಿ ಪ್ರಾರಂಭವಾಗಿದೆ. ಕನ್ನಡದ ಬಹುಪಾಲು ಲೇಖಕರಿಗೆ ಮಕ್ಕಳು ಎಂದರೆ ಅವರು ಸಣ್ಣವರು ಎಂಬ ಗ್ರಹಿಕೆ ಇದೆ. ನವೋದಯದ ಕಾಲದ ಕೆಲ ಹಿರಿಯ ಲೇಖಕರ ಬರವಣಿಗೆಗಳಿಂದ ಬಿಡುಗಡೆಯನ್ನು ಬಹಳಷ್ಟು ಪ್ರಬುದ್ಧ ಲೇಖಕರೇ ಪಡೆಯುತ್ತಿಲ್ಲ. ಅವಾಸ್ತವದ ಸ್ವರೂಪಗಳನ್ನು ಪುಟ್ಟ ಮಕ್ಕಳ ಸಂದರ್ಭದಲ್ಲಿ ಯಥೇಚ್ಛವಾಗಿ, ಅಪ್ಯಾಯಮಾನವಾಗಿ ಬಳಸಿಕೊಳ್ಳುವುದು ಒಂದು ಬಗೆಯಲ್ಲಿ ಎಲ್ಲರೂ ಒಪ್ಪಿತ ಸಂಗತಿಯಾಗಿದೆ. ಪುಟ್ಟ ಮಕ್ಕಳು ತಮ್ಮನ್ನು ಊಹಾತೀತವಾದ ಕಲ್ಪನಾಲೋಕಕ್ಕೆ ಒಯ್ಯುವ ಫ್ಯಾಂಟಸಿಯನ್ನು ಸಂಭ್ರಮದಿಂದ ಒಪ್ಪಿಕೊಳ್ಳುತ್ತಾರೆ, ಅನುಭವಿಸುತ್ತಾರೆ, ರಂಜನೆಗೆ ತಂದುಕೊಳ್ಳುತ್ತಾರೆ. ಅದನ್ನು ತಮ್ಮದೇ ಲೋಕವಾಗಿ ಪರಿಭಾವಿಸುತ್ತಾರೆ. ಇದು ತೀರಾ ಪುಟ್ಟ ಮಕ್ಕಳಿಂದ ಹಿಡಿದು ಬೆಳೆಯುತ್ತಿರುವ ಮಕ್ಕಳಲ್ಲಿ ವಿಭಿನ್ನ ಮಟ್ಟದಲ್ಲಿ ನೋಡಬಹುದು. ಅಪ್ಯಾಯಮಾನವಾದ ಅವಾಸ್ತವತೆಯು ಮಕ್ಕಳ ಜಗತ್ತಿನಲ್ಲಿ, ಪ್ರಬುದ್ಧರ ಲೋಕದಲ್ಲಿನ ವಾಸ್ತವದ ಕತೆಗಳಿದ್ದ ಹಾಗೇ ಒಪ್ಪಿಗೆಯಾಗಿದೆ.

ಬೆಳೆದ ಮಕ್ಕಳಲ್ಲಿ ಮತ್ತು ಎಳೆಯ ಮಕ್ಕಳಲ್ಲಿ ವಾಸ್ತವವನ್ನು ಗ್ರಹಿಸುವ ಮತ್ತು ಅತಿವಾಸ್ತವವನ್ನು ಊಹಿಸಿಕೊಳ್ಳುವ ಬಗೆಗಳು ಭಿನ್ನವಾಗಿರುತ್ತವೆ. ದೊಡ್ಡವರಿಗಿಂತ ಈ ಬಗೆಯ ಅತಿವಾಸ್ತವದ ಲೋಕ ಮಕ್ಕಳಿಗೆ ಹಲವು ಬಗೆಯಲ್ಲಿ ಕುತೂಹಲ ಉಂಟುಮಾಡುತ್ತದೆ. ಇತ್ತೀಚೆಗೆ ಕಾಣಿಸಿಕೊಂಡ 'ಹ್ಯಾರಿಪಾಟರ್' ಕೃತಿ ಮಕ್ಕಳಲ್ಲಿ ಓದಿನ ಹುಚ್ಚೆಬ್ಬಿಸಿದುದನ್ನು ಇಲ್ಲಿ ಉದಾಹರಿಸಬಹುದು. ಅಲ್ಲಿ ವಾಸ್ತವದೊಡನೆ ಮಾಂತ್ರಿಕತೆಯ ಅತಿವಾಸ್ತವ ಉದ್ದಕ್ಕೂ, ಅತಿ ವಿಜೃಂಭಿಸಿಕೊಂಡು ಪ್ರಕಟವಾಗಿದೆ.

ಹೀಗೆ ಅತಿವಾಸ್ತವದ ಸ್ವರೂಪಗಳನ್ನು ಕಟ್ಟಿಕೊಳ್ಳುತ್ತಾ ಹೊಸಗಾಲದ ಓದಿಗೆ ನೀಡುತ್ತಿರುವ ಸಂಗತಿ ಭಾರತೀಯ ಪರಿಸರದ ಪ್ರಾದೇಶಿಕ ಭಾಷೆಗಳಲ್ಲಿ ಅಪರಿಚಿತವಾಗಿ ಉಳಿದಿದ್ದರೆ; ಇಂಗ್ಲೀಷಿನಲ್ಲಿ ಮತ್ತು ಯುರೋಪಿಯನ್ ಭಾಷೆಗಳಲ್ಲಿ ವಿರುದ್ಧವಾಗಿ ಯಥೇಚ್ಛವಾಗಿ ಕಾಣಿಸಿಕೊಂಡಿದೆ. ಇಂಗ್ಲೀಷ್‌ನಲ್ಲಿ ಲೋಯರ್ ಫ್ಯಾಂಟಸಿ, ಹೈಯರ್ ಫ್ಯಾಂಟಸಿ ಎನ್ನುವ ಪ್ರಕಾರಗಳು ಕಾಣಿಸಿಕೊಂಡಿವೆ. ಹಾಗೆಯೇ ಫ್ಯಾಂಟಸಿಯ ಸುತ್ತ ಹಲವು ನೆಲೆಗಳ ಚರ್ಚೆಗಳೂ ಕಾಣಿಸಿಕೊಳ್ಳುತ್ತಿವೆ. ವಾಲ್ಟ್‌ಡಿಸ್ನಿಯಿಂದ ಹಿಡಿದು ಅಲ್ಲಿ ಫ್ಯಾಂಟಸಿಯ ದೊಡ್ಡದೊಂದು ಲೋಕವೇ ಬೆರಗುಗೊಳಿಸುವಂತೆ ಕಾಣಿಸಿಕೊಂಡಾಗಿದೆ. ಹೈಯರ್ ಫ್ಯಾಂಟಸಿ ಎನ್ನುವುದು ಓದುಗರಿಂದ ಬೇರೆಯದಾದ ಲೋಕವನ್ನು ಸೃಷ್ಟಿಸುತ್ತದೆ.

ಇದನ್ನು ಹೊಸಗಾಲದ ಫ್ಯಾಂಟಸಿಯ ದೊಡ್ಡ ಉಪಕ್ರಮ ಎನ್ನುವ ಹಾಗೆ ಕಾಣುತ್ತೇವೆ. ಟಾಲ್ಕಿಯಾನ್ (ಆಧುನಿಕ ಫ್ಯಾಂಟಸಿಯ ಪಿತಾಮಹ ಎಂದೇ ಇವನನ್ನು ಗಣಿಸಲಾಗುತ್ತದೆ.), ಸಿ.ಎಸ್.ಲೂಯಿಸ್, ಮ್ಯಾಕ್‌ಡೊನಾಲ್ಡ್, ಫಿಲಿಪ್ ಪುಲ್ಮನ್ ಮೊದಲಾದವರು ಈ ಬಗೆಯದಕ್ಕೆ ಆಕಾರ ಕೊಟ್ಟವರಾಗಿದ್ದಾರೆ. ಇವರು ಮಕ್ಕಳ ಲೋಕಕ್ಕೂ ಸಲ್ಲುತ್ತಾ ಅತ್ತ ದೊಡ್ಡವರ ಲೋಕಕ್ಕೂ ಹಿಗ್ಗಿಕೊಂಡಿರುವುದು ವಿಶೇಷವಾಗಿದೆ. ಮಹಾಕಾವ್ಯದಷ್ಟು ವಿಸ್ತೃತವಾದ ಹರಹನ್ನು ಇವರ ಕೃತಿಗಳು ಪಡೆದು ಹೊಸಗಾಲದ ಫ್ಯಾಂಟಸಿಯ ಹೊಸತನ್ನು ಹೇಳಿವೆ. ಇದೆಲ್ಲ ಇನ್ನೂ ಕನ್ನಡ ಮಕ್ಕಳ ಕಥಾ ಲೋಕದ ಆಸಕ್ತರ ನಡುವೆ ಅಪರಿಚಿತವಾಗೇ ಉಳಿದಿದೆ.

೩.೧. ಫ್ಯಾಂಟಸಿಯ ಪರಿಭಾಷೆ

'ಫ್ಯಾಂಟಸಿ'[೧] ಎನ್ನುವ ಪರಿಭಾಷೆಯನ್ನು ಕನ್ನಡದಲ್ಲಿ ಅತಿವಾಸ್ತವ ಎನ್ನುವ ಪದಕ್ಕೆ ಸಂವಾದಿಯಾಗಿ ಬಳಸಲಾಗುತ್ತಿದೆ. ಇದು ಇಂಗ್ಲೀಷಿನಿಂದಲೇ ಕನ್ನಡಕ್ಕೆ ಬಂದಿದೆ. ಅತಿವಾಸ್ತವ ಎನ್ನುವ ನಮ್ಮ ನಡುವಿನ ಶಬ್ದದ ಬಳಕೆಗಿಂತ ಈ ಫ್ಯಾಂಟಸಿ ಶಬ್ದ, ಬಳಕೆಯ ಒತ್ತಾಯವನ್ನು ಉಂಟುಮಾಡುವಷ್ಟು ಅದು ಇಂಗ್ಲೀಷಿನ ಪ್ರಭಾವವನ್ನು ಹೇಳುತ್ತಿದೆ. ಅಲ್ಲಿ ನಡೆದಿರುವ ವ್ಯಾಪಕವಾದ ಪ್ರಯೋಗಗಳಿಂದಲೂ ಇದು ಸಾಧ್ಯವಾಗಿದೆ. ನಮ್ಮ ನಡುವಿನ ಅತಿವಾಸ್ತವ, ಅಸಂಗತ ಶಬ್ದಗಳ ಬದಲು ಈ ಫ್ಯಾಂಟಸಿಯೇ, ಅದೂ ಮಕ್ಕಳ ಲೋಕದಲ್ಲಿ ಅಪ್ಯಾಯಮಾನವಾಗಿ ಈಗ ಕಾಣಿಸುತ್ತಿದೆ. ಫ್ಯಾಂಟಸಿ ಎಂದೊಡನೆ ಅದು ಮಕ್ಕಳ ಲೋಕದ್ದು ಎನ್ನುವಷ್ಟರ ಮಟ್ಟಿಗೆ ಅದನ್ನು ಭಾವಿಸಿಬಿಡಲಾಗಿದೆ. ಒಟ್ಟಾರೆ ಅದು ವಾಸ್ತವದಲ್ಲಿ ಸಾಧ್ಯಮಾಡಿಕೊಳ್ಳಲಾಗದ ಸಂಗತಿಗಳಿಗಾಗಿ ಅತಿವಾಸ್ತವದ ದಾರಿ ಕಂಡುಕೊಳ್ಳುವ ಒಂದು ಬಗೆಯ ಪಲಾಯನದ ಸಂಗತಿಗಳನ್ನು ಹೇಳುತ್ತದೆ ಎಂದೂ ಸಾಮಾನ್ಯವಾಗಿ ಒಪ್ಪಿತವಾದ ವಿಚಾರವಾಗಿದೆ. ಆದರೆ ಹೊಸಗಾಲದ ಫ್ಯಾಂಟಸಿ ಸಾರಾಸಗಟಾಗಿ ಈ ವಿಚಾರ ಧಾರೆಯನ್ನು ಸಮ್ಮತಿಸುವಂತಿದೆ ಎಂದು ಹೇಳಲು ಬರುವಂತಿಲ್ಲ.

ಫ್ಯಾಂಟಸಿ ಶಬ್ದವು ಇಂಗ್ಲೀಷ್‌ನ ಶಬ್ದಕೋಶಗಳಲ್ಲಿ ಹಲವು ಬಗೆಯಲ್ಲಿ ಬಳಕೆಯಾಗಿದೆ. ಫ್ಯಾಂಟಸಿಗೆ ಇಂಗ್ಲಿಷ್‌ನ ಡಿಕ್ಷನರಿಯಲ್ಲಿ ಹಲವಾರು ಅರ್ಥಗಳಿವೆ. ಕನ್ನಡದಲ್ಲಿ ಈ ಪದಕ್ಕೆ ಸಂವಾದಿಯಾಗಿ ಎಂ.ಎಸ್.ಕೆ. ಪ್ರಭು ಅವರು ಅವಾಸ್ತವ, ಅದ್ಭುತ, ಅಸಂಗತ ಪದಗಳನ್ನು ನೀಡಿದ್ದಾರೆ. ಇವು ಈ ಪರಿಭಾಷೆಯ ನೈಜತೆಯನ್ನು ಯಥಾವತ್ತಾಗಿ ಪ್ರತಿನಿಧಿಸಲಾರವು ಎನ್ನುವ ಹಿನ್ನೆಲೆಯಲ್ಲಿ ಕನ್ನಡದಲ್ಲೂ ಫ್ಯಾಂಟಸಿ ಪದಬಳಕೆಯನ್ನು ಮಾಡಲಾಗಿದೆ.

ಈ ಫ್ಯಾಂಟಸಿಯು ಸಾಹಿತ್ಯದಲ್ಲಿ ಹಲವು ಬಗೆಯಲ್ಲಿ ಕಂಡು ಬರುತ್ತದೆ. ಅದನ್ನು ಹಲವಾರು ನಿಘಂಟುಗಳು ಮತ್ತು ಕೃತಿಗಳು ಈ ಕೆಳಗಿನಂತೆ ವಿವರಿಸಿವೆ.

'A story or type of literature that describes situations that are very different from real life, usually involving magic

A pleasant situation that you enjoy thinking about but is unlikely to happen,or the activity of imagining things'[2]

'A pleasant, exiciting,or unusual experience that you imagine is happening to you'[3]

'An exciting and unusual experience or situation that you imagine happening to you, but which will probably never happen

A n idea or belief that is based only on imagination, not on real facts'.[4]

ಆದರೆ ಮಕ್ಕಳ ಸಾಹಿತ್ಯದ ಮೇಲೆ ಅಪಾರ ಸಂಶೋಧನೆ ಮಾಡಿರುವ ಆನಂದ ಪಾಟೀಲರು ಇದಕ್ಕೆ ಭಿನ್ನವಾದ ಅಭಿಪ್ರಾಯವನ್ನು ತಮ್ಮ ಲೇಖನದಲ್ಲಿ ಈ ಅಭಿಪ್ರಾಯ ಪಟ್ಟಿದ್ದಾರೆ.

'ಎಲ್ಲ ಅವಾಸ್ತವವೂ ಫ್ಯಾಂಟಸಿಯಾಗಲಾರದು ಎಂದು ನನ್ನ ಅನಿಸಿಕೆ. ಈ ಫ್ಯಾಂಟಸಿ ಎನ್ನುವ ಶಬ್ದದ ಬಳಕೆ ಇಂಗ್ಲೀಷಿನವರದೇ. ಅಲ್ಲಿನ ಶಬ್ದಕೋಶಗಳನ್ನು ನೋಡಿದಾಗ ಕೇವಲ ಅವಾಸ್ತವದ ಅರ್ಥದ ಜೊತೆಗೆ 'fanciful mental image, a place that is unreal or imaginary or that excites wonder' ಎನ್ನುವ ಅರ್ಥಗಳನ್ನೂ ನೀಡಿರುವುದು ಕಂಡುಬರುತ್ತದೆ. ಇವು ಕಂಡುಬಂದುದು ಆಕ್ಸ್‌ಫರ್ಡ್ ಇಂಗ್ಲೀಷ್ ಡಿಕ್ಷನರಿಯಲ್ಲಿ Dictionary.com ಅಂತರ್ಜಾಲದ ಶಬ್ದಕೋಶದಲ್ಲಿ ಇಂಥವೆ ಅರ್ಥಬರುವ ಪದಗಳನ್ನು ಕಂಡೆ. imagination, especially when extravagant and unrestrained. the forming of mental images, especially wondrous or strange fancies; imaginative conceptualizing. a series of pleasing mental images ಮುಂತಾಗಿಯೆಲ್ಲ ಇರುವುದು ನನಗೆ ವಿಶೇಷವಾಗಿ ಕಂಡಿದೆ. ಒಟ್ಟು ಅವಾಸ್ತವ, ಭಯಾನಕ ಅವಾಸ್ತವ, ಊಹಾತ್ಮಕ ಅವಾಸ್ತವ ಮುಂತಾಗಿ ಎಲ್ಲವನ್ನೂ ಈ ಪದದ ಬಳಕೆಯಲ್ಲಿ ಒಳಗೊಳ್ಳಲಾಗುತ್ತಿದೆ. ಅದರಲ್ಲಿ ಮೇಲೆ ನಮೂದಿಸಿದಂಥ ಅರ್ಥಗಳನ್ನೂ ಕಾಣಿಸಿರುವುದು ನನಗೆ ಸಮ್ಮತವೆನಿಸಿದೆ."[೫]

ಈ ಮಾತುಗಳನ್ನು ಹೇಳುವಾಗ ಪಾಟೀಲರು ಬೇಸರದ ಸಂಗತಿಗಳನ್ನು, ದುಃಖದ ಸಂಗತಿಗಳನ್ನು ಫ್ಯಾಂಟಸಿಯಲ್ಲಿ ಗಣಿಸಬೇಕಿಲ್ಲವೇನೋ ಎನ್ನುವ ಅಭಿಪ್ರಾಯ ಪಡುತ್ತಾರೆ. ಉದಾಹರಣೆಗೆ ಕಾಫ್ಕಾ ತನ್ನ 'ಮೆಟಾಮಾರ್ಫಸಿಸ್' ನೀಳ್ಗತೆಯಲ್ಲಿ ಕಥೆಯ ಮುಖ್ಯ ಪಾತ್ರಧಾರಿ ಗ್ರೆಗರ್ ಸಂಸ ಒಂದು ದಿನ ಬೆಳಿಗ್ಗೆ ಇದ್ದಕ್ಕಿದ್ದಂತೆ ಒಂದು ಹುಳುವಾಗಿ ಪರಿವರ್ತಿತವಾಗುತ್ತಾನೆ. ತನ್ನ ಅಸಹಾಯಕತೆಯನ್ನು ಮೀರಲಾರದೆ ವಾಸ್ತವದ ಸೋಲನ್ನು ಒಪ್ಪಿಕೊಳ್ಳುವ ಸಂದರ್ಭವನ್ನು ಫ್ಯಾಂಟಸಿಯಲ್ಲಿ ಗಣಿಸುವುದು ಹೇಗೆ ಎಂಬ ಪ್ರಶ್ನೆಯನ್ನು ಪಾಟೀಲರು ಎತ್ತುತ್ತಾರೆ.

ಇಂಗ್ಲಿಷ್ ಸಾಹಿತ್ಯ ನೋಡುವಾಗ ಇದು ಬಗೆಬಗೆಯಲ್ಲಿ ಕಾಣುತ್ತದೆ. ಅದು ಕೆಲವು ಲೇಖಕರಲ್ಲಿ ಅವರ ಜೀವನದ ಸಂಗತಿಗಳನ್ನು ಹಿನ್ನೆಲೆಯಾಗಿಸಿಕೊಂಡು ತಾತ್ವಿಕವಾಗಿ ಹುಟ್ಟಿದಂತಿದೆ. ಕೆಲವು ಲೇಖಕರಲ್ಲಿ ಅಗತ್ಯದ ಮಾಧ್ಯಮವಾಗಿ ಬಳಕೆಯಾಗುತ್ತಾ ಅವರು ಬಾಲ್ಯದೊಂದಿಗೆ ಬದಲಾಗುತ್ತಿರುವ ಸಾಮಾಜಿಕ ವಾತಾವರಣದಲ್ಲಿ ತುಡಿಯುವುದನ್ನು ಒಳಗೊಳ್ಳುತ್ತಾ ಬಂದಿದೆ. ಕೆಲವು ಪಠ್ಯಗಳು ಅದನ್ನು ಒಂದು ನಿಗದಿತ ಕಥಾ ಮಾದರಿ ಎಂದು ಭಾವಿಸಿ ಮಾನವೀಯ ನೆಲೆಯ ಅತ್ಯಂತ ಸೊಗಸಾದ ಕಥಾಜಗತ್ತನ್ನು ಕಟ್ಟಿನಿಲ್ಲಿಸಿದುದು ಕಾಣುತ್ತದೆ.

ಈ ಮೊದಲು ಹೆಸರಿಸಿದ ಟಾಲ್ಕಿನ್‌ನ ಕೃತಿಯ ತರುವಾಯ ಇಂಗ್ಲಿಷ್ ಫ್ಯಾಂಟಸಿ ಲೋಕದಲ್ಲಿ ಬಗೆಬಗೆಯ ಪ್ರಯತ್ನಗಳೆಲ್ಲಾ ನಡೆದವು. ಟಾಲ್ಕಿನ್ ಸೃಷ್ಟಿಸಿದ ಈ ಪರಿಭಾಷೆಗೆ ನಂತರದ ನುಡಿ ಹಾಸು ಟೆರ್ರಿ ಬ್ರೂಕ್ಸ್‌ನದು; ಇವನ 'ಶೋರ್ಡ್ ಶನ್ನಾರ' ಕೃತಿ ಸರಣಿಯು ಟಾಲ್ಕಿನ್ ಶೈಲಿಯನ್ನು ಮುಂದುವರೆಸುತ್ತಲೇ ಅದಕ್ಕೊಂದು ಹೊಸ ಭಾಷ್ಯ ಬರೆಯಿತು. ನಂತರ ಬಂದ ಅನೇಕ ಬರಹಗಾರರು ಫ್ಯಾಂಟಸಿ ಬರವಣಿಗೆಗೆ ಇರುವ ಸಾಧ್ಯತೆಗಳನ್ನೆಲ್ಲಾ ಉತ್ಕೃಷ್ಟವಾಗಿ ತೊಡಗಿಸಿಕೊಂಡರು ಎನ್ನುವುದಕ್ಕೆ ಬಗೆಬಗೆಯ ಫ್ಯಾಂಟಸಿಗಳೇ ಸಾಕ್ಷಿ. ರಾಬರ್ಟ್ ಜೋರ್ಡನ್ ಎನ್ನುವ ಲೇಖಕ 'The wheel of time' ಮೂಲಕ ಪುರಾಣ ಫ್ಯಾಂಟಸಿಯನ್ನು ಬಳಕೆಗೆ ತಂದನು. ಹಾಗೆಯೇ mystery, thriller, horror, romance, suspence ಮುಂತಾದ ಬಗೆಯಲ್ಲಿ ಫ್ಯಾಂಟಸಿ ಬೆಳೆಯಿತು. ಫ್ಯಾಂಟಸಿ ಕೇವಲ ಎಳೆಯ ಮಕ್ಕಳಿಗಷ್ಟೆ ಅಲ್ಲ ಹದಿಹರೆಯದವರಿಗೂ ಅಗತ್ಯ ಎನ್ನುವುದನ್ನು ಸಾಬೀತುಪಡಿಸಿದ ಕೃತಿಗಳೆಂದರೆ; ಲಾಯ್ಡ್ ಅಲೆಕ್ಸಾಂಡರ್‌ನ 'The prydain chronicles'. ನಂತರ ಇವನನ್ನು ಹಿಂಬಾಲಿಸಿ ಹದಿಯರೆಯದವರಿಗಾಗಿ ಬರೆದ ಫ್ಯಾಂಟಸಿಯಿಂದ ಜಗತ್ತಿಗೆಲ್ಲಾ ಹೆಸರಾದವರೆಂದರೆ; ಜೆ.ಕೆ.ರೌಲಿಂಗ್. ಈಕೆ ತನ್ನ 'ಹ್ಯಾರಿ ಪಾಟರ್' ಸರಣಿ ಕತೆಗಳ ಮೂಲಕ ಜಗತ್ತಿನ ಸಾಹಿತ್ಯದಲ್ಲಿ ಫ್ಯಾಂಟಸಿಗೆ ಭದ್ರ ಬುನಾದಿ ದೊರಕಿಸಿಕೊಟ್ಟಳು.

ಫ್ಯಾಂಟಸಿ ಪ್ರಕಾರವು ಬೆಳೆದಂತೆಲ್ಲಾ ಭಿನ್ನ ರೀತಿಯ ಫ್ಯಾಂಟಸಿಗಳು ಹುಟ್ಟಿಕೊಂಡವು. ಫ್ಯಾಂಟಸಿಯಲ್ಲಿ ಸಮಕಾಲೀನ ಫ್ಯಾಂಟಸಿ, ನಗರ ಫ್ಯಾಂಟಸಿಯೆಂದು ವರ್ಗೀಕರಣವೂ ಮಾಡಲಾಗಿದೆ. ಆದರೆ ಇದೆಷ್ಟು ಸಮಂಜಸವೆಂಬುದು ಚರ್ಚಿತ ವಿಷಯ. ಈ ಸಂದರ್ಭದಲ್ಲಿ ಪ್ರಸಿದ್ಧ ಫ್ರೆಂಚ್ ಲೇಖಕ ಕಾಫ್ಕಾನ ಮೆಟಾಮಾರ್ಫಸಿಸ್ ಕೃತಿಯನ್ನು ಅವಲೋಕಿಸಿದರೆ ಅದರಲ್ಲಿ ನಾಯಕ ಗ್ರೆಗರ್ ಅಸಹ್ಯ ಹುಳುವಾಗಿ ಪರಿವರ್ತಿತವಾಗುವುದು ಫ್ಯಾಂಟಸಿಯ ಪ್ರಭೇದವೆಂದೇ ಬಗೆಯಬೇಕಾಗುತ್ತದೆ. ಫ್ಯಾಂಟಸಿಯೆಂದರೆ ಹುಡುಗನೊಬ್ಬ ರೆಕ್ಕೆ ಕಟ್ಟಿಕೊಂಡು ಹಾರುವುದು, ಮೂಕಪ್ರಾಣಿಗಳು ಮಾತನಾಡುವುದು, ಜಡ ವಸ್ತುಗಳೂ ಜಂಗಮವಾಗುವುದು ಅಷ್ಟೇ ಅಲ್ಲ, ಶಿಕ್ಷೆಯೂ ಒಂದು ಫ್ಯಾಂಟಸಿಯೆಂಬಂತೆ ಮೆಟಾಮಾರ್ಫಸಿಸ್ ಹೇಳುತ್ತದೆ. ಅದನ್ನು ಮಕ್ಕಳ ಸಾಹಿತ್ಯಕ್ಕೆ ಅನುಲಕ್ಷಿಸಿ ಹೇಳುವುದಾದರೆ ಸ್ವಲ್ಪ ದೊಡ್ಡ ಪರಿಭಾಷೆಯಾದೀತು ಆದರೂ ಹೇಳಲಡ್ಡಿಯಿಲ್ಲ. ಇಂದು ಜಗತ್ತಿನ ತುಂಬಾ ಇಂಟರ್‌ನೆಟ್ ಬಹುಪಯೋಗಿಯಾಗಿ ಮಕ್ಕಳಿಂದ ವೃದ್ಧರವರೆಗೆ ಬಳಸಲ್ಪಡುತ್ತಿದೆ.

ದಂತಕತೆಗಳಲ್ಲಿ, ಕಾಮಿಕ್ಸ್‌ಗಳಲ್ಲಿಯೂ ಹೇರಳವಾಗಿ ಫ್ಯಾಂಟಸಿ ಬಳಕೆಯಾಯಿತು. ಡಯಾನ ವಿನ್ನಿ ಜೋನ್ಸ್ ಅವರ 'Dark Lord of Derkholm' ಮತ್ತು ಅಮೇರಿಕದ ಕಾದಂಬರಿಕಾರ ಎಲ್.ಸ್ಪ್ರೇಗ್ ಡಿ ಕ್ಯಾಂಪ್ ಅವರ 'Solomon's Stone' ಕೃತಿಗಳು ಕಾಮಿಕ್ ಫ್ಯಾಂಟಸಿಯ ಉದಾಹರಣೆಗಳಾಗಿವೆ. ಪ್ರತಿಯೊಂದು ಕೆಲಸಕ್ಕೂ ಅಂತರ್ಜಾಲವನ್ನು ಆಶ್ರಯಿಸುತ್ತಿರುವ ಈ ಸಂದರ್ಭದಲ್ಲಿ ಮುಂದಿನ ತಲೆಮಾರು ಹೇಗೆ ಈ ಇಂಟರ್‌ನೆಟ್ ಮೋಹಕ್ಕೆ ಬಿದ್ದು ತಂತ್ರಜ್ಞಾನದ ಅತಿ ಬಳಕೆಯಿಂದ ಭಾಷಾ ಮಾಧ್ಯಮವೇ ನಾಶವಾಗುವ ಅಪಾಯವಿದೆಯೆಂಬುದನ್ನು ಅಮೆರಿಕದ ಪ್ರಸಿದ್ಧ ಲೇಖಕ ಎಂ.ಟಿ.ಆ್ಯಂಡರ್ಸ್‌ನ್ ಅವರು 'ಫೀಡ್' ಕೃತಿಯ ಮೂಲಕ ಭವಿಷ್ಯದ ಫ್ಯಾಂಟಸಿಯನ್ನು ತೆರೆದಿಟ್ಟಿದ್ದಾರೆ.

ಹೊಸಗಾಲದಲ್ಲಿ ಸಾಕಷ್ಟು ಬಳಕೆಯಾಗಿರುವ ಇಂಗ್ಲೀಷಿನಲ್ಲಿಯೇ ಎಲ್ಲ ಬಗೆಯ ಅವಾಸ್ತವ, ಅಸಂಗತ ಸಂಗತಿಗಳನ್ನೂ ಫ್ಯಾಂಟಸಿಯೊಳಗೆ ಗಣಿಸಲಾಗುತ್ತದೆ. ಅಲ್ಲಿ ಕೇವಲ ಸಂತೋಷವಾದ, ಸ್ವಚ್ಛಂದವಾದ, ಬಿಡುಗಡೆಗೆ ಬಯಸುವ ಮುಂತಾದ ಅರ್ಥಗಳನ್ನಷ್ಟೇ ಗಮನಿಸುವುದಿಲ್ಲ. ಫ್ಯಾಂಟಸಿಯು ಶಿಕ್ಷೆ, ಹೇಡಿತನ, ಕ್ರೂರತೆ ಹೀಗೆ ನಕಾರಾತ್ಮಕ ಸಂಗತಿಗಳನ್ನು ಹೇಳಲೂ ಬಳಕೆಯಾಗಿದೆ. ಹಾಗಾಗಿ ಅದೊಂದು ತರಹ ಹೋಲ್ಡಾಲಿನಂತೆಯೇ ಆಗಿದೆ ಎಂದರೆ ತಪ್ಪಿಲ್ಲ.

ಹಾಗೆ ನೋಡಿದರೆ ವೈಜ್ಞಾನಿಕ ಕತೆಗಳನ್ನು ಈ ಫ್ಯಾಂಟಸಿ ಜಗತ್ತಿನಲ್ಲಿ ಸೇರಿಸುವುದೊ ಬೇಡವೊ ಎನ್ನುವುದು ಚರ್ಚೆಯ ಸಂಗತಿ. ಏಕೆಂದರೆ ಅಲ್ಲಿನ ಏನೇ ಅತಿವಾಸ್ತವ ಎನಿಸುವ ಸಂಗತಿಯೂ ಇಂದಿನ ವಿಜ್ಞಾನದ ಬೆಳವಣಿಗೆಯ ಆಧಾರದಲ್ಲಿ ಬರಲಿರುವ ಸಮಯದ ಆವಿಷ್ಕಾರಗಳನ್ನು ಕಲ್ಪಿಸಿಕೊಂಡು ರಚಿಸಿಕೊಳ್ಳುವ ಕಥಾ ಹಂದರಗಳು ವಾಸ್ತವದ ಮುಂದುವರಿಕೆಗಳೇ ಆಗಿರುತ್ತವೆ. ಅವಕ್ಕೆ ತಾರ್ಕಿಕವಾದ ಹಿನ್ನೆಲೆ ಇರುತ್ತದೆ. ಇಂಗ್ಲೀಷಿನ ಸಂದರ್ಭದಲ್ಲಿಯೇ ಈ ಬಗೆಯ ಅನುಮಾನಗಳನ್ನು ವ್ಯಕ್ತಪಡಿಸುವುದು ಕಾಣುತ್ತದೆ. ಈ ಸಂಗತಿ ತಾಂತ್ರಿಕತೆಯ ಮಾಯಾ ಜಾದೂ ಸಂಗತಿಗಳಿಗೂ ಅನ್ವಯಿಸದೇ ಇರದು. ಯಾಕೆಂದರೆ ತಾಂತ್ರಿಕತೆ, ಮಾಂತ್ರಿಕತೆಗೆ ತನ್ನದೇ ಆದ ಇತಿಹಾಸವಿದ್ದು ಅಲ್ಲಿ ಮಾಯಾ ಸಂಗತಿಗಳು, ವೈಚಿತ್ರ್ಯದ ಅಸಂಭ್ಯಾವಗಳು ನಡೆಯುವುದು ನಿಯಮವೇ ಆಗಿರುತ್ತದೆ. ಮಕ್ಕಳಿಗಾಗಿನ ವೈಜ್ಞಾನಿಕ ಕತೆಗಳಲ್ಲಿ ಏನೇ ವಾಸ್ತವದ ಹಂದರವಿದ್ದರೂ ಮಕ್ಕಳಿಗೆ ತಲುಪಿಸುವ ಹಾದಿಯಲ್ಲಿ ಅಲ್ಲೂ ಫ್ಯಾಂಟಸಿ ಇಣುಕಲೇ ಬೇಕು. ಕನ್ನಡದಲ್ಲಿ ರಾಜಶೇಖರ ಭೂಸನೂರ ಮಠ ಅವರು ಬರೆದ ವೈಜ್ಞಾನಿಕ ಕಥೆಗಳು ಫ್ಯಾಂಟಸಿಯನ್ನೂ ಹೊಂದಿರುವುದನ್ನು ಇಲ್ಲಿ ಉದಾಹರಿಸಬಹುದು.

'ಹ್ಯಾರಿಪಾಟರ್' ಕೃತಿಯಲ್ಲಿ ಬರುವುದು ಮಾಂತ್ರಿಕರ ಸುತ್ತಲಿನ ಕಥಾ ಹಂದರವೇ ಆಗಿದೆ. ಮಾಂತ್ರಿಕರು ನಡೆಸುವ ಚಮತ್ಕಾರಗಳು ಅವರ ಬದುಕಿನ ವಾಸ್ತವಗಳೇ ಅಲ್ಲಿ ಕಂಡು ಬರುತ್ತವೆ. ಮೋಡಿಕಾರರು ನಡೆಸುವ ಕಣ್ಕಟ್ಟು ವಿದ್ಯೆಗಳು, ತಾಂತ್ರಿಕರು ನಡೆಸುವ ನಾನಾ ಬಗೆಯ ಅಘಟಿತ ಸಂಗತಿಗಳು ಇವೆಲ್ಲ ಇಂಥವೇ ಆಗಿವೆ. ಭಾರತೀಯ ಪರಿಸರದಲ್ಲಿ ಈ ಬಗೆಯ ತಾಂತ್ರಿಕರ

ವಿದ್ಯಮಾನಗಳು ಸೇರಿದ ಸಾಕಷ್ಟು ಕತೆಗಳು ಕಂಡು ಬರುತ್ತವೆ. ಹಾಗಿದ್ದೂ ಒಟ್ಟಾರೆ ಈ ಅವಾಸ್ತವದ ಕಲ್ಪನೆಗಳಲ್ಲಿ ಅಭ್ಯಾಸದ ಉದ್ದೇಶಕ್ಕಾಗಿಯಾದರೂ ಕೆಲ ವಿಧಗಳಲ್ಲಿ ವಿಭಾಗಿಸಿಕೊಂಡು ನೋಡುವುದು ಅಗತ್ಯವೆನಿಸುತ್ತದೆ. ಅವುಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

೩.೨. ಫ್ಯಾಂಟಸಿಯ ವಿಧಗಳು

ಫ್ಯಾಂಟಸಿಯು ಕೃತಿಯ ಅಗತ್ಯತೆಗಳಿಗನುಗುಣವಾಗಿ, ಲೇಖಕರ ಮನೋಧೋರಣೆಯ ಫಲವಾಗಿ, ಕಾಲದ ಸಂದರ್ಭಕ್ಕೆ ತಕ್ಕಂತೆ ಅನೇಕ ಸ್ವರೂಪಗಳಲ್ಲಿ ಬೆಳೆದು ಬಂದಿದೆ. ಆದರೆ ಒಟ್ಟಾರೆ ಫ್ಯಾಂಟಸಿಯ ಪ್ರಧಾನ ಗುಣಲಕ್ಷಣಗಳ ಆಧಾರದ ಮೇಲೆ ಎರಡು ಮುಖ್ಯ ಬಗೆಗಳನ್ನು ಗುರುತಿಸಲಾಗಿದ್ದು, ಅವು ಈ ಕೆಳಗಿನಂತಿವೆ.

೩.೨.೧. ಲೋಯರ್ ಫ್ಯಾಂಟಸಿ

ಈ ಫ್ಯಾಂಟಸಿಯು ಮನುಷ್ಯನೊಬ್ಬನ ಸಹಜದ ನಡೆವಳಿಕೆಯ (ಅದು ಜನಪದವೇ ಆಗಲಿ, ಇಂದಿನ ಪರಿಸರವೆ ಆಗಲಿ)ಕತೆಯಲ್ಲಿ ಅವನ ಆಕಾಂಕ್ಷೆಗಳ ಈಡೇರಿಕೆಗಾಗಿ ಸಹಾಯಕವಾಗಿ, ಅಥವಾ ಅಡ್ಡಿಪಡಿಸಲು, ಅಡೆತಡೆ ಉಂಟುಮಾಡಲು ಮುಂತಾಗಿ ಹಲವಾರು ಹೇತುಗಳಿಗಾಗಿ ಅತಿವಾಸ್ತವದ ಸಂಗತಿಗಳನ್ನು ಬಳಸಿಕೊಳ್ಳುವುದು ನಡೆಯುವುದು ಒಂದು ಬಗೆಯಾಗಿದೆ. ಅದು ಸಹಾಯಕ್ಕೆ ಆಗುವ ಹಾರುವ ಕಂಬಳಿ ಆಗಬಹುದು, ಸಮಯಕ್ಕೆ ಸರಿಯಾಗಿ ಬಂದೊದಗುವ ಪುಟ್ಟ ಇರುವೆಯೇ ಆಗಬಹುದು, ಗುಟ್ಟು ತಿಳಿಸಬಲ್ಲ ಮಾಯದ ಕನ್ನಡಿಯೂ ಆಗಬಹುದು, ಒಂದು ಕಲ್ಲು ಹರಳೂ ಆಗಬಹುದು, ಒಂದು ಮಂತ್ರವೂ ಆಗಬಹುದು. ಹಾಗೆಯೇ ಆಲೀಸಳ ಕತೆಯಲ್ಲಿನ ಹೊಸಗಾಲದ ಕಲ್ಪನೆಯಲ್ಲಿ ಅಸಂಗತವಾದ ಸಂಗತಿಗಳು ಸಂಭವಿಸುವುದೇ ಫ್ಯಾಂಟಸಿಯಾಗಬಹುದು. ಪ್ರಾಣಿ ಪ್ರಪಂಚ, ಗಿಡಮರಗಳು, ಸುತ್ತಲಿನೆಲ್ಲ ವಸ್ತುಪ್ರಪಂಚವೂ ಜೀವತಳೆದಂತೆ ವರ್ತಿಸುವುದೂ ಆಗಬಹುದು. ಅನಿಮೇಷನ್ ಯುಗದಲ್ಲಿ ಹೊಸದಾದ ಅಕಾರಗಳಲ್ಲಿ ಆವಿಷ್ಕಾರಗೊಂಡ ಪಾತ್ರಗಳ ಆಟೋಟಗಳೂ ಆಗಬಹುದು.

'ಕಥನದ ಮಾದರಿ ಯಾವುದೇ ಇದ್ದರೂ ಅದನ್ನು ಹೇಳುವ ಸ್ವರೂಪದಲ್ಲಿ ಈ ಮೇಲೆ ಉಲ್ಲೇಖಿಸಿದ ಅತಿವಾಸ್ತವ ಎನ್ನಿಸುವ ವಸ್ತು, ಸಂಗತಿಗಳು ಮಾಧ್ಯಮವಾಗಿ ಬಳಕೆಯಾಗುತ್ತಲೇ ಸನಿದೂರದ ಕಥೆಯಲ್ಲಿ ಒಳಗೊಂಡಿರುವ ಫ್ಯಾಂಟಸಿಯನ್ನು ಲೋಯರ್ ಫ್ಯಾಂಟಸಿ ಎಂದು ಕರೆಯಬಹುದಾಗಿದೆ.'[೬] ಹಿಂದಿನ ಕಾಲದ ಕಲ್ಪನೆಯಿಂದ ಹಿಡಿದು ಇಂದಿನ ಹೊಸ ಹೊಸಬಗೆಯ ಕಲ್ಪನೆಗಳ ತನಕ ದೊಡ್ಡದೊಂದು ಲೋಕವನ್ನು ಲೋಯರ್ ಎನ್ನುವ ಫ್ಯಾಂಟಸಿಯಲ್ಲಿ ಗುರುತಿಸಬಹುದು. ಕನ್ನಡದ ಕೃತಿಗಳನ್ನು ಇದಕ್ಕೆ ನಿದರ್ಶನ ನೀಡುವುದಾದರೆ; ಬಹುತೇಕ ಕನ್ನಡದ ಎಲ್ಲಾ ಮಕ್ಕಳ ಕೃತಿಗಳೆಲ್ಲವೂ ಲೋಯರ್ ಫ್ಯಾಂಟಸಿ ಕೃತಿಗಳೇ ಆಗಿವೆ. ಹೈಯರ್ ಫ್ಯಾಂಟಸಿ ಎನ್ನುವ ಮತ್ತೊಂದು ಜಗತ್ತನ್ನು ಕನ್ನಡದಲ್ಲಿ ಇದುವರೆಗೆ ಯಾರೂ ಸೃಷ್ಟಿ ಮಾಡಲಾಗಿಲ್ಲವೆನ್ನುವುದು ಮಿತಿಯೇ ಆಗಿದೆ.

೩.೨.೨. ಹೈಯರ್ ಫ್ಯಾಂಟಸಿ

ಹೈಯರ್ ಫ್ಯಾಂಟಸಿ ಎನ್ನುವುದು ಬೇರೊಂದು ಲೋಕದ ಕಥನವನ್ನು ತೆರೆದಿಡುತ್ತದೆ. ಇದು ಕಾಲದ ಅಂತರ ಹೇಳುತ್ತಾ ಇನ್ನೊಂದು ಕಲ್ಪಿತವಾದ ದೂರದ ಜೀವಿಗಳ ಬದುಕನ್ನು ಮುಂದಿಡುತ್ತದೆ. ಇಂಥ ವಿಧಕ್ಕೆ ವಿಕಿಪೀಡಿಯಾದಲ್ಲಿ ಕಾಣುವ ಈ ಸಾಲುಗಳನ್ನು ಉದಾಹರಿಸಬಹುದು; 'Many fantasy authors use real-world folklore and mythology as inspiration. For instance, a narrative that takes place in an imagined town in the north-eastern United States could be considered realistic fiction as long as the plot and characters are consistent with the history of a region and the natural characteristics that someone who has been to the northeastern United States expects; however, if the narrative takes place in an imagined town, on an imagined continent, with an imagined history and an imagined ecosystem, the work becomes fantasy with or without supernatural elements.'[7]

ಇಂಗ್ಲೀಷಿನ ಹೊಸಗಾಲದ 'ಹೈಯರ್ ಫ್ಯಾಂಟಸಿ'ಯಲ್ಲಿ ಹೀಗೆ ಬೇರೆಯದಾದ ಆಲ್ಟರ್ನೇಟಿವ್ ವರ್ಲ್ಡ್ ಗುರುತಿಸುವುದು ನಡೆಯುತ್ತದೆ. ಇದು ಹೊಸಗಾಲದ ಮಹತ್ವದ ಹೊಳಹಾಗಿದೆ. ಹತ್ತೊಂಬತ್ತನೆ ಶತಮಾನದ ಇಂಗ್ಲೀಷಿನ ರಮ್ಯ ಸಂಪ್ರದಾಯದ ಉದರದಲ್ಲೇ ಇದರ ಜನನವಾಯಿತು ಎನ್ನಬಹುದು. ವಿಶ್ವದ ಆಧುನಿಕ ಫ್ಯಾಂಟಸಿ ಲೇಖಕರಲ್ಲಿ ಗಮನಾರ್ಹವಾದ ಒಂದು ಹೆಸರು, ಸ್ಕಾಟಿಶ್ ಲೇಖಕ, ಕವಿ, ಜಾರ್ಜ ಮೆಕ್ಡೊನಾಲ್ಡ್‌ನದು ಅವರ 'ಫ್ಯಂಟಾಸ್ಟಸ್'(೧೮೫೮)ಕೃತಿ ಹಾಗೂ ಇಂಗ್ಲೀಷ್ ಲೇಖಕ ವಿಲಿಯಮ್ ಮೊರಿಸ್‌ನ 'ಹಿ ವೆಲ್ ಎಟ್ ದಿ ವರ್ಲ್ಡ್ಸ್ ಎಂಡ್'(೧೮೯೬)ಕೃತಿಯಿಂದ ಈ ಹೊಳಹುಗಳು ಕಾಣಿಸಿಕೊಂಡು, ಜೆ.ಆರ್.ಆರ್.ಟಾಲ್ಕಿಯಾನ್‌ವರೆಗೆ ಗಟ್ಟಿಯಾದ ದಾರಿ ಮಾಡಿಕೊಂಡಿತು. ಅವನ ಕೃತಿ 'ದಿ ಲಾರ್ಡ ಆಫ್ ರಿಂಗ್ಸ್'(೧೯೫೪–೫೫) ನಿರ್ದಿಷ್ಟ ರೂಪದಲ್ಲಿ ಹೈಯರ್ ಫ್ಯಾಂಟಸಿಯೆಂದು ಗುರುತಿಸಲ್ಪಟ್ಟಿತು. ಸೃಜನಾತ್ಮಕವಾಗಿಯೂ, ಮಾರುಕಟ್ಟೆಯ ದೃಷ್ಟಿಯಿಂದಲೂ ಇದು ಗೆಲುವನ್ನು ಸಾಧಿಸಿದ ಕೃತಿಯಾಗಿದೆ. ಇದಕ್ಕೂ ಮೊದಲು ಮಕ್ಕಳ ಜಗತ್ತಿನಲ್ಲಿ ಹೆಸರುವಾಸಿಯಾದ 'ಹಾಬ್ಬಿತ್' ಎನ್ನುವ ಕೃತಿಯಲ್ಲಿ ಹಾಬ್ಬಿತ್ ಎನ್ನುವ ಕೃಶ ಆಕಾರದ ಜೀವಿಗಳಿರುವ ಜಗತ್ತನ್ನು ಸೃಷ್ಟಿಸಿಕೊಂಡು ಜಗತ್ತಿನ ತುಂಬಾ ಜನಪ್ರಿಯವಾಯಿತು. ಇದೇ ಕತೆಯೇ ಲಾರ್ಡ ಆಫ್ ರಿಂಗ್ಸ್‌ನಲ್ಲಿ ಮುಂದುವರೆಯಿತು. ಇದು ಅನೇಕ ಲೇಖಕರಿಗೆ ಸ್ಫೂರ್ತಿಯಾಗಿ ಮುಂದೆ ಸಾಕಷ್ಟು ಕೃತಿಗಳು ಸೃಷ್ಟಿಯಾಗಲು ಕಾರಣವಾಯಿತು. ಹಾಗಾಗಿಯೇ ಈತನನ್ನು ಹೈಯರ್ ಫ್ಯಾಂಟಸಿಯ ಪಿತಾಮಹ ಎಂದು ಕರೆಯಲಾಗುತ್ತದೆ.

ಟಾಲ್ಕಿಯಾನ್‌ನನ್ನು ಅನುಸರಿಸಿ ಬಂದವನು ಇಪ್ಪತ್ತನೇ ಶತಮಾನದಲ್ಲಿ ಬ್ರಿಟಿಷ್ ಇಂಗ್ಲಿಷ್ ಸಾಹಿತ್ಯದಲ್ಲಿ ಉನ್ನತವಾದ ಸ್ಥಾನಮಾನವನ್ನು ಹೊಂದಿದ್ದ ಸಿ.ಎಸ್.ಲೂಯಿಸ್. ಇವನ 'ಕ್ರಾನಿಕಲ್ಸ್

ಆಫ್ ನಾರ್ನಿಯಾ'(೧೯೫೦-೫೬), ಗದ್ಯ ಬರಹವನ್ನು ಮುಖ್ಯ ಮಾಧ್ಯಮವಾಗಿಸಿಕೊಂಡು ಬರೆದ, ಆದರಲ್ಲೂ ವೈಜ್ಞಾನಿಕ ಫ್ಯಾಂಟಸಿಯನ್ನು ಹೆಚ್ಚಾಗಿ ಬರೆದ ಅಮೆರಿಕದ ಪ್ರಸಿದ್ಧ ಲೇಖಕಿ ಉರ್ಸುಲಾ ಕೆ. ಲಿ ಗೀನ್ ಅವರ 'ಅರ್ಥ್‌ಸೀ' ೧೯೬೮-೨೦೦೧), ಹೀಗೆ ಗಮನಾರ್ಹ ಲೇಖಕರಿಂದ ತೆರೆದುಕೊಂಡ ಈ ಬರವಣಿಗೆ ಅನೇಕ ಲೇಖಕರನ್ನು ಹುಟ್ಟುಹಾಕಿದೆ. ಈ ಬಗೆಯ ಕೃತಿಗಳು ಬರತೊಡಗಿ ಸಾಕಷ್ಟು ಚರ್ಚೆಗಳನ್ನು ಹುಟ್ಟು ಹಾಕಿದವು. ಈ ಪ್ರಕಾರದ ಕುರಿತು ಟಾಲ್ಕಿಯಾನ್‌ನ 'ಆನ್ ಫೇರಿ ಸ್ಟೋರೀಸ್' ಎನ್ನುವ, ಸಾಕಷ್ಟು ಚರ್ಚೆಗೆ ಬಂದ ಲೇಖನವೊಂದನ್ನು ಇಲ್ಲಿ ಉದಾಹರಿಸಬಹುದು. ಜನಪದ ಕತೆಗಳು ಮಕ್ಕಳ ಕತೆಗಳಾಗಿ ತಪ್ಪಾಗಿ ಗ್ರಹಿಸಲ್ಪಡುತ್ತಿರುವುದು, ಅವು ಕಾಲ್ಪನಿಕ ಎನಿಸಿದರೂ ಕಾಲದಂತರದಲ್ಲಿ ತಮ್ಮದೇ ಆದ ಬದುಕಿನ, ಸಾಮಾಜಿಕ ವಾತಾವರಣದ ನಿಯಮಗಳನ್ನು ಅನುಸರಿಸಿಕೊಂಡಿರುವಂಥ ಇನ್ನೊಂದು ಜಗತ್ತಿನ ಬಗೆಗೆ ಹೇಳುತ್ತವೆ. ಹೀಗೆ ಭಿನ್ನವಾಗಿ ಅವನು ವಾದಮಂಡಿಸಿದ್ದು ಅದರಲ್ಲಿದೆ. ಇದೊಂದು ಬಗೆಯಲ್ಲಿ ಹೊಸಗಾಲದ ಪುರಾಣಸೃಷ್ಟಿ ಎನ್ನುವಷ್ಟರ ಮಟ್ಟಿಗೆ ಚರ್ಚೆಗಳು ಕಾಣಿಸುತ್ತವೆ. ಪರಂಪರೆಯ, ಸಮೂಹ, ಜನಾಂಗೀಯ ಒಪ್ಪಿತ ಫ್ಯಾಂಟಸಿಯ ಜಗತ್ತಿನಿಂದ ಇಲ್ಲಿನ ಜಗತ್ತು ಬೇರೆಯದು ಎನ್ನುವುದನ್ನು ಗಮನಿಸಬಹುದು. ಇಲ್ಲಿನ ಜಗತ್ತು ಕಾಲ್ಪನಿಕ ಕಾಲದ, ಸ್ಥಳದ ಅಂತರಗಳಲ್ಲಿ ಕಾಣಿಸಿದ್ದಾಗಿದೆ. ಲೇಖಕ ತಾನೇ ವೈಯಕ್ತಿಕವಾಗಿ ಸೃಷ್ಟಿಸಿಕೊಂಡ ಜಗತ್ತು ಇದಾಗಿದೆ. ಹಾಗಾಗಿ ಹೈಯರ್ ಫ್ಯಾಂಟಸಿಯೆಂಬುದು ವಾಸ್ತವ ಜಗತ್ತಿನಲ್ಲಿ ಯಾವತ್ತೂ ಕಂಡು ಬರದ ಸಂಗತಿಗಳಿಂದ ಕೂಡಿದ ಲೋಕವಾಗಿರುತ್ತದೆ.

ಫ್ಯಾಂಟಸಿಯ ಎರಡು ಪ್ರಮುಖ ವಿಧಗಳಾದ ಇವುಗಳ ನೆರಳಿನಲ್ಲಿ ವಸ್ತು, ಉದ್ದೇಶಗಳಿಗನುಗುಣವಾಗಿ ಅನೇಕ ಬಗೆಗಳನ್ನು ಕಾಣಬಹುದು. ಇವು ಭಾರತದ ಮಟ್ಟಕ್ಕೆ ಹೆಚ್ಚು ಗುರುತಿಸಲ್ಪಡದಿದ್ದರೂ ವಿಶ್ವದ ಮಕ್ಕಳ ಸಾಹಿತ್ಯ ಲೋಕದೊಳಗೆ ಪ್ರಮುಖವಾದ ಸ್ಥಾನಮಾನ ಇದೆ. ಅದರ ಭಾಗವಾಗಿಯೇ ಈ ಮೇಲೆ ಉಲ್ಲೇಖಿಸಿದ ಕೃತಿಗಳು ಹುಟ್ಟಿಕೊಳ್ಳಲು ಸಾಧ್ಯವಾಗಿದೆ.

೩.೩. ಒಂದು ಪ್ರತ್ಯೇಕ ಪ್ರಕಾರವಾಗಿ ಫ್ಯಾಂಟಸಿ..

ಸಾಹಿತ್ಯದಲ್ಲಿ ಫ್ಯಾಂಟಸಿ ಎನ್ನುವುದರ ಕುರಿತು ಯಾವ ಚರ್ಚೆಯಲ್ಲೂ ಕಾಣಿಸದ ಇನ್ನೊಂದು ವಿಧದ ಬಗೆಯನ್ನು ಗುರುತಿಸುವ ಬಗ್ಗೆ ಆನಂದ ಪಾಟೀಲರು ಚರ್ಚಿಸುತ್ತಾರೆ. 'ಫ್ಯಾಂಟಸಿಯು ಅವಾಸ್ತವದ, ಕಾಲ್ಪನಿಕ ಸಂಗತಿಗಳನ್ನು ಮನುಷ್ಯನ ಸಾಧನಗಳಾಗಿ ಬಳಸಿಕೊಳ್ಳುವುದಕ್ಕಿಂತ ಬೇರೆಯಾಗಿ ಫ್ಯಾಂಟಸಿಯೇ ಕತೆಯ ಮುಖ್ಯ ಗುರಿಯಾಗಿಬಿಡುವ ಆಶಯವನ್ನು ಹೇಳುತ್ತದೆ. ಜೇಮ್ಸ್ ಬೆರ‍್ರಿಯ 'ಪೀಟರ್ ಪ್ಯಾನ್' ಕೃತಿಯಲ್ಲಿ ಬಾಲ್ಯವನ್ನು, ಬಾಲ್ಯದ ಸ್ವಚ್ಛಂದತೆಯನ್ನು ಅಳಿಯದೆ ಉಳಿಸಿಕೊಳ್ಳುವ ಬಗೆ ಕಾಣುತ್ತದೆ. ಇಲ್ಲಿ ಕಾಲ್ಪನಿಕ ಅತಿವಾಸ್ತವ ಮನುಷ್ಯನ ಸಾಮಾನ್ಯದ ಆಕಾಂಕ್ಷೆಗಳಿಗೆ ಸಾಧನವಾಗಿ ಬಳಕೆಯಾಗುವುದಿಲ್ಲ, ಬದಲಿಗೆ ವ್ಯಕ್ತಿಯು ಬಾಲ್ಯದಲ್ಲಿಯೇ ಉಳಿದುಬಿಡುವುದನ್ನೇ ಆಶಯವಾಗಿ ಮುಂದಿಡುತ್ತದೆ. ಇದು ಉಳಿದೆಲ್ಲ ಕತೆಗಳಿಗಿಂತ ಬೇರೆಯದೇ ಆದ ಸಂಗತಿಯನ್ನು ಹೇಳುತ್ತಿರುತ್ತದೆ'.

ಇದನ್ನೇ ಮುಂದುವರೆಸುವುದಾದರೆ; ಲಾಫ್ಟಿಂಗ್‌ರ 'ಡಾ. ಡೂ ಲಿಟಲ್' ಕೃತಿ ಕೂಡ ಇಂಥದ್ದಾಗಿದೆ. ಅಲ್ಲಿ ಒಬ್ಬನುರಿತ ಡಾಕ್ಟರ್ ಆಗಿ ವೃತ್ತಿಯಲ್ಲಿ ತೊಡಗಿಕೊಂಡ ವೈದ್ಯ ಎಲ್ಲವನ್ನು ಬಿಟ್ಟು ಪ್ರಾಣಿಗಳ ಲೋಕಕ್ಕೆ ತನ್ನನ್ನು ಒಪ್ಪಿಸಿಕೊಂಡು ಬಿಡುಗಡೆಯನ್ನು ಪಡೆಯುವುದು ಕಾಣುತ್ತದೆ.

ಆನಂದ ಪಾಟೀಲರ ಕೃತಿ 'ಪುಟ್ಟಾರಿ ಆನೆ ಪುಟ್ ಪುಟ್'ನಲ್ಲಿಯೂ ಪುಟ್ಟ ಆನೆ ಕಥಾನಾಯಕಿ ಬಾಲಕಿಯ ಮುಂದಿಡುವ ಹೊಸತು ಹೀಗೆ ಬೇರೆಯದಾದ ಲೋಕವನ್ನು ಪರಿಚಯಿಸುತ್ತದೆ. ಹಾಗಿದ್ದೂ ಮುಖ್ಯಧಾರೆಯ ಸಾಹಿತ್ಯ ಲೋಕ ಈ ಹೊಸಗಾಲದ ಬೆಳೆಯನ್ನು ಪೂರ್ತಿಯಾಗಿ ಪುರಸ್ಕರಿಸಿದಂತೆ ಕಾಣುತ್ತಿಲ್ಲ. ಆ ಬಗೆಯ ಅಸಮಾಧಾನಗಳು ಅಲ್ಲಿ ವ್ಯಕ್ತವಾಗಿರುವುದನ್ನೂ ನೋಡುತ್ತೇವೆ. ಒಟ್ಟಾರೆ ಇಂಗ್ಲಿಷ್ ಜಗತ್ತಿನಲ್ಲಿ ಹೊಸಗಾಲದ ಫ್ಯಾಂಟಸಿ ವಿಶೇಷವಾಗಿಯೇ ಬೆಳೆದಿದೆ, ಬೆಳೆಯುತ್ತಿದೆ. ಅದನ್ನೆಲ್ಲಾ ಗಮನಿಸುತ್ತಾ ಅಲ್ಲಿನ ಒಟ್ಟು ಪ್ರಕಾರಗಳನ್ನು ಹೀಗೆ ಪಟ್ಟಿ ಮಾಡಬಹುದು...

- High or Epic Fantasy
- Low Fantasy
- Magical realism
- Sword and sorcery
- Dark Fantasy
- Fables
- Fairy Tales
- Super hero Fiction[10]

ಇಂಗ್ಲಿಷ್ ಸಾಹಿತ್ಯ ನೋಡುವಾಗ ಇದು ಮೇಲಿನಂತೆ ಬಗೆಬಗೆಯಲ್ಲಿ ಕಾಣುತ್ತದೆ. ಅದು ಕೆಲವು ಲೇಖಕರಲ್ಲಿ ಅವರ ಜೀವನದ ಸಂಗತಿಗಳನ್ನು ಹಿನ್ನೆಲೆಯಾಗಿಸಿಕೊಂಡು ತಾತ್ವಿಕವಾಗಿ ಹುಟ್ಟಿದಂತಿದೆ. ಕೆಲವು ಲೇಖಕರಲ್ಲಿ ಅಗತ್ಯದ ಮಾಧ್ಯಮವಾಗಿ ಬಳಕೆಯಾಗುತ್ತಾ ಅವರು ಬಾಲ್ಯದೊಂದಿಗೆ ಬದಲಾಗುತ್ತಿರುವ ಸಾಮಾಜಿಕ ವಾತಾವರಣದಲ್ಲಿ ತುಡಿಯುವುದನ್ನು ಒಳಗೊಳ್ಳುತ್ತಾ ಬಂದಿದೆ. ಕೆಲವು ಪಠ್ಯಗಳು ಅದನ್ನು ಒಂದು ನಿಗಧಿತ ಕಥಾ ಮಾದರಿ ಎಂದು ಭಾವಿಸಿ ಮಾನವೀಯ ನೆಲೆಯ ಅತ್ಯಂತ ಸೊಗಸಾದ ಕಥಾ ಜಗತ್ತನ್ನು ಕಟ್ಟಿನಿಲ್ಲಿಸಿದುದು ಕಾಣುತ್ತದೆ. ಹೀಗೆ ಫ್ಯಾಂಟಸಿಯು ಸಾಹಿತ್ಯವನ್ನು ಅಭಿವ್ಯಕ್ತಿಸುವ ಒಂದು ಪ್ರಕಾರವಾಗಿ ಬಳಕೆಯಾಗಿರುವುದು ಈ ಮೇಲಿನ ವಿಶ್ಲೇಷಣೆಗಳಿಂದ ಕಂಡು ಬರುತ್ತದೆ.

೩.೪. ಭಾರತೀಯ ಪರಿಸರದಲ್ಲಿ ಫ್ಯಾಂಟಸಿ

ಭಾರತೀಯ ಪರಿಸರದಲ್ಲಿ ಫ್ಯಾಂಟಸಿ ಎನ್ನುವ ಪರಿಭಾಷೆಯಲ್ಲಿಯೇ ಹೊಸಗಾಲದ ಈ ಇಪ್ಪತ್ತೊಂದನೆಯ ಶತಮಾನದಲ್ಲಿ ಹಲವಾರು ಲೇಖಕರು ಕಾಣಿಸಿಕೊಂಡಿದ್ದಾರೆ. ಸುಮಿತ ಬಸು, ಶತುರಜಿತ್‌ನಾಥ್, ಶ್ವೇತಾ ತನೇಜಾ, ತಶಾನ್ ಮೆಹತಾ, ಪ್ರಿಯಾ ಸರುಕ್ಕಾಯ್ ಛಾಬ್ರಿಯಾ, ಶಿವ ರಾಮದಾಸ, ಸುಕನ್ಯಾ ವೆಂಕಟರಾಘವನ್, ಇಂದ್ರದಾಸ, ನಿರ್ಭಯ ಕನೋರಿಯಾ, ಅಮೀಶ್ ತ್ರಿಪಾಠಿ, ಅಮೃತಾ ಪಾಟೀಲ ಹೀಗೆ ಅನೇಕರು ಇಂಗ್ಲೀಷ್‌ನ ಬರಹಗಾರರಾಗಿ ಈ ಬಗೆಯ ಕೃತಿಗಳನ್ನು ತಂದು ಹೊಸ ಓದನ್ನು ಸೃಷ್ಟಿಸುತ್ತಿದ್ದಾರೆ.

ಹೊಸಗಾಲದ ಲೇಖಕರು ಬಹಳಷ್ಟು ಸಲ ಭಾರತೀಯ ಪರಂಪರೆಯ ಪುರಾಣದ ಕಥಾನಕಗಳಿಂದಲೇ ಸ್ಫೂರ್ತಿಗೊಂಡು ಬರೆಯುತ್ತಿರುವುದು ಗಮನಾರ್ಹವಾಗಿದೆ. ಅವರಿಗೆ ಅಲ್ಲಿ ಸಾಕಷ್ಟು ಸಾಮಗ್ರಿ ಸಿಗುತ್ತಿರುವಂತಿದೆ. ರಾಕ್ಷಸರು, ದೇವರುಗಳು, ರಾಮಾಯಣ, ಮಹಾಭಾರತದ ಕಥಾನಕಗಳು, ಶಿವನ ಕಥೆಗಳು ಮುಂತಾಗಿ ನಾನಾ ಬಗೆಯಲ್ಲಿ ಇವು ಕಾಣಿಸಿಕೊಳ್ಳುತ್ತಿವೆ. ಉದಾಹರಣೆಗೆ ಅಮೀಶ್ ತ್ರಿಪಾಠಿ ಅವರ ಬಹು ವಿಸ್ತಾರದ ಕೃತಿ ರಾಮಚಂದ್ರನ ಸುತ್ತಲೇ ಹರಡಿಕೊಂಡು ಮೂರು ಬೃಹತ್ ಕಾದಂಬರಿಗಳಿಗೆ ಕಾರಣವಾಗಿರುವ ಕೃತಿಯನ್ನು ಇಲ್ಲಿ ಹೆಸರಿಸಬಹುದು. ಹಾಗೆಯೇ 'ದಿ ಓಥ್ ಆಫ್ ವಾಯುಪುತ್ರಾಸ್', 'ನಾಗಾಸ್' ಅಂಥ ಕೃತಿಗಳೂ ಇವರಿಂದ ಬಂದಿವೆ. ಅಮೃತಾ ಪಾಟೀಲ ಅವರು 'Adi Parva: Churning of the Ocean and Sauptik: Blood and Flowers' ಕೃತಿಗಳ ಮೂಲಕ ಪುರಾಣದ ದೇವಸುರರ ಕತೆಗಳಿಗೆ ಬಹಳ ವಿಸ್ತಾರವಾಗಿ ತೆರೆದುಕೊಂಡಿದ್ದಾರೆ. ಕನ್ನಡಕ್ಕೂ ಗಿರಡ್ಡಿ ಗೋವಿಂದರಾಜರಿಂದ ಬಂದಿರುವ ದೇವದತ್ತ ಪಟ್ನಾಯಕ ಅವರ 'ಜಯಾ' ಮಹಾಭಾರತದ ಕಥೆಯನ್ನು ಆಶ್ರಯಿಸಿದೆ. ಹೀಗೆ ಹೆಸರಿಸುತ್ತಾ ಹೋಗಬಹುದು.

ಫ್ಯಾಂಟಸಿ ಪರಿಭಾಷೆಯಲ್ಲಿ ಕೇಳದೆಯೇ ಭಾರತೀಯ ಪ್ರಾದೇಶಿಕ ಭಾಷೆಗಳಲ್ಲಿ ಈ ಬಗೆಯ ಪರಂಪರೆಯ ಸಾಮಗ್ರಿಯನ್ನು ಹಿಡಿದುಕೊಂಡು ಸಾಕಷ್ಟು ಕೃತಿಗಳು ಬಂದಿರುವುದನ್ನು ನೋಡಬಹುದು. ಮಹಾಭಾರತದ, ರಾಮಾಯಣದ ಪಾತ್ರಗಳು, ಪ್ರಸಂಗಗಳು ಪದೇ ಪದೇ ವಿಭಿನ್ನ ದೃಷ್ಟಿಕೋನಗಳಲ್ಲಿ ಲೇಖಕರಿಂದ ಪ್ರಸ್ತುತಗೊಳ್ಳುತ್ತಲೇ ಇವೆ. ಕುವೆಂಪು ಅವರಿಂದ ಹಿಡಿದು ಭೈರಪ್ಪನವರೆಗೆ ಸಾಕಷ್ಟು ಲೇಖಕರ ಕೃತಿಗಳನ್ನು ಇಲ್ಲಿ ಹೆಸರಿಸಬಹುದು.

ಈಗಾಗಲೇ ಮೇಲೆ ಹೇಳಿದಂತೆ ಇಲ್ಲಿ ಕಂಡಿಕೊಂಡಿರುವ ಓದುಗರಿಂದ ಅಂತರದಲ್ಲಿರುವ ಕಾಲದ, ಸ್ಥಳದ, ಸೃಷ್ಟಿ ಭಾರತೀಯ ಪರಿಸರದಲ್ಲಿ ಎಲ್ಲರೂ ಒಪ್ಪಿಕೊಂಡುದು, ಜನಜನಿತವಾದುದಾಗಿದೆ. ಅನೇಕ ಸಲ ನಿರ್ದಿಷ್ಟವಾದುದೂ ಆಗಿದೆ. ಆದರೆ ಇಂಗ್ಲೀಷ್‌ನ ಹೊಸಗಾಲದ ಫ್ಯಾಂಟಸಿ ಸೃಷ್ಟಿಸುವ ಜಗತ್ತು ಲೇಖಕನ ವೈಯಕ್ತಿಕ ಕಲ್ಪನೆಯಲ್ಲೇ ಕಂಡುಕೊಂಡಿದ್ದು ಎನ್ನುವುದನ್ನು ಗಮನಿಸಬೇಕು.

ಚಂದ್ರಶೇಖರ ಕಂಬಾರರ ಕೃತಿಗಳು ಮಾತ್ರ ಇನ್ನೊಂದು ಬಗೆಯಲ್ಲಿ ಇದೇ ಫ್ಯಾಂಟಸಿಯನ್ನು ಹೇಳುತ್ತವೆ. ಅವರ ಕೃತಿಗಳನ್ನು ಇದುವರೆಗೂ ಫ್ಯಾಂಟಸಿ ಪರಿಭಾಷೆಯಲ್ಲಿ ವಿಶ್ಲೇಷಣೆ ಮಾಡಿಲ್ಲ ಅಷ್ಟೇ. ಅವರು ನಮ್ಮ ಜನಪದ, ಹಳ್ಳಿಗಾಡಿನ ಕತೆಗಳ ಜಾಡನ್ನು ಹಿಡಿದು ತಮ್ಮ ಕಾಲ್ಪನಿಕ ಜಗತ್ತನ್ನು ಸೃಷ್ಟಿಸಿಕೊಳ್ಳುತ್ತಾರೆ. ಅಲ್ಲಿ ಜನಪದ ಕತೆಗಳಲ್ಲಿ ನಡೆಯುವ ಅತಿವಾಸ್ತವದ ಸಂಗತಿಗಳೂ ನಡೆಯುತ್ತಿರುತ್ತವೆ. ವರ್ತಮಾನದ ಸಮಸ್ಯೆಗಳಿಗೆ ಈ ಹಳ್ಳಿಗಾಡಿನ ಕತೆಗಳಲ್ಲಿ ಪರಿಹಾರ ಸಿಗುತ್ತದೆ ಎನ್ನುವುದು ಅವರ ಅಭಿಪ್ರಾಯ. ಹಾಗಾಗಿ ಸದ್ಯದ ವಾಸ್ತವಕ್ಕೆ ಸ್ಪಂದಿಸಲು ಅವರು ಜನಪದದ ಕಾಲ್ಪನಿಕ ಲೋಕವನ್ನು ಆಶ್ರಯಿಸುತ್ತಾರೆ. ಆದರೆ ಅವರು ಬಳಸುವ ಕತೆಗಳು ಹಳ್ಳಿಗಾಡಿನ ಜನಗಳ ನಡುವೆ ಕೇಳುತ್ತಲೇ ಇರುವ ಕತೆಗಳಾಗಿ ಓದುಗರಿಗೆ ದೂರದವಾಗಿ ಕಾಣುವುದಿಲ್ಲ. ಅಂದರೆ ಇಂಗ್ಲಿಷ್‌ನ ಹೈ ಫ್ಯಾಂಟಸಿಯ ಹಾಗೆ ಇನ್ನೊಂದು ವೈಚಿತ್ರ್ಯದ ಅಪರಿಚಿತ ಲೋಕ ಸೃಷ್ಟಿಗೊಂಡಿದೆ ಎಂದೆನಿಸುವುದಿಲ್ಲ. ಅಷ್ಟರ ಮಟ್ಟಿಗೆ ಕಂಬಾರರ ಪ್ರತಿಸೃಷ್ಟಿ ಹತ್ತಿರದ್ದು ಹಾಗೂ ನಮಗೆಲ್ಲ ಪರಿಚಯದ್ದು ಆಗಿದೆ.

೩.೫. ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಫ್ಯಾಂಟಸಿ ಪರಿಕಲ್ಪನೆ

ಇಂಗ್ಲೀಷಿನಲ್ಲಿ ಫ್ಯಾಂಟಸಿಯ ಕುರಿತು ಇಷ್ಟೆಲ್ಲಾ ಬೆಳವಣಿಗೆಗಳು ಆಗಿದ್ದರೂ ಭಾರತದ ಪ್ರಾದೇಶಿಕ ಭಾಷೆಗಳಲ್ಲಿ ಹುಟ್ಟಿಕೊಂಡ ಫ್ಯಾಂಟಸಿ ಈ ಯಾವ ಹೊಸತಿಗೂ ಸ್ಪಂದಿಸದೆ ಹಳೆಯ ಜಾಡಿನಲ್ಲೇ ಉಳಿಯುತ್ತಾ ಬಂದಿದೆ. ಪರಂಪರೆಯಲ್ಲಿರುವ ಪುರಾಣ, ಚರಿತ್ರೆ, ಜನಪದ ಕಥೆಗಳ ಕಲ್ಪನಾ ಜಗತ್ತಿನ ಹಿನ್ನೆಲೆಯಲ್ಲಿಯೇ ಮಕ್ಕಳ ಸಾಹಿತ್ಯ ರಚನೆಯಾಯಿತು. ಕನ್ನಡದ ಮಕ್ಕಳ ಸಾಹಿತ್ಯವನ್ನೂ ಕೂಡ ಇದೇ ಹಿನ್ನೆಲೆಯಲ್ಲಿ ವಿಶ್ಲೇಷಿಸಬೇಕಾಗುತ್ತದೆ. ಪಂಚತಂತ್ರ, ಜನಪದ ಕತೆಗಳು, ಪುರಾಣ, ಚರಿತ್ರೆ ಇವೆಲ್ಲಾ ಕನ್ನಡದ ಮಕ್ಕಳ ಸಾಹಿತ್ಯದ ಮೇಲೆ ತುಂಬಾ ಪ್ರಭಾವಿಸಿವೆ. ಹತ್ತೊಂಬತ್ತನೇ ಶತಮಾನದ ಕೊನೆಯಲ್ಲಿ ಮತ್ತು ಇಪ್ಪತ್ತನೇ ಶತಮಾನದ ಆರಂಭದಲ್ಲಿ ಇಂಗ್ಲಿಷ್‌ನ ರಮ್ಯ ಸಾಹಿತ್ಯ ಪ್ರೌಢರ ಬರವಣಿಗೆಗೆ ಪ್ರಭಾವಿಸಿದಷ್ಟು, ಅಲ್ಲಿನ ವಿಪುಲವಾದ ಮಕ್ಕಳ ಸಾಹಿತ್ಯದ ಯಾವ ಪ್ರಭಾವವನ್ನೂ ಕನ್ನಡ ಸಾಹಿತ್ಯ ಓದುಗರು ಅನುಭವಿಸಲಿಲ್ಲ. ಶೈಕ್ಷಣಿಕ ಉದ್ದೇಶದ ಹಿನ್ನೆಲೆಯಲ್ಲಿ ಆರಂಭಗೊಂಡ ಮಕ್ಕಳ ಸಾಹಿತ್ಯ ಬರವಣಿಗೆ ನಂತರ ಸ್ವತಂತ್ರ ಪ್ರಕಾರವಾಗಿ ಬೆಳೆಯಲು ಜನಪದ ಸಾಹಿತ್ಯ, ಪಂಚತಂತ್ರ ಕೃತಿಗಳೇ ಆಶ್ರಯವಾಗಿ ಒದಗಿಬಂದವು. ಇದುವರೆಗೆ ಬಂದ ಒಟ್ಟು ಮಕ್ಕಳ ಸಾಹಿತ್ಯ ರಚನೆಯಲ್ಲಿ ಇವುಗಳ ಪಾಲು ಅಗ್ರಗಣ್ಯವಾಗಿದೆ. ಕನ್ನಡದಲ್ಲಿ ಹೀಗೆ 'ಫ್ಯಾಂಟಸಿ' ಪರಿಕಲ್ಪನೆ ಬಳಕೆಯಾಗದೆ ಪರಂಪರೆಯಲ್ಲಿ ಆಗಲೇ ಇದ್ದ ಅತಿವಾಸ್ತವ, ಅಸಂಗತ, ಅದ್ಭುತ ಕಲ್ಪನೆಯ ಸರಕು ತನ್ನಷ್ಟಕ್ಕೆ ಹರಡಿಕೊಂಡಿದೆ.

ಜನಪದರಿಂದ ಪದೇ ಪದೇ ಆಯ್ದುಕೊಂಡ ಕತೆಗಳ ಲೋಕದಲ್ಲಿ ಈ ಅತಿವಾಸ್ತವ ಸಂಗತಿ ಸಹಜವಾಗಿ ಇದೆ. ಇದು ಅಲ್ಲಿ ಯಾಕೆ ಹಾಗೆ ಒಂದು ತಪ್ಪದ ಗುಣವಾಗಿದೆ ಎನ್ನುವುದಕ್ಕೆ

ಜನಪದ ವಿಷಯದ ಅಧ್ಯಯನದ ಪುಟಗಳನ್ನು ತೆಗೆದು ನೋಡಬೇಕಾಗುತ್ತದೆ. ಅಲ್ಲಿ ಅತಿವಾಸ್ತವದ ಸಾಮಗ್ರಿ ವಿಪುಲವಾಗಿ ಇರುವ ಹಾಗೆ ಅವರವೇ ನಡುವಿನ ಬದುಕಿನ ಸಂಗತಿಗಳ ಕಥಾರೂಪಗಳೂ ಇವೆ, ಉದಾಹರಣೆಗೆ ಅತ್ತೆ ಅಳಿಯನ ಪ್ರಸಂಗಗಳು, ಮಲತಾಯಿಯ ಪ್ರಸಂಗಗಳು ಮುಂತಾದುವು. ಅಲ್ಲಿ ಅಘಟಿತ ಅತಿವಾಸ್ತವ ನಡೆಯದಿದ್ದರೂ ಅತಿ ರಂಜಿತ ಸಂಗತಿ ಇರುತ್ತದೆ. ಜನಪದ ಸಾಮಗ್ರಿಯೇ ಬಹುಶಃ ಇದ್ದುದನ್ನು ಇದ್ದಹಾಗೆ ನೋಡಲು ಬಯಸುವುದಿಲ್ಲ ಎಂದು ಕಾಣುತ್ತದೆ. ಅಥವಾ ಅಲ್ಲಿ ಕತೆ ಎನ್ನುವುದು(ಪದ್ಯದಲ್ಲಾಗಲಿ,ಗದ್ಯದಲ್ಲಾಗಲಿ)ಅತಿರಂಜಿತ ಸಾಮಗ್ರಿಯೇ ಆಗಿರಬೇಕಾಗುತ್ತದೆ.

ಕನ್ನಡದ ಮಕ್ಕಳ ಕಥಾ ಲೋಕ ಜನಪದರ ಕತೆಗಳನ್ನು ವಿಪುಲವಾಗಿ ಮಕ್ಕಳಿಗಾಗಿ ಎಂದು ಹೇಚುಪೇಚಿಲ್ಲದೆ ತೆಗೆದುಕೊಂಡಿರುವುದು ಕಾಣುತ್ತದೆ. ಅದು ಮಕ್ಕಳಿಗಾಗಿಯೇ ಇರುವ ಸಾಮಗ್ರಿ ಎನ್ನುವ ಹಾಗೆ ಭಾವಿಸಿದಂತೆ ಅಲ್ಲಿ ಆಯ್ಕೆಗೆ ಹೋಗದಿರುವುದೇ ಬಹಳಷ್ಟು ಸಲ ಎದ್ದುಕಾಣುತ್ತದೆ. ಬಹುಶಃ ಅಲ್ಲಿನ ಅವಾಸ್ತವ ಸಂಗತಿಯೇ ಬಲು ದೊಡ್ಡ ಕಾರಣವಾಗಿರಬಹುದು. ಆದರೆ ಅಲ್ಲಿನ ಬಹುಪಾಲು ಈ ಪ್ರಸಂಗಗಳೆಲ್ಲಾ ದೊಡ್ಡವರ ನಡುವೆ ನಡೆಯುವ ಬದುಕಿನ ವ್ಯವಹಾರಗಳೇ ಆಗಿರುತ್ತವೆ ಎನ್ನುವುದನ್ನು ಗಮನಿಸಬೇಕು. ಮೊದಲಿಗೆ ಇಂಥ ಕತೆಗಳನ್ನು ಪಂಜೆ ಮಂಗೇಶರಾಯರು ಮಕ್ಕಳ ಪಠ್ಯ ಪುಸ್ತಕಗಳಲ್ಲಿ ಆಯ್ದುಕೊಳ್ಳುವಾಗ ಒಂದು ಬಗೆಯ ಆಯ್ಕೆಗೆ ಇಳಿದಿರುವುದು ಸ್ಪಷ್ಟವಾಗಿ ಕಾಣುತ್ತದೆ. ಅಲ್ಲಿ ಹೆಚ್ಚಾಗಿ ರಂಜನೆಯ ಸರಕು, ಮಕ್ಕಳನ್ನು ಮುದಗೊಳಿಸುವ ಸರಕು ಇದೆ. ಆದರೆ ಈ ಬಗೆಯ ಆಯ್ಕೆಯನ್ನು ಎಷ್ಟು ಜನ ಮುಂದೆ ಮಾಡಿಕೊಂಡರು ಎಂಬುದೇ ಅಧ್ಯಯನ ಮಾಡಬೇಕಾದ ಸಂಗತಿಯಾಗಿದೆ. ಜನಪದದ ಪರಂಪರೆಯ ಬೇರಿನಲ್ಲಿ ಕಲ್ಪನೆಯ ವಸ್ತು ಹಿಡಿದು, ಮಕ್ಕಳ ಅನಂತ ಜಗತ್ತಿಗೆ ಪ್ರವೇಶ ಕೊಡುವ ಫ್ಯಾಂಟಸಿ ಕಥೆಗಳು ಕನ್ನಡದಲ್ಲಿ ತುಂಬಾ ಬಂದಿವೆ. ಇವುಗಳನ್ನೆಲ್ಲಾ ಯಾರೂ ಫ್ಯಾಂಟಸಿ ಎಂದು ಹೆಸರಿಸಿಲ್ಲ. ಆದರೆ ಈಗ ಅವುಗಳನ್ನೆಲ್ಲಾ ಈ ಪರಿಕಲ್ಪನೆಯಲ್ಲಿ ಚರ್ಚಿಸಲಾಗುವುದು.

ಇಪ್ಪತ್ತನೇ ಶತಮಾನದಲ್ಲಿ ಕನ್ನಡಕ್ಕೆ ಹೊರತಾದ ಅನೇಕ ಕೃತಿಗಳು ನಾವು ಓದುವಂತಾಯಿತು. ಅದರಲ್ಲಿ ವಿರಳವಾಗಿಯಾದರೂ ಮಕ್ಕಳ ಕೃತಿಗಳೂ ಸೇರಿಕೊಂಡುದು ಈ ಮಟ್ಟಿಗೆ ಖುಷಿಯ ವಿಚಾರ. ಫ್ಯಾಂಟಸಿಯ ಹುಲುಸಾದ ಫಲವನ್ನು ಕಂಡ ಇಂಗ್ಲಿಷ್ ಕೃತಿಗಳ ಓದು ಕನ್ನಡಕ್ಕೆ ಯಾವತ್ತಿಗೂ ಅಗತ್ಯದ್ದು. ಈ ಹಿನ್ನೆಲೆಯಲ್ಲಿ ಅನುವಾದಗೊಂಡ ಕೆಲ ಮಕ್ಕಳ ಕೃತಿಗಳೆಂದರೆ; ಜಿ.ಪಿ.ರಾಜರತ್ನಂ ಅನುವಾದಿಸಿದ 'ಬ್ಯಾರನ್ ಮಂಕ್ ಹೌಸ್', ನೀಲತ್ತಹಳ್ಳಿ ಕಸ್ತೂರಿಯವರು ಅನುವಾದಿಸಿದ ಹ್ಯಾನ್ಸ್ ಕ್ರಿಶ್ಚಿಯನ್ ಆಂಡರ್‌ಸನ್ ಅವರ 'ತಗಡಿನ ಸಿಪಾಯಿ' ('ಟಿನ್ ಸೋಲ್ಜರ್') ಕಾದಂಬರಿ ಮತ್ತು ನಾ.ಕಸ್ತೂರಿ ಅವರು ಕನ್ನಡಕ್ಕೆ ತಂದ ಲೂಯೀಸ್ ಕೆರೋಲ್‌ರ 'ಪಾತಾಳದಲ್ಲಿ ಪಾಪಚ್ಚಿ' ('ಅಲೀಸ್ ಇನ್ ವಂಡರ್‌ಲ್ಯಾಂಡ್'), ಶಂಕರಾನಂದರು ಅನುವಾದಿಸಿದ ರುಡ್‌ಯಾರ್ಡ್

ಕಿಪ್ಲಿಂಗ್ ಅವರ 'ಕಾಡಿನ ಕಥೆ' (ಜಂಗಲ್‌ಬುಕ್), ಎಮ್.ಎಸ್.ಕೆ. ಪ್ರಭು ಅವರ 'ಪೋಕರಿ ಪಾಪಣ್ಣನ ಪರಾಕು' (ಪಿನಾಕಿಯೊ), ಕುವೆಂಪು ಅವರ 'ಬೊಮ್ಮನಹಳ್ಳಿಯ ಕಿಂದರಿ ಜೋಗಿ' ('ದಿ ಪೈಡ್ ಪೈಪರ್ ಆಫ್ ಹ್ಯಾಮ್ಲಿನ್') ಈ ತರಹದ ಕೆಲಸಗಳಿಂದ ಹೊಸ ರೀತಿಯ ಕಥೆಗಳು ಕನ್ನಡಕ್ಕೇನೋ ಬಂದವು. ಆದರೆ ಇವುಗಳನ್ನು ಯಾರೂ ಅನುಕರಿಸಲಿಲ್ಲ. ಬದಲಾಗಿ ಈ ಹಿಂದೆ ಚರ್ಚಿಸಿದಂತೆ ನಮ್ಮ ಪರಂಪರೆಯ ಸರಕುಗಳನ್ನೇ ಮತ್ತೆ ಮತ್ತೆ ತಮ್ಮ ಬರಹಗಳಲ್ಲಿ ತರುತ್ತಾ ಬಂದರು. ಇದರ ಹೊರತಾಗಿಯೂ ಕನ್ನಡದ ಮಕ್ಕಳ ಸಾಹಿತ್ಯದ ಆರಂಭದಲ್ಲಿಯೇ ಹೊಸ ಪ್ರಯೋಗಗಳನ್ನು ಮಾಡಿದ ಲೇಖಕರಾದ ಮೇವುಂಡಿ ಮಲ್ಲಾರಿ ಎನ್ನುವವರು ಸಿ.ಎಸ್.ಲೂಯಿಸ್ ಅವರ 'ನಾರ್ನಿಯಾ' ಕೃತಿಯ ರೀತಿಯಲ್ಲಿಯೇ ಕಿಟಕಿಯಿಂದ ವಿಚಿತ್ರ ಲೋಕಕ್ಕೆ ಹೋಗಿಬಿಡುವ ಪ್ರಸಂಗವಿರುವ 'ತಿರುವು ಮುರುವು' ಕಥೆಯನ್ನು ಸೃಷ್ಟಿಸಿದ್ದು ಮಾತ್ರ ಕಂಡು ಬರುತ್ತದೆ.

ಹೊಸಗಾಲದ ಮಕ್ಕಳ ಕಥಾಲೋಕದಲ್ಲಿ ವಿರಳವೆನ್ನುವಷ್ಟು ಫ್ಯಾಂಟಸಿ ಕಾಣಿಸಿಕೊಂಡಿದೆ. ಇಪ್ಪತ್ತನೇ ಶತಮಾನದ ಕೊನೆಯಲ್ಲಿ ಈ ಬಗೆಯ ಹೊರಳು ಕಾಣಿಸಿಕೊಂಡಿದೆ. ಹೀಗೆ ಕಾಣಿಸಿಕೊಂಡಿರುವ ಬರಹಗಳು ಎಂಥ ಪ್ರಭಾವಗಳನ್ನು ಹೇಳುತ್ತಿವೆ, ಅವುಗಳ ಸ್ವರೂಪವೆಂಥದು, ಲೇಖಕರ ಅಗತ್ಯಗಳೇನು ಮುಂತಾಗಿ ಚರ್ಚೆಗಿಳಿಯುವುದು ಪ್ರಬಂಧದ ಮುಖ್ಯ ಉದ್ದೇಶವೇ ಆಗಿದೆ. ಹೊಸಗಾಲದ ಕಥಾಲೋಕ ಪರಂಪರೆಯ ಸರಕಿನಿಂದ ಬಿಡುಗಡೆ ಪಡೆದರೂ ವಾಸ್ತವದ ಆಕರ್ಷಣೆಯನ್ನು ಹೆಚ್ಚು ಅಪೇಕ್ಷಿಸುತ್ತಿದೆ. ಹಾಗಾಗಿ ಕತೆಗಳು, ಕಾದಂಬರಿಗಳು ಪ್ರಬುದ್ಧರ ಲೋಕದಲ್ಲಿ ಕಂಡ ಹಾಗೆ ಇಲ್ಲಿಯೂ ಕಾಣತೊಡಗಿವೆ. ವಾಸ್ತವದ ನಮ್ಮ ಸುತ್ತಲಿನವೇ ಅನುಭವವನ್ನು ಇರಿಸಿಕೊಂಡು ಬರೆಯಲೆಳಸುವ ಲೇಖಕರು ತಮ್ಮದೇ ಅಗತ್ಯಗಳಿಗೆ ಸ್ಪಂದಿಸಿ ಬರೆಯುತ್ತಿದ್ದಾರೆ, ಹಾಗಾಗಿ ಅವರ ಕೃಷಿ ಅವರದೇ ಆದ ಅನುಭವದ ಹಿನ್ನೆಲೆಯಲ್ಲಿ ವಿಶೇಷವಾಗಿ ಕಾಣತೊಡಗಿದೆ. ಈಗಾಗಲೇ ಪ್ರಬುದ್ಧರ ಲೋಕದಲ್ಲಿ ಕಾಣಿಸಿಕೊಂಡಿರುವ ಕಥಾಮಾದರಿಗಳು ಸಾಕಷ್ಟು ಇರುವುದರಿಂದ, ಮಕ್ಕಳಿಗಾಗಿ ಬರೆಯುವಾಗ ಅವುಗಳ ಮಾದರಿಗಳಲ್ಲಿ ಬರೆಯುವುದು ಲೇಖಕರಿಗೆ ಅನುಕೂಲಕರವೂ, ಸುಲಭವೂ, ಅಗತ್ಯವೂ ಆಗಿರುವಂತಿದೆ. ಹಾಗಾಗಿ ಪ್ಯಾಂಟಸಿ ಅಷ್ಟಾಗಿ ಮುನ್ನೆಲೆಗೆ ಬರುತ್ತಿಲ್ಲ. ವಿರಳವಾಗಿ ಕೆಲವರು ಇದನ್ನು ಪ್ರಯೋಗಿಸುತ್ತಿದ್ದಾರೆ. ಬರುವ ದಿನಗಳಲ್ಲಿ ಇವುಗಳೇ ದಾರಿ ಮಾಡಿಕೊಳ್ಳಬೇಕು. ಪ್ರಸ್ತುತ ಪ್ರಬಂಧ ಈ ಎಲ್ಲ ಸಂಗತಿಗಳಿಗೆ ಮುಖಾಮುಖಿಯಾಗಲಿದೆ.

ಕೊನೆ ಟಿಪ್ಪಣಿಗಳು

೧. ಫ್ಯಾಂಟಸಿ, ವಿಕಿಪಿಡಿಯಾ

೨. The Cambridge Engish Dictionary

೩. Mackmillan Dictionary

೪. Longman Dictionary of Contemporay English

೫. ಆನಂದ ಪಾಟೀಲ, ಮಕ್ಕಳ ಸಾಹಿತ್ಯ : ಓದು ಒಲವು ಪತ್ರಿಕೆಯ ಮೇ–ಆಗಸ್ಟ್ ೨೦೧೬ರ ಸಂಚಿಕೆಯ ಲೇಖನ, ಪುಟ, ೦೪

೬. ಲೋಯರ್ ಫ್ಯಾಂಟಸಿ, ವಿಕಿಪಿಡಿಯಾ

೭. ಹೈಯರ್ ಫ್ಯಾಂಟಸಿ, ವಿಕಿಪಿಡಿಯಾ

೮. J.R.R.Tolkien, On Fairy-stories, heritagepodcast.com, ಇದು ಜೆ.ಆರ್.ಆರ್.ಟಾಲ್ಕಿನ್‌ನ ಸುಪ್ರಸಿದ್ಧ ಪ್ರಬಂಧ. ಇದು ಆಧುನಿಕ ಮಕ್ಕಳ ಸಾಹಿತ್ಯದಲ್ಲಿ ಫ್ಯಾಂಟಸಿ ಪರಿಭಾಷೆಗೆ ಹೊಸ ದೃಷ್ಟಿಕೋನವನ್ನು ನೀಡಿತು.

೯. ಆನಂದ ಪಾಟೀಲ, ಮಕ್ಕಳ ಸಾಹಿತ್ಯ : ಓದು ಒಲವು ಪತ್ರಿಕೆ, ಪು. ೦೨

೧೦. Nicola Alter, Fantasy sub-Genres, ಪು. ೦೧

ಅಧ್ಯಾಯ : ನಾಲ್ಕು

ಕನ್ನಡ ಮಕ್ಕಳ ಕಥನ ಸಾಹಿತ್ಯ: ಪರಂಪರೆಯ ಕಥೆಗಳ ವಿನ್ಯಾಸ ಮತ್ತು ಸಾಮುದಾಯಿಕ ಫ್ಯಾಂಟಸಿ

೪.೧. ಜನಪದ ಪರಂಪರೆ

೪.೧.೧. ಜನಪದ ಪರಂಪರೆಯ ಆಶಯಗಳು

೪.೧.೧.೧. ಮಗು ಮತ್ತು ಫ್ಯಾಂಟಸಿ

೪.೧.೧.೨. ಗ್ರಾಮೀಣ ಜಗತ್ತು ಮತ್ತು ಫ್ಯಾಂಟಸಿ

೪.೧.೧.೩. ಅಜ್ಜಿ ಕಥೆಗಳು ಫ್ಯಾಂಟಸಿ

೪.೧.೨. ಮಕ್ಕಳಿಗಾಗಿ ಮರು ನಿರೂಪಿಸಿದ ಜನಪದ ಕಥೆಗಳು

೪.೧.೨.೧. ಕಥೆಗಳ ಆಯ್ಕೆ ಮತ್ತು ಫ್ಯಾಂಟಸಿ

೪.೧.೨.೨. ಹೊಸತಿನ ಆರಂಭ ಮತ್ತು ಜನಪದ ಕಥೆಗಳು

೪.೧.೨.೩. ನೀತಿ ಪ್ರಧಾನ ಕಥೆಗಳು ಮತ್ತು ಫ್ಯಾಂಟಸಿ

೪.೧.೨.೪. ಸಾಮಾಜಿಕ ಕಥಾ ಹಂದರದ ತೆಳು ಫ್ಯಾಂಟಸಿ

೪.೧.೨.೫. ಒಗಟುಗಳು ಮತ್ತು ಫ್ಯಾಂಟಸಿ

೪.೧.೨.೬. ರಂಜನ ಪ್ರಾಧಾನ್ಯ ಮತ್ತು ಫ್ಯಾಂಟಸಿ

೪.೧.೨.೭. ಅಶಕ್ತರು ಮತ್ತು ಫ್ಯಾಂಟಸಿ

೪.೧.೨.೮. ಎಳೆಯ ಮಕ್ಕಳು ಮತ್ತು ಫ್ಯಾಂಟಸಿ

೪.೧.೩. ವರ್ತಮಾನದ ಅನುಸಂಧಾನ ಮತ್ತು ಫ್ಯಾಂಟಸಿ

೪.೨. ಶಿಷ್ಟ ಪರಂಪರೆ

೪.೨.೧. ಅಧ್ಯಾತ್ಮಿಕ ಆದರ್ಶಗಳು, ದೈವೀ ಸಂಗತಿಗಳ ಸುತ್ತ ಹರಡಿಕೊಂಡಿರುವ ಫ್ಯಾಂಟಸಿ.

- ೪.೨.೧.೧. ಆಧ್ಯಾತ್ಮ ಮತ್ತು ಫ್ಯಾಂಟಸಿ
- ೪.೨.೧.೨. ವೈರಾಗ್ಯ ಮತ್ತು ಫ್ಯಾಂಟಸಿ
- ೪.೨.೨.೩. ಆದರ್ಶ ಪಾತ್ರಗಳು ಮತ್ತು ಫ್ಯಾಂಟಸಿ

೪.೨.೨. ಮನುಷ್ಯನ ಲೌಕಿಕದ ಬದುಕಿನ ಸುತ್ತ ಹರಡಿಕೊಂಡಿರುವ ಫ್ಯಾಂಟಸಿ.

- ೪.೨.೨.೧. ಜ್ಞಾನಾರ್ಜನೆಯ ಕಥೆಗಳು ಮತ್ತು ಫ್ಯಾಂಟಸಿ
- ೪.೨.೨.೨. ಜಾತಕ ಕಥೆಗಳು ಮತ್ತು ಫ್ಯಾಂಟಸಿ
- ೪.೨.೨.೩. ನೀತಿ ಚಿಂತಾಮಣಿ ಮತ್ತು ಫ್ಯಾಂಟಸಿ

ಅಧ್ಯಾಯ : ನಾಲ್ಕು

ಕನ್ನಡ ಮಕ್ಕಳ ಕಥನ ಸಾಹಿತ್ಯ: ಪರಂಪರೆಯ ಕಥೆಗಳ ವಿನ್ಯಾಸ ಮತ್ತು ಸಾಮುದಾಯಿಕ ಫ್ಯಾಂಟಸಿ

ಪ್ರವೇಶ

ಭಾರತೀಯ ಮಕ್ಕಳು ಎಂದುಕೊಳ್ಳುವ ದೊಡ್ಡ ಸಮುದಾಯವು ಪರಂಪರೆಯಿಂದ ಬಂದ ಕತೆಗಳನ್ನು ಎರಡು ಬಗೆಯಲ್ಲಿ ಆಸ್ವಾದಿಸುತ್ತಾ ಬಂದಿದೆ. ಒಂದು ಜನಪದೀಯವಾದ ಹಳ್ಳಿಗಾಡಿನ, ಬುಡಕಟ್ಟಿನ ಆಯಾ ಭಾಷೆಗಳಲ್ಲಿ ಹರಡಿಕೊಂಡಿರುವ ಕಥಾ ಜಗತ್ತು. ಇನ್ನೊಂದು ಧಾರೆ ಶಿಷ್ಟ ಪರಂಪರೆಯದು. ಸಾಮಾನ್ಯವಾಗಿ ಸಂಸ್ಕೃತದಲ್ಲಿ ರೂಪುಗೊಂಡ, ಅದು ಕೇಳುವಿಕೆಯ ಶೃತಿ ಪರಂಪರೆಯೂ ಆದೀತು, ಬರಹರೂಪ ಪಡೆದ ಬಗೆಯೂ ಆಗಿರಬಹದು. ಈ ಬಗೆಯ ಪರಂಪರೆಯ ಕತೆಗಳು ನೇರವಾಗಿ ಕತೆಗಳಾಗಿಯೇ ಕಾಣಿಸಿಕೊಂಡಿರಬಹುದು, ಹಲವಾರು ಉದ್ದೇಶಕ್ಕೆ ಬಳಸಿಕೊಂಡ ಪರಿಕರದ ಭಾಗವಾಗಿಯೂ ಇರಬಹುದು, ದೀರ್ಘ ಕಥಾನಕಗಳಲ್ಲಿ ಸೇರಿಕೊಂಡೂ ಇರಬಹುದಾಗಿದೆ.

ಈ ಎರಡೂ ಧಾರೆಗಳನ್ನು ಪರಂಪರೆಯ ಫ್ಯಾಂಟಸಿ ಎಂದು ಒಂದೆಡೆ ಸೇರಿಸಲಾಗಿದೆ. ಇವು ನಮ್ಮ ನಡುವಿನ ಕಾಲದಲ್ಲಿ, ನಮ್ಮ ಪರಿಸರದಲ್ಲಿ ನಡೆಯುತ್ತಿರುವ ಸಂಗತಿಗಳಲ್ಲ. ಹಾಗಾಗಿ ಈ ಸೇರ್ಪಡೆ ಯುಕ್ತವಾದುದಾಗಿದೆ. ಇದಲ್ಲದೆ, ಬೇರೆ ಒಂದು ಸಾಮಾಜಿಕ ವ್ಯವಸ್ಥೆಯ ಬೇರೊಂದು ಕಾಲ್ಪನಿಕ ಲೋಕದಲ್ಲಿ ಸಂಭವಿಸುವಂಥವು ಎನ್ನುವ ದೊಡ್ಡ ಕಾರಣವನ್ನು ನೀಡಬಹುದು. ಇಂಥಲ್ಲಿ ಫ್ಯಾಂಟಸಿಯು ಅದ್ಭುತ ಮಾಯಾಜಾಲ ಸೃಷ್ಟಿಯಂತಹ ಕಾಲ್ಪನಿಕ ಲೋಕ ಕಂಡಹಾಗೆಯೇ ಎಲ್ಲ ಕತೆಗಳಲ್ಲಿ ಚಮತ್ಕಾರಿಕ ವಾಸ್ತವತೇರ ಸಂಗತಿಗಳು ನಡೆಯುತ್ತವೆ ಎನ್ನುವಂತಿಲ್ಲ. ವಾಸ್ತವೇತರ ಪ್ರಸಂಗಗಳು ನಡೆಯುತ್ತಿರುವಂತೆಯೇ ನಡೆಯದೆ ಇರುವ ಕತೆಗಳೂ ಇರುತ್ತವೆ.

ಪ್ರಾಣಿಗಳ ಕಥೆಗಳು ಪ್ರತ್ಯೇಕವಾಗಿ ಕಾಣುವ ಹಾಗೆ ಮನುಷ್ಯರೊಡನೆ ಬೆರೆತು ಚಿತ್ರಣಗೊಂಡಿರುವ ನಾನಾ ಬಗೆಯ ಕತೆಗಳು ಸಿಗುತ್ತವೆ. ಪುನರ್ಜನ್ಮವನ್ನು ವ್ಯಾಪಕವಾಗಿ ಒಪ್ಪಿಕೊಂಡಿರುವ ಪರಂಪರೆಯಲ್ಲಿ ಪ್ರಾಣಿ ಕಾಣಿಸಿಕೊಳ್ಳುವುದು ತೀರಾ ವಿಶೇಷ ಸಂಗತಿಯೂ ಆಗುವುದಿಲ್ಲ. ಹಾಗೆಯೇ ಹಾಸ್ಯದ, ಚತುರತೆಯ, ಮಾನವ ಸ್ವಭಾವದ ನಾನಾ ಬಗೆಯ ಚಿತ್ರಣದ ಕತೆಗಳೂ ಇಲ್ಲಿ ಕಾಣುತ್ತವೆ.

ಉದಾಹರಣೆಗೆ ಹಳ್ಳಿಗಾಡಿನ ಅತ್ತೆ ಅಳಿಯನ ಕತೆಗಳು ಪೆದ್ದುತನ, ಹಾಸ್ಯ ಉಳ್ಳವುಗಳೇ ಆಗಿದ್ದು, ಅಲ್ಲಿ ರಂಜನೀಯ ಸಂಗತಿಗಳು ಅಥವಾ ಅತಿರಂಜಿತ ಸಂಗತಿಗಳು ನಡೆಯುತ್ತವೆಯೇ ವಿನಾ ಯಾವ ಅವಾಸ್ತವ ಸಂಗತಿಗಳು ನಡೆಯದೇ ಇರುವ ಸಂಭವವಿರುತ್ತದೆ. ಹಾಗೆಯೇ ಉಪನಿಷತ್ತಿನ, ರಾಮಾಯಣ ಮಹಾಭಾರತದ ಪ್ರಸಂಗಗಳಲ್ಲಿ ಕೆಲವೆಲ್ಲ ಆಯ್ದ ಪ್ರಸಂಗಗಳು ಯಾವ ಅತಿವಾಸ್ತವ ಸಂಗತಿಗಳನ್ನು ಹೊಂದಿರಲಿಕ್ಕಿಲ್ಲ. ಆದರೆ ಇವೆಲ್ಲ ನಮ್ಮ ನಡುವೆ ನಡೆಯುತ್ತಿರುವುವಲ್ಲ, ಇನ್ನೊಂದು ಕಾಲಕ್ಕೆ ಸೇರಿದುವು ಎನ್ನುವ ಕಾರಣಕ್ಕೆ ನಮ್ಮಿಂದ ಅಂತರದಲ್ಲಿ ನಿಲ್ಲಬಲ್ಲವಾಗಿರುತ್ತವೆ. ತೀರಾ ಅತಿವಾಸ್ತವ, ಅತ್ಯಂತ ಕುತೂಹಲ ಹುಟ್ಟಿಸುವ ಅದ್ಭುತ, ರೋಚಕ ಸಂಗತಿಗಳಿಂದ ಹಿಡಿದು ತೀರಾ ಸಾಮಾನ್ಯವೆನಿಸುವ ಮನುಷ್ಯನ ನಡವಳಿಕೆಗಳವರೆಗೆ ದೊಡ್ಡ ಕತೆಗಳ ಲೋಕವನ್ನೇ ಭಾರತೀಯ ಪರಂಪರೆಯಲ್ಲಿ ನೋಡಬಹುದು.

ಪ್ರಸ್ತುತ ಅಧ್ಯಾಯದಲ್ಲಿ ಜನಪದೀಯವಾಗಿ ಹರಿದುಬಂದಿರುವ, ಈಗಲೂ ನಮ್ಮ ನಡುವೆ ಬಳಕೆಯಲ್ಲಿರುವ ಕಥಾಲೋಕ ಮಕ್ಕಳ ಕಥಾಜಗತ್ತಿಗೆ ಪ್ರವೇಶಗೊಂಡಿದ್ದನ್ನು ವಿಶ್ಲೇಷಣೆ ಮಾಡಲಾಗಿದೆ. ಶಿಷ್ಟ ಎನಿಸಿಕೊಳ್ಳುವ ಭಾರತದುದ್ದಕ್ಕೂ ಹರಡಿರುವ ಪುರಾಣ ಮೂಲದ, ಉಳಿದಂತೆ ಅನೇಕ ಕಥಾಶ್ರೋತೃಗಳ ಕತೆಗಳು ಮತ್ತೆ ಮಕ್ಕಳ ಪುಸ್ತಕವಾಗಿ ಕನ್ನಡದಲ್ಲಿ ಬಂದ ಕೃತಿಗಳಲ್ಲಿ ಪ್ರಾತಿನಿಧಿಕ ಕೃತಿಗಳನ್ನು ಅಧ್ಯಯನಕ್ಕೆ ಇಟ್ಟುಕೊಂಡು ವಿಶ್ಲೇಷಣೆ ಮಾಡಲಾಗಿದೆ. ಪ್ರಬಂಧದ ಮುಖ್ಯ ವಿಷಯ ಫ್ಯಾಂಟಸಿಯ ಸ್ವರೂಪವಾದುದರಿಂದ ಇಂಥ ಪರಂಪರೆಯ ಹರಿವಿನಲ್ಲಿ ಫ್ಯಾಂಟಸಿ ಹೇಗೆಲ್ಲ ಕಾಣಿಸಿಕೊಂಡಿದೆ ಎನ್ನುವುದನ್ನು ಪತ್ತೆ ಹಚ್ಚುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

೪.೧. ಜನಪದ ಪರಂಪರೆ

'ಕಥೆ ಹೇಳುವ ಕಲೆ ಮಾನವ ಜೀವನದಷ್ಟೇ ಹಳೆಯದು.'[೧] ಜನಪದ ಸಂಶೋಧಕರಾದ ಜೀ.ಶಂ.ಪರಮಶಿವಯ್ಯ ಅವರ ಮಾತಿನಂತೆ, ಜನಪದ ಕಥೆಗಳನ್ನು ತುಂಬಾ ಹಿಂದಿನಿಂದ ಕೇಳುತ್ತಾ ಬಂದಿರುವುದರಿಂದ ಅವು ನಮಗೆ ಸಾಮಾನ್ಯವಾಗಿ ಹೀಗೆ ಗಣಿಸಬಹುದಾದರೂ ಅವು ಅಷ್ಟು ವಿಸ್ತೃತವಾಗಿ ನಮ್ಮಿಂದ ಬಹುದೂರದಲ್ಲಿ ತೆರೆದುಕೊಂಡಂಥವಲ್ಲ. ನಾವು ಪದೇ ಪದೇ ಇಂಥವನ್ನು ಕೇಳುತ್ತಾ ಬಂದುದರಿಂದಲೂ ತೀರಾ ಅಪರಿಚಿತ ಎನಿಸದೇ ಹೋಗಿಬಿಡುವ ಸಂಭವವೂ ಇದೆ. ಬಹಳಷ್ಟು ಸಲ ಅವು ಕಾಲದಿಂದ ಒಂದಷ್ಟು ಅಂತರ (ರಾಜರ ಸಮಯ, ಒಂದಾನೊಂದು ಊರಲ್ಲಿ, ಮಾಟಗಾತಿಯರು, ಮಾಂತ್ರಿಕರು ಇರುವುದು, ಅಸಹಜ ಚಮತ್ಕಾರಗಳು ನಡೆಯುವುದು, ಪ್ರಾಣಿಗಳು ವ್ಯವಹರಿಸುವುದು, ಮರಗಳು ಜೀವ ತಳೆಯುವುದು ಇತ್ಯಾದಿ) ಕಾಯ್ದುಕೊಂಡು ಬೇರೆಯದೊಂದು 'ಆಲ್ಟರ್‌ನೇಟಿವ್ ವರ್ಲ್ಡ್' ಎಂದೆನಿಸಿದರೂ ಟಾಲ್ಕಿಯನ್ ಹೇಳುವಷ್ಟು ತೀರಾ ವ್ಯತಿರಿಕ್ತವಾಗಿ, ವಿಸ್ತೃತವಾಗಿ ಕಾಣುವುದಿಲ್ಲ. ಹಾಗಾಗಿ ಅವನ್ನು 'ಹೈ ಫ್ಯಾಂಟಸಿ'[೨] ಎಂದು ಕರೆಯಬಹುದು.

ಇಂಥ ಪ್ರಕಾರಕ್ಕೆ ವಿಭಿನ್ನವಾಗಿ ಹ್ಯಾರಿ ಪಾಟರ್, ಆಲೀಸ್ ಇನ್ ವಂಡರ್‌ಲ್ಯಾಂಡ್, ವಿಂಡ್ ಇನ್ ವಿಲ್ಲೊ ಅಂಥ ಹೊಸಗಾಲದ ಫ್ಯಾಂಟಸಿ ಕತೆಗಳನ್ನು 'ಲೋ ಫ್ಯಾಂಟಸಿ'(Low Fantasy) ಎಂದು ಗುರುತಿಸಲಾಗಿದೆ. ಇದೇ ಗುರುತಿಸುವಿಕೆಯನ್ನು ಮಕ್ಕಳ ನಡುವಿನ ಜನಪದ ಕತೆಗಳಿಗೆ ಅನ್ವಯಿಸಿಕೊಂಡು ನೋಡುವುದಾದರೆ ಸಾಮಾನ್ಯವಾಗಿ 'ಲೋಫ್ಯಾಂಟಸಿ'[೩] ಎನ್ನುವ ಪ್ರಕಾರಗಳಲ್ಲಿಯೇ ಗುರುತಿಸುವುದು ಸೂಕ್ತ ಎನಿಸುತ್ತದೆ.

ಜನಪದ ಕತೆಗಳು ಮಕ್ಕಳಿಗೆ ನಿರೂಪಿತವಾಗುತ್ತಾ ಅನೇಕ ಮಿತಿಗಳನ್ನು ಅನುಭವಿಸುತ್ತಿರುತ್ತವೆ. ಹಾಗಿದ್ದೂ ಈ ಬಗೆಯ ಕತೆಗಳು ವಿಸ್ತಾರವಾಗಿ ನಮ್ಮ ಜನಪದರ ನಡುವೆ ಹಬ್ಬಿಕೊಂಡಿವೆ. ನಮ್ಮಲ್ಲಿ ದೀರ್ಘವಾದ ಕಥೆಗಳು ಇವೆ. ಅವುಗಳನ್ನು ಜನಪದ ಕಲಾವಿದರು ಅನೇಕ ದಿನಗಳವರೆಗೆ ಪ್ರಸ್ತುತಪಡಿಸುವ ಪರಂಪರೆಯೇ ನಮ್ಮ ನಡುವಿದೆ. ಆದರೆ ಮಕ್ಕಳ ನಡುವೆ ಹರಿದಾಡಿಕೊಂಡಿರುವ ಜನಪದ ಕತೆಗಳನ್ನು ಲೋ ಫ್ಯಾಂಟಸಿಯಲ್ಲಿಯೇ ಗಣಿಸುವುದು ಉತ್ತಮವೆಂದೆನಿಸುತ್ತದೆ, ಎಂದು ತಕ್ಷಣಕ್ಕೆ ಗುರುತಿಸಲಾಗದೆ ಇರಬಹುದು, ಅದೇನೆ ಇರಲಿ, ಅಲ್ಲಿ ನಮ್ಮ ಇಂದಿನ ಸಹಜದ ಬದುಕಿನ ವ್ಯಾಪಾರಕ್ಕಿಂತ ಬೇರೆಯಾಗಿ ಭಿನ್ನ ಸಂಗತಿಗಳು ನಡೆಯುತ್ತವೆ. ಹಾಗಾಗಿ ಅವನ್ನು ಹೈ ಮತ್ತು ಲೋ ಮಧ್ಯ ಸಮೀಕರಿಸಿಕೊಳ್ಳಬಹುದು.

ಜನಪದ ಕತೆಗಳಲ್ಲಿ ಬಳಕೆಯಾಗುವ ಫ್ಯಾಂಟಸಿ ಒಟ್ಟು ಪರಂಪರೆಯ, ಸಾಮುದಾಯಿಕ ಮನಸ್ಸಿನ ಕಲ್ಪನೆಯಲ್ಲಿ ಹೊಳೆದ ಫ್ಯಾಂಟಸಿಯೇ ಆಗಿದೆ. ಅದು ಮಕ್ಕಳನ್ನೇ ನಿರ್ದಿಷ್ಟವಾಗಿ ಗಣಿಸಿದ್ದಲ್ಲ. ಈ ಕತೆಗಳು ಸಾಮಾನ್ಯವಾಗಿ ಒಟ್ಟು ಸಮುಯದಾಯದ ಕತೆಗಳೇ ಹೊರತು ಮಕ್ಕಳಿಗಾಗಿ ಎಂದು ಪ್ರತ್ಯೇಕಗೊಂಡುವಲ್ಲ. ಹಾಗಾಗಿ ಇಲ್ಲಿ ಕಾಣುವ ಫ್ಯಾಂಟಸಿ ಒಟ್ಟು ಸಮುದಾಯ ಕತೆಗಳ ಲೋಕದಲ್ಲಿ ಕಂಡುಕೊಂಡ ಫ್ಯಾಂಟಸಿಯೇ ಆಗಿದೆ. ಇದು ಅವರ ಬದುಕಿನ ನಂಬಿಕೆಗಳು, ಎದುರಿಸಿದ ಸಮಸ್ಯೆಗಳು, ಅವಕ್ಕೆ ಕಂಡುಕೊಂಡ ಪರಿಹಾರದ ಬಗೆಗಳು ಮುಂತಾಗಿ ಹುಟ್ಟುಪಡೆದಿವೆ. ಇಂಥಲ್ಲಿ ಎರಡು ಬಗೆಯಲ್ಲಿ ಈ ಅತಿವಾಸ್ತವವನ್ನು ಗುರುತಿಸಬಹುದು.

೧. ಕತೆಗಳಲ್ಲಿ ಸಹಾಯಕ್ಕೆ ನಿಲುಕುವ, ಅನುಕೂಲವಾಗಿ ಒದಗಿಬರುವ ಅನೇಕ ಸಂಗತಿಗಳು ಒಂದು ಬಗೆಯವಾಗಿವೆ. ಇವು ಕತೆಯ ಮೂಲ ಆಶಯವನ್ನು ಹೇಳುವುದಕ್ಕೆ ದುಡಿಯದೆ ಅಲ್ಲಿನ ಕತೆಯ ಅಗತ್ಯಕ್ಕೆ ಬೇಕಾಗಿ ಬಳಕೆಯಾಗುತ್ತಿರುತ್ತವೆ. ವಿಚಿತ್ರ ಶಕ್ತಿಯನ್ನು, ಮಾಂತ್ರಿಕತೆಯನ್ನು ಪಡೆದ ಪ್ರಾಣಿ, ಕಲ್ಲು, ಮರ, ಗುಡ್ಡ, ಅರ್ಧಪ್ರಾಣಿಗಳು ಮುಂತಾದವುಗಳು ಜನಪದ ಕಥೆಗಳಲ್ಲಿ ಇನ್ನಿಲ್ಲದಂತೆ ಬಳಕೆಯಾಗಿವೆ. ಅದರಲ್ಲಿ ಕೆಲವು ಒಳಿತಿಗಾದರೆ ಇನ್ನು ಕೆಲವು ಕೆಡುಕಿಗೂ ಬಳಕೆಯಾಗುತ್ತಿರುತ್ತವೆ. ಜನಪದ ಅಧ್ಯಯನದಲ್ಲಿ ಮೋಟಿಫ್ ಎಂದು ಇಂಥವನ್ನು ಅಧ್ಯಯನ ಮಾಡುತ್ತಾ ಬರಲಾಗಿದೆ.

೨. ಜನಪದ ಕಥೆಗಳಲ್ಲಿ ಕಥೆಯ ಮೂಲ ಆಶಯವನ್ನೇ ಆವರಿಸುವ ಫ್ಯಾಂಟಸಿ ಪ್ರಕ್ರಿಯೆ ಬಳಕೆಯಾಗಿರುವುದು ಇನ್ನೊಂದು ಬಗೆಯಾಗಿದೆ. ಗಿರೀಶ ಕಾರ್ನಾಡರ ಹಯವದನ, ನಾಗಮಂಡಲ, ಹೂವಿನ ಹುಡುಗಿ, ಮುಂತಾದ ಈಗಾಗಲೇ ಖ್ಯಾತ ಲೇಖಕರ ಕೃತಿಗಳಿಗೆ ಆಕರವಾಗಿರುವ, ಅದರಿಂದಲೇ ಪ್ರಚಾರ ಕಂಡಿರುವ, ಈ ಬಗೆಯ ಕಥೆಗಳನ್ನು ಉದಾಹರಿಸಬಹುದು. ಇಲ್ಲಿ ಫ್ಯಾಂಟಸಿ ಕೇವಲ ಚಮತ್ಕಾರಿಕ ವಸ್ತು ಪ್ರಪಂಚವಾಗಿ ಅನುಕೂಲವಾಗದೆ ಮೂಲ ಕಥೆಯ ಆಶಯಕ್ಕೆ ಅನುಗುಣವಾಗಿ ಬಂದಿರುತ್ತದೆ.

೪.೧.೧. ಜನಪದ ಪರಂಪರೆಯ ಆಶಯಗಳು

ಹೀಗೆ ಈ ಹಳ್ಳಿಗಾಡಿನ, ಜನಪದದ ಕತೆಗಳಲ್ಲಿ ಇದ್ದುವೋ ಇಲ್ಲವೋ ತಿಳಿಯದು. ಅಲ್ಲಿ ಬಾಲ್ಯವನ್ನು ಪ್ರತ್ಯೇಕವಾಗಿ ಗಣಿಸುವ ಬಗೆಯೇ ಅಷ್ಟಾಗಿ ಕಾಣಿಸಿಕೊಳ್ಳುವುದಿಲ್ಲ. ಏನಿದ್ದರೂ ಅದು ತಯಾರಿಯ, ದೊಡ್ಡವರಾಗಿ ರೂಪುಗೊಳ್ಳುವ ಹಂತವಾಗಿಯೇ ಗಣನೆಯಾಗುವಂತಹದ್ದಾಗಿದೆ. ಏನೇ ಇದ್ದರೂ ಜನಪದ ಪರಂಪರೆ ಹಿಂದಿನಿಂದಲೂ ಮಕ್ಕಳು, ದೊಡ್ಡವರೆನ್ನದೆ ಎಲ್ಲರನ್ನೂ ಪ್ರಭಾವಿಸಿಕೊಂಡು ಬಂದಿದೆ. ಕನ್ನಡದ ಜನಪದ ಮಕ್ಕಳ ಸಾಹಿತ್ಯವನ್ನು ವಿಶ್ಲೇಷಿಸುವ ಮುನ್ನ ಜನಪದ ಪರಂಪರೆಯ ಕುರಿತು ಅದರ ಆಶಯಗಳನ್ನಿಟ್ಟುಕೊಂಡು ಈ ಕೆಳಗಿನಂತೆ ವಿಶ್ಲೇಷಣೆ ಮಾಡಲಾಗಿದೆ.

೪.೧.೧.೧. ಮಗು ಮತ್ತು ಫ್ಯಾಂಟಸಿ

ಮಗು ಎಂದರೆ ಅದು ದೊಡ್ಡವರದೇ ಚಿಕ್ಕ ಪ್ರತಿರೂಪ. ಜನಪದ ಕಥೆಗಳ ಶ್ರೋತೃವಾಗಿ ಮಗುವೂ ಇದೆ. ಜನಪದ ಕಥೆಗಳಲ್ಲಿ ಬರುವ ಫ್ಯಾಂಟಸಿ ಮಕ್ಕಳಿಗೆ ತಕ್ಕುದಲ್ಲ ಎಂದು ಏಕವಾಕ್ಯದಲ್ಲಿ ಹೇಳಲಾಗುವುದಿಲ್ಲ. ಆದರೆ, ಅಲ್ಲಿನ ಕಥಾವಸ್ತುವಿನ ಹಾದಿಯಲ್ಲಿ ಬಂದು ಹೋಗುವ ಸಂಗತಿಗಳಲ್ಲಿ ಕೆಲವು ಮಕ್ಕಳ ಓದು, ಕೇಳುವಿಕೆಗೆ ತಕ್ಕುವಲ್ಲ. ಎಲ್ಲವನ್ನೂ ಮುಕ್ತವಾಗಿ ತೆರೆದುಕೊಳ್ಳುವ ಜನಪದ ಸಾಹಿತ್ಯ ಮಕ್ಕಳ ಮಟ್ಟಕ್ಕೆ ಬರುವ ಹೊತ್ತಿಗೆ ಅದು ಅಲ್ಪ ಸ್ವಲ್ಪ ಶೋಧಿಸಲ್ಪಡುತ್ತದೆ. ಹಾಗಿದ್ದಾಗಲೂ ಕೆಲವು ಕತೆಗಳು ಮಕ್ಕಳಿಗೆ ತೀರಾ ಆಪ್ಯಾಯಮಾನವಾಗಿ ಕಾಣುತ್ತವೆ.

ಅನೇಕ ಸಲ ಅವುಗಳಲ್ಲಿ ಹಾಸ್ಯ ಇರುತ್ತದೆ. ಪ್ರಾಣಿ, ಪಕ್ಷಿಗಳು ಬಳಕೆಯಾದ ಕಥೆಗಳಿರುತ್ತವೆ. ಇನ್ನೂ ನಾನಾ ಬಗೆಯ ಕತೆಗಳಿರಬಹುದು. ಪೆದ್ದುತನವಿರಬಹುದು, ಮಕ್ಕಳೇ ಭಾಗವಹಿಸುವ ಕತೆಗಳೂ ಇರಬಹುದು. ಸಾಮಾನ್ಯವಾಗಿ ಕತೆಯೊಂದು ಮುಂದೇನಾಗುತ್ತದೆ ಎನ್ನುವ ಕುತೂಹಲವನ್ನು ಹೊಂದಿಯೇ ಇರುತ್ತದೆ, ಇಂಥದು ಯಾವ ಕಾಲಕ್ಕೂ ಕೇಳಲು ಹಚ್ಚುವ ಗುಟ್ಟಿನ ಸಂಗತಿ. ಮಕ್ಕಳಿಗಂತೂ ಇದು ಬೇಕಿರುವ ಸಂಗತಿ. ಈ ಕಾರಣಕ್ಕಾಗಿ ಎಲ್ಲ ಬಗೆಯ ಕತೆಗಳನ್ನು ಮಕ್ಕಳಿಗೆ ಮುಟ್ಟಿಸಲು ಸಾಧ್ಯವಿದೆ.

ಕತೆಗಳು ಇಂದಿನ ಬದುಕನ್ನು ಹೊಂದಿದವುಗಳಾಗಿರದೆ, ಯಾವುದೋ ಒಂದು ಕಾಲದಲ್ಲಿ, ಎಲ್ಲೋ ನಡೆಯುತ್ತಿರುತ್ತವೆ. ಅಲ್ಲಿ ರಾಜಮಹಾರಾಜರು ಇರುತ್ತಾರೆ, ಅರಮನೆಗಳು ಇರುತ್ತವೆ.

ಮುಂತಾದ ಬೇರೆಯದೇ ಫ್ಯಾಂಟಸಿ ಲೋಕವೂ ಕೂಡ ಒಂದು ಬಗೆಯ ಕುತೂಹಲದ ಸನ್ನಿವೇಷವನ್ನು ಹುಟ್ಟುಹಾಕುತ್ತದೆ.

ಜನಪದ ಕಥೆಗಳು ಮಕ್ಕಳಿಗೆ ನೇರವಾಗಿ ತಕ್ಕವಲ್ಲದಿದ್ದರೂ ಇಂದು ಮಕ್ಕಳಿಗಾಗಿ ಫ್ಯಾಂಟಸಿ ಕಥೆಗಳನ್ನು ಪರಿಷ್ಕರಿಸಿ ನೀಡುತ್ತಿದ್ದಾರೆ. ಹಾಗಾಗಿ ಜನಪದ ಕಥೆಗಳಲ್ಲಿನ ಫ್ಯಾಂಟಸಿ ಸಂಗತಿಗಳು ಮಕ್ಕಳಿಗೆ ಇಷ್ಟವಾಗುತ್ತವೆ. ಈ ಕಥೆಗಳಲ್ಲಿ ಪ್ರಾಣಿ ಪಕ್ಷಿಗಳು, ಮರಗಳು ಮುಂತಾಗಿ ಮನುಷ್ಯೇತರ ಜೀವಾಜೀವಗಳು ಜೀವಂತವಾಗಿ ಪಾಲ್ಗೊಳ್ಳುತ್ತಿರುತ್ತವೆ. ಮನುಷ್ಯನ ಹಾಗೆ ತೊಡಗಿಕೊಳ್ಳುತ್ತವೆ ಎನ್ನುವುದು ಕುತೂಹಲದ ಸಂಗತಿಯಾಗುತ್ತದೆ. ಇದೇ ಅಲ್ಲದೆ ನಾವು ಊಹಿಸಿರದ ಜೀವಿಗಳು ಪಾತ್ರಗಳಾಗಿ ಬರುತ್ತವೆ. ಕುದುರೆ ಮನುಷ್ಯರು, ಗಿಡ್ಡರು, ಮಾಟದ ಅಜ್ಜಿಗಳು, ನಾಗಲೋಕದವರು ಮುಂತಾಗಿ ವಿಶಿಷ್ಟ ಜೀವಿಗಳು ಕಂಡುಬರುತ್ತವೆ. ಇದರ ಜೊತೆಗೆ ಮಾಯದ ಕನ್ನಡಿ, ಹಾರುವ ಕಂಬಳಿ, ಮಂತ್ರದ ಕೋಲು, ಮಂತ್ರದ ಹರಳುಗಳು, ಹಾಗೆಯೇ ಅಸಂಭಾವ್ಯದ ಚಟುವಟಿಕೆಗಳು ಸಂಭವಿಸುವುದು, ಗಿಳಿಯೊಂದರಲ್ಲಿ ಜೀವ ಅಡಗಿಕೊಂಡಿರುವದು, ಇಡೀ ದೇಹವೇ ಚಿಕ್ಕದಾಗಿ ಎಲ್ಲೋ ಬಚ್ಚಿಟ್ಟುಕೊಳ್ಳುವುದು ಮುಂತಾಗಿ ಕತೆಗಳಲ್ಲಿನ ನಾನಾಬಗೆಗಳು ಕುತೂಹಲದ ಸಂಗತಿಗಳಾಗಿರಬಲ್ಲವು. ಇವು ಮಕ್ಕಳಿಗೆ ಆಕರ್ಷಕವಾಗಿರುವ ಸಂಗತಿಗಳಾಗಿವೆ.

ಇಂದಿಗೂ ಪ್ರಾಣಿ ಪಕ್ಷಿಗಳು ಭಾಗವಹಿಸುವ ಹೊಸಗಾಲದ ಮಿಕಿಮೌಸ್, ಡೋನಾಲ್ಡ್ ಡಕ್, ಟಾಮ್ ಅಂಡ್ ಜೆರ್ರಿ ಕತೆಗಳು ಮಕ್ಕಳಿಗೆ ಇನ್ನಿಲ್ಲದಂತೆ ಮುದನೀಡುತ್ತವೆ. ಈ ಬಗೆಯ ಗುಣಗಳಿಂದ ಜನಪದ ಕತೆಗಳು ಮಕ್ಕಳಿಗೆ ಬಹುಬೇಗ ಹತ್ತಿರವಾಗುತ್ತವೆ. ಆದರೆ ಈ ಸರಕು ದೊಡ್ಡವರಿಗೂ ಹತ್ತಿರವಾದುದೇ ಆಗಿದೆ. ಕೇವಲ ದೊಡ್ಡವರಲ್ಲಿಯೇ ಓಡಾಡಿಕೊಂಡಿರುವ ಈ ಕತೆಗಳಲ್ಲೂ ಇವು ಹೆಚ್ಚಿನದಾಗಿ ಸೇರಿಕೊಂಡಿರುತ್ತವೆ. ಈ ಕುತೂಹಲದಾಚೆಗೆ ಮನುಷ್ಯನ ಅನುಭವದ, ನೋವು ನಲಿವಿನ, ಬದುಕಿನ ಸಂಗತಿಗಳೆಲ್ಲ ಹಾಸುಹೊಕ್ಕಾಗಿ ಬೆರೆತುಕೊಂಡಿರುತ್ತವೆ. ಒಂದು ಮಾತಂತೂ ಸತ್ಯ, ಇಂದಿನ ವಾಸ್ತವದ ಬದುಕಿನ ಪಡಿನೆಳಲಾಗಿರುವ ಕತೆಗಳಂತೆ ಈ ಜನಪದ ಕತೆಗಳಿರದೆ; ಒಂದಿಷ್ಟೆಲ್ಲ ಅಸಂಭಾವ್ಯದ, ನಮ್ಮಿಂದಾಚೆಯ ಕಾಲ್ಪನಿಕ ಸಂಗತಿಗಳಲ್ಲಿಯೇ ಅರಳಿರುತ್ತವೆ.

ಕಾಲ್ಪನಿಕವಾಗಿರುವ ಫ್ಯಾಂಟಸಿ ಕತೆಗಳ ಮರೆಯಲ್ಲಿಯೇ ಏನೇ ದುಃಖ ದುಮ್ಮಾನಗಳಿದ್ದರೂ ಹಳ್ಳಿಗಾಡಿನ ಜನರು ಅವನ್ನೆಲ್ಲಾ ಹುದುಗಿಸಿಕೊಂಡು ಅಭಿವ್ಯಕ್ತಿಗೆ ಹವಣಿಸಿದರು ಎನ್ನಬಹುದು. ಪುರಾಣದ ಕತೆಗಳು ಈ ಬಗೆಯದೇ ಇನ್ನೊಂದು ಚಾಚು ಎನ್ನಬಹುದು. ಹಾಗಾಗಿ ಈ ಫ್ಯಾಂಟಸಿ ಕಥಾ ಜಗತ್ತಿನಲ್ಲಿ ಮಕ್ಕಳಿಗೇ ಎಂದು ಪ್ರತ್ಯೇಕವಾಗಿ ಎತ್ತಿಕೊಳ್ಳುವುದು ಕಷ್ಟದ ಕೆಲಸ. ಅದು ಮಕ್ಕಳ ಮುಂದೆ ಪ್ರಸ್ತುತವಾಗುವ ಸಂದರ್ಭದಲ್ಲಿಯೇ ಸಾಧ್ಯವಾಗುವಂತಹದು ಒಂದು ಸಂಭಾವ್ಯತೆ. ಅದರಾಚೆಗೆ ಮಕ್ಕಳಿಗೇ ಆಪ್ಯಾಯಮಾನವಾದ ಕತೆಗಳನ್ನು ನಾವು ಹೆಕ್ಕಿ ಹೆಕ್ಕಿ ತೆಗೆಯಬಹುದು ಎನಿಸುತ್ತದೆ. ಆದರೆ ನಮ್ಮ ಬರಹಗಾರರು ಮಕ್ಕಳಿಗೆ ಇವನ್ನು ನೀಡುವಾಗ ಈ ಕೆಲಸವನ್ನು ಹೇಗೆಲ್ಲಾ ಮಾಡಿದರು ಎನ್ನುವುದು ಅಭ್ಯಸಿಸಬೇಕಿದೆ.

೪.೧.೧.೨. ಗ್ರಾಮೀಣ ಜಗತ್ತು ಮತ್ತು ಫ್ಯಾಂಟಸಿ

ಜನಪದ ಅಂತ ಹೇಳಬಹುದಾದ ಸಾಮಗ್ರಿ ಸಾಮಾನ್ಯವಾಗಿ ಬರಹ ರೂಪಕ್ಕೆ ಇಳಿಯದ, ವ್ಯವಸ್ಥಿತ ರೂಪದ ಶಿಕ್ಷಣವೆಂದು ಗುರುತಿಸಲಾಗದ ಜನ ಸಮುದಾಯದಲ್ಲಿ ಕಾಣಿಸಿಕೊಳ್ಳುವುದಾಗಿರುತ್ತದೆ. ಇದಕ್ಕೆ ತನ್ನದೇ ಆದ, ಪ್ರಾದೇಶಿಕವಾದ ಭಾಷೆ ಇರುವಂತೆ, ಪರಂಪರೆಯೂ ಇರುವುದನ್ನು ಗುರುತಿಸಬಹುದು. ಅನುಭವ ಆಧಾರಿತ ಅಲಿಖಿತ ಶಿಕ್ಷಣವನ್ನು ಇಲ್ಲಿಯೂ ಖಂಡಿತ ಗುರುತಿಸಬಹುದಾಗಿದೆ. ಇಲ್ಲಿಯೂ ಇಂದಿನ ಹಳ್ಳಿಗಾಡಿನ ಪರಿಸರ ಹಾಗೂ ಬುಡಕಟ್ಟು ಎನ್ನಬಹುದಾದ ಹಲವು ಬಗೆಯ ಇನ್ನೂ ಪ್ರತ್ಯೇಕವಾಗಿ ಅಲ್ಲಲ್ಲಿ ಉಳಿದಿರುವ ಸಾಂಸ್ಕೃತಿಕ ಪರಿಸರಗಳು ವಿಭಿನ್ನವಾಗಿ ಕಾಣಿಸುತ್ತವೆ.

ಇಂದು ಜಾನಪದ ಎಂದು ಹೇಳಿಬಿಡುವ, ನಮ್ಮ ಸುತ್ತಲಿನ ಹಳ್ಳಿಗಾಡಿನ ಪರಿಸರ ಮೊದಲಿನಂತಿಲ್ಲ. ಸಾಕಷ್ಟು ಕೊಡುಕೊಳುವಿಕೆಯಿಂದ, ಹೊರಪ್ರಭಾವಗಳಿಂದ, ಸರಕಾರಿ ವ್ಯವಸ್ಥೆಯ ಅನುಕೂಲಗಳಿಂದ ಬದಲಾಗುತ್ತಾ ಬಂದಿರುವ ಪರಿಸರವಾಗಿರುತ್ತದೆ. ಜಾನಪದವೆಂದು ನಮ್ಮ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನಗಳು ಪ್ರಾರಂಭವಾದ ಮೊದಲ ದಿನಗಳಲ್ಲಿ ಕಾಣಿಸಿದ್ದ ಈ ಬಗೆಯ ಹಳ್ಳಿಗಾಡಿನ ಪರಿಸರ ಇಂದು ಅಧ್ಯಯನಕ್ಕೆ ಹೋಗುವುವವರಿಗೆ ಕಾಣಸಿಗದು. ಅದು ಈಗ ತೀರಾ ಬದಲಾಗಿ ಕಾಣಿಸುತ್ತಿದೆ.

ಇಂಥಹ ಸಂದರ್ಭದಲ್ಲಿ ಮೇಲೆ ಪ್ರಸ್ತಾಪಿಸಿದ ಶಿಷ್ಟ ಪರಂಪರೆಯ ಸಾಮುದಾಯಿಕ ಕಥಾಪರಂಪರೆಯು ಸೇರಿಕೊಂಡಿದೆ. ಹಾಗೆಯೇ ಹಳ್ಳಿಗಾಡಿನಲ್ಲಿಯೇ ವಿಶೇಷವಾಗಿ ಕಾಣಿಸಿಕೊಳ್ಳುವ ಕಥಾ ಜಗತ್ತೂ ಇದೆ. ದೇವರು ದಿಂಡರುಗಳ ಸುತ್ತ, ಹಲವಾರು ಆಚರಣೆಗಳ ಸುತ್ತ ಹಬ್ಬಿಕೊಂಡಿರುವ ಪುರಾಣಗಳು ಸಾಕಷ್ಟು ಬೆರಕೆಯನ್ನು ಅನುಭವಿಸಿರುವುದು ವೇದ್ಯವೇ ಇದೆ. ಕೆಲವೆಲ್ಲ ಬುಡಕಟ್ಟುಗಳಲ್ಲಿ, ಅಂದರೆ ನಮ್ಮ ನಾಗರಿಕತೆ ಇನ್ನೂ ಮುಟ್ಟದೆ ಇರುವ ಜನ ಸಮುದಾಯಗಳಲ್ಲಿ ಇನ್ನೂ ಈ ಪೌರಾಣಿಕ ಕಲ್ಪನೆಗಳು ಅವರವೇ ಆಗಿ ಪ್ರತ್ಯೇಕವಾಗಿ ಉಳಿದಿರುವ ಸಾಧ್ಯತೆಗಳಿವೆ. ಉದಾಹರಣೆಗೆ ತೀರಾ ಇತೀಚೆಗೆ ಅಂಡಮಾನಿನ ಬುಡಕಟ್ಟುಗಳಲ್ಲಿ ಪುರಾಣವೆನ್ನಬಹುದಾದ ಕತೆಯ ಹಂದರವೊಂದನ್ನು ಸಂಗ್ರಹಿಸಲಾಯಿತು[೪].

ಹಳ್ಳಿಗಾಡಿನ ಮಕ್ಕಳಾಗಲಿ, ಈ ದೂರದೂರ ಚದುರಿದ ಬುಡಕಟ್ಟಿನ ಸಮುದಾಯಗಳಲ್ಲಿ ಆಗಲೀ ಮಕ್ಕಳು ಒಟ್ಟಾರೆ ಸಮುದಾಯದ ಕತೆಗಳಿಗೆ ಕಿವಿಯಾಗುತ್ತಲೇ ಇರುತ್ತಾರೆ. ನಾನಾ ಬಗೆಗಳಲ್ಲಿ ಅವರು ದೊಡ್ಡವರ ನಡುವೆ ಕತೆಗಳ ಶ್ರೋತೃಗಳಾಗುತ್ತಲೇ ಇರುತ್ತಾರೆ. ಅಲ್ಲಿ ದೊಡ್ಡವರು, ಮಕ್ಕಳು ಎಂದು ಪ್ರತ್ಯೇಕತೆ ಇರುವುದಿಲ್ಲ. ಹಾಗಾಗಿ ಇಂದಿನ ನಾಗರಿಕ ಎನ್ನಬಹುದಾದ ವಾತಾವರಣದಲ್ಲಿನ ಮಕ್ಕಳಿಗೆ ಹೋಲಿಸಿದಾಗ ಈ ಮಕ್ಕಳು ಎಷ್ಟೋ ಬದುಕಿನ ಸಂಗತಿಗಳಿಗೆ ತೆರೆದುಕೊಂಡೇ ಬೆಳೆಯುತ್ತಾರೆ. ಇಂಥ ಸಾಮುದಾಯಿಕ ಬದುಕಿನಲ್ಲಿ ಮಕ್ಕಳಿಗೇ ಪ್ರತ್ಯೇಕ ಕಥಾ

ಜಗತ್ತು ಹುಟ್ಟಿಕೊಳ್ಳುವುದಿಲ್ಲ. ಅಲ್ಲಿ ಮಕ್ಕಳೇ ಪ್ರತ್ಯೇಕವಾಗಿ, ಸಹಜವಾಗಿ ಒಂದೆಡೆ ಸೇರುವ ಸಂದರ್ಭಗಳಲ್ಲಿ ಅವತರಿಸುವ ಕತೆಗಳು ಒಂದಿಷ್ಟೆಲ್ಲ ಅವಕ್ಕೇ ಆಪ್ಯಾಯಮಾನವಾಗಿ ಎನ್ನುವಂತೆ ರೂಪು ತಳೆದು ಪರಿಷ್ಕಾರಗೊಳ್ಳುತ್ತವೆ.

ಈ ಬಗೆಯ ಸಂದರ್ಭಗಳು ಹಲವಿರುತ್ತವೆ. ಹೀಗೆ ಗ್ರಾಮೀಣ ಜನರ ಜನಪದ ಫ್ಯಾಂಟಸಿಯ ಮುಕ್ತತೆ ಮಕ್ಕಳನ್ನು ಸಣ್ಣ ವಯಸ್ಸಿನಲ್ಲಿಯೇ ಪ್ರಭಾವಿಸಿರುತ್ತದೆ. ಇಲ್ಲಿನ ಕೆಲ ಕತೆಗಳು ಮಕ್ಕಳದೇ ಗುಂಪುಗಳು ಸೇರಿದಾಗ ಮರು ಕೇಳುವಿಕೆಯಾಗಿ ಹೊಮ್ಮುವಾಗ, ಆಸ್ವಾದಿಸುವಾಗ, ಅನೇಕ ಕುತೂಹಲದ, ಹಾಸ್ಯದ ಸಾಮಗ್ರಿಯಾಗಿ, ನಾವು ಅನಪೇಕ್ಷಿತ ಎಂದುಕೊಳ್ಳುವ ಎಷ್ಟೋ ಪದರುಗಳಿಗೂ ಬಿಚ್ಚಿಕೊಳ್ಳಬಹುದು. ಲೈಂಗಿಕ ಸಂಗತಿಗಳು ಇಂಥ ಸಂದರ್ಭದಲ್ಲಿ ಸಹಜವಾಗಿಯೇ ಹೊಮ್ಮುತ್ತಿರುತ್ತವೆ. ಇದು ಮ್ಕಕಳ ದೃಷ್ಟಿಯಿಂದ ಅತಿ ಎನ್ನಿಸಿದ ನಡೆವಳಿಕೆಯಾಗಿದೆ. ಆದರೆ ಈ ಹಿಂದೆ ನಮ್ಮ ಹಳ್ಳಿಗಳಲ್ಲಿ ಎಲ್ಲವೂ ಮುಕ್ತವಾಗಿದ್ದ ಕಾಲದಲ್ಲಿನ ಸಂಗತಿಗಳು, ಇಂದಿನ ಎಲ್ಲರಿಂದ ಮುಕ್ತವಾದ ಮನಸ್ಸುಗಳಿಗೆ ವ್ಯತಿರಿಕ್ತವಾಗಿ ಗೋಚರಿಸುತ್ತವೆ.

೪.೧.೧.೩. ಅಜ್ಜಿ ಕಥೆಗಳು ಫ್ಯಾಂಟಸಿ

ಹಿಂದಿನಿಂದಲೂ ಮಕ್ಕಳಿಗೆ ಬಿಟ್ಟೂ ಬಿಡದೆ ಕಾಡಿದ್ದು ಜನಪದ ಕಥೆಗಳೇ. ಮನೆಯ ಹಿರಿಯರೊಬ್ಬರು ಮಕ್ಕಳನ್ನು ಸುತ್ತ ಕೂಡಿಸಿಕೊಂಡು ಕಥೆಗಳನ್ನು ಹೇಳುವ ಪರಂಪರೆ ಮೊದಲಿನಿಂದಲೂ ಹಳ್ಳಿಗಾಡಿನಲ್ಲೂ, ಪಟ್ಟಣ ಪ್ರದೇಶದಲ್ಲೂ ಇದೆ. ಅದರಲ್ಲೂ ಅಜ್ಜಿಯೇ ನಿರೂಪಕಿಯಾಗಿ ಕಥೆ ಹೇಳುವುದು ಸರ್ವೇಸಾಮಾನ್ಯ. 'ಅಜ್ಜೀ ಕತೆ' ಎನ್ನುವ ಪದವೊಂದು ನಮ್ಮ ನಡುವೆ ಬಳಕೆಯಾಗುತ್ತಾ ಬಂದಿದೆ. ಸಾಮಾನ್ಯವಾಗಿ ಕೂಡು ಕುಟುಂಬಗಳಲ್ಲಿ ಅಜ್ಜಿಯಂದಿರು ಇರುತ್ತಿದ್ದು, ಅವರು ನಿರಾಳವಾಗಿ ಮಕ್ಕಳೊಡನೆ ಸಮಯ ಕಳೆಯಲು ಸಾಧ್ಯವಾಗುತ್ತಿತ್ತು. ಅವರು ಮಕ್ಕಳಿಗೆ ಹೇಳುತ್ತಿದ್ದ ಕತೆಗಳೇ ಹೀಗೆ ಪ್ರಚುರಕ್ಕೆ ಬಂದಿರುವುದು ಸಹಜವಾಗಿದೆ.

ಅಜ್ಜಿಗೆ ಹೀಗೆ ಕಥೆ ಹೇಳಲು ಆಸರೆಯಾಗುತ್ತಿದ್ದುದು ಜನಪದ ಕತೆಗಳೇ ಆಗಿವೆ. ಈ ಅಜ್ಜೀಕತೆಗಳು ಮೂಲದಲ್ಲಿ ಮಕ್ಕಳಿಗೇ ಎಂದು ನಿರ್ದಿಷ್ಟಗೊಂಡು ರಚಿತವಾದವುಗಳಲ್ಲ. 'ಅಜ್ಜಿ ಕತೆಗಳು' ಎನ್ನುವ ಪದ ಲಿಖಿತ ಕತೆಗಳ ಸಂಗ್ರಹಗಳು ಬರತೊಡಗಿದಾಗಲೇ ಹುಟ್ಟಿಕೊಂಡ ಪದವಾಗಿದೆ. ಕೂಡು ಕುಟುಂಬಗಳಲ್ಲಿ ಒಂದಿಷ್ಟು ಸಮಯವನ್ನು ಮನೆಯ ವಯಸ್ಸಾದ ಅಜ್ಜಿಯಂದಿರು, ಮನೆಯಲ್ಲಿಯೇ ಇರುತ್ತಿದ್ದರಿಂದ ಮಕ್ಕಳೊಂದಿಗೆ ಕಳೆಯುತ್ತಿದ್ದರು. ಅವರು ಮಕ್ಕಳಿಗೆ ಕತೆಗಳನ್ನು ಹೇಳುತ್ತಾ ಬಂದಿರುವುದು ನಡೆದಿರುವುದರಿಂದ ಈ ಬಗೆಯ ಪದದ ಬಳಕೆ ಸಾಮಾನ್ಯವಾಗಿ ನಮ್ಮ ನಡುವೆ ಬಂದಿದೆ. ಅಜ್ಜಿಯ ಜೊತೆಗೆ ಅಡಗೂಲಜ್ಜಿಯ ಕಥೆಗಳು ಎನ್ನುವ ಪದಬಳಕೆಯೂ ಇದೆ. ಅಡಗೂಲಜ್ಜಿ ಎನ್ನುವುದು ಜನಪದ ಕಥೆಗಳಲ್ಲಿ ಪಾತ್ರವಾಗಿರದೆ. ಇವಳದೊಂದು ಕಾಲ್ಪನಿಕ ಪಾತ್ರವಾಗಿದೆ.

ಫ್ರೆಂಚ್ ಜನಪದ ಕಥೆಗಳಲ್ಲಿಯೂ 'ಮದರ್‌ಗೂಸ್'[೫] ಎನ್ನುವ ಅಡಗೂಲಜ್ಜಿಯೊಬ್ಬಳು ಕಾಣುವುದನ್ನು ಇಲ್ಲಿ ಉಲ್ಲೇಖಿಸಬಹುದು. ಹೀಗೆ ಮಕ್ಕಳನ್ನು ಕೂರಿಸಿಕೊಂಡು ಅಜ್ಜಿಯು ಕತೆಗಳನ್ನು

ಹೇಳಲು ಅವಳ ಸಂಗ್ರಹದಲ್ಲಿ ಶೇಖರಗೊಂಡ ಕತೆಗಳ ಕಣಜ ಮತ್ತೆ ನಮ್ಮ ಸಾಮುದಾಯಿಕ ಬದುಕಿನಲ್ಲಿ ಯಾವಯಾವುದೋ ಆಚರಣೆಗಳಲ್ಲಿ, ಯಾವಯಾವುದೋ ಸಂದರ್ಭದಲ್ಲಿ ಕೇಳಿ ಕೇಳಿ ಕೂಡಿಜಿದ್ದುವೇ ಆಗಿವೆ. ಅವನ್ನೇ ತನ್ನ ಮುಂದಿರುವ ಮಕ್ಕಳಿಗೆ, ಅವುಗಳ ವಯಸ್ಸು ನೋಡಿ ತಕ್ಕುದಾಗಿ ಮಾಡಿ ಪರಿಷ್ಕರಿಸಿ ಹೇಳುತ್ತಾ ಬಂದಿರುವ ಸಾಧ್ಯತೆಯಿದೆ. ಅಲ್ಲಿಯೂ ಒಂದೇ ವಯಸ್ಸಿನ ಮಕ್ಕಳು ಅವಳ ಮುಂದೆ ಇರಲಾರರು. ಆವಾಗೆಲ್ಲ ಅವಳು ಗೊಂದಲಕ್ಕೆ ಸಿಲುಕಿರುವ ಸಾಧ್ಯತೆಯಿದೆ.

ಹೀಗೆ ಅಜ್ಜಿ ಹೇಳುವ ಸಮುಯದಲ್ಲಿನ ಫ್ಯಾಂಟಸಿ ಕತೆಗಳು ಮಕ್ಕಳನ್ನೇ ಉದ್ದೇಶಗೊಂಡಿರುವುದರಿಂದ ಆ ಬಗೆಯಲ್ಲಿ ಒಂದಿಷ್ಟು ಪರಿಷ್ಕಾರಗೊಂಡ ಕಥೆಗಳು ಎನ್ನಬಹುದು. ಈ ಬಗೆಯ ಪರಿಷ್ಕಾರವಾದರೂ ಕಾಲಕ್ಕೆ, ಸಮಾಜದ ವಿಭಿನ್ನ ಪರಿಸರಗಳಿಗೆ ಹೊಂದಿಕೊಂಡಿರುತ್ತದೆ. ಅದು ಇಂದಿನ ನಮ್ಮ ನಾಗರಿಕ ಎನ್ನಬಹುದಾದ, ಕಲಿತ ವಾತಾವರಣದಿಂದ ನಾನಾ ಬಗೆಯಲ್ಲಿ ಬೇರೆಯಾಗಿರುವುದು ಸಹಜವೇ ಆಗಿರುತ್ತದೆ. ಬದುಕನ್ನು ನೋಡುವುದು, ಸ್ವೀಕರಿಸುವುದು ಸಾಂಸ್ಕತಿಕವಾಗಿ ಹಲವು ಬಗೆಯಲ್ಲಿ ಕಾಲಕಾಲಕ್ಕೆ ನಡೆದಿರುತ್ತದೆ. ಕತೆಗಳೂ ಇದರ ಪಡಿನೆಳಲಾಗಿವೆ.

'ಅಜ್ಜೀ ಕತೆಗಳು' ಎನ್ನುವ ಶೀರ್ಷಿಕೆಯಲ್ಲಿ ಸಂಕಲನಗೊಂಡ ಕತೆಗಳೆಲ್ಲಾ ಹೀಗೆ ಅಜ್ಜಿ, ಯಾವುದೊಂದು ಕಾಲದಲ್ಲಿ, ಯಾವುದೊಂದು ಸಾಂಸ್ಕೃತಿಕ ಪರಿಸರದಲ್ಲಿ, ಯಾವೊಂದು ಸಮುದಾಯದ ನಿರ್ದಿಷ್ಟತೆಯಲ್ಲಿ ಕಟ್ಟಿಕೊಂಡ ಕತೆಗಳಾಗಿರದೆ, ಒಟ್ಟಾರೆ ಜನಪದ ಕತೆಗಳೇ ಆಗಿರುವುದಾಗಿ ಕಾಣುತ್ತವೆ. ಈ ಕತೆಗಳನ್ನು ಯಾರಯಾರ ಕಡೆಯಿಂದಲೋ ಸಂಗ್ರಹಿಸಿದವಾಗಿರುತ್ತವೆ. ಕೆಲವರು ಕಥಾಪ್ರಿಯರು, ಕತೆಹೇಳುವ ಅಭಿಲಾಷೆಯುಳ್ಳವರು ನಮ್ಮ ನಡುವೆ ಅಪರೂಪಕ್ಕೆ ಇದ್ದೇ ಇರುತ್ತಾರೆ, ಇಂಥವರಲ್ಲಿ ಒಂದಿಷ್ಟು ಹೆಚ್ಚೇ ಫ್ಯಾಂಟಸಿ ಕತೆಗಳ ಸಂಗ್ರಹವಾಗಿರುತ್ತದೆ. ಈ ನಾನಾಬಗೆಯ ಮೂಲಗಳಿಂದ ಹೆಕ್ಕಿ ತೆಗೆದ ಜನಪದ ಫ್ಯಾಂಟಸಿ ಕತೆಗಳೇ ಮಕ್ಕಳಿಗಾಗಿಯೂ ಸಂಗ್ರಹವಾಗಿ, ಸಂಕಲನಗೊಂಡು ಬಂದಿವೆ.

ಇಂದಿಗೂ ಅಜ್ಜಿ ಕತೆಗಳು ಮಕ್ಕಳ ಕಥಾ ಪಟ್ಟಿಯಲ್ಲಿ ಆದ್ಯತೆ ಪಡೆದಿದ್ದಾಳೆ ಎನ್ನುವುದಕ್ಕೆ ತಂತ್ರಜ್ಞಾನದ (ಅಜ್ಜಿ ಹೇಳಿದ ಕಥೆ: ಸರಳ ಜೀವನ ಟಿ.ವಿ ಕಾರ್ಯಕ್ರಮ) ಸ್ವರೂಪದಲ್ಲಿ ಬರುತ್ತಿರುವ ಅಜ್ಜಿ ಕಥೆಗಳನ್ನು ಮಕ್ಕಳು ಅಪ್ಪಿಕೊಳ್ಳುತ್ತಿರುವುದು ಸಾಕ್ಷಿಯಾಗಿದೆ. ಇಂದಿನ ಮಕ್ಕಳ ನಡುವೆ ಇರಬಹುದಾದ ಜನಪದ ಮೂಲದ ಕತೆಗಳೆಂದರೆ ಈ ಬಗೆಯವೇ ಆಗಿವೆ. ಕನ್ನಡದ ಇಂದಿನ, ಶಾಲೆಗಳ ವ್ಯವಸ್ಥೆ ವಿಸ್ತೃತವಾಗಿ ಮಕ್ಕಳ ನಡುವೆ ಪರಂಪರೆಯ ಕತೆಗಳನ್ನು ಪರಿಚಯಿಸಲಾಯಿತು. ಅವು ಇಂದಿಗೂ ಅನೇಕ ಸ್ವರೂಪಗಳಲ್ಲಿ ಮಕ್ಕಳನ್ನು ಮುಟ್ಟುತ್ತಿವೆ.

ಹೀಗೆ ಜಗತ್ತಿನ ಯಾವುದೇ ಜನಪದ ಪರಂಪರೆಯನ್ನು ಪ್ರಭಾವಿಸುವ ಅಂಶಗಳಲ್ಲಿ ಪ್ರಮುಖವಾದವುಗಳನ್ನು ಈ ಮೇಲೆ ವಿಶ್ಲೇಷಣೆ ಮಾಡಲಾಗಿದೆ. ಇವು ಜನಪದ ಕಥೆಗಳ

ಸಾಮಾನ್ಯ ಲಕ್ಷಣಗಳಂತಿರುವುದರಿಂದ ಇವುಗಳನ್ನು ಕನ್ನಡದ ಜನಪದ ಮಕ್ಕಳ ಕಥೆಗಳನ್ನು ವಿಶ್ಲೇಷಿಸುವ ಮುನ್ನ ಪ್ರಾಸಂಗಿಕವಾಗಿ ಚರ್ಚಿಸಲಾಗಿದೆ.

೪.೧.೨. ಮಕ್ಕಳಿಗಾಗಿ ಮರು ನಿರೂಪಿಸಿದ ಜನಪದ ಕಥೆಗಳು

ಈ ಭಾಗದಲ್ಲಿ ಕನ್ನಡದಲ್ಲಿ ಇದುವರೆಗೆ ಬಂದ ಮಕ್ಕಳ ಸಾಹಿತ್ಯದಲ್ಲಿ ಜನಪದ ಸಾಹಿತ್ಯವನ್ನು ಆಧರಿಸಿ ಬಂದಿರುವ ಕಥೆಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಲೇಖಕರು ಜನಪದ ಕಥೆಗಳನ್ನು ಮಕ್ಕಳಿಗಾಗಿ ನೀಡುವಾಗ ಹಾಗೆ ಹಾಗೇ ನೀಡದೆ ಅವುಗಳನ್ನು ಪರಿಷ್ಕರಿಸಿ, ತಮ್ಮ ಆಲೋಚನೆಗಳನ್ನು ಸೇರಿಸಿ, ಕಾಲಕ್ಕೆ ತಕ್ಕಂತೆ ಬದಲಾಯಿಸಿ ನೀಡಿದ್ದಾರೆ. ಹೀಗೆ ಅವರು ಮಾಡಿಕೊಂಡಿರುವ ಮಾರ್ಪಾಡುಗಳು ಪರಂಪರೆಯ ಯಥಾವತ್ತು ನಕಲುಗಳಾಗದೇ ಮರುನಿರೂಪಣೆಗಳಾಗಿವೆ. ಹಾಗೆ ಮಕ್ಕಳಿಗೆ ತಲುಪಿರುವ ಈ ಜನಪದ, ಪರಂಪರೆಯ ಕತೆಗಳು ಹೇಗೆಲ್ಲ ಇವೆ, ಏನೇನೆಲ್ಲ ತಮ್ಮೊಡನೆ ಇರಿಸಿಕೊಂಡಿವೆ, ಕಳೆದುಕೊಂಡಿವೆ, ಲೇಖಕರು ಅವುಗಳನ್ನು ಮಕ್ಕಳಿಗಾಗಿ ನೀಡುವಾಗ ಏನೇನೆಲ್ಲಾ ಮಾಡಿದ್ದಾರೆ. ಹೇಗೆಲ್ಲಾ ಕಥೆಗಳನ್ನು ಬದಲಿಸಿದ್ದಾರೆ, ಎನ್ನುವುದನ್ನು ವಿಶ್ಲೇಷಣೆ ಮಾಡಿದಾಗ ವಿಭಿನ್ನ ಬಗೆಯ ಫಲಿತಗಳು ಕಂಡುಬರುತ್ತವೆ. ಪುಸ್ತಕ ರೂಪದಲ್ಲಿ ಬಂದ ಮಕ್ಕಳ ಕತೆಗಳೆಂದುಕೊಂಡ ಬರಹಗಳನ್ನು ಜನಪದ ಕಥೆಗಳ ಸಂಗ್ರಹವೆಂದು ಏಕ ವ್ಯಾಖ್ಯೆಯಲ್ಲಿ ಹಿಡಿಯುವುದು ಕಷ್ಟ ಸಾಧ್ಯ. ಅನೇಕ ಲೇಖಕರಿಂದ ವಿಭಿನ್ನ ಆಲೋಚನೆಗಳನ್ನು ಇಟ್ಟುಕೊಂಡು ಹುಟ್ಟಿದ ಈ ಸಾಹಿತ್ಯವನ್ನು ಜನಪದ ಸಾಹಿತ್ಯದ ಮರು ನಿರೂಪಣೆ ಎಂದು ಕರೆಯಬಹುದು. ಹಾಗೆ ಮರು ನಿರೂಪಿಸಿದ ಕತೆಗಳ ವಿಶ್ಲೇಷಣೆಯನ್ನು ಈ ಕೆಳಕಂಡಂತೆ ಮಾಡಲಾಗಿದೆ. ಆದರೆ ಸಾಗರದಂತಿರುವ ಈ ಕಥಾ ಪರಂಪರೆಯನ್ನು ವಿಶ್ಲೇಷಣೆ ಮಾಡಲು ಮತ್ತೆ ಜನಪದ ಸಾಹಿತ್ಯದ ಪ್ರಮುಖ ಆಶಯಗಳನ್ನು ಆಶ್ರಯಿಸಲಾಗಿದೆ. ಜನಪದ ಫ್ಯಾಂಟಸಿ ಕಥೆಗಳಲ್ಲಿ ಬರುವ ಆಶಯಗಳೇ ಕೃತಿಗಳ ಆಯ್ಕೆಯನ್ನು ನಿರ್ಧರಿಸಿವೆ.

ಶಿಷ್ಟ ಸಾಹಿತ್ಯ ಕೃತಿಗಳು ಸ್ವತಂತ್ರ ರಚನೆಯಾದರೂ ಜನಪದ ಸಾಹಿತ್ಯವಲ್ಲ. ಹಾಗಿದ್ದಾಗಲೂ ಜನಪದ ಮಾದರಿಗೆ ಹೋಗಲು ಬಯಸುತ್ತವೆ. ಜನಪದ ಸಾಹಿತ್ಯದ ಲಕ್ಷಣಗಳಾದ ಮೌಖಿಕತೆ, ಸರಳತೆ ಮತ್ತು ಕೃತಿ ಪ್ರಧಾನ್ಯತೆ ಇವು, ಮಕ್ಕಳ ಸಾಹಿತ್ಯದ ರಚನೆಯಲ್ಲಿ ಅನುಕೂಲಕರವಾಗಿಯೇ ಮುಖ್ಯ ಪಾತ್ರವಹಿಸುತ್ತವೆ. ಬರಹ ರೂಪದಲ್ಲಿ ಇವು ಕಂಡುಕೊಂಡಿರುವ ಸಾಧ್ಯತೆಗಳು ಅನೇಕ ಬಗೆಯಲ್ಲಿ ನಮ್ಮ ನಡುವಿವೆ.

ಕನ್ನಡದಲ್ಲಿ ಇಪ್ಪತ್ತನೇ ಶತಮಾನದ ಆರಂಭದಲ್ಲಿ ಶೈಕ್ಷಣಿಕ ಪಠ್ಯ ಸಿದ್ಧಗೊಳಿಸತೊಡಗಿದಾಗ ಆಸರೆಗೆ ನಿಂತಿದ್ದು ಈ ಜನಪದ ಕತೆಗಳೇ. ಶೈಕ್ಷಣಿಕ ಪಠ್ಯದಾಚೆ ಮಕ್ಕಳಿಗಾಗಿ ಪ್ರತ್ಯೇಕವಾಗಿ ಕತೆಗಳನ್ನು ನೀಡತೊಡಗಿದ ಮೇಲೂ ಜನಪದ ಕತೆಗಳೇ ಪ್ರಾರಂಭದ ಸಮಯದಲ್ಲಿ ದೊಡ್ಡ ಆಕರವಾಗಿ ಕಂಡು ಬಂದಿದ್ದು ಕನ್ನಡದಲ್ಲಿ ಸಾಮಾನ್ಯವಾಗಿದೆ. ಇವನ್ನು ಮಕ್ಕಳಿಗೆ ಎಂದು

ನೀಡುವಾಗ ಸರಳ ಭಾಷೆಯಲ್ಲಿ ನೀಡುವುದರೊಂದಿಗೆ ಹಲವು ಬಗೆಯಲ್ಲಿ ಮರುನಿರೂಪಣೆಗಳಿದಿರುವುದು ಕಾಣುತ್ತದೆ. ಸಾಮಾನ್ಯವಾಗಿ ಈ ಬಳಕೆಯನ್ನು ಈ ಕೆಳಕಂಡಂತೆ ವಿಂಗಡಿಸಬಹುದು.

* ನಿರ್ದಿಷ್ಟದ ದೃಷ್ಟಿಕೋನವಿಲ್ಲದೆ, ಜನಪದ ಕತೆಯೆಂದರೆ ಅದು ಮಕ್ಕಳಿಗೆ ಎಂದುಕೊಂಡು ನೀಡಿರುವುದು. ಹಾಗಿದ್ದಾಗಲೂ ಇಲ್ಲಿ ಕತೆಯು ಹಿಂದೆ ಯಾವಾಗಲೋ ನಡೆದಿದ್ದು, ಜಾದೂ ಮುಂತಾದ ಅಸಾಂಭವ್ಯ ಸಂಗತಿಗಳು ನಡೆಯುತ್ತಿರುತ್ತವೆ. ರೋಚಕವಾಗಿ ಏನೇನೆಲ್ಲಾ ಕತೆಯಲ್ಲಿ ನಡೆಯುವುದು, ಹಾಸ್ಯಮಯವಾದ ಪ್ರಸಂಗವಿರುವುದು, ಪೆದ್ದರ ನಗಿಸುವ ಸಂಗತಿಗಳಿರುತ್ತವೆ. ರಂಜಕವಾದ, ಚಾತುರ್ಯದ, ಚುರುಕುತನಕ್ಕೆ ಆಹ್ವಾನ ನೀಡುವಂಥಹ ಲೆಕ್ಕಗಳಿರುವುದು, ಬಿಡಿಸುವ ಒಗಟುಗಳಿರುತ್ತವೆ. ಹೀಗೆ ನಾನಾ ಬಗೆಯ ಫ್ಯಾಂಟಸಿ ಸಾಮಗ್ರಿ ಮಕ್ಕಳಿಗೆ ಇಷ್ಟವಾಗುತ್ತದೆ ಇದರಿಂದ ಈ ಜನಪದ ಕತೆಗಳನ್ನು ಆಯ್ದುಕೊಳ್ಳುವುದು ಕಂಡು ಬರುತ್ತದೆ.

* ರಂಜಕತೆ ಪ್ರಧಾನವಾದಾಗ ಯಾವುದೇ ಉಪದೇಶದ ಹೇರಿಕೆ ಇರುವುದಿಲ್ಲ. ಚಾತುರ್ಯದ ಸಂಗತಿಗಳಿದ್ದು, ಮಕ್ಕಳನ್ನು ರಂಜಿಸುವ ಉದ್ದೇಶವಾಗಿಯೇ ಕತೆಗಳನ್ನು ಆಯ್ದುಕೊಳ್ಳಲಾಗಿರುತ್ತದೆ. ಸಾಮಾನ್ಯವಾಗಿ ಪುಟ್ಟ ಮಕ್ಕಳಿಗೆ (೭–೮ ವರ್ಷದ ಮಕ್ಕಳು) ಇಂಥವನ್ನು ಅರಿಸುವುದು ನಡೆದಿರುತ್ತದೆ.

* ನೀತಿ, ಒಳ್ಳೆಯ ಬದುಕಿನ ಪಾಠವನ್ನು ತಿಳಿಸುವ ಕಥೆಗಳ ಆಯ್ಕೆ ನಡೆದಿರಬಹುದಾಗಿದೆ. ಆದರ್ಶ, ಮೌಲ್ಯಗಳು ಮುಂತಾಗಿ ಮಕ್ಕಳ ಉತ್ತಮ ಭವಿಷ್ಯ ರೂಪಿಸುವ ಉದ್ದೇಶಗಳನ್ನು ಇಟ್ಟುಕೊಡು ಕತೆಗಳನ್ನು ಅಯ್ದುಕೊಂಡಿರುವುದು ಕಂಡು ಬರುತ್ತದೆ.

ಹೀಗೆ ಹಲವು ಆಶಯಗಳು ಕನ್ನಡದಲ್ಲಿ ಮಕ್ಕಳಿಗಾಗಿ ಕಥೆಗಳನ್ನು ಆಯ್ದು ನೀಡುವಾಗ ಮುನ್ನೆಲೆಗೆ ಬಂದಿವೆ. ಅವುಗಳಲ್ಲಿ ಕೆಲವನ್ನು ಜನಪದ ಪರಂಪರೆಯ ಭಾಗವಾಗಿ ಚರ್ಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಇದುವರೆಗೆ ಲೇಖಕರಿಂದ ಬಂದ ಜನಪದ ಮಕ್ಕಳ ಸಾಹಿತ್ಯದ ಕೆಲವು ಕತೆಗಳನ್ನು, ಕೃತಿಗಳನ್ನು ಅಧ್ಯಯನಕ್ಕೆ ಇರಿಸಿಕೊಂಡು ಚರ್ಚಿಸಲಾಗಿದೆ. ಆ ಕೃತಿಗಳಲ್ಲಿ ಬಹು ಮುಖ್ಯವಾಗಿ ಕಂಡುಬಂದ ಆಶಯಗಳನ್ನು ಕೇಂದ್ರೀಕರಿಸಿ ಕಥೆಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಜನಪದ ಕಥೆಗಳ ಪ್ರಮುಖ ಆಶಯಗಳಾದ ನೀತಿ, ಮಾಂತ್ರಿಕ ಜಗತ್ತು, ಸಾಮಾಜಿಕ ಬದುಕು, ಒಗಟುಗಳು, ರಂಜನೀಯ ಸಂಗತಿಗಳು, ಅಶಕ್ತರ ಗೆಲುವು–ಸೋಲುಗಳು ಹೀಗೆ ಜನಪದ ಫ್ಯಾಂಟಸಿ ಕಥೆಗಳನ್ನು ವಿಶ್ಲೇಷಿಸುವಲ್ಲಿ ಬಳಸಬಹುದಾಗಿದ್ದ ಆಶಯಗಳನ್ನಿಟ್ಟುಕೊಂಡೇ ಇಲ್ಲಿ ಚರ್ಚಿಸಲಾಗಿದೆ.

೪.೧.೨.೧. ಕಥೆಗಳ ಆಯ್ಕೆ ಮತ್ತು ಫ್ಯಾಂಟಸಿ

ಪಂಜೆ ಮಂಗೇಶರಾಯರು ಪಠ್ಯಕ್ಕೆ ಆಯ್ದುಕೊಂಡಿದ್ದು ಮಕ್ಕಳಿಗೆ ಆದಷ್ಟೂ ನಿರ್ದಿಷ್ಟವಾಗಿರುವಂಥ ಕಥೆಗಳೇ ಎನ್ನಬಹುದು. ಮೇವುಂಡಿ ಮಲ್ಲಾರಿ ಅವರು ಬಳಸಿಕೊಂಡಾಗ ಅವನ್ನು ಓದುಗ ಮಕ್ಕಳನ್ನು ಗಮನಿಸಿಕೊಂಡು ರುಚಿಕಟ್ಟಾಗಿ ಹೊಸತಾಗಿ ನಿರೂಪಿಸಿರುವುದು ಕಾಣಿಸುತ್ತದೆ. ದೇವುಡು

ಮಕ್ಕಳ ಗ್ರಹಿಕೆಯನ್ನು ಗಮನಿಸುತ್ತಾ ವಿಭಿನ್ನ ಕತೆಗಳನ್ನು ಆಯ್ದುಕೊಳ್ಳುತ್ತಾರೆ. ಹೊಯ್ಸಳರು ತಮ್ಮ ನಿರೂಪಣೆಯಲ್ಲಿಯೇ ಓದುಗ ಮಕ್ಕಳನ್ನು ಮುಂದಿರಿಸಿಕೊಂಡು ಅತ್ಯಂತ ರಂಜಕವಾಗಿ, ಬಲು ಸೊಗಸಾಗಿ ನಿರೂಪಿಸುವುದು ಕಾಣುತ್ತದೆ. ಫ್ಯಾಂಟಸಿಯು ಕಥೆಗಳ ಆಯ್ಕೆಯಲ್ಲಿ ಲೇಖಕರ ಮನೋಧೋರಣೆ ಪ್ರಮುಖ ಪಾತ್ರವಹಿಸುತ್ತದೆ.

ಹೀಗೆ ನಮ್ಮ ನಡುವೆ ವಿಭಿನ್ನವಾಗಿ ಫ್ಯಾಂಟಸಿ ಕತೆಗಳನ್ನು ಬಳಸಿಕೊಂಡಿರುವುದು ಕಾಣುತ್ತದೆ. ಈ ಯಾವ ಬಗೆಯ ಪರಿಷ್ಕಾರಕ್ಕೂ ತೊಡಗದೆ ಒಂದಿಷ್ಟು ಸರಳ ನಿರೂಪಣೆಯಲ್ಲಿಯೇ ತೃಪ್ತಿಪಡುವವರು ಇದ್ದಾರೆ. ಕೆಲವೆಲ್ಲ ಹಿರಿಯ, ಮಕ್ಕಳಲ್ಲೂ ಆಸಕ್ತಿವಹಿಸಿದ ಪ್ರಬುದ್ಧ ಲೋಕದ ಬರಹಗಾರರು, ಇನ್ನು ಕೆಲವರು ಸೊಗಸಾಗಿಯೇ ನೀಡಿದುದನ್ನು ಬಿಟ್ಟರೆ ಈ ಜನಪದ ಕತೆಗಳನ್ನು ಮಕ್ಕಳಿಗಾಗಿ ನೀಡಿದ್ದು ಒಂದು ಬಗೆಯಲ್ಲಿ ಕಾಡಿನಂತೆ ಅನಿಸುತ್ತದೆ. ಅಷ್ಟರಮಟ್ಟಿಗೆ ವಿಪುಲವಾಗಿ ಬಂದಿವೆ. ಭಾರತೀಸುತ ಮೊದಲಾದ ಹಿರಿಯ ಲೇಖಕರೇ ಪಂಜೆ ಮಂಗೇಶರಾಯರಿಂದ ಸ್ಫೂರ್ತಿಗೊಂಡು ವಿಪುಲವಾಗಿ ಜನಪದ ಕತೆಗಳನ್ನು ನೀಡಿದ್ದಿದೆ. ಚಿ.ಪಾಂಡುರಂಗರಾಯರಂಥವರು ಬಲು ದೀರ್ಘವಾದ ಕತೆಗಳನ್ನು ಮಕ್ಕಳಿಗಾಗಿ ನೀಡಿದ್ದಾರೆ.

ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಮೂರನೆಯ ಘಟ್ಟ ಎಂದು ಸಾಮಾನ್ಯವಾಗಿ ಮಾಡಿಕೊಳ್ಳುವ ಸಮಯದವರೆಗೂ(ಅಂದಾಜು ೨೦ನೆಯ ಶತಮಾನದ ಎಂಬತ್ತರ ದಶಕ ಅನ್ನಬಹುದು.) ಈ ಬಗೆಯ ಕತೆಗಳನ್ನೇ ಮಕ್ಕಳಿಗಾಗಿ ನೀಡುತ್ತಾ ಬಂದುದನ್ನು ನೋಡಬಹುದು. ಈ ಕತೆಗಳು ಮಕ್ಕಳಿಗೆ ಎಷ್ಟರ ಮಟ್ಟಿಗೆ ಸೂಕ್ತ ಎಂದು ಚಿಂತಿಸಿದ್ದಾಗಲಿ, ಇವನ್ನು ಮಕ್ಕಳಿಗೆ ನೀಡುವಾಗ ಮಕ್ಕಳಿಗೆ ಸೂಕ್ತವಾಗಿ ಪರಿಷ್ಕರಿಸುವುದಾಗಲಿ, ಮಕ್ಕಳಿಗೇ ಆಪ್ಯಾಯಮಾನವೆಂದುಕೊಂಡು ಇರಿಸಿಕೊಳ್ಳುವುದಾಗಲಿ ಎಷ್ಟರ ಮಟ್ಟಿಗೆ ನಡೆಯಿತು ಎನ್ನುವುದನ್ನು ಪ್ರತ್ಯೇಕ ಅಧ್ಯಯನವೇ ಹೇಳಬೇಕು, ಅದು ನಮ್ಮ ನಡುವೆ ಇಲ್ಲಿಯವರೆಗೆ ಪೂರ್ಣವಾಗಿ ನಡೆದಿಲ್ಲ. ಹಳ್ಳಿಗಾಡಿನ ಜನ ಸಮುದಾಯದ ಈ ಕತೆಗಳು ಮಕ್ಕಳ ಕತೆಗಳೇ ಎನ್ನುವಷ್ಟರ ಮಟ್ಟಿಗೆ ಭಾವಿಸುವುದೇ ಹೆಚ್ಚು.

೪.೧.೨.೨. ಹೊಸತಿನ ಆರಂಭ ಮತ್ತು ಜನಪದ ಕಥೆಗಳು

ಪ್ರಬುದ್ಧರ ನಡುವೆ ಹೊಸಗಾಲದ ಕಥಾ ಜಗತ್ತು ತೆರೆದುಕೊಳ್ಳುತ್ತಿದ್ದಂತೆ, ಈ ಹಳ್ಳಿಗಾಡಿನ ಕತೆಗಳು ಬದಿಗೆ ಸರಿಯತೊಡಗಿದವು, ಹಾಗೆ ಬದಿಗೆ ಸರಿದವು ಮಕ್ಕಳಿಗೇ ಎಂದು ನಿಗದಿಯಾಗತೊಡಗಿದವು. ಇಂಗ್ಲೀಷಿನಲ್ಲಿ ಹೊಸಗಾಲದ ಫ್ಯಾಂಟಸಿಯ ಪಿತಾಮಹ ಎಂದು ಕರೆಯಿಸಿಕೊಳ್ಳುವ ಟಾಲ್ಕಿಯಾನ್‌ನ ಪ್ರಸಿದ್ಧವಾದ ಪ್ರಬಂಧ ಈ ಕುರಿತಾಗಿಯೇ ಇದೆ.[೬] ಈ ಜನಪದ ಕತೆಗಳು ಒಂದು ಬಗೆಯಲ್ಲಿ ಗಮನಿಸಬೇಕಾದ ಸಾಹಿತ್ಯಿಕ ರಚನೆಗಳೇ ಆಗಿದ್ದು, ಇವನ್ನೆಲ್ಲ ಮಕ್ಕಳ ಕತೆಗಳೆಂದು ಗಣಿಸುವುದು ಸರಿಯಲ್ಲ ಎಂದು ಅವನು ದೀರ್ಘವಾಗಿ ಚರ್ಚಿಗಿಳಿದಿರುವುದು

ಅಲ್ಲಿದೆ. ಏನೇ ಇರಲಿ, ಇಂದು ನಮ್ಮ ನಡುವೆ ಭಾವಿಸಿಕೊಳ್ಳುವ ಮಕ್ಕಳ ಕತೆಗೂ ಈ ಜನಪದ ಎನ್ನುವ ಕತೆಗೂ ಬಹಳಷ್ಟು ಅಂತರಗಳಿವೆ ಎನ್ನುವುದು ಸ್ಪಷ್ಟವಾಗಿದೆ.

ಜನಪದ ಕತೆಗಳು ಕನ್ನಡದಲ್ಲಿ ಮಕ್ಕಳ ನಡುವೆ ಅವರದೇ ಓದಿನ ಸಾಮಗ್ರಿಯಾಗಿ ಇಪ್ಪತ್ತನೆಯ ಶತಮಾನದುದ್ದಕ್ಕೂ ಹರಿದು ಬಂದು, ಇಂದಿಗೂ ಕಾಣಿಸಿಕೊಳ್ಳುತ್ತಲೇ ಇರುವುದರಿಂದ ಅವುಗಳನ್ನೂ ಮಕ್ಕಳ ಕತೆಗಳ ಅಧ್ಯಯನದಲ್ಲಿ ಗಣಿಸುವ ಅನಿವಾರ್ಯತೆ ಇದೆ. ಅವು ಮಕ್ಕಳಿಗಾಗಿ ಎಂದು ಪ್ರತ್ಯೇಕವಾಗಿ ಸಂಗ್ರಹಿತವಾಗಿರುವ ಪುಸ್ತಕಗಳಿಂದ, ಪತ್ರಿಕೆಯಲ್ಲಿ ಮಕ್ಕಳ ಅಂಕಣಗಳಲ್ಲಿ ನಿಗದಿತವಾಗಿ ಇಂಥವೇ ಬರುತ್ತಿರುವುದರಿಂದ ಅಂಥವನ್ನೆಲ್ಲ ಇರಿಸಿಕೊಂಡು ಅಧ್ಯಯನಕ್ಕೆ ಇಳಿಯಬೇಕಿದೆ. ಸದ್ಯದ ಪ್ರಬಂಧದ ವಿಷಯ ಫ್ಯಾಂಟಸಿಯಾದುದರಿಂದ ಈ ಬಗೆಯ ಕತೆಗಳೊಳಗೆ ಫ್ಯಾಂಟಸಿ ಸ್ವರೂಪ ಹೇಗೆಲ್ಲಾ ಇದೆ ಎನ್ನುವುದನ್ನು ವಿಶ್ಲೇಷಿಸಿದೆ.

ಇಲ್ಲಿನ ಕತೆಗಳಲ್ಲಿ ಕಾಣಿಸುವ ಫ್ಯಾಂಟಸಿ ಮಕ್ಕಳಿಗೇ ಸಿದ್ಧವಾದ ಫ್ಯಾಂಟಸಿಯಲ್ಲ. ಅದು ಒಟ್ಟಾರೆ ಜನಪದ ಎನ್ನುವ ಕತೆಗಳಿಗೆಲ್ಲಾ ಅನ್ವಯವಾಗುವ ಫ್ಯಾಂಟಸಿಯಾಗಿದೆ. ಅಲ್ಲದೇ ಕನ್ನಡ ಮಕ್ಕಳ ಸಾಹಿತ್ಯದ ಹಿರಿಯರು, ನಿಡಿದಾದ ಕೊಡುಗೆ ನೀಡಿದವರು ಎಂದೆಲ್ಲಾ ಹಲವರನ್ನು ಹೆಸರಿಸುತ್ತಾ, ಅವರು ನೀಡಿದ ಈ ಬಗೆಯ ಸಂಗ್ರಹಿತ ಕತೆಗಳಲ್ಲಿಯೂ ಕಾಣುವ ಫ್ಯಾಂಟಸಿ ಜನಪದ ಸಮುದಾಯದ್ದೇ ಹೊರತು ಬೇರಲ್ಲ. ಹೀಗಾಗಿ ಕನ್ನಡದ ಬಹು ದೀರ್ಘ ಸಮಯದ, ಸುಮಾರು ೧೫೦–೨೦೦ ವರ್ಷದ ಅವಧಿಯ ಕಥಾಲೋಕ ತನ್ನೊಳಗೆ ಇಟ್ಟುಕೊಂಡಿರುವ ಫ್ಯಾಂಟಸಿ ಜನಪದ ಪರಂಪರೆ ಕಂಡುಕೊಂಡ ಫ್ಯಾಂಟಸಿಯೇ ಆಗಿದೆ.

ಹೀಗಾಗಿ ಪ್ರತ್ಯೇಕ ಲೇಖಕರ ಕೊಡುಗೆ ಎಂದು, ಅವುಗಳ ವಿಶೇಷ ಎಂದು ನೋಡುವ ಅಗತ್ಯವೇ ಬೀಳುವುದಿಲ್ಲ. ಆ ಬಗೆಯ ಪ್ರತ್ಯೇಕತೆ ಏನಿದ್ದರೂ ಅವರು ತಮ್ಮದಲ್ಲದ, ಈ ಸಂಗ್ರಹಿತ ಕತೆಗಳನ್ನು ಹೇಗೆಲ್ಲಾ ನಿರೂಪಿಸಿದ್ದಾರೆ, ಮಕ್ಕಳಿಗಾಗಿ ಎಷ್ಟೆಲ್ಲಾ ಪರಿಷ್ಕರಿಸಿದ್ದಾರೆ, ಹೇಗೆಲ್ಲಾ ಆಯ್ಕೆಗಿಳಿದಿದ್ದಾರೆ, ಮಕ್ಕಳ ಮುಂದೆ ಎಷ್ಟೆಲ್ಲಾ ಸೊಗಸಿನಿಂದ(ಚಿತ್ರಗಳನ್ನಿರಿಸಿಕೊಂಡೂ)ಇರಿಸಲು ನೋಡಿದ್ದಾರೆ ಎನ್ನುವುದರಲ್ಲಿ ಕಾಣಬಹುದು.

೪.೧.೨.೩. ನೀತಿ ಪ್ರಧಾನ ಕಥೆಗಳು ಮತ್ತು ಫ್ಯಾಂಟಸಿ

ಮಕ್ಕಳಿಗಾಗಿ ಬರೆಯುವ ಕತೆಗಳು ಬಹುತೇಕ ಮಕ್ಕಳನ್ನು ಜಾಣರನ್ನಾಗಿ ಮಾಡುವ ಇಲ್ಲವೆ ಅವರಿಗೆ ನೀತಿಯನ್ನು ಬೋಧಿಸುವ ಕತೆಗಳಾಗಿರುತ್ತಿದ್ದವು. ಮಕ್ಕಳಿಗೆ ಮುಟ್ಟಿಸಬೇಕಾದ ಈ ಉದ್ದೇಶವನ್ನು ಸಾಧಿಸಲು ಲೇಖಕರು ಪ್ರಾಣಿ, ಪಕ್ಷಿಗಳನ್ನು ಯತೇಚ್ಛವಾಗಿ ಬಳಸಿಕೊಂಡಿದ್ದನ್ನು ಈಗಾಗಲೇ ಕಂಡಿದ್ದಾಗಿದೆ. ಕುವೆಂಪು ಅವರು ಕೂಡ ಈ ಬಗೆಯ ಉದ್ದೇಶವನ್ನಿಟ್ಟುಕೊಂಡು 'ನರಿಗಳಿಗೇಕೆ ಕೋಡಿಲ್ಲ' ಎನ್ನುವ ಒಂದು ಜನಪದ ಕತೆಯನ್ನು ಆರಿಸಿಕೊಂಡಿದ್ದಾರೆ. ಕಥೆಯನ್ನು ಆಯ್ದುಕೊಳ್ಳುವುದು, ಅದರ ಉದ್ದೇಶ ಈಡೇರಿಕೆಗೆ ಫ್ಯಾಂಟಸಿಯನ್ನು ಬಳಸುವುದು ಲೋಯರ್ ಫ್ಯಾಂಟಸಿಯ ಲಕ್ಷಣವಾಗಿದೆ.

ಕುವೆಂಪು ಅವರು ಈ ಕಥೆಯಲ್ಲಿ ಗುಬ್ಬಿಯ ಮೂಲಕ ಆ ಕಾರ್ಯ ಸಫಲಗೊಳಿಸಿಕೊಂಡಿದ್ದಾರೆ. ಕಥೆಯಲ್ಲಿ ಪ್ರಾಣಿಗಳು, ಪಕ್ಷಿಗಳು ಭಾಗವಹಿಸುತ್ತವೆ. ವಿಪರೀತ ಮಳೆಯಾಗಿ ಚಳಿಯಾಗಿ ಆಸರೆ ಇಲ್ಲದೆ ಬಳಲುವ ಹುಲಿ, ಕರಡಿ ಹಾಗೂ ನರಿ ಆಸರೆ ಹುಡುಕುತ್ತಾ ಬಂದು ಗುಬ್ಬಕ್ಕನ ಮನೆಯಲ್ಲಿ ಆಶ್ರಯಕ್ಕಾಗಿ ನಿಲ್ಲುವುದು ಅಲ್ಲಿಯೇ ಅವರಿಬ್ಬರಿಗೆ ನೀತಿಯನ್ನು ಬೋಧಿಸುವ ಘಟನೆಗಳು ನಡೆಯುತ್ತವೆ.

ಗುಬ್ಬಿಯಿಂದ ಆಸರೆ ಪಡೆದ ನಂತರ ಕೃತಜ್ಞತೆಯಿಂದ ಹುಲಿ, ಕರಡಿ ಮರುದಿನ ಹೊರಟು ಹೋಗುತ್ತಾರೆ. ನರಿಯಣ್ಣ ಗುಬ್ಬಕ್ಕ ಹೊರಗೆ ಹೋದುದನ್ನು ಗಮನಿಸಿ ಅವಳ ಮರಿಗಳನ್ನು ಗುಳುಂ ಮಾಡಿ ಓಡುತ್ತಾನೆ. ಗುಬ್ಬಕ್ಕ ಮರಿ ಕಾಣದೆ ಗೋಳಾಡುತ್ತಾ, ಹುಲಿಯನ್ನೂ ಕರಡಿಯನ್ನೂ ಕಾಣುತ್ತಾಳೆ. ಅವು ನಡೆದ ಸಂಗತಿಯನ್ನು ಊಹಿಸಿ ನರಿಯನ್ನು ಪತ್ತೆ ಹಚ್ಚಲು ನಡೆದವು. ಅದು ಸಿಕ್ಕಾಗ ಅದೇ ನುಂಗಿದ್ದು ಪತ್ತೆಯಾಯಿತು. ಹುಲಿಯಣ್ಣ ನರಿಯನ್ನು ಮುಗಿಸಿಹಾಕಲು ನೋಡಿದಾಗ, ಕರಡಿಯಣ್ಣ ಅದರ ಹೊಟ್ಟೆಯನ್ನು ಬಗೆಯಲು ಹೇಳಿದಾಗ, ಅದರ ಗೋಳಾಟ ನೋಡದೆ ಗುಬ್ಬಕ್ಕನೇ ಉಪಾಯ ಹೇಳಿದಳು. ಅದರಂತೆ ಹುಲಿಯಣ್ಣ ಗಟ್ಟಿಯಾಗಿ ಹಿಡಿದುಕೊಂಡ. ಕರಡಿಯಣ್ಣ ಬಲವಾಗಿ ಗುದ್ದಿದ. ಮರಿಗಳು ಬಾಯಿಂದ ಈಚೆ ಬಿದ್ದವು, ಗುಬ್ಬಕ್ಕ ಸಂತೋಷದಿಂದ ಎತ್ತಿಕೊಂಡು ಹೋದಳು, ಹೋಗುವಾಗ ಕೋಡುಗಳಿದ್ದ ನರಿಗೆ ನಿನ್ನ ಜಾತಿಗೇ ಕೋಡು ಇರುವುದು ಬೇಡ ಎಂದು ಶಪಿಸಿ ಹೋದಳು. ಅದರಿಂದ ಮೊದಲಿದ್ದ ಕೋಡು ಮರೆಯಾಯಿತು. ಇದಿಷ್ಟು ಕಥಾಸಾರ.

ಇದಿಷ್ಟು ಒಟ್ಟಾರೆ ಜನಪದ ಕತೆಗಳಲ್ಲಿನ ಪ್ರಾಣಿಕತೆಗಳ ಗುಂಪಿನಲ್ಲಿ ಸೇರಿಸಿಬಿಡಬಹುದಾದ ಸಂಗತಿಯಾಗಿದೆ. ಪ್ರಾಣಿಗಳು ಮಾತನಾಡುವ, ಮನುಷ್ಯರ ಹಾಗೆ ವರ್ತಿಸುವ, ಅವಕ್ಕೆ ಸಹಜವಲ್ಲದ ವ್ಯಾಪಾರವಾಗಿ ಅವರು ಪರದಾಡುವುದು, ಪ್ರಾಮಾಣಿಕವಾಗಿ ನಡೆದುಕೊಳ್ಳುವುದು ಈ ಬಗೆಯ ಕಥೆಗಳಲ್ಲಿ ಸಾಮಾನ್ಯವಾಗಿ ಕಂಡು ಬರುತ್ತದೆ. ಪುಟ್ಟ ಗುಬ್ಬಿಯ ಮನೆ ಇವೆಲ್ಲಕ್ಕೆ ಆಸರೆಯಾಗುವುದು, ಪುಟ್ಟ ಗುಬ್ಬಿ ಏನೇನೆಲ್ಲಾ ಮಾಡುವುದು, ನರಿಯಂಥದು ಮೋಸಗೊಳಿಸಿ ಮರಿಗಳನ್ನು ನುಂಗಿಹಾಕುವುದು ಇವೆಲ್ಲಾ ನಮ್ಮಿಂದ ಅಂತರ ಕಾಯ್ದುಕೊಂಡ ಬದುಕಿನ ಚಿತ್ರಗಳನ್ನು ಹೇಳುತ್ತದೆ. ನಮ್ಮ ನಡೆವಳಿಕೆಗಳಿಗೆ ಒಂದಿಷ್ಟೆಲ್ಲಾ ಸಂದೇಶ ಸಾರುತ್ತದೆ.

ಈ ಬಗೆಯ ಸಾಮಾನ್ಯವಾಗಿ ಹರಡಿಕೊಂಡಿರುವ ಜನಪದ ಕಥಾಲೋಕದ ಸರಕನ್ನು ಕುವೆಂಪು ಅಂಥಹ ಲೇಖಕ ಮುಂದಿಡುವಾಗ ಬಲು ಸಂಭ್ರಮಿಸಿಕೊಂಡು, ಅತ್ಯಂತ ರಮಣೀಯವಾಗಿ ಹೇಳಲು ನೋಡುವುದು ಅವರದೇ ಆದ ವಿಶೇಷ. ಅವರು ಗುಬ್ಬಿಯ ಮನೆಯನ್ನು ವಿಶಿಷ್ಟ ಬಗೆಯಲ್ಲಿ ಕಲ್ಪಿಸಿಕೊಡುತ್ತಾರೆ. 'ಮರದ ಕೊಂಬೆಯಲ್ಲಿಯೇ ಇದ್ದರೂ ಅದಕ್ಕೆ ಬೆಲ್ಲದ ಗೋಡೆಗಳು, ಸಕ್ಕರೆ ಬಾಗಿಲು, ಕಬ್ಬಿನ ಮುಚ್ಚಿಗೆ, ಮನೆಯ ಅಂಗಗಳದಲ್ಲಿ ಒಂದು ಪುಟ್ಟ ಸರೋವರ, ಅದರಲ್ಲಿ ನೀರಿನ ಬದಲು ಜೇನುತುಪ್ಪ'. ಅಷ್ಟೇ ಅಲ್ಲ ಗೋಡೆಗೆ ತೂಗುಹಾಕಿದ್ದ ಮಹಾತ್ಮಾಗಾಂಧಿಯ

ಪಟ, ಶ್ರೀರಾಮಕೃಷ್ಣ, ವಿವೇಕಾನಂದರ ಪಟಗಳಿದ್ದವು. ಇದೆಲ್ಲ ಯಾಕೆ ಅಂತ ಕರಡಣ್ಣನು ಕೇಳಿದರೆ ಗುಬ್ಬಕ್ಕ ಹೇಳಿದ್ದು, 'ಮಕ್ಕಳು ಈ ಮಹಾಪುರುಷರ ಸನ್ನಿಧಿಯಲ್ಲಿ ಬೆಳೆದರೆ ಅವರೂ ಮಹಾತ್ಮರಾಗುತ್ತಾರೆ, ಭರತ ಮಾತೆಯ ಉದ್ಧಾರ ಮಾಡುತ್ತಾರೆ' ಎಂದು. ಇಲ್ಲಿ ಕಥೆಯ ಮೂಲ, ಆಶಯ, ಸಂವಿಧಾನ ಎಲ್ಲವೂ ಜನಪದ ಪ್ರೇರಿತವೇ. ಆದರೆ ಗುಬ್ಬಿಯ ಗೂಡಲ್ಲಿ ಗಾಂಧಿ, ಪರಮಹಂಸರು ಬಂದುಬಿಡುವಲ್ಲಿಗೆ ಕಥೆ ವರ್ತಮಾನಕ್ಕೆ ಒಗ್ಗುವ ಪ್ರಯತ್ನ ಮಾಡಿದೆ. ಮಕ್ಕಳಿಗೆ ಆದರ್ಶವನ್ನು ಪಾಲಿಸಲು ಹೇಳುತ್ತಿವೆ. ನೈಸರ್ಗಿಕ ಸಂಗತಿಗೆ ಕಾರಣ ಹುಡುಕುವ ಬಗೆಯ ಕಥೆಗಳು ಕನ್ನಡದಲ್ಲಿ ದೇವುಡು ಅವರಿಂದ ಹೆಚ್ಚು ಬಂದಿವೆ. ಮಕ್ಕಳಿಗೆ ಫ್ಯಾಂಟಸಿ ಕಥೆಗಳನ್ನು ಹೆಣೆಯುವರಿಗೆ ಈ ಬಗೆಯ ಸಂಗತಿಗಳು ಸಾಧನಗಳಾಗಿ ವರ್ತಿಸುತ್ತವೆ. ಈ ಮೂಲಕ ಫ್ಯಾಂಟಸಿಯು ಕಥೆಗಳಲ್ಲಿ ನೈಸರ್ಗಿಕ ಗುಟ್ಟುಗಳಿಗೆ ಉತ್ತರದಾಯಿತ್ವದ ರೂಪದಲ್ಲಿ ಬಂದಿದೆ.

೪.೧.೨.೪. ಮಾಂತ್ರಿಕ ಜಗತ್ತು ಮತ್ತು ಫ್ಯಾಂಟಸಿ

ಫ್ಯಾಂಟಸಿ ಕಥೆಗಳಲ್ಲಿ ಪ್ರಧಾನವಾಗಿ ಕಂಡುಬರುವುದು ವಾಸ್ತವವಲ್ಲದ ಲೋಕ. ಇದು ಕತೆಯಲ್ಲಿ ಸಕಾರಾತ್ಮಕವಾಗಿ ಇಲ್ಲವೆ ನಕಾರಾತ್ಮಕವಾಗಿ ಸೃಷ್ಟಿಗೊಂಡಿರುತ್ತದೆ. ಕಥೆಯ ತಂತ್ರವಾಗಿ, ಕೇಂದ್ರವಾಗಿ ಈ ಮಾಂತ್ರಿಕ ಜಗತ್ತು ಬಳಕೆಯಾಗಿರುವುದು ಕಂಡುಬರುತ್ತದೆ. ಇದು ಇಡೀ ಕಥೆಯ ಓಘವನ್ನು ಬದಲಿಸುವ ತಾಕತ್ತನ್ನು ಹೊಂದಿರುತ್ತದೆ. ಮೇವುಂಡಿ ಮಲ್ಲಾರಿಯವರ ಬಂಗಾರದ ಕೂದಲಿನ ರಾಕ್ಷಸ ಕತೆಯಲ್ಲಿ ರಾಕ್ಷಸನ ಮಾಯದ ಗವಿಯು ಮಾಂತ್ರಿಕ ಜಗತ್ತನ್ನು ತೆರೆದಿಡುತ್ತದೆ. ವಿಜಯನಗರ ಎನ್ನುವ ಊರಿನ ದೇವರಾಯ ಎಂಬ ರಾಜನ ಕತೆ ಇಲ್ಲಿದೆ. ಅವನು ಹಳ್ಳಿಯಲ್ಲಿ ಸುತ್ತಾಡಲು ಹೋದಾಗ ಮೊನ್ನೆ ಒಬ್ಬ ಬಡ ಬೇಡನ ಹೆಂಡತಿಗೆ ಗಂಡು ಕೂಸು ಹುಟ್ಟಿದೆ. ಅದೇ ಮುಂದೆ ರಾಜ್ಯದ ರಾಜನಾಗುತ್ತದೆಯಂತೆ ಅಂದರು. ರಾಜನು ಕೋಪಗೊಂಡು ಬೇಡ ದಂಪತಿಯಿಂದ ಮಗುವನ್ನು ಪಡೆದು ಪೆಟ್ಟಿಗೆಯಲ್ಲಿ ಮುಚ್ಚಿಟ್ಟು ನದಿಗೆ ಬಿಡುತ್ತಾನೆ. ಅದು ಮಕ್ಕಳಿಲ್ಲದ ಜಾಲಗಾರನೊಬ್ಬನಿಗೆ ಸಿಕ್ಕು, ಅವರು ಪ್ರೀತಿಯಿಂದ ಸಾಕಿ ದೊಡ್ಡವನಾಗಿ ಮಾಡುತ್ತಾರೆ. ಹದಿನೇಳು ವರ್ಷವಾದ ಮೇಲೆ ರಾಜನಿಗೆ ಈ ಹುಡುಗ ದೇವಕುಮಾರ ಬದುಕಿರುವುದು ಗೊತ್ತಾಗಿ, ಅವನನ್ನು ಕೊಲ್ಲಿಸಲು ರಾಣಿಗೆ ಪತ್ರ ಬರೆದು ಹುಡುಗನಿಗೇ ಕೊಟ್ಟು ಕಳಿಸುತ್ತಾನೆ.

ದಾರಿ ಕಾಣದ ಹುಡುಗ ಆಯಾಸಗೊಂಡು ಕಳ್ಳರ ಮನೆಗೆ ಬಂದು ಮಲಗಿಬಿಡುತ್ತಾನೆ. ಕಳ್ಳರು ಆ ಪತ್ರವನ್ನು ಓದಿ, ಅದರಲ್ಲಿನ ವಿಷಯ ಬದಲಾಯಿಸಿ ಹೀಗೆ ಬರೆಯುತ್ತಾರೆ; ಈ ಪತ್ರ ತಂದ ಹುಡುಗನಿಗೆ ರಾಜಕುಮಾರಿಯನ್ನು ಕೊಟ್ಟು ಮದುವೆ ಮಾಡತಕ್ಕದ್ದು. ರಾಣಿ ಹಾಗೆಯೇ ಮಾಡುತ್ತಾಳೆ. ರಾಜನಿಗೆ ಮತ್ತೆ ಕೋಪ ಬಂದು ತಮ್ಮಾ ನೀನು ನನ್ನ ಮಗಳನ್ನು ವರಿಸಲಿಕ್ಕೆ ನೂರು ಗಾವುದದಾಚೆ ಇರುವ ಮಾಯದ ಗವಿಯಲ್ಲಿನ ರಾಕ್ಷಸನ ತಲೆಯೊಳಗಿನಿಂದ ಮೂರು ಬಂಗಾರದ ಕೂದಲುಗಳನ್ನು ತರಬೇಕೆನ್ನುವ ಪಣವಿದೆ ಎಂದು ಅವನನ್ನು ಕಳಿಸುತ್ತಾನೆ.

ದೇವಕುಮಾರ ಅಲ್ಲಿಗೆ ತಲುಪುವ ಹಾದಿಯಲ್ಲಿ ತೋಟಗರು, ಅಂಬಿಗನು ಕೇಳುವ ಪ್ರಶ್ನೆಗಳನ್ನು ಕೇಳಿಸಿಕೊಳ್ಳುತ್ತಾನೆ. ರಾಕ್ಷಸನ ಅಜ್ಜಿಯ ಸಹಾಯದಿಂದ ಮೂರು ಬಂಗಾರದ ಕೂದಲುಗಳನ್ನು ಮೂರು ಪ್ರಶ್ನೆಗಳಿಗೆ ಉತ್ತರವನ್ನು ಪಡೆಯುತ್ತಾನೆ. ಅಪಾರ ಹೊನ್ನು ತೆಗೆದುಕೊಂಡು ಬಂದು ರಾಜನಿಗೆ ನಡೆದದ್ದು ಹೇಳುತ್ತಾನೆ. ಆಸೆಬುರುಕ ರಾಜ ತಾನೂ ಇದೆಲ್ಲವನ್ನೂ ಪಡೆಯಲು ಹೋಗಿ ಅಂಬಿಗನಾದ. ಇತ್ತ ದೇವಕುಮಾರ ಅರಸನಾದ.

'ರಾಜ ಮಗುವನ್ನು ಪೆಟ್ಟಿಗೆಯಲ್ಲಿ ಇಟ್ಟು ನೀರಿನಲ್ಲಿ ಬಿಡುತ್ತಾನೆ. ಅದು ಜಾಲಗಾರನಿಗೆ ಸಿಕ್ಕು ಅದನ್ನು ದೊಡ್ಡವನಾಗಿ ಮಾಡಿ ಅವನನ್ನು ರಾಜನಾಗಿ ಮಾಡಲು ಕಾರಣನಾಗುತ್ತಾನೆ'. ಕಥೆಯ ಈ ಘಟನೆ ಮಹಾಭಾರತದ ಕುಂತಿ-ಕರ್ಣ ಪ್ರಸಂಗವನ್ನು ಹೋಲುತ್ತದೆ. ಜನಪದ, ಪುರಾಣ, ಮಹಾಕಾವ್ಯಗಳ ಕಥನಗಳು ಒಂದಕ್ಕೊಂದು ಕೊಡುಕೊಳುವಿಕೆಯ ಪ್ರಕ್ರಿಯೆಯನ್ನು ನಡೆಸಿಯೇ ನಡೆಸಿರುವುದು ಈ ಬಗೆಯ ಅನೇಕ ಕಥೆಗಳಲ್ಲಿ ಕಂಡುಬರುತ್ತದೆ. ಈ ಕಥೆ ವಾಸ್ತವ ಬದುಕಿನ ಸಹಜ ಸಂಗತಿಗಳು ಮತ್ತು ರಾಕ್ಷಸ ಲೋಕದ ಅತಿವಾಸ್ತವ ಸಂಗತಿಗಳಿಂದ ಅರೆ ಫ್ಯಾಂಟಸಿ ಕಥೆಯಾಗಿದೆ.

ಜನಪದ ಕಥೆಗಳ ಸಾಮಾನ್ಯ ಗುಣವೆಂತಿರುವ ಅಸಹಾಯಕರು ಗೆಲ್ಲುವ, ಎಷ್ಟೇ ಕಷ್ಟಪಟ್ಟರೂ ಕೊನೆಗೆ ಅವರು ಸುಖವಾಗಿರುವ ಸಂಗತಿಗಳು ತುಂಬಾ ಕಾಣುತ್ತೇವೆ. ಅದು ಈ ಕಥೆಯ ರಾಕ್ಷಸರೂ ಕೂಡ ಅಸಹಾಯಕರು, ಬಡವರನ್ನು ಕಂಡಾಗ ಕರುಣೆ ತೋರುತ್ತಾರೆ. 'ಕಳ್ಳರ ಗುಂಪಿನ ನಾಯಕ ಆ ಕಾಗದವನ್ನು ಹರಿದೊಗೆದ. ಇನ್ನೊಂದು ಬೇರೆ ಕಾಗದವನ್ನು ರಾಣಿಗೆ ಬರೆದ. ಈ ಹುಡುಗನಿಗೆ ಬಂದ ಕೂಡಲೇ ರಾಜಕುಮಾರಿಯನ್ನು ಕೊಟ್ಟು ಮದುವೆ ಮಾಡಬೇಕು ತಡಮಾಡಬಾರದು'[೧೦] ಇಲ್ಲಿ ಅಶಕ್ತರ ಮುಂದೆ ಕಳ್ಳರೂ ಒಳ್ಳೆಯವರಾಗಿ ವರ್ತಿಸುತ್ತಾರೆ. ಸಾಮಾಜಿಕವೆನ್ನುವ ಕಥೆಗಳನ್ನೂ ಅತಿರಂಜಿತವೆನ್ನುವ ಮಟ್ಟಕ್ಕೆ ಬೆಳೆಸುವುದು ಮೇವುಂಡಿ ಮಲ್ಲಾರಿಯವರ ಬರಹದ ವಿಶಿಷ್ಟತೆ. ಅದು 'ಕೆಂಪು ಮೋತಿ ಹಂಪಣ್ಣ', 'ಬಂಗಾರದ ಕೂದಲಿನ ರಾಕ್ಷಸ' ಕಥೆಗಳಲ್ಲಿ ವ್ಯಕ್ತವಾಗಿದೆ.

ರಾಮಚಂದ್ರರಾವ್ ಎಚ್ ವಿ., ಅವರು ಮೂರು ದೀರ್ಘ ಕತೆಗಳನ್ನು ಸರಣಿಯಾಗಿ ಮಕ್ಕಳಿಗೆ ನೀಡಿದ್ದಾರೆ. ಅದರಲ್ಲಿ 'ಹಾಡುವ ಕೋಗಿಲೆ'ಯೂ ಅತಿಮಾನುಷ ಲೋಕವನ್ನು ಅನಾವರಣ ಮಾಡುವ ಕಥೆಯಾಗಿದೆ. ಒಬ್ಬ ರಾಜನಿಗೆ ಇಬ್ಬರು ಹೆಂಡತಿಯರು, ಮೂವರು ಮಕ್ಕಳು. ಗುಣವತಿ ಒಳ್ಳೆಯವಳು ಅವಳ ಮಗ ಗುಣ ಶೇಖರ ಧೈರ್ಯಶಾಲಿ, ಬುದ್ಧಿಶಾಲಿ, ಪರೋಪಕಾರಿ, ಚಂಚಲಾವತಿ ಎನ್ನುವ ರಾಣಿ ಹೊಟ್ಟೆಕಿಚ್ಚಿನವಳು. ಜನಪದ ಫ್ಯಾಂಟಸಿ ಕಥೆಗಳಲ್ಲಿ ಬರುವ ಪಾತ್ರಗಳ ಹೆಸರುಗಳು ಗುಣಗಳನ್ನು ಪ್ರತಿನಿಧಿಸುತ್ತವೆ. ರಾಜನಿಗೆ ಎಷ್ಟೋ ಜನ ರಾಣಿಯರಿದ್ದರೂ ಬಹುತೇಕ ಕಥೆಗಳಲ್ಲಿ ಕಿರಿಯ ರಾಣಿಯರನ್ನೇ ರಾಜ ಹೆಚ್ಚು ಪ್ರೀತಿಸುತ್ತಿರುತ್ತಾನೆ. ಅರಮನೆಯ ತೋಟದಲ್ಲಿನ ದಾಳಿಂಬೆ

ಗಿಡ ಮೂರೇ ಹಣ್ಣು ಬಿಡುತ್ತದೆ. ವರ್ಷಕ್ಕೆ ಎಲ್ಲಾ ರೋಗ ರುಜಿನಗಳನ್ನು ಗುಣಪಡಿಸುತ್ತದೆ. ಋಷಿ ಮುನಿಗಳೂ ಯಾವಾಗಲೂ ಕೋಪೋದ್ರಿಕ್ತರಾಗಿರುತ್ತಾರೆ ಎನ್ನುವುದನ್ನು ದಾಳಿಂಬೆ ಗಿಡದ ದಾಳಿಂಬೆ ಹಣ್ಣನ್ನು ನೀಡಲು ನಿರಾಕರಿಸಿದ ತೋಟದ ಮಾಲಿಗೆ ಋಷಿ ಶಾಪ ನೀಡಿದಲ್ಲಿ ಗುರುತಿಸಬಹುದು. ಋಷಿಯ ಶಾಪದಿಂದ ಒಣಗಿದ ತೋಟ ಮತ್ತೆ ಹಸಿರಾಗಲು ಹಾಡುವ ಕೋಗಿಲೆಯನ್ನು ತರಲು ರಾಜನು ತನ್ನ ಮಕ್ಕಳಾದ ಚಂಚಲಕುಮಾರ ಮತ್ತು ಕನಕಕುಮಾರರನ್ನು ಏಳು ಬೆಟ್ಟದಾಚೆ ಇರುವ ನರಾಂತಕನ ಬಳಿಗೆ ಕಳುಹಿಸುತ್ತಾನೆ.

ಗುಣವತಿಯ ಮಗನಾದ ಗುಣಶೇಖರನೂ ಕಾಡಿಬೇಡಿ ತಾನೂ ಹಾಡುವ ಕೋಗಿಲೆಯನ್ನು ಹುಡುಕಿ ಹೋಗುತ್ತಾನೆ. ಗುಣಶೇಖರ ಹೋಗುವ ಮೂರು ರಾಕ್ಷಸರ ತಾಣಗಳ ವರ್ಣನೆ ಅಲ್ಲಿನ ವ್ಯವಸ್ಥೆ ಮತ್ತು ರಾಕ್ಷಸನ ಗುಣವನ್ನು ತಿಳಿಸುತ್ತದೆ. ಅದು ಹೀಗಿದೆ; ಕರೀ ಬೆಟ್ಟಗಳು ಕಲ್ಲು ಬಂಡೆಗಳೆಲ್ಲಾ ಕಪ್ಪು ಅಂದರೆ ಕಪ್ಪು, ಇಜ್ಜಲು ಬೆಟ್ಟಗಳಿದ್ದ ಹಾಗೆ ಮರಗಳು ಕಪ್ಪಗೆ, ಅದರಲ್ಲಿರೋ ಎಲೆಗಳು ಕಪ್ಪು, ಹೂವುಗಳು ಕಪ್ಪು, ಅಲ್ಲಿ ಹರಿತಿರೋ ನದಿ ದಡದಲ್ಲಿರೋ ಮಣ್ಣು ಕಪ್ಪು, ನೀರೂ ಕಪ್ಪು".[೧೧] ಇದು ಕಾಳಾಸುರನ ರಾಜ್ಯದ ವರ್ಣನೆ. ಅವನು ಎಲ್ಲಾ ಕೆಂಪಗಿರುವ ಸ್ಥಳವೊಂದನ್ನು ತಲುಪಿದ. ಅಲ್ಲಿನ ಕೆಂಪು ನೀರು ತುಟಿಗೆ ತಾಗಿದ ತಕ್ಷಣ ತಿಳಿಯಾಗುವುದು. ಎರಡನೇ ಪ್ರಯಾಣದಲ್ಲಿ ಬೆಟ್ಟ, ಮರ ಹೂವು ನದಿ ಎಲ್ಲಾ ಬೆಳ್ಳಗಿವೆ. ರಾಕ್ಷಸರ ಸ್ಥಳಗಳಲ್ಲಿ ಹಸಿವು ರಾಕ್ಷಸರ ಮಟ್ಟಕ್ಕೇ ಇರುತ್ತದೆ. ಗುಣಶೇಖರ ರಾಕ್ಷಸರ ಗುಹೆಗಳಲ್ಲಿ ರಾಕ್ಷಸರಿಗೆ ಮಾಡಿದ್ದೆಲ್ಲವನ್ನೂ ತಿಂದು ಮುಗಿಸಿಬಿಡುತ್ತಾನೆ. ಮೂರು ಜನ ರಾಕ್ಷಸರನ್ನು ಕೊಂದು ಮೂವರು ಹುಡುಗಿಯರನ್ನು ಬಂಧ ಮುಕ್ತ ಮಾಡಿ ಮುಂದೆ ಹೋಗುತ್ತಾನೆ. ದಾರಿಯಲ್ಲಿ ನೀರು ಕುದುರೆ ಸಿಗುತ್ತದೆ. ಅದು ಮಾಯದ ಕುದುರೆಯಾಗಿದ್ದು ಅವನನ್ನು ಮಾಂತ್ರಿಕ ದ್ವೀಪಕ್ಕೆ ಕ್ಷಣದಲ್ಲೇ ಕಾಣಿಸಿತು. ನರಾಂತಕನ ಬಳಿ ಇದ್ದ ಕೊಳಗಿಲೆಯ ಪಂಜರವನ್ನು ತರಲು ಸಹಾಯ ಮಾಡಿತು. ನರಾಂತಕ ಒಮ್ಮೆ ಮಲಗಿದರೆ ೪೦ ದಿನ ಏಳುವುದಿಲ್ಲ. ಗುಣಶೇಖರ ನರಾಂತಕನ ದ್ವೀಪದಿಂದ ಹಾಡುವ ಕೋಗಿಲೆಯನ್ನು ಯಶಸ್ವಿಯಾಗಿ ನೀರು ಕುದುರೆ ಸಹಾಯದಿಂದ ತರುತ್ತಾನೆ.

ಗುಣಶೇಖರ ಶ್ಯಾಮಲೆಯನ್ನು, ಬೆಳ್ಳಿ, ಮದರಂಗಿಯನ್ನು ಅಲ್ಲಿನ ಸಂಪತ್ತನ್ನೆಲ್ಲಾ ಹೇರಿಕೊಂಡು ಮುದುಕನ ಬಳಿ ಬರುತ್ತಾನೆ. ಅವರನ್ನೆಲ್ಲಾ ಅಲ್ಲೆ ಬಿಟ್ಟು ತಮ್ಮಂದಿರಾದ ಚಂಚಲಕುಮಾರ ಮತ್ತು ಕನಕ ಕುಮಾರರನ್ನು ವಿಚಿತ್ರಪುರಕ್ಕೆ ಹೋಗಿ ಕರೆತರುತ್ತಾನೆ. ಮತ್ತೆ ಮುದುಕನ ಬಳಿ ಬಂದು ಮದರಂಗಿಯನ್ನು ಚಂಚಲನಿಗೆ ಬೆಳ್ಳಿಯನ್ನೂ ಕನಕಕುಮಾರನಿಗೆ ಹೆಂಡತಿಯರಾಗುವರೆಂದು ಪರಿಚಯಿಸಿದ. ಮುಂದೆ ದಾರಿಯಲ್ಲಿ ಸಂಚರಿಸುವಾಗ ತಮ್ಮಂದಿರು ಬಾಯಾರಿಕೆಯೆಂದು ಅಣ್ಣನನ್ನು ಹಾಳುಬಾವಿಗೆ ಇಳಿಸಿ ಅರಮನೆಗೆ ಹೊರಟು ಬಿಡುತ್ತಾರೆ. ಹಾಡುವ ಕೋಗಿಲೆಯನ್ನು ತಾವೇ ತಂದೆವೆಂದು ಹೇಳಿಕೊಳ್ಳುತ್ತಾರೆ. ಮೂರು ಜನ ರಾಕ್ಷಸರನ್ನು ತಾವೇ ಕೊಂದುದಾಗಿ ಹೇಳುತ್ತಾರೆ. ಆದರೆ ಅವರಿಂದ ಕೋಗಿಲೆಯನ್ನು ಹಾಡಿಸಲಾಗಲಿಲ್ಲ.

ಇತ್ತ ಗುಣಶೇಖರ ಬಾವಿಯಿಂದ ಮೇಲೇರಲಾಗದೆ ಒದ್ದಾಡುತ್ತಿರುವಾಗ ದಾರಿಯಲ್ಲಿ ಹೋಗುವ ವರ್ತಕರು ಮೇಲೆತ್ತಿ ಸಹಾಯ ಮಾಡುತ್ತಾರೆ. ಅವನು ಅಲ್ಲಿಂದ ತನ್ನ ಊರಿಗೆ ಬಂದು ಅಜ್ಜಿ ಅಂಗಡಿಯಲ್ಲಿ ನನ್ನನ್ನು ಒಂದು ತಿಂಗಳ ಕಾಲ ಮನೇಲಿ ಇಟ್ಟುಕೊಂಡು ತುತ್ತು ಅನ್ನ ಹಾಕು. ಎಂದು ಒಂದು ಚಿನ್ನದ ಉಂಗುರ ಕೊಟ್ಟ. ಅವನಿಗೆ ಅಜ್ಜಿ ಊರಿನ ಸಮಾಚಾರ ಹೇಳಿದಳು. ಗುಣಶೇಖರ ಫಕೀರನ ವೇಷಹಾಕಿ ಅರಮನೆಗೆ ಬಂದ. ಕೋಗಿಲೆಯನ್ನು ಹಾಡಿಸುವೆ ಮೂರು ಗಂಟೆಗಳ ಕಾಲ ರಾಜ್ಯಾಧಿಕಾರ ಕೊಡಿರಿ ಎಂದ. ರಾಜ ಒಪ್ಪಿ ಕೋಗಿಲೆಯನ್ನು ಹಾಡಿಸಲು ಹೇಳಿದ. ಏಳೇಳು ಸಾಗರವ ಹಾರಿ ಬಂದವ ನಾನು ಕೋಗಿಲೇ.....[೨] ಹಾಡಿ ಅದನ್ನೂ ಹಾಡಿಸಿದ. ಉದ್ಯಾನವನದ ಮರಗಳೆಲ್ಲಾ ಚಿಗಿತವು. ದಾಳಿಂಬೆ ಗಿಡ ಜೀವಂತವಾಯಿತು. ಫಕೀರನ ವೇಷದಲ್ಲಿದ್ದ ಗುಣಶೇಖರ ಚಂಚಲಕುಮಾರ ಮತ್ತು ಕನಕ ಕುಮಾರರನ್ನು ದರ್ಬಾರಿನಲ್ಲಿ ತಂದು ನಿಲ್ಲಿಸಿ ಗುಣಶೇಖರನಿಗೆ ಮೋಸ ಮಾಡಿದ ಪ್ರಕರಣದಲ್ಲಿ ಅಪರಾಧ ಹೊರಿಸಿದನು. ಅವರು ನಿರಾಕರಿಸಿದಾಗ ಸಾಕ್ಷಿ ಸಮೇತ ನಿರೂಪಿಸಲು ಪ್ರತಿ ರಾಕ್ಷಸರನ್ನು ಕೊಂದಾಗ ಅವರ ಪ್ರಾಣ ಇದ್ದ ಭಾಗವನ್ನು ಗುರುತಿಗಾಗಿ ತಂದಿದ್ದನು. ಅದನ್ನು ಸಭೆಗೆ ತೋರಿಸಿ ತಾನೇ ಗುಣ ಶೇಖರನೆಂದು ವೇಷ ಕಳಚಿದ. ಹಾಡುವ ಕೋಗಿಲೆಯಿಂದ ನಿಜ ಹೇಳಿಸಿದ. ಗುಣಶೇಖರ ತಮ್ಮಂದಿರಿಗೆ ಬೋಳು ತಲೆಯ ಜನರಿರುವ ರಾಜ್ಯವೇ ಯೋಗ್ಯವಾದ ಸ್ಥಳವೆಂದು ಶಿಕ್ಷೆ ನೀಡಿ ಅಲ್ಲಿಗೆ ಕಳುಹಿಸಿದ. ಶ್ಯಾಮಲೆಯೊಂದಿಗೆ ಸುಖವಾಗಿ ಬಾಳಿದ.

ಈ ದೀರ್ಘದ ಕಥೆಯ ಉದ್ದಕ್ಕೂ ಕಥಾನಾಯಕನಿಗೆ (ಗುಣಶೇಖರ) ಮಾತನಾಡುವ ಕುದುರೆಯೊಂದು ಗೆಲುವಿಗೆ ಸಹಕರಿಸುತ್ತದೆ. ಮೂರೂ ಜನ ರಾಕ್ಷಸರ ತಾಣಗಳಲ್ಲಿ ನಡೆಯುವ ಘಟನೆಗಳು ಒಂದೇ ಬಗೆಯವಾಗಿವೆ. ಮೂರು ಹುಡುಗಿಯರನ್ನು ಕರೆತಂದದ್ದು, ಅವರೆಲ್ಲಾ ಮುಗ್ಧರಾಗಿರುವುದು. ಎಲ್ಲರೂ ಅವನನ್ನೇ ವರಿಸಲು ಬಯಸುವುದು. ಇದೆಲ್ಲಾ ಪುನರಾವರ್ತನೆ ಆಗುತ್ತವೆ. ಎಷ್ಟು ತಿಂದರೂ ಇನ್ನೂ ತಿನ್ನಬೇಕೆನಿಸುವುದು. ಊಟ ದ್ವಿಗುಣವಾಗುತ್ತಲೇ ಹೋಗುತ್ತದೆ. ಫ್ಯಾಂಟಸಿ ಕಥೆಗಳಲ್ಲಿ ಈ ಬಗೆಯ ಚರ್ವಿತಚರ್ವಣ ಕಂಡು ಬಂದರೂ ಅದು ಮಕ್ಕಳನ್ನು ಹಿಡಿದಿಡುವಲ್ಲಿ ಕಥಾ ರಚನೆಗೆ ಸಹಕರಿಸುತ್ತದೆ.

ಅತಿಮಾನುಷಲೋಕದ ರಾಕ್ಷಸರ ಆಕಾರ, ಗಾತ್ರಗಳೂ ರಕ್ತಾಸುರ, ಶ್ವೇತಾಸುರ, ಕಾಳಾಸುವವರೆಗೆ ಎರಡೆರಡು ಪಟ್ಟು ಹೆಚ್ಚುತ್ತವೆ. ಮೂರು ಜನ ರಾಕ್ಷಸರು ಬಳಸುವ ಭಾಷೆಗಳು ಒಂದೊಂದು ಪ್ರಾದೇಶಿಕ ಪ್ರದೇಶವನ್ನೂ ಪ್ರತಿನಿಧಿಸುತ್ತವೆ. ರಾಕ್ಷಸರನ್ನು ಕೊಲ್ಲಲು ಬಳಸುವ ಆಯುಧವನ್ನು ಕುದುರೆ ಹೆಸರಿಸುತ್ತದೆ. ಕೋಲು, ಈಟಿ, ಕತ್ತಿಗಳಿಂದ ರಾಕ್ಷಸರನ್ನು ಕೊಲ್ಲುತ್ತಾನೆ. ಹಾಡುವ ಕೋಗಿಲೆ ಕಥೆಯಲ್ಲಿ ಮೂರು ರಾಕ್ಷಸರ ಲೋಕದ ಮಾಯಾ ಜಗತ್ತು ಅನಾವರಣಗೊಂಡಿದೆ. ಪ್ರತಿ ಸನ್ನಿವೇಶಗಳಲ್ಲಿ ಪುನರಾವರ್ತನೆಯಾಗುವ ಹೇಳಿಕೆ/ಸಂಭಾಷಣೆಯೊಂದು ಜನಪದ ಕಥೆಗಳಲ್ಲಿ ಸಾಮಾನ್ಯವಾಗಿ ಕಂಡು ಬರುತ್ತದೆ. ಅದು ಇಲ್ಲಿಯೂ ಕಾಣುತ್ತದೆ.

ಮೂವರು ಹುಡುಗಿಯರು ರಾಕ್ಷಸರಿಗೆ ಸಾಕು ಮಗಳಾಗಿದ್ದು, ಗುಣಶೇಖರನಿಗೆ ಹಸಿವೆ ಹೆಚ್ಚಾಗುವುದು, ರಾಕ್ಷಸರ ಯುದ್ಧ ವರ್ತನೆಗಳು ಒಂದೇ ರೀತಿಯಾಗಿದೆ. ಗುಣಶೇಖರ ಎಷ್ಟೇ ಪರೋಪಕಾರಿ ಎಂದೆನಿಸಿದರೂ ಕೊನೆಗೆ ತನ್ನ ಇಬ್ಬರು ತಮ್ಮಂದಿರನ್ನು ಹೆಂಡತಿಯರ ಸಮೇತ ವಿಚಿತ್ರಪುರಕ್ಕೆ ಅಟ್ಟುತ್ತಾನೆ. ಸೇಡು ತೀರಿಸಿಕೊಳ್ಳುವ ಸಂದರ್ಭದಲ್ಲಿ ಜನಪದ ಕಥೆಗಳ ನಾಯಕರು ಹಿಂದೆ ಬೀಳುವುದಿಲ್ಲ. ಎನ್ನುವುದನ್ನು ಗುಣಶೇಖರ ಸಾಬೀತು ಪಡಿಸುತ್ತಾನೆ. ಹೀಗೆ ನಿಗೂಢತೆ, ಕುತೂಹಲ, ಭಯ, ರಮ್ಯಭಾವ ಇತ್ಯಾದಿಗಳೆಲ್ಲವನ್ನು ಬಳಸಿಕೊಳ್ಳುವ ಈ ವಿಸ್ತಾರದ ಕತೆ, ನಾವು ಭಾವಿಸಿಕೊಂಡಷ್ಟೂ ಅನುಭವಕ್ಕೆ ದಕ್ಕಬಲ್ಲದು. ಇದು ಮಕ್ಕಳಿಗೆ ತನ್ನೊಳಗಿನ ಕ್ಷಣಕ್ಷಣದ ಕುತೂಹಲ, ಫ್ಯಾಂಟಸಿಗಳಿಂದ ರಂಜಕವಾಗಿ ಕೆಲಪದರುಗಳಿಂದ ತಲುಪುತ್ತದೆ.

ರಾಮಕೃಷ್ಣಶಾಸ್ತ್ರಿ ಪ., ರಾಮಕೃಷ್ಣ ಕೃ., ಅಂಥವರು ಬಹು ದೊಡ್ಡ ಪ್ರಮಾಣದಲ್ಲಿ ಇಂಥವನ್ನು ಸಂಗ್ರಹಿಸಿ ನೀಡಿದ್ದು ಕಾಣುತ್ತದೆ. ಮಕ್ಕಳ ಸಾಹಿತ್ಯಕ್ಕಾಗಿ ಸಾಕಷ್ಟು ಕೆಲಸ ಮಾಡಿದ ಚಿ.ಶ್ರೀ ಪಾಂಡುರಂಗರಾಯರು ಇಂಥ ದೀರ್ಘ ಕತೆಗಳನ್ನು ಆಯ್ದು ನೀಡಿದ್ದಾರೆ. ಬಹುದೊಡ್ಡ ಸಂಖ್ಯೆಯಲ್ಲಿ ಈ ಬಗೆಯ ಲೇಖಕರ ಬರವಣಿಗೆ ಕನ್ನಡ ಮಕ್ಕಳ ಕಥಾ ಕಣಜದಲ್ಲಿ ಕಾಣುತ್ತದೆ.

೪.೧.೨.೫. ಸಾಮಾಜಿಕ ಕಥಾ ಹಂದರದ ತೆಳು ಫ್ಯಾಂಟಸಿ

'ಮೂವರು ಕಳ್ಳರು' ಪ್ರಕಾಶಕರ ಪ್ರಕಾರ ಹತ್ತು ವರ್ಷ ಮೀರಿದ ಮಕ್ಕಳಿಗೆಂದೇ ಮೇವುಂಡಿ ಮಲ್ಲಾರಿ ಬರೆದ ಕಥೆ ಇದು. ಮುದುಕ ಕುರುಬನೊಬ್ಬ ತನಗೆ ಮುಪ್ಪು ಬಂದಿರುವುದರಿಂದ ತನ್ನಲ್ಲಿರುವ ಕುದುರೆ ಮತ್ತು ಮೇಕೆಯನ್ನು ಸಂತೆಯಲ್ಲಿ ಮಾರಿಬಿಡೋಣ. ನಂತರ ಗೋಕರ್ಣಕ್ಕೆ ಹೋಗಿ ದೇವರ ಸನಿಹದಲ್ಲಿದ್ದು ಸೇವೆ ಮಾಡುವ ಬಯಕೆ ಹೊಂದಿದ. ದಾರಿ ವೆಚ್ಚಕ್ಕಾಗಿ ಕುದುರೆ ಮತ್ತು ಮೇಕೆ ಮಾರಲು ಸಂತೆಗೆ ಹೊರಟ. ದಾರಿಯಲ್ಲಿ ಅವಿತಿದ್ದ ಮೂವರು ಕಳ್ಳರು ಮುದುಕನ ಬಳಿ ಇದ್ದುದರಲ್ಲಿ ಯಾರು ಏನನ್ನು ಕದಿಯುವಿರಿ? ತಮ್ಮೊಳಗೆ ತಮ್ಮ ಬುದ್ಧಿ ಪರೀಕ್ಷೆಯ ಸವಾಲುಗಳನ್ನು ಹಾಕಿಕೊಂಡರು. ಅಂತೆಯೇ ಕಿರಿಯ ಕಳ್ಳ ಮೇಕೆಯನ್ನು, ನಡುವಿನ ಕಳ್ಳ ಕುದುರೆಯನ್ನು ಮತ್ತು ಹಿರಿಯ ಕಳ್ಳ ಮುದುಕನ ಅಂಗಿಕೋಟು ಕದಿಯುವುದಾಗಿ ಹೇಳಿದ. ಹೇಳಿದ ಹಾಗೆ ಕಳ್ಳರು ಸಾಧಿಸಿದರೂ ಕೂಡ.

ಇಡೀ ಕಥೆಯು ಮೂವರು ಕಳ್ಳರ ಚಮತ್ಕಾರ ತೋರುತ್ತಲೇ ಕಥೆಯನ್ನು ಸ್ವಾರಸ್ಯಕರವಾಗಿಸುತ್ತದೆ. ಸಹಜವಾಗಿ ನಡೆಯುತ್ತಿದ್ದ ಜೀವನದಲ್ಲಿ ಅನಿರೀಕ್ಷಿತವಾಗಿ ಬಂದೊದಗುವ ಸಂದರ್ಭಗಳನ್ನು ಜಾಗ್ರತೆಯಿಂದ ಎದುರಿಸಬೇಕು. ಇಲ್ಲದಿದ್ದರೆ; ವೈರಾಗ್ಯ ತಾಳ ಹೊರಟು, ಮುತ್ತು ರತ್ನದ ಮೋಹ ಹುಟ್ಟಿ, ಎಲ್ಲವನ್ನೂ ಕಳೆದುಕೊಂಡ ಹಾಗೆ ಆಗುತ್ತದೆ. ಈ ಕಥೆಯಲ್ಲಿ ಅತಿವಾಸ್ತವವೆನ್ನಿಸುವ ಯಾವ ಸಂಗತಿಗಳು ಜರುಗದಿದ್ದರೂ ಮುದುಕನ ಆಸೆಬಡಕುತನ, ಮುಗ್ಧತೆ, ಕಳ್ಳರನ್ನು ಸುಲಭವಾಗಿ ನಂಬಿ ಮೋಸ ಹೋಗುವ..., ಮುಂತಾದ ನಡೆವಳಿಕೆಗಳು ಕಥೆಯ ಆಶಯವೆನ್ನಬಹುದು. ಇದು ಫ್ಯಾಂಟಸಿ

ಒಳಗದಲ್ಲಿ ಗಣಿಸಿಬೇಕಾದ ಕಳ್ಳರ ಕಥೆಯಾಗಿ, ನಮ್ಮ ನಡುವಿನಂತಲ್ಲದ ಒಂದು ಬಗೆಯ ವಿಭಿನ್ನ ಪರಿಸರದ್ದಾಗಿ, ಹಿಂದಿನಿಂದ ಕೇಳುತ್ತಾ ಬಂದ ಕತೆಯಾಗಿದೆ.

ಮಲ್ಲಾರಿ ಇಂತಹ ಕತೆಯನ್ನು ಓದುಗರ ಮುಂದೆ ನಿರೂಪಣೆಯ ವಿಶೇಷತೆಯೊಂದಿಗೆ ಇಡುತ್ತಾರೆ. 'ಕುದುರೆ ಮುಂದೆ ನಡೆಯಿತು ಖಟ್ ಖಟ್ ಖಟ್. ಗಂಟೆ ಬಾರಿಸುತ್ತಲಿತ್ತು ಘಣ್ ಘಣ್ ಘಣ್'.[೧೩] ಈ ಬಗೆಯ ಕಥಾಸಂವಿಧಾನದ ಅಂಗಗಳಾದ ಭಾಷೆ, ಸ್ವರೂಪ, ಪ್ರಾಸದ ಪದ್ಯಗಳು ಓದುಗರನ್ನು ಅವರದೇ ಆದ ಲೋಕದಲ್ಲಿ ಮುದುಕನನ್ನು, ಕಳ್ಳರನ್ನು ಊಹಿಸಿಕೊಳ್ಳುವಂತೆ ಮಾಡುವಲ್ಲಿ ಕಥೆಗೆ ಸಹಕರಿಸಿವೆ.

೪.೧.೨.೬. ಒಗಟುಗಳು ಮತ್ತು ಫ್ಯಾಂಟಸಿ

ಕೆಂಪು ಮೋತಿ ಹಂಪಣ್ಣ ಇದೊಂದು ಒಗಟನ್ನು ಒಡೆಯುವ ಸಂಭಾಷಣಾತ್ಮಕ ಕಥೆ. ಬಾಲಕನೊಂದಿಗೆ ತಂದೆ ಒಗಟೊಂದನ್ನು ಬಿಡಿಸಲು ಹೇಳುವನು ಅದು ಹೀಗಿದೆ;

'ಹುಡುಗ: "ಕೆಂಪು ಮೋತಿ ಹಂಪಣ್ಣಾ, ಹಂಪೀ ಜಾತ್ರೆಗೆ ಬರುತ್ತೀಯಾ?"

ಕೆಂಪು ಮೋತಿ ಹಂಪಣ್ಣ : "ಹಂಪೀ ಜಾತ್ರೆಗೆ ಬಂದರೆ ಬಂದೆ. ಬರದಿದ್ದರೆ ಇಲ್ಲ. ಹುಲಗೀ ಜಾತ್ರೆಗೆ ಖಾಂ ಖಾಂ ಬರುತ್ತೇನೆ."[೧೪]

ಕೆಂಪು ಮೋತಿ ಹಂಪಣ್ಣನೆಂದರೆ ಮಾವು. ಅದನ್ನು ಹುಡುಗನು ಹಂಪೀ ಜಾತ್ರೆಗೆ (ಚೈತ್ರ ಸಮೀಪದ ಹುಣ್ಣಿಮೆಗೆ) ಬರುವೆಯೋ ಎಂದು ಕೇಳುವನು.

ಮಾವಿನ ಕಾಯಪ್ಪ-ಹಂಪಿ ಜಾತ್ರೆಯಾದ ಒಂದು ತಿಂಗಳಿಗೆ ಅಗೆಯ ಹುಣ್ಣಿಮೆಯ ದಿವಸ ಹುಲಗಿಯ ಹುಲಗಮ್ಮನ ಜಾತ್ರೆ. ಅಂದಿಗೆಲ್ಲ ಹಣ್ಣಾಗಿರುತ್ತೇನೆಂದು ಖಾತ್ರಿಯಾಗಿತ್ತು ಹಾಗಾಗಿ ಹುಲಗೀ ಜಾತ್ರೆಗೆ ಖಾಂ ಖಾಂ ಬರುತ್ತೇನೆ. ಎಂದು ಹೇಳಿತು. ತಂದೆ ಮಗನಿಗೆ ಈ ಒಗಟನ್ನು ಹೀಗೆ ಬಿಡಿಸಿ ಹೇಳುವಲ್ಲಿಗೆ ಕಥೆ ಕೊನೆಯಾಗುತ್ತದೆ.

ಜನಪದ ಕಥೆಗಳ ರಚನೆಯಲ್ಲಿ ಒಗಟಿನ ಪಾತ್ರ ಅತ್ಯಂತ ಮಹತ್ವದ್ದು. ನಮ್ಮ ಜನಪದರು ತಮ್ಮ ಕಾಯಕದ ದಣಿವು ನಿವಾರಿಸಿಕೊಳ್ಳಲು ಪ್ರಶ್ನೋತ್ತರ ರೂಪದ ಒಗಟುಗಳನ್ನು ಹೆಣೆದುಕೊಳ್ಳುತ್ತಾ ತಮ್ಮ ಕಾರ್ಯಗಳನ್ನು ಸಂತಸದಿಂದ ಮುಗಿಸಿಕೊಳ್ಳುತ್ತಿದ್ದರು. ಇದನ್ನು ಪುಷ್ಟೀಕರಿಸುವಂತೆ ಅನೇಕ ಕಥೆಗಳು ಒಗಟಿನ ಮಾದರಿಯಲ್ಲಿ ಇವೆ.

ಮಾವಿನೊಂದಿಗೆ ಬಾಲಕ ಸಂಭಾಷಿಸುವುದು ವಾಸ್ತವದಲ್ಲಿ ಅಸಾಧ್ಯವಾದ ಸಂಗತಿಯಾದರೂ ನಿಸರ್ಗದೊಂದಿಗೆ ಮನುಷ್ಯನು ಹೊಂದಿರಬೇಕಾದ ಸಹಸಂಬಂಧವನ್ನು ಈ ಕಥೆ ಒತ್ತಿ ಹೇಳುತ್ತದೆ. ಅತಿವಾಸ್ತವದಲ್ಲಿನ ವಾಸ್ತವತೆಯಲ್ಲಿ ಇಲ್ಲಿ ವಿವರಿಸಲಾಗಿದೆ. ಮೇವುಂಡಿ ಮಲ್ಲಾರಿಯವರ ಕಥೆಗಳ ಯಶಸ್ಸಿಗೆ ಆಡುಭಾಷೆಯ ನಿರೂಪಣೆ, ಅನಗತ್ಯವಾಗಿ ಎಲ್ಲೂ ನೀತಿ ತರಲು ಹೋಗದೆ ಸಹಜವೆನ್ನುವಂತೆ ಬರೆಯುವ ಗುಣವೇ ಈ ಕತೆಗಳ ಗೆಲುವನ್ನು ಸಮರ್ಥಿಸುತ್ತದೆ.

ರಾಜಸಿಂಹ ರಾಜ್ಯದಲ್ಲಿ ತಾನು ಬದುಕಿರುವ ಸುದ್ದಿಯನ್ನು ಹಬ್ಬಿಸಿ ಜನರಿಗೆಲ್ಲ ತಿಳಿಯುವಂತೆ ಮಾಡಿದನು. ಈ ಸುಳಿವು ಸಿಕ್ಕ ಕೇಸರಿಸಿಂಹ ತನ್ನ ಹೆಂಡತಿಯೊಡನೆ ತಪ್ಪಿಸಿಕೊಂಡು ಕಾಡಿಗೆ ಹೋಗಿ ಪಾರಾದನು. ಇದಿಷ್ಟು ಕತೆ. ಇಂಥ ಕತೆ ಮಕ್ಕಳಿಗಾಗಿಯೇ ಎಂದು ಇರುವುದಲ್ಲವೇ ಅಲ್ಲ, ದೊಡ್ಡವರ ಅಧಿಕಾರದ ದಾಹ, ಸವತಿ ಮತ್ಸರ, ರಾಜ್ಯದ ನಡೆವಳಿಗಳು ಎಲ್ಲ ದೊಡ್ಡವರ ಬದುಕಿನ ಸಂಗತಿಗಳೇ ಆಗಿವೆ. ಇದನ್ನು ರಂಜನೆಯ ಕತೆಯಾಗಿ ಮಕ್ಕಳಿಗೆ ನವಗಿರಿನಂದ ನೀಡಲು ನೋಡಿದ್ದಾರೆ. ಮಕ್ಕಳಿಗೂ ಕತೆ ಒಂದಿಷ್ಟೆಲ್ಲಾ ಕುತೂಹಲ ಹುಟ್ಟಿಸಿ ರಂಜಿಸುತ್ತದೆ. ಅಷ್ಟರಮಟ್ಟಿಗೆ ಅದು ಅವರಿಗೆ ದಕ್ಕುತ್ತದೆ. ಇಂಥ ನಾನಾ ಬಗೆಯ ಕತೆಗಳನ್ನು ಮಕ್ಕಳಿಗಾಗಿ ನೀಡುತ್ತಾ ಬಂದಿರುವುದು ಕಂಡುಬರುತ್ತದೆ.

೪.೧.೨.೮. ಅಶಕ್ತರು ಮತ್ತು ಫ್ಯಾಂಟಸಿ

ಪಂಜೆಮಂಗೇಶರಾಯರು ಜನಪದ ಕತೆಗಳಿಂದ ಮಕ್ಕಳ ಪಠ್ಯಗಳಿಗೆ ಆಯ್ದುಕೊಂಡಿರುವುದು ಅವರ ವಿಭಿನ್ನ ಮನಸ್ಥಿತಿಯನ್ನು ಹೇಳುತ್ತದೆ. ನೀತಿಯೆನ್ನುವುದು ಅಲ್ಲಿ ಎದ್ದು ಕಾಣುವುದಿಲ್ಲ. ಈ ಬಗೆಯ ಕತೆಗಳು ಪಾಠಗಳಾಗಿ ಏನನ್ನೋ ಕಲಿಸುವುದಕ್ಕೆ ಬಳಕೆಯಾಗುವುವಲ್ಲವಾದುದರಿಂದ ಮಕ್ಕಳ ಮನವನ್ನು ಸಂತಸದಿಂದ ಅರಳಿಸುವ ಉದ್ದೇಶವನ್ನೇ ಹೊಂದಿವೆ.

ವ್ಯಾವಹಾರಿಕ ಜಾಣತನ, ಉಪಾಯಗಳು, ಚುರುಕುತನಗಳು ಎದ್ದುಕಾಣುತ್ತವೆ. ಇಲ್ಲಿನ ನಿರೂಪಣೆಯೂ ಮಕ್ಕಳನ್ನು ಹಿಡಿದಿಡುವ ತಂತ್ರಗಳಿಂದಲೇ ಕೂಡಿದೆ. ಉದಾಹರಣೆಗೆ 'ಅರ್ಗಣೆ ಮುದ್ದು' ಕತೆಯಲ್ಲಿ 'ಕುಂಬಾರನು ಜಾತ್ರೆಗೆ ಹೊರಟನು. ತಲೆಗೆ ವಲ್ಲಿ, ಕಾಲಿಗೆ ಮೆಟ್ಟು, ಹೆಗಲ ಮೇಲೆ ಎಲವಸ್ತ್ರ, ಎಲವಸ್ತ್ರದ ಕೊನೆಯಲ್ಲಿ ಬೀಗದ ಕೈ, ಬಾಯಿತುಂಬ ವೀಳ್ಯ, ತೋಳು ತುಂಬ ಹುಂಜ ಈ ಪ್ರಕಾರ ಕುಂಬಾರನು ಜಾತ್ರೆಗೆ ಹೊರಟನು' ಮುಂತಾಗಿ ನಿರೂಪಣೆ ಚಿತ್ರವತ್ತಾಗಿಯೇ ಸಾಗುತ್ತದೆ.

ಸರಪಣಿಯಂತೆ ಒಂದೇ ಬಗೆಯ ಘಟನೆಗಳು ಪುನರಾವರ್ತನೆಯಗುವುದು, ಮೆಣಸಿನ ಕಾಳಪ್ಪ ಕಥೆಯಲ್ಲಿ 'ಮೊಟ್ಟೆ ಹೊರುವುದಕ್ಕೆ, ಹೊಟ್ಟೆ ಹೊರುವುದಕ್ಕೆ'[೧೫] ಈ ಮಾತು ಎಲ್ಲರಿಂದ ಹೇಳಲ್ಪಡುತ್ತದೆ. ಈ ಬಗೆಯ ಒಂದಾವುದೋ ಮಾತು ಮತ್ತೆ ಮತ್ತೆ ಬಳಕೆಯಾಗುತ್ತಾ ಹೋಗುವುದು, ತೀರಾ ಕ್ಷುದ್ರ ಅನ್ನಿಸೋ ಜೀವಿಯಿಂದ ಎಂಥೆಂಥದೊ ದೊಡ್ಡ ಜೀವಿಗಳನ್ನು ಎದುರು ಹಾಕಿಕೊಳ್ಳುತ್ತ ಹೋಗುವುದು, ಮೂರು ಜನ ಸಹೋದರರಲ್ಲಿ ಕೊನೆಯವನು ಪದ್ದು ಪೆದ್ದು ಆಗಿದ್ದು ಕೊನೆಗೆ ಜಯ ಸಾಧಿಸುವುದು ಮುಂತಾಗಿ ಸಾಮಾನ್ಯವಾಗಿ ಹಳ್ಳಿಯ ಕತೆಗಳಲ್ಲಿ ಕಾಣುವ ಲಕ್ಷಣಗಳೇ ಈ ಬಗೆಯ ಆಯ್ಕೆಯಲ್ಲಿ ಕಾಣುತ್ತವೆ. ಸಾಂಸ್ಕೃತಿಕ ಪರಿಸರದ ಸಮೃದ್ಧತೆಯನ್ನು ತುಂಬಿಕೊಂಡು ಆದಷ್ಟೂ ಸರಳ ಭಾಷೆಯಲ್ಲಿ ಓದುವ ಗದ್ಯವಾಗಿ ಅರಳಿರುವ ಈ ರಚನೆಗಳು ಗ್ರಾಮೀಣ ಬದುಕಿನ ಚಿತ್ರಣಗಳನ್ನು ನೀಡುತ್ತಲೇ ರೋಚಕವಾದ, ಹಾಸ್ಯವನ್ನು ಹೊಮ್ಮಿಸುವ, ಜಾಣತನ ಹೇಳುವ, ಪೆದ್ದುತನ ಹೇಳಿ ನಗಿಸುವ ನಾನಾ ಬಗೆಯ ಹಳ್ಳಿಗಾಡಿನ ಕತೆಗಳ ಹವಣವನ್ನು ಹೊಂದಿವೆ.

'ಸೀಗಡಿ ಯಾಕೆ ಒಣಗಲಿಲ್ಲ' ಕತೆಯಲ್ಲಿ ಸೀಗಡಿ ಒಣಗದಿರಲು ಹುಲ್ಲು-ಕರು-ಹೆಣ್ಣು-ಮಗು-ಇರುವೆ-ಚಾಪೆ ಇಷ್ಟೆಲ್ಲಾ ಕಾರಣವಾಗಿ ಅಜ್ಜಿ ಚಾಪೆ ಮಡಿಚುವುದರೊಂದಿಗೆ ಉಳಿದೆಲ್ಲಾ ನಿರಾತಂಕವಾಗಿ ಸೀಗಡಿ ಒಣಗುತ್ತದೆ. ಇಲ್ಲಿ ಕಥೆಯ ವಸ್ತು ಅತ್ಯಂತ ಚಿಕ್ಕದೆನಿಸಿದರೂ ನಿರೂಪಿಸುವ ಹಾದಿಯಲ್ಲಿ ಕಥೆಯು ಅದೇ ಹಳೆಯ ಫ್ಯಾಂಟಸಿ ಬಳಕೆಯಾಗಿ ಕತೆಯು ಅದೇ ಹಳೆಯ ಹಂತಗಳನ್ನು ಪಾಲಿಸಿದರೂ ಓದಿಸಿಕೊಂಡ ಹೋಗುತ್ತದೆ. ಜನಪದ ಕತೆಗಳ ಸರಾಗ ಓಟದ ಗುಣ ಈ ಕಥೆಗಿದೆ. 'ಹೇನು ಸತ್ತು ಕಾಗೆ ಬಡವಾಯಿತು', 'ಇಲಿಗಳ ಥಕಥೈ', 'ಗುಡುಗುಡುಗುಮ್ಮಟ ದೇವರು', 'ಅರ್ಗಣೆ ಮುದ್ದೆ, 'ಸಿಗಡಿ ಯಾಕೆ ಒಣಗಲಿಲ್ಲ', 'ಹುಲಿಯೋ ಇಲಿಯೋ', 'ಅಂಗಳ ದುಗ್ಗು', 'ಮೆಣಸಿನ ಕಾಳಪ್ಪ' ಮುಂತಾಗಿರುವ ಅವರ ಕತೆಗಳ ಶೀರ್ಷಿಕೆಗಳೇ ಅವರ ಆಯ್ಕೆಯ ವಿಶೇಷತೆಯನ್ನು ಹೇಳುತ್ತವೆ.

ಮೆಣಸಿನ ಕಾಳಪ್ಪ ಇದು ಪಂಜೆ ಮಂಗೇಶರಾಯರ ಒಂದು ಅಸಂಗತ ಕಥೆಯಾಗಿದೆ. ಸಣ್ಣ ಮೆಣಸಿನ ಕಾಳು ಇಡೀ ಕಥೆಯನ್ನು ಮುನ್ನಡೆಸುವುದು ಜನಪದ ಕಥೆಗಳ ಲಕ್ಷಣಗಳಲ್ಲೊಂದು. ಮೆಣಸಿನ ಕಾಳಪ್ಪ ಕತೆಯಲ್ಲಿ ಜವಳಿಗಾರನ ಜ್ವರಕ್ಕೆ ಮೆಣಸಿನ ಕಾಳು ಒಂದು ಮದ್ದು ಅರೆದು ಕೊಡುತ್ತೇನೆ ಅಮ್ಮಾ ಎಂದು ಹೇಳಿದಾಗ ಅವಳು ಯಾವುದೇ ಆಶ್ಚರ್ಯ, ಅನುಮಾನ ಇಲ್ಲದೆ ಮೆಣಸಿನ ಕಾಳಪ್ಪನೊಂದಿಗೆ ಸಂಭಾಷಣೆಗಿಳಿಯುತ್ತಾಳೆ. ಗಂಡನೂ ಕಾಳಪ್ಪನನ್ನೇ ಅಂಗಡಿಗೆ ಕಳಿಸುತ್ತಾನೆ. ಜನಪದ ಕಥೆಗಳಲ್ಲಿ ಬರುವ ವ್ಯಕ್ತಿಗಳು ಪ್ರಾಣಿ, ಪಕ್ಷಿ, ವಸ್ತುಗಳು ಮಾತನಾಡುವುದನ್ನು ಅತ್ಯಂತ ಸಹಜವಾಗಿ ಸ್ವೀಕರಿಸುತ್ತಾರೆ.

ಕಾಳಪ್ಪ ಅಂಗಡಿಗೆ ಹೋದಾಗ ಕಳ್ಳನೊಬ್ಬ ಜವಳಿಯನ್ನು ಕಳ್ಳತನ ಮಾಡಿಕೊಂಡು ಹೋಗುತ್ತಾನೆ. ಕಥೆಯ ಫ್ಯಾಂಟಸಿ ಲೋಕ ತೆರೆದುಕೊಳ್ಳುವುದೇ ಇಲ್ಲಿಂದ. ಕಳೆದು ಹೋದ ಬಟ್ಟೆಯ ಗಂಟಿನ ಪತ್ತೆಗಾಗಿ ಕಾಳಪ್ಪನು ಏಡಿ, ಇಲಿ, ಬೆಕ್ಕು, ನಾಯಿ, ಹುಲಿ, ಹಗ್ಗ, ಕೋಲು ಎಲ್ಲರನ್ನು ಬಳಸಿಕೊಳ್ಳುವ ಜಾಣ್ಮೆಯ ಕಥನ ಇಲ್ಲಿದೆ. ಜನಪದ ಕಥೆಗಳಲ್ಲಿ ಆರಂಭದಲ್ಲಿ ಎದುರಾಗುವ ಒಂದು ಸಮಸ್ಯೆಗೆ ಪರಿಹಾರ ಹುಡುಕುವ ಭಾಗವಾಗಿ ಪಾತ್ರಗಳು ಬರುತ್ತಾ, ಬೆಳೆಯುತ್ತಾ ಹೋಗುತ್ತವೆ. ಮೆಣಸಿನ ಕಾಳಪ್ಪ ಕಥೆಯ ಪ್ರಧಾನ ಪಾತ್ರವಾಗಿ ಕಥಾನಾಯಕನಾಗಿ ಕಥೆಯ ಆಶಯದ ಈಡೇರಿಕೆಗೆ ಎಲ್ಲರೂ ಸಹಕರಿಸುವಂತೆ ತಂತ್ರ ಹೂಡುತ್ತಾನೆ. ಹಾಗೆ ತಮ್ಮ ತಮ್ಮ ಗುಣ ಸ್ವಭಾವಗಳಿಗನುಗುಣವಾದ ನಡೆವಳಿಕೆಗಳಿಂದಲೇ ಒಳಿತಿನ ಕಾರ್ಯಕ್ಕೆ ಸಹಾಯ ಮಾಡುವಂತೆ ಜನಪದ ಕಥೆಗಳನ್ನು ಹೆಣೆಯಲಾಗುತ್ತದೆ.

ಒಲೆಯ ಬಳಿಯಿದ್ದೇ ಬೆಕ್ಕು ಪರಚುವುದು, ಮೂಲೆಯಲ್ಲಿದ್ದೇ ಕೋಲು ತಲೆಗೆ ಬಡೆಯುವುದು, ಹೊರಗಿದ್ದೇ ನಾಯಿ ಕಚ್ಚುತ್ತದೆ. ಮೆಟ್ಟಿಲಲ್ಲಿದ್ದ ಹಗ್ಗ ಕಾಲಿಗೆ ತೊಡಕಾಗುವುದು, ಹುಲಿ ಕಳ್ಳನನ್ನು ಕೊಂದು ತಿನ್ನುವುದು ಹೀಗೆ ಸಹಜ ಸ್ವಭಾವಗಳೇ ಫ್ಯಾಂಟಸಿ ಕಥೆಗಳಲ್ಲಿ ಕಥೆಯ ಓಘ ಮತ್ತು

ರಂಜನೆಗೆ ಬಲ ಒದಗಿಸುತ್ತವೆ. ಮೆಣಸಿನ ಕಾಳೊಂದು ಇಡೀ ಕಥೆಯೊಂದನ್ನು ಮುನ್ನಡೆಸುವ ಅಸಂಗತ ಸಂಗತಿಯೇ ಕಥೆಯ ಪ್ರಧಾನ ಅಂಶ.

೪.೧.೨.೯. ಎಳೆಯ ಮಕ್ಕಳು ಮತ್ತು ಫ್ಯಾಂಟಸಿ

ಕಥೆಗಳಲ್ಲಿ ಎಳೆಯರಿಗಾಗಿ ಎಂದು ಪ್ರತ್ಯೇಕವಾಗಿ ಕೃತಿಗಳನ್ನು ರಚಿಸುವುದು ಪಾಶ್ಚಾತ್ಯರಲ್ಲಿ ತುಂಬಾ ಕಂಡುಬರುತ್ತದೆ. ಕನ್ನಡದಲ್ಲಿ ಈ ಬಗೆಯ ಬರಹ ಪ್ರಯತ್ನವನ್ನು ಕೆಲವರು ಮಾಡಿದ್ದಾರೆ. ದೇವುಡು ಅವರು ಇಂಥವೇ ಜನಪದ ಕತೆಗಳನ್ನು ಆಯ್ದು ನೀಡುತ್ತಾರೆ. 'ಮುದುಕಿಯ ಮಕ್ಕಳು' ಎನ್ನುವ ಕತೆಯಲ್ಲಿ ಮುದುಕಿಗೆ ಇರುವ ಇಬ್ಬರು ಮಕ್ಕಳು; ತಾಯಿ ಸತ್ತ ತಬ್ಬಲಿ ಮಕ್ಕಳು. ಅವರಲ್ಲಿ ಕಿರಿಯವಳು ಕುರೂಪಿ, ಆಲಸಿ, ಕೆಲಸ ಮಾಡಳು. ಆದರೂ ಅವಳೇ ಮುದುಕಿಗೆ ಪ್ರೀತಿಯವಳು. ಇನ್ನೊಬ್ಬಳು ಕಷ್ಟ ಪಟ್ಟು ಕೆಲಸ ಮಾಡುವವಳು. ಮುದುಕಿಗೆ ಅವಳನ್ನು ಕಂಡರೆ ಆಗದು. ಸರಿ ಈ ಹಿರಿಯವಳು ಒಂದು ದಿನ ಚರಕದಿಂದ ದಾರ ತೆಗೆಯುವುದಕ್ಕೆ ಕುಳಿತಾಗ ಬೆರಳಿಗೆ ತಾಕಿ ರಕ್ತ ಸುರಿಯಿತು. ಅವಳು ಕದಿರು ತೊಡಳೆದುಕೊಂಡು ಬರಲು ಹಳ್ಳಕ್ಕೆ ಹೋದಳು, ಕದಿರು ಜಾರಿ ನೀರಿನಗುಂಟ ಹರಿದು ಹೋಯಿತು, ಇವಳು ಮನೆಯಲ್ಲಿ ಏಟು ಖಂಡಿತ ಅಂತ ಅಂಜಿ ಅದನ್ನು ನೀರಿನಗುಂಟ ಬೆನ್ನು ಹತ್ತಿ ತರಲು ಹೊರಟಳು, ಹಾಗೆ ಹೊರಟವಳು ಒಂದು ಕಮರಿಯಲ್ಲಿ ಇಳಿದು ಅಲ್ಲೊಂದು ಗವಿಯನ್ನು ಕಂಡು, ಅದರೊಳಗೆ ಹೋಗಿ, ಅಲ್ಲಿ ಸೀದು ಹೋಗಲಿಕ್ಕಿರುವ ರೊಟ್ಟಿಗಳನ್ನು ದನಿಯೊಂದನ್ನು ಕೇಳಿ ತೆಗೆದು ಈಚೆ ಹಾಕಿದಳು, ಮುಂದೆ ಹಣ್ಣಾಗಿರುವ ಸೇಬಿನ ಮರದ ಹತ್ತಿರ ಬಂದಳು, ಯಾವುದೋ ದನಿ ಕೇಳಿ ಮರವನ್ನು ಅಲ್ಲಾಡಿಸಿ ಹಣ್ಣುಗಳೆಲ್ಲಾ ಕೆಳಗೆ ಬೀಳುವಂತೆ ಮಾಡಿದಳು, ಹಾಗೆ ಮಾಡಿದವಳು ಮುಂದೆ ನಡೆಯುತ್ತಾ ಒಂದು ಅಜ್ಜಿಯ ಮನೆಗೂ ಬಂದು ಬಿಟ್ಟಳು.

ಅಜ್ಜಿ ಅವಳಿಗೆ ಮನೆಯ ಕೆಲಸ ಮಾಡಿಕೊಂಡಿರಲು ಹೇಳಿದಳು, ಅಡಿಗೆ, ಕಸ ಗೂಡಿಸುವುದು ಮುಂತಾದುದೆಲ್ಲದರ ಜೊತೆಗೆ ಅವಳ ಹಾಸಿಗೆಯನ್ನು ಒದರಿ, ಅದರ ಗರಿಗಳೆಲ್ಲಾ ಹರಡುವಂತೆ ಮಾಡುವ ಕೆಲಸ. ಹುಡುಗಿ ಚಾಚು ತಪ್ಪದಂತೆ ಎಲ್ಲ ಮಾಡಿದಳು. ಮುದುಕಿ ಚಳಿಯಮ್ಮನಂತೆ, ಹಾಗೆ ಒದರಿದ ಗರಿಗಳಿಂದ ಮಂಜಿನ ಹನಿಗಳು ಲೋಕದಲ್ಲೆಲ್ಲಾ ಸುರಿಯುವುದಂತೆ. ಹುಡುಗಿ ಎಲ್ಲವನ್ನೂ ಮಾಡುತ್ತಾ ಅಜ್ಜಿಗೆ ಪ್ರಿಯಳಾದಳು. ಒಂದು ದಿನ ತನ್ನ ಮನೆಗೆ ಹೋಗುತ್ತೇನೆ ಎಂದಾಗ ಮುದುಕಿ ಅವಳನ್ನು ಗವಿಯ ಬಾಗಿಲಿನವರೆಗೆ ಬಂದು ಬೀಳ್ಕೊಟ್ಟಳು.

ಹುಡುಗಿ ಹಾಗೆ ಹೊರಗೆ ಬರುತ್ತಿದ್ದಂತೆ ಚಿನ್ನದ ಮಳೆ ಕರೆಯಿತು. ಅವಳ ಮೈಮೇಲೆ ಬಿದ್ದ ಚಿನ್ನದ ಉಂಡೆಗಳೆಲ್ಲ ಹಾಗೆ ಹಾಗೆ ಅವಳಿಗೆ ಅಂಟಿಕೊಂಡವು' ಚಿನ್ನದ ಮಳೆಯ ಕಲ್ಪನೆಯ ಮೂಲಕ ಕಥೆ ಎಳೆಯ ಮಕ್ಕಳನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ. ಹುಡುಗಿ ಮನೆಗೆ ಬಂದಾಗ ಅವಳ ಚಿನ್ನವನ್ನು ನೋಡಿ ಆಸೆಗೊಂಡ ಮುದುಕಿ ಕಿರಿಯವಳನ್ನೂ ಹೀಗೆಯೇ ಕಳಿಸಲು

ನೋಡಿದಳು. ಕಿರಿಯವಳು ಕದಿರಿನಿಂದ ತಾನೇ ಗಾಯ ಮಾಡಿಕೊಂಡು ಹಳ್ಳಕ್ಕೆ ತೊಳೆಯಲು ಹೋಗಿ ಗವಿಯನ್ನು ಕಂಡು ಮಾಯದ ಅಜ್ಜಿಯ ಮನೆಗೂ ಹೋದಳು. ಅಲ್ಲಿ ಅಜ್ಜಿ ಹೇಳಿದಂತೆ ಕೆಲಸಮಾಡಲು ಒಪ್ಪಿ ಇರತೊಡಗಿದಳು. ಆದರೆ ಆಲಸಿಯಾದ ಅವಳು ಕೆಲವೇ ದಿನಗಳಲ್ಲಿ ಎಲ್ಲ ಕೆಲಸ ಅಷ್ಟಕ್ಕಷ್ಟೇ ಮಾಡುತ್ತಾ ಮುದುಕಿಗೆ ಬೇಸರದವಳಾದಳು. ಮುದುಕಿಯೇ ಇವಳನ್ನು ಕಳಿಸಿಕೊಟ್ಟಳು. ಇವಳು ಬರುವಾಗ ಚಿನ್ನದ ಮಳೆಯ ಬದಲು, ಕರಿ ಕರಿ ಕಲ್ಲೆಣ್ಣೆಯ ಮಳೆಯಾಗಿ ಇವಳ ದೇಹವೆಲ್ಲ ಕರಿಯಾಗಿ ಹೋಯಿತು. ಅದು ಮುಂದೆ ಹೋಗಲೇ ಇಲ್ಲ. ಅಜ್ಜಿಗೆ ತಕ್ಕುದೇ ಆಯಿತು ಎಂದು ಕತೆ ಮುಕ್ತಾಯವಾಗುತ್ತದೆ.

ಹೀಗೆ ಒಬ್ಬರಿಗಾದುದನ್ನು ನೋಡಿ ಇನ್ನೊಬ್ಬರು ಅತಿ ಆಸೆಯಿಂದ ಪಡೆಯಲು ಹೋಗಿ ಅಪಹಾಸ್ಯಕ್ಕೆ, ಕಷ್ಟಕ್ಕೆ ಈಡಾಗುವ ಕತೆಗಳು ಜನಪದ ಸರಕಿನಲ್ಲಿ ಸಾಕಷ್ಟಿವೆ. ಈ ಕತೆಯನ್ನು ದೇವುಡು ಅವರು ತಾವು ಕೇಳಿದ ಹಾಗೆ ಹಾಗೆಯೇ ಇಟ್ಟಿದ್ದಾರೆ. ಇಲ್ಲಿ ಒಟ್ಟು ಜನಪದ ಕತೆಗಳ ಲೋಕದಲ್ಲಿನ ರೋಚಕತೆ, ಅಸಂಭಾವ್ಯಗಳು ಕಾಣುತ್ತವೆ. ಒಬ್ಬರು ಅಪ್ರಿಯರಾಗುವುದು, ಇನ್ನೊಬ್ಬರು ಪ್ರಿಯರಾಗುವುದು, ಅಪ್ರಿಯರಾದವರು ಪಡಬಾರದ ಕಷ್ಟ ಪಡುವುದು, ಆದರೆ ಕೊನೆಯಲ್ಲಿ ಅವರಿಗೆ ಜಯವಾಗುವುದು ನಡೆಯುತ್ತದೆ.

ಇದನ್ನು ಯಾವ ಬಗೆಯಿಂದಲೂ ಹಿಗ್ಗಿಸದೆ, ಮತ್ತಷ್ಟು ರಮ್ಯವಾಗಿಸದೆ ಇರಿಸಿದ್ದಾರೆ. ಇಷ್ಟಿಟ್ಟರೆ ಸಾಕು ಅಂತ ಅವರಿಗೆ ಅನಿಸಿದೆ. ಅವರು ಈ ಪುಸ್ತಕದಲ್ಲಿ 'ಈ ಪುಸ್ತಕವನ್ನು ಬರೆದಿರುವುದು ೭-೮ ವರ್ಷದ ಹುಡುಗರಿಗಾಗಿ, ಅವರು ಸ್ವತಂತ್ರವಗಿ ಓದಬಲ್ಲರು, ಶಾಲೆಯಿಂದ ಮನೆ, ಮನೆಯಿಂದ ಶಾಲೆಗೆ ಹೋಗಿ ಬರುವುದರ ಜೊತೆಗೆ ಕೊಂಚ ಹೊರಗೂ ತಿರುಗಿರಬಹುದಾದ ಸಂದರ್ಭವುಂಟು. 'ಮುಂದುವರಿಯುತ್ತಿರುವ ಅವರ ಬುದ್ಧಿಯನ್ನು ಇನ್ನೂ ಅಷ್ಟು ದೂರ ಎಳೆದುಕೊಂಡು ಹೋಗುವುದು ಒಳ್ಳೆಯದು ಎಂಬ ಉದ್ದೇಶದಿಂದ ಕೊಂಚ ವಿಲಂಬಿಸಿ ಬರೆದಿದೆ.'[೧೭] ಎಂದಿದ್ದಾರೆ.

ದೇವುಡು ಅವರು ಮಕ್ಕಳ ಬೌದ್ಧಿಕತೆ ಬೆಳೆಯಲಿ ಎನ್ನುವುದನ್ನು ಹೇಳಿದ್ದರೂ ಅದರಾಚೆ ಇಲ್ಲಿನ ಕತೆ ರಂಜನೆಯನ್ನು, ಅವಾಸ್ತವದ ಕುತೂಹಲವನ್ನು ಮುಂತಾಗಿ ಹಲವೆಲ್ಲಾ ಪದರುಗಳನ್ನು ಮುಟ್ಟಿಸುತ್ತದೆ. ಆ ಮೂಲಕ ನಮ್ಮಿಂದ ಬೇರೆಯಾದ ಒಂದು ಮಾನಸಿಕ ಸ್ಥಿತಿಯ ಲೋಕದ ಸೃಷ್ಟಿಯಾಗಿ, ಫ್ಯಾಂಟಸಿಯಾಗಿ ಓದಲು ತವಕಿಸುವಂತೆ ಮಾಡುತ್ತದೆ. ಮನುಷ್ಯನ ಗುಣಗಳ ಚಿತ್ರಣವೇ ಇಲ್ಲಿ ಸಾರವಾದರೂ, ಅದು ಚಿತ್ರಣಗೊಳ್ಳುವುದು ಬೇರೊಂದು ವಾತಾವರಣದಲ್ಲಿ. ಇಲ್ಲಿನ ಕತೆಯ ಹಂದರ ಮನುಷ್ಯರನ್ನೇ ಒಳಗೊಂಡಿದೆ, ಮಾಯದ ಅಜ್ಜಿಯಂಥ ಜೀವಗಳನ್ನೊಳಗೊಂಡಿದೆ.

ಗೀತಾ ಕುಲಕರ್ಣಿ ಅಂಥ ಸಂವೇದನಾಶೀಲ ಲೇಖಕಿ, 'ನೇಜಿಗುಬ್ಬಚ್ಚಿ'ಯಂಥ ವಾಸ್ತವದ ಸೊಗಸಿನ ಮಕ್ಕಳ ಕಾದಂಬರಿ ಬರೆದವರು ಈ ಬಗೆಯ ಫ್ಯಾಂಟಸಿಯ ಮೂರು ಕತೆಗಳನ್ನು ನೀಡಿದ ಉದಾಹರಣೆಯನ್ನು ಇಲ್ಲಿ ನೋಡಬಹುದು. ಇದರ ಮುನ್ನುಡಿಯಲ್ಲಿ ಪ್ರಕಾಶಕರೆನ್ನಬಹುದಾದ ಆಡಳಿತ ನಿರ್ದೇಶಕರ ಮಾತುಗಳು ಕೆಲವು ಇವು; 'ಎಳೆಯ ಬಾಲಕರಿಗೋಸ್ಕರ ಬರೆದ ಮೂರು ಸಣ್ಣ ಕತೆಗಳನ್ನು 'ಹಾರುವ ಕಂಬಳಿ' ಸಂಕಲನ ಒಳಗೊಂಡಿದೆ.'[೧೮] ಮಕ್ಕಳಿಗಾಗಿ ಬರೆಯುವ ಲೇಖಕರು ಓದುಗರ ವಯೋಮಾನಕ್ಕೆ ತಕ್ಕಂತೆ ಬರೆಯುತ್ತಿದ್ದನ್ನು ಈ ಮೇಲಿನ ಹೇಳಿಕೆ ಸಾಬೀತುಪಡಿಸುತ್ತದೆ.

ಈ ಸರಳ ಸುಂದರ ಬರವಣಿಗೆ ಕನ್ನಡ ಶಿಶು ಸಾಹಿತ್ಯಕ್ಕೆ ಶ್ರೀಮತಿ ಗೀತಾ ಕುಲಕರ್ಣಿರವರು ಕಾಣಿಕೆಯಾಗಿ ನೀಡಿದ್ದಾರೆ. ರಂಜನೆಯ ಕತೆಗಳಲ್ಲಿ ನೀತಿಯ ಅಂಶ ಹಾಸು ಹೊಕ್ಕಾಗಿರುವುದು ಶಿಶುಸಾಹಿತ್ಯದ ವಿಶೇಷ. ಎಷ್ಟೋ ವೇಳೆ ಮಕ್ಕಳಿಗೆ ಮಾತ್ರವಲ್ಲದೆ ಅವರನ್ನು ಹೆತ್ತವರಿಗೂ ಅಂಥ ಕೃತಿಗಳು ಮರ್ಗದರ್ಶಿಗಳಾಗುತ್ತವೆ........ ಅಂತಾರಾಷ್ಟ್ರೀಯ ಮಕ್ಕಳ ವರ್ಷದ ಸವಿ ನೆನಪಿಗಾಗಿ ಮಕ್ಕಳಿಗೋಸ್ಕರ 'ಹಾರುವ ಕಂಬಳಿ' ಕಥಾ ಸಂಕಲನವನ್ನು ಸಹಕಾರಿ ಪ್ರಕಾಶನ ಮಂದಿರ ಅತ್ಯಂತ ಸಂತೋಷದಿಂದ ನೀಡಿದೆ. ಈ ಮಾತುಗಳಲ್ಲಿ ಗಮನಿಸಬಹುದಾದ ಅಂಶಗಳು ಇವು; 'ಇಲ್ಲಿನ ಕತೆಗಳು ದೊಡ್ಡವರಿಗಾಗಿಯೂ ಇದ್ದೇ ಇವೆ ಎನ್ನುವ ಗ್ರಹಿಕೆ. ಇವನ್ನು ಮಕ್ಕಳಿಗೆ ಹೇಳುವುದು ಇವು ರಂಜಕಗುಣ ಹೊಂದಿವೆ ಎನ್ನುವ ಮುಖ್ಯ ಕಾರಣವಾಗಿ. ಅಲ್ಲದೆ ಈ ರಂಜಕ ಗುಣದ ಜೊತೆ ನೀತಿಯೂ ಇಲ್ಲಿ ಬೆಸೆದುಕೊಂಡಿದೆ ಎನ್ನುವ ಗ್ರಹಿಕೆ.'[೧೯]

ಇಲ್ಲಿನ ಮೊದಲಿನ ಕತೆ ನಮ್ಮ ಜನಪದ ಕತೆಗಳಲ್ಲಿನ ರಮ್ಯ ಆಂಶಗಳನ್ನು, ರೋಚಕ ಸಂಗತಿಗಳನ್ನು, ಮಾಯಾಜಾಲದ ಅದ್ಭುತಗಳನ್ನು ಹೊಂದಿರುವ ಸಂಗತಿಗಳನ್ನು ಹೇಳುತ್ತಾ ಹೋಗಿ ದೀರ್ಘವಾಗಿಯೇ ನಿರೂಪಿಸಬಹುದಾದ ಕತೆ. ಆದರೆ ಇಡೀ ಕತೆ ದೊಡ್ಡವರ ಬದುಕಿನಲ್ಲಿ ನಡೆಯುವ ಸಂಗತಿಗಳಿಂದ ತುಂಬಿರುವುದು. ಬಹು ಮುಖ್ಯವಾಗಿ ರಾಜಕುಮಾರಿಯಂಥವಳು ತನಗೆ ತಕ್ಕವನನ್ನು ಮದುವೆಯಾಗಲು ಹೂಡಿದ ಆಟ ಕಾಣಿಸುತ್ತದೆ.

ರಾಜಕುಮಾರಿ ಆಟದಲ್ಲಿ ಸೋತ ಅನೇಕ ರಾಜಕುಮಾರರು ಈಗಾಗಲೇ ಅವಳ ಅರಮನೆಯಲ್ಲಿ ತೋಟದಲ್ಲಿ ಗಿಡಗಳಿಗೆ ನೀರು ಹಾಕುತ್ತಾ ಕನಿಷ್ಟದ ಜೀವನ ನಡೆಸುತ್ತಿದ್ದಾರೆ. ಇಂಥದರಲ್ಲಿ ಅಂಥವಳನ್ನು ವರಿಸಲು ತೀರಾ ಸಾಮಾನ್ಯದವರಾದ ಮೂವರು ಸಹೋದರರು ಪ್ರಯತ್ನಿಸಲು ನೋಡುತ್ತಾರೆ. ಈ ಮೂವರಲ್ಲಿ ಇಬ್ಬರು ತಮ್ಮದೇ ಮರವೆಯಿಂದ ರಾಜಕುಮಾರಿಯ ಬಲೆಗೆ ಸಿಕ್ಕಿಹಾಕಿಕೊಳ್ಳುತ್ತಾರೆ. ಆದರೆ ಮೂರನೆಯವನು, ಚಿಕ್ಕವನು, ತಕ್ಕ ಶಾಸ್ತಿ ಮಾಡಲು ಹೋಗಿ, ತಾನೂ ದುಡುಕಿ, ಆದರೆ ಅದೃಷ್ಟದಿಂದ ಮತ್ತೊಂದೇ ಆದ ಬಗೆಯಲ್ಲಿ ಸಹಾಯ ಸಿಕ್ಕು ಜಯಶಾಲಿಯಾಗುತ್ತಾನೆ. ರಾಜಕುಮಾರಿಯನ್ನು ಮದುವೆಯಾಗುವ ಸುಯೋಗ ದೊರಕುತ್ತದೆ, ಉಳಿದ ಇಬ್ಬರು ಸಹೋದರರಿಗೂ ಒಳ್ಳೆಯ ಸ್ಥಾನಮಾನ ಸಿಗುತ್ತದೆ. ಇದಿಷ್ಟು ಕತೆ.

ಈ ಕತೆ ಮುಖ್ಯವಾಗಿ ಮೂವರು ಸಹೋದರರು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವಲ್ಲಿ ಮಾಡುವ ಪ್ರಯತ್ನಗಳ ಸುತ್ತ ಇದೆ. ಜೀವ ಬಿಡುವ ಅಪ್ಪನಿಂದ ಈ ಸಾಮಾನ್ಯರಿಗೆ ಮಾಯದ ವಸ್ತುಗಳ ಕೊಡುಗೆ ಸಿಕ್ಕಿದೆ. ಬೇಕಾದಷ್ಟು ಹಣ ನೀಡುವ ಚೀಲ, ಅದೃಶ್ಯವಾಗಲು ಸಹಾಯ ಮಾಡುವ ಟೊಪ್ಪಿಗೆ, ಎಲ್ಲೆಂದರಲ್ಲಿ ಹಾರಿಹೋಗುವ ಕಂಬಳಿ ಇವು ಮೂರು ಅದೃಷ್ಟದ ವಸ್ತುಗಳು. ಆದರೆ ಇವನ್ನು ಉಪಯೋಗಿಸುವಲ್ಲಿಯೂ ಮೂವರೂ ಎಡವುತ್ತಾರೆ. ಚಾಲಾಕಿಯಾದ ರಾಜಕುಮಾರಿ ಇವರಿಗೆ ಕೈ ಕೊಡುತ್ತಾಳೆ, ಇವರ ಈ ಮೂರೂ ಜಾದೂ ವಸ್ತುಗಳನ್ನು ತನ್ನ ಕೈವಶ ಮಾಡಿಕೊಳ್ಳುತ್ತಾಳೆ. ಆದರೆ ಮೂರನೆಯವನಿಗೆ ಇನ್ನೊಂದೇ ಅದೃಷ್ಟದ ಸಹಾಯ ಸಿಕ್ಕು ಅದರ ಸಹಾಯದಿಂದ ಅವನು ಜಯಶಾಲಿಯಾಗುವ, ರಾಜಕುಮಾರಿಗೆ ತಕ್ಕ ಶಾಸ್ತಿಮಾಡುವ ಪ್ರಸಂಗ ಕಾಣುತ್ತೇವೆ.

ಹೀಗಿರುವ ಕತೆಯಲ್ಲಿ ಒಂದು ಸುಂದರ ಹೆಣ್ಣಿನ ಸುತ್ತ ಗಂಡುಗಳ ವರಿಸುವ ಪ್ರಯತ್ನಗಳು, ತಮ್ಮ ಸಾಹಸ, ಚಾತುರ್ಯಗಳನ್ನು ಪ್ರದರ್ಶಿಸಿಕೊಳ್ಳುವ ಪ್ರಮೇಯ ತಂದುಕೊಳ್ಳುವುದು ವಿಶೇಷವಾಗಿಯೇ ಅಡಕಗೊಂಡಿದೆ. ರಾಜಕುಮಾರಿ ಎಂಥ ರಾಜ್ಯದ ರಾಜಕುಮಾರರಾದರೂ ಅವರಿಂದ ತನ್ನನ್ನು ಬಯಸುವ ವಿಚಿತ್ರ ಬಯಕೆ ಪೂರೈಸುವುದನ್ನೇ ನೋಡುತ್ತಾಳೆ. ಅದೂ ಹಣದ ರಾಶಿ ಕೂಡಿಬೀಳುವುದು. ಮೂವರು ಸಹೋದರರಲ್ಲಿ ಮೊದಲನೆಯವನು ಹೋಗಿದ್ದು ಅವಳನ್ನು ವರಿಸಲೆಂದೇ. ಆದರೆ ಅವನು ಫಜೀತಿಗೀಡಾದಾಗ ಎರಡನೆಯವನು ಅವಳಿಗೆ ಶಾಸ್ತಿ ಮಾಡಿ ತನ್ನಣ್ಣನ ಮಾಯದ ಚೀಲವನ್ನು ವಾಪಸ್ಸು ಪಡೆಯಲೆಂದೇ ಹೋದನು.

ಮೂರನೆಯವನು ಕೂಡ ಅವಳಿಗೆ ಚೆನ್ನಾಗಿ ಶಾಸ್ತಿಮಾಡಿ ಜಯಶಾಲಿಯಾಗಲು ಹೋದವನು, ತಾನು ಕಾಡಿನಲ್ಲಿ ಬಂದು ಬೀಳುವ ಚಾತುರ್ಯದ ಸಂಗತಿಯಿಂದ ಕಷ್ಟಕ್ಕೆ ಒಳಗಾಗುವ ರಾಜಕುಮಾರಿ ಅಲ್ಲಿಯೂ ಜಾಣತನದಿಂದ ಪಾರಾಗುವ ದಾರಿ ನೋಡಿದರೂ ಮೂರನೆಯವನನ್ನು ನೋಡಿ ಅವನ ಸೌಂದರ್ಯಕ್ಕೆ ಮರುಳಾಗಿ ಮನದಲ್ಲಿಯೇ ಅವನನ್ನು ಬಯಸುವುದು ನಡೆಯುತ್ತದೆ.

ಅವನಿಂದ ಮುಂದೆಯೂ ತಕ್ಕ ಶಾಸ್ತಿಯಾದಾಗಲೂ ಅವಳು ತನ್ನದೆಲ್ಲಾ ಹಮ್ಮುಬಿಮ್ಮುಗಳನ್ನು ಬಿಟ್ಟುಕೊಟ್ಟು, ಅವನ ಕಾಲಿಗೇ ಬಿದ್ದು ಅವನನ್ನು ವರಿಸಲು ಕೇಳುವ ಪ್ರಸಂಗ ನಡೆಯುತ್ತದೆ. ಇದೆಲ್ಲ ವಯಸ್ಕರ ಬದುಕಿನ ಹಲವಾರು ಮಗ್ಗಲುಗಳನ್ನು ಹೇಳುವುದೇ ಆಗಿದೆ. ಹಾಗೆ ಕತೆ ವಯಸ್ಕರಿಗೆ ಹೆಚ್ಚು ತೆರೆದುಕೊಳ್ಳುವುದಾಗಿದೆ. ಇದರ ಪಾಠಾಂತರಗಳೂ ಹಲವು ಬಗೆಯಲ್ಲಿ ಇರಲು ಸಾಧ್ಯವಿದ್ದೇ ಇದೆ. ಅದು ಸಹಜ. ಹಾಗಿದ್ದರೂ ಈ ಕತೆಯನ್ನು ಗೀತಾ ಕುಲಕರ್ಣಿಯಂಥ ಹೊಸಗಾಲದ ಸೂಕ್ಷ್ಮ ಸಂವೇದನೆಯ ಲೇಖಕಿ ಮಕ್ಕಳಿಗಾಗಿ ಎಂದು ನೀಡಿದ್ದಾರೆ. ಅವರು ಮಕ್ಕಳಿಗಾಗಿನ ಹೊಸಗಾಲದ ಬರವಣಿಗೆಯ ಪರಿಚಯವನ್ನು ಆ ಸಮಯದಲ್ಲಿ ಮಾಡಿಕೊಂಡವರೇ.

ಶಿವರಾಮ ಕಾರಂತರ ಒಡನಾಟ ಅವರಿಗೆ ಒದಗಿಯೂ ಬಂದಿದ್ದುದು ಇದೆ. ಅಲ್ಲದೆ ಮಲೆನಾಡಿನದೇ ಅನುಭವದ ಹಿನ್ನೆಲೆಯ 'ನೇಜಿಗುಬ್ಬಚ್ಚಿ' ಪುಟ್ಟ ಹುಡುಗನೊಬ್ಬನ ಸುತ್ತಲಿನ

ವಾಸ್ತವದ ಸಂಗತಿಗಳಿಂದ ಕೂಡಿದ ಕಾದಂಬರಿಯನ್ನು ಅವರು ಆಗಲೇ ಬರೆದೂ ಆಗಿತ್ತು. ಹೀಗಿದ್ದೂ ಅವರು ಈ ಕತೆಯನ್ನು ನೀಡುವಲ್ಲಿ ಜನಪದ ಕತೆಗಳನ್ನು ಮಕ್ಕಳಿಗೆ ಹೇಳಬಹುದು, ಅವು ಮಕ್ಕಳಿಗೆ ಅದ್ಭುತ ಎನ್ನುವ ಫ್ಯಾಂಟಸಿಯನ್ನು ಒಳಗೊಂಡಿರುತ್ತವೆ, ರಂಜನೀಯವಾಗಿರುತ್ತವೆ, ಅವು ನಮ್ಮದಲ್ಲದ ಬೇರೊಂದು ಮಾಯದ ಕಾಲಕ್ಕೆ ಸಂದಿದುವಾಗಿದೆ, ಹಾಗಾಗಿ ಗುಂಗಿನಲ್ಲಿ ತೇಲಿಸಿಕೊಂಡು ಹೋಗುತ್ತವೆ ಎನ್ನುವ ಕಾರಣಗಳಿಗಾಗಿ ಎಂದೆಲ್ಲ ಅವರು ಈ ಬಗೆಯ ಕಥೆಗಳನ್ನು ಮಕ್ಕಳಿಗಾಗಿ ನೀಡಿದ ಸಾಧ್ಯತೆಯಿದೆ.

ಗೀತಾ ಕುಲಕರ್ಣಿ ಅವರು ಸಂಕಲಿಸಿದ ಎರಡನೆಯ ಕತೆಯೂ ಹೀಗೆಯೇ ಹಲವಾರು ವಯಸ್ಕರ ಬದುಕಿನ ಮಗ್ಗಲುಗಳನ್ನು ಜನಪದ ಕತೆಗಳ ಅವವೇ ಆಶಯಗಳ ಮರೆಯಲ್ಲಿ ಹೇಳುವುದಾಗಿದೆ. ರಾಜಕುಮಾರ, ಮಂತ್ರಿಕುಮಾರ ಒಟ್ಟಿಗೇ ಸ್ನೇಹದಲ್ಲಿ ಕಾಡಿಗೆ ಬೇಟೆಗೆಂದು ಹೋಗುವುದು, ಅಕ್ಕತಂಗಿಯರನ್ನು ಮದುವೆಯಾಗುವುದು, ಅಕ್ಕ ಮಾಡಿದುದನ್ನೇ ತಂಗಿಯೂ ಪುನರಾವರ್ತಿಸಿ ಸಾವನ್ನು ಅಪ್ಪುವುದು ಮುಂತಾದವನ್ನು ಹೀಗೆ ಗುರುತಿಸಬಹುದು. ಆದರೆ ಕತೆಯಲ್ಲಿ ಕೆಲವೆಲ್ಲ ಹೆಚ್ಚಿನ ವಿಸ್ತಾರ ಬಯಸುವ ಮಗ್ಗಲುಗಳಿವೆ. ತಾನು ಸಾಕಿದ, ಅಕ್ಕರೆಯಿಂದ ನೋಡುತ್ತಿದ್ದ ನಾಯಿ ಕೂಡ ತನ್ನಂತೆಯೇ ಬಸಿರಾಗಿ, ತನಗೆ ಮಾಡುತ್ತಿದ್ದ ರಾಜೋಪಚಾರಗಳ ಸಮಯದಲ್ಲಿ ತನ್ನೊಡನೆ ಇರುವುದನ್ನು ಸಹಿಸದೆ, ಮತ್ಸರದಿಂದ ದೂರವಾಗಿಸುತ್ತಾಳೆ. ಅವಳಿಗೆ ಎರಡು ನಾಯಿ ಮರಿಗಳ ಹೆರಿಗೆಯಾಗಿ, ನಾಯಿಗೆ ಎರಡು ಚೆಂದದ ಹೆಣ್ಣುಮಕ್ಕಳಾಗುತ್ತವೆ. ನಾಯಿ ಅವರನ್ನು ಜೋಪಾನವಾಗಿ ಸಾಕಲು ಕಾಡಿಗೆ ಹೋಗಿ ಒಂದು ಗವಿಯಲ್ಲಿ ಆಸರೆ ಪಡೆಯುತ್ತದೆ. ಅವರನ್ನು ದೊಡ್ಡವರಾಗುವವರೆಗೆ ತಾಯಿ ಮಮತೆಯಲ್ಲಿ ಬೆಳೆಸುವುದು, ರಾಜಕುಮಾರ ಮಂತ್ರಿಕುಮಾರರು ಮದುವೆಯಾಗಿ ಸುಖದಿಂದ ಇರುವಾಗ ತಾಯಿಯಾದ ನಾಯಿ ಗುರುತು ಹಿಡಿದು ಬಳಿ ಬಂದಾಗ ಮಂತ್ರಿಯ ಹೆಂಡತಿ, ಅಕ್ಕ, ನಾಯಿಯನ್ನು ಆದರಿಸಿ ಉಪಚರಿಸುವುದು ಮಾಡಲಾಗುತ್ತದೆ. ತಂಗಿ ಅದನ್ನು ಎಸರು ನೀರು ಚೆಲ್ಲಿಸಿ ಗೋಳಿಡುವಂತೆ ಮಾಡುತ್ತಾಳೆ. ಹೀಗೆ ಮಾಡುವುದು ಕೂಡ ಅವಳು ನಾಯಿ ತನ್ನ ತಾಯಿಯೆಂದಾದರೆ ತನ್ನ ಪರಿಸ್ಥಿತಿ ಏನಾಗಬಹುದು ಎನ್ನುವ ಚಿಂತೆಯಿಂದ. ಮಂತ್ರಿಯ ಹೆಂಡತಿಯೂ ಹೀಗೆಯೇ ಚಿಂತಿಸಿದರೂ ಅಮ್ಮನ ಪ್ರೀತಿಯಲ್ಲಿ ಕದ್ದುಮುಚ್ಚು ಉಪಚರಿಸುವುದು, ಅಲ್ಲದೆ ಕೊನೆಗೆ ದುರ್ಭರ ಪ್ರಸಂಗ ಬಂದಾಗ ಹುತ್ತದಲ್ಲಿ ಕೈಯಿಟ್ಟು ಸಾವಿಗೇ ಶರಣಾಗಲು ನೋಡುವುದು ಕತೆಯಲ್ಲಿದೆ. ಇವೆಲ್ಲ ವಯಸ್ಕರ ಬದುಕಿನ ಸಂಕೀರ್ಣಗಳನ್ನು ಹೇಳುವಂತಹವಾಗಿವೆ.

ಸಂಕಲನದ ಮೂರನೆಯ ಕತೆಯೂ ಹೀಗೆಯೇ ಸಂಕೀರ್ಣತೆಗಳಿಂದ ಕೂಡಿದೆ. ಶೀರ್ಷಿಕೆಯಲ್ಲಿ ನಾಯಿಗೂ ಬೆಕ್ಕಿಗೂ ವೈರತ್ವ ಉಂಟಾದುದು ಹೇಗೆ ಎನ್ನುವುದರ ಕತೆಯೆಂದಿದ್ದರೂ, ಅದು ಕತೆಯಲ್ಲಿ ತೀರಾ ನಗಣ್ಯ ಸಂಗತಿಯಾಗಿ ಕಂಡಿದೆ. ಬದಲು ರಾಜನೊಬ್ಬ ತನ್ನ ಮಗ ರಾಜ್ಯ ಆಳುವಲ್ಲಿ ಅಸಮರ್ಥ ಎಂದು ಭಾವಿಸಿ ಚಿಂತಿತನಾಗಿ ಅವನನ್ನು ಪರೀಕ್ಷಿಸಲು ಒಂದಿಷ್ಟು ಹಣ

ನೀಡಿ ಮೂರು ಬಾರಿ ಸಂಪಾದಿಸಿಕೊಂಡು ಬರಲು ಕಳಿಸುವುದು ಇದೆ. ಆದರೆ ರಾಜಕುಮಾರ ಮೂರು ಬಾರಿಯೂ ನಿರಾಸೆ ಉಂಟುಮಾಡುತ್ತಾನೆ. ಅವನು ದಯಾಳುವಾಗಿ ಒಂದು ಸಲ ಬಡವನೊಬ್ಬನ ನಾಯಿಯನ್ನು, ಇನ್ನೊಮ್ಮೆ ಇನ್ನೊಬ್ಬ ಬಡವನ ಬೆಕ್ಕನ್ನು ತರುತ್ತಾನೆ. ರಾಜ ನಿರಾಸೆಯಿಂದ, ಕೋಪದಿಂದ ಹೆಂಡತಿಯೊಡನೆ ಕಾಡಿಗೆ ಅಟ್ಟಿದರೆ ಅಲ್ಲಿ ನಾಗರ ಮರಿಹಾವೊಂದನ್ನು ಹಾವುಗಾರನಿಂದ ಬದುಕಿಸಿ ಅದರಿಂದ ಮಾಂತ್ರಿಕ ಉಂಗುರವನ್ನು ಪಡೆದು ಅಕಸ್ಮಾತ್ ಅನಿರೀಕ್ಷಿತವಾಗಿ ಅದೃಷ್ಟವಂತನಾಗುತ್ತಾನೆ. ಈ ಮೂಲಕ ಅನಿರೀಕ್ಷಿತವಾಗಿ ಮಾಂತ್ರಿಕ ಉಂಗುರದ ಸಹಾಯದ ಗೆಲ್ಲುವುದು ಫ್ಯಾಂಟಸಿ ಕಥೆಗಳಲ್ಲಿ ತುಂಬಾ ಕಂಡುಬರುವ ಸ್ವರೂಪವಾಗಿದೆ.

ಅದರಿಂದ ಅರಮನೆ ಸೃಷ್ಟಿಸಿಕೊಂಡು, ಸುಖದಿಂದ ಇರತೊಡಗುತ್ತಾನೆ. ಇದನ್ನು ಕಂಡು ಲಾಲಸೆ ಪಡುವ ಇನ್ನೊಂದು ರಾಜ್ಯದ ರಾಜ ಗುಟ್ಟು ಅರಿಯಲು ಡಂಗುರ ಸಾರುತ್ತಾನೆ. ಮಂತ್ರಿಯ ಮಗಳು ಅರಸುತ್ತ ಅರಮನೆಗೆ ಬಂದು ಅರಸಿಯಿಂದ ಉಪಾಯವಾಗಿ ಉಂಗುರದ ಗುಟ್ಟು ತಿಳಿದು, ಅದನ್ನು ಅಪಹರಿಸಿ, ರಾಜಕುಮಾರನನ್ನು ಮತ್ತೆ ಬಡತನಕ್ಕೆ ದೂಡುತ್ತಾಳೆ. ಅವನು ಸಾಕಿದ ನಾಯಿ ಬೆಕ್ಕುಗಳು ಉಂಗುರ ಹುಡುಕಲು ಸಾಕಷ್ಟು ಪ್ರಯತ್ನಿಸಿ ಅರಮನೆಯ ನೆಲಮಾಳಿಗೆಯಲ್ಲಿ ಇರುವುದನ್ನು ಪತ್ತೆ ಹಚ್ಚಿ ಸಂಪಾದಿಸಿ ರಾಜಕುಮಾರನಿಗೆ ತಂದು ಒಪ್ಪಿಸಿ ಮತ್ತೆ ರಾಜಕುಮಾರ ಸುಖದಿಂದ ಇರುವಂತೆ ನೋಡಿಕೊಳ್ಳುತ್ತವೆ.

ಇಲ್ಲಿಯೂ ಸಾಮಾನ್ಯ ಆಶಯವಾಗಿ ರಾಜನಿಂದ, ತನ್ನದೇ ರಾಜ್ಯದಿಂದ ಹೊರದೂಡಲ್ಪಟ್ಟರೂ ಅದೃಷ್ಟದಿಂದ ಸುಖಸಂಪತ್ತನ್ನು ಪಡೆಯುವುದು ಕಂಡುಬರುತ್ತದೆ. ಆದರೆ ಇಲ್ಲಿಯೂ ಹೆರವರ ಸಂಪತ್ತಿಗೆ ಕರುಬುವ, ಅಪಹರಿಸುವ, ರಾಜ್ಯದ ಜವಾಬುದಾರಿಗೆ ಚಿಂತಿಸುವ ಹಲವಾರು ವಯಸ್ಕ ಸಂಗತಿಗಳು ಕತೆಯ ಆಸರೆಯಾಗಿವೆ. ಹೀಗೆಲ್ಲ ಇದ್ದೂ ಈ ಕತೆಗಳನ್ನು ಲೇಖಕಿ ಮಕ್ಕಳಿಗಾಗಿ ಎಂದು ನೀಡಲು ನೋಡಿದ್ದಾರೆ.

೪.೧.೩. ವರ್ತಮಾನದ ಅನುಸಂಧಾನ ಮತ್ತು ಫ್ಯಾಂಟಸಿ

ಜನಪದ ಕಥೆಗಳು ಕಾಲ ಕಾಲಕ್ಕೆ ತಕ್ಕಂತೆ ಹೊಸ ಹೊಸ ಸ್ವರೂಪಗಳಲ್ಲಿ ಪ್ರಕಟಗೊಳ್ಳುತ್ತಲೇ ಬಂದಿವೆ. ಅದರಲ್ಲಿ ವರ್ತಮಾನದ ಆಶಯಗಳು ಒಳಗೊಳ್ಳುತ್ತಾ ಬಂದಿರುವುದು ಕಂಡುಬರುತ್ತದೆ. ಹಲವಾರು ಲೇಖಕರು ಕಥೆಗಳಿಗೆ ಆಧುನಿಕ ಸ್ಪರ್ಶ ನೀಡಲು ಪ್ರಯತ್ನಿಸಿದ್ದಾರೆ. ಆಧುನಿಕ ಆಶಯಗಳನ್ನು ಈಡೇರಿಸಿಕೊಳ್ಳಲು ಜನಪದದ ವಸ್ತುವನ್ನು ಅಸ್ತ್ರವಾಗಿ ಬಳಸುವುದು ಕಂಬಾರರ ಕಥನ ಶೈಲಿ. ಕಂಬಾರರು ಸೃಷ್ಟಿಸಿದ ಹಳ್ಳಿಗಾಡಿನ ಅತಿವಾಸ್ತವ ಲೋಕ ಬೇರೊಂದು ಜಗತ್ತಿನಂತೆ ಭಾವಿಸಿದರೂ ಅದು ನಮ್ಮದೇ ಕಥೆಯನ್ನು ಹೇಳಹೊರಡುತ್ತದೆ. ಹಾಗೆಂದು ಇವರ ಬರವಣಿಗೆಗಳನ್ನು ಲೋಯರ್ ಫ್ಯಾಂಟಸಿಯೆಂದು ಸಾರಾಸಗಟಾಗಿ ಹೇಳಲಾಗುವುದಿಲ್ಲ. ಅವರ ವಿಭಿನ್ನ ಬಗೆಯ ಪ್ರಯತ್ನ ಹೈ ಫ್ಯಾಂಟಸಿಗೆ ಹತ್ತಿರದ ಲೋಕದ ವಿಶಿಷ್ಟ ಆಧುನಿಕ ರಚನೆಯಾಗಿ ಗುರುತಿಸಬಹುದು. ವರ್ತಮಾನದ

ವೈರುಧ್ಯಗಳನ್ನೂ, ನಾಗರಿಕ ಸಮಾಜದ ಹದ್ದು ಮೀರಿದ ನಡೆವಳಿಕೆಗಳನ್ನೂ, ನಿಸರ್ಗ ವಿರೋಧಿ ಮನೋಧರ್ಮದ ಅನಾವರಣ ಮಾಡಲು ಜನಪದ ಕಥಾ ಪರಂಪರೆಯನ್ನು ಸಮರ್ಥವಾಗಿ ಬಳಸಿಕೊಂಡ ಲೇಖಕದಲ್ಲಿ ಚಂದ್ರಶೇಖರ ಕಂಬಾರರು ಅಗ್ರಗಣ್ಯರು. ಅವರು ಈಗಾಗಲೇ ತಮ್ಮ ನಾಟಕಗಳಿಗೆ, ಕಾದಂಬರಿಗಳಿಗೆ ಬಳಸಿಕೊಂಡ ಕತೆಗಳನ್ನೇ ಮಕ್ಕಳಿಗಾಗಿ ಎಂದು ಸಂಕಲಿಸಿ ನೀಡಿದ್ದಾರೆ. ಪ್ರತ್ಯೇಕವಾಗಿ ಮಕ್ಕಳಿಗೇ ಅಂತ ನೀಡಿದುದಲ್ಲ. ಜನಪದ ಕತೆಗಳು ತಾವಿದ್ದಕಿದ್ದ ಹಾಗೇ ಇಂದಿನ ನಮ್ಮ ಬದುಕಿಗೂ ಹಲವೆಲ್ಲ ಸಂಗತಿಗಳನ್ನು ಹೇಳುತ್ತವೆ ಎನ್ನುವುದು ಇಲ್ಲಿನ ವಿಶೇಷ.

ಕಾಡಿನ ಕಥೆಯನ್ನು ನಾಡಿನ ಸಮಸ್ಯೆಗಳಿಗೆ ಜೋಡಿಸುತ್ತಾ. ನಾಡಿನ ಸಮಸ್ಯೆಗೆ ಕಾಡಿನ ನಿಯಮ ಹೇಳಿ ಪರಿಹರಿಸುವ ಬಗೆಯ ಕಥಾ ಮಾದರಿಗಳನ್ನು ಕಂಬಾರರ ಪ್ರಬುದ್ಧರಿಗಾಗಿರುವ ಕಥಾಲೋಕದಂತೆ ಮಕ್ಕಳ ಬರಹಗಳಲ್ಲಿಯೂ ಕಾಣಬಹುದು. ಪ್ರಸ್ತುತ ಅಧ್ಯಯನದಲ್ಲಿ ಅವರ ಒಂದೇ ಒಂದು ಸಂಕಲನ 'ಮರವೇ ಮರ್ಮರವೇ' ಜನಪದ ಮಕ್ಕಳ ಕಥಾ ಸಂಕಲನವನ್ನು ವಿಶ್ಲೇಷಿಸಲಾಗಿದೆ.

ಕಂಬಾರರ ಕಥೆಗಳು ಮತ್ತೊಂದು ಜಗತ್ತಿನ ಅನಾವರಣ ಮಾಡಿದರೂ ಅವು ವರ್ತಮಾನಕ್ಕೆ ಕನೆಕ್ಟ್ ಆಗುತ್ತಲೇ ಇರುತ್ತವೆ. ಕುಂಬಳ ಬೀಜ ಕಥೆಯು ಸಾಮಾಜಿಕ ಬದುಕಿನ ಕಥಾ ಹಂದರ ಹೊಂದಿದೆ. ಆದರೆ ತನ್ನ ಗುಡಿಸಲಿನಲ್ಲಿ ಕಟ್ಟಿದ ಗುಬ್ಬಿ ಗೂಡು ಗಾಳಿ ಮಳೆಗೆ ಕೆಳಗೆ ಬಿದ್ದಾಗ, ಅದನ್ನು ತಮ್ಮನು ಕಾಪಾಡಿ ಅದರಲ್ಲಿನ ಮರಿಯನ್ನು ಆರೈಕೆ ಮಾಡಿ ಬೆಳೆಸಿದರೂ ಕೆಲವು ದಿನಗಳ ನಂತರ ದೊಡ್ಡದಾದ ಗುಬ್ಬಿಯನ್ನು ಕಾಡಿನಲ್ಲಿ ಹಾರಿಸಿ ಬರುತ್ತಾನೆ. ಅದೇ ಗುಬ್ಬಿ ಕೆಲ ದಿನಗಳ ನಂತರ ಕುಂಬಳ ಬೀಜವೊಂದನ್ನು ಬಡ ತಮ್ಮನ ಮನೆ ಮುಂದೆ ಚೆಲ್ಲುತ್ತದೆ. ಆ ಬೀಜವನ್ನು ಹಿತ್ತಲಲ್ಲಿ ಬೆಳೆಸಿ ಹಿಂದೆಂದೂ ಕಂಡಿರದ ಗಾತ್ರದ ಮೂರು ದೊಡ್ಡ ಕುಂಬಳ ಕಾಯಿಗಳನ್ನು ಕಂಡು ಆಶ್ಚರ್ಯ ಚಕಿತನಾಗುತ್ತಾನೆ. ಕಥೆಯು ಫ್ಯಾಂಟಸಿಗೆ ಮರಳುವುದು ಇಂಥಲ್ಲಿಯೇ.

ಸಹಜ ಗಾತ್ರ ಮೀರಿ ಬೆಳೆದ ಕಂಬಳಕಾಯಿ ಬಡ, ಅಸಹಾಯಕ ತಮ್ಮನ ಬದುಕಿಗೆ ಆಸರೆಯಾಗಿ ನಿಲ್ಲುತ್ತದೆ ಜನಪದ ಕಥೆಗಳಲ್ಲಿ ನಿಸರ್ಗವೂ ಯಾವತ್ತೂ ಅಸಹಾಯಕರ ಪರವಾಗಿಯೇ ಇರುತ್ತದೆ ಎನ್ನುವುದನ್ನು ಕುಂಬಳ ಬೀಜ ಕಥೆ ಮತ್ತೊಮ್ಮೆ ಸಾಬೀತು ಪಡಿಸುತ್ತದೆ. ಮೂರರಲ್ಲಿ ಎರಡು ಕುಂಬಳ ಕಾಯಿಗಳನ್ನು ಬಡ ತಮ್ಮ ಬಳಸಿಕೊಳ್ಳುತ್ತಾನೆ. ಸುಖವಾಗಿರುತ್ತಾನೆ. ಶ್ರೀಮಂತ ಅಣ್ಣ ಇದನ್ನು ಸಹಿಸದೆ ತಮ್ಮ ಮಾಡಿದ ಕಾರ್ಯಗಳನ್ನೆಲ್ಲಾ ಹಾಗೇ ಹಾಗೇ ತಾನೂ ಕೃತಕವಾಗಿ ಮಾಡಿ ಒಂದೇ ಕುಂಬಳಕಾಯಿ ಪಡೆದರೂ ಅದರಲ್ಲಿ ಬೆಂಕಿ ಬಂದು ಅವನ ಸರ್ವಸ್ವ ಸುಟ್ಟು ಹೋಗುತ್ತದೆ. ಜನಪದ ಕಥೆಗಳ ಮತ್ತೊಂದು ಸಾಮಾನ್ಯ ಲಕ್ಷಣಗಳಲ್ಲಿ ಈ ಮೇಲಿನ ಅಣ್ಣನ ಅಸೂಯೆ ಕೂಡ ಒಂದು. ಒಂದು ಕಥೆಯಲ್ಲಿ ಹೀಗೆ ಸಮಾನಾಂತರವಾಗಿ ಎರಡು ಕಥೆಗಳು

ಸಾಗುವುದು ಅನೇಕ ಕಥೆಗಳಲ್ಲಿ ಕಂಡು ಬರುತ್ತದೆ. ಈ ಬಗೆಯ ಕಥೆಗಳ ದಾರಿ ಒಂದೇ ಆದರೂ ವಿವರ ಮತ್ತು ಪರಿಣಾಮಗಳಲ್ಲಿ ವ್ಯತ್ಯಾಸ, ಭಿನ್ನವಾಗಿರುತ್ತದೆ.

ಕಂಬಾರರ ಇನ್ನೊಂದು ಜನಪ್ರಿಯ ಕಥೆ 'ಸಂಪಿಗೆ ರಾಣಿ.' ವನಪಾಲಕನಿಂದ ಹುಡುಗಿಯಾಗಿ ಪರಿವರ್ತನೆಗೊಂಡ ಕಾಡಿನ ಮುಗ್ಧ ಹುಡುಗಿ ಮತ್ತು ನಾಡಿನ ನಾಗರಿಕ ಪ್ರತಿನಿಧಿಗಳ ಮಧ್ಯೆ ಇರುವ ನಿಸರ್ಗ ಪ್ರೀತಿಯ ವೈರುಧ್ಯ ಸ್ವಭಾವಗಳನ್ನು ಕಥೆ ಬಿಚ್ಚಿಡುತ್ತದೆ. ನಾಗರಿಕರೆಂದು ಕೊಂಡವರ ಅನಾಗರಿಕ ವರ್ತನೆಗಳು ಮಹಾರಾಣಿ ಮತ್ತು ಮರಕಟುಕದ ಮೂಲಕ ಕಂಡು ಬಂದರೆ, ಸಂಪಿಗೆ ರಾಣಿಯು ನಿಸರ್ಗ ಕುರಿತು ಮನುಷ್ಯರು ಹೊಂದಿರ ಬೇಕಾದ ಪ್ರೀತಿ, ಕಾಳಜಿಗೆ ಉದಾಹರಣೆ ಎನ್ನುವಂತಿದ್ದಾಳೆ, ಕಾಡು ಅತಿಬೇಗನೇ ನಾಡವರ ನಡೆಗೆ ಬೇಸತ್ತು ಕೊಳ್ಳುತ್ತದೆ ಎನ್ನುವುದು ಸಂಪಿಗೆ ರಾಣಿ ಅರಮನೆಯ ಕುರಿತು ಭ್ರಮನಿರಸನಗೊಂಡಲ್ಲಿ ವ್ಯಕ್ತವಾಗುತ್ತದೆ.

'ಹಸಿರಿನಷ್ಟೇ ಮುಗ್ಧವಾದ, ಪರಸ್ಪರ ನಂಬುಗೆಯ, ಸೃಜನಶೀಲವಾದ ಹಸಿರು ಲೋಕ ಒಂದು ಕಡೆ, ಬಂಜೆಯಾದ, ಹುಸಿ ವಂಚನೆಗಳನ್ನು ಉಳ್ಳ, ಪರಸ್ಪರ ಕೊಂದು ತಿಂಬುವ ಅನಾಗರಿಕ ಲೋಕ ಇನ್ನೊಂದು ಕಡೆ. ಈ ಎರಡು ಲೋಕಗಳ ಸಮಾನಾಂತರ ಚಲನೆಯನ್ನು ಓದುಗನಿಗೆ ಒದಗಿಸಿ ಮತ್ತೆ ನಿಸರ್ಗದತ್ತ ಮುಖ ಮಾಡಿಸಲು ಈ ಕಥೆಗಳು ಸಹಕರಿಸುತ್ತವೆ'[೨೦]. ಕಥೆಯಾಗಲೀ, ಕಾವ್ಯ, ನಾಟಕವಾಗಲೀ ಜಾನಪದ ಕಥಾ ತಂತ್ರ, ಆಶಯವನ್ನು ಪುನರ್‌ಕಟ್ಟುವಲ್ಲಿ ಕಂಬಾರರು ನಿಷ್ಣಾತರು, ಬಹುಷಃ ಅವರ ಬರಹದ ಬಲವೇ ಇದು. ಫ್ಯಾಂಟಸಿ ಪರಿಭಾಷೆಯಲ್ಲಿ ಅವರ ರಚನೆಗಳ ಕುರಿತು ಇದುವರೆಗೆ ಯಾರೂ ಮಾತನಾಡಿಲ್ಲ. ಹೊಸಗಾಲದ ಫ್ಯಾಂಟಸಿಗೆ ಪುರಾಣದ, ಮಹಾಭಾರತದ ಕತೆಗಳನ್ನು ನಮ್ಮ ಅನೇಕ ಲೇಖಕರು ಬಳಸಿಕೊಳ್ಳುವಂತೆ ಕಂಬಾರರು ಜನಪದ ಕತೆಗಳನ್ನು ಬಳಸಿಕೊಳ್ಳುತ್ತಾರೆ ಎನ್ನಬಹುದು. ಮಕ್ಕಳ ಮುಂದೆಯೂ ಇವನ್ನೇ ಅವರು ಇಡುತ್ತಾರೆ. ಹೀಗಿಡುವಾಗ ಇಂದಿನ ಮಕ್ಕಳು ಕೇಳುವ ಅನೇಕ ಪ್ರಶ್ನೆಗಳು ಸಂದಿಗ್ಧಕ್ಕೆ ದೂಡುವುವು ಇದ್ದೇ ಇರುತ್ತವೆ.

ಹಿಂದಿನ ಸಾಮಾಜಿಕದ ಮೌಲ್ಯಗಳು ಇಂದು ಒಪ್ಪುವಂಥವಲ್ಲ. ಈ ಜನಪದ ಕತೆಗಳಲ್ಲಿ ಅವೆಲ್ಲ ಹಾಸುಹೊಕ್ಕಾಗಿರುತ್ತವೆ. ಕಂಬಾರರ ಕತೆಗಳೂ ಇದಕ್ಕೆ ಹೊರತಾಗುವುದಿಲ್ಲ. ಅದೇನೇ ಇರಲಿ, ಫ್ಯಾಂಟಸಿಯನ್ನು ಅವರು ಜನಪದದಿಂದಲೇ ಹೆಕ್ಕಿ ಮಕ್ಕಳಿಗೆ ನೀಡಲು ನೋಡುತ್ತಾರೆ ಎನ್ನುವುದು ನಿಜ. ಅವರು ಅಲಿಬಾಬಾ ಮತ್ತು ನಲವತ್ತು ಕಳ್ಳರು ನಾಟಕವನ್ನೂ ಮಕ್ಕಳಿಗಾಗಿ ರಚಿಸಿದುದನ್ನು ಇಲ್ಲಿ ಹೇಳಬಹುದು.

ಈ ಬಗೆಯ ಜನಪದ ಕತೆಗಳಲ್ಲಿ ಸರ್ವೆಸಾಮಾನ್ಯವಾಗಿ ಆದರ್ಶಗಳು, ನೀತಿಗಳು ಕಂಡೂಕಾಣದಂತಿದ್ದು, ಲೌಕಿಕದ ಮನುಷ್ಯನ ಲೌಕಿಕ, ಸಹಜದ ವ್ಯಾಪಾರಗಳೇ ಎದ್ದುಕಾಣುತ್ತವೆ. ಪುರಾಣದ ಕತೆಗಳಂತೆ ಅಧ್ಯಾತ್ಮ ನುಸುಳುವುದಿಲ್ಲ, ಬದುಕಿನಿಂದ ದೂರ ಸಾಗುವ ಸಂಗತಿಗಳು

ಕಾಣುವುದಿಲ್ಲ. ಏನೇ ಕೊನೆಯಿದ್ದರೂ ಅದು ಸುಖ ಸಂಪತ್ತಿಯ, ಲೌಕಿಕದ ಬಯಕೆಗಳಲ್ಲಿಯೇ. ಈ ಬಗೆಯ ಜನಪದ ಕಥಾಲೋಕದ ಫ್ಯಾಂಟಸಿ ಪುರಾಣದ ಕತೆಗಳಿಂದ ಭಿನ್ನವಾಗಿ ನಿಲ್ಲುವ ಆಶಯಗಳನ್ನೇ ಹೊಂದಿವೆ. ಪುರಾಣದ ಕಥಾಲೋಕದಲ್ಲಿಯೂ ಈ ಲೌಕಿಕತೆ ಸಾಕಷ್ಟು ಹಬ್ಬಿಕೊಂಡುದೇ, ಇಲ್ಲವೆಂದೇನಿಲ್ಲ. ಆ ಕುರಿತು ಇಂದಿನವರೆಗೂ ನಮ್ಮ ಅನೇಕ ಕವಿಗಳು, ಕತೆಗಾರರು, ವಿದ್ವಾಂಸರು ವಿಭಿನ್ನ ದೃಷ್ಟಿಕೋನಗಳಿಂದ ಭಾರತ, ರಾಮಾಯಣಗಳನ್ನ ನೋಡುತ್ತ ಬಂದಿರುವುದು ನಮ್ಮ ಮುಂದೆ ಇದ್ದೇ ಇದೆ. ಹಾಗಿದ್ದೂ ಅಲ್ಲಿ ಅಧ್ಯಾತ್ಮದ, ಲೌಕಿಕ ಬದುಕಿನ ಆಚೆಯ ಹಂಬಲಗಳು ಕಂಡುಬಂದುದಿದ್ದೇ ಇರುತ್ತದೆ.

೪.೨. ಶಿಷ್ಟ ಪರಂಪರೆ

ಶಿಷ್ಟ ಪರಂಪರೆಯು ವೈಭವೀಕರಿಸಿದ ಪುರಾಣದ ಕಥಾಲೋಕವನ್ನು ಧಾರ್ಮಿಕ ಸಂಗತಿಯ ಅಗತ್ಯವಾಗಿ, ಅಧ್ಯಾತ್ಮದ ಸಂಗತಿಯಾಗಿಯೂ ಒಳಗೊಳ್ಳುವಂತೆ ಜನಪದದಿಂದಲೇ ಎತ್ತಿಕೊಂಡ, ಅಥವಾ ಅದರಿಂದ ಪ್ರಭಾವಗೊಂಡ ಕಥಾಲೋಕವನ್ನೂ ಉಳ್ಳದ್ದಾಗಿದೆ. ಈ ಎರಡೂ ಬಗೆಯ ಕಥಾ ಹಂದರಗಳ ನಡುವೆ ಮತ್ತೆ ಕೊಡುಕೊಳ್ಳುವಿಕೆಗಳು ನಡೆಯುತ್ತಾ ಸಾಕಷ್ಟು ಸಮ್ಮಿಶ್ರವಾದ ಕಥಾಲೋಕ ಸೃಷ್ಟಿಯಾಗುತ್ತಾ ಬಂದಿದ್ದಿದೆ. ಭಾರತೀಯ ಕಥಾ ಪ್ರಪಂಚ ಎಂದಾಗ ಇದೆಲ್ಲವನ್ನು ಒಳಗೊಳ್ಳುವ ದೊಡ್ಡ ಸಾಗರ. ಅದರಲ್ಲಿ 'ಪಂಚತಂತ್ರ', 'ಹಿತೋಪದೇಶ', 'ಜಾತಕ ಕಥಾ', ಗುಣಾಢ್ಯನ 'ಬೃಹತ್‌ಕಥಾ', ಕ್ಷೇಮೇಂದ್ರನ 'ಬೃಹತ್ ಕಥಾಮಂಜರಿ', ಸೋಮದೇವನ 'ಕಥಾಸರಿತ್ಸಾಗರ', 'ವೇತಾಳ ಪಂಚವಿಂಶತಿ', 'ಸಿಂಹಾಸನ ದ್ವೈತ್ರಿಂಶಿಕಾ' (ಮೂವತ್ತೆರಡು), 'ಶುಕಶಪ್ತತಿ', 'ದಶಕುಮಾರಚರಿತ' ಹೀಗೆ ಕಥೆಗಳು ಒಂದೆಡೆ ಸಂಗ್ರಹವಾಗಿ ಸಿಗುವ ಕೃತಿಗಳು ಸಂಸ್ಕೃತದಲ್ಲಿ ಲಭ್ಯವಿದ್ದು, ಭಾರತದುದ್ದಕ್ಕೂ ಅತ್ಯಂತ ಪ್ರಚುರವಾಗಿವೆ.

'ರಾಮಾಯಣ' 'ಮಾಹಾಭಾರತ'ಗಳೇ ದೀರ್ಘಕಾಲದಿಂದ ಹರಿದು ಬರುತ್ತಾ, ತಮ್ಮೊಳಗೆ ಸಾಕಷ್ಟು ಕತೆಗಳನ್ನು ಒಳಗೊಳ್ಳುತ್ತಾ ದೊಡ್ಡದೊಂದು ಪರಂಪರೆಯನ್ನು ಸೃಷ್ಟಿಸಿರುವುದು ಇನ್ನೊಂದು ಮಗ್ಗಲು. ವೈದಿಕ ಎಂದುಕೊಳ್ಳಬಹುದಾದ ಮೂಲದ ಕಥಾಲೋಕದೊಂದಿಗೆ ಬೌದ್ಧ, ಜೈನ ಪರಂಪರೆಯ ಕಥಾಲೋಕವೂ ತನ್ನದೇ ಆದ ಬಗೆಯಲ್ಲಿ ಹರಡಿಕೊಂಡಿದ್ದನ್ನು ಕಾಣಬಹುದು. ಕನ್ನಡದಲ್ಲಿಯೇ ಮೊದಲಿಗೆ ಸಿಕ್ಕ 'ವಡ್ಡಾರಾಧನೆ' ಗ್ರಂಥ ಈ ಬಗೆಯ ಕಥೆಗಳ ಸಂಗ್ರಹವೇ. ಬೌದ್ಧರ ಜಾತಕ ಕತೆಗಳದೇ ದೊಡ್ಡದೊಂದು ಕಣಜ ನೋಡಲು ಸಿಗುತ್ತದೆ. ಇವೆಲ್ಲಾ ಪರಸ್ಪರ ಪ್ರಭಾವಗೊಳ್ಳುತ್ತಾ, ಒಂದರೊಳಗೊಂದು ಬೆರೆತುಕೊಳುತ್ತಾ ಕೂಡಿಕೊಂಡು, ಮುಂದುವರೆದುಕೊಂಡು ಬಂದಿರುವುದು ಕಂಡುಬರುತ್ತದೆ.

'ವಡ್ಡಾರಾಧನೆ'ಯಲ್ಲಿ ಕಾಣಿಸುವ, ಜೈನರಲ್ಲಿ ಈಗಲೂ ಅಚರಣೆಯಲ್ಲಿರುವ ಒಂದು 'ವೃಷಭನೋಂಪಿಯ ಕತೆ' ದೀಪದ ಆರಾಧನೆಯ ಸುತ್ತ ಇದ್ದು, ಅದು ನಮ್ಮ ಉತ್ತರ ಕರ್ನಾಟಕದ

ಹಳ್ಳಿಗಳಲ್ಲಿ ಇಂದಿಗೂ 'ಚೆನ್ನಮ್ಮನ ದಂಡಿ' ಎನ್ನುವ ಕತೆಯಾಗಿ ಸಾಕಷ್ಟು ಪ್ರಚಾರದಲ್ಲಿದೆ. ಇದು ಗುಳ್ಳವ್ವ ಎಂದು ಆಚರಿಸುವ ಮಣ್ಣಿನ ಆಕೃತಿಯ ಸುತ್ತಲೂ ಸುತ್ತುಹಾಕಿಕೊಂಡಿದೆ.

ದೀಪಗಳನ್ನು ಇಡುವ ಮಣ್ಣಿನ ಆಕೃತಿಗಳನ್ನು ಇಡುವಂತೆ ಮಣ್ಣಿನ ಬಸವಣ್ಣನನ್ನೂ ಇರಿಸುವ ಆಚರಣೆ ನಡೆಯುತ್ತದೆ. ಇದು ಮಹಾರಾಷ್ಟ್ರದಲ್ಲಿ ದಿವಾ ಪೂಜಾ ಎಂದು ಇಂದಿಗೂ ಬಳಕೆಯಲ್ಲಿದೆ. ಇದೇ ಕನ್ನಡದ ಕೆಲ ಮನೆಗಳಲ್ಲಿ ದಿವಸಿಗೌರಿ ಎಂದು ದೀಪದ ಪೂಜೆಯಾಗಿ ಆಚರಣೆಯಲ್ಲಿದೆ. ಒಂಬತ್ತನೆಯ ಶತಮಾನದ ಕೃತಿಯಲ್ಲಿ ಕಾಣಿಸುವ ಜೈನ ಆಚರಣೆಯ ಸುತ್ತಲಿನ ಕತೆಗೂ ಇಂದಿಗೂ ನಡೆಯುತ್ತಿರುವ ಈ ಎಲ್ಲ ಆಚರಣೆಗಳಲ್ಲಿ ಬಳಕೆಯಾಗುವ ಕತೆಗೂ ಹಲವು ಪಾಠಾಂತರಗಳಿದ್ದರೂ ಅವುಗಳು ಮೂಲವನ್ನು ಹೋಲಲು ಪ್ರಯತ್ನಿಸಿ ಒಂದೇ ಆಗಿವೆ.

ಜನಪದ ಪರಂಪರೆಗೂ ಶಿಷ್ಟ ಪರಂಪರೆಗೂ ಇರುವ ದೊಡ್ಡ ಅಂತರ ಎಂದರೆ ಒಂದು ಸಾಂಸ್ಕೃತಿಕವಾಗಿ ಮನ್ನಣೆಗಳಿಸಿಕೊಂಡು ಸ್ಥಿರವಾಗಿ ಉಳಿಯುತ್ತಾ ಬರತೊಡಗುತ್ತದೆ. ಬಹಳಷ್ಟು ಸಲ ಪುರಾಣದ ಕತೆಗಳಿಗೆ ಇದು ಸಲ್ಲುವಂಥದು. ಅದೇ ಜನಮಾನಸದಲ್ಲಿನ ಜನಪದ ಪರಂಪರೆ ಈ ದೊಡ್ಡ ಹರವಿಗೆ ಬೀಳದೆ, ಅನೇಕ ಬಗೆಯ ಬದಲಾವಣೆಗೆ ಸಿಕ್ಕಿದ್ದಾಗಿರುತ್ತದೆ, ಅದು ಬರಬರುತ್ತಾ ಯಾವುಯಾವುದನ್ನೆಲ್ಲಾ ಒಳಗೊಳ್ಳುತ್ತಾ ಸಹಜವಾಗಿ ಸಾಗಿಬಿಡುತ್ತದೆ.

ಲೌಕಿಕವಾಗಿ ಜನಮಾನಸದ ಹತ್ತಿರದ ಸಂಗತಿಗಳನ್ನು ಜನಪದ ಪರಂಪರೆ ಪ್ರತಿಧ್ವನಿಸುತ್ತಿರುತ್ತದೆ. ಅದೇ ಪುರಾಣದ ಕತೆಗಳನ್ನು ನೀಡುವಾಗ ನಮ್ಮ ಲೇಖಕರು ಅವನ್ನು ನಮ್ಮ ಸಂಸ್ಕೃತಿ, ಪರಂಪರೆ ಎಂದು ಮಕ್ಕಳಿಗೆ ಪರಿಚಯಿಸುವ, ಆದರ್ಶವಾಗಿ ಭಾವಿಸುವಂತೆ ಮುಂದಿಡುವುದು ಕಾಣಿಸುತ್ತದೆ. ಅಮೇರಿಕಾದಂಥ ಹೊರದೇಶಗಳಲ್ಲಿ ಭಾರತ ಮೂಲದ ಮಕ್ಕಳಿಗೆ ಭಾರತದ ಕತೆಗಳನ್ನು ನೀಡುವಲ್ಲಿ ನಮ್ಮ ಲೇಖಕರು ಈ ಬಗೆಯ ಕಥಾಲೋಕಕ್ಕೇ ತಕ್ಷಣಕ್ಕೆ ಹೊರಳುವುದು ಕಾಣುತ್ತದೆ.

ಅನಿಮೇಷನ್ ಜಗತ್ತಿನಲ್ಲಿ ಮಕ್ಕಳಿಗೆ ಭಾರತದ ಕತೆಗಳು ಶುರುವಾದುದೇ ಕೃಷ್ಣ, ಭೀಮ, ಹನುಮರ ಕತೆಗಳ ಮೂಲಕ. ಭಾರತೀಯವಾಗಿ ಇವನ್ನು ಮುಂದಿಡುವ ದೃಷ್ಟಿಕೋನವೇ ಇದನ್ನು ಹೇಳುತ್ತದೆ. ಅಂಕಲ್ ಪೈ ಅವರು 'ಅಮರಚಿತ್ರಕಥಾ' ಸರಣಿಗೆ ಈ ಬಗೆಯ ಕತೆಗಳನ್ನು ಮೊದಲಿಗೆ ಆಯ್ದುಕೊಂಡಿದ್ದು ಇದೇ ಬಗೆಯ ಕಾರಣದಿಂದ. ಅವರು ನಡುಗಾಲದ ಅನೇಕ ಅರಸರ, ಸಂತರ ಕತೆಗಳನ್ನೂ, ಭಾರತದ ಮೇಲೆ ನಡೆದ ಪರಕೀಯ ದಾಳಿಗಳನ್ನೆದುರಿಸಿದ ರಾಜರ, ಶೂರರ ಚರಿತ್ರೆಗಳನ್ನೂ ಆಯ್ದುಕೊಂಡಿದ್ದೂ ಕೂಡ ಇದೇ ಬಗೆಯ ಆದರ್ಶದ ಕಲ್ಪನೆಯಲ್ಲಿ. ಅನೇಕ ಸಲ ಇಂಥಲ್ಲಿ ಧಾರ್ಮಿಕ ಸಂಗತಿಗಳು ವಿಭಿನ್ನ ದೃಷ್ಟಿಕೋನಗಳಿಗೆ ಸಾಗುತ್ತಿರುತ್ತದೆ.

ಶಿಷ್ಟ ಪರಂಪರೆಯ ಈ ಕಥಾಸಾಗರ ಜನಪದ ಕಥೆಗಳ ಆಶಯ, ಉದ್ದೇಶಗಳಿಗಿಂತ ಕೊಂಚ ಭಿನ್ನವಾದ ನೆಲೆಯಲ್ಲಿ ಸಾಗುತ್ತದೆ. ಅದರ ಹರವು ತುಂಬಾ ವಿಸ್ತಾರವಾಗಿರುವುದರಿಂದ ಅದನ್ನು ಇಂತಹ ಉಪಘಟಕದ ವ್ಯಾಪ್ತಿಯಲ್ಲಿ ಚರ್ಚಿಸುವುದು ತುಂಬಾ ಕ್ಲೀಷೆಯೆನ್ನುವ ವಿಶ್ಲೇಷಣೆಯಲ್ಲಿ

ನಿಂತು ಬಿಡುವ ಸಂಭವವೇ ಹೆಚ್ಚು. ಅದೇನಿದ್ದರೂ ಇಲ್ಲಿ ಮಕ್ಕಳಿಗಾಗಿ ಬಂದಿರುವ ಶಿಷ್ಟಪರಂಪರೆಯ ಫ್ಯಾಂಟಸಿ ಕಥನಗಳಲ್ಲಿ ಆಯ್ದು ಕೆಲವನ್ನು ವಿಶ್ಲೇಷಣೆ ಮಾಡಲಾಗಿದೆ. ಇದಕ್ಕೆ ಮಾನದಂಡವೂ ನಿರ್ದಿಷ್ಟಪಡಿಸುವುದೂ ಕಷ್ಟವಾಗಿದೆ. ಹಾಗಾಗಿ ನನ್ನ ತಿಳುವಳಿಕೆಯ ಹರಹಿಗೆ ದಕ್ಕಿದ ಬರಹಗಳನ್ನು ಇಲ್ಲಿ ಚರ್ಚೆ ಮಾಡಲಾಗಿದೆ. ಅದರಲ್ಲೂ ಮಕ್ಕಳಿಗಾಗಿ ಕಥೆ, ಕಾದಂಬರಿ, ಕವಿತೆ ಹೀಗೆ ಹಲವು ಕ್ಷೇತ್ರಗಳಲ್ಲಿ ತೊಡಗಿಸಿಕೊಂಡವರು ಶಿಷ್ಟ ಪರಂಪರೆಯ ಕಥನಗಳನ್ನು ಇಲ್ಲವೆನ್ನುವಂತೆ ಮಕ್ಕಳಿಗಾಗಿ ನೀಡಿದ್ದಾರೆ. ಅವರಲ್ಲಿ ರಾಜರತ್ನಂ ಜಿ ಪಿ., ಪುಟ್ಟಣ್ಣ ಎಂ ಎಸ್., ಮುಂತಾದ ಲೇಖಕರ ಜೊತೆಗೆ ಇನ್ನಿತರ ಕೃತಿಗಳನ್ನು ವಿಶ್ಲೇಷಣೆ ಮಾಡಲಾಗಿದೆ.

ಇನ್ನು ಪ್ರಸ್ತುತ ಪ್ರಬಂಧದ ವಿಷಯವಾದ ಫ್ಯಾಂಟಸಿಯ ಕುರಿತು, ಈ ಬಗೆಯ ಶಿಷ್ಟ ಎನ್ನಬಹುದಾದ ಪರಂಪರೆಯ ಕಥಾ ಜಗತ್ತಿನಲ್ಲಿ ಬಳಕೆಯಾಗುತ್ತಾ ಬಂದ ಫ್ಯಾಂಟಸಿಯನ್ನು ಸ್ಥೂಲವಾಗಿ, ಅಧ್ಯಯನಕ್ಕೆ ಅನುಕೂಲವಾಗಿ ಎರಡು ಬಗೆಯಲ್ಲಿ ವಿಂಗಡಿಸಿ ಚರ್ಚೆ ಮಾಡಲಾಗಿದೆ.

* ಅಧ್ಯಾತ್ಮಿಕ ಆದರ್ಶಗಳು, ದೈವೀ ಸಂಗತಿಗಳ ಸುತ್ತ ಹರಡಿಕೊಂಡಿರುವ ಫ್ಯಾಂಟಸಿ.

* ಒಟ್ಟಾರೆ ಮನುಷ್ಯನ ಲೌಕಿಕದ ಬದುಕಿನ ಸುತ್ತ ಹರಡಿಕೊಂಡಿರುವ ಫ್ಯಾಂಟಸಿ.

೪.೨.೧. ಅಧ್ಯಾತ್ಮಿಕ ಆದರ್ಶಗಳು, ದೈವೀ ಸಂಗತಿಗಳ ಸುತ್ತ ಹರಡಿಕೊಂಡಿರುವ ಫ್ಯಾಂಟಸಿ

ಅಧ್ಯಾತ್ಮ ಸಾಧನೆಯಿಂದ ಮುಕ್ತಿ ಪಡೆಯುವುದು, ತಪಸ್ಸಿನಿಂದ ಇಷ್ಟ ದೇವತೆಗಳನ್ನು ಪ್ರತ್ಯಕ್ಷ ಮಾಡಿಕೊಳ್ಳುವುದು, ದೈವೀ ಕಾರುಣ್ಯದಿಂದ, ಇಲ್ಲವೆ ಋಷಿಮುನಿಗಳ ಪ್ರಭಾವದಿಂದ ಕಂಡುಕೊಳ್ಳುವ ಅಸಾಧ್ಯ ಪ್ರಭಾವಗಳು ಮುಂತಾಗಿ ಅವಾಸ್ತವಿಕ ಲೋಕದ ಕತೆಗಳ ಫ್ಯಾಂಟಸಿಯು ಅಧ್ಯಾತ್ಮದ ಭಾಗವಾಗಿ ತುಂಬಾ ಕೃತಿಗಳಲ್ಲಿ ಅಭಿವ್ಯಕ್ತಿಸಲ್ಪಟ್ಟಿದೆ. ಅದನ್ನು ಇಲ್ಲಿ ಮೂರು ಮುಖ್ಯ ಆಶಯಗಳನ್ನು ಇಟ್ಟುಕೊಂಡು ವಿಶ್ಲೇಷಣೆ ಮಾಡಲಾಗಿದೆ.

೪.೨.೧.೧. ಅಧ್ಯಾತ್ಮ ಮತ್ತು ಫ್ಯಾಂಟಸಿ

ಭಾರತೀಯ ಪರಂಪರೆಯಲ್ಲಿ ಆಧ್ಯಾತ್ಮವು ವಿಶೇಷವಾಗಿ ಗಣಿಸಲ್ಪಟ್ಟಿದೆ. ಸಾಂಸಾರಿಕವಾದ, ಸಾಮಾಜಿಕವಾದ ಜೀವನ ನಡೆಯುತ್ತಿರುವ ಹಾಗೇ ಋಷಿ ಮುನಿಗಳು ಕಾಡಿನಲ್ಲಿ ಆಶ್ರಮಗಳನ್ನು ಮಾಡಿಕೊಂಡು ವಾಸಿಸುತ್ತಿದ್ದರು. ಅಂಥವರು ರಾಜಕುಮಾರರಿಗೆ ವಿದ್ಯೆಯನ್ನು ನೀಡುತ್ತಿರುವುದು, ಅಲ್ಲದೆ ಪುರಾಣದ ಕಲ್ಪನೆಯಾಗಿಯೇ ನಮ್ಮ ನಡುವೆ ಹರಿದಾಡಿರುವ ಕಲ್ಪನೆಗಳು ಹಲವು ಬಗೆಯಲ್ಲಿ ಇವೆ.

ಇಂದ್ರ, ದೇವಲೋಕ, ದೇವತೆಗಳು, ಸುರರು–ಅಸುರರು, ಯಮ– ಯಮಲೋಕ, ಶಿವನ ಕೈಲಾಸ, ಅಲ್ಲಿನ ನಂದಿ ಭೃಂಗಿ ಮುಂತಾದ ಗಣಂಗಳು, ವೈಕುಂಠ, ಕ್ಷೀರಸಾಗರ, ವಾಸುಕಿಯ ಹಾಸುಗೆ ಮುಂತಾಗಿ ಅದ್ಭುತ ಲೋಕವೊಂದು ನಮ್ಮ ನಡುವೆ ಇದೆ. ಕಾಡಿಗೆ ತಪಸ್ಸಿಗೆ ಹೋಗುವುದು,

ಘೋರವಾದ ತಪಸ್ಸಿನಲ್ಲಿ ಮುಳುಗುವುದು ನಡೆಯುತ್ತದೆ. ದೇವತೆಗಳು ಪ್ರತ್ಯಕ್ಷವಾಗುವುದು, ವರದಾನದಂತೆ, ಶಾಪವನ್ನೂ ನೀಡುತ್ತಾರೆ. ಕೃಷ್ಣನ ಸುದರ್ಶನ ಚಕ್ರ ಶಾಸ್ತಿಗಾಗಿ ಬೆನ್ನತ್ತಿ ಬರುವುದು, ಈ ಬಗೆಯ ಕಲ್ಪನೆಯ ದೊಡ್ಡದೊಂದು ನಿಗದಿತವಾದ ಲೋಕ ನಮ್ಮ ನಡುವಿದೆ.

ಪ್ರಾಣಿ ಪಕ್ಷಿಗಳನ್ನು ಅತ್ಯಂತ ಗಂಭೀರವಾಗಿ ತತ್ವಜ್ಞಾನದಂಥ ವಿಷಯಗಳನ್ನು ಹೇಳಲೂ ಬಳಸಿಕೊಂಡಿರುವುದೂ ಇಲ್ಲಿ ಕಂಡಿದೆ. ಎರಡು ಸುಪರ್ಣ ಹಕ್ಕಿಗಳು ಮರದ ಮೇಲೆ ಕುಳಿತ ಪ್ರಸಂಗ ಹೇಳುವ ಮುಂಡಕೋಪನಿಷತ್ತಿನ ಉಪನಿಷತ್ತಿನ ಕತೆಯೇ ಅಧ್ಯಾತ್ಮದ ಗಹನವಾದ ಸಂಗತಿಯನ್ನು ಮುಂದಿಟ್ಟಿದೆ. ಋಷಿಮುನಿಗಳನ್ನೆಲ್ಲಾ ಸುತ್ತ ಕೂಡಿಸಿಕೊಂಡು ಹಂಸವೊಂದು ಅಧ್ಯಾತ್ಮವನ್ನು ಅರುಹಿದ ಹಂಸಗೀತವೆನ್ನುವ ಕಾವ್ಯವೇ ಒಂದಿದೆ.

ಹೀಗೆ ಓದುಗರ ಮುಂದೆ ಪರಂಪರೆಯ ಅಗಾಧವಾದ ಶಿಷ್ಟ ಸಾಹಿತ್ಯ ಸಂಪತ್ತು ಇದೆ. ಈ ಮೇಲೆ ಉಲ್ಲೇಖ ಮಾಡಿದ ಕಥನಗಳು ಶತಶತಮಾನಗಳಿಂದ ಅನೇಕರಿಂದ ಪ್ರಕಟಗೊಳ್ಳುತ್ತಲೇ ಬರುತ್ತಿವೆ. ಆದರೆ ಪ್ರಸ್ತುತ ಅಧ್ಯಯನವನ್ನು ಮಕ್ಕಳ ಸಾಹಿತ್ಯಕ್ಕೆ ಮಿತಿಗೊಳಿಸಿರುವುದರಿಂದ ಅಷ್ಟೆಲ್ಲಾ ಸಾಹಿತ್ಯ ಪರಂಪರೆಯನ್ನು ಈ ವಿಶ್ಲೇಷಣೆಯ ವ್ಯಾಪ್ತಿಗೆ ತರಲಾಗುತ್ತಿಲ್ಲ. ಕನ್ನಡದಲ್ಲಿ ಮಕ್ಕಳಿಗಾಗಿ ಬರೆದ ಲೇಖಕರನೇಕರು ಮಕ್ಕಳ ಬೌದ್ಧಿಕ ಬೆಳವಣಿಗೆಯ ದೃಷ್ಟಿಯಿಂದ, ಶೈಕ್ಷಣಿಕ ಪಠ್ಯದ ಭಾಗವಾಗಿ ಭಾರತೀಯ ಪುರಾಣ, ಪರಂಪರೆಯ ಕೃತಿಗಳನ್ನು ಮಕ್ಕಳ ಮಟ್ಟಕ್ಕೆ ಪರಿಷ್ಕರಿಸಿ ನೀಡಿದ್ದಾರೆ. ಅಂತಹ ಬರಹಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಚರ್ಚೆ ಮಾಡಲಾಗಿದೆ.

ರಾಜರತ್ನಂ ಅವರು ವಿಪುಲವಾಗಿ ಮಕ್ಕಳಿಗಾಗಿ ಈ ಬಗೆಯ ಕತೆಗಳನ್ನು ನೀಡಿದ್ದಾರೆ. ಅವುಗಳಲ್ಲಿ ನಾನಾ ಬಗೆಯ ಮೂಲಗಳಿಂದ ಕತೆಗಳನ್ನು ಆಯ್ದುಕೊಳ್ಳಲಾಗಿದೆ. ಬೌದ್ಧರ ಜಾತಕ ಕತೆಗಳು, ಜೈನರ ಕಥೆಗಳು, ರಾಮಾಯಣ ಮಹಾಭಾರತಗಳ ಕತೆಗಳು, ಪುರಾಣದಿಂದಾಯ್ದ ಕತೆಗಳು ಹೀಗೆ ಸಾಕಷ್ಟು ಕತೆಗಳನ್ನು ಅವರು ಪತ್ರಿಕೆಗಳಿಗೆ ನಿಗದಿತವಾಗಿ ಬರೆಯುತ್ತಾ ಸೃಷ್ಟಿಸಿದ್ದು ಇದೆ. ಅವರು ಅವನ್ನು ಹೇಗೆಲ್ಲಾ ನಿರೂಪಿಸಿದರು, ಅವರು ಮಕ್ಕಳ ಓದುಗರನ್ನು ಹೇಗೆಲ್ಲಾ ಭಾವಿಸಿದರು, ಎಂತಹವನ್ನು ಕೊಡಬೇಕು ಎಂದುಕೊಂಡರು ಎನ್ನುವುದು ಇವುಗಳಿಂದ ತಿಳಿಯುತ್ತದೆ.

ಹೀಗೆ ಬಂದಿರುವ ಕತೆಗಳಲ್ಲಿ 'ಕಥಾಕೋಶ' ಸಂಕಲನ ನೋಡಿದರೆ ಮಹಾಭಾರತದ ನಾನಾ ಬಗೆಯ ಪ್ರಸಂಗಗಳನ್ನೇ ವಿಶೇಷವಾಗಿ ಅವರು ಹೆಕ್ಕಿ ಮಕ್ಕಳಿಗೆ ನೀಡಿರುವುದು ಕಾಣುತ್ತದೆ. ಇದರೊಂದಿಗೆ ಇನ್ನೂ ಹಲವಾರು ಮೂಲದ ಕತೆಗಳು ಈ ಸಂಕಲನದಲ್ಲಿ ಸೇರಿಕೊಂಡಿವೆ. ಅವರಿಗೆ ಭಾರತದ ಪರಂಪರೆಯ ಹಿಂದಿನ ಕತೆಗಳನ್ನು ಮಕ್ಕಳಿಗೂ ಮುಟ್ಟಿಸಬೇಕು ಎನ್ನುವುದೊಂದೇ ಉದ್ದೇಶ ಇರುವಂತಿದೆ. ಜೊತೆಗೆ ಈ ಕತೆಗಳಲ್ಲಿ ಅಡಗಿರುವ ಒಳ್ಳೆಯತನ, ಕೆಡಕು, ನೀತಿ ಇವುಗಳನ್ನು ಮುಂದಿಡುವ ಕೆಲಸ ತನ್ನಂತಾನೇ ಆಗುತ್ತದೆ ಎನ್ನುವ ಉದ್ದೇಶವೂ ಇರುವುದು ಕಂಡು ಬರುತ್ತದೆ.

ಈ ಬಗೆಯ ಪೌರಾಣಿಕ ಲೋಕವನ್ನು ಭವ್ಯವಾಗಿ, ಆದರ್ಶವಾಗಿ ಸ್ವೀಕರಿಸುವ ಮನಸ್ಸುಗಳು ಹೀಗೆ ಯೋಚಿಸುವುದು ಸಹಜ. ಈ ಪುರಾಣಗಳನ್ನು ನಾನಾ ಬಗೆಯ ಶೋಧನೆಯ ಕಣ್ಣುಗಳಿಂದ ನೋಡುವ ಕಣ್ಣುಗಳು ಹೀಗೆಲ್ಲಾ ಮಕ್ಕಳಿಗೆ ರವಾನಿಸುವ ಕೆಲಸ ಮಾಡುವುದಿಲ್ಲ. ಹಾಗಾಗಿಯೇ ಅವುಗಳನ್ನು ಬಳಸಿಕೊಂಡರೂ ತಮ್ಮ ತಮ್ಮ ಉದ್ದೇಶಗಳಿಗೆ ಅನುಕೂಲವಾಗುವಂತೆ ಪರಿವರ್ತಿಸಿಕೊಂಡು ಇರಿಸುವುದೇ ಕಾಣುತ್ತದೆ. ರಾಜರತ್ನಂ ಅಂಥದನ್ನು ಮಾಡಿಲ್ಲ. ಅಲ್ಲಿನ ಯಾವುದೇ ಕತೆಗಳನ್ನು ತೆಗೆದುಕೊಂಡರೂ ಅವನ್ನು ಒಟ್ಟಂದದಲ್ಲಿ ಒಳಿತಿಗಾಗಿ, ಒಳ್ಳೆಯ ಬದುಕಿಗಾಗಿ ಎಂದು ಯೋಚಿಸಿ ಮಕ್ಕಳಿಗೆ ನೀಡಿದ್ದಾರೆ.

ರಾಜರತ್ನಂ ಅವರು ವಿಸ್ತಾರವಾಗಿ ಮಹಾಭಾರತದ ಹರವಿನ ಕತೆಗಳನ್ನು ನಾನಾ ಬಗೆಯಲ್ಲಿ ಮಕ್ಕಳ ಮುಂದೆ ಇರಿಸಿರುವುದು ಕಾಣುತ್ತದೆ. ರಾಮಾಯಣ ಭಾರತಾದಿಗಳನ್ನು ಪುರಾಣವಾಗಿಯೂ, ಹಿಂದಣ ಐತಿಹಾಸಿಕ ಚರಿತ್ರೆಗಳಾಗಿಯೂ ವಿಭಿನ್ನವಾಗಿ ನೋಡುವ ಕಣ್ಣುಗಳು ನಮ್ಮ ನಡುವೆ ಇದ್ದೇ ಇವೆ. ರಾಜರತ್ನಂ ಈ ಬಗೆಯ ಗೊಂದಲಕ್ಕೇನೂ ಹೋಗಿಲ್ಲ. ಅವರು ನಮ್ಮ ಪರಂಪರೆಯ ಕತೆಗಳು ಎಂದು ಅಷ್ಟೇ ನೀಡಿದ್ದಾರೆ.

ಇಲ್ಲಿ ದೇವನೊಡನೆಯ ಸಖ್ಯ, ಭಕ್ತಿ, ದೇವರು ಪ್ರತ್ಯಕ್ಷವಾಗುವುದು ಮುಂತಾದ್ದು ಕಾಣುತ್ತದೆ. ಅಲ್ಲದೆ ಮಹಾಭಾರತ ಕೃಷ್ಣನ ಸುತ್ತಲೂ ಹರಡಿಕೊಂಡಿದ್ದು, ಕೃಷ್ಣ ದೈವೀ ಅವತಾರವಾಗಿಯೇ, ಭಾರತದ ಭಾವಿಕ ಮನಸ್ಸುಗಳು ಭಾವಿಸಿಕೊಂಡಂತೆಯೇ ಇಲ್ಲಿನ ನಿರೂಪಣೆಗಳಲ್ಲಿ ಕಾಣುತ್ತದೆ. ಹಾಗಾಗಿ ಇಲ್ಲಿನ ಫ್ಯಾಂಟಸಿ ಎಂದರೆ ಮಹಾಭಾರತದಲ್ಲಿನ ಪ್ರಸಂಗಗಳೇ ನಮ್ಮ ಮುಂದಿರುವುದು. ಅಲ್ಲಿನ ವಿಭಿನ್ನ ಬದುಕಿನ ರೀತಿಯೇ ನಮಗೆ ಅಂತರದಲ್ಲಿದ್ದು ವಿಶಿಷ್ಟತೆಯನ್ನು ಕಟ್ಟಿಕೊಡುವುದು. ಅಲ್ಲಿ ರಾಕ್ಷಸರು ಕಾಣಿಸಿಕೊಳ್ಳುತ್ತಾರೆ, ದೇವರುಗಳು ಕಾಣಿಸಿಕೊಳ್ಳುತ್ತಾರೆ. ಪಶುಪಕ್ಷಿಗಳು ಮಾತನಾಡುತ್ತವೆ, ಸಾಹಸಕ್ಕೆ ಇಳಿಯುತ್ತವೆ. ಮನುಷ್ಯರಿಗೆ ಸಹಾಯ ಮಾಡುತ್ತವೆ.

ಜಾಂಬವಂತ ಎನ್ನುವ ಪಾತ್ರ ಕೃತಯುಗದಿಂದ ಇದ್ದು ದೀರ್ಘ ಅವಧಿಯ ಸೃಷ್ಟಿಗೆ ಸಾಕ್ಷಿಯಾದದ್ದಿದೆ. ಋಷಿಮುನಿಗಳಂಥವರು ಇಲ್ಲಿ ಕಾಣಿಸುತ್ತಾರೆ. ಅವರು ವೈಕುಂಠದಂತಹ ಲೋಕಕ್ಕೆ ಹೋಗಿ ಬಂದು ಮಾಡುವುದು ಕಾಣುತ್ತದೆ. ಅವರ ಶಾಪದಿಂದ ದೇವರುಗಳೇ ಕಷ್ಟ ಅನುಭವಿಸುವ ಪ್ರಸಂಗಗಳು ಬರುತ್ತವೆ. ಹೀಗೆ ಈ ಪುರಾಣ ಎಂದು ಒಂದು ಸಿವುಡು ಮಾಡಿಕೊಂಡರೆ ನಮ್ಮ ಇಂದಿನ ವಾಸ್ತವಕ್ಕೆ ವಿಭಿನ್ನವಾದ ವಿಚಿತ್ರ ಎನ್ನಿಸುವ ಸಂಗತಿಗಳು ಕಂಡುಬರುತ್ತಲೇ ಇರುತ್ತವೆ. ರಾಜರತ್ನಂ ಇಂಥದೇ ಬರವಣಿಗೆಯನ್ನು ನೀಡಿರುವುದು ಈ ಪ್ರಸ್ತುತ 'ಕಥಾಕೋಶ' ಸಂಕಲನದಲ್ಲಿದೆ.

ರಾಜರತ್ನಂ ಅವರು ಹರ್ಷನ 'ನಾಗಾನಂದ' ಮೂಲದಿಂದ ಅತ್ಯಂತ ಪ್ರಚುರವಾಗಿರುವ 'ಜೀಮೂತವಾಹನ'ನ ಕತೆಯನ್ನೂ ಮಕ್ಕಳ ಮುಂದಿರಿಸಿದ್ದಾರೆ. ಇಲ್ಲಿ, ಗರುಡನಿಗೆ ಬಲಿಯಾಗಲಿರುವ ನಾಗ ಶಂಖಚೂಡನು ಜೀಮೂತವಾಹನನ ಮುಂದೆ ದುಃಖಿಸುತ್ತ ಹೀಗೆ ಹೇಳುತ್ತಾನೆ. 'ಸಾಯುವುದಕ್ಕೆ

ನಾನು ಹಿಂಜರಿಯುತ್ತಿಲ್ಲ. ಹುಟ್ಟಿದವರು ಎಂದಿದ್ದರೂ ಸಾಯಬೇಕು. ಅಲ್ಲದೆ ನಾನು ಇಂದು ಗರುಡನಿಗೆ ಆಹಾರವಾದರೆ ಬೇರೆ ಯಾವುದೋ ನಾಗಕ್ಕೆ ಒಂದು ದಿವಸ ಜೀವದಾನ ಮಾಡಿದ ಹಾಗಾಗುತ್ತದೆ. ಆದರೆ ನಾನು ಹೋದ ಮೇಲೆ ನನ್ನ ಮುದಿತಾಯಿಯನ್ನು ನೋಡಿಕೊಳ್ಳುವವರು ಯಾರು ಎಂಬುದು ಒಂದೇ ನನಗೆ ಚಿಂತೆ'[೨೨].

ಇಂಥ ಉದಾತ್ತ ವಿಚಾರದೊಂದಿಗೆ ಜೀಮೂತವಾಹನನ ಉನ್ನತ ಉದಾತ್ತತೆಯು ಸೇರಿಕೊಳ್ಳುತ್ತದೆ. ತಾನು ನಾಗನಲ್ಲದ್ದರಿಂದ ನೆಪಮಾಡಿ ಶಂಖಚೂಡನನ್ನು, ಅವನ ತಾಯಿಯನ್ನು ಗೋಕರ್ಣದ ಗುಡಿಗೆ ಕಳಿಸಿ ತಾನು ಮದುವೆಯ ಕೆಂಪು ಬಟ್ಟೆ ಹೊದೆದುಕೊಂಡು ಮರೆಯಾಗಿ ಗರುಡನಿಗೆ ಬಲಿಯಾಗುತ್ತಾನೆ. ಇದರಿಂದ ಪಶ್ಚಾತ್ತಾಪ ಪಟ್ಟ ಗರುಡ ಕೂಡ ಇನ್ನು ಮುಂದೆ ನಾನು ನಾಗಗಳನ್ನು ಹರಣ ಮಾಡುವುದಿಲ್ಲ ಎಂದು ಪಣ ತೊಡುತ್ತಾನೆ, ಅಷ್ಟೇ ಅಲ್ಲ ದೇವಲೋಕಕ್ಕೆ ಹೋಗಿ ಅಮರತ್ವವನ್ನು ತಂದು ಜೀಮೂತವಾಹನನನ್ನು ಬದುಕಿಸುತ್ತಾನೆ.

ಶಿವನಿಗಾಗಿ ತಪಸ್ಸು ಮಾಡಿದ ದಾಕ್ಷಾಯಿಣಿ ಪಾರ್ವತಿಯ ಕತೆಯನ್ನು ಅವರು ಹರಿಹರನ 'ಗಿರಿಜಾಕಲ್ಯಾಣ'ದಿಂದ ಆಯ್ದುಕೊಂಡು ಮುಂದಿರಿಸಿದ್ದಾರೆ. 'ಸಂಸ್ಕೃತ ಚಾಟುಗಳಿ'ಂದ ಗಣಪತಿ ಷಣ್ಮುಖರ ತುಂಟಾಟದ ಪ್ರಸಂಗವನ್ನು ಆಯ್ದುಕೊಂಡಿದ್ದಾರೆ. ಭಾಗವತದಿಂದ ಕೃಷ್ಣನಿಗೆ ಶಮಂತಕ ಮಣಿ ಕದ್ದ ಅಪವಾದದ ಕತೆಯನ್ನು ಆಯ್ದುಕೊಂಡಿದ್ದಾರೆ. ಕಶ್ಯಪ ಬ್ರಹ್ಮರ ಇಬ್ಬರು ಪತ್ನಿಯರು ಕದ್ರು ಹಾಗೂ ವಿನುತೆಯರ ನಡುವಿನ ವೈಷಮ್ಯದ ಕತೆಯನ್ನು 'ಮಹಾಭಾರತ'ದ ಆದಿಪರ್ವದಿಂದ ಆಯ್ದುಕೊಂಡಿದ್ದಾರೆ.

ಹೀಗೆ ರಾಜರತ್ನಂ ಪುರಾಣದ, ಮಹಾಕಾವ್ಯಗಳ ಬಹುತೇಕ ಪ್ರಮುಖ ಪಾತ್ರ, ಸನ್ನಿವೇಶಗಳನ್ನು ಕಥಾಕೋಶದಲ್ಲಿ ಇರಿಸಿದ್ದಾರೆ. ಇವೆಲ್ಲಾ ಶಿಕ್ಷಣ ವ್ಯವಸ್ಥೆ ಅಂಬೆಗಾಲಿಡುತ್ತಿದ್ದ ಸಂದರ್ಭದಲ್ಲಿ ಶೈಕ್ಷಣಿಕ ಪಠ್ಯದ ಭಾಗವಾಗಿ, ನೀತಿ ಪ್ರಧಾನವಾಗಿ ಮಕ್ಕಳನ್ನೂ ಒಳಗೊಂಡಂತೆ ಎಲ್ಲರನ್ನೂ ಆಕರ್ಷಿದ್ದು ಕಂಡು ಬರುತ್ತದೆ. ಹಾಗಾಗಿ ಈ ಉಪಘಟಕದಲ್ಲಿ ರಾಜರತ್ನಂ ಅವರ ಸಂಕಲನವನ್ನು ವಿಶ್ಲೇಷಣೆ ಮಾಡಲಾಗಿದೆ.

೪.೨.೧.೨. ವೈರಾಗ್ಯ ಮತ್ತು ಫ್ಯಾಂಟಸಿ

ದೈವಿಕ ಮನಸ್ಥಿತಿಯನ್ನು ಹೊಂದಿರುವವರಿಗೆ ಲೌಕಿಕ ಜಗತ್ತಿನ ಕುರಿತು ಯಾವತ್ತೂ ಅಸಡ್ಡೆ ಇರುತ್ತದೆ. ಅದನ್ನು ತಮ್ಮ ಎಳೆಯ ವಯಸ್ಸಿನಿಂದಲೇ ಪ್ರದರ್ಶಿಸುತ್ತಾ ಬರುತ್ತಿರುತ್ತಾರೆ. ಅವುಗಳಲ್ಲಿ; ದೇವರಲ್ಲಿ ಅನನ್ಯ ಭಕ್ತಿಯಿಟ್ಟಿದ್ದ ಪ್ರಹ್ಲಾದನ ಪ್ರಸಂಗ, ಕೃಷ್ಣನ ಬಲದಿಂದ ಹಮ್ಮುಗೊಂಡು ಬೀಗಿದ್ದ ಯಾದವರು ವಿನಾಶವನ್ನು ತಾವೇ ಸ್ವಾಗತಿಸಿದ್ದು ಬರುತ್ತವೆ. ಸತ್ಯಕ್ಕಾಗಿ ರಾಜ್ಯ, ಹೆಂಡತಿ, ಮಗನನ್ನು ತೊರೆದ ಹರಿಶ್ಚಂದ್ರನ ಕತೆ, ಮಲತಾಯಿಯ ಮೂದಲಿಕೆಗೆ ನೊಂದು ತಪಗೈದು ದೇವರನ್ನು ಒಲಿಸಿಕೊಂಡ ಧ್ರುವನ ಕತೆ, ಅಂಬರೀಷನ ಮಗಳು ವೇದಾವತಿಯನ್ನು ಬಯಸಿದ ನಾರದ ಮತ್ತು

ಪರ್ವತರು ಒಬ್ಬರಿಗೊಬ್ಬರು ಮೋಸಮಾಡಲು ಬಯಸಿ ಇಬ್ಬರೂ ಕಪಿ ಮುಖವನ್ನು ಪಡೆದದ್ದು, ಕುಚೇಲನಿಗೆ ಆದರ ತೋರಿದ ಕೃಷ್ಣನ ಪ್ರಸಂಗ, ಶಿಬಿ ಚಕ್ರವರ್ತಿಯ ಕತೆ, ನಳನ ಕತೆ, ಪಿಷ್ಣುಬಲಿಯರ ಕತೆ, ತೀರಾ ವೈರಾಗ್ಯದ ಉಪನಿಷತ್ತಿನ ಕತೆಗಳೂ ಇಲ್ಲಿವೆ. ಹೀಗೆ ಪೂರ್ಣವಿರಾಮ ಇಲ್ಲದಂತೆ ಬೆಳೆಯುವ ಈ ಪಟ್ಟಿ ಭಾರತೀಯರ ಅಲೌಕಿಕ ಮನಸ್ಥಿತಿಯನ್ನು ಅಭಿವ್ಯಕ್ತಿಸುತ್ತದೆ.

ಸತ್ಯಾತ್ಮನ ಕುಟುಂಬದ ಕತೆ ಪುರಾಣಗಳಿಂದ ಆಯ್ದುಕೊಂಡಿದೆ. ಸತ್ಯಾತ್ಮನ ಮಗ ಸಮಿತ್ತು ತರಲೆಂದು ಕಾಡಿಗೆ ಹೋಗಿ ಹಾವು ಕಡಿದು ಮರಣಹೊಂದುತ್ತಾನೆ. ಶಿವ ಬ್ರಾಹ್ಮಣನ ವೇಷ ಧರಿಸಿ ಈ ಸಾವಿನ ಸುದ್ದಿಯೊಂದಿಗೆ ಮನೆಗೆ ಬರುತ್ತಾನೆ. ಸತ್ಯಾತ್ಮ ಸುದ್ದಿ ಕೇಳಿ ಯಾವುದೇ ವ್ಯಸನ ಪಡದೆ 'ವಿಧಿಯನ್ನು ಯಾರು ಮೀರಲು ಸಾಧ್ಯ, ಋಣ ತೀರಿದ ಮೇಲೆ ಅಗಲಲೇಬೇಕು' ಎಂದುಬಿಡುತ್ತಾನೆ. ಅವನ ಹೆಂಡತಿ, ಹುಡುಗನ ತಾಯಿ 'ರಾತ್ರಿಯಾದ ಕೂಡಲೆ ಮರದಲ್ಲಿ ನಾನಾ ದಿಕ್ಕಿನಿಂದ ಹಕ್ಕಿಗಳು ಬಂದು ಕೂತು ಬೆಳಗಾದ ಮೇಲೆ ಬೇರೆ ಬೇರೆ ಕಡೆ ಹಾರಿಹೋಗುವುವು, ಹಾಗೆಯೇ ನಾವು.'[೨೨] ಎಂದುಬಿಡುವಳು.

ಸತ್ತವನ ಹೆಂಡತಿಯ ಬಳಿಗೆ ಶಿವ ಬರುತ್ತಾನೆ, ಅವಳೂ 'ಪ್ರಯಾಣದಲ್ಲಿ ಒಟ್ಟಾಗಿ ಸೇರಿ ನಂತರ ಅಗಲುವ ಹಾಗೆ ಇದು' ಎಂದು ಸಮಾಧಾನದ ಮಾತನ್ನೇ ಆಡುತ್ತಾಳೆ. ತಂಗಿಯೂ ಹೀಗೆಯೇ ನಿಶ್ಚಲ ಮನಸ್ಥಿತಿಯನ್ನು ವ್ಯಕ್ತಪಡಿಸುತ್ತಾಳೆ. ಇದು ಪುರಾಣ ಲೋಕದಲ್ಲಿ ಮಾತ್ರ ಕಂಡು ಬರಬಹುದಾದ ಕಥೆ. ಈ ಫ್ಯಾಂಟಸಿ ಲೌಕಿಕ ಬದುಕಿನಲ್ಲಿ ಕಾಣಸಿಗದು. ಪುರಾಣಗಳನ್ನು ಸತ್ಯವೆಂದು ನಂಬುವ ಭಾರತೀಯರಿಗೆ ಇದು ಅತ್ಯಂತ ಸಹಜ ಪ್ರಕ್ರಿಯೆಯಂತೆ ಭಾಸವಾಗುತ್ತದೆ.

ಈ ಬಗೆಯ ನಿಶ್ಚಲ ವೈರಾಗ್ಯದ ಕತೆಯನ್ನೂ ಪುಟ್ಟಣ್ಣ ಇಟ್ಟುಕೊಳ್ಳುತ್ತಾರೆ. ಕೇವಲ ಮನರಂಜನೆಯ ಉದ್ದೇಶವಿಟ್ಟುಕೊಂಡೂ ಅವರು ಕತೆಗಳನ್ನು ಇಟ್ಟುಕೊಂಡಿರುವುದಿದೆ. ರಮ್ಯವಾದ ಬದುಕಿನ ಹಲವಾರು ಮಗ್ಗಲುಗಳನ್ನು ಉಳ್ಳ ಜನಪದ ಕತೆಗಳನ್ನು ದೀರ್ಘವಾಗಿ ಪುಟ್ಟಣ್ಣನವರು ನೀಡಿದ್ದಾರೆ. ಆದರೆ ಅವನ್ನು ಅವರು ಮಕ್ಕಳಿಗಾಗಿ ಎಂದು ನೀಡಿಲ್ಲ.

೪.೨.೨.೩. ಆದರ್ಶ ಪಾತ್ರಗಳು ಮತ್ತು ಫ್ಯಾಂಟಸಿ

ಕತೆಯೊಂದು ಕಲಾತ್ಮಕ ಸಂಗತಿ, ಅದು ತನ್ನಷ್ಟಕ್ಕೆ ತಾನೇ ಕೊಡುವುದು ಇರುತ್ತದೆ, ಸಂವಹಿಸುವುದು ಇರುತ್ತದೆ ಎನ್ನುವ ಗ್ರಹಿಕೆಗಳೆಲ್ಲ ಇಲ್ಲಿ ಇರುವುದು ತೀರಾ ತೀರಾ ವಿರಳ. ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳನ್ನು ಸನ್ಮಾರ್ಗಕ್ಕೆ ಹಚ್ಚಬೇಕು, ಅವರಿಗೆ ಮೊದಲಿನಿಂದಲೇ ಧಾರ್ಮಿಕ ನಡವಳಿಕೆಗಳನ್ನು ರೂಢಿಮಾಡಬೇಕು, ಅಧ್ಯಾತ್ಮದ ಸಾಧನೆಗಳಿಗೆ ತೊಡಗಿಸಬೇಕು ಎನ್ನುವುದು ಪರಂಪರೆಯಿಂದಲೇ ನಮ್ಮ ನಡುವೆ ಬೆಳೆದುಬಂದುದಿದೆ. ಇಂದಿಗೂ ಇಂಥ ಮನೋಭಾವ ಗಾಢವಾಗಿರುವುದು ಸಾಕಷ್ಟು ಕಾಣುತ್ತದೆ. ಈ ಬಗೆಯ ಮನೋಭಾವದವರು ಮಕ್ಕಳಿಗೆ ನೀಡುವ ಕತೆಗಳು ಇದೇ ಬಗೆಯಲ್ಲಿ ಇವೆ.

ಚಿಕ್ಕ ಹುಡುಗನಾಗಿದ್ದಾಗಲೇ ಯಮನನ್ನು ಕಂಡು ಸಾವಿನ, ಮುಕ್ತಿಯ ಗುಟ್ಟನ್ನು ಅರಿಯಲು ನೋಡಿದ ನಚಿಕೇತನ ಕತೆ ಮಕ್ಕಳಿಗೂ ಮುಟ್ಟುತ್ತದೆ, ಮಲತಾಯಿಯನ್ನು ತೊರೆದು ಕಾಡಿಗೆ ಹೋಗಿ ತಪಸ್ಸಿಗೆ ಇಳಿಯುವ ಧ್ರುವನ ಕತೆ ಮಕ್ಕಳಿಗೆ ಆದರ್ಶವಾಗಿ ಬೇಕಾಗುತ್ತದೆ. ಮಾರ್ಕಾಂಡೇಯನ ಕತೆ ಶಿವನನ್ನೇ ಒಲಿಸಿ ಸಾವನ್ನು ಎದುರುಹಾಕಿಕೊಂಡಿದ್ದು ಮಕ್ಕಳಿಗಾಗಿಯೇ ನಿರೂಪಿತವಾದಂತಿದೆ. ಇಂಥ ಮನಸ್ಥಿತಿಗಳಿಂದ ಹಿಡಿದು ಕೇವಲ ರಂಜನೆ, ಮಕ್ಕಳ ಮನಸ್ಸಿನ ಉಲ್ಲಾಸವನ್ನೇ ಕಾಣುವ ಮನಸ್ಥಿತಿಗಳವರೆಗೆ ನಾನಾ ಬಗೆಯ ಮನೋಧರ್ಮಗಳು ಉಳ್ಳ ಇವು ಅತಿವಾಸ್ತವ ಲೊಕವನ್ನು ಮಕ್ಕಳಿಗೆ ನೀಡುವಲ್ಲಿ ತೊಡಗಿಕೊಂಡಿವೆ.

೪.೨.೨. ಮನುಷ್ಯನ ಲೌಕಿಕದ ಬದುಕಿನ ಸುತ್ತ ಹರಡಿಕೊಂಡಿರುವ ಫ್ಯಾಂಟಸಿ.

ಜನಪದ ಕತೆಗಳಲ್ಲಿಯಂತೆ ಲೌಕಿಕ ಮಾನವನ ಬದುಕಿಗೆ ಆಸರೆಯಾಗುವ ರಾಜಮಹಾರಾಜರ, ಭೂತಬೇತಾಳಗಳ, ಮಾಟಮಂತ್ರಗಳ, ಚತುರರ, ಪೆದ್ದರ ಕತೆಗಳು ವೈಚಿತ್ರ್ಯಗಳಿಂದ ಕೂಡಿದ ಕಥೆಗಳು ಶಿಷ್ಟ ಪರಂಪರೆಯಲ್ಲೂ ಕಂಡು ಬರುತ್ತವೆ. ಅಲ್ಲಿ ಬರುವ ಫ್ಯಾಂಟಸಿ ದೇವರು, ಆಧ್ಯಾತ್ಮ ಎಂದು ಅಲೌಕಿಕತೆಯೆಡೆಗೆ ಸಾಗುವಂತಿದ್ದರೂ ಅವೆಲ್ಲಾ ಮಾನವನನ್ನು ಉತ್ತಮನನ್ನಾಗಿಸಲು ಉಪಯೋಗಿಸಿಕೊಂಡ ತಂತ್ರಗಳಾಗಿ ಉಪಯೋಗಿಸಲ್ಪಟ್ಟಿವೆ. ಹಾಗಾಗಿ ಈ ಬಗೆಯ ಕಥೆಗಳನ್ನು ಲೌಕಿಕ ಕಥನಗಳೆಂದು ವಿಭಾಗಿಸಿ ಇಲ್ಲೂ ಮೂರು ಮುಖ್ಯ ಆಶಯಗಳ ಮೂಲಕ ಶಿಷ್ಟ ಪರಂಪರೆಯ ಫ್ಯಾಂಟಸಿಯನ್ನು ವಿಶ್ಲೇಷಣೆ ಮಾಡಲಾಗಿದೆ.

೪.೨.೨.೧. ಜ್ಞಾನಾರ್ಜನೆಯ ಕಥೆಗಳು ಮತ್ತು ಫ್ಯಾಂಟಸಿ

'ವೇತಾಳ ಪಂಚವಿಂಶತಿ', 'ಬತ್ತಿಸಪುತ್ಥಳಿಯಂಥ' ಕತೆಗಳ ಜಗತ್ತು ಅತ್ತ ಆದರ್ಶಗಳ ಪರಂಪರೆಯ ದೃಷ್ಟಿಕೋನಗಳಿಗೂ, ಇತ್ತ ಜನಪದೀಯ ಲೌಕಿಕದ ದೃಷ್ಟಿಕೋನಗಳಿಗೂ ಒಗ್ಗಿಕೊಳ್ಳುತ್ತಾ, ತಮ್ಮೊಳಗಿನ ರೋಚಕತೆಯ, ದಿಗಿಲಿನ, ಅಚ್ಚರಿಯ ಸಂಗತಿಗಳಿಂದ ಆಕರ್ಷಣೆಯನ್ನು ಕಾಯ್ದುಕೊಂಡಿರುವಂಥವು. ಇವು ಜನಪದದ ಕತೆಗಳ ಮೂಲವನ್ನೇ ಹೆಚ್ಚಾಗಿ ಆಶ್ರಯಿಸಿವೆ. ಇಲ್ಲಿಯೂ ಜನಪದ ಕತೆಗಳಲ್ಲಿ ಆಗುವಂತೆ ವಯಸ್ಕರ ಬದುಕಿನ ಸಂಗತಿಗಳೇ ಮುಖ್ಯವಾಗಿ ಹಾಸಿಕೊಂಡಿರುವುದು. ಬೇತಾಳನ ಕಥೆಗಳಲ್ಲಿ, 'ಬೇತಾಳನ ಪ್ರಶ್ನೆಗಳು ಸಂಶಯ ನಿವಾರಿಸಿ ಜ್ಞಾನವನ್ನು ತಿಳಿಸಿದರೆ ವಿಕ್ರಮನ ಉತ್ತರಗಳನ್ನು ವ್ಯವಹಾರ-ಧರ್ಮ, ನೀತಿ, ದಂಡ, ಹೀಗೆ ಹಲವಾರು ಶಾಸ್ತ್ರ ಆಧಾರಗಳಿಂದ ಸರಿಯಾಗಿವೆ ಎಂದು ಭೇತಾಳ ನಿರ್ಧರಿಸುತ್ತದೆ'[೨೩].

ಹೀಗೆ ಈ ಕಥೆಗಳಲ್ಲಿ ಅತಿ ಉಪಯುಕ್ತವಾದ ವ್ಯವಹಾರ ಜ್ಞಾನ ಹಾಗೂ ಸಾಮಾನ್ಯ ಜ್ಞಾನಗಳ ಅಂಶಗಳಿವೆ. ಯೋಗಿಯೊಬ್ಬನಿಗೆ ಉಪಕಾರ ಮಾಡುವ ಸಲುವಾಗಿ ನೇತಾಡುವ ಶವವನ್ನು ಸ್ಮಶಾನಕ್ಕೆ ಒಯ್ಯುವಾಗ ಶವದಲ್ಲಿರುವ ಬೇತಾಳವು ಅವನ ಗುಣ, ಬುದ್ಧಿಯನ್ನು ಪರೀಕ್ಷಿಸಲು ಕಥೆಯೊಂದನ್ನು ಹೇಳುವುದು, ವಿಕ್ರಮನಿಗೆ ಪ್ರಶ್ನೆ ಕೇಳಿ ಅವನ ಮೌನ ಭಂಗ ಮಾಡಿ

ಉತ್ತರ ಪಡೆಯುವ ಪ್ರಕ್ರಿಯೆ ಇಡೀ ಕತೆಗಳ ಉದ್ದಕ್ಕೂ ನಡೆಯುತ್ತದೆ. ಕೊನೆಗೆ ವಿಕ್ರಮನ ಧೈರ್ಯವನ್ನು ಮೆಚ್ಚಿದ ಬೇತಾಳವು, ನಾನು ಈಗ ಈ ಶರೀರದಿಂದ ಹೋಗುತ್ತೇನೆ, ಆದರೆ ಆ ಬಡ ಯೋಗಿಯು ನಿನ್ನನ್ನು ಕೊಲ್ಲುವ ಸಂಚು ಹೂಡಿದ್ದಾನೆ ಎಂದು ಹೇಳಿ ತಪ್ಪಿಸಿಕೊಳ್ಳುವ ಉಪಾಯ ಕೊಟ್ಟು ಹೊರಟು ಹೋಯಿತು.

'ವಿಕ್ರಮ ಬೇತಾಳ ಕತೆಗಳು ಯಾವುದೋ ಅವಾಸ್ತವ ಪ್ರಪಂಚಕ್ಕೆ ನಮ್ಮನ್ನು ಕೊಂಡೊಯ್ದರೂ, ಕೊನೆಯಲ್ಲಿ ವಾಸ್ತವ ಪ್ರಜ್ಞೆಯನ್ನು ಮೂಡಿಸುವಲ್ಲಿ ಸಹಾಯಕವಾಗುತ್ತವೆ'[೨೪]. ಹಾಗಾಗಿ ಇವುಗಳನ್ನು ವಾಸ್ತವ ಮನಸ್ಥಿತಿಯಲ್ಲಿ ನಿರ್ಮಾಣ ಮಾಡಿದ ಅತಿವಾಸ್ತವ ಕತೆಗಳ ಗುಚ್ಛ ಎನ್ನಬಹುದು. ಈ ಕಥೆಗಳನ್ನು ಸಂಕಲನದಲ್ಲಿ ಆಯ್ಕೆ ಮಾಡುವಾಗಲೂ ಕಲ್ಪನೆಗಿಂತ ಜ್ಞಾನಾರ್ಜನೆಗೆ ಅನುಕೂಲವಾಗಲೆನ್ನುವ ಉದ್ದೇಶವನ್ನಿಟ್ಟುಕೊಂಡು, ಆ ಬಗೆಯ ಬರಹಗಳನ್ನೇ ಹೆಚ್ಚು ಆಯ್ಕೆ ಮಾಡಲಾಗಿದೆ. ಬೇತಾಳ ಕತೆಗಳಲ್ಲಿ ನಡೆಯುವ ಸಂಗತಿಗಳೆಲ್ಲವೂ ಜನಪದ ಕಥೆಗಳಂತೆ ದೊಡ್ಡವರ ಜಗತ್ತನ್ನು ಅನಾವರಣ ಮಾಡುತ್ತವೆ.

ಟಾಲ್ಕಿಯಾನ್ ಜನಪದ ಕತೆಗಳು ಮಕ್ಕಳ ಕತೆಗಳಲ್ಲ ಎಂದು ಹೇಳುವುದು ಈ ಕಾರಣಕ್ಕಾಗಿಯೇ. ಇವನ್ನು ಮಕ್ಕಳಿಗೆ ರಂಜನೀಯ ಸಾಮಗ್ರಿಯಾಗಿ ಕಂಡುಕೊಂಡುಕೊಳ್ಳುವಲ್ಲಿಯೇ ವಿಶೇಷವಾಗಿ ನಮ್ಮ ಮೌಖಿಕ ಸಂಪ್ರದಾಯದ ವಯಸ್ಕರು, ಈಚೆಗೆ ಬರಹಕ್ಕೆ ತೊಡಗಿದ ಲೇಖಕರು ಇವನ್ನು ಬಳಸಿಕೊಂಡಿದ್ದಾರೆ ಎನ್ನಬಹುದು. ಒಂದು ಜನಪದ ಕತೆ ಉಂಟುಮಾಡುವ ಕುತೂಹಲ, ಅಚ್ಚರಿ, ದಿಗಿಲು ಇವೆಲ್ಲವನ್ನು ಇಂಥ ಶಿಷ್ಟವಾಗಿ ಹಿಡಿದಿಟ್ಟಿರುವ ಕತೆಗಳು ನೀಡುತ್ತಲೇ ಇರುತ್ತವೆ. ಈ ಕಾರಣಕ್ಕಾಗಿಯೇ ಇವು ವಯಸ್ಕರಿಗೂ ಬೇಕೆನಿಸುವುದು. ಅವುಗಳಲ್ಲಿನ ವಯಸ್ಕರರಿಗೇ ಅನ್ವಯವಾಗುವ ಪದರುಗಳನ್ನು ಬದಿಗಿರಿಸಿದರೆ ಅವು ಮಕ್ಕಳಿಗೆ ಮುದನೀಡುವುದು ಸಹಜವೇ. ಇವನ್ನು ಇಟ್ಟುಕೊಂಡು ಭಾರತೀಯ ಬೇರೆ ಬೇರೆ ಭಾಷೆಗಳಲ್ಲಿ ಮತ್ತೆ ಕೃತಿಗಳು ಹುಟ್ಟಿಕೊಂಡಿವೆ.

ಹೀಗೆ ಸಂಕಲಿಸುವಾಗ ಖಂಡಿತ ಪರಿಷ್ಕಾರ ನಡೆದಿರುತ್ತದೆ. ಅಲ್ಲದೆ ಹೀಗೆ ಸಂಗ್ರಹಿಸಿ, ಬರಹಕ್ಕೆ ತಂದವರು ಆ ಸಮಯದ ಶಿಕ್ಷಿತ ಎನಿಸಿಕೊಂಡ ಜನವರ್ಗವೇ. ಹಾಗಾಗಿ ಇವು ಜನಸಾಮಾನ್ಯರ ಜನಪದಕ್ಕಿಂತ ಒಂದಿಷ್ಟೆಲ್ಲ ವಿಭಿನ್ನವಾಗಿ ಪ್ರಸ್ತುತಗೊಂಡಿರುವುದು ವ್ಯಕ್ತವಾಗುತ್ತದೆ.

ಈ ಬಗೆಯ ಕಥಾಲೋಕ ಸಾಂಸ್ಕೃತಿಕವಾಗಿ ಬದಲಾದ ಸಮಾಜದ ಸಂಗತಿಗಳಿಗೆಲ್ಲಾ ಒಗ್ಗಿಕೊಳ್ಳುತ್ತಾ ಬರುತ್ತಿರುವುದೇ ಆಗಿರುತ್ತದೆ. ಅಲ್ಲಿ ನಮ್ಮ ಮಧ್ಯಯುಗೀನ ರಾಜಮಹಾರಾಜರ ಬದುಕಿನ ಸಂಗತಿಗಳು ಸೇರಿಕೊಂಡಿರುವ ಹಾಗೆ, ತಂತ್ರ ಮಂತ್ರಗಳ ಭಾರತೀಯ ವಾಮಲೋಕವೂ ಸೇರಿಕೊಳ್ಳುತ್ತದೆ. ಸ್ವರ್ಗಲೋಕದಿಂದಿಳಿಯುವ ದೇವಾನುದೇವತೆಗಳಂತೆ, ಕಾಳಿಮಹಾಂಕಾಳಿಯರೂ ಕಾಣಿಸಿಕೊಳ್ಳುತ್ತಾರೆ, ರಾಜರಾಣಿಯರು ಕಾಣಿಸಿಕೊಂಡಂತೆ ಮಾಟಗಾತಿಯರೂ ಕಾಣಿಸಿಕೊಳ್ಳುತ್ತಾರೆ.

'ಪಂಚತಂತ್ರ'ದಂಥ ಕೃತಿಯೇ ಇಂದು ನಾವು ನೋಡುತ್ತಿರುವಂತೆ ಮಕ್ಕಳಿಗಾಗಿಯೇ ಎನ್ನುವಂತೆ ಪ್ರಚಾರದಲ್ಲಿದ್ದು, ಪುನಃ ಪುನಃ ಮುದ್ರಣ ಕಾಣುತ್ತಿರುವುದು ಶಾಲಾ ವ್ಯವಸ್ಥೆ ಶುರುವಾಗಿ, ಮುದ್ರಣ ವ್ಯವಸ್ಥೆ ಕಾಣಿಸಿಕೊಂಡಿತು. ಮೊದಲೆಲ್ಲಾ ಈ ಕತೆಗಳು ರಾಜರ ವಲಯದಲ್ಲಿಯೇ ಹರಿದಾಡಿರಬೇಕು, ಅದರೊಂದಿಗೆ ಒಂದಿಷ್ಟೆಲ್ಲಾ ಶಿಕ್ಷಿತ ಸಮುದಾಯದಲ್ಲಿ ಪ್ರಚುರವಾಗಿದ್ದಿರಬೇಕು. ಅಲ್ಲದೆ ವ್ಯಾಪಾರಕ್ಕೆಂದು ದೂರ ದೂರ ದೇಶಗಳಿಗೆ ಸುತ್ತುತ್ತಿದ್ದ ವಣಿಕರ ನಡುವೆಯೂ ರಂಜನೆಗಾಗಿ ಹರಿದಾಡಿರಬಹುದಾದ ಸಾಧ್ಯತೆಯಿದೆ.

ಇಂದು ಅಂದುಕೊಳ್ಳುವಂತೆ ಮಕ್ಕಳಿಗಾಗಿ ಇವು ರೂಪುಗೊಂಡಿರಲಿಲ್ಲ. ಪಂಚತಂತ್ರಕ್ಕೆ ಕಾರಣವಾದ ಕಥೆಯಲ್ಲಿ ಬರುವ ರಾಜಕುಮಾರರು ನಮ್ಮ ಸಾಮಾನ್ಯದ ಮಕ್ಕಳಂತಲ್ಲವೇ ಅಲ್ಲ. ಅವರು ದಾರಿ ತಪ್ಪಿದ, ಅರಮನೆಯ ಅಡ್ಡದಾರಿಗಳನ್ನು ಕಂಡುಕೊಂಡ ರಾಜಕುಮಾರರು. ಅವರಿಗೆ, ಅಂದರೆ ರಾಜ್ಯಾಡಳಿತವನ್ನು ತೂಗಿಸಿಕೊಂಡು ಹೋಗಬೇಕಿರುವ ತಯಾರಿಗಾಗಿಯೇ ಇವು ಕಾಣಿಸಿಕೊಂಡಿವೆ.

ಪಂಚತಂತ್ರಗಳು ವ್ಯಾವಹಾರಿಕ ಜಾಣ್ಮೆಯ, ರಾಜರಿಗೆ ಅಗತ್ಯವಾದ ಸಂಗತಿಗಳನ್ನು ಹೇಳುತ್ತವೆ. ಇಲ್ಲಿ ಪ್ರಾಣಿ ಪಾತ್ರಗಳಿರುವುದರಿಂದ ಬಹುಷಃ ಹೊಸಗಾಲದಲ್ಲಿ ಇವನ್ನು ಮಕ್ಕಳಿಗೆ ಬಹು ಸುಲಭವಾಗಿ, ರಂಜನೆಯಾಗಿ ತಂದುಕೊಂಡಂತೆ ಕಾಣುತ್ತದೆ. ಹಾಗೆ ತಂದುಕೊಳ್ಳುವಾಗ ಸರಳಗೊಳಿಸಿ, ವ್ಯಾವಹಾರಿಕ ನಡವಳಿಕೆ, ರಂಜನೆಯಂಥ ಸರಕು, ಪ್ರಾಣಿಗಳ ಪಾತ್ರಗಳು ಈ ಬಗೆಯ ಚಹರೆಗಳನ್ನು ಇಟ್ಟುಕೊಂಡು ಮಕ್ಕಳಿಗಾಗಿ ಎಂದು ಪದೇ ಪದೇ ಪ್ರಕಟಿಸುತ್ತಾ ಬಂದಿರುವುದನ್ನು ನೋಡುತ್ತೇವೆ. ಮೂಲದ ಪಂಚತಂತ್ರದಲ್ಲಿ ಕೇವಲ ಪ್ರಾಣಿಕತೆಗಳಿಲ್ಲ, ಅಲ್ಲದೆ ಪ್ರಬುದ್ಧರನ್ನೇ ಗಮನದಲ್ಲಿರಿಸಿಕೊಂಡ ಗಂಭೀರವಾದ ಕತೆಗಳೂ ಇವೆ. ಪಂಚತಂತ್ರದ ಕುರಿತು ಪ್ರತ್ಯೇಕ ಅಧ್ಯಾಯದಲ್ಲಿ ಚರ್ಚೆಗಿಳಿಯಲಿರುವುದರಿಂದ ಇಲ್ಲಿ ಇಷ್ಟು ಸಾಕೆನಿಸುತ್ತದೆ.

'ಪಂಚತಂತ್ರ'ದಂತೆಯೇ 'ಹಿತೋಪದೇಶ'ದ ಕತೆಗಳಿವೆ. ಹೆಸರೇ ಹೇಳುವಂತೆ ಹಿತವಾದ ಸಂಗತಿಗಳನ್ನು, ಅಂದರೆ ಬದುಕಿಗೆ ಆಸರೆಯಾಗುವ ನೀತಿಯನ್ನು ಹೇಳುವ ಕತೆಗಳೇ. ಮನುಷ್ಯರಲ್ಲಿರುವ ನಾನಾ ಗುಣಗಳು, ದೋಷಗಳು, ಲಾಲಸೆಗಳು ಮುಂತಾಗಿ ಮನೋವ್ಯಾಪಾರ ಆಧಾರಿತ ಕತೆಗಳು ಇಲ್ಲೆಲ್ಲ ಕಾಣಿಸಿದ್ದು ಇವು ಕೂಡ ಮಕ್ಕಳಿಗೇ ಎಂದು ನಿಗದಿತವಾದುವಲ್ಲ, ಆದರೆ ಇವನ್ನು ಜನಸಾಮಾನ್ಯರಲ್ಲಿ ಪ್ರಚುರಗೊಳಿಸಿದಂತೆ, ಮಕ್ಕಳಿಗಾಗಿಯೂ ಎಂದು ಪ್ರಚಾರದಲ್ಲಿ ತಂದಿರುವ ಸಾಧ್ಯತೆ ಇದೆ.

ಒಟ್ಟಿನಲ್ಲಿ ಈ ವಿಭಿನ್ನ ಬಗೆಯ ಕಥಾಲೋಕವೆಲ್ಲ ಮಕ್ಕಳಿಗಾಗಿ ಎಂದು ನಮ್ಮ ಅಸಂಖ್ಯ ಲೇಖಕರಿಂದ ಬರಹರೂಪದಲ್ಲಿ ಇಳಿದುಬಂದಿದೆ. ಇದು ಪರಂಪರೆಯಲ್ಲಿ ತೋಂಡಿಯಾಗಿಯೂ ಹೀಗೆಯೇ ಹರಿದು ಬಂದಿರುವುದೇ ಆಗಿದೆ. ಹೀಗೆ ತರುವಲ್ಲಿ ಅವರವರ ಗ್ರಹಿಕೆಗಳು ಹಿನ್ನೆಲೆಗೆ

ಇರುತ್ತವೆ. ಮಕ್ಕಳನ್ನು ಹೇಗೆಲ್ಲಾ ಭಾವಿಸಿಕೊಳ್ಳುತ್ತಾರೆ, ಕತೆಗಳನ್ನು ಯಾವ ಉದ್ದೇಶಗಳಿಗೆ ನೀಡಲು ಬಯಸುತ್ತಾರೆ ಎನ್ನುವುದರ ಮೇಲೆ ಇವರೆಲ್ಲ ನೀಡಿದ ಬರವಣಿಗೆ ಅವಲಂಬಿಸಿರುತ್ತದೆ.

ಈ ಬಗೆಯ ವಿಸ್ತೃತವಾಗಿ ಹರಡಿರುವ, ಪುಸ್ತಕ ಮಳಿಗೆಗಳಲ್ಲಿ ಯಾವ ಕಾಪಿರೈಟಿನ ಹಂಗಿಲ್ಲದೆ ಪದೇ ಪದೇ ಸುಲಭವಾಗಿ ಮುದ್ರಣಗೊಳ್ಳುತ್ತಾ ಪ್ರಚಾರದಲ್ಲಿರುವ ಕಥೆಗಳನ್ನು ಅಧ್ಯಯನದ ದೃಷ್ಟಿಯಿಂದ ನೋಡಿದ್ದೇ ಇಲ್ಲ. ಇಲ್ಲಿನ ಬರಹಗಾರರು ಖ್ಯಾತನಾಮರಿಂದ ಹಿಡಿದು ಅತಿ ಸಾಮಾನ್ಯದವರವರೆಗೂ ನಾನಾ ಬಗೆಯಲ್ಲಿ ಇರುತ್ತಾರೆ. ಸಾಹಿತ್ಯಾಧ್ಯಯನಿಗಳು ಇವನ್ನಾರೂ ಗಂಭೀರವಾಗಿ ಪರಿಗಣಿಸುವ ಅಗತ್ಯ ಕಂಡೂ ಇಲ್ಲ. ಮಕ್ಕಳ ಕಾಳಜಿಯಲ್ಲಿರುವ ತಂದೆ ತಾಯಿ, ಹಿರಿಯರು, ಶಿಕ್ಷಕರು, ಧಾರ್ಮಿಕವಲಯದವರು, ಮಠಮಾನ್ಯಗಳು ಇಂಥವರೇ ಇವುಗಳ ಕಡೆಗೆ ಲಕ್ಷ್ಯವಹಿಸುವುದು, ಅದು ತಕ್ಷಣದ ಉಪಯೋಗದ ದೃಷ್ಟಿಯಲ್ಲೇ ಎಂದು ಬೇರೆ ಹೇಳಬೇಕಿಲ್ಲ.

೪.೨.೨.೨. ಜಾತಕ ಕಥೆಗಳು ಮತ್ತು ಫ್ಯಾಂಟಸಿ

'ಜಾತಕ ಕಥೆಗಳು' ಬುದ್ಧನ ಹಿಂದಿನ ಕಥೆಗಳೆಂದು ಜಗತ್ತಿನಾದ್ಯಂತ ಪ್ರಚಲಿತವಿವೆ. ಇವು ಬೌದ್ಧ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆದಿವೆ. 'ಭಾರತದ, ಜಗತ್ತಿನ, ಕಥಾಪ್ರಪಂಚದಲ್ಲಿ ಪ್ರಚಲಿತವಾಗಿರುವ ಸಾವಿರಾರು ಕಥೆಗಳಲ್ಲಿ ನೂರಾರು ಜಾತಕದಿಂದಲೇ ಆಯ್ದುಕೊಂಡವು. ಇಲ್ಲಿ ಬರುವ ಪ್ರಾಣಿಕಥೆಗಳು, ನೀತಿಕಥೆಗಳು ಮುಂದೆ ರೂಪತಳೆದ ತಂತ್ರಾಖ್ಯಾಯಿಕೆ(ಪಂಚತಂತ್ರ), 'ಹಿತೋಪದೇಶ', 'ಬೃಹತ್ಕಥೆ'ಗಳಲ್ಲಿ ಇಳಿದು ಬಂದವು. 'ಸಿಂಹ ಗೂಳಿಗಳ ಮಿತ್ರಭೇದದ ಕಥೆ', 'ಮೊಸಳೆಯ ಕಥೆ', 'ಸಿಂಹದ ಚರ್ಮ ಹೊದೆದ ಕತ್ತೆಯ ಕಥೆ', 'ಮೀನುಗಳನ್ನು ಬೇರೆ ಕೊಳಕ್ಕೆ ಒಯ್ದ ಕೊಕ್ಕರೆಯ ಕಥೆ', 'ಕಾಗೆಯ ಮಧುರ ಕಂಠವನ್ನು ಮೆಚ್ಚಿಕೊಂಡ ನರಿಯ ಕಥೆ' ಹೀಗೆ ನೂರಾರು ಜಾತಕದ ಕಥೆಗಳೇ ಆಗಿವೆ.

ಜಾತಕ ಕಥೆಗಳು ಪರಂಪರೆಯ ಎಲ್ಲಾ ಕಥೆಗಳಿಗೆ ಆಧಾರವೆನ್ನವಂತಿವೆ. ಈ ಕತೆಗಳಲ್ಲಿ ಜನಪದ ರೀತಿಯ ಕಥೆಗಳು, ನೀತಿ ಕಥೆಗಳು ಎಲ್ಲವೂ ಇವೆ. 'ಪ್ರತೀ ಜಾತಕದಲ್ಲಿ ಸಂದರ್ಭ ನಿರೂಪಣೆ, ಹಿಂದಿನ ಕಥೆ, ಗಾಹೆಗಳು, ಗಾಹೆಗಳಿಗೆ ತಾತ್ಪರ್ಯಕಥನ, ವ್ಯಕ್ತಿ ನಿರ್ದೇಶನ ಎಂಬ ಭಾಗಗಳಿರುತ್ತವೆ.'[೨೫] ರಾಜರತ್ನಂ ಆದಿಯಾಗಿ ಅನೇಕರು ಜಾತಕ ಕಥೆಗಳನ್ನು ಮಕ್ಕಳಿಗಾಗಿ ನೀಡಿದ್ದಾರೆ. ಅವರೆಲ್ಲರೂ ಆಯ್ದುಕೊಳ್ಳುವಾಗ ಅದೇ ನೀತಿಯ ಪ್ರಾಣಿ ಕಥೆಗಳನ್ನು ಸರಳ ಭಾಷೆ, ಸಾತ್ವಿಕ ನಿರೂಪಣೆಗಳೊಂದಿಗೆ ನೀಡಿದ್ದಾರೆ.

೪.೨.೨.೩. ನೀತಿ ಚಿಂತಾಮಣಿ ಮತ್ತು ಫ್ಯಾಂಟಸಿ

ಪುಟ್ಟಣ್ಣ ಎಂ ಎಸ್., ಅವರು ಮೈಸೂರು ಭಾಗದಲ್ಲಿ ಶಾಲಾ ವ್ಯವಸ್ಥೆಯ ಪ್ರಾರಂಭದ ದಿನಗಳಲ್ಲಿ ತಮ್ಮ ನೀತಿ ಚಿಂತಾಮಣಿ ಸಂಗ್ರಹದ ಕತೆಗಳಿಂದ ಜನಜನಿತವಾದವರು. ಅವರ 'ನೀತಿ ಚಿಂತಾಮಣಿ' ಪುರಾಣದ, ಚರಿತ್ರೆಯ, ಕಾವ್ಯದ ಹಾಗೂ ರೂಢಿಯ ಕಥೆಗಳನ್ನು ಸಂಕಲಿಸಿಕೊಂಡಿರುವ

ಕೃತಿಯೇ. 'ಪಂಚತಂತ್ರ'ದ ಕತೆಗಳೂ ಇಲ್ಲಿ ಸೇರಿವೆ. ಹಾಗಾಗಿ ಶಿಷ್ಟ ಪರಂಪರೆಯ ಹಾಗೂ ಜನಪದ ಪರಂಪರೆಯ ಎರಡೂ ಬಗೆಯ ಸರಕು ಇಲ್ಲಿ ಕಾಣಸಿಗುತ್ತದೆ. ಪ್ರತಿ ಕತೆಯ ಆರಂಭದಲ್ಲಿ 'ಶುಕ್ರನೀತಿ', 'ಭೃತೃಹರಿ', 'ಸರ್ವಜ್ಞ ವಚನ', 'ಪಂಚತಂತ್ರ', 'ಸೋಮೇಶ್ವರ ಶತಕ', 'ರಾಮಾಯಣ', 'ಮನಸ್ಮೃತಿ', ಮುಂತಾದ ಕೃತಿಗಳ ಶ್ಲೋಕವೊಂದನ್ನು ಇಲ್ಲವೆ; ಗಾದೆ ಮಾತು, ಒಗಟೊಂದನ್ನು ಕತೆಯ ನೀತಿಗೆ ಪೂರಕವಾಗಿ ಬಳಸಿಕೊಂಡಿದ್ದಾರೆ.

ಸರಳತೆ, ಆದಷ್ಟೂ ಸಂಕ್ಷಿಪ್ತತೆ ಈ ಕತೆಗಳ ನಿರೂಪಣೆಯ ವಿಶೇಷ. ರಂಜನೆಯ ಅಂಶ ಇಲ್ಲಿ ಹಿನ್ನೆಲೆಗೆ ಸರಿದಿದೆ. ನೀತಿಯೇ ಕೃತಿಯ ಶೀರ್ಷಿಕೆ ಹೇಳುವಂತೆ, ಮುಂದೆ ನಿಂತಿರುತ್ತದೆ. ಅದಕ್ಕೆ ತಕ್ಕುದಾಗಿ ಆಯ್ಕೆ ನಡೆಯುತ್ತದೆ. 'ಪುಟ್ಟಣ್ಣನವರ ಜೀವನದರ್ಶನ ಇಲ್ಲಿ ಸ್ಪಷ್ಟವಾಗಿ ಪ್ರಕಟವಾಗುತ್ತದೆ. ಪ್ರಾಮಾಣಿಕತೆಯೇ ಅದರ ಸ್ಥಾಯಿ. 'ನೈಷ್ಠುರ್ಯ, ಸಾನುಕಂಪ, ದೃಢನಿಶ್ಚಯ ಹಾಗೂ ನೈರ್ಮಲ್ಯಗಳು ಇಲ್ಲಿನ ಸಂಚಾರಿಗಳು.'[೨೬] ಎಂದು ಅವರ ಕೃತಿಗಳ ಅಧ್ಯಯನ ಮಾಡಿರುವ ಎಚ್.ಎಸ್.ಸುಜಾತಾ ಅವರ ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದು. ನೀತಿ ಮತ್ತು ಮಾರ್ಗದರ್ಶನದ ಉದ್ದೇಶವೇ ಈ ಕೃತಿಯ ಮೂಲದಲ್ಲಿರುವುದು ಕಂಡುಬರುತ್ತದೆ.

ಶಿಷ್ಟ ಪರಂಪರೆಯೇ ಆಗಲಿ ಜಾನಪದ ಪರಂಪರೆಯೇ ಆಗಲಿ, ಅಲ್ಲಿಂದ ಮಕ್ಕಳಿಗೆ ತಲುಪಿರುವ ಕತೆಗಳು ಹೊತ್ತು ತರುವ ಫ್ಯಾಂಟಸಿ ಈ ಮೂಲ ಕತೆಗಳಲ್ಲಿನ ಸಾಮುದಾಯಿಕ ಫ್ಯಾಂಟಸಿಯೇ ಆಗಿರುತ್ತದೆ. ಇದು ಮಕ್ಕಳ ಲೋಕಕ್ಕೆ ವಿಶಿಷ್ಟವಾದ ಫ್ಯಾಂಟಸಿಯಾಗಿರುವಂಥದಲ್ಲ. ಹೊಸಗಾಲದಲ್ಲಿಯೇ ಮಕ್ಕಳ ಲೋಕದಲ್ಲಿ ಹೊಸ ಬಗೆಯ ಫ್ಯಾಂಟಸಿಯ ಕಲ್ಪನೆಗಳನ್ನು ಕಂಡಿದೆ. ಅದು ಇಂಗ್ಲೀಷ್ ಮಕ್ಕಳ ಸಾಹಿತ್ಯದಲ್ಲಿ ಕಂಡಂತೆ ಭಾರತೀಯ ಪರಿಸರದಲ್ಲಿ ಕಂಡಿಲ್ಲ ಎನ್ನುವುದೂ ಅಷ್ಟೇ ಸತ್ಯದ ಮಾತು. ಆ ಕುರಿತು ಚರ್ಚೆ ಮುಂದಿನ ಅಧ್ಯಾಯಗಳಲ್ಲಿ ಬರಲಿದೆ. ಈ ಪರಂಪರೆಯನ್ನು ಆಧರಿಸಿಯೇ ಭಾರತದ ಹೊಸಗಾಲದ ಫ್ಯಾಂಟಸಿ ಇಂದು ಕಾಣಿಸಿಕೊಳ್ಳುತ್ತಿದೆ.

ಭಾರತೀಯ ಲೇಖಕರು ಪದೇ ಪದೇ ರಾಮಾಯಣ ಮಹಾಭಾರತಕ್ಕೇ ಹೊರಳುವುದು ಕಾಣುತ್ತಿದೆ. ಅಮೀಶ್ ತ್ರಿಪಾಠಿ ಅವರ 'ಶಿವಾ ಬಾಲಾಜಿ', 'ಸೀತಾ ವಾರಿಯರ್ ಆಫ್ ಮಿಥಿಲಾ', ಉದಯಶಂಕರ್ ಅವರ 'ಆಯಾವರ್ತಾ ಕ್ರಾನಿಕಲ್ಸ್', ಚಿತ್ರಾ ಬ್ಯಾನರ್ಜಿ ದೇವಕರುಣಿ ಅವರ 'ದಿ ಪ್ಯಾಲೇಸ್ ಆಫ್ ಇಲ್ಯೂಜನ್ಸ್'(ದ್ರೌಪದಿಯ ಕುರಿತು), ಕವಿತಾ ಕಣೆ ಅವರ 'ಸಿಸ್ಟರ್ಸ್ ಸಿಸ್ಟರ್'(ಊರ್ಮಿಳಾ)ಕುರಿತು ಬರೆದ ಮಹಾಕಾವ್ಯ ಮಾದರಿಯ ವಿಸ್ತಾರದ ಕಾದಂಬರಿಗಳು ಹೊಸಗಾಲದ ಫ್ಯಾಂಟಸಿಯಾಗಿ ಕಾಣಿಸಿಕೊಂಡಾಗಿದೆ. ಇಂಗ್ಲೀಷಿನಲ್ಲಿ ನಡೆಯುತ್ತಿರುವಂತೆ ನಮ್ಮಲ್ಲಿ ಹೊಸದೊಂದರ ಸೃಷ್ಟಿಯಾಗುತ್ತಿಲ್ಲ. ಅದಕ್ಕೆಲ್ಲ ಕಾರಣಗಳಿರಬಹುದು. ಆದರೆ ಈ ನಿಟ್ಟಿನಲ್ಲಿ ಚರ್ಚೆಗಳು ನಮ್ಮಲ್ಲಿ ನಡೆದಿವೆ. ಇಂಥವು ಭಾರತೀಯ ಇಂಗ್ಲೀಷಿನಲ್ಲಿ ಫ್ಯಾಂಟಸಿ ಎಂದು ಕಾಣಿಸಿಕೊಂಡು ಮುನ್ನೆಲೆಗೆ ಬರುತ್ತಿವೆ.

ಭಾರತೀಯ ಪ್ರಾದೇಶಿಕ ಭಾಷೆಗಳಲ್ಲಿ ಈಗಾಗಲೇ ಇದೇ ಪೌರಾಣಿಕ ಕಥಾ ಪ್ರಸಂಗಗಳ ಸುತ್ತ ಅನೇಕ ಕೃತಿಗಳು ವಿಭಿನ್ನ ವೈಚಾರಿಕತೆಯಿಂದ ಮೂಡಿಬಂದಿವೆ, ಇನ್ನೂ ಬರುತ್ತಿರುವುದು ನಡೆದಿದೆ. ಫ್ಯಾಂಟಸಿ ಪರಿಭಾಷೆ ನಮ್ಮ ನಡುವೆ ಕಾಣಿಸಿಕೊಳ್ಳುತ್ತಿರುವುದೇ ಈಚೆಗೆ. ಆದರೆ ಪರಂಪರೆಯ ಹಿನ್ನೆಲೆಯ ಈ ಯಾವ ಫ್ಯಾಂಟಸಿ ಲೋಕವೂ ಮಕ್ಕಳ ಲೋಕದಲ್ಲಿ ಕಾಣಿಸಿಕೊಳ್ಳುತ್ತಿಲ್ಲ. ಅದೇ ಇಂಗ್ಲೀಷಿನ ಹೈ ಫ್ಯಾಂಟಸಿ ಎನ್ನುವ ಮಹಾಕಾವ್ಯ ಮಾದರಿಯ ಕೃತಿಗಳು ಪರಂಪರೆಯ ವಾತಾವರಣವನ್ನೇ ತೀರಾ ಹೊಸತಾಗಿ, ಹೊಸತೇ ಆಗಿ ಸೃಷ್ಟಿಸಿಕೊಂಡು ಫ್ಯಾಂಟಸಿಯನ್ನು ತಂದಿರುವುದಿದೆ, ಅಲ್ಲದೆ ಇಂಥವು ಮಕ್ಕಳ ಲೋಕದಲ್ಲಿಯೇ ಹೆಚ್ಚು ಪ್ರಚುರವಾಗಿವೆ ಎನ್ನುವುದು ಗಮನಾರ್ಹ. ಹಾಗೆಂದು ಇವುಗಳ ವಿಸ್ತಾರವನ್ನು ತೀರಾ ಲಘುವಾಗಿ ಪರಿಗಣಿಸುವಂತಿಲ್ಲ.

ಟಾಲ್ಕಿಯಾನ್, ಸಿ.ಎಸ್.ಲೂಯಿಸ್, ಫಿಲಿಪ್ ಪುಲ್‌ಮನ್, ಹಾಫ್‌ಮನ್, ಮ್ಯಾಕ್ ಡೊನಾಲ್ಡ್ ಅಂಥ ಲೇಖಕರು ಈ ಬಗೆಯ ಫ್ಯಾಂಟಸಿಯಿಂದ ಹೆಸರುವಾಸಿಯಾಗಿದ್ದಾರೆ. ಇವರು ಜನಾಂಗೀಯ ಹೊಸ ಪುರಾಣಗಳನ್ನೇ ಸೃಷ್ಟಿಸುತ್ತಿರುವುದು ಈ ಬಗೆಯಲ್ಲಿ ಎನ್ನುವುದಿದೆ. ಬ್ಲೇಕ್, ವರ್ಡ್ಸ್‌ವರ್ಥ್, ಕೋಲರಿಜ್, ಶೆಲ್ಲಿ ಅಂಥ ರಮ್ಯಕಾವ್ಯ ಸಂಪ್ರದಾಯದ ಕವಿಗಳು ಕ್ರಿಶ್ಚಿಯನ್ ಪೌರಾಣಿಕ ಕಲ್ಪನೆಗಳನ್ನು ತಮ್ಮದೇ ಆದ ಬಗೆಯಲ್ಲಿ ಪುನರ್‌ಮೌಲ್ಯೀಕರಣ ಮಾಡುತ್ತಾ ಬಂದಂತೆ ಈ ಹೊಸಗಾಲದ ಫ್ಯಾಂಟಸಿ ಮತ್ತೊಂದು ಬಗೆಯಲ್ಲಿ ತೊಡಗಿಕೊಂಡಿರುವುದು ಕಾಣುತ್ತದೆ.

ಈ ಕುರಿತಾದ ಚರ್ಚೆಗಳು ಅನೇಕ ಕೃತಿಗಳಲ್ಲಿ ಇಂದು ಕಾಣಿಸಿಕೊಂಡಿವೆ. 'ಇಂಥ ವಿಸ್ತೃತವಾದ ರಚನೆಗಳು ಮಕ್ಕಳ ಲೋಕದಲ್ಲಿ ಓದಿಗೆ ಒಳಗಾಗುತ್ತಿರುವುದು, ಜನಪ್ರಿಯತೆ ಪಡೆಯುತ್ತಿರುವುದು ಗಮನಿಸಬೇಕಾದ ಸಂಗತಿ. ಸಿ.ಎಸ್ ಲೂಯಿಸ್ ತನ್ನ ಅತ್ಯಂತ ಯಶಸ್ವಿಯಾದ 'ಕ್ರಾನಿಕಲ್ಸ್ ಆಫ್ ನಾರ್ನಿಯಾ' ಅಂಥ ಕೃತಿಗಳಿಗೆ ಹಿನ್ನೆಲೆಯಾಗುವುದು ಮಕ್ಕಳ ಕಥಾ ಮಾದರಿ, ಅದು ತನ್ನ ಅಗತ್ಯದ ಆಯ್ಕೆ'[೧೧] ಎನ್ನುತ್ತಾರೆ ಕೂಡ.

ಒಟ್ಟಾರೆ ಭಾರತೀಯ ಪರಿಸರದ ಮಕ್ಕಳ ಲೋಕದಲ್ಲಿ, ಹಾಗೆಯೇ ಕನ್ನಡದಲ್ಲಿ ಈ ಬಗೆಯ ವಿಸ್ತೃತ ಕೃತಿಗಳು ಕಾಣಿಸಿಲ್ಲ. ನಮ್ಮ ಮಕ್ಕಳ ಸಾಹಿತ್ಯದ ಬಹುಪಾಲು ಲೇಖಕರು ದೀರ್ಘವಾದ ಕತೆಗಳು ಮಕ್ಕಳಿಗೆ ಸೂಕ್ತವಲ್ಲ, ಕಿರಿದಾಗಿರಬೇಕು. ಇಂಥಿಂಥವನ್ನೆಲ್ಲ ಒಳಗೊಳ್ಳಬಾರದು ಎನ್ನುವ ಅನೇಕ ಮಿತಿಗಳನ್ನು ಹಾಕಿಕೊಂಡವರೇ ಇದ್ದಾರೆ. ಆದರೆ ನಮ್ಮ ಜನಪದ ಕತೆಗಳು ಚಿಕ್ಕ ಹರವಿನವಿರುವ ಹಾಗೆ ಬಲುದೀರ್ಘದವೂ ಇವೆ. ಈಗಾಗಲೇ ಮೇಲೆ ಕಾಣಿಸಿದ ಉದಾಹರಣೆಗಳೇ ಅಂಥವಿವೆ. ಅವನ್ನು ಚಿಕ್ಕವಾಗಿ, ಸೀಮಿತ ಪರಿಧಿಯಲ್ಲಿ ಇಟ್ಟುದುದಿದೆ. ಆದರೆ ಹಳ್ಳಿಗಾಡಿನ ಈ ಕತೆಗಳು ತುಂಬಾ ವಿಸ್ತಾರದಿಂದ ಹಬ್ಬುತ್ತಾ ಬದುಕಿನ ವಿಸ್ತಾರದ ಅನುಭವದ ಸಂಗತಿಗಳನ್ನು ತಮ್ಮೊಳಗೆ ಅಡಗಿಸಿಕೊಂಡಿರುತ್ತವೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಗೊಂದಲಿಗರು, ಕೆಲ ಚೌಡಿಕೆಯ ಕಲಾವಿದರು, ಬುರ್ರ ಕಥೆಯವರು ಅನೇಕ ಕಥೆಗಳನ್ನು ಅನೇಕ ದಿನಗಳವರೆಗೆ ವಿಸ್ತಾರವಾಗಿ ಪ್ರಸ್ತುತ ಪಡಿಸುತ್ತಾರೆ. ಇವೆಲ್ಲ ಜನಪದೀಯ ಪರಂಪರೆಯ ಮಹಾಕಾವ್ಯಗಳು, ಮಹಾಕತೆಗಳು. ಇಂತಹ ದೀರ್ಘದ ಹರಹಿನ ಕತೆಗಳ ಹಿನ್ನೆಲೆಯಲ್ಲಿ ಹೈ ಫ್ಯಾಂಟಸಿ ಹೊಸಗಾಲದ ವಾತಾವರಣದಲ್ಲಿ ಪುನಃ ಸೃಷ್ಟಿಸಿಕೊಳ್ಳುತ್ತಿದೆ. ಇಂಥಲ್ಲಿ ಅನೇಕ ಬಗೆಯಲ್ಲಿ ಮರುಚಿಂತನೆ ನಡೆದಿರುತ್ತದೆ. ಮಕ್ಕಳ ಸಂದರ್ಭದಲ್ಲಿ ಈ ಬಗೆಯ ಹಳೆಯ ಕತೆಗಳು ಎಷ್ಟೇ ದೀರ್ಘವಾದರೂ ಸೀಮೀತವಾಗಿ ಕೆಲವೇ ಹರಹುಗಳಲ್ಲಿ ನೀಡಿದುವಾಗಿರುತ್ತವೆ. ಮಕ್ಕಳಿಗೆ ತಲುಪುವ ಹಳ್ಳಿಗಾಡಿನ ಏನೇ ವಿಸ್ತಾರದ ಕತೆಯೂ ಕಿರಿದಾಗಿ, ಸೀಮಿತ ಉದ್ದೇಶದಲ್ಲಿ ವಿರಮಿಸುವುದಾಗಿರುತ್ತದೆ.

ಹೀಗೆ ಕನ್ನಡ ಮಕ್ಕಳ ಕಥನ ಸಾಹಿತ್ಯಕ್ಕೆ ಜನಪದ ಪರಂಪರೆ ಮತ್ತು ಶಿಷ್ಟ ಪರಂಪರೆ ಎರಡು ಬಿಡದೆ ಪ್ರಭಾವಿಸಿವೆ. ಒಂದು ಮತ್ತೊಂದಕ್ಕೆ ಪ್ರಭಾವಿಸಿದ್ದರೂ ಪ್ರಭಾವಗಳ ಮೂಲ ತಿಳಿಯದಷ್ಟು ಬೆರೆತುಕೊಂಡಿವೆ. ಈ ಎರಡೂ ಕನ್ನಡ ಮಕ್ಕಳ ಸಾಹಿತ್ಯಕ್ಕೆ ಆರಂಭದ ಅಡಿಗಲ್ಲುಗಳಂತೆ ನಿಂತು ಸಹಕರಿಸಿವೆ.

ಕೊನೆ ಟಿಪ್ಪಣಿಗಳು

೧. ಡಾ.ಜೀ.ಶಂ.ಪರಮಶಿವಯ್ಯ, ಜಾನಪದ ಕೆಲವು ಮುಖಗಳು, ಪು. ೬೪

೨. ಹೈ ಫ್ಯಾಂಟಸಿ ಇದು, ಹೊಸಗಾಲದ ಫ್ಯಾಂಟಸಿ ಕತೆಗಳನ್ನು ಕುರಿತು ವಿಸ್ತೃತವಾಗಿ ಬಳಸಿಕೊಳ್ಳುತ್ತಿರುವ ಪದ. ಟಾಲ್ಕಿಯಾನ್ ಈ ಬಗೆಯ ಹೊಸಗಾಲದ ಫ್ಯಾಂಟಸಿಯ ಪಿತಾಮಹ ಎಂದೇ ಕರೆಸಿಕೊಂಡು ಪ್ರಸಿದ್ಧಿಯಲ್ಲಿದ್ದಾನೆ. ಇದೊಂದು ಬಗೆಯಲ್ಲಿ ಮಹಾಕಾವ್ಯ ಎನ್ನಬಹುದಾದಷ್ಟು ವಿಸ್ತಾರವನ್ನು ಹೊಂದಿರುತ್ತದೆ. ಹೈ ಫ್ಯಾಂಟಸಿ, ವಿಕಿಪಿಡಿಯಾ ಪು. ೦೧

೩. 'ಲೋಫ್ಯಾಂಟಸಿ' ವಿಕಿಪಿಡಿಯಾ ಪು. ೦೧

೪. ಅಂಡಮಾನ್ ಪುರಾಣ

೫. ಮದರ್ ಗೂಸ್, ವಿಕಿಪಿಡಿಯಾ ಪು. ೦೧

೬ ಆನ್ ಫೇರಿ ಸ್ಟೋರೀಸ್, ಅಂತರ್ಜಾಲ ಮಾಹಿತಿ ಪು. ೦೧ ('On Fairy Stories' ಎನ್ನುವುದು ಮೂಲತಃ ಟಾಲ್ಕಿಯಾನ್ ೧೯೩೯, ಮಾರ್ಚ ೮ರಂದು University of St Andrewsನಲ್ಲಿ ಜನಪದ ವಿದ್ವಾಂಸ Andrew Lang ನೆನಪಿನ ಸರಣಿಯ ಅಂಗವಾಗಿ ನೀಡಿದ ಉಪನ್ಯಾಸ.' ಇದು ನಂತರ ೧೯೪೭ರಲ್ಲಿ ಚಾರ್ಲ್ ವಿಲಿಯಮ್ಸ್ ಎನ್ನುವವರ ಅಭಿನಂದನಾ ಗ್ರಂಥದಲ್ಲಿ ಮೊದಲ ಬಾರಿಗೆ ಮುದ್ರಣವಾಯಿತು. ಟಾಲ್ಕಿಯಾನ್‌ನ ದಿಟ್ಟ ವಿಚಾರಸರಣಿಯಿಂದ ಇದು ಖ್ಯಾತವಾಯಿತು.)

೭ ಕುವೆಂಪು, ನರಿಗಳಿಗೇಕೆ ಕೋಡಿಲ್ಲ, ಪು. ೦೨

೮. ಅದೇ, ಪು. ೦೫

೯. ಮೇವುಂಡಿ ಮಲ್ಲಾರಿ, ಬಂಗಾರದ ಕೂದಲಿನ ರಾಕ್ಷಸ, ಪು. ೦೪

೧೦. ಅದೇ ಪು. ೧೨

೧೧. ಹೆಚ್.ವಿ.ರಾಮಚಂದ್ರ ರಾವ್, ಹಾಡುವ ಕೋಗಿಲೆ, ಪು. ೩೯

೧೨. ಅದೇ ಪು. ೭೮

೧೩. ಮೇವುಂಡಿ ಮಲ್ಲಾರಿ, ಮೂವರು ಕಳ್ಳರು, ಪು. ೦೭

೧೪. ಮೇವುಂಡಿ ಮಲ್ಲಾರಿ, ಕೆಂಪು ಮೋತಿ ಹಂಪಣ್ಣ, ಪು. ೦೧

೧೫. ಪಂಜೆ ಮಂಗೇಶರಾಯ, ಪಂಜೆ ಮಂಗೇಶರಾಯರ ಮಕ್ಕಳ ಕಥೆಗಳು ಪು. ೪೯

೧೬. ದೇವುಡು, ಮುದುಕಿಯ ಮಕ್ಕಳು ಪು. ೧೮೧

೧೭. ಅದೇ ಪು. ೦೨

೧೮. ಗೀತಾ ಕುಲಕರ್ಣಿ, ಹಾರುವ ಕಂಬಳಿ, ಪು. ೦೨

೧೯. ಅದೇ ಪು. ೦೨

೨೦. ಚಂದ್ರಶೇಖರ ಕಂಬಾರ, ಮರವೇ ಮರ್ಮರವೇ, ಪು. ೧೫೧

೨೧. ರಾಜರತ್ನಂ, ಕಥಾಕೋಶ, ಪು. ೩೬೪

೨೨. ಎಂ.ಎಸ್. ಪುಟ್ಟಣ್ಣ, ಸತ್ಯಾತ್ಮನ ಕಥೆ, ಪು. ೦೪

೨೩. ಶಿವದಾಸ, ಬೇತಾಳನ ಕತೆಗಳು, ಪು. ೦೩

೨೪. ಎಸ್.ವಿ.ಪಾಟೀಲ ಗುಂಡೂರು, ವಿಕ್ರಮ ಬೇತಾಳ, ಪು. ೦೩

೨೫. ಜಾತಕ ಕಥೆಗಳು, ವಿಕಿಪಿಡಿಯಾ, ಪು. ೦೨

೨೬. ಎಚ್ ಎಸ್ ಸುಜಾತಾ, ಎಂ.ಎಸ್. ಪುಟ್ಟಣ್ಣ ಒಂದು ಅಧ್ಯಯನ, ಪು. ೧೩೧

೨೭. ಆನಂದ ಪಾಟೀಲ, ಮಕ್ಕಳ ಸಾಹಿತ್ಯ: ಓದು ಒಲವು, ಸಂಚಿಕೆ ಜೂನ್–ಅಗಸ್ಟ್ ೨೦೧೯ರ ಲೇಖನ 'ಮಕ್ಕಳಿಗಾಗಿ ಬರೆಯುವ ಮೂರು ದಾರಿಗಳು' ಪು.೦೩

ಅಧ್ಯಾಯ : ಐದು

ಕನ್ನಡ ಮಕ್ಕಳ ಕಥನ ಸಾಹಿತ್ಯ: ಪಂಚತಂತ್ರ ಮತ್ತು ಫ್ಯಾಂಟಸಿ

೫.೧. ಪ್ರಾಣಿ ಪಾತ್ರಗಳ ಪರಂಪರೆ

೫.೨. ಮೂಲದಲ್ಲಿ ಪಂಚತಂತ್ರ ಕಥೆಗಳು

೫.೨.೧. ಪಂಚತಂತ್ರಗಳೇ ಏಕೆ?

೫.೨.೨. ಮಕ್ಕಳಿಗಲ್ಲದ ಸಾಧ್ಯತೆಗಳು

೫.೨.೩. ಪ್ರಾಣಿಕತೆಗಳು ಮತ್ತು ಫ್ಯಾಂಟಸಿ

೫.೩. ಹೊಸಗಾಲದಲ್ಲಿ ಪಂಚತಂತ್ರದ ಕಥೆಗಳು

೫.೩.೧. ಪ್ರಾಣಿ ಪಕ್ಷಿ ಕತೆಗಳನ್ನು ಹೊರತು ಪಡಿಸಿ

೫.೩.೨. ಕಥಾ ಸಂವಿಧಾನ

೫.೩.೩. ಪಾತ್ರ ಮತ್ತು ಫ್ಯಾಂಟಸಿ

೫.೪. ಹೊಸಗಾಲದ ಪ್ರಾಣಿಲೋಕದ ಫ್ಯಾಂಟಸಿ ಮತ್ತು ಪಂಚತಂತ್ರದ ಫ್ಯಾಂಟಸಿ

ಅಧ್ಯಾಯ : ಐದು

ಕನ್ನಡ ಮಕ್ಕಳ ಕಥನ ಸಾಹಿತ್ಯ: ಪಂಚತಂತ್ರ ಮತ್ತು ಫ್ಯಾಂಟಸಿ

ಪ್ರವೇಶ

ಭಾರತದಲ್ಲಿ ಮಕ್ಕಳ ಸಾಹಿತ್ಯ ಕುರಿತು ಚರ್ಚೆ ಮಾಡುವ ಸಂದರ್ಭದಲ್ಲೆಲ್ಲಾ ಭಾಷಾತೀತವಾಗಿ ಪಂಚತಂತ್ರ ಮುನ್ನೆಲೆಗೆ ಬರುತ್ತದೆ. ಅಷ್ಟರಮಟ್ಟಿಗೆ ಇಡೀ ಭಾರತದ ಮಕ್ಕಳ ಸಾಹಿತ್ಯದಲ್ಲಿ ಸ್ಥಾನವನ್ನು ಪಡೆದುಕೊಂಡಿದೆ. ಇದು ಮೂಲತಃ ಅಮರಶಕ್ತಿಯೆಂಬ ಅರಸ ತನ್ನ ಮಂದಮತಿಯ ಕುಮಾರರನ್ನು ಚತುರಗೊಳಿಸಲು ಹೇಳಿಸಿದ ಐದು ರಾಜತಂತ್ರಗಳ ಹಿನ್ನೆಲೆಯಲ್ಲಿ ರೂಪಿಸಿಕೊಂಡ ಕಥೆಗಳ ಗುಚ್ಛವಾಗಿದೆ. ಹಾಗಾದರೆ 'ಪಂಚತಂತ್ರ'ವನ್ನು ಸಾರಾಸಗಟಾಗಿ ಮಕ್ಕಳಿಗಾಗಿಯೇ ಎಂದು ಮತ್ತೆ ಮತ್ತೆ ನೀಡುವುದೇಕೆ? ಇದರಲ್ಲಿನ ಯಾವ ಅಂಶಗಳು ಮಕ್ಕಳಿಗೆ ಅಗತ್ಯ? ಮಕ್ಕಳ ಕಥೆಗಳ ಆಕರ್ಷಣೆಯ ಕೇಂದ್ರ ಪರಿಕಲ್ಪನೆಯಾದ ಫ್ಯಾಂಟಸಿಯ ಬಳಕೆ ಎಷ್ಟರಮಟ್ಟಿಗೆ ಇದರಲ್ಲಿ ಅಡಕಗೊಂಡಿದೆ? ಭಾಷೆಯ ವಿಚಾರದಲ್ಲಿ, ಕಥಾ ಸಂವಿಧಾನದಲ್ಲಿ, ನಿರೂಪಣೆಗಳಲ್ಲಿ ಹಾಗೂ ಪಾತ್ರಗಳಲ್ಲಿ ಹೀಗೆ ಮಕ್ಕಳ ಸಾಹಿತ್ಯದ ಯಾವ ಮೂಲ ಲಕ್ಷಣಗಳು ಈ ಕೃತಿಯನ್ನು ಮಕ್ಕಳಿಗಾಗಿ ಮೀಸಲಿರಿಸಲು ಸಹಕರಿಸಿದವು? ಇವು ಚರ್ಚಿಸಬೇಕಾದ ಪ್ರಶ್ನೆಗಳಾಗಿವೆ.

ಪಂಚತಂತ್ರ ಪಠ್ಯವು ಬಹು ಮುಖ್ಯವಾಗಿ ಎರಡು ನಿಟ್ಟಿನಲ್ಲಿ ವಿಸ್ತರಿಸಿತು. ಮುದ್ರಣ ವ್ಯವಸ್ಥೆಯಿಲ್ಲದ ಹಿಂದಿನ ಸಮಯದಲ್ಲಿ, ರಾಜಮಹಾರಾಜರ ಕಾಲದಿಂದಲೂ ಇದರ ಚಲನೆ ಕಂಡು ಬರುತ್ತದೆ. ಈ ಕೃತಿ ಬರಹ ರೂಪವಾಗಿ ಸಿದ್ಧಗೊಂಡಾದ ಮೇಲೆ ಕತೆಗಳ ದೊಡ್ಡ ಸಂಗ್ರಹವೇ ಮತ್ತೆ ಇಲ್ಲಿ ಕಾಣಿಸಿಕೊಂಡಿತು. ಆಗ ಅದು ಸಹಜವಾಗಿ ಜನರ ಆಸಕ್ತಿಯನ್ನು ಕೇಂದ್ರೀಕರಿಸಿತು. ಆದರೆ ಅದು ಅಂದಿನ ಶೈಕ್ಷಣಿಕ ವ್ಯವಸ್ಥೆಗೆ ಒಳಗೊಳ್ಳದ ಬಹು ಸಂಖ್ಯೆಯ ಜನಕ್ಕೆ ಬರಹರೂಪವಾಗಿ ಪಂಚತಂತ್ರ ಕಥೆಗಳು ತಲುಪಿರಲಿಲ್ಲ. ರಾಜಕೀಯ ವಲಯದಲ್ಲಿಯೇ ಅದು ತನ್ನ ಅಸ್ತಿತ್ವವನ್ನು ಕಂಡುಕೊಂಡಿತ್ತು. ಅದು ಅಲ್ಲಿನ ರಾಜತಾಂತ್ರಿಕ ಅಗತ್ಯವೂ ಆಗಿತ್ತು. ಆದರೆ ಕತೆಯ ರುಚಿ ಅಲ್ಲಿಯೇ ನಿಲ್ಲದೆ ಸಾಕಷ್ಟು ಜನಕ್ಕೆ ತಲುಪತೊಡಗಿತು. ಅದು ಬಾಯಿಂದ ಬಾಯಿಗೆ ಹರಿಯುತ್ತಲೇ ಬಂದಿತು. ಅಂದು ವ್ಯಾಪಾರಕ್ಕಾಗಿ ಹಡಗುಗಳಲ್ಲಿ ದೀರ್ಘ ಪಯಣ ಕೈಕೊಳ್ಳುವ ವ್ಯಾಪಾರಸ್ಥರು ವಿಶೇಷವಾಗಿ ಇವನ್ನು ರಂಜನೆಗಾಗಿ ಆಶ್ರಯಿಸಿದರು. ಅವರಿಂದ ವಿದೇಶಗಳಿಗೂ

ಈ ಕತೆಗಳು ಹಬ್ಬಿದವು. ಹೀಗೆ ದೊಡ್ಡವರ ನಡುವೆ, ಅದು ಬಾಯಿಮಾತಿನಿಂದಲೂ, ರಾಜರ ಆಸ್ಥಾನಗಳಲ್ಲಿ ಆಕರ್ಷಿಸಿದ ಕೃತಿಯಾಗಿ, ಬರಹದ ರೂಪವಾಗಿಯೂ ವಿದ್ವಾಂಸರ ನಡುವೆ ಹರಿದಾಡುತ್ತಾ ಹಬ್ಬಿಕೊಂಡವು.

ಎರಡನೆಯ ವಿಸ್ತಾರದ ಹಬ್ಬುವಿಕೆ ಮುದ್ರಣ ತಂತ್ರಜ್ಞಾನ ಕಾಣಿಸಿಕೊಂಡು, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯು ಸಾಧ್ಯವಾಗತೊಡಗಿದ ಹೊಸಗಾಲದಲ್ಲಿ ಕಂಡು ಬರುತ್ತದೆ. ಹೊಸಗಾಲದಲ್ಲಿ ಪಂಚತಂತ್ರ ಕಥೆಗಳು ಅಧ್ಯಯನದ ವಿಷಯವಾಗಿ ವಿದ್ವಾಂಸರ ವಲಯದಲ್ಲಿ ಕಾಣಿಸಿಕೊಳ್ಳುವುದರ ಜೊತೆಗೆ, ಮಕ್ಕಳಿಗಾಗಿಯೇ ಎಂದು ಪುನಃ ಪುನಃ ಮುದ್ರಣಗೊಳ್ಳುತ್ತಾ ಬಂದವು. ಹೀಗೆ ಇವು ಪುಸ್ತಕ ರೂಪವಾಗಿ ಬಂದಮೇಲೆ ಎಲ್ಲರನ್ನು ತಲುಪುವಂತಾದವು. ಹೀಗೆ ಹತ್ತೊಂಬತ್ತು ಇಪ್ಪತ್ತನೆಯ ಶತಮಾನದಲ್ಲಿ ಈ ಕೃತಿ ಮಾರುಕಟ್ಟೆಯ ಮೂಲಕ ವಿಶೇಷವಾಗಿ ಈ ಕಥೆಗಳು ಮಕ್ಕಳನ್ನು ಆಕರ್ಷಿಸಿದವು.

ಭಾರತದಲ್ಲಿ ಶೈಕ್ಷಣಿಕ ಚಟುವಟಿಕೆಗಳು ಆರಂಭವಾದದ್ದೂ ಆ ಹೊತ್ತಿನಲ್ಲಿಯೇ. ಪಂಚತಂತ್ರ ಅದರ ಭಾಗವಾಗಿಯೂ, ಅನೌಪಚಾರಿಕವಾಗಿ ನೀತಿಕತೆಗಳೆಂದು ಬಂದಿರುವ ಸಾಧ್ಯತೆಗಳು ಹೆಚ್ಚಿವೆ. ಹಾಗೆಯೇ ಮಕ್ಕಳಿಗಾಗಿ ಪಠ್ಯಗಳನ್ನು ನಿಗದಿಪಡಿಸುವಾಗ ಪರಂಪರೆಯಲ್ಲಿ ಈಗಾಗಲೇ ಪ್ರಚಲಿತವಿದ್ದ ಜನಪದ ಕಥೆಗಳನ್ನು ನೀಡಿದಂತೆ ನೀತಿಗಳನ್ನು ಹೊಂದಿರುವ ಪಂಚತಂತ್ರಗಳನ್ನೂ ನೀಡಿರಬಹುದು. ಭಾರತ ಸಾಹಿತ್ಯ ಪರಂಪರೆಯಲ್ಲಿ ಪುರಾಣದ ಪಾತ್ರಗಳು, ಐತಿಹಾಸಿಕ ಸಂಗತಿಗಳು, ಪವಾಡಗಳು, ಪರಂಪರೆಯ ನಂಬಿಕೆ, ಆಚರಣೆಗಳು ಮಕ್ಕಳ ಸಾಹಿತ್ಯದ ಮೇಲೆ ಇನ್ನಿಲ್ಲದೆ ಪ್ರಭಾವಿಸಿವೆ.

ಭಾರತದ ಎರಡು ಮಹಾಕಾವ್ಯಗಳಲ್ಲಿ ಬರುವ ಧ್ರುವ, ಕೃಷ್ಣ-ಕುಚೇಲ, ಹನುಮಂತನ ಸಾಹಸಗಳು, ಪುರಾಣಗಳ ಪ್ರಹ್ಲಾದ, ಮಾರ್ಕಂಡೇಯ; ಟಿಪ್ಪು, ಹೊಯ್ಸಳ, ಮದಕರಿ ನಾಯಕ, ಕೃಷ್ಣದೇವರಾಯ ಮುಂತಾದ ಐತಿಹಾಸಿಕ ಪಾತ್ರಗಳು ಮಕ್ಕಳಿಗಾಗಿ ಮರು ನಿರೂಪಣೆಗಳಾದಂತೆ ಪಂಚತಂತ್ರ ಕಥೆಗಳೂ ಅತ್ಯಂತ ಸಲೀಸಾಗಿ ಮಕ್ಕಳಿಗೆಂದೇ ಮತ್ತೆ ಮತ್ತೆ ಬರುವಂತಾಯಿತು.

೫.೧. ಪ್ರಾಣಿ ಪಾತ್ರಗಳ ಪರಂಪರೆ

ಭಾರತದಲ್ಲಿ ಆತ್ಮದ ಕಲ್ಪನೆಯನ್ನು ಬಲವಾಗಿ ನಂಬಿಕೊಂಡಿರುವುದು, ಪುನರ್ಜನ್ಮದ ಬಗೆಗೆ, ಕರ್ಮದ ಬಗೆಗೆ ವಿಶ್ವಾಸಗಳಿರುವುದು ಎಲ್ಲಾ ಜೀವ ಜಂತುಗಳನ್ನು ಒಂದು ನೆಲೆಯಲ್ಲಿ ಗುರುತಿಸಲು ಸಾಧ್ಯವಾಗುತ್ತದೆ. ಎಂಬತ್ತು ನಾಲ್ಕು ಲಕ್ಷ ಬಗೆಯ ಜೀವಜಾತಿಗಳನ್ನು ಮೊದಲಿನಿಂದಲೂ ಬಾರತದಲ್ಲಿ ಗುರುತಿಸುವುದು ಪರಿಪಾಠವಾಗಿದೆ. ಕರ್ಮಾನುಸಾರವಾಗಿ ಈ ಜೀವಜಂತುಗಳಲ್ಲಿ ಜನ್ಮ ತಳೆಯುವುದು ನಡೆದಿರುತ್ತದೆ. ಪಾಪ ಪುಣ್ಯಗಳು ಸಮವಾದಾಗ ಮನುಷ್ಯ ಜನ್ಮ ಬರುತ್ತದೆ ಎನ್ನುವುದು ಮನುಷ್ಯನ ವಿಶ್ವಾಸ. ಮಾನವ ಜನ್ಮವೇ ಶ್ರೇಷ್ಠವಾದುದು ಎನ್ನುವುದನ್ನು ತತ್ವಜ್ಞಾನಿಗಳು ಹಾಗೂ ಸಂತರು ಹೇಳುತ್ತಲೇ ಬಂದಿದ್ದಾರೆ. ಸ್ವರ್ಗಲೋಕಕ್ಕೆ ಹೋದರೂ ಅಲ್ಲಿನ ವಾಸ ಮುಗಿದಮೇಲೆ ಮತ್ತೆ

ಮಾನವ ಜನ್ಮದಲ್ಲಿ ನಿಂತೇ ಮುಕ್ತಿಯನ್ನು ಸಾಧಿಸಿಕೊಳ್ಳುವ ಮಾತಿದೆ. ಹೀಗಿರುವುದರಿಂದ ಪ್ರಾಣಿ ಪಕ್ಷಿ ಕ್ರಿಮಿ ಕೀಟಾದಿಗಳನ್ನು ನಾನಾ ಬಗೆಯಲ್ಲಿ ಭಾವಿಸಿಕೊಳ್ಳಲು ಸಹಜವಾಗಿಯೇ ಸಾಧ್ಯವಾಗುತ್ತದೆ.

ಅತ್ಯಂತ ಗಹನವಾದ ತತ್ವಶಾಸ್ತ್ರವನ್ನು ಪಕ್ಷಿಗಳು ಹೇಳುವ ಪ್ರಮೇಯ ಕಂಡು ಬರುತ್ತದೆ. 'ಹಂಸಗೀತ' ವೆಂಬ ಕಾವ್ಯ ಹಂಸಪಕ್ಷಿಯೇ ಋಷಿಮುನಿಗಳೆಗೆಲ್ಲ ಅಧ್ಯಾತ್ಮವನ್ನು ಅರುಹಿದ ಉದಾಹರಣೆ ಇಲ್ಲಿದೆ. ಉಪನಿಷತ್ತಿನ ಬಲು ಪ್ರಸಿದ್ಧವಾದ 'ದ್ವಾಸುಪರ್ಣಾ' ಹಕ್ಕಿಗಳ ಕತೆ ಉಚ್ಚಮಟ್ಟದ ತತ್ವಜ್ಞಾನವನ್ನು ತುಸುವಿನಲ್ಲೇ ಹೇಳುತ್ತದೆ. ಭರತ ಮುನಿಯು ತಪಸ್ವಿಯಾಗಿದ್ದು ತಾಯಿ ಚಿಗುರೆಯ ಮೇಲೆ ಕನಿಕರಿಸಿದ ಕಾರಣಕ್ಕೆ ಚಿಗುರೆಯ ಜನ್ಮತಾಳಿ, ನಂತರ ಅದನ್ನೆಲ್ಲಾ ನೆನಪಿಟ್ಟುಕೊಂಡೇ ಭರತನಾಗಿ ಜನಿಸಿ ಬಹು ಎಚ್ಚರದಿಂದ ಪೂರ್ತಿ ಅಧ್ಯಾತ್ಮದಲ್ಲಿಯೇ ಕಳೆದ ಪ್ರಸಂಗವಿದೆ. ಅದಕ್ಕಾಗಿಯೇ ಅವನು 'ಜಡಭರತ' ಎನಿಸಿದ್ದು. ಹಾಗೆಯೇ 'ಮಹಾಭಾರತ'ದಲ್ಲಿ ಒಂದು ಅಳಿಲು ಧರ್ಮರಾಯನಿಗೇ ಬುದ್ಧಿಮಾತನ್ನು ಹೇಳಲು ಬರುತ್ತದೆ. 'ರಾಮಾಯಣ'ದಲ್ಲಿ ತನ್ನ ಅಳಿಲು ಸೇವೆಯನ್ನು ನೀಡಲು ಮುಂದಾಗುತ್ತದೆ. ಜಟಾಯು ಸೀತೆಯನ್ನು ರಕ್ಷಿಸಲು ಸಹಾಯಕ್ಕೆ ನಿಲ್ಲುತ್ತದೆ. ಕರಡಿ ಜಾಂಬುವಂತ ಕೃಷ್ಣನೊಡನೆಯೇ ಕಾದಾಡಲು ನಿಲ್ಲುತ್ತದೆ. ಹಾವು ಮನುಷ್ಯನಾಗಬಹುದು, ಮತ್ತೆ ಹಾವಾಗಿ ಹರಿದು ಹೋಗಬಹುದು. ಹಾವಿನ ಬಗೆಗಂತೂ ನಮ್ಮಲ್ಲಿ ಬಹು ಸಂಖ್ಯೆಯಲ್ಲಿ ಕತೆಗಳಿವೆ. ಗರುಡ ಪಕ್ಷಿಯ ಕುರಿತೂ ಅನೇಕ ಕಥೆಗಳಿವೆ. ಪರಂಪರೆಯ ಅನೇಕ ಕಥೆಗಳಲ್ಲಿ ದೇವತೆಗಳು ಪ್ರಾಣಿರೂಪವನ್ನು ಧರಿಸುವುದು ನಡೆಯುತ್ತದೆ. ಪಕ್ಷಿಯ ದೇಹದಲ್ಲಿ ಜೀವವನ್ನು ಅಡಗಿಸಿಡುವುದು ಕೂಡ ಕಂಡುಬರುತ್ತದೆ. ಭಾರತೀಯ ಕಥಾ ಪರಿಸರದಲ್ಲಿ ಈ ಬಗೆಯ ಅಸಂಖ್ಯ ಕಲ್ಪನೆಗಳು ತುಂಬಿಕೊಂಡಿವೆ.

ಪಾಶ್ಚಾತ್ಯರ ಕಲ್ಪನೆಗಳಿಗೂ ಇಲ್ಲಿನವಕ್ಕೂ ಇದೇ ದೊಡ್ಡ ಅಂತರ ಕಂಡು ಬರುತ್ತದೆ. ಗ್ರೀಕರಲ್ಲಿ ಅನೇಕ ಪ್ರಾಣಿಗಳ ಕಲ್ಪನೆಗಳಿದ್ದುದನ್ನು ನೋಡುತ್ತೇವೆ. ಜಗತ್ತಿನಾದ್ಯಂತ ಒಂದಲ್ಲಾ ಒಂದು ಬಗೆಯಲ್ಲಿ ಈ ಬಗೆಯ ಕಲ್ಪನೆಗಳು ಇವೆ. ಭಾರತದಲ್ಲಿಯಂತೆ ಧಾರ್ಮಿಕವಾಗಿ, ತಾತ್ವಿಕವಾಗಿ ಗಟ್ಟಿ ನೆಲೆಯಲ್ಲಿ ನೆಲೆನಿಂತಿದ್ದು ಕಾಣುವುದಿಲ್ಲ. ಹಾಗಾಗಿ ಭಾರತದಲ್ಲಿ ಇಂದಿಗೂ ಇವು ಅಸಹಜವೆಂದು ಅನಿಸುವುದಿಲ್ಲ. ಪಂಚತಂತ್ರದಲ್ಲಿ ಪ್ರಾಣಿಗಳು ಮಾತನಾಡಿಕೊಂಡು, ಏನೇನೆಲ್ಲಾ ಪ್ರಪಂಚ ಹೂಡಿಕೊಂಡಿದ್ದು ಇದೇ ಬಗೆಯ ಒಂದು ಮಗ್ಗಲು. ಇದನ್ನೆಲ್ಲಾ ಸಹಜದ ನಡೆವಳಿಕೆ ಎಂದುಕೊಳ್ಳದಿದ್ದರೂ ಪ್ರಾಣಿಪಕ್ಷಿಗಳ ಸಂಭಾಷಣೆಗಳ ಕಥೆಗಳನ್ನು ಸಹಜವಾಗಿ ಒಪ್ಪಿಕೊಳ್ಳುವ ಮನೋಧೋರಣೆ ಭಾರತೀಯರಲ್ಲಿ ಇದೆ. ಹಾಗಾಗಿಯೇ ಪ್ರಾಣಿಲೋಕವೇ ಅಧಿಕವಾಗಿರುವ ಪಂಚತಂತ್ರ ಕಥೆಗಳು ಅಷ್ಟೊಂದು ಬಾರಿ ಪ್ರಕಟಗೊಳ್ಳಲು ಕಾರಣವಿರಬಹುದು.

ಸೃಷ್ಟಿಯಲ್ಲಿ ಕಾಣುವ ಪ್ರಾಣಿಗಳ ಸ್ವಭಾವ ವೈಚಿತ್ರ್ಯದ ಸಂಗತಿಗಳು ಭಾರತದಲ್ಲಿ ಮೂಲದಲ್ಲಿ ಇರುವ ಹಾಗೆ ಇರುತ್ತವೆ. ಸಿಂಹವನ್ನೇ ಕಾಡಿನ ರಾಜನನ್ನಾಗಿ ಕಾಣಲು ಆ ಪ್ರಾಣಿಯ

ಘನಗಾಂಭೀರ್ಯ, ಸಾಹಸಮಯತೆ, ಹಿಂಸಾಪರತೆ ಎಲ್ಲವೂ ಕಾರಣವಾಗಿರಬಹುದು. ಆನೆ ಎಂಥ ದೊಡ್ಡ ಗಾತ್ರದ್ದಾದರೂ ಅದನ್ನು ರಾಜನನ್ನಾಗಿ ಕಂಡಿರುವುದು ಎಲ್ಲೂ ಕೇಳಿ ಬರುವುದಿಲ್ಲ. ನರಿ ಮೋಸ ಮಾಡುವುದಕ್ಕೆ ಪದೇ ಪದೇ ಬಳಕೆಯಾಗಿದೆ. ಹಸು ಸಾಧು ಸ್ವಭಾವಕ್ಕೆ ಬಳಕೆಯಾಗಿದೆ. ಬೆಕ್ಕು ಜಾಣತನಕ್ಕೆ ಬಳಕೆಯಾಗಿದೆ. ಮಂಗ ತನ್ನ ಚಾಪಲ್ಯವನ್ನೇ ಕತೆಯಲ್ಲೂ ಕಾಣಿಸಿದೆ. ಹೀಗೇ ಸೃಷ್ಟಿ ಸಹಜ ಸ್ವಭಾವ ಧರ್ಮಗಳು ಈ ಪ್ರಾಣಿಗಳ ಕಲ್ಪನೆಯ ಹಿಂದೆ ಕಂಡರೂ, ಅಷ್ಟಕ್ಕೇ ಕಥಾಹಂದರ ಸೀಮಿತವಾಗುವುದಿಲ್ಲ. ಇವು ಪರಿವರ್ತನೆಯಾಗುತ್ತಾ, ಅನೇಕ ಪರೀಕ್ಷೆಗಳಲ್ಲಿ ಹಾದು ಬರುತ್ತಾ ಬದಲಾಗುತ್ತಾ ಅನುಭವದಿಂದ ಮಾಗುವುದು ಕೂಡ ಕಾಣುತ್ತದೆ.

೫.೨. ಮೂಲದಲ್ಲಿ ಪಂಚತಂತ್ರ ಕಥೆಗಳು

'ಪಂಚತಂತ್ರ'ದಲ್ಲಿ ರಾಜರು ತಮ್ಮ ರಾಜಕಾರಣದಲ್ಲಿ ಯಶಸ್ವಿಯಾಗುವುದಕ್ಕೆ ಬೇಕಾದ ಮಾರ್ಗದರ್ಶಕವಾದ ತಂತ್ರಗಳನ್ನು, ಜಾಣ್ಮೆಯ ಹೊಳಹುಗಳನ್ನು ಕಲಿಸಲು ಇದು ಮುಖ್ಯವಾಗಿ ರಚನೆಯಾಗಿದೆ. ಹಾಗೆ ಇದು ಅರಸು ಮನೆತನಗಳವರಿಗೇ ವಿಶೇಷವಾಗಿ ನಿಗದಿತವಾದುದಾಗಿದೆ. ಅರಸುಮನೆತನದ ಮಕ್ಕಳು ದಾರಿ ತಪ್ಪಿದಾಗ, ಅವರನ್ನು ಸರಿದಾರಿಗೆ ತರಲು, ಅವರಿಗೆ ಅಗತ್ಯವಾದ ಅರಸೊತ್ತಿಗೆಯ ಜೀವನ ಧರ್ಮವನ್ನು ಅರುಹುವ ಉದ್ದೇಶವೇ ಬಹುಮುಖ್ಯವಾಗಿ ಇಲ್ಲಿ ಹಿನ್ನೆಲೆಗಿದೆ. ವಿಷ್ಣುಶರ್ಮನು ಅಮರಶಕ್ತಿಯನ್ನು ಉದ್ದೇಶಿಸಿ; 'ನಿನ್ನ ಸುತರಿಗೆ ಆರು ತಿಂಗಳ ಅವಧಿಯಲ್ಲಿ ಲೋಕಜ್ಞಾನವನ್ನೂ, ರಾಜಕಾರಣವನ್ನು, ರಾಜ್ಯಶಾಸ್ತ್ರ, ನೀತಿಶಾಸ್ತ್ರಗಳನ್ನು ಕಲಿಸಿಕೊಡುವೆನು'.[೧] ಹಾಗಾಗಿ ಇದು ಉಳಿದ ನಾನಾ ಬಗೆಯ ವೃತ್ತಿ ಜೀವನಗಳನ್ನು ಅವಲಂಬಿಸಲಿರುವ ಮಕ್ಕಳನ್ನು ಉದ್ದೇಶವಾಗಿಟ್ಟುಕೊಂಡಿಲ್ಲ. ಅಷ್ಟಾಗಿ ಇಲ್ಲಿ ಅರಸು ಮನೆತನದ ಮಕ್ಕಳಾದರೂ ಅವರು ತೀರಾ ಮುಗ್ಧ ಮಕ್ಕಳಲ್ಲ. ದಾರಿ ತಪ್ಪಿದ ಮಕ್ಕಳು. ಅರಸು ಮನೆತನಗಳಲ್ಲಿ ಏನೇನು ಒಳಗೊಳಗೇ ನಡೆಯುತ್ತಿದ್ದವೋ ಎಲ್ಲವನ್ನು ಕಾಣುತ್ತಾ, ತಪ್ಪು ತಪ್ಪು ಹೆಜ್ಜೆ ಇಟ್ಟವರು. ಅಂಥವರನ್ನು ಅನಿವಾರ್ಯವಾಗಿ ದಾರಿ ತರಬೇಕಿತ್ತು. ಅದಕ್ಕಾಗಿ ಉಪಾಯವಾಗಿ ಅವರಿಗೆ ಅಗತ್ಯವಾದ ಜ್ಞಾನವನ್ನು ಮುಟ್ಟಿಸಲು ಯೋಚಿಸಿ ಕಥೆಯ ಸಮ್ಮೋಹಕ ಮಾರ್ಗವನ್ನು ಕಂಡುಕೊಳ್ಳಲಾಗಿದೆ ಎಂದುಕೊಳ್ಳಬಹುದು.

ಉತ್ತರ ಭಾರತದಲ್ಲಿ ಒಂದು ಪರಂಪರೆ, ದಕ್ಷಿಣ ಭಾರತದಲ್ಲಿ ಒಂದು ಪರಂಪರೆಯಾಗಿ ವಿಷ್ಣುಶರ್ಮ ಹಾಗೂ ವಸುಭಾಗಭಟ್ಟರ ಹೆಸರಿನಲ್ಲಿ ಈ ಕತೆಗಳು ದೇಶದ ತುಂಬಾ, ಹಾಗೆಯೇ ವಿಶ್ವದೆಲ್ಲೆಡೆ ಸಂಚರಿಸಿರುವುದು ಐತಿಹಾಸಿಕ ಸತ್ಯವಾಗಿದೆ. ಆದರೆ ದಕ್ಷಿಣದಲ್ಲಿ ಪ್ರಚುರವಾಗಿದ್ದೆಂದು ಹೇಳುವ ವಸುಭಾಗಭಟ್ಟನ 'ಪಂಚತಂತ್ರ'ದ ಸಂಸ್ಕೃತ ಕೃತಿಯು ಲಭ್ಯವಾಗದೇ ಹೋಗಿದೆ. ವಿಷ್ಣುಶರ್ಮನ ಕೃತಿಯಂತೆ ಅದು ಅಷ್ಟಾಗಿ ಪ್ರಸಿದ್ಧಿ ಪಡೆದಿಲ್ಲ ಕೂಡ.[೨] ಸಂಸ್ಕೃತದಲ್ಲಿದ್ದ ಈ ಕೃತಿ, ಮೊಟ್ಟ ಮೊದಲು ಭಾರತೀಯ ಇತರ ಭಾಷೆಗಳಲ್ಲಿ ಕಾಣಿಸಿಕೊಂಡಿದ್ದು; ಕನ್ನಡದಲ್ಲಿ, ಅದು ದುರ್ಗಸಿಂಹನ 'ಪಂಚತಂತ್ರ'ವಾಗಿ. ದುರ್ಗಸಿಂಹ ಅನುಸರಿಸಿದ್ದು ವಸುಭಾಗಭಟ್ಟನ ಪರಂಪರೆಯನ್ನು. ಈ ಎರಡೂ

ಧಾರೆಗಳು ಹೇಗೇ ಹರಿದಿದ್ದರೂ ದೊಡ್ಡವರಿಗೆ ತಲುಪಿದಂತೆ ಮಕ್ಕಳಿಗೆ ತಲುಪುವಲ್ಲಿ ಸಾಮಾನ್ಯವಾದ ಸಂಗತಿಗಳನ್ನೇ ಹೇಳುತ್ತವೆ.

ಒಟ್ಟಾರೆ ಮನುಷ್ಯನ ಬದುಕಿಗೆ ಯಶಸ್ವಿಯಾಗಿ ಬದುಕನ್ನು ರೂಪಿಸಿಕೊಳ್ಳುವುದಕ್ಕೆ ಅಗತ್ಯವಾಗಿ ಇಲ್ಲಿನ ಸೂತ್ರಗಳಿವೆ ಎಂದು ವ್ಯಾಪಕವಾಗಿ ಭಾವಿಸಲಾಗಿದೆ. ಹಾಗೆ ಮುಖ್ಯವಾಗಿ ಐದು ಬದುಕಿನ ತಂತ್ರಗಳನ್ನು, ಅವುಗಳೊಗೆ ಕತೆಗಳೊಳಗೆ ಕತೆಗಳನ್ನು ತಂದುಕೊಳ್ಳುತ್ತಾ ಹಲವಾರು ಬಗೆಯ ತಂತ್ರಗಳನ್ನು ಹರಡಿಕೊಂಡಿರುವುದು ಕಾಣುತ್ತದೆ. ಇವು ಜಾತಕ ಕತೆಗಳಂತಲ್ಲ. ಅಲ್ಲಿ ಏನಿದ್ದರೂ ಆಂತರಿಕ ಪ್ರಗತಿಗೆ ಬೇಕಾಗುವ ಸರಕು ಇದ್ದರೆ, ಇಲ್ಲಿ ಹೆಚ್ಚಾಗಿ ಸಮಾಜದಲ್ಲಿ, ಎಲ್ಲರ ನಡುವೆ ಅಗತ್ಯವಾದ ವ್ಯಾವಹಾರಿಕ ಅರಿವಿಗಾಗಿ ಕತೆಗಳು ಇವೆ. ಇದು ಆ ನಿಟ್ಟಿನಲ್ಲಿ ಲೌಕಿಕಗ್ರಂಥವಾಗಿದೆ. ಹಾಗಿದ್ದರೂ ಬೌದ್ಧ, ಜೈನ ಮೂಲದ ಕುರಿತೂ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಈಗ ಹೆಚ್ಚು ಪ್ರಚುರವಾಗಿರುವ ವಿಷ್ಣುಶರ್ಮನ ಕೃತಿಯಲ್ಲಿ ಈ ಪ್ರಭಾವಗಳನ್ನು ಗುರುತಿಸುವುದು ಕಷ್ಟವಾಗಿದೆ. ಹಾಗಿದ್ದೂ ಪಂಚತಂತ್ರದ ಕಥೆಗಳು ಈಸೋಪನ ನೀತಿ ಕತೆಗಳಂತೆ ಕೇವಲ ಉದ್ದೇಶದ ನೇರಕ್ಕೆ ನಿರೂಪಿತಗೊಂಡಂತೆ ಕಾಣುವುದಿಲ್ಲ, ಅಥವಾ ಎಲ್ಲ ಕತೆಗಳ ಸಂದರ್ಭದಲ್ಲಿ ಇದು ಹೀಗಿರುವುದಿಲ್ಲ. ಬದುಕಿನ ಅನುಭವ, ಅದರಿಂದ ಆಗುವ ಮಾನಸಿಕ ಪರಿವರ್ತನೆ, ಮಾಗುವಿಕೆ, ಅದರಿಂದ ಕಂಡುಕೊಳ್ಳುವ ಮೌಲ್ಯಗಳು ಮುಂತಾದ ಬದುಕಿನ ವಿಸ್ತಾರಗಳು ಇಲ್ಲಿ ಕಾಣಿಸಿಕೊಳ್ಳುತ್ತವೆ. ಬಹು ಮುಖ್ಯವಾಗಿ ಪಂಚತಂತ್ರ ಕೇವಲ ಪ್ರಾಣಿ ಕತೆಗಳನ್ನೇ ಹೊಂದಿಲ್ಲ. ಅಲ್ಲಿ ಮಾನವರ ಕತೆಗಳೂ ಸೇರಿವೆ. ಪ್ರಾಣಿ ಮತ್ತು ಮಾನವರ ಕಥೆಗಳು ವಾಸ್ತವ ಜಗತ್ತಿನಿಂದ ದೂರದ ಸಂಗತಿಗಳಿಂದ ಕೂಡಿವೆ. ಹಾಗಾಗಿ ಇವುಗಳು ಕಲ್ಪನೆಯ ಹಂದರದಲ್ಲಿಯೇ ಅರಳಿದ ಕಥನಗಳಾಗಿವೆ.

೫.೨.೧. ಪಂಚತಂತ್ರಗಳೇ ಏಕೆ?

ಭಾರತೀಯರಿಗೆ ಐದು, ಏಳು ಸಂಖ್ಯೆಗಳು ನ್ಯೂಮರಾಲಜಿಯಲ್ಲಿ ವಿಶಿಷ್ಟ ಸಂಖ್ಯೆಗಳು. ಆ ಕಾರಣವಾಗಿಯೂ 'ಪಂಚ' ತಂತ್ರಗಳನ್ನು ಬಳಸಿರುವ ಸಾಧ್ಯತೆಯಿದೆ. ಐದೇ ತಂತ್ರಗಳನ್ನು ಮುಂದಿಟ್ಟುಕೊಂಡಿವುದಕ್ಕೆ ಸಮಂಜಸ ಉತ್ತರ ಸಿಗಲಾರದು ಎನಿಸುತ್ತದೆ. ಆ ಕೃತಿಯೇ ಬದುಕಿನ ಎಷ್ಟೊಂದು ಪಾಠವಾಗುವ ಸಂಗತಿಗಳನ್ನು ಉಪಕಥೆಗಳಾಗಿ, ಒಳಕಥೆಗಳಾಗಿ ಹೇಳುತ್ತಲೇ ಹೋಗಿದೆ. ಅಷ್ಟಕ್ಕೂ ಒಂದು ದಾಖಲೆಯಂತೆ ಪರ್ಶಿಯಾಕ್ಕೆ ಇಲ್ಲಿಂದ 'ಕ್ರಿಶ ೧೧೪೪-೪೫ರಲ್ಲಿ ಬಂದ ಅಬುಲ್ ಮುಆಲಿ ಸಿದ್ಧಪಡಿಸಿದ ಬಹು ಮಹತ್ವದ ಆವೃತ್ತಿ ತಿಳಿಸುವಂತೆ, ಪರ್ಶಿಯನ್ ಭಾಷೆಗೆ ಅಳವಡಿಸಲು ಉಪಯೋಗಿಸಿದ ಮೂಲ ಹಿಂದೀ ಭಾಷೆಯ ಕೃತಿಯಲ್ಲಿ ಹತ್ತು ಅಧ್ಯಾಯಗಳಿದ್ದವು, ಐದು ವಿಭಾಗಗಳಲ್ಲ.'[೨] ಭಾರತದಲ್ಲಿ ಪಂಚತಂತ್ರಗಳೇ ಹೆಚ್ಚು ಪ್ರಚುರವಾಗಿದೆ. ಈ ಐದು ತಂತ್ರಗಳನ್ನೇ ಕುರಿತು ಮುಖ್ಯವಾಗಿ ವಿಭಾಗಗಳನ್ನಾಗಿ ಮಾಡಿಕೊಂಡರೂ ನಾನಾ ಬಗೆಯ ಬದುಕಿನ ನೀತಿ ಪಾಠಗಳನ್ನು ಹೇಳುವ ಕತೆಗಳು ಕೃತಿಯ ತುಂಬಾ ಹರಡಿಕೊಂಡಿವೆ. ಐದು, ಹತ್ತು ಅಧ್ಯಾಯಗಳಿಗೂ

ಫ್ಯಾಂಟಸಿಯ ಸ್ವರೂಪಗಳಿಗೂ ಯಾವುದೇ ಸಂಬಂಧವಿಲ್ಲ. ಘಟಕಗಳ ಸಂಖ್ಯೆ ಫ್ಯಾಂಟಸಿಯನ್ನು ನಿರ್ಧರಿಸಲಾಐದು. ಆದರೆ ಕೆಲವೇ ಪ್ರಮುಖ ತಂತ್ರಗಳಲ್ಲಿ (ಐದು) ಇಡೀ ಕಥನಗಳನ್ನು ಹೇಳಿ ವಿಷ್ಣುಶರ್ಮನ ಉದ್ದೇಶ ಸಾಧನೆ ಮಾಡಿಕೊಳ್ಳಬೇಗಿತ್ತು. ಹಾಗಾಗಿಯೇ ಬಹುಶಃ ಐದು ತಂತ್ರಗಳ ಒಳಗೆ ಅನೇಕ ಉಪಕಥೆಗಳನ್ನು ಹೇಳಲಾಗಿದೆ. ಈ ವ್ಯಾಪ್ತಿಯ ಚೌಕಟ್ಟು ಫ್ಯಾಂಟಸಿಯ ಹುಟ್ಟಿಗೆ ಕಾರಣವಾಗಿರಬಹುದು.

೫.೨.೨. ಮಕ್ಕಳಿಗಲ್ಲದ ಸಾಧ್ಯತೆಗಳು

ಪಂಚತಂತ್ರ ಕಥೆಗಳಲ್ಲಿ ಬರೀ ಪ್ರಾಣಿ ಕಥೆಗಳಿಲ್ಲ ಮತ್ತು ಮಕ್ಕಳಿಗೆ ಅನಗತ್ಯ ಎನ್ನಿಸುವ ಸಂಭಾಷಣೆ, ಕಥೆಗಳು ತುಂಬಾ ಇವೆ. ಪ್ರೌಢರು ಮಾತ್ರ ಗ್ರಹಿಸಬಹುದಾದ ಸೂಕ್ಷ್ಮಗಳೂ ಇದರಲ್ಲಿವೆ. ಆದರೆ ಮೂಲ ಪಂಚತಂತ್ರವನ್ನು ಯಥಾವತ್ತಾಗಿ ಎಲ್ಲಿಯೂ ಮಕ್ಕಳಿಗಾಗಿ ನಿಗದಿಗೊಳಿಸಿಲ್ಲ. ಇದೊಂದು ನಿಗದಿತ ಕೃತಿಯಾಗಿ, ಭಾರತದ ಉತ್ತರ ಭಾಗ ಮತ್ತು ದಕ್ಷಿಣ ಭಾಗಗಳಲ್ಲಿ ವಿಷ್ಣುಶರ್ಮ ಮತ್ತು ವಸುಭಾಗಭಟ್ಟರ ಆವೃತ್ತಿಗಳನ್ನು ಮೂಲವನ್ನು ಮುಖ್ಯವಾಗಿ ಹೇಳುತ್ತಿದ್ದು, ಅವುಗಳನ್ನವಲಂಬಿಸಿ ಕೇಳಿಕೆಯಿಂದಲೂ, ಬರಹರೂಪದಲ್ಲೂ ಅನೇಕ ಪಾಠಾಂತರಗಳು ಸಂಭವಿಸುತ್ತಾ ಬಂದಿರುವುದು ಸಹಜವಾಗಿದೆ. ಸಾಮಾನ್ಯವಾಗಿ ಮಕ್ಕಳಿಗೆ ಪ್ರತ್ಯೇಕವಾಗಿ ನೀಡುವಾಗ ಕೇವಲ ಪ್ರಾಣಿ ಪಾತ್ರಗಳಿರುವ ಕಥಾ ಹಂದರಗಳನ್ನು ಆರಿಸಿ ಇಡುವುದು ನಡೆದಿದೆ ಎನ್ನಬಹುದಾದರೂ, ಅನೇಕ ಮನುಷ್ಯ ಪಾತ್ರಗಳೇ ಇರುವ ಚಿಕ್ಕ ಪುಟ್ಟ ಉಪಕತೆಗಳು ಮಕ್ಕಳ ಆವೃತ್ತಿಗಳಲ್ಲಿಯೂ ಕಂಡು ಬರುತ್ತವೆ. ಹಲವು ಬಗೆಯ ಆವೃತ್ತಿಗಳು ಬಂದಿರುವದರಿಂದ ಇವುಗಳಲ್ಲಿ ಯಾವುವು ಕೇವಲ ಮಕ್ಕಳಿಗಾಗಿನ ಗ್ರಹಿಕೆಯನ್ನು ವಿಸ್ತರಿಸಿಕೊಂಡು ಬೆಳೆದ ಸಂಕಲನಗಳು ಇವು ಎಂದು ಗುರುತಿಸುವುದು ಕಷ್ಟ ಸಾಧ್ಯವಾದುದು. ಅದೇ ಒಂದು ಪ್ರತ್ಯೇಕ ಅಧ್ಯಯನವನ್ನು ಅಪೇಕ್ಷಿಸುತ್ತದೆ.

ಇದರಲ್ಲಿ ಪ್ರಾಣಿಗಳ ಕಥೆಗಳ ಜೊತೆ ಜೊತೆಗೆ ಮನುಷ್ಯರ ನಡುವಿನ ಸಂಗತಿಗಳಿರುವ ಕಥೆಗಳೂ ಅಡಕವಾಗಿವೆ. ಗಾಢ ಪ್ರೀತಿಯಲ್ಲಿರುವ ಗಂಧರ್ವ ಜೋಡಿಯೊಂದರಲ್ಲಿ ಗರ್ಭ ಧರಿಸಿದ ಮಡದಿ ವಸಂತೋತ್ಸವದಲ್ಲಿ ಪಾಲ್ಗೊಳ್ಳಬೇಕೆಂದು ಹೋಗ ಬಯಸಿದಾಗ ಅದರ ಗರ್ಭವನ್ನು ಗಂಡ ಸ್ವೀಕರಿಸುತ್ತದೆ. ಅವಳು ಬಾರದೇ ಹೋದಾಗ ಗರ್ಭಧರಿಸಲು ಆಗದೆ ಗಂಡ ಸಾವನ್ನಪ್ಪುವ ಕಥೆ ಮಕ್ಕಳಿಗಾಗಿ ಎಂದುಕೊಳ್ಳುವುದು ಹೇಗೆ? ಹಾಗೆಯೆ ಇನ್ನೊಂದು ಗಮನಿಸಲೇಬೇಕಾದ ಅಂಶವೆಂದರೆ ಪಂಚತಂತ್ರ ಕಥೆಗಳ ಹರಹು ತುಂಬಾ ವಿಸ್ತಾರವಾದುದು. ಮೊದಲ ಕಥೆಯಲ್ಲಿ ಕರಟಕ ದಮನಕರು ಸಿಂಹ ಪಿಂಗಳಕನಲ್ಲಿ ಎತ್ತಿನ(ಸಂಜೀವಕ) ಕುರಿತು ದೂರು ಹೇಳಿ ಮಿತ್ರರೊಳಗೆ ಭೇದವನ್ನು ತರಲು ಪ್ರಯತ್ನಿಸುತ್ತಾರೆ. ದಮನಕನು ಪಿಂಗಳಕನನ್ನು ಕುರಿತು; 'ಓ ಮೃಗರಾಜ, ನಿನ್ನೊಡನೆ ಗಾಢವಾದ ಸ್ನೇಹದಲ್ಲಿರುವ ಸಂಜೀವಕನು ಬಹಳ ಘಾತಕವಾದ ಉದ್ದೇಶವನ್ನು ಹೊಂದಿರುವನು. ಅವನು ಅನೇಕ ಸಲ ನನಗೆ ಕೇಳಿಸುವಂತೆ ಪಿಸುಮಾತಿನಿಂದ ಹೇಳಿದ, 'ನಾನು

ನನ್ನ ಯಜಮಾನನ ಉತ್ತಮವಾದ ಮತ್ತು ಕೆಟ್ಟದಾದ ಗುಣಗಳನ್ನು ಸಂಪೂರ್ಣ ತಿಳಿದುಕೊಂಡಿರುವೆನು. ಅವನ ಅಧಿಕಾರದ ಸ್ವರೂಪ, ಅವನ ಮಿತ್ರರು, ಮಂತ್ರಿಗಳು ಸಪರಿವಾರದವರ ಮತ್ತು ಸಂಪತ್ತುಗಳು, ಎಲ್ಲದರ ಮಾಹಿತಿ ನನಗಿದೆ. ನಾನು ಅವನನ್ನು ಶೀಘ್ರದಲ್ಲಿಯೇ ಕೊಲ್ಲಬೇಕೆಂದಿರುವೆನು. ಅವನ ರಾಜ್ಯವನ್ನು ಸ್ವಾಧೀನ ಮಾಡಿಕೊಳ್ಳುವೆನು."[೪] ದಮನಕನ ಈ ಮಾತುಗಳಿಂದ ಸಿಂಹ ಪಿಂಗಳಕನು ಕೋಪೋದ್ರಿಕ್ತನಾಗುತ್ತಾನೆ. ಕೊನೆಗೆ ಎತ್ತು ಸತ್ತಾಗ ಸಿಂಹ ದುಃಖಿಸುತ್ತದೆ. 'ನಾನು ಸಂಜೀವಕನನ್ನು ಕೊಂದು ಅನ್ಯಾಯ ಮಾಡಿದೆ. ಅಕಾರ್ಯ ಮಾಡಿದೆ. ಮಿತ್ರಘಾತಕ್ಕಿಂತ, ವಿಶ್ವಾಸಘಾತಕ್ಕಿಂತ ಮಿಗಿಲಾದ ಪಾಪ ಇನ್ನೊಂದಿಲ್ಲ. ಮಿತ್ರದ್ರೋಹಿಗಳು ಕೃತಘ್ನರು, ವಿಶ್ವಾಸಕ್ಕೆ ಪಾತ್ರರಾದವನನ್ನು ಘಾತಿಸುವ ಘಾತುಕರು ನರಕಕ್ಕೆ ಹೋಗುವರು. ಮಾತ್ರವಲ್ಲ ಸೂರ್ಯ ಚಂದ್ರರು ಇರುವತನಕ ಶಾಶ್ವತವಾಗಿರುವುದು.'[೫] ಎನ್ನುವ ಪಿಂಗಳಕನ ಮಾತುಗಳು ಪ್ರಾಣಿಗಳ ಲೋಕದ ವರ್ತನೆಯನ್ನು ಮೀರಿದ ವರ್ತನೆಯನ್ನು ತೋರುತ್ತದೆ. ಹಿಂದಿನ ಜನ್ಮದಲ್ಲೂ ಇವರಿಬ್ಬರಿಗೂ ಸ್ನೇಹ ಸಂಬಂಧವಿತ್ತು ಎನ್ನುವ ಸಂಗತಿಗಳು. ಈ ತರಹದ ಕಥೆಗಳು ಪಂಚತಂತ್ರದ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸುತ್ತವೆ.

ದಾರಿ ತಪ್ಪಿದ ರಾಜಕುಮಾರರಿಗಾಗಿ ರಚಿಸಿದ ಈ ಕಥೆಗಳನ್ನು ವಿಷ್ಣುಶರ್ಮ ಸ್ವಂತ ರಚಿಸಿದನೋ ಅಥವಾ ಈಗಾಗಲೇ ಇರುವ ಕಥೆಗಳನ್ನು ಹೇಳಿದನೋ ಚರ್ಚೆಯ ಸಂಗತಿ. ಆ ಬಗೆಯ ಕಥೆಗಳು ಭಾರತೀಯ ಹಿನ್ನೆಲೆಯಲ್ಲಿ ಇದ್ದುದೇ ಈ ಪ್ರಶ್ನೆಗೆ ಮೂಲವಾಗಿದೆ. ದುರ್ಗಸಿಂಹನ 'ಪಂಚತಂತ್ರ'ದ ಪ್ರಾರಂಭದಲ್ಲಿ ಬರುವ ಕತೆಯಲ್ಲಿಯೇ ವಸುಭಾಗಭಟ್ಟನು ಗುಣಾಢ್ಯನ ಪೈಶಾಚಿಕ ಭಾಷೆಯ ಬೃಹತ್ಕಥೆಯನ್ನು ಆಧರಿಸಿ ಈ ಕೃತಿಯನ್ನು ರಚಿಸಿದ ಎನ್ನುವುದಿದೆ.

ವಿಷ್ಣುಶರ್ಮನ ಮೂಲದ ಸಂಸ್ಕೃತ ಕೃತಿಯಾಗಲಿ, ದುರ್ಗಸಿಂಹನ ಮೂಲಕ ಕನ್ನಡದಲ್ಲಿ ಲಭ್ಯವಿರುವ ವಸುಭಾಗಭಟ್ಟನ ಕೃತಿಯಾಗಲಿ ಹೇಳುವ ಸಂಗತಿ ಎಂದರೆ ಇಲ್ಲಿನ ಕಥಾ ಜಗತ್ತು ವಿಸ್ತೃತವಾಗಿದ್ದು, ಎಲ್ಲಾ ಬಗೆಯ ಮೂಲಗಳಿಂದ ಇವನ್ನು ಆಯ್ದುಕೊಳ್ಳಲಾಗಿದೆ. ಅದು ಆಗಲೇ ಕಾವ್ಯ, ಕಥೆಗಳಾಗಿ ಬರಹ ಕಂಡ ಕೃತಿಗಳಿಂದಲೂ, ಜನಮಾನಸದಲ್ಲಿ ಅಡ್ಡಾಡಿಕೊಂಡಿದ್ದ ಕಥಾ ಜಗತ್ತಿನಿಂದಲೂ ಪಡೆದುಕೊಂಡು ತನ್ನ ಪಂಚತಂತ್ರಗಳ ಉದ್ದೇಶಕ್ಕೆ ವ್ಯವಸ್ಥೆ ಮಾಡಿಕೊಂಡಿದೆ. ಹಾಗಾಗಿ ಇದು ಒಟ್ಟಾರೆ ಭಾರತೀಯ ಕಥಾಲೋಕವನ್ನೇ, ಆಗಲೇ ಕಾಣಿಸಿಕೊಂಡಿದ್ದ 'ಬೃಹತ್ಕಥೆ'ಯಾಗಲಿ, 'ವೇತಾಳ ಪಂಚವಿಂಶತಿ'ಯಾಗಲಿ, ವಿಕ್ರಮನ ಮೂವತ್ತೆರಡು ಬೊಂಬೆಗಳ ಕಥಾ ಸಂಗ್ರಹವಾಗಲಿ ಇಂಥ ಕಥಾ ಸಂಗ್ರಹಗಳಂತೆಯೇ ಇದೂ ಕೂಡ ಒಂದು ಸಂಗ್ರಹವಾಗಿ ಪ್ರತಿನಿಧಿಸುತ್ತದೆ.

ಮುಖ್ಯವಾಗಿ ಇದು ಒಂದು ಜನಪ್ರಿಯ ಕಥಾ ಸಂಗ್ರಹ ಎಂದುಕೊಳ್ಳಬಹುದಾದರೂ ಇದೊಂದು ಬಗೆಯಲ್ಲಿ ವ್ಯವಸ್ಥಿತವಾಗಿ ಸಂಕಲನಗೊಂಡ ಕೃತಿಯಾಗಿದೆ. 'ಭೇದ' – ಸ್ನೇಹಿತರಲ್ಲಿ ಭೇದವನ್ನು ಉಂಟುಮಾಡುವುದು, 'ಪರೀಕ್ಷೆ' –ವಿಚಾರಮಾಡಿಯೇ ಯಾವುದೇ ಕಾರ್ಯಕ್ಕೆ

ಇಳಿಯುವುದು, 'ವಿಶ್ವಾಸ'-ನಂಬದವರನ್ನು ನಂಬಿಸುವುದು, 'ವಂಚನೆ' – ಅನ್ಯರನ್ನು ಅರಿತುಕೊಂಡು ವಂಚಿಸುವುದು, 'ಮಿತ್ರಕಾರ್ಯ' – ಪರರನ್ನು ಸ್ನೇಹದಿಂದ ತನ್ನವರನ್ನಾಗಿ ಮಾಡಿಕೊಳ್ಳುವುದು ಹೀಗೆ ಐದು ನಿರ್ದಿಷ್ಟ ಉದ್ದೇಶಗಳನ್ನಿಟ್ಟುಕೊಂಡು ಕತೆಗಳನ್ನು ಸಂಕಲಿಸಿರುವುದು ಇಲ್ಲಿನ ಉದ್ದೇಶವಾಗಿದೆ. ವಿಷ್ಣುಶರ್ಮನ ಐದು ವಿಂಗಡಣೆಗಳು ಬೇರೆರೀತಿಯಾಗಿವೆ : 'ಮಿತ್ರಪ್ರಭೇದ', 'ಮಿತ್ರ ಸಂಪ್ರಾಪ್ತಿ', 'ಕಾಕೋಲಕೀಯಂ', 'ಲಬ್ಧಪ್ರಣಾಶ', 'ಅಪರೀಕ್ಷಿತಕಾರಕತ್ವ' –ಇಲ್ಲಿ ಮೊದಲನೆಯ ಪ್ರಕರಣಮಾತ್ರ ಇಬ್ಬರಿಗೂ ಹೋಲುತ್ತದೆ. ಹಾಗಿದ್ದರೂ ಇಲ್ಲಿ ಒಂದು ಕತೆಯೊಳಗೆ ಒಂದು ಕತೆ, ಅದರೊಂದಿಗೆ ಮತ್ತೊಂದು ಹೀಗೆ ಬಹು ಸಂಖ್ಯೆಯ ಕಥೆಗಳು ಬರುತ್ತಲೇ ಹೋಗುತ್ತವೆ. ಅವೆಲ್ಲಾ ಈ ಮೂಲದ ಆಶಯಗಳ ಜೊತೆಗೆ ತಮ್ಮವೇ ಆದ ನಾನಾ ಬಗೆಯ ಆಶಯಗಳನ್ನು ಹೇಳುತ್ತಾ ಹೋಗಿವೆ. ಹಾಗಾಗಿ ಮನುಷ್ಯ ಒಟ್ಟಾರೆ ಚಿಂತಿಸುವ ಬದುಕಿನ ವಿಸ್ತೃತವಾದ ನೋಟ ಇಲ್ಲಿ ಸಾಧ್ಯವಾಗಿದೆ. ವಿಷ್ಣುಶರ್ಮನ ಕೃತಿಯಲ್ಲಿ ಕಾಣದ ಅನೇಕ ಕಥೆಗಳು ದುರ್ಗಸಿಂಹನಲ್ಲಿ ಇವೆ.(ಉಪೋದ್ಘಾತ– 'ಕರ್ಣಾಟಪಂಚತಂತ್ರಂ')

೫.೨.೩. ಪ್ರಾಣಿಕತೆಗಳು ಮತ್ತು ಫ್ಯಾಂಟಸಿ

ಪಂಚತಂತ್ರ ಕಥೆಗಳ ಜಗತ್ತು ಅನೇಕ ಪ್ರಾಣಿ–ಪಕ್ಷಿಗಳ ಹಾಗೆಯೇ ನಮ್ಮ ಜನಪದ ಕತೆಗಳನ್ನು ಆಶ್ರಯಿಸಿರುವುದು, ಅಲ್ಲದೇ ಪುರಾಣದ ಪ್ರಸಂಗಗಳನ್ನು ಹೊಂದಿಸಿಕೊಂಡಿರುವುದು ಹೀಗೆ ಒಟ್ಟಾರೆ ಭಾರತೀಯ ಪರಂಪರೆಯ ಕತೆಗಳಲ್ಲಿನ ಫ್ಯಾಂಟಸಿಯೇ ಇಲ್ಲಿಯೂ ನೋಡಸಿಗುತ್ತದೆ. ಅದರಲ್ಲಿ ಪ್ರಾಣಿಗಳೇ ಪಾತ್ರಗಳಾಗಿರುವ ಕತೆಗಳನ್ನು ಪ್ರತ್ಯೇಕವಾಗಿ ತೆಗೆದು ಆ ಬಗೆಯಲ್ಲೂ ಫ್ಯಾಂಟಸಿಯನ್ನು ಭಾವಿಸಿಕೊಳ್ಳಬಹುದು. ಮಕ್ಕಳಿಗಾಗಿ ಎಂದು ನೀಡುವಾಗ ಈ ಪ್ರಾಣಿ ಪಾತ್ರಗಳನ್ನೇ ಮುಖ್ಯವಾಗಿ ಮುಂದೆ ಮಾಡಿಕೊಂಡು ಪದೇ ಪದೇ ಹಾಗೆ ನಮೂದಿಸಿರುವುದು, ಪ್ರಸ್ತಾಪಿಸಿರುವುದು ಕಾಣಿಸುತ್ತದೆ. ಈಸೋಪನ ನೀತಿಕತೆಗಳು ತೀರಾ ಚಿಕ್ಕವು, ಅವುಗಳ ಉದ್ದೇಶವೂ ಪಂಚತಂತ್ರಗಳಂತೆ ವಿಸ್ತಾರವಾದುದಲ್ಲ, ಅಲ್ಲಿ ಪ್ರಾಣಿಲೋಕವನ್ನು ಇರಿಸಿಕೊಂಡು ನೀಡಿದ್ದು ತಕ್ಷಣಕ್ಕೆ ಕಂಡು ಬರುತ್ತದೆ. ಅದೇ ಪಂಚತಂತ್ರದಲ್ಲಿ ಹಾಗಾಗುವುದಿಲ್ಲ. ಇಲ್ಲಿ ಕತೆಗಳು ವಿಪುಲವಾಗಿವೆ, ಅಲ್ಲದೆ ಪ್ರಾಣಿ ಪಕ್ಷಿಗಳು ಮಾನವರೊಡನೆ ಬೆರೆತು, ಸ್ವತಂತ್ರವಾಗಿ ನಾನಾ ಬಗೆಯಲ್ಲಿ ಸಂಭಾಷಿಸುತ್ತವೆ. ಪ್ರಾಣಿಗಳದ್ದೇ ವಿಶೇಷವಾಗಿ ಎಂದು ಮೇಲ್ನೋಟಕ್ಕೆ ಅನ್ನಿಸುವುದಿಲ್ಲ.

ಪ್ರಾಣಿಗಳು ಇಲ್ಲಿ ಮನುಷ್ಯರಂತೆ ವರ್ತಿಸುತ್ತಾ, ಆ ಬಗೆಯ ವ್ಯವಹಾರಗಳನ್ನೆಲ್ಲಾ ಮಾಡತೊಡಗುವುದೇ ಎದ್ದು ಕಾಣುವ ಫ್ಯಾಂಟಸಿಯಾಗಿದೆ. ಇದರಾಚೆ ಅವು ಎಷ್ಟರಮಟ್ಟಿಗೆ ಕೇವಲ ಪ್ರಾಣಿಲೋಕದ ವ್ಯವಹಾರಗಳಿಗೇ ಸೀಮಿತವಾಗಿವೆ, ಎಷ್ಟರ ಮಟ್ಟಿಗೆ ಮನುಷ್ಯನ ಬದುಕಿಗೆ ಸ್ಪಂದಿಸಿವೆ ಎನ್ನುವದರ ಮೇಲೆ ಅವುಗಳ ಫ್ಯಾಂಟಸಿಯನ್ನು ಪ್ರತ್ಯೇಕಿಸಬಹುದು. ಉದಾಹರಣೆಗೆ 'ಟಾಮ್ ಜೆರ್ರಿ' ಎನ್ನುವ ನಿತ್ಯ ಮಕ್ಕಳನ್ನು ರಂಜಿಸುವ ಪುಟ್ಟ ದೃಶ್ಯಾವಳಿಯ ಡಿಸ್ನಿಲೋಕದ

ಚಿತ್ರಾವಳಿಯಲ್ಲಿ ಇಲಿ ಮತ್ತು ಬೆಕ್ಕುಗಳು ತಮ್ಮ ಸಹಜ ಪ್ರಾಕೃತಿಕ ಸ್ವಭಾವವನ್ನು ಅನುಸರಿಸಿಯೇ ನಡೆದುಕೊಳ್ಳುವುದನ್ನೇ ಮೂಲದಲ್ಲಿ ಆಧರಿಸಿಕೊಳ್ಳಲಾಗಿದೆ. ಇಲಿ ಬೆಕ್ಕಿಗೆ ಎಂದಿಗೂ ಆಹಾರ. ಇಲಿ ಬೆಕ್ಕನ್ನು ಕಂಡೆ ಮರೆಯಾಗುವುದು, ಅಡಗಿಕೊಂಡು ಪಾರಾಗುವುದು ಅನಿವಾರ್ಯ. ಆದರೆ ಇಲ್ಲಿನ ಸರಣಿಯಲ್ಲಿ ಇಲಿ ಸಹಜದ ಪ್ರಕೃತಿಯ ಇಲಿಯಾಗದೆ ಒಂದಿಷ್ಟು ಹೊರಳಿಕೊಂಡ, ತನ್ನ ವೈರಿಯಾದ, ತನಗಿಂತ ಬಲಶಾಲಿಯಾದ ಬೆಕ್ಕನ್ನು ನಾನಾ ಬಗೆಯಲ್ಲಿ ಕಾಡಿಸುವ, ಗೋಳಿಡುವ ತಂತ್ರಗಳಿಂದ ಓದುಗರನ್ನು ಸೆಳೆಯುತ್ತದೆ. ಬೆಕ್ಕು ಪ್ರತಿಸಾರಿಯೂ ಸುಸ್ತಾಗುತ್ತದೆ.

'ಜಂಗಲ್ ಬುಕ್' ಕೃತಿ ನೀಡುವ ಪ್ರಾಣಿಲೋಕ ಮನುಷ್ಯರಂತೆ ಮಾತನಾಡಿಕೊಂಡಿದ್ದರೂ ಅದು ಕಾಡಿನ ಬದುಕಿನ ಪ್ರಾಣಿಲೋಕದ ಸಹಜತೆಯನ್ನೇ, ಪ್ರಾಕೃತಿಕ ಧರ್ಮವನ್ನೇ ಪ್ರಧಾನವಾಗಿ ಇರಿಸಿಕೊಂಡಿದೆ. ಅಲ್ಲಿ ಪ್ರಾಣಿಲೋಕ ಮಾತನಾಡುವ, ಮನುಷ್ಯ ಮಗುವಿನ ಜೊತೆ ನಡೆದುಕೊಳ್ಳುವ ಕೆಲವೆಲ್ಲಾ ಅಪರೂಪದ ವ್ಯವಹಾರಗಳ ಕೆಲ ಪದರುಗಳನ್ನು ಬದಿಗಿರಿಸಿದರೆ ಇಡೀ ಕತೆಯಲ್ಲಿ ಒಟ್ಟು ಪ್ರಾಣಿಲೋಕದ ಕಾಡಿನ ಬದುಕಿನ ಸಹಜದ ಧರ್ಮವನ್ನೇ ಮುಂದಿರಿಸಿಕೊಳ್ಳುತ್ತದೆ. ಅದಕ್ಕಾಗಿಯೇ ಮನುಷ್ಯ ಪ್ರಾಣಿಯನ್ನು ಕೊನೆಗೊಮ್ಮೆ ತಮ್ಮಿಂದ ದೂರಮಾಡಿಕೊಳ್ಳುತ್ತಾನೆ.

ಪಂಚತಂತ್ರದ ಕತೆಗಳಲ್ಲಿ ಪ್ರಾಣಿ ಸಹಜದ, ಮನುಷ್ಯನಿಗೆ ಪರಿಚಿತವಾದ ಕೆಲ ಸ್ವಭಾವಗಳು ಕಾಣುತ್ತವೆ. ಉದಾಹರಣೆಗೆ ದಮನಕ ನರಿ ಮೋಸಮಾಡುವುದನ್ನೇ ಮಾಡುತ್ತದೆ. ಇಂಥದು ಒಂದು ಬಗೆಯ ಚಹರೆ ಮಾತ್ರ. ಒಟ್ಟಾರೆ ಈ ಕಥೆಗಳು ಪ್ರಾಣಿಗಳನ್ನು, ಪಕ್ಷಿಗಳನ್ನು ಹಿಡಿದುಕೊಳ್ಳುವುದು ಮನುಷ್ಯನ ಬದುಕಿನ ಕಾರಣಕ್ಕಾಗಿ. ಅಲ್ಲಿ ಕೆಲವು ಸಲ ಪ್ರಾಣಿಗಳ ಸಹಜದ ಸಂಗತಿಗಳೂ ಬರಬಹುದು, ಕೆಲವು ಸಲ ಅವು ತೀರಾ ಮನುಷ್ಯನ ಹಾಗೆಯೇ ವರ್ತಿಸುವುದು ನಡೆಯಬಹುದು.

ಕರಟಕ ದಮನಕ, ಪಿಂಗಳಿಕ, ಸಂಜೀವಕರ ಸುತ್ತಲಿನ ತುಂಬ ದೀರ್ಘವಾದ ಕಥಾನಕದ ಉದಾಹರಣೆಯನ್ನು ನೋಡಬಹುದು. ಇದು ಪಂಚತಂತ್ರದಲ್ಲಿಯೇ ಎಲ್ಲಕ್ಕಿಂತ ದೀರ್ಘವಾದ ಕತೆ, ಅಲ್ಲದೆ ಪ್ರಾಣಿ ಪಾತ್ರಗಳಲ್ಲಿಯೇ ಕಂಡುಕೊಂಡ ಕತೆ. ಆದರೆ ಇದರಲ್ಲಿಯೇ ಕಾಣುವ ಉಪಕತೆಗಳು, ಒಳಕತೆಗಳಲ್ಲಿ ಕೇವಲ ಪ್ರಾಣಿಕತೆಗಳು ಕಾಣಿಸುವುದಿಲ್ಲ, ಅವೆಲ್ಲಾ ಮಿಶ್ರಣದ ಕತೆಗಳಾಗಿವೆ. ಮೊದಲ ದೀರ್ಘ ಕತೆ ಬದುಕಿನ ಗಂಭೀರ ಸಂಗತಿಗಳಿಗೆ ಸ್ಪಂದಿಸಿದಂತಿದೆ. ಸಹಜವಾಗಿಯೇ ಬಲಶಾಲಿಯಾದ ಪಿಂಗಳಿಕ ಸಿಂಹವನ್ನು ಮಕ್ಕಳ ಕಥಾಲೋಕ ಕಾಡಿನ ರಾಜನನ್ನಾಗಿ ಭಾವಿಸಿಕೊಂಡುಬಿಟ್ಟಿದೆ. ಸಹಜ ಪ್ರಾಣಿಲೋಕದಲ್ಲಿ ಇದೇನೂ ಇರಲಾರದ್ದು. ಹಾಗೆಯೇ ಪಿಂಗಳಿಕ ಇಲ್ಲಿ ರಾಜ, ಆದರೆ ಸನ್ನಡತೆಯ ರಾಜ, ರಾಜನಿಗೆ ತಕ್ಕುದಾದುದನ್ನು ಮಾಡುವ, ವೀರ, ಧೈರ್ಯದ, ನ್ಯಾಯವಂತ ರಾಜನಾಗಿರುತ್ತಾನೆ. ಸಂಜೀವಕ ಒಬ್ಬ ಅತಿ ಧರ್ಮಿಷ್ಟನ ಮನೆಯಲ್ಲಿ ಸಾಕಿ ಬೆಳೆದ ಎತ್ತು, ಹಾಗಾಗಿ ಅದು ಕಾಡಿಗೆ ಅನಿವಾರ್ಯವಾಗಿ ಬಂದುಳಿದಾದ ಮೇಲೆ ತನ್ನಷ್ಟಕ್ಕೆ ತಾನು ತಿಂದು ದಷ್ಟಪುಷ್ಟವಾಗಿ ಬೆಳೆದಿರುತ್ತದೆ. ಯಾರ ತಂಟೆಗೂ ಹೋಗದೆ ಸುಖವಾಗಿರುತ್ತದೆ. ಕರಟಕ ದಮನಕ ಎರಡೂ

ನರಿಗಳು ಕತೆಯಲ್ಲಿ ಅವು ರಾಜನ ಹಿಂದಿನ ಸಚಿವ ಸಂಬಂಧವಾಗಿರುತ್ತವೆ. ಇವುಗಳಲ್ಲಿ ದಮನಕ ಒಂದಿಷ್ಟು ವ್ಯತಿರಿಕ್ತವಾಗಿ, ಅತಿಬುದ್ಧಿಯಿಂದ ಚಿಂತಿಸತೊಡಗುವ, ಅದರಿಂದ ತನಗೆ ಏನಾದರೂ ಲಾಭ ದಕ್ಕಬಹುದೆ? ಎಂದು ನೋಡುವ ಸ್ವಭಾವದ್ದಾಗಿರುತ್ತದೆ.

ಒಂದು ಸಲ ಪಿಂಗಳಿಕ ಸಿಂಹ ಕಾಡಿನಲ್ಲಿ ಸಂಜೀವಕನ ಗುಟುರುವಿಕೆಯನ್ನು ಕೇಳಿ, ಅದು ಭಯಾನಕವೆನಿಸಿ ಹೆದರಿಕೊಂಡುಬಿಡುತ್ತದೆ. ಇದೇ ಸಮಯ ಎಂದುಕೊಂಡು ದಮನಕ ತನ್ನ ಲಾಭದ ಉಪಾಯ ಕಾಣತೊಡಗುತ್ತದೆ. ಅದು ಸಂಜೀವಕದ ದನಿ ಎಂಬುದನ್ನು ಪತ್ತೆ ಹಚ್ಚುತ್ತದೆ. ಆದರೆ ಪಿಂಗಳಿಕದ ಬಳಿಗೆ ಬಂದು ಅದೊಂದು ಭಯಾನಕವಾದ ವೃಷಭ, ಎಂಥವರನ್ನು ಮುಗಿಸಿಹಾಕಬಲ್ಲದು, ಅದರೊಡನೆ ಸ್ನೇಹ ಹೊಂದುವುದೇ ಒಳಿತು ಎಂದೆಲ್ಲಾ ಪುಸಲಾಯಿಸಿ ಸಿಂಹಕ್ಕೆ ಧೈರ್ಯ ತುಂಬಿ, ಇತ್ತ ಸಂಜೀವಕದ ಬಳಿ ಬಂದು ಅದನ್ನೂ ಬಣ್ಣದ ಮಾತುಗಳಿಂದ ಮನವೊಲಿಸಿ ಕರೆದು ತರುತ್ತದೆ.

ಸಿಂಹ ಎತ್ತನ್ನು ಕಂಡು ಸ್ವಾಗತಿಸುತ್ತದೆ, ಸ್ನೇಹ ಬಯಸುತ್ತದೆ, ಸಂಜೀವಕ ಕೂಡ ಸ್ಪಂದಿಸುತ್ತದೆ. ಅದೊಂದು ಬಗೆಯಲ್ಲಿ ಸಂಸ್ಕಾರ ಹೊಂದಿದ, ಪರಸ್ಪರ ತಿಳುವಳಿಕೆಯ ಸ್ನೇಹ. ದಮನಕ ಇದರಿಂದ ಅರಸರ ಬಳಿಯಲ್ಲಿ ತನ್ನ ಸ್ಥಾನಮಾನ ಹೆಚ್ಚಿಸಿಕೊಂಡು ವಿಶ್ವಾಸಿಯಾದಂತೆ ನಟಿಸುತ್ತದೆ. ಕರಟಕ ಮಾತ್ರ ದಮನಕದ ಈ ವ್ಯವಹಾರಗಳಾವನ್ನೂ ಒಪ್ಪದೆ ದೂರವೇ ಉಳಿಯುತ್ತದೆ. ಮುಂದೆ ಸಿಂಹ ಮತ್ತು ಎತ್ತುಗಳ ನಿಕಟ, ಸ್ನೇಹದಿಂದ ಸಿಂಹ ಹಿಂಸ್ರ ಪಶುವಾಗಿದ್ದುದು ಸಾಧುಪ್ರಾಣಿಯಾಗ ತೊಡಗುತ್ತದೆ. ತನಗೆಷ್ಟು ಬೇಕೋ ಅನಿವಾರ್ಯವಾಗಿ ಅಷ್ಟನ್ನು ಮಾತ್ರ ಸೇವಿಸಿ ಇರತೊಡಗುತ್ತದೆ. ಇದರಿಂದ ಬಹು ಸಮಯದಿಂದ ಸಿಂಹದ ಔದಾರ್ಯವನ್ನೇ ಅವಲಂಬಿಸಿ, ಅದರ ದಾಳಿಯಿಂದಲೇ ತಮ್ಮ ಆಹಾರದ ಉಪಾಯವನ್ನೂ ಕಂಡುಕೊಂಡಿದ್ದ ಕಾಡಿನ ಪ್ರಾಣಿಲೋಕ ನಿರಾಸೆಯನ್ನು ಅನುಭವಿಸುತ್ತದೆ. ಈಗ ದಮನಕ ಮತ್ತೆ ತನ್ನ ಬೇಳೆ ಬೇಯಿಸಿಕೊಳ್ಳುವ ದಾರಿ ಹುಡುಕಲು ನೋಡುತ್ತದೆ. ಅದು ಸುಳ್ಳು ಕತೆಗಳನ್ನು ಕಟ್ಟಿ ಇಬ್ಬರ ನಡುವೆ ವೈರತ್ವ ಹುಟ್ಟಿಸುವಲ್ಲಿ ಸಫಲವಾಗುತ್ತದೆ.

ಸಂಜೀವಕ ಅದನ್ನೇ ನಂಬಿ ಸಿಟ್ಟಿನಿಂದ ಸಿಂಹದ ಬಳಿ ಬಂದರೆ ಅದನ್ನೇ ಕಾಯುತ್ತಿದ್ದ ಅದು ಹೋರಾಟಕ್ಕೆ ಸಿದ್ಧವಾಗಿಬಿಡುತ್ತದೆ. ಎತ್ತನ್ನು ಕೊಂದು ಹಾಕಿಬಿಡುತ್ತದೆ. ಆದರೆ ಅದರ ಸಿಟ್ಟು ಇಳಿದಾದ ಮೇಲೆ, ಅದರ ಸಂಸ್ಕಾರಗೊಂಡ ಮನಸ್ಸು ಹಳಹಳಿಸತೊಡಗುತ್ತದೆ. ಅದು ದುಃಖಿಸತೊಡಗುತ್ತದೆ. ಒಬ್ಬೊಳ್ಳೆಯ ಮನಸ್ಸಿನ, ಸಾತ್ವಿಕ ವೃತ್ತಿಯ ಸ್ನೇಹಿತನನ್ನು ಕೊಂದುದಕ್ಕೆ ನೋವನ್ನು ಅನುಭವಿಸುತ್ತದೆ. ಈ ಬಗೆಯ ನಡೆವಳಿಕೆಗಳು 'ಗೋವಿನಹಾಡು'ದಂಥ ಜನಪದ ಕಥನದ ಫ್ಯಾಂಟಸಿ ಮಾದರಿಯನ್ನು ನೆನಪಿಸುತ್ತವೆ. ದಮನಕನ ಈ ಎಲ್ಲಾ ಕಾರಸ್ಥಾನ ನೋಡಿ ಕರಟಕ ನರಿ ಅದನ್ನ ಬಿಟ್ಟು ಹೊರಟು ಹೋಗುತ್ತದೆ. ದಮನಕ ಮತ್ತೆ ಉಪಾಯವಾಗಿ ಸಿಂಹವನ್ನು

ಬದಲಿಸಲು ನೋಡ ತೊಡಗುತ್ತದೆ. ಆದರೆ ಪಿಂಗಳಿಕ ಸಿಂಹ ನಿಧಾನ ಸ್ಥಿಮಿತಕ್ಕೆ ಬಂದರೂ ಎಚ್ಚರಿಕೆಯಿಂದ, ಜವಾಬ್ದಾರಿಯಿಂದ, ನ್ಯಾಯ ನೀತಿಗಳಿಂದ ನಡೆಯಲು ಮತ್ತೆ ಸಿದ್ಧವಾಗತೊಡಗುತ್ತದೆ.

ಇಷ್ಟು ಕತೆಯನ್ನು ಹೇಳಲು ಪಂಚತಂತ್ರ ಅನೇಕ ಕತೆಗಳನ್ನು ಬಳಸುತ್ತಾ ಹೋಗಿದೆ. ಆ ಕತೆಗಳೇ ಒಂದೊಂದು ನೀತಿಯನ್ನು ಮುಂದಿಡುತ್ತಾ ಹೋಗುತ್ತವೆ. ಅವೇ ಎಷ್ಟೊಂದು ನೀತಿಗಳಾಗುತ್ತವೆ. ಇಲ್ಲಿನ ಈ ಮುಖ್ಯ ನಾಲ್ಕು ಪ್ರಾಣಿಗಳ ಮೂಲಕ ಮುಂದಿರಿಸಿರುವ ಬದುಕಿನ ಸಂಗತಿಗಳನ್ನೇ ನೋಡಿದರೆ ಗಂಭೀರವಾದ ಜೀವನಾನುಭವ ಇಲ್ಲಿ ನಿರೂಪಿತವಾಗಿರುತ್ತಾ ಗಮನಕ್ಕೆ ಬರುತ್ತದೆ. ಈ ಬಗೆಯ ಬದುಕಿನ ಗಂಭೀರವಾದ ನೀತಿ ದೊಡವರಿಗೇ ಸೂಕ್ತವಾದುದು. ಆದರೂ ಮಕ್ಕಳಿಗೂ ಇದು ನಿಲುಕುತ್ತದೆ, ಇಲ್ಲಿನ ನಾನಾಬಗೆಯ ಕುತೂಹಲ ಕೆರಳಿಸುವ ಕಥಾ ಹಂದರಗಳು ಮಕ್ಕಳನ್ನು ಖಂಡಿತ ಆಕರ್ಷಿಸುತ್ತವೆ. ಅವುಗಳ ಹಿಂದಿನ ನೀತಿ ಅವಕ್ಕೆ ದಕ್ಕಲಿಕ್ಕಿಲ್ಲ, ಅವಕ್ಕೆ ಇಲ್ಲಿನ ಫ್ಯಾಂಟಸಿಯಿಂದ ರಂಜನೆಯಂತೂ ಸಿಗುತ್ತದೆ. ಸರಳವಾದ ಬದುಕಿನ ಸಂಗತಿಗಳು, ಮೋಜಿನ ಪ್ರಸಂಗಗಳು, ಚಾತುರ್ಯದವು ಅವನ್ನು ಹಿಡಿದೆಳೆಯುತ್ತಲೇ ಇರುತ್ತವೆ. ಹಾಗೆ ಆಕರ್ಷಿಸುವ ದೊಡ್ಡ ಕಥಾ ಕಣಜ ಈ ಪಂಚತಂತ್ರ, ಅಷ್ಟೊಂದು ಕತೆಗಳು ಇಲ್ಲಿ ರಾಶಿಯಾಗಿವೆ. ಮಂಗ ತನ್ನ ಬಾಲವನ್ನು ಸಿಕ್ಕಿಸಿಕೊಂಡು ಅದನ್ನು ತಾನೇ ಕತ್ತರಿಸಿಕೊಂಡುದು ಮಕ್ಕಳಿಗೆ ತುಂಬಾ ಇಷ್ಟವಾಗುವ ಒಂದು ಕತೆ. ಬಡವನೊಬ್ಬ ಕನಸಿನಲ್ಲಿಯೇ ಮಂಡಿಗೆಯನ್ನು ತಿನ್ನುತ್ತಾ ತಾನು ಸಂಗ್ರಹಿಸಿ ಇಟ್ಟುಕೊಂಡಿದ್ದ ಹಿಟ್ಟಿನಿಂದ ಏನೇನೆಲ್ಲ ಮಾಡಬಹುದು ಅಂತ ಲೆಕ್ಕ ಹಾಕುತ್ತಾ, ಚೆಂದದ ಕನಸುಗಳನ್ನು ಹೊಸೆಯುತ್ತಾ, ಹೊಸೆಯುತ್ತಾ ಕೊನೆಗೊಮ್ಮೆ ತನ್ನ ಕೈಗಳಿಂದಲೇ ಹಿಟ್ಟಿನ ಮಡಕೆಯನ್ನು ಒಡೆದುಹಾಕಿದ ಕತೆ ಮಕ್ಕಳಿಗೆ ಸಾಭಿನಯವಾಗಿ ಹೇಳಿದಾಗ ಮೋಜು ನೀಡಬಹುದು. ಹಾಗೆಯೇ ಅಸ್ಥಿಪಂಜರದಲ್ಲಿ ಜೀವವನ್ನೇ ತುಂಬಿ ತನ್ನ ವಿದ್ಯೆಯನ್ನು ಪ್ರದರ್ಶಿಸಲು ನೋಡಿ ತಾವೇ ಸಾವಿಗೆ ಎರವಾದ ಗೆಳೆಯರು, ಅವರೊಂದಿಗೆ ವಿದ್ಯೆಯಿಲ್ಲದವನು ಅಂತ ಹೀಯಾಳಿಕೆಗೆ ಒಳಗಾದವನೇ ವ್ಯವಹಾರಿಕವಾಗಿ ಉಪಾಯದಿಂದ ಪಾರಾದುದು ಮಕ್ಕಳಿಗೆ ಹಿಡಿಸುವ ಸಂಗತಿಯಾಗಿದೆ. ಹೀಗೆ ಮಕ್ಕಳಿಗೆ ಹಿಡಿಸುವ ಫ್ಯಾಂಟಸಿ ಚಹರೆಗಳನ್ನು ಈ ಕತೆಗಳು ಸಾಕಷ್ಟು ಹೊಂದಿವೆ. ಆದರೆ ಅಲ್ಲಿಗೆ ಅವು ಸಮನಿಸುವುದಿಲ್ಲ, ವಿಸ್ತಾರದ ಹರಹನ್ನು ಹೇಳುತ್ತಾ ಮುಂದುವರೆಯುತ್ತವೆ.

ಪಂಚತಂತ್ರ ಕತೆಗಳಲ್ಲಿ ಪ್ರಾಣಿಗಳು ಪ್ರಧಾನ ಪಾತ್ರವಹಿಸುತ್ತವೆ. ಕತ್ತೆಯ ಹಾಡು ಕಥೆಯಲ್ಲಿ ನರಿಯ ಮಾತು ಕೇಳದೆ ಹಾಡು ಹೇಳುವ ಸಾಹಸ ಮಾಡಿ ರೈತರಿಂದ ಹೊಡೆತ ಅನುಭವಿಸುತ್ತದೆ. ಇಲ್ಲಿನ ಪ್ರಾಣಿಗಳಲ್ಲಿ ಕೆಲವು ಬುದ್ಧಿವಂತಿಕೆ ತೋರಿದರೆ ಮತ್ತೆ ಕೆಲವು ದಡ್ಡತನ ಪ್ರದರ್ಶಿಸಿ ಶಿಕ್ಷೆ ಅನುಭವಿಸುತ್ತವೆ. 'ಕತ್ತೆ ಅದರ ಅಪರೂಪದ ರಾಗವನ್ನು ಆರಂಭಿಸಿತು. ಇದ್ದಕ್ಕಿದ್ದಂತೆ ಕತ್ತೆಯೊಂದು ಹೊಲದಲ್ಲಿ ಅರಚುತ್ತಿರುವುದನ್ನು ಕೇಳಿದ ಹೊಲದ ಒಡೆಯನಿಗೆ ಎಚ್ಚರವಾಯಿತು... ಹೊಲದಲ್ಲಿ ಕತ್ತೆಯಿಂದ ಆಗಿರುವ ನಷ್ಟವನ್ನು ಗ್ರಹಿಸಿದ. ಕೋಪ ನೆತ್ತಿಗೇರಿತು. ಕರುಣೆಯಿಲ್ಲದೆ ಕತ್ತೆಯು

ಸೋತು ಬೀಳುವಷ್ಟು ಹೊಡೆದ[೧೭]. ಈ ಸಾಲುಗಳಲ್ಲಿ ಕತ್ತೆಯನ್ನು ಪೆದ್ದಾಗಿ ಚಿತ್ರಿಸಿದ್ದು ಕಂಡು ಬರುತ್ತದೆ.

'ಕಪಟಿಯಾದ ನ್ಯಾಯಾಧೀಶ' ಕಥೆಯಲ್ಲಿ ಬೆಕ್ಕು ಮೊಲ ಮತ್ತು ಗುಬ್ಬಿ ಇಬ್ಬರ ನಡುವೆ ನ್ಯಾಯ ಪಂಚಾಯತಿ ಮಾಡಲು ಬಂದು ಸಂದರ್ಭದ ಸದುಪಯೋಗ ಪಡೆದುಕೊಳ್ಳುತ್ತದೆ. 'ಕಾಡು ಬೆಕ್ಕೊಂದು ಮೊಲ, ಗುಬ್ಬಿಗಳೆರಡು ತನ್ನ ಮುಂದಿರುವುದನ್ನು ಕಂಡ ಬೆಕ್ಕಿಗೆ ಬಹಳ ಆನಂದವಾಯಿತು. ಅದು ಅವರಿಬ್ಬರ ವಾದವನ್ನು ಆಲಿಸುವಂತೆ ನಟಿಸಿತು. ಆದರೆ ಸಂದರ್ಭ ಸಿಕ್ಕ ಕೂಡಲೇ ಅದು ಎರಡರ ಮೇಲೆ ಹಾರಿ ಎರಡನ್ನೂ ಕೊಂದು ಸಂತೋಷದಿಂದ ತಿಂದಿತು.'[೧೮] ಈ ಕಥೆಯ ಬೆಕ್ಕಿನ ವರ್ತನೆ ಅತಿರೇಕದ ನಡೆವಳಿಕೆಯಂತೆ ತೋರಬಹುದು. ವಾಸ್ತವದಲ್ಲಿ ಬೆಕ್ಕು ಮಾಂಸವನ್ನು ಭಕ್ಷಿಸುವ ಪ್ರಾಣಿಯಾದರೂ ನೀತಿಯನ್ನು ಹೇಳುವ ಸಲುವಾಗಿಯೇ ಅದನ್ನು ಮೋಸಗಾರನನ್ನಾಗಿ ಮಾಡಿ ಖಳನಾಗುವಂತೆ ಚಿತ್ರಿಸಲಾಗಿದೆ. ಮಕ್ಕಳಿಗೆ ನೈತಿಕ ಪಾಠ ಹೇಳುವ ಭರದಲ್ಲಿ ಪ್ರಾಣಿ ಪಕ್ಷಿಗಳ ಮೂಲ ಗುಣ ಸ್ವಭಾವಗಳನ್ನು ಅತಿರೇಕಗೊಳಿಸಿ ಅವುಗಳನ್ನು ಕೆಡುಕೆನ್ನುವಂತೆ ಚಿತ್ರಿಸಿರುವುದು ಪಂಚತಂತ್ರ ಕಥೆಗಳ ಮಿತಿಯಾಗಿದೆ.

ಹೀಗೆ ಮನುಷ್ಯರ ಬದುಕಿಗೇ ನೇರವಾಗಿ ಅಗತ್ಯವಾದ ಸಂಗತಿಗಳನ್ನು ಮುಂದಿಟ್ಟು ಪ್ರಾಣಿಗಳ ಪಾತ್ರಗಳನ್ನು ಕಂಡುಕೊಂಡಿರುವುದೇ ಇಲ್ಲಿನ ಎದ್ದುಕಾಣುವ ಫ್ಯಾಂಟಸಿಯ ಒಂದು ಮಾದರಿ. ಪಂಚತಂತ್ರದಾಚೆ ಕಾಣುವ ಪ್ರಾಣಿ ಪಾತ್ರಗಳಿರುವ ಕತೆಗಳಿಗೂ ಇಲ್ಲಿನವಕ್ಕೂ ಹೆಚ್ಚು ಅಂತರವಿಲ್ಲ. ಹಾಗೆ ಒಟ್ಟಾರೆ ಭಾರತೀಯ ಪರಿಸರದ ಜನಪದ ಕತೆಗಳು, ಪುರಾಣದ ಕತೆಗಳು, ರಾಮಾಯಣದ ಮಹಾಭಾರತದಂಥ ಕತೆಗಳು, ಬೃಹತ್ ಕಥಾಸಾಗರದಂಥ ಕತೆಗಳು, ಜಾತಕ ಕತೆಗಳಂಥವು ಎಲ್ಲವನ್ನು ಇಟ್ಟುಕೊಂಡು ಅಲ್ಲಿನ ಒಟ್ಟಾರೆ ಪ್ರಾಣಿ, ಪಕ್ಷಿ, ಮನುಷ್ಯೇತರ ಜೀವಲೋಕವನ್ನು ಅಭ್ಯಸಿಸುವುದಾದರೆ ಭಾರತೀಯ ಮನಸ್ಸು ಹೇಗೆಲ್ಲಾ ಬೆಳೆದುಬಂದಿದೆ ಎನ್ನುವುದು ತಿಳಿಯುತ್ತದೆ.

೫.೩. ಹೊಸಗಾಲದಲ್ಲಿ ಪಂಚತಂತ್ರದ ಕಥೆಗಳು

ಹೊಸಗಾಲದ ಶಿಕ್ಷಣ ವ್ಯವಸ್ಥೆ ಶುರುವಾದೊಡನೆ ಮುದ್ರಣ ತಂತ್ರವೂ ಸೇರಿಕೊಂಡು ಮಕ್ಕಳಿಗಾಗಿ ಪುಸ್ತಕಗಳ ಮುದ್ರಣ ನಡೆಯತೊಡಗಿತು. ಶಾಲಾಪಠ್ಯದೊಂದಿಗೆ ಭಾರತೀಯ ಮನಸ್ಸು ಭಾವಿಸಿಕೊಳ್ಳುವ ಪರಂಪರೆಯ ಅನೇಕ ಕಥಾ ಸಂಗತಿಗಳು ಪುಸ್ತಕಗಳಾಗಿ ಬಂದವು. ಹಾಗೆ ಅನೇಕ ಹಿರಿಯರು ಅನೇಕ ಪುಸ್ತಕಗಳನ್ನು ಮುದ್ರಿಸಿರುವುದು ಕಂಡುಬರುತ್ತದೆ. ರಾಮಾಯಣ ಮಹಾಭಾರತಗಳನ್ನು ತಂದಹಾಗೆಯೇ, ಪಂಚತಂತ್ರದ ಕತೆಗಳನ್ನೂ ತಂದುದು ಕಾಣುತ್ತದೆ. ಕ್ರಿಶ್ಚಿಯನ್ ಮಿಷನರಿಗಳೂ ಕೂಡ ಪಂಚತಂತ್ರ ಮುದ್ರಿಸಿದ್ದು ಕಂಡು ಬರುತ್ತದೆ. ಹೀಗೆ ಬಂದ ಅಸಂಖ್ಯ ಕೃತಿಗಳು ಭಾರತದಾದ್ಯಂತ ಬಂದಿವೆ. ಕನ್ನಡದಲ್ಲಿಯೂ ಬಂದಿವೆ. ಅಷ್ಟೊಂದು ಪ್ರಮಾಣದಲ್ಲಿ ಇವು ಮಕ್ಕಳಿಗಾಗಿ ಎಂದು ಮುದ್ರಣವಾಗುತ್ತಲೇ ಬಂದುಬಿಟ್ಟಿವೆ. ಈಗಲೂ ಬರುತ್ತಲೇ ಇವೆ.

ಅಂದವಾದ ಚಿತ್ರಗಳೊಡಗೂಡಿ ಬರುತ್ತಿವೆ. ಚಿಲ್ಡ್ರನ್ಸ್ ಬುಕ್ ಟ್ರಸ್ಟ್ ಕೂಡ ಒಂದು ಸರಣಿಯಾಗಿ ಇವನ್ನು ಮುದ್ರಿಸಿತು. 'ಸ್ಟೋರೀಸ್ ಫ್ರಮ್ ಪಂಚತಂತ್ರ' ಎನ್ನುವ ಆ ಸರಣಿಯ ಪುಸ್ತಕಗಳು ೧೯೬೬ರಲ್ಲಿ ಮುದ್ರಣಗೊಂಡು ಅಂದಿನಿಂದ ಹೀಗೆ ಪ್ರತೀ ವರ್ಷ ಮರುಮುದ್ರಣಗೊಳ್ಳುತ್ತಾ ಬಂದಿವೆ.

ಚಿಲ್ಡ್ರನ್ಸ್ ಬುಕ್ ಟ್ರಸ್ಟ್ ಅವರು ಪರಂಪರೆಯ ಕತೆಗಳು ಮಕ್ಕಳಿಗಾಗಿ ಎಂದು ನಿರ್ದಿಷ್ಟವಾಗಿ ಚಿತ್ರಗಳ ಮೂಲಕ ನೀಡಿದ್ದಾರೆ. ಆದರೆ ಕನ್ನಡದಲ್ಲಿ ಮಕ್ಕಳಿಗೆ ಪುಸ್ತಕ ತರುತ್ತಿದ್ದ ಅನೇಕ ಹಿರಿಯರು ಪಂಚತಂತ್ರ ತರುವಾಗ ಅವರಿಗೆ ಅವು ನಮ್ಮ ಪರಂಪರೆಯವು, ನೀತಿ ಹೇಳುವಂಥವು, ಬದುಕಿನ ಆದರ್ಶ ಹೇಳುವಂಥವು ಮುಂತಾದ ಭಾವನೆಗಳು ಪ್ರಕಟಣೆಗೆ ಕಾರಣವಾಗಿವೆ. ಅವರ ದೃಷ್ಟಿಯಲ್ಲಿ ಮಕ್ಕಳು ಈ ನೀತಿಗಳನ್ನು ಮೊದಲಿನಿಂದಲೇ ರೂಢಿಸಿಕೊಳ್ಳಬೇಕು ಎನ್ನುವ ವಿಚಾರಧಾರೆಯೂ ಇರುತ್ತದೆ. ಇಂದು ನಾವು ಮಕ್ಕಳ ಸಾಹಿತ್ಯದ ವಾತಾವರಣದಲ್ಲಿ ಇದನ್ನು ಭಾವಿಸುತ್ತಿಲ್ಲ. ಮಕ್ಕಳಿಗೆ ಇದೆಲ್ಲಾ ತೀರಾ ಭಾರವಾದುದು ಎಂದು ತಕ್ಷಣ ಅನ್ನಿಸಬಹುದು. ಅಷ್ಟಾಗಿಯೂ ಪಂಚತಂತ್ರದಲ್ಲಿ ಮಕ್ಕಳಿಗೆ ರಂಜನೆಯನ್ನು ಒದಗಿಸುವ ಪುಟಾಣಿ ಕತೆಗಳು ಸಾಕಷ್ಟು ಅಡಗಿಕೊಂಡಿವೆ. ಅವು ಕೇವಲ ಪ್ರಾಣಿ ಪಕ್ಷಿಗಳಿಗೇ ಸೀಮಿತವಾಗಿಲ್ಲ, ಮನುಷ್ಯ ಪಾತ್ರಗಳಿರುವ ಅಂಥ ಕತೆಗಳೂ ಕಂಡುಬರುತ್ತವೆ.

ಪಂಚತಂತ್ರವು ಯಾವೆಲ್ಲಾ ಕಾರಣಗಳಿಂದ ಮಕ್ಕಳಿಗಾಗಿ ಎಂದು ನಿಗದಿಯಾಗುತ್ತಾ ಬಂದಿತು ಎನ್ನುವುದನ್ನು ಈ ಕೆಳಗಿನಂತೆ ವಿವರಿಸಲಾಗಿದೆ. ಇಲ್ಲಿ ಮಕ್ಕಳಿಗಾಗಿ ಈ ಕಥೆಗಳನ್ನು ನೀಡುವ ಹಿನ್ನೆಲೆ ಬರೀ ಪ್ರಾಣಿ ಕಥೆಗಳಲ್ಲದೇ ಅದರಲ್ಲಿರುವ ಬಹುತೇಕ(ಎಲ್ಲಾ ಅಲ್ಲ) ಆಶಯಗಳು ಮಕ್ಕಳಿಗೂ ಸೂಕ್ತ ಎನ್ನುವ ಮನಸ್ಥಿತಿ ಆಯ್ಕೆಯಲ್ಲಿ ಪ್ರಧಾನ ಪಾತ್ರ ನಿರ್ವಹಿಸಿದ ಮಾತು ತಳ್ಳಿ ಹಾಕುವಂತಿಲ್ಲ. ನಮ್ಮ ಹಿಂದಿನವರ ಗ್ರಹಿಕೆಯಲ್ಲಿ ಮಕ್ಕಳು ಸಾಕಷ್ಟು ಗಂಭಿರವಾದ ಬದುಕಿನ ಪಾಠಗಳಿಗೆ ಯೋಗ್ಯರೇ, ಅವರಿಗೆ ಮೊದಲಿನಿಂದಲೇ ರೂಢಿಸಬೇಕು ಎನ್ನುವುದು ಸಾಮಾನ್ಯವಾಗಿ ಕಾಣುತ್ತದೆ. ಈ ಬಗೆಯ ಮನೋಧರ್ಮ ಹತ್ತೊಂಬತ್ತು ಇಪ್ಪತ್ತನೆಯ ಶತಮಾನದಲ್ಲೂ ಹಿರಿಯರಲ್ಲಿ ಮುಂದುವರೆದಿತ್ತು. ಎಂ.ಎಸ್.ಪುಟ್ಟಣ್ಣನವರ ನೀತಿ ಚಿಂತಾಮಣಿಯಂಥ ಕೃತಿಗಳು ಇದಕ್ಕೆ ಸಾಕ್ಷಿ.

೧. ಪ್ರಾಣಿ ಪಕ್ಷಿಗಳನ್ನು ಪಾತ್ರಗಳಾಗಿ ಹೊಂದಿರುವುದು ಕೂಡ ಇಲ್ಲಿನ ಎದ್ದು ಕಾಣುವ ವಿಶೇಷ. ಪಂಚತಂತ್ರ ಅಂದೊಡನೆ ಅದು ಪ್ರಾಣಿಕತೆಗಳ ಗುಚ್ಛ ಎಂದೇ ಭಾವಿಸುವುದಿದೆ.

೨. ಬಹು ಮುಖ್ಯವಾಗಿ ಇಲ್ಲಿ ಸಾಕಷ್ಟು ಕತೆಗಳು ಒಂದೆಡೆ ಸಂಗ್ರಹವಾಗಿ ಸಿದ್ಧ ಸಾಮಗ್ರಿಯಾಗಿ ದೊರೆತಿದ್ದು. ಕತೆಗಳು ಮೊದಲು ರಂಜನೆಗಾಗಿಯೇ, ಜೊತೆ ಜೊತೆಗೆ ನೀತಿ, ಬದುಕಿನ ಪಾಠ ಮುಂತಾದ ಕಾರಣದಿಂದಲೇ ಬಹುಶಃ ಈ ಕೃತಿ ಮಕ್ಕಳಿಗಾಗಿ ಮುದ್ರಣಗೊಳ್ಳುತ್ತಾ ಬಂದಿದೆ.

ಅಲ್ಲದೆ ಈ ಹೊತ್ತಿಗಾಗಲೇ ಬರಹರೂಪದಲ್ಲಿ ಮಕ್ಕಳಿಗೆ ಕತೆಗಳನ್ನು ನೀಡುವ ಅಗತ್ಯ ಶೈಕ್ಷಣಿಕ ವ್ಯವಸ್ಥೆಯ ಜೊತೆಜೊತೆಗೆ ಕಾಣಿಸಿಕೊಂಡುದು. ಹಾಗಾಗಿ ನಮ್ಮವರು ಜನಪದ ಕತೆಗಳ

ಕಡೆಗೆ ಹೊರಳಿದುದು ತಕ್ಷಣಕ್ಕೆ ಕಂಡುಬರುತ್ತದೆ. ಎಲ್ಲ ಬರಹಗಾರರೂ ಜನಪದ ಕತೆಗಳನ್ನು ಕೇಳಿ ಕೇಳಿ ಬರಹಕ್ಕೆ ಇಳಿಸುತ್ತಾ ಬಂದಿದ್ದಾರೆ. ಇಂಥ ಸಂದರ್ಭದಲ್ಲಿ ಪಂಚತಂತ್ರದಂಥ ಕೃತಿ ಅವರಿಗೆ ಕೈಗೆಟಕುವ ಕೃತಿಯಾದ್ದರಿಂದ, ಒಟ್ಟಾರೆ ಕೃತಿಯನ್ನೋ, ಇಲ್ಲವೆ ಆಯ್ದು ಕೆಲವನ್ನು ನೀಡುತ್ತಲೋ ಪುಸ್ತಕಗಳು ಮುದ್ರಣಗೊಳ್ಳುತ್ತಾ ಬಂದಿವೆ. ಉದಾಹರಣೆಗೆ ಕೆ. ಎಸ್.ಭಗವಾನ್ ಅವರ ಮಾತುಗಳು ಹೀಗಿವೆ; 'ಪಂಚತಂತ್ರ' ಪ್ರಪಂಚ ಸಾಹಿತ್ಯದ ಒಂದು ಅಮರ ಕೃತಿ. ಅದು ಸಾವಿರಾರು ವರ್ಷಗಳಿಂದ ಎಳೆಯರಿಗೆ ಆನಂದವನ್ನೂ, ಹಿರಿಯರಿಗೆ ಜ್ಞಾನವನ್ನೂ ನೀಡುತ್ತಾ ಬಂದಿದೆ. ಕನ್ನಡದಲ್ಲೂ ಸಹ. ಆದರೆ ಟಿ.ಎಸ್ .ಛಾಯಾಪತಿ ಅವರು ಅದನ್ನು ತಿಳಿಯಾದ ಕನ್ನಡದಲ್ಲಿ ಸ್ವಾರಸ್ಯಕರವಾಗಿ ಉಪಯುಕ್ತವಾಗಿ ರಚಿಸಿದ್ದಾರೆ. ಇದನ್ನು ಓದುವುದರಿಂದ ಕನ್ನಡ ನಾಡಿನ ಮಕ್ಕಳ ಭಾಷಾಜ್ಞಾನ, ವಿವೇಕ ಹೆಚ್ಚುತ್ತವೆಂದು ಹೇಳಬಹುದು'. ಈ ಕುರಿತು ಒಬ್ಬೊಬ್ಬರೂ ಒಂದೊಂದು ಬಗೆಯಲ್ಲಿ ಯೋಚಿಸಿದ್ದಾರೆ.

ಕಾಪಿರೈಟ್ ಇಲ್ಲದ ಕಾರಣ ಪ್ರಕಾಶಕರು ಪದೇ ಪದೇ ಇವನ್ನು ಮುದ್ರಿಸುತ್ತಾ ಬಂದಿದ್ದಾರೆ, ಈಗಲೂ ಮುದ್ರಿಸುತ್ತಿದ್ದಾರೆ. ಇವಕ್ಕೆ ಮಾರುಕಟ್ಟೆ ಸದಾ ತೆರೆದಿರುವುದೇ ಆಗಿದೆ. ಶಾಲಾ ಗ್ರಂಥಾಲಯಗಳು, ಸಾರ್ವಜನಿಕ ಗ್ರಂಥಾಲಯಗಳು ಈ ಬಗೆಯ ಪುಸ್ತಕಗಳನ್ನು ಹೆಚ್ಚು ವಿಚಾರಮಾಡದೆ ಖರೀದಿ ಮಾಡುತ್ತಲೇ ಬಂದಿದ್ದಾರೆ.

ಪುಟ್ಟ ಮಕ್ಕಳನ್ನು ಗಮನದಲ್ಲಿ ಇರಿಸಿಕೊಂಡಂತೆ, ಬೆಳೆದ ಮಕ್ಕಳನ್ನು ಗಮನದಲ್ಲಿರಿಸಿ ವಿವಿಧ ಗಾತ್ರಗಳಲ್ಲಿ ಈ ಕತೆಗಳು ಮುದ್ರಣಗೊಳ್ಳುತ್ತಾ ಬಂದಿವೆ. ಚಿತ್ರಮಯವಾಗಿಯೂ ಅಂದವಾಗಿ ಆಕರ್ಷಿಸುವಂತೆ ಮುದ್ರಿತವಾಗುತ್ತಾ ಬಂದಿವೆ. ಇಂಥ ನಾನಾ ಬಗೆಗಳನ್ನು ಕಲೆ ಹಾಕಿದರೆ ಈ ಕುರಿತು ಹೆಚ್ಚಿನ ಮಾಹಿತಿ ಸಂಗ್ರಹವಾಗುತ್ತದೆ. ಅಂತೂ ಮಕ್ಕಳನ್ನೇ ಗಮನದಲ್ಲಿರಿಸಿ ಬಹು ಸಂಖ್ಯೆಯಲ್ಲಿ ಬಂದಿರುವುದು ಮಾರುಕಟ್ಟೆಯನ್ನು ನೋಡಿದಾಗ ಕಂಡುಬರುತ್ತದೆ.

ಇಲ್ಲಿನ ಕತೆಗಳ ಸಂದೇಶ ಒಟ್ಟು ಮಾನವನ ಬದುಕಿಗೆ ಇದ್ದು, ಅದು ಬಹಳಷ್ಟು ಸಲ ಗಂಭೀರವಾದ ಸಂಗತಿಗಳನ್ನು ಹೊಂದಿದೆ. ಆಗಿದ್ದೂ ಈ ಕತೆಗಳಲ್ಲಿ ಪ್ರಾಣಿಗಳು ಓಡಾಡಿಕೊಂಡು, ಮಾತಾಡಿಕೊಂಡು, ಏನೆಲ್ಲಾ ಚತುರತೆ ತೋರಿಸುತ್ತಾ, ಜಾಣ್ಮೆ ತೋರಿಸುತ್ತವೆ. ಅಲ್ಲದೆ, ಮೋಸಹೋಗುತ್ತಾ, ಹೊಂಚು ಹಾಕುತ್ತಾ ಅಂತೂ ನಾನಾ ಬಗೆಯಲ್ಲಿ ವರ್ತಿಸುವುದರಿಂದ ಮಕ್ಕಳಿಗೆ ಸೊಗಸಿನ, ಚಕಿತತೆಯ ಸಂಗತಿಗಳಾಗಿ ಸಹಜವಾಗಿ ಫ್ಯಾಂಟಸಿಯ ಗುಣವಾಗಿ ಕಾಣುತ್ತದೆ. ಜೊತೆಗೆ ಪ್ರತಿ ಕತೆಯೂ ಒಂದಲ್ಲಾ ಒಂದು ಸಂದೇಶವನ್ನು ಹೇಳುವಂತೆಯೇ ಇದೆ. ಹಾಗಾಗಿಯೇ ಇವನ್ನು ಮಕ್ಕಳಿಗೆ ಎಂದು ಭಾವಿಸಲು ಅನುಕೂಲವೂ ಆಗಿದೆ. ಮಕ್ಕಳು ಇವನ್ನು ರಂಜನೀಯವಾಗಿ ಸ್ವೀಕರಿಸಿದ್ದಾರೆ. ಅಲ್ಲಿನ ತಂತ್ರಗಳಿಗೆ ಅವರು ಎಷ್ಟು ಸ್ಪಂದಿಸುತ್ತಾರೆ ಎನ್ನುವುದು ಅನುಮಾನದ ಸಂಗತಿ. ಮಕ್ಕಳ ವಯೋಸಂಗತಿಗಳನ್ನು ಅನುಸರಿಸಿ ಇದು ನಡೆಯುವ ಸಂಗತಿಯಾಗಿದೆ.

ಬಹು ಮುಖ್ಯವಾಗಿ ಪಂಚತಂತ್ರ ಜಗತ್ತಿನಾದ್ಯಂತ ಪ್ರಚುರವಾಗಿರುವುದು ಮಕ್ಕಳ ಲೋಕದ ಆವೃತ್ತಿಗಳಿಂದ ಅಲ್ಲ. ಅದು ದೊಡ್ಡವರ ನಡುವೆಯೇ, ಬಹು ಮುಖ್ಯವಾಗಿ ವ್ಯಾಪಾರದ ದೆಸೆಯಿಂದ ಹಡಗಿನಲ್ಲಿ ಪಯಣಿಸುತ್ತಾ ಸಾಗುತ್ತಿದ್ದ ಜನರ ನಡುವೆ ಬಳಕೆಯಾಗುತ್ತಾ ವಿಸ್ತರಿಸಿಕೊಂಡಿತು. ಹೊರದೇಶಗಳಲ್ಲಿಯೂ ಜನರ ಮಾನಸದಿಂದ ಸ್ವೀಕೃತವಾದುದು ದೊಡ್ಡವರ ನಡುವೆಯೇ. ಭಾರತದಲ್ಲಿ ಮುದ್ರಣ ವ್ಯವಸ್ಥೆ, ಶಾಲಾ ವ್ಯವಸ್ಥೆ ಬರತೊಡಗಿದಂತೆ ಅವರಿಗೆ ತಕ್ಷಣಕ್ಕೆ ಕಂಡ ಪಠ್ಯ ಇದಾಗಿರುವ ಸಾಧ್ಯತೆ ಇದೆ. ಈಗ ಕಾಣುವಂತೆ ಮಾರುಕಟ್ಟೆಯಲ್ಲಿ ನಿಗದಿತವಾಗಿ ಇರತೊಡಗಿದ್ದು ಮಕ್ಕಳ ಓದಿನ ಪರಿಸರ ತೆರೆದುಕೊಳ್ಳುತ್ತಿದ್ದಂತೆ; ಅದು ಮಕ್ಕಳಿಗಾಗಿ ಪ್ರಸ್ತುತ ಪಡುವಾಗ ಕುಬ್ಜವಾಗಿ ಮಕ್ಕಳನ್ನು ರಂಜಿಸುವ ನಿಟ್ಟಿನಲ್ಲಿಯೇ ಹೆಚ್ಚು ಕೆಲಸ ಮಾಡಿದಂತಿದೆ. ಈಸೋಪನ ನೀತಿ ಕತೆಗಳಂತೆಯೇ ಇವೂ ಕಾಣಿಸಿಕೊಂಡಿದೆ. ಈಸೋಪನ ನೀತಿ ಕತೆಗಳಿಗೂ ಮೂಲ ಪಂಚತಂತ್ರದ ಕತೆಗಳೇ ಎನ್ನುವ ಅಭಿಪ್ರಾಯವೂ ಇವೆ.

೫.೩.೧. ಪ್ರಾಣಿ ಪಕ್ಷಿ ಕತೆಗಳನ್ನು ಹೊರತು ಪಡಿಸಿ

ಪಂಚತಂತ್ರ ಕತೆಗಳೆಲ್ಲವೂ ಪ್ರಾಣಿ ಪಕ್ಷಿಗಳಿಂದಲೇ ತುಂಬಿವೆ. ಆದರೂ ಈ ಕಥೆಗಳ ಮಧ್ಯದಲ್ಲಿ ಮನುಷ್ಯರ, ನಿಸರ್ಗದ ಪಾತ್ರಗಳು ಬರುತ್ತವೆ. ಪಂಚತಂತ್ರ ಫ್ಯಾಂಟಸಿಗೆ ಇವು ಪೂರಕವಾಗಿವೆ. 'ವಾಯು ಮತ್ತು ಸೂರ್ಯ' ಎನ್ನುವ ಕತೆಯೊಂದರಲ್ಲಿ ಗಾಳಿ ಮತ್ತು ಸೂರ್ಯರಿಬ್ಬರಲ್ಲಿ ಬಲಶಾಲಿ ಯಾರು ಎನ್ನುವ ವಿಚಾರದಲ್ಲಿ ವಿವಾದ ಉಂಟಾಗಿ ಅವರ ಬಲ ಪ್ರದರ್ಶನಕ್ಕೆ ಪ್ರಯಾಣಿಕನೊಬ್ಬನನ್ನು ಆಯ್ದುಕೊಂಡು ಶಕ್ತಿಯನ್ನು ಪ್ರಯೋಗಿಸುವ ತೀರ್ಮಾನಕ್ಕೆ ಬರುತ್ತಾರೆ. 'ಆ ಮನುಷ್ಯನ ಮೇಲೆ ನಮ್ಮ ಶಕ್ತಿಯನ್ನು ಪ್ರಯೋಗಿಸೋಣ. ಯಾರು ಅವನ ಅಂಗಿಯನ್ನು ಕಳಚುವಂತೆ ಮಾಡುವರೋ ಅವರು ಜಯಶಾಲಿಯಾದಂತೆ'[೧೦] ಸೂರ್ಯನ ಈ ಸವಾಲಿನಲ್ಲಿಯೇ ತಂತ್ರವಿದೆ. ಆ ತಂತ್ರ ಸೂರ್ಯನಿಗೆ ಪೂರಕವಾಗಿರುವುದರಿಂದ ಸೂರ್ಯ ಸಹಜವಾಗಿ ಗೆಲ್ಲುತ್ತಾನೆ.

ಮತ್ತೊಂದು ಮನುಷ್ಯರನ್ನು ಕೇಂದ್ರೀಕರಿಸಿದ ಕಥೆ 'ಬುದ್ಧಿಗೇಡಿ ಹಾಗೂ ಠಕ್ಕರು'. ಜನಪದ ಕಥೆಗಳು ಮತ್ತು ಪಂಚತಂತ್ರ ಕತೆಗಳು ಒಂದು ಮತ್ತೊಂದಕ್ಕೆ ಪೂರಕ ಮತ್ತು ಪ್ರಭಾವವನ್ನು ಬೀರಿವೆ. ಪಂಚತಂತ್ರದ ಈ ಕಥೆ 'ಮೂವರು ಕಳ್ಳರು ಎನ್ನುವ ಹೆಸರಿನಲ್ಲಿ ಮೇವುಂಡಿ ಮಲ್ಲಾರಿಯವರಿಂದ ಜನಪದ ಕಥೆಯಾಗಿ ಪ್ರಚಲಿತವಿದೆ. ಇದೊಂದು ಜಾಣತನ ಮತ್ತು ಮೋಸಗಾರಿಕೆಯ ವಾಸ್ತವದ ಕತೆಯೇ ಆದರೂ ಈ ಬಗೆಯ ಇಂದು ನಡೆಯುವ ಸಂಗತಿಗಳಲ್ಲವಾದ್ದರಿಂದ ಅದು ವಾಸ್ತವೇತರ ಸಂಗತಿಯೇ ಆಗಿ ಫ್ಯಾಂಟಸಿ ಕಥೆ ಎನಿಸಿಕೊಳ್ಳುತ್ತದೆ. ಮೂರ್ಖತ್ವವನ್ನು ತೋರಿಸುವ ಭರದಲ್ಲಿ ಇಲ್ಲಿನ ಪಾತ್ರಗಳು ಎಷ್ಟು ಮೂರ್ಖರಾಗಿರುತ್ತಾರೆ ಎಂದರೆ; 'ಶಾಲಾ ಬಾಲಕನೂ ಅವನನ್ನು ಸುಲಭವಾಗಿ ಮೂರ್ಖನನ್ನಾಗಿ ಮಾಡಬಹುದಿತ್ತು.'[೧೧] ಈ ಬಗೆಯ ಮುಗ್ಧತೆಯ ನಡೆವಳಿಕೆಗಳು ಪಂಚತಂತ್ರ ಕಥೆಗಳನ್ನು ಮಕ್ಕಳಿಗಾಗಿ ಪ್ರಚುರಪಡಿಸಲು ಕಾರಣವಾಗಿವೆ.

೫.೩.೨. ಕಥಾ ಸಂವಿಧಾನ

ಪಂಚತಂತ್ರ ಕಥೆಗಳು ಒಂದು ಪೂರ್ವ ನಿರ್ಧರಿತ ಚೌಕಟ್ಟಿನಲ್ಲಿ ಬಂಧಿಯಾಗಿವೆ. ಪ್ರತಿಯೊಂದು ಕಥೆಯೂ ಯಾವುದೋ ಸಮಸ್ಯೆಯೊಂದರಿಂದ ಆರಂಭವಾಗುತ್ತವೆ, ಸಮಸ್ಯೆಗೆ ಕಾರಣವಾದುದರ ಹುಡುಕಾಟವಾಗುತ್ತದೆ. ಒಳ್ಳೆಯದರ ಮತ್ತು ಕೆಡುಕಿನ ಚರ್ಚೆ ಮೂಲಕ ಕಥೆ ಬೆಳೆಯುತ್ತವೆ ಕೊನೆಗೆ ಕೆಡುಕಿಗೆ, ತಪ್ಪಿಗೆ ಶಿಕ್ಷೆಯಾಗುತ್ತದೆ. ಅಂತ್ಯದಲ್ಲಿ ನೀತಿಯೊಂದು ಕಡ್ಡಾಯವಾಗಿ ಬಂದು ನಿಲ್ಲುತ್ತದೆ. 'ಕಾಗೆಯ ಉಪಾಯ' ಎನ್ನುವ ಕಥೆಯನ್ನು ಈ ಹೇಳಿಕೆಗೆ ಉದಾಹರಣೆಯಾಗಿ ನೀಡಬಹುದು; ಒಂದು ದೊಡ್ಡ ಅರಳೀ ಮರದಲ್ಲಿ ಕಾಗೆಗಳು ಮರಿಗಳೊಡನೆ ವಾಸಿಸುತ್ತಿದ್ದವು. ಅದೇ ಮರದ ತಳದಲ್ಲಿದ್ದ ಬಿಲದಲ್ಲಿ ಕೃಷ್ಣಸರ್ಪವೊಂದು ವಾಸವಾಗಿತ್ತು. ಕಾಗೆಗಳು ಮರಿ ಇಟ್ಟಾಗಲೆಲ್ಲಾ ಕೃಷ್ಣಸರ್ಪವು ಮೊಟ್ಟೆ–ಮರಿಗಳನ್ನೆಲ್ಲಾ ತಿನ್ನುತ್ತಿತ್ತು. ಆಗ ಕಾಗೆಗಳು ತಮ್ಮ ಸಮಸ್ಯೆಯನ್ನು ನರಿಯ ಬಳಿ ಹೇಳಿಕೊಂಡವು. 'ನಮ್ಮ ದುಃಖಕ್ಕೆ ಮೂಲ ಕಾರಣ ಒಂದು ಕೃಷ್ಣಸರ್ಪ. ಅದು ನಮ್ಮ ಬೆನ್ನು ಹತ್ತಿದೆ. ನಾವಿಟ್ಟ ಮೊಟ್ಟೆ–ಮರಿಗಳೆಲ್ಲವನ್ನೂ ಅದು ತಿನ್ನುತ್ತಿದೆ'[೧೨] ಈ ಸಮಸ್ಯೆಗೆ ಪರಿಹಾರವನ್ನು ನರಿ ಹುಡುಕಲು ಸಹಾಯ ಮಾಡುತ್ತದೆ. 'ನಾನು ಹೇಳುವುದನ್ನು ಗಮನವಿಟ್ಟು ಆಲಿಸಿ, ಅರಮನೆಯ ರಾಣಿಯು ಆಭರಣಗಳನ್ನೆಲ್ಲಾ ಎತ್ತಿಕೊಳ್ಳಿ, ಸರ್ಪವಿರುವ ಬಿಲಕ್ಕೆ ಹಾಕಿ'[೧೩] ನರಿಯ ಈ ಸಲಹೆ ಕಾಗೆ ದಂಪತಿಗಳಿಗೆ ಹಿಡಿಸಿತು. ಅವು ಹಾಗೆಯೇ ಮಾಡಿದವು.

ಭಟರು ರಾಣಿಯ ಆಭರಣಗಳನ್ನು ಹೊರ ತೆಗೆಯಲು ಸರ್ಪವಿರುವ ಹುತ್ತವನ್ನು ಹೊಡೆದು ಸರ್ಪವನ್ನೂ ಕೊಲ್ಲಿದರು. ಇಲ್ಲಿ ಕಥೆಗಳ ಆತ್ಮವಾಗಿ ಫ್ಯಾಂಟಸಿ ಬಳಕೆಯಾಗಿದೆ. ಪ್ರಾಣಿಗಳ ಸಂಭಾಷಣೆಯ ರೂಪದಲ್ಲಿ, ಗರ್ಭ ಬದಲಾಯಿಸಿಕೊಳ್ಳುವುದು, ಇಲಿಯನ್ನು ಹೆಣ್ಣಾಗಿ ಮಾಡಿದ್ದು ಹೀಗೇ ಯಾವುದಾದರೂ ಒಂದು ಚಮತ್ಕಾರ ಕಥೆಗಳಲ್ಲಿ ತನ್ನ ತಾನೇ ಬರುತ್ತದೆ. ಕಥೆಗಳ ಆರಂಭ, ಅಂತ್ಯ ಗಮನಿಸಿದರೆ ವಡ್ಡಾರಾಧನೆಯನ್ನು ನೆನಪಿಸುತ್ತವೆ.

೫.೩.೩. ಪಾತ್ರ ಮತ್ತು ಫ್ಯಾಂಟಸಿ

ಪಂಚತಂತ್ರ ಕಥೆಗಳ ಬಹುಪಾಲು ಪಾತ್ರ ನಿರ್ವಹಣೆ ಮಾಡಿದ್ದು ಪ್ರಾಣಿ ಪಕ್ಷಿಗಳೇ, ದುರ್ಗುಣಗಳನ್ನು ಮನುಷ್ಯರಿಗೆ ಆರೋಪಿಸುವುದರ ಬದಲು ಪ್ರಾಣಿಪಕ್ಷಿಗಳಿಗೆ ಆರೋಪಿಸಲಾಗಿದೆ. ಮೂಲ ಉದ್ದೇಶವಾದ ನೀತಿಯನ್ನು ಕಥೆಯಲ್ಲಿ ಒಳಗೊಳ್ಳುವಂತೆ ಮಾಡಲು ಮತ್ತು ಕಥೆಯಲ್ಲಿ ಬರುವ ಕೆಟ್ಟದ್ದನ್ನು ಪ್ರತಿನಿಧಿಸಲು ಮನುಷ್ಯೇತರ ಜೀವಿಗಳು ಸೂಕ್ತ, ನಿರ್ವಿವಾದವೆಂದು ಪರಿಗಣಿಸಿ ಪ್ರಾಣಿ ಪಕ್ಷಿಗಳನ್ನು ಹೆಚ್ಚು ತಂದಿರುವ ಸಾಧ್ಯತೆ ಇದೆ. ಹಾಗೆಂದು ಒಳ್ಳೆಯ ಗುಣ ಪ್ರತೀತಗಳಿಗೆ ಬಳಕೆಯಾಗಿಲ್ಲವೆಂದಲ್ಲ; ಕೆಟ್ಟದ್ದರ ಪ್ರತಿನಿಧಿಗಳಾಗಿ ಬಾಯಿ ಬಾತುಕ ಆಮೆ...ಇದ್ದಂತೆ ಒಳ್ಳೆಯದರ ಪ್ರತೀಕಗಳಾಗಿದ ಮೊಲ, ಕೋತಿ, ಹಸು ಹೀಗೆ ಬಳಸಲ್ಪಟ್ಟಿವೆ. ನರಿಯನ್ನು ಬಹುತೇಕ ಕಥೆಗಳಲ್ಲಿ ಕುತಂತ್ರಿಯೆಂದೇ ಬಿಂಬಿಸಲಾಗಿದೆ.

ಬ್ರಾಹ್ಮಣ ಪಾತ್ರ ಪಂಚ ತಂತ್ರ ಕಥೆಗಳಲ್ಲಿ ಬಹುವಾಗಿ ಬಳಕೆಯಾದ ಮಾನುಷ ವರ್ಗವಾಗಿದೆ. ಅದರಲ್ಲೂ ಬ್ರಾಹ್ಮಣನನ್ನು ಬಡ ಬ್ರಾಹ್ಮಣನೆಂದೇ ಬಿಂಬಿಸಲಾಗಿದೆ. ವಿಷ್ಣುಶರ್ಮ ಪಂಚತಂತ್ರ ಹೇಳಿದ ಕಾಲದಲ್ಲಿ ಬ್ರಾಹ್ಮಣರ ಪರಿಸ್ಥಿತಿ ಆಗಿದ್ದಿರಬಹುದು ಎನ್ನುವುದರ ಪ್ರತೀಕವೂ ಆಗಿರಬಹುದು. ಇಲ್ಲವೇ ಸ್ವತಃ ಬ್ರಾಹ್ಮಣನಾದ ವಿಷ್ಣುಶರ್ಮ ಬೇರೊಂದು ಜಾತಿಯ ವ್ಯಕ್ತಿಗಳನ್ನು ಟೀಕಿಸಿ ವಿವಾದ ಕಟ್ಟಿಕೊಳ್ಳುವುದಕ್ಕಿಂತ ಸ್ವಜಾತಿ ನಿಂದನೆಯೂ ಬೇಸೆಂದು ಭಾವಿಸಿಯೂ ಬ್ರಾಹ್ಮಣ ಪಾತ್ರ ಹೆಚ್ಚಾಗಿ ಸೃಷ್ಟಿಸಿರುವ ಸಾಧ್ಯತೆ ಇದೆ. ಇದು ಫ್ಯಾಂಟಸಿಯ ಸ್ವರೂಪಕ್ಕೆ ಯಾವ ಕೋನದಿಂದಲೂ ಸಹಕರಿಸುವುದಿಲ್ಲ. ಕುದುರೆ ಕಳ್ಳ ಮತ್ತು ರಾಕ್ಷಸ ಕಥೆಯಲ್ಲಿ ಲೋಯರ್ ಫ್ಯಾಂಟಸಿ ಇಣುಕಿದೆ.

ರಾಕ್ಷಸನೊಬ್ಬ ತನಗಿಂತ ಬಲಶಾಲಿಯಾದ ರಾಕ್ಷಸನನ್ನು ಹಿಡಿದು ಕೊಲ್ಲಲು ಕುದುರೆಯಾಗಿ ಬದಲಾಗುತ್ತಾನೆ. 'ಒಂದು ರಾತ್ರಿ ಕುದುರೆಯ ಕಳ್ಳ ಕುದುರೆಗಳ ಲಾಯಕ್ಕೆ ಬಂದ. ತನ್ನೊಡನೆ ಒಯ್ಯಲು ಒಂದು ಉತ್ತಮವಾದ ಕುದುರೆಗಾಗಿ ಹುಡುಕಿದ. ಅವನು ಈ ರಾಕ್ಷಸ ಕುದುರೆಯನ್ನು ಆರಿಸಿದ. ಅದನ್ನು ಏರಿ ಹೊರಟ. ಈಗ ತನ್ನ ಮೇಲೆ ಸವಾರಿಮಾಡುತ್ತಿರುವವನೇ ಬಲಶಾಲಿ ರಾಕ್ಷಸನಾಗಿರಬೇಕು ಎಂದು ಭಾವಿಸಿದ.'[೧೪] ಆದರೆ ಕುದುರೆ ಕಳ್ಳನಿಗೆ ತಾನು ಏರಿರುವುದು ರಾಕ್ಷಸ ಕುದುರೆ ಎಂದು ತಿಳಿದ ಮೇಲೆ ಆಳದ ಮರದ ರೆಂಬೆಯೊಂದನ್ನು ಹಿಡಿದುಕೊಂಡು ಮರದ ಮೇಲೇರಿದ. ರಾಕ್ಷಸನ ಸ್ನೇಹಿತ ಕಪಿ ರಾಕ್ಷಸನಿಗೆ ನಿಜ ತಿಳಿಸಿದರೂ, ಕೆಲವು ಸಲ ಯೋಚಿಸುವುದು ಒಂದಾದರೆ ಆಗುವುದು ಮತ್ತೊಂದು ಎನ್ನುವಂತೆ, 'ಕಳ್ಳನು ಹಿಡಿದು ನೇತಾಡುತ್ತಿದ್ದ ರೆಂಬೆ ಕಪಿಯ ಬಾಲಕ್ಕೆ ಬಲವಾಗಿ ಹೊಡೆಯಿತು. ಕಪಿ ನೋವಿನಿಂದ ಕಿರುಚಿತು. ರಾಕ್ಷಸನಿಗೆ ತಬ್ಬಿಬ್ಬಾಯಿತು. ಅವನು ನಿಶ್ಚಯವಾಗಿಯೂ ಬಲಶಾಲಿ ರಾಕ್ಷಸನೇ, ಅವನು ತನ್ನನ್ನು ಕೊಲ್ಲುವನು; ಎಂದು ಯೋಚಿಸಿ ತನ್ನ ಜೀವ ಉಳಿಸಿಕೊಳ್ಳಲು ವೇಗವಾಗಿ ಓಡಿದ.'[೧೫] ಈ ಬಗೆಯ ಉದಾಹರಣೆಗಳು ಪಂಚತಂತ್ರ ಕಥೆಗಳ ಫ್ಯಾಂಟಸಿ ಸ್ವರೂಪವನ್ನು ಮತ್ತೊಂದು ನೆಲೆಗೆ ಮುಟ್ಟಿಸುತ್ತವೆ. ಪ್ರಾಣಿ ಕಥೆಗಳಲ್ಲಿ ಫ್ಯಾಂಟಸಿ ಬಳಕೆಯಾದಷ್ಟು ಮಾನುಷ ವರ್ಗದ ವಾಸ್ತವ ಮಾದರಿ ಕಥೆಗಳಲ್ಲಿ ಫ್ಯಾಂಟಸಿಗೆ ಹೆಚ್ಚು ಒತ್ತು ಕೊಟ್ಟಿಲ್ಲ. ಆದರೂ ಅಪವಾದವೆನ್ನುವಂತೆ ಕೆಲ ಕಥೆಗಳಲ್ಲಿ ಫ್ಯಾಂಟಸಿ ಬಂದು ಹೋಗುತ್ತದೆ.

೫.೪. ಹೊಸಗಾಲದ ಪ್ರಾಣಿಲೋಕದ ಫ್ಯಾಂಟಸಿ ಮತ್ತು ಪಂಚತಂತ್ರದ ಫ್ಯಾಂಟಸಿ

ಹೊಸಗಾಲದ ಪ್ರಾಣಿ ಲೋಕ ಕಂಡಿರುವುದೇ ಪಾಶ್ಚ್ಯಾತ್ಯರಲ್ಲಿ ಎನ್ನುವಷ್ಟು ವೈವಿಧ್ಯಮಯವಾಗಿ, ತೀರಾ ಹೊಸಬಗೆಯಲ್ಲಿ, ನಮ್ಮ ವರ್ತಮಾನದ ಹತ್ತಿರಕ್ಕೆ ತಂದುಕೊಂಡು, ದೃಶ್ಯಸಂವಹನದ ವಿಶೇಷತೆಗಳನ್ನೂ ಆಲಂಗಿಸಿಕೊಂಡು ಕಂಡುದನ್ನು ಇಲ್ಲಿ ಹೇಳಲೇಬೇಕು. ಪಂಚಂತಂತ್ರದಂಥ ಪ್ರಾಣಿಕತೆಗಳನ್ನು ಸೃಷ್ಟಿಸಿದ ಭಾರತ ದೇಶದಲ್ಲಿ ಈ ಬಗೆಯ ಹೊಸತು ಕಾಣಿಸಲಿಲ್ಲ. ಆದರೆ ನಮ್ಮ ಮಕ್ಕಳು ಬಹು ಮುಖ್ಯವಾಗಿ ಟಿವಿಯಂಥ ಮಾಧ್ಯಮದಿಂದ ಇವನ್ನು ಆಸಕ್ತಿಯಿಂದ

ವೀಕ್ಷಿಸತೊಡಗಿರುವುದು ವಾಸ್ತವ ಸತ್ಯವಾಗಿದೆ. ಈ ಹೊಸಗಾಲದ ಪ್ರಾಣಿಲೋಕಕ್ಕೆ ಪಂಚತಂತ್ರವೇ ಆಗಲಿ ಗ್ರೀಕ್ ಅಂಥ ಪರಂಪರೆಯ ಕಲ್ಪನೆಗಳಿಗೂ ಅಂತರದಲ್ಲಿ ತನ್ನನ್ನ ಕಂಡುಕೊಂಡುದು ಎನ್ನುವುದು ಸ್ಪಷ್ಟವಿದೆ. ಅಲ್ಲಿ ಪೌರಾಣಿಕ ಸಂಗತಿಗಳಿಗೆ, ಧಾರ್ಮಿಕ ಸಂಗತಿಗಳಿಗೆ ಹೊಂದಿಕೆ ಆಗಿ ಅವು ಸೃಷ್ಟಿಗೊಂಡರೆ ಇಲ್ಲಿ ವಾಸ್ತವದ ಸುತ್ತ ಪ್ರಾಣಿ ಲೋಕ ಸಹಜವಾಗಿ ಸ್ಪಂದಿಸುತ್ತಾ ಅರಳಿದೆ.

ಪಂಚತಂತ್ರ ಈ ನಿಟ್ಟಿನಲ್ಲಿ ಹೊಸಗಾಲದ ಪ್ರಾಣಿ ಕತೆಗಳ ಫ್ಯಾಂಟಸಿಯಿಂದ ಹೇಗೆ ಭಿನ್ನವಾಗಿ ಬಿಡುತ್ತದೆ ಎನ್ನುವುದು ಸ್ಪಷ್ಟವಿದೆ. ಅದು ಹಿಂದಿನ ಬದುಕಿನ ಆಶೋತ್ತರಗಳಿಗೆ ಹೆಚ್ಚು ತೆರೆದುಕೊಳ್ಳುತ್ತದೆ. ರಾಜರ ಮಕ್ಕಳಿಗೆ ರಾಜನೀತಿಯ ಉದ್ದೇಶದಿಂದಲೇ ಹುಟ್ಟಿಕೊಂಡು ಅದರ ಮೂಲದಲ್ಲಿದ್ದಾಗಲೂ, ಅದು ಒಟ್ಟಾರೆ ಮನುಷ್ಯನ ಬದುಕಿನ ಸಂಗತಿಗಳಿಗೆ ಸ್ಪಂದಿಸುತ್ತಾ ಬದುಕಿನ ಪಾಠವಾಗಿ ನಿರೂಪಿತವಾಗಿದೆ.

ಹೊಸಗಾಲದ ಫ್ಯಾಂಟಸಿ ಮಕ್ಕಳ ನಡುವೆ ವಿಶೇಷವಾಗಿ ಆಪ್ಯಾಯಮಾನವಾಗಿ ತೆರೆದುಕೊಳ್ಳುವ ವಿಶೇಷತೆಗಳನ್ನು ಹೊಂದಿ ತನ್ನ ಪ್ರತ್ಯೇಕತೆಯ ಅಗತ್ಯವನ್ನು ಒತ್ತಿ ಹೇಳುತ್ತದೆ. 'ಮಿಕಿಮೌಸ್' 'ಡೊನಾಲ್ಡ್ ಡಕ್' ಅಂಥ ವಿಶಿಷ್ಟ ಆಕೃತಿಯಲ್ಲಿ ಅರಳಿದ ವಿಶಿಷ್ಟ ವ್ಯಕ್ತಿತ್ವದಿಂದ ಕಂಗೊಳಿಸುವ ಇಲಿಯೇ ಆಗಲಿ ಬಾತೇ ಆಗಲಿ, ಟಾಮ್ ಜೆರ್ರಿಯಾಗಿ ಚುರುಕಿನಿಂದ ಓಡಾಡಿಕೊಂಡು ರಂಜಿಸುವ ಇಲಿ ಬೆಕ್ಕುಗಳ ಪಾತ್ರವಾಗಲಿ, ಅತ್ಯಂತ ಸೂಕ್ಷ್ಮದ ಪಾತ್ರವಾಗಿ ಎಲ್ಲರನ್ನೂ ಸೂರೆಗೊಂಡ ಸ್ಟೂವರ್ಟ್ ಇಲಿಯಾಗಲಿ ಇವೆಲ್ಲ ದೊಡ್ಡವರನ್ನು ರಂಜಿಸುತ್ತಾ ಮಕ್ಕಳನ್ನು ಅಪಾರವಾಗಿ ಆವರಿಸಿಕೊಂಡಿರುವುದು ಕಂಡು ಬರುತ್ತದೆ.

ಹೀಗೆ ಪಂಚತಂತ್ರಗಳ ಫ್ಯಾಂಟಸಿ, ದೊಡ್ಡವರ ಬದುಕಿನ ಆಶಯಗಳಿಗೆ, ಬಹು ಮುಖ್ಯವಾಗಿ ಕತೆಯ ಮಾದರಿಗಳನ್ನು ಅವಲಂಬಿಸಿ, ಕೆಲ ನಿರ್ದಿಷ್ಟ ಉದ್ದೇಶಗಳಿಗಾಗಿ ತೆರೆದುಕೊಂಡರೆ; ಹೊಸಗಾಲದ ಫ್ಯಾಂಟಸಿಯು ದೃಶ್ಯಮಾಧ್ಯಮದ ವಿಶೇಷಗಳೂ, ಅವುಗಳಿಂದ ವಿಶಿಷ್ಟ ಆಕೃತಿಗಳು, ಮತ್ತು ಹೆಚ್ಚು ಹೆಚ್ಚು ಮಕ್ಕಳದೇ ಮನೋಲೋಕವನ್ನು ಅಪ್ಪಿಕೊಳ್ಳುವ ಪ್ರತ್ಯೇಕತೆಯನ್ನು ಬಹು ದೊಡ್ಡದಾಗಿ ಹೇಳಿವೆ. ಬದುಕಿನ ದೊಡ್ಡ ದೊಡ್ಡ ನೀತಿಯನ್ನು ಇವು ಹೇಳಲು ಹೋಗಿಲ್ಲ. ಬದಲಿಗೆ ನಮ್ಮ ನಡುವೆಯ ಸಹಜದ ಸಂಗತಿಗಳಿಗೆ ಮಾತಾಗುತ್ತಿವೆ. ರಂಜನೆಗೆ ತೆರೆದುಕೊಂಡಂತೆಯೇ ಮಕ್ಕಳ ಸಹಜದ ಸ್ವಭಾವಲೋಕಕ್ಕೆ ಹತ್ತಿರವಾಗಿ ಸ್ಪಂದಿಸುತ್ತಿವೆ.

ಹೀಗೆ ಪಂಚತಂತ್ರ ಕನ್ನಡದಲ್ಲಿ ಮಕ್ಕಳಿಗಾಗಿ ರಚನೆಯಾಗಿಲ್ಲದಿದ್ದರೂ ಮಕ್ಕಳ ಸಾಹಿತ್ಯದ ಅವಿಭಾಜ್ಯ ಅಂಗವಾಗಿ ಬೆಳೆದದ್ದು ಅದರ ಅವಶ್ಯಕತೆಯನ್ನು ಒತ್ತಿ ಹೇಳುತ್ತದೆ. ಆದರೆ ಬದಲಾದ ಕಾಲ ಘಟ್ಟದಲ್ಲಿ ಪಂಚತಂತ್ರದ ಮೌಲ್ಯಗಳು ಮಕ್ಕಳಿಗೆ ತುಂಬಾ ಹಳತೆನಿಸುವ ಸಾಧ್ಯತೆಯಿದೆ. ಹದಿನೆಂಟನೆಯ ಶತಮಾನದ ಹೊತ್ತಿಗಾಗಲೇ ಪ್ರಾಣಿ ಕಥೆಗಳಲ್ಲಿ ವಿಶಿಷ್ಟ ಬದಲಾವಣೆಯೊಂದನ್ನು ಇಂಗ್ಲಿಷ್‌ನಲ್ಲಿ ತಂದಾಗಿತ್ತು. ಮನುಷ್ಯನಿಗೆ ಪ್ರಾಣಿಗಳನ್ನು ಅನ್ವಯಿಸಿಕೊಳ್ಳುವ ಬಗೆಯಲ್ಲಿ ಕಿಲ್ನರ್

ಡೊರೊಥಿ 'ದಿ ಲೈಫ್ ಅಂಡ್ ಪೆರಂಬುಲೇಷನ್ ಆಫ್ ಎ ಮೌಸ್' ರಚಿಸಿಯಾಗಿತ್ತು. ಹಾಗೆಯೆ ಭಾರತದಲ್ಲಿ ರುಡ್‌ಯಾರ್ಡ್ ಕಿಪ್ಲಿಂಗ್‌ರ ಜಂಗಲ್ ಬುಕ್ ಕೂಡ ಈ ಬಗೆಯಲ್ಲಿ ವ್ಯಾಪಕ ಪ್ರಚಾರ ಪಡೆಯಿತು. ತಂತ್ರಜ್ಞಾನ ಮಾಧ್ಯಮದಲ್ಲಿ ಮಿಕಿಮೌಸ್, ಡೊನಾಲ್ಡ್ ಡಕ್, ಡಿಂಕು, ಇತ್ತೀಚಿನ ಆಂಡಿ ಪಿರ್ಕಿ ಕಥೆಗಳಂತಹ ಎಲ್ಲಾ ಹೊಸ ಚಲನೆಯ ಕಥೆಗಳಲ್ಲಿ ಪಂಚತಂತ್ರದ ನೆರಳು ಇದ್ದೇ ಇದೆ. ಹಾಗಾಗಿ ಇಡೀ ಭಾರತೀಯ ಮಕ್ಕಳ ಸಾಹಿತ್ಯ ಚರಿತ್ರೆಯಲ್ಲಿ ಪ್ರಾಣಿ ಕಥೆಗಳ ಪ್ರಧಾನ ನೆಲೆಗಳಾಗಿ ಪಂಚತಂತ್ರ ನಿಲ್ಲುತ್ತದೆ.

ಕೊನೆ ಟಿಪ್ಪಣಿಗಳು

೧. ಗೋಪಾಲರಾವ್.ಬಿ, ಪಂಚತಂತ್ರ ಕಥಾ ಸಾಗರ, ಪುಟ, iv

೨. ಸಿಪಿಕೆ ಸಂ:, ದುರ್ಗಸಿಂಹ ವಿರಚಿತ ಕರ್ಣಾಟಪಂಚತಂತ್ರಂ' ಉಪೋದ್ಘಾತ ಪುಟಗಳು

3. Kalila And Dimna' – Dr. Nasim Akhtar – journal 'Writer and Illustrator' – Vol 16 – April – June, 1997).

೪. ಗೋಪಾಲ ರಾವ್.ಬಿ, ಪಂಚತಂತ್ರ ಕಥಾ ಸಾಗರ, ಪುಟ, ೧೮

೫. ಅದೇ, ಪುಟ, ೨೯

೬ ಅದೇ, ಪುಟ, ii-iii

೭ ಎನ್.ಗೋಪಾಲಕೃಷ್ಣ ಉಡುಪ, ಎಳೆಯರಿಗಾಗಿ ಪಂಚತಂತ್ರದ ಕಥೆಗಳು, ಪುಟ, ೮೮

೮. ಅದೇ, ಪುಟ, ೯೦

೯. ಮೈಸೂರಿನ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ೧೯೯೮ ಹಾಗೂ ೨೦೧೧ರಲ್ಲಿ ತಂದಿರುವ ಸರಣಿ ಕೃತಿಗಳ ಹಿಂದಿನ ಹೊದಿಕೆಯಲ್ಲಿ ಕೆ. ಎಸ್.ಭಗವಾನ್ ಅವರ ಮಾತುಗಳು.

೧೦. ಎನ್.ಗೋಪಾಲಕೃಷ್ಣ ಉಡುಪ, ಎಳೆಯರಿಗಾಗಿ ಪಂಚತಂತ್ರದ ಕಥೆಗಳು, ಪುಟ, ೮೬

೧೧. ಅದೇ, ಪುಟ, ೭೭

೧೨. ಅದೇ, ಪುಟ, ೧೩

೧೩. ಅದೇ, ಪುಟ, ೧೩

೧೪. ಅದೇ, ಪುಟ, ೧೩೨

೧೫. ಅದೇ, ಪುಟ, ೧೩೩

ಅಧ್ಯಾಯ : ಆರು

ಕನ್ನಡ ಮಕ್ಕಳ ಕಥನ ಸಾಹಿತ್ಯ: ಅನುವಾದ ಮತ್ತು ಫ್ಯಾಂಟಸಿ

ಅಧ್ಯಾಯ : ಆರು

ಕನ್ನಡ ಮಕ್ಕಳ ಕಥನ ಸಾಹಿತ್ಯ: ಅನುವಾದ ಮತ್ತು ಫ್ಯಾಂಟಸಿ

ಪ್ರವೇಶ

ಫ್ಯಾಂಟಸಿ ಭಾರತೀಯ ಪರಿಸರದಲ್ಲಿ ಜನಪದದ ಮಾದರಿಗಳಾಗಿ, ನಮ್ಮ ಪುರಾಣ, ಐತಿಹ್ಯಗಳಲ್ಲಿ ಹರಡಿಕೊಂಡು ವಿಶಿಷ್ಟವಾಗಿದೆ. ಅದು ಸೃಷ್ಟಿಯ ಎಲ್ಲ ವಸ್ತುಗಳನ್ನೂ, ಜೀವ ಪ್ರಪಂಚವನ್ನೂ ಒಳಗುಮಾಡಿಕೊಂಡಂತೆ ವಿಭಿನ್ನವಾಗಿಯೂ ಇದೆ. ಅವಾಸ್ತವವು ನಮ್ಮ ನಡುವೆ ನಡೆಯುವುದಕ್ಕೆ ಹಲವಾರು ಕಾರಣಗಳು ಕಂಡು ಬರುತ್ತವೆ.

ಭಾರತೀಯ ಲೇಖಕರಲ್ಲಿ ಫ್ಯಾಂಟಸಿ ಹೊಸಗಾಲದಲ್ಲಿ ಅನೇಕ ಲೇಖಕರಿಂದ ಬರುತ್ತಿದ್ದರೂ ಅದು ಮಹಾಭಾರತ, ರಾಮಾಯಣ, ಪುರಾಣಗಳಂಥ ಕಥಾ ಹಂದರದ ಆಸರೆಯಲ್ಲೇ ಸಾಧ್ಯವಾಗುತ್ತಿದೆ. ಶಿವ, ಬಾಲಾಜಿ, ಜಯ ಮುಂತಾದವರನ್ನು ಇಲ್ಲಿ ಹೆಸರಿಸಬಹುದು. ಇಂಗ್ಲಿಷಿನಲ್ಲಿಯ ಹಾಗೆ ತೀರಾ ಬೇರೆಯಾದ ಫ್ಯಾಂಟಸಿ ಕನ್ನಡದಲ್ಲಿ ಬರುತ್ತಿಲ್ಲ ಎನ್ನುವ ಚರ್ಚೆಗಳು ಇಲ್ಲಿ ಈಗೀಗ ನಡೆಯುತ್ತಿವೆ. ಇದು ದೊಡ್ಡವರ ಕಥಾ ಲೋಕದಲ್ಲಿ ಮಾತ್ರ ಈ ಚರ್ಚೆಗಳು ನಡೆಯುತ್ತವೆ. ಮಕ್ಕಳ ಜಗತ್ತಿನಲ್ಲಿಯೂ ಕೆಲವೆಲ್ಲ ಈ ಬಗೆಯ ಪ್ರಯೋಗಗಳನ್ನು ನೋಡಬಹುದು. ಕನ್ನಡದಲ್ಲಿ ಮಾತ್ರ ತೀರ ವಿರಳವೇ ಎನ್ನುವಷ್ಟರ ಮಟ್ಟಿಗೆ ಹೊಸ ಪ್ರಯೋಗಗಳನ್ನು ಕಾಣುತ್ತೇವೆ.

ಮಾಡ್ರನ್ ಫ್ಯಾಂಟಸಿ[೧] ಎನ್ನುವುದು, ಹಳೆಯ ಮಾದರಿಗಳ ಮುಂದುವರಿಕೆಯಾದರೂ ಇನ್ನಷ್ಟು ಚಾಚುಗಳನ್ನು ಹೊಂದುತ್ತಾ ವಿಭಿನ್ನವಾಗಿ ನಮ್ಮ ಮುಂದೆ ಕಾಣುತ್ತಾ ಬಂದಿದೆ. ಇದು ಪಾಶ್ಚಾತ್ಯರಲ್ಲಿ ಅದರಲ್ಲಿಯೂ ಇಂಗ್ಲಿಷ್ ವಾತಾವರಣದಲ್ಲಿಯೇ ವಿಶೇಷವಾಗಿ ಕಾಣಿಸಿಕೊಂಡಿದೆ. ಅದು ಅವಾಸ್ತವ ಸಂಭವಗಳ ಮುಂದುವರಿಕೆಯಾಗಿ, ಬದಲಾದ ಬದುಕಿಗೆ ಸ್ಪಂದಿಸುತ್ತಾ ಬಂದಿರುವುದು ಒಂದು ಬಗೆಯಲ್ಲಾದರೆ, ಬದುಕಿನ ದೃಷ್ಟಿಕೋನವನ್ನೇ ಬದಲಿಸುವ ಚಿಂತನೆಗಳು, ವೈಯಕ್ತಿಕ, ಸಾಮಾಜಿಕ ಬದಲಾವಣೆಗಳಿಗೆ ಸ್ಪಂದಿಸುತ್ತಲೂ ಅಗತ್ಯವೆನ್ನಿಸಿದ ರೂಪ ಪಡೆದುಕೊಂಡಿದ್ದೂ ಇದೆ.

ಮಾಡ್ರನ್ ಫ್ಯಾಂಟಸಿಯು ಟಾಲ್ಕಿಯನ್, ಫಿಲಿಪ್‌ಪುಲ್ಮನ್ ಅಂಥ ಗಮನಾರ್ಹ ಪ್ರಮಾಣದ ಲೇಖಕರ ಮಾಧ್ಯಮವಾದುದರ ಜೊತೆಗೆ, ಜೆ.ಎಂ.ಬೆರ‍್ರಿಯ 'ಪೀಟರ್ ಪ್ಯಾನ್', ಹಗ್‌ಲಾಫ್ಟಿಂಗ್‌ನ

'ಡಾ. ಡೂಲಿಟಲ್' ಅಂಥ ಹಲವು ಕೃತಿಗಳು ತಮ್ಮದೇ ಆದ ಬಗೆಯಲ್ಲಿ ಅಗತ್ಯವನ್ನು ಅನಿವಾರ್ಯವನ್ನು ಹೇಳಿಕೊಂಡಿವೆ. ವಾಲ್ಟ್‌ಡಿಸ್ನಿಯಂಥ ಕಲಾವಿದರು ಈ ಫ್ಯಾಂಟಸಿ ಜಗತ್ತನ್ನು ಮತ್ತೊಂದು ನಿಟ್ಟಿನಿಂದ ವಿಸ್ತೃತಗೊಳಿಸಿದರು. ಈಗ ಕೇವಲ ಬರವಣಿಗೆಯಲ್ಲದೆ, ಕಾಮಿಕ್ ಚಿತ್ರಕಲೆ, ಅನಿಮೇಷನ್ ರಂಗ ಕೂಡ ಸೇರಿಕೊಳ್ಳುತ್ತಾ ಹೊಸ ಹೊಸ ಸಾಧ್ಯತೆಗಳಿಗೆ ತೆರೆದುಕೊಂಡಂತೆ ಫ್ಯಾಂಟಸಿ ನಾನಾ ಬಗೆಯಲ್ಲಿ ತನ್ನನ್ನು ಕಂಡುಕೊಳ್ಳಲು ಸಾಧ್ಯವಾಗಿದೆ. ಮಕ್ಕಳಿಗೆ ಕೇವಲ ರಂಜನೆಯ, ಮುದನೀಡುವ ಸ್ವರೂಪದ ಜೊತೆಗೆ ಬದುಕಿನ ಗಂಭೀರವೆನ್ನುವ ಮಗ್ಗುಲುಗಳಿಗೂ ಅದು ಅನುವು ಮಾಡಿಕೊಡುತ್ತಿದೆ.

ಹೀಗೆ ಮಕ್ಕಳ ಸಾಹಿತ್ಯದಲ್ಲಿ ಭಿನ್ನ ಪ್ರಯತ್ನಗಳನ್ನು ತಂದಿಟ್ಟ ಈ ಹೊಸಗಾಲದ ಫ್ಯಾಂಟಸಿ ಭಾರತದಲ್ಲಿ ಅಷ್ಟಾಗಿ ಪರಿಣಾಮ ಮಾಡಲೇ ಇಲ್ಲ ಎಂದರೂ ನಡೆದೀತು. ಮಕ್ಕಳ ಲೋಕದಲ್ಲಂತೂ ಅದು ಹೊಸ ಸಾಧ್ಯತೆಗಳನ್ನು ಕಂಡುಕೊಂಡಿದ್ದು ಕಾಣುವುದೇ ಇಲ್ಲ. ಈ ನಿಟ್ಟಿನಲ್ಲಿ ಹೊರಗಿನ ಕೆಲವಾದರೂ ಕೃತಿಗಳು ವಿರಳವಾಗಿಯಾದರೂ ಅನುವಾದವೋ, ರೂಪಾಂತರವೂ ಆಗಿ ನಮ್ಮ ಮುಂದಿರುವುದು ಗಮನಿಸಬಹುದು. ಈ ಬಗೆಯ ಕನ್ನಡೀಕರಣ ಹೊಸ ಮಾದರಿಗಳಿಗೆ ಉದಾಹರಣೆಯಾಗಿ ಮುಂದುವರೆಯಲೇ ಇಲ್ಲ. ಇವು ಕೇವಲ ಆಯಾ ಲೇಖಕರ ಆಸಕ್ತಿಗಳಾಗಿ ಬಂದಿವೇ ಹೊರತು, ಮಕ್ಕಳ ಸಾಹಿತ್ಯದಲ್ಲಿ ತೊಡಗಿಕೊಂಡವರು ಯಾರೂ ಆ ಕಡೆಗೆ ಆಸಕ್ತಿಯ ಕಣ್ಣಿಂದ ನೋಡಲಿಲ್ಲ.

ಈ ಹಿನ್ನೆಲೆಯಲ್ಲಿ ಯಾವ ನಿರ್ದಿಷ್ಟ ದೃಷ್ಟಿಕೋನವಾಗಲಿ, ಹೊಸತಿಗೆ ಹೊರಳುವ ಅಗತ್ಯ ಹೇಳುವಿಕೆಗಳಾಗಲಿ ಇವೆ ಇಂದು ಹೇಳುವುದೇ ಕಷ್ಟ. ಸುಮ್ಮನೆ ಅದೂ ಒಂದು, ಏನೋ ವಿಭಿನ್ನವಾದುದು ಎಂದುಕೊಂಡು ಬಂದಿರುವುದೇ ಕಂಡು ಬರುತ್ತದೆ. ಅಂಥ ಕೆಲವು ಉದಾಹರಣೆಗಳನ್ನು ಇಲ್ಲಿ ಚರ್ಚೆಗೆ ಇಟ್ಟುಕೊಳ್ಳಲಾಗಿದೆ. ಈ ವಿರಳವಾದ ಉದಾಹರಣೆಗಳಾದರೂ ವಿಭಿನ್ನವಾಗಿ ತೊಡಗಿಕೊಂಡ ಲೇಖಕರ ಸಾಧ್ಯತೆಗಳನ್ನು ಹೇಳುತ್ತವೆ. ಇಲ್ಲಿ ಸಂಶೋಧನೆಗಾಗಿ ಆಯ್ಕೆ ಮಾಡಿಕೊಂಡ ಏಳು ಕಥನಗಳು ಭಿನ್ನ ಬಗೆಯವು. ಕನ್ನಡ ಮಕ್ಕಳ ಸಾಹಿತ್ಯ ಲೋಕಕ್ಕೆ ಅಂಥ ಹೊರಳುವಿಕೆ ಗಂಭೀರ ಸ್ವರೂಪ ಪಡೆದುಕೊಳ್ಳಬೇಕು ಎನ್ನುವುದನ್ನು ಈ ಕೃತಿಗಳ ಕಥೆಗಳು ಒತ್ತಾಯಿಸುತ್ತವೆ.

ಈ ಅನುವಾದಗಳನ್ನು ಚರ್ಚೆಗೆ ಆಯ್ದುಕೊಳ್ಳುವಲ್ಲಿ ದೇಶ, ಭಾಷೆ ಹಿನ್ನೆಲೆಯನ್ನು, ಅವು ಕನ್ನಡಕ್ಕೆ ಬರಬೇಕಾದ ಅಗತ್ಯ, ತುರ್ತನ್ನು ಆಧಾರವಾಗಿಟ್ಟುಕೊಂಡು ಆಯ್ಕೆ ಮಾಡಲಾಗಿದೆಯಾದರೂ ಎಲ್ಲಾ ದೇಶ, ಭಾಷೆಗಳನ್ನು ಒಳಗೊಳ್ಳಲು ಆಗಿಲ್ಲವೆನ್ನುವುದು ಈ ಅಧ್ಯಾಯದ ಮಿತಿಯಾಗಿದೆ. ಕನ್ನಡಕ್ಕೆ ಅನುವಾದಗೊಂಡ ಮಕ್ಕಳ ಕಥನಗಳನ್ನೆಲ್ಲಾ ವಿಶ್ಲೇಷಣೆ ಮಾಡುವುದು ಮತ್ತೊಂದು

ದೊಡ್ಡ ಸಂಶೋಧನೆಯ ವಿಷಯ ಆಗುತ್ತದೆ. ಆ ಕಾರಣಕ್ಕಾಗಿಯೇ ಪ್ರಾತಿನಿಧಿಕವಾಗಿ ಆಯ್ದುಕೊಂಡ ಏಳು ಕೃತಿಗಳನ್ನು ಕೇಂದ್ರವಾಗಿಟ್ಟುಕೊಂಡು ಪ್ರಾಸಂಗಿಕವಾಗಿ ಇತರ ದೇಶ, ಭಾಷೆಯ ಕೃತಿಗಳನ್ನೂ ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ಪ್ರಸ್ತುತ ಘಟಕದ ವಿಶ್ಲೇಷಣೆಯನ್ನು ಎರಡು ಬಗೆಯಲ್ಲಿ ಮಾಡಲಾಗಿದೆ. ಚರ್ಚೆ-೧ರಲ್ಲಿ ಪ್ರಸ್ತುತ ಘಟಕಕ್ಕೆ ಆಯ್ದುಕೊಂಡ ಕೃತಿಗಳನ್ನು ಪ್ರತ್ಯೇಕವಾಗಿ ವಿಶ್ಲೇಷಣೆ ಮಾಡಲಾಗಿದೆ. ಇವು ಕನ್ನಡ ಮಕ್ಕಳ ಸಾಹಿತ್ಯಕ್ಕೆ ಅಪರೂಪದ ಮತ್ತು ಇಲ್ಲಿನ ಕೆಲವು ಎಲ್ಲಾ ಕಾಲಕ್ಕೂ ಸಲ್ಲುವ ಕೃತಿಗಳಂತಿವೆ. ಹಾಗಾಗಿ ಅವುಗಳ ವಿಶಿಷ್ಟತೆಯನ್ನು ಚರ್ಚಿಸುವುದು ಅಗತ್ಯವಾಗಿದೆ. ಇಲ್ಲಿ ಚರ್ಚೆ ಬರೀ ಕೃತಿಯ ಪರಿಚಯವಷ್ಟನ್ನೇ ಮಾಡಿಕೊಡುವುದಾಗಲಿ, ಅಲ್ಲಿನ ಫ್ಯಾಂಟಸಿಯನ್ನು ವಿಶ್ಲೇಷಿಸುವುದಷ್ಟೇ ಮಾಡಿಲ್ಲ. ಬದಲಾಗಿ ಕನ್ನಡ ಮಕ್ಕಳ ಸಾಹಿತ್ಯದ ಫ್ಯಾಂಟಸಿಯ ನಡೆದಿಕ್ಕನ್ನು ಈ ಕೃತಿಗಳು ತೋರಿಸುವಂತಿವೆ, ಎನ್ನುವ ದೃಷ್ಟಿಕೋನದಲ್ಲೂ ವಿಶ್ಲೇಷಣೆ ಮಾಡಲಾಗಿದೆ.

ಚರ್ಚೆ-೨ರಲ್ಲಿ ಆಯ್ದುಕೊಂಡ ಕೃತಿಗಳ ತೌಲನಿಕ ವಿಶ್ಲೇಷಣೆಯನ್ನು ಆಶಯವಾರು ಮಾಡಲಾಗಿದೆ. ಈ ಆಶಯಗಳು ಫ್ಯಾಂಟಸಿ ಕೃತಿಯೊಂದರಲ್ಲಿ ಅಗತ್ಯವಾಗಿ ಬರಬೇಕಾದ ಸಂಗತಿಗಳೇ ಆಗಿವೆ. ಜೊತೆಗೆ ಫ್ಯಾಂಟಸಿ ಕೃತಿಗಳ ಪ್ರಧಾನ ಧಾರೆಗಳನ್ನು ಗುರುತಿಸುವ ಪ್ರಯತ್ನವನ್ನು ಪ್ರಸ್ತುತ ಘಟಕದಲ್ಲಿ ಮಾಡಲಾಗಿದೆ. ಕನ್ನಡಕ್ಕೆ ಅನುವಾದಗೊಂಡ ಮಕ್ಕಳ ಕಥನಗಳಲ್ಲಿ ಈ ಕೆಳಕಂಡ ಕೃತಿಗಳಲ್ಲಿನ ಫ್ಯಾಂಟಸಿ ಸ್ವರೂಪಗಳ ಕುರಿತು ವಿಶ್ಲೇಷಣೆ ಮಾಡಲಾಗಿದೆ.

೧. ಜಿ.ಜನಾರ್ಧನ ಭಟ್, ಪೀಟರ್ ಪ್ಯಾನ್ ಸಾಹಸಗಳು(ಜೆ.ಎಂ.ಬೆರ್ರಿ), **ಸ್ಕಾಟ್ಲೆಂಡ್;**

೨. ನಾ.ಕಸ್ತೂರಿ, ಪಾತಾಳದಲ್ಲಿ ಪಾಪಚ್ಚಿ (ಚಾರ್ಲ್ಸ್‌ಡುಡ್‌ಸನ್<ಲೂಯಿ ಕೆರೋಲ್>),**ಇಂಗ್ಲಂಡ್;**

೩. ಮೀನಾ ಮೈಸೂರು, ಉಯ್ಯಾಲೆಯಲ್ಲಿ ಹಸು(ಜುಜ್ಞಾ ವೈಸಲ್ಯಾಂಡರ್), **ಸ್ವೀಡನ್;**

೪. ಶಂಕರಾನಂದ, ಕಾಡಿನ ಕಥೆ(ರುಡ್‌ಯಾರ್ಡ್ ಕಿಪ್ಲಿಂಗ್),**ಇಂಗ್ಲಂಡ್;**

೫. ಎಂ.ಎಸ್.ಕೆ.ಪ್ರಭು, ಪೋಕರಿ ಪಾಪಣ್ಣನ ಪರಾಕು(ಕಾರ್ಲೊ ಕೊಲೋಡಿಯ),**ಇಟಾಲಿಯನ್;**

ಇವುಗಳ ಜೊತೆಗೆ ಭಾರತ ದೇಶದ ಎರಡು ಕೃತಿಗಳನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ.

೬. ಶಾವೋಲಿನ್, ಕೆ.ಶಿವಲಿಂಗಪ್ಪ ಹಂದಿಹಾಳು(ಇಂಗ್ಲಿಷ್‌ಮೂಲ: ರಾಮೇಂದ್ರ ಕುಮಾರ)**ಭಾರತ;**

೭. ಮೇಧಾ೦೧೭, ಧನಪಾಲ ನೆಲವಾಗಿಲು(ತೆಲುಗು ಮೂಲ: ಸಲೀಂ)**ಭಾರತ.** ಹೀಗೆ ಒಟ್ಟು ಏಳು ಕೃತಿಗಳನ್ನು ಪ್ರಸ್ತುತ ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ.

೬.೧. ಚರ್ಚೆ–೧

೬.೧.೧. 'ಅಳಿಯದ ಬಾಲ್ಯದ ಹುಡುಕ'

'ಪೀಟರ್ ಪ್ಯಾನ್‌ನ ಸಾಹಸಗಳು' ಜೆ.ಎಂ.ಬೆರ್ರಿ (ಸ್ಕಾಟಿಷ್ ಲೇಖಕ, ಇಂಗ್ಲಂಡಿನಲ್ಲೇ ನೆಲೆನಿಂತು ಇಂಗ್ಲೀಷಿನಲ್ಲಿ ರಚಿಸಿದ.)ರಚಿಸಿದ ಕೃತಿ ಎಂದಿಗೂ ಅಳಿಯದ ಬಾಲ್ಯದ ಸುತ್ತ ರಚನೆಗೊಂಡ ಕೃತಿಯಾಗಿ ಫ್ಯಾಂಟಸಿ ಜಗತ್ತಿನಲ್ಲಿಯೇ, ಅದರಲ್ಲೂ ಮಕ್ಕಳ ಜಗತ್ತಿನಲ್ಲಿಯೇ ವಿಶೇಷವಾಗಿ ಸೆಳೆಯಿತು. ಇಂದಿಗೂ ಅದರ ಆಕರ್ಷಣೆ ಕರಗಿಲ್ಲ. ೧೯ನೆಯ ಶತಮಾನದ ಪ್ರಾರಂಭದಲ್ಲಿ ರಚನೆಗೊಂಡ, ಸುಮಾರು ಹತ್ತು ವರುಷಗಳ ಕಾಲ ಇಂಗ್ಲಂಡಿನಲ್ಲಿ ರಂಗಭೂಮಿಯಲ್ಲಿ ಬಿಟ್ಟುಬಿಡದೆ ನಾಟಕವಾಗಿ ಪ್ರದರ್ಶನಗೊಂಡ ಈ ಕೃತಿ ಕಾದಂಬರಿಯಾಗಿ, ಚಲನಚಿತ್ರವಾಗಿ, ಆನಿಮೇಶನ್‌ನಲ್ಲಿ ಅವತರಿಸಿ ಪ್ರಸ್ತುತಗೊಳ್ಳುತ್ತಲೇ ಬಂದಿತು. ಅವನು ಕೃತಿಯ ಪ್ರಾರಂಭದಲ್ಲಿ ಈ ಬಗೆಯದು ಎಲ್ಲ ಮಕ್ಕಳಲ್ಲೂ ಆಗುವುದಲ್ಲ, ಎಲ್ಲ ಮಕ್ಕಳೂ ಬೆಳೆಯುವವರೇ ಎಂದು ಎಚ್ಚರಿಕೆಯ ಮಾತುಗಳನ್ನು ಹೇಳಿಯೇ ತೊಡಗಿಕೊಂಡಿದ್ದರೂ ಅವನು ಸೃಷ್ಟಿಸಿದ ಪೀಟರ್ ಅತ್ಯಂತ ಚಟುವಟಿಕೆಯ, ತೀವ್ರತರದ, ಉಲ್ಲಾಸದ ಹುಡುಗನಾಗಿದ್ದ. ಆ ಪಾತ್ರವನ್ನು ಬೆರ್ರಿ ಎಷ್ಟು ಆಸಕ್ತಿಯಿಂದ ಕಟೆದು ನಿಲ್ಲಿಸಿದ ಎನ್ನುವುದು ಅವನೊಳಗಿನ ತುಡಿತವನ್ನು ಖಂಡಿತ ಹೇಳುತ್ತದೆ.

ಫ್ಯಾಂಟಸಿ ಕೃತಿಗಳನ್ನು ರಚಿಸುವ ಪ್ರತಿಯೊಬ್ಬರಲ್ಲೂ ಈ ಬಗೆಯ ಥ್ರಿಲ್ ಇರಲೇಬೇಕೆನ್ನುವುದು ಹಲವು ಕಾದಂಬರಿಗಳ ಹಿನ್ನೆಲೆಯಲ್ಲಿ ವ್ಯಕ್ತವಾಗುತ್ತದೆ. ಅದು ಅನೇಕ ಬಗೆಯ ಅಧ್ಯಯನಗಳಿಗೂ ದಾರಿ ಮಾಡಿಕೊಟ್ಟಿದೆ ಕೂಡ. ಪೀಟರ್ ಹುಡುಗನ ಲೋಕ 'ನೆವರ್ ಲ್ಯಾಂಡ್' ಮಕ್ಕಳ ಮನೋಲೋಕದಲ್ಲಿ ಕಾಣಿಸುವಂಥದು ಎಂದು ಹೇಳುವ ಬೆರ್ರಿ, ಅದು ಮಿಲ್ಕಿವೇಯ ನಕ್ಷತ್ರಗಳ ಬಳಿ ಇದೆ ಎನ್ನುತ್ತಾನೆ. ಪೀಟರ್ ಅಲ್ಲಿಗೆ ಹೋಗುವುದು ತನ್ನ ಮನಸ್ಸಿಗೆ ಬಂದಂತೆ ಎಂದೂ ಹೇಳುವುದಿದೆ. ಬದುಕಿನ ಎಲ್ಲಾ ಸಾಧ್ಯತೆಗಳನ್ನು ಮೀರುವ ಸಂಗತಿಗಳು ಫ್ಯಾಂಟಸಿಯಲ್ಲಿ ಮಾತ್ರ ಸಂಭವಿಸುತ್ತವೆ. ಈ ಬಗೆಯ ಫ್ಯಾಂಟಸಿ ಹೊಸಗಾಲದ ಸಾಧ್ಯತೆಯನ್ನೂ ಅಗತ್ಯವನ್ನೂ, ಲೇಖಕನೊಳಗಿನ ತೀವ್ರತೆಗಳಿಗೆ ದಾರಿಯಾಗಿಯೂ ಕಂಡುಕೊಂಡಿದೆ ಎನ್ನುವುದು ಗಮನಿಸಬೇಕಾದ ಸಂಗತಿ.

ಪೀಟರನ ಲೋಕಕ್ಕೆ ಬರುವ ವೆಂಡಿ ಮತ್ತು ಆಕೆಯ ಸ್ನೇಹಿತರು(ತಮ್ಮಂದಿರು) ಮನೆಗೆ ಬಂದ ನಂತರ ಹಾರುವ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ. ಅದಕ್ಕೆ ಪೀಟರ್ ಕೊಡುವ ಉತ್ತರ ಫ್ಯಾಂಟಸಿ ಲೋಕದ ಲಕ್ಷಣವೆನ್ನುವಂತಿದೆ. 'ದೊಡ್ಡವರಾಗಿದ್ದಾಗ ಮುಗ್ಧರಾಗಿರುವುದಿಲ್ಲ, ಮುಗ್ಧವಾಗಿ, ಸಂತೋಷವಾಗಿ, ವ್ಯಾಮೋಹ ಇಲ್ಲದಿದ್ದಾಗ ಮಾತ್ರ ಹಾರಲು ಸಾಧ್ಯವಾಗುವುದು'[೨]. ಮನೆಗೆ ಬಂದ ನಂತರ ವೆಂಡಿ ದೊಡ್ಡವಳಾಗಿ ಮದುವೆಯಾಗುತ್ತದೆ. ಆಗ ಅವಳು ಕಿಟಕಿಯಿಂದ ಹಾರುವ ಶಕ್ತಿಯನ್ನು ಕಳೆದುಕೊಳ್ಳುತ್ತಾಳೆ. ಇಲ್ಲದ ನಾಡಿನ ಪ್ರವೇಶಕ್ಕೆ ಅನುಮತಿ ಸಿಗದವಳಾಗುತ್ತಾಳೆ. ನಂತರ

ಅವಳ ಮಗಳಾದ ಜೇನ್, ಅವಳ ಮಗಳಾದ ಮಾರ್ಗರೇಟ್ ನಂತರ ಅವಳ ಮಗಳು, ತದನಂತರ ಅವಳ......ಹೀಗೆ ಮಕ್ಕಳೇ ಹೋಗಬಹುದಾದ ನಾಡು ಅದು. ಎಲ್ಲಿ ಕಲ್ಪನೆ ಇರುತ್ತದೋ ಅಲ್ಲಿ ಮುಗ್ಧತೆ ಇರುತ್ತದೆ. ಅದು ಮಕ್ಕಳಲ್ಲಿ ಮಾತ್ರ ಇರುತ್ತದೆ. ಹೀಗಾಗಿ ಪೀಟರ್ ಆ ಲೋಕದಲ್ಲಿನ ಪ್ರತಿ ಘಟನೆಗಳನ್ನು ನಂಬುತ್ತಾನೆ. ಅವಳಿಗಳು ಎನ್ನುವುದರ ಅರ್ಥವೇ ಗೊತ್ತಿರದಷ್ಟು ಮುಗ್ಧತೆ ಅವನದು. ಬಹುಶಃ ಆ ಭೇದ ಅವನಿಗೆ ಬೇಡವಾಗಿತ್ತು. ಮಕ್ಕಳ ಮನಸ್ಸಿನ ಯಾರೂ ಮಕ್ಕಳ ಮಧ್ಯೆ ಭೇದ ಹುಡುಕುವುದಿಲ್ಲ.

ಈ ಬಗೆಯ ಕತೆಯನ್ನು ಹುಟ್ಟು ಹಾಕುವಲ್ಲಿ ಬೆರ್ರಿಯ ಬದುಕಿನ ಸಂಗತಿಯೂ ಗಾಢವಾಗಿ ಹಿನ್ನೆಲೆಗಿರುವಂತಿದೆ. ಅವನು ಬಂದಿದ್ದು; ನೇಯುವ ಕೆಲಸದ ಬಡ ಕುಟುಂಬದಿಂದ. ಬಾಲ್ಯದಲ್ಲಿ ತಂದೆಯನ್ನು ಕಳೆದುಕೊಂಡುಬಿಡುತ್ತಾನೆ. ಅವರು ಒಂಬತ್ತು ಜನ ಮಕ್ಕಳು. ಇಬ್ಬರು ಬೇಗನೆ ಅಸು ನೀಗುತ್ತಾರೆ. ತಾಯಿ ತುಂಬಾ ಹಚ್ಚಿಕೊಂಡಿದ್ದ ಡೇವಿಡ್ ಎನ್ನುವ ಅವನ ಅಣ್ಣ ಸ್ಕೇಟಿಂಗ್ ಆಡುವಾಗ ಸತ್ತು ಹೋಗುತ್ತಾನೆ. ತಾಯಿ ಆ ಸಾವನ್ನು ಭರಿಸಲಾಗದೆ ಹಾಸಿಗೆ ಹಿಡಿಯುತ್ತಾಳೆ. ಸದಾ ಅವನ ಕನವರಿಕೆಯಲ್ಲೇ ಅವಳು ಇದ್ದು ಬಿಡುತ್ತಾಳೆ. ಬೆರ್ರಿ ಅಣ್ಣನ ಸ್ಥಾನ ತುಂಬಲು ಬಹಳ ಪ್ರಯತ್ನಿಸುತ್ತಾನೆ. ಅವನದೇ ಉಡುಪುಗಳನ್ನು ಹಾಕಿಕೊಳ್ಳುವುದು ಮುಂತಾಗಿ ಅನೇಕ ಬಗೆಯ ಪ್ರಯತ್ನಗಳು ಮಾಡುತ್ತಾನೆ. ಒಂದು ದಿನವಂತೂ ಮಬ್ಬು ಬೆಳಕಿನಲ್ಲಿ ಅವನು ಹೊರಗಿನಿಂದ ಬರುತ್ತಿದ್ದಂತೆ ತಾಯಿ ಡೆವಿಡ್‌ನೆ ಬಂದನಾ ಅಂತ ಕನವರಿಸುತ್ತಾಳೆ. ಬೆರ್ರಿ ಮೆಲ್ಲಗೆ ಇಲ್ಲ, ನಾನು ಬಂದಿರೋದು ಎನ್ನುತ್ತಾನೆ. ಅದಕ್ಕೆ ಆಕೆ ಸಮಾಧಾನ ಪಟ್ಟುಕೊಳ್ಳುತ್ತಾಳೆ. ಅದಕ್ಕೆ ಕಾರಣ ಡೇವಿಡ್ ಯಾವತ್ತೂ ಅವನ ಬಾಲ್ಯದಲ್ಲಿಯೇ ಉಳಿಯಬೇಕು, ಅಂದರೆ ಅವಳಿಂದ ಅವನು ದೊಡ್ಡವನಾಗಿ ದೂರಾಗಲೇಬಾರದು ಎನ್ನುವುದು ಅದು. ಇದನ್ನೆಲ್ಲ ಬೆರ್ರಿಯೇ ತನ್ನ ಆತ್ಮ ಚರಿತ್ರೆಯಲ್ಲಿ ಹೇಳಿಕೊಂಡಿದ್ದಾನೆ. ಬೆರ್ರಿಯ ಮೇಲೆ ಇದೆಲ್ಲಾ ಬಹುಶಃ ಗಾಢವಾದ ಪರಿಣಾಮ ಬೀರಿರುವ ಸಾಧ್ಯತೆಯಿದೆ.

ಬೆರ್ರಿಯ ವೈಯಕ್ತಿಕ ವೈವಾಹಿಕ ಜೀವನ ಅಸಂತೋಷದಿಂದ ಕಳೆಯುತ್ತಿತ್ತು. ಅವನಿಗೆ ಮಕ್ಕಳಾಗದೆ ಹೋಯಿತು. ಅವನು ಹೆಚ್ಚು ಸ್ನೇಹಿತರ ಮಕ್ಕಳೊಡನೆ ಪ್ರೀತಿಯ ಸಖ್ಯ ಬೆಳೆಸತೊಡಗಿದುದು ನಡೆಯುತ್ತದೆ. ಹೀಗೆ ಸಖ್ಯದಲ್ಲಿಯೇ ಒಂದು ಹುಡುಗಿ ಅವನ ಕೃತಿಯ ಅತ್ಯಂತ ಪ್ರಮುಖ ಪಾತ್ರವಾದ ವೆಂಡಿಗೆ ಕಾರಣವಾಯಿತು.(ಅವನು ಇವಳನ್ನು ಫ್ರೆಂಡಿ ಎಂದು ಕರೆಯುತ್ತಿರುವುದೇ ವೆಂಡಿಯೆಂದು ಆಯಿತಂತೆ), ಹಾಗೆಯೇ ಡೆವೀಸ್ ಎನ್ನುವ ಕುಟುಂಬದ ನಾಲ್ವರು ಗಂಡು ಮಕ್ಕಳೊಡನೆ ಅವನ ಸಖ್ಯ ಅತ್ಯಂತ ಹತ್ತಿರದ್ದಾಗಿ ಕಾಣಿಸಿಕೊಂಡಿತು. ಇವರೇ ಅವನ ಕೃತಿಯಲ್ಲಿ ಕಳೆದು ಹೋದ ಹುಡುಗರಾಗಿ ಪಾತ್ರವಾದರು. ಇವರಲ್ಲಿ ಹಿರಿಯನಾದ ಜಾರ್ಜನನ್ನು ಬೆರ್ರಿ ತುಂಬ ಹಚ್ಚಿಕೊಂಡಿದ್ದ. ಅವನು ಬೆಳೆದು ದೂರವಾದ ಮೇಲೆ ನಂತರದ ಹುಡುಗ ಮೈಕೆಲ್‌ನಲ್ಲಿ ಜಾರ್ಜನನ್ನು ಕಾಣತೊಡಗಿದ. ಈ ಕುಟುಂಬದ ತಂದೆ ತಾಯಿ ಇಬ್ಬರೂ ತೀರಿ ಹೋದಾಗ ಈ

ಮಕ್ಕಳನ್ನೆಲ್ಲ ಸಾಕುವ ಹೊಣೆಯನ್ನು ಬೆರ್ರಿಯೇ ಹೊತ್ತುಕೊಂಡನು. ಅವರನ್ನು ಬಹಳ ಪ್ರೀತಿಯಿಂದ ಸಾಕಿ ಸಲುಹಿರುವುದು ದಾಖಲಾಗಿದೆ. ಇವರಲ್ಲಿ ಅತ್ಯಂತ ಪುಟ್ಟ ಮಗುವೇ ಪೀಟರ್. ಇವನಲ್ಲೇ ಕೊನೆಗೆ ಬೆರ್ರಿ ತನ್ನ ನಾಯಕನನ್ನು ಕಂಡುಕೊಂಡನು.(ವಾಸ್ತವದಲ್ಲಿ ಈ ಪಾತ್ರ ತನಗೆ ಇಷ್ಟವಿಲ್ಲ, ನನಗೂ ಅದಕ್ಕೂ ಹೋಲಿಕೆ ಇಲ್ಲ ಎಂದು ಪೀಟರ್ ಅಭಿಪ್ರಾಯ ಪಟ್ಟಿದ್ದಿದೆ). ಈ ಎಲ್ಲ ಮಕ್ಕಳು ಅಂದು ಇಂಗ್ಲಂಡಿನಲ್ಲಿ ಪ್ರದರ್ಶನಗೊಳ್ಳತೊಡಗಿದ್ದ ನಾಟಕದಲ್ಲಿ ಭಾಗವಹಿಸುತ್ತಿದ್ದರು.

ಹೀಗಾಗಿ ಪೀಟರ್ ಎನ್ನುವ ಬಾಲ್ಯ ಅಳಿಯದ ಹುಡುಗನ ಪಾತ್ರ ಸುಮ್ಮನೆ ಏನೋ ಇಂದು ಕಲ್ಪನೆಯಾಗಿ ಬೆರ್ರಿ ಕಂಡುಕೊಂಡಿದ್ದಲ್ಲವೇ ಅಲ್ಲ. ಅದು ಅವನೊಳಗಿನ ತೀವ್ರದ ತುಡಿತವೇ ಆಗಿತ್ತು. ಯಾವುಯಾವುದೋ ಸಂಗತಿಗಳನ್ನು ಬಚ್ಚಿಟ್ಟುಕೊಂಡಿದ್ದೂ ಆಗಿತ್ತು. ಅಂತೂ ಬಾಲ್ಯ ತೀರಾ ಅಪರೂಪದ ಸಂಗತಿಯಾಗಿ ಕಂಡಿದ್ದರಲ್ಲಿ ಅಚ್ಚರಿಯಿಲ್ಲ. ಒಂದು ರಾತ್ರಿಯಲ್ಲಿಯೇ ಸಿದ್ಧಗೊಂಡ, ಅವನು ಸೂಚಿಸಿದ ಹುಡುಗನ ಮಾಡೆಲ್ ಬಿಟ್ಟು ಬೇರೊಂದು ಹುಡುಗನನ್ನು ಇರಿಸಿಕೊಂಡು ಲಂಡನ್ನಿನ ಕೆನ್ಸಿಂಗ್ಟನ್ ಗಾರ್ಡನ್ಸ್‌ನಲ್ಲಿ ಸೃಷ್ಟಿಸಿದ ಪೀಟರ್‌ನ ಮೂರ್ತಿಯನ್ನು ಬೆರ್ರಿ ತುಂಬಾ ಬೇಸರದಿಂದ ನಿರಾಕರಿಸಿದ. ಅವನ ಬದುಕಿನ ಪ್ರಸಂಗವೇ ಒಂದು ಉದಾಹರಣೆ ಇಂಥದಕ್ಕೆ. ಈ ಬಾಲ್ಯ ಅಮರವಾಗಿಸಿಕೊಂಡ ಹುಡುಗನಲ್ಲಿ ಬೆರ್ರಿ ಅಸಾಧ್ಯ ವರ್ಚಸ್ಸನ್ನು ಕಂಡುಕೊಂಡಿದ್ದು ಕಾಣುತ್ತದೆ.

ಮಕ್ಕಳ ಫ್ಯಾಂಟಸಿ ಲೋಕದಲ್ಲಿನ ಸಂಬಂಧಗಳು ಯಾವತ್ತೂ ವರ್ಗಾತೀತವಾಗಿರುತ್ತವೆ. ಮಾನುಷ ವರ್ಗ, ಪ್ರಾಣಿ, ಪಕ್ಷಿ, ವಸ್ತು ಯಾವುದನ್ನೇ ಆದರೂ ಒಮ್ಮೆ ನಂಬಿದರೆ ಕೊನೆಯವರೆಗೂ ಅವರನ್ನು ಪ್ರೀತಿಸುತ್ತವೆ. ಅವರ ರಕ್ಷಕರಂತೆ ಕಾಯುತ್ತವೆ. ಇಲ್ಲದ ನಾಡಿನೊಳಗೆ ಒಬ್ಬೊಬ್ಬರಿಗೆ ಒಬ್ಬೊಬ್ಬ ಯಕ್ಷಿ ಇರುತ್ತಿದ್ದರು. ಪೀಟರನ ಯಕ್ಷಿ ಕಲಾಯಿ ಗಂಟೆ. ಅಲ್ಲಿನ ಮಕ್ಕಳಿಗೆ ಯಕ್ಷಿಗಳ ಬಗ್ಗೆ ನಂಬಿಕೆ ಕಡಿಮೆ ಆಗಿದೆ ಎಂದು ಹೇಳಿದಾಗಲೆಲ್ಲಾ ಒಂದೊಂದು ಯಕ್ಷಿ ಸತ್ತು ಹೋಗುತ್ತಿದ್ದವು. ನಂಬಿಕೆ ಮುಗ್ಧತೆಯನ್ನು ಅನುಸರಿಸುತ್ತದೆ. ಮುಗ್ಧತೆ ಇಲ್ಲವಾದರೆ ನಂಬಿಕೆ ಕಳೆದುಹೋಗುತ್ತದೆ. ಮಕ್ಕಳ ಲೋಕದ ಅಲಿಖಿತ ನಿಯಮದಂತೆ ಇದು ವ್ಯಾಪಿಸಿದೆ. ಪ್ರಭು ಅವರ ಪೋಕರಿ ಪಾಪಣ್ಣನಿಗೂ ಒಬ್ಬಳು ಯಕ್ಷಿಣಿ ತಾಯಿಯಾಗಿ ಅವನ ಪ್ರತಿ ಹಂತದಲ್ಲೂ ಜೊತೆಯಾಗುತ್ತಾಳೆ. ಅವನು ಪ್ರತಿ ಬಾರಿ ಮೋಸ ಹೋದಾಗಲೂ ಅವನನ್ನು ಸಂತೈಸುತ್ತಾಳೆ. ಬೆರ್ರಿಯ ಪೀಟರ್‌ನ ಇಲ್ಲದ ನಾಡು ಮಕ್ಕಳ ಲೋಕಕ್ಕೆ ಇಂದಿಗೂ ಅಚ್ಚಳಿಯದ ಕೃತಿಯಾಗಿ ಉಳಿದಿದೆ.

೬.೧.೨. ಪಾಪಚ್ಚಿಯ ಅತಾರ್ಕಿಕ ಲೋಕ

ಲೂಯಿಸ್ ಕೆರೋಲ್ ರಚಿಸಿದ 'ಆಲೀಸ್ ಇನ್ ವಂಡರ್‌ಲ್ಯಾಂಡ್' ಕೃತಿ ತನ್ನದೇ ಆದ ಫ್ಯಾಂಟಸಿಯ ಹಿನ್ನೆಲೆ ಹೇಳುವಂಥ ಕಥನವಾಗಿದೆ. ಅದು ಪರಂಪರೆಯ ಹಿನ್ನೆಲೆಯಲ್ಲಿ ಕಂಡುಕೊಂಡಿದ್ದಲ್ಲವೇ ಅಲ್ಲ. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಅರಳಿದ ಆಲೀಸಳ ಎರಡು ಕೃತಿಗಳ ಕತೆಯ ಹಿಂದೆ ಲೇಖಕನ ಮನೋವ್ಯಾಪಾರ ನಿಡಿದಾಗಿ ನಿಂತಿದೆ. ಈ ಕುರಿತು

ಅಧ್ಯಯನಗಳೂ ಕಾಣುತ್ತವೆ. ಈ ಕೃತಿಯ ಮುಖ್ಯ ಪಾತ್ರವಾದ ಆಲೀಸ್‌ಳು ಅವನಿಗೆ ಬಲು ಹತ್ತಿರವಿದ್ದ ಸ್ನೇಹದ ಕುಟುಂಬದ ಹುಡುಗಿಯೇ. ಆ ಹುಡುಗಿಯೊಂದಿಗೆ ಅತಿಯಾದ ಸಲಿಗೆ ಅವನಿಗಿತ್ತು. ಈ ಸಲಿಗೆ ಅಪವಾದಗಳಿಗೆ ಗುರಿಯಾಗುವವರೆಗೂ ನಡೆದು, ಆ ಕುಟುಂಬ ಕೆರೋಲ್‌ನನ್ನು ದೂರವಿರಿಸಲು ಪ್ರಯತ್ನಿಸುತ್ತದೆ ಕೂಡ. ಕೆರೋಲ್ ವಿಶ್ವವಿದ್ಯಾಲಯದ ಗಣಿತದ ಪ್ರಾಧ್ಯಾಪಕನಾಗಿದ್ದ. ಹಾಗೆ, ಒಬ್ಬ ನುರಿತ ಫೋಟೋಗ್ರಾಫರ್ ಕೂಡ ಆಗಿದ್ದನು. ಅವನು ಮಕ್ಕಳ ಫೋಟೋಗ್ರಾಫ್‌ಗಳ ವಿಶೇಷ ಆಸಕ್ತಿಯನ್ನೂ ಬೆಳೆಸಿಕೊಂಡಿದ್ದನು. ಕೆರೋಲ್ ಈ ಕಥೆಯನ್ನು ಬರಹರೂಪಕ್ಕಿಳಿಸುವ ಮೊದಲು ಆಲೀಸ್‌ಳಿಗೆ ಕಲ್ಪಿಸಿಕೊಂಡು ಹೇಳುತ್ತಾ ಹೋಗುತ್ತಿದ್ದನು.

ವಿಶ್ವವಿದ್ಯಾಲಯದಲ್ಲಿ ಗಣಿತದ ಪ್ರಾಧ್ಯಾಪಕನಾಗಿದ್ದ ಲೂಯಿಸ್ ಕೆರೋಲ್ ಮಕ್ಕಳ ಲೋಕದಲ್ಲಿಯೇ ವಿಶೇಷವಾಗಿ ಕಾಣಿಸಿಕೊಂಡು ಪ್ರಚುರನಾದುದು ಕೇವಲ ಆಸಕ್ತಿಯಿಂದಲ್ಲ. ಆಲೀಸ್ ಎನ್ನುವ ಹುಡುಗಿಯ ಜೊತೆ ಬಹಳಷ್ಟು ಸಮಯ ಕಳೆಯಲು ನೋಡಿದ್ದು, ಮಕ್ಕಳ ಭಾವಚಿತ್ರಗಳನ್ನೇ ತೆಗೆಯುವುದರಲ್ಲಿ ಬಹಳಷ್ಟು ಸಮಯ ಕಳೆದ ಫೋಟೋಗ್ರಾಫರ್ ಆಗಿದ್ದುದು ಎಲ್ಲ ಈ ಕೃತಿಯ ಲೇಖಕನ ಹಿನ್ನೆಲೆಗಿವೆ. ಅಲ್ಲದೆ ನಾನ್ಸೆನ್ ಪ್ರಕಾರದ ರೈಮ್ಸ್‌ಗಳನ್ನು ಇಂಗ್ಲೀಷಿನಲ್ಲಿ ಎಡ್ವರ್ಡ್ ಲಿಯರ್ ಮತ್ತು ಲೂಯಿ ಕೆರೋಲ್ ಸೃಷ್ಟಿಸಿ ಅದಕ್ಕೊಂದು ಸ್ಥಾನಮಾನ ತರುವಲ್ಲಿ ಕಾರಣವಾದುದನ್ನು ಇಲ್ಲಿ ಪ್ರಸ್ತಾಪ ಮಾಡಬಹುದು. ಕೆರೋಲ್ ಒಬ್ಬ ಪ್ರಾಧ್ಯಾಪಕನಾಗಿದ್ದೂ ಈ ಬಗೆಯ ಅಸಂಬದ್ಧ ಜಗತ್ತನ್ನು ಅಪ್ಪಿಕೊಂಡಿದ್ದು ಅವನ ವಿಶಿಷ್ಟ ಮನಸ್ಥಿತಿಯನ್ನೇ ಹೇಳುತ್ತದೆ.

ಕೆರೋಲ್ ಭಾಷೆ ಹಾಗೂ ಗಣಿತಗಳನ್ನು ಬಳಸಿಕೊಂಡು ನಾನಾ ಬಗೆಯಲ್ಲಿ ಈ ಬಗೆಯ ಒಗಟಿನ, ಅಣಕುವಾಡು(ಪಝಲ್ಸ್, ಪೆರಡಿ)ಮುಂತಾಗಿ ಬರವಣಿಗೆಗೆ ಇನ್ನಿಲ್ಲದಂತೆ ತುಡಿದಿರುವುದು ಗಮನಿಸಬಹುದಾದ ಸಂಗತಿಯಾಗಿದೆ. ಪ್ರಬುದ್ಧತೆಯ ವಾತಾವರಣದಲ್ಲಿ ಇರುವವರು ಈ ಬಗೆಯ ಹುಚ್ಚು ಜಗತ್ತಿಗೆ ಆಕರ್ಷಿತರಾಗುವುದು, ಅದರಲ್ಲಿಯೇ ತಮ್ಮ ಅಭಿವ್ಯಕ್ತಿಯನ್ನು ಕಂಡುಕೊಳ್ಳಲು ನೋಡುವುದು ಗಮನಿಸಬೇಕಾದ ಸಂಗತಿಗಳೇ ಆಗಿವೆ. ಇಡೀ ಕೃತಿ ಹಿಂದಿನಿಂದ ಬಂದ ಯಾವ ಪರಂಪರೆಯ ಕತೆಗಳ ಜಾಡು ಹಿಡಿದಿಲ್ಲ. ಸಮಕಾಲೀನ ಮಕ್ಕಳ ಸಾಹಿತ್ಯದ ಹೊಳಹುಗಳಲ್ಲಿಯೂ ಕಂಡುಕೊಂಡಿಲ್ಲ. ಅದು ಲೇಖಕನದೇ ಅಗತ್ಯವಾಗಿ ಅರಳಿದ ಕೃತಿಯಾಗಿದೆ.

ಪುಟ್ಟ ಹುಡುಗಿ ಆಲೀಸ್ ರಜೆಯ ದಿನ ಬೇಸರ ಕಳೆಯಲು ಹುಲ್ಲುಗಾವಲಿನಲ್ಲಿ ನಡೆದುಕೊಂಡು ಹೋಗುತ್ತಿದ್ದ ವಿಚಿತ್ರದ ಮೊಲವನ್ನು ನೋಡಿ ದಿಗಿಲುಗೊಂಡು ಅದನ್ನು ಅನುಸರಿಸಿ, ಒಂದು ಹೊದರಿನೊಳಗೆ ಹೊಕ್ಕು, ಕೆಳಗೆ ಕೆಳಗೆ ಬೀಳುತ್ತಾ ಅನುಭವಿಸುವ, ನಾನಾಬಗೆಯ ಪ್ರಾಣಿಗಳನ್ನು, ಜೀವಿಗಳನ್ನು ಸಂಧಿಸುತ್ತಾ, ತನ್ನಿಂದ ಬೇರೆಯದೇ ಆದ ಅತಾರ್ಕಿಕವಾದ ಸಂಗತಿಗಳಿಗೆ ಎದುರಾಗುತ್ತಾ ಹೋಗುವುದು ಇಲ್ಲಿದೆ. ಕೊನೆಗೂ ಈ ಅತಾರ್ಕಿಕತೆ ಮುಗಿಯುವುದೇ ಇಲ್ಲ, ತಲೆ ಕೆಟ್ಟು ಅವಳು ಅದರಿಂದ ಬಿಡುಗಡೆ ಪಡೆಯುತ್ತಾಳೆ. ಹಾಗಿದ್ದರೂ ಹೊರಗೆ ಬಂದಾದ ಮೇಲೆ ಅದೂ ವಿಚಿತ್ರದ,

ಸೊಗಸಿನ ಲೋಕವೇ ಅಂದುಕೊಳ್ಳುತ್ತಾಳೆ. ಇದು ಮಕ್ಕಳ ಲೋಕದಲ್ಲಿಯೇ ವಿರಾಜಮಾನವಾಗಿ ಸಿನಿಮಾ ಆಗಿ, ಅನಿಮೇಷನ್ ಕೃತಿಯಾಗಿ ಇಂದಿಗೂ ಮಕ್ಕಳನ್ನ ರಂಜಿಸುತ್ತಲೇ ಇದೆ.

ಈ ಕೃತಿ ಕನ್ನಡದಲ್ಲಿ 'ಪಾತಾಳದಲ್ಲಿ ಪಾಪಚ್ಚಿ'ಯಾಗಿ ಅರಳಿ ಹಲವು ಸಲ ಮರುಮುದ್ರಣ ಕಂಡಿದೆ. ಸುಪ್ರಸಿದ್ಧ ಲೇಖಕ ನಾ.ಕಸ್ತೂರಿ ಅವರು ಇದನ್ನು ಕನ್ನಡಕ್ಕೆ ತಂದಿದ್ದಾರೆ. ನಾ.ಕಸ್ತೂರಿ ಅವರು ಆಲೀಸಳನ್ನು ಕನ್ನಡಕ್ಕೆ ತರಲು ಅವರ ಮನಸ್ಥಿತಿ ಚರ್ಚೆಯೂ ಅಗತ್ಯ. ಕಸ್ತೂರಿಯವರು ಮೂಲತಃ ಹಾಸ್ಯ ಮನೋಪ್ರವೃತ್ತಿಯವರು, ಅವರ ಒಟ್ಟು ಬರವಣಿಗೆ ಈ ಹಾಸ್ಯ ಪರಿಕರದಿಂದಲೇ ಕನ್ನಡದಲ್ಲಿ ಎದ್ದು ಕಾಣುವಂಥದು. ಹಾಗಾಗಿ ಅವರಿಗೆ ಆಲೀಸಳ ಈ ಹುಚ್ಚು ಜಗತ್ತು ಮೋಜಾಗಿ ಸೆಳೆದಿರಬಹುದು ಎನಿಸುತ್ತದೆ. ಅಲ್ಲಿನ ಅಣಕವಾಡುಗಳು, ಪಜಲ್‌ಗಳು ಅವರನ್ನು ಆಕರ್ಷಿಸಿವೆ. ಇಂಗ್ಲೀಷಿನಲ್ಲಿಯ ಪೆರಡಿಗಳನ್ನು ಕನ್ನಡದಲ್ಲಿ ತರುವುದು ಅಸಾಧ್ಯವಾಗಿದೆ. ಹಾಗಾಗಿ ಕಸ್ತೂರಿಯವರು ಕನ್ನಡದ ಪದ್ಯಗಳನ್ನೇ ಅವಲಂಬಿಸಿದರು. ಒಂದು ಉದಾಹರಣೆ ಹೀಗಿದೆ;

ಟೈಗರೆಂಬ ನಾಯಿ ತನ್ನ
ನೆರೆಯಲ್ಲಿದ್ದ ಇಲಿಯ ಕರೆದು,
'ನಿನ್ನ ಮೇಲೆ ತಪ್ಪು ಹೊರಿಸಿ
ಜಡ್ಜಿ ಮುಂದೆ ನಿಲಿಸುವೆ,
ಬಾರೋ ಬೇಗ' ಎಂದಿತು.
ಇಲಿಯು, ಪಾಪ, ಅತ್ತು ಕರೆದು
'ಕೇಸು, ಗೀಸು, ಜಡ್ಜಿ, ಗಿಡ್ಜಿ
ಬೇಡಿ, ಬಿಡಿರಿ !' ಎನ್ನಲು
ನಾನೆ ಲಾಯರ್ನಾನೆ ಜಡ್ಜಿ'
ಎಂದು ನಾಯಿ ಬೊಗಳುತಾ
ಮರಣ ಶಿಕ್ಷೆ ವಿಧಿಸಿತು.

ಹೀಗಿದ್ದೂ ಇಂಥದೊಂದು ಕೃತಿ ಕನ್ನಡದ ವಾತಾವರಣದಲ್ಲಿ ಎಷ್ಟು ಸೂಕ್ತ ಎನ್ನುವ ಒಂದು ಪ್ರಶ್ನೆಯನ್ನು ಆನಂದ ಪಾಟೀಲರು ತಮ್ಮ ಕೃತಿಯಲ್ಲಿ ಮುಂದಿಡುತ್ತಾರೆ. ಅವರು ಕುಪ್ಪಂ ವಿಶ್ವವಿದ್ಯಾಲಯದಯ ಅನುವಾದಗಳ ವಿಚಾರ ಸಂಕಿರಣವೊಂದರಲ್ಲಿ ಈ ಕೃತಿಯನ್ನೇ ವಿಶೇಷವಾಗಿ ಚರ್ಚೆಗೆ ಇಟ್ಟುಕೊಂಡು ಮಾತನಾಡಿದ್ದಾರೆ.

'ಕನ್ನಡದ ವಾತಾವರಣದ ಹಿನ್ನೆಲೆ ಈ ಬಗೆಯ ಕಥಾನಕಕ್ಕೆ ಸೂಕ್ತವೇ ಅಲ್ಲ. ಅದರ ಹಿಂದಿನ ಮನೋಧರ್ಮವೂ ಇಲ್ಲಿ ಹೊಂದಿಕೆಯಾಗದ್ದಾಗಿದೆ. ಹಾಗಿರುವಾಗ ಆಲೀಸಳನ್ನು ಪಾಪಚ್ಚಿ ಮಾಡಿ ಕನ್ನಡದ ಪರಿಸರವಾಗಿ ತಂದುಕೊಂಡು ಅಲ್ಲಿನ ಅಸಂಗತದ ಕಲ್ಪನೆಯನ್ನು ತಂದಿರುವುದು ಎಷ್ಟು ಸಮಂಜಸ ಎನ್ನುವುದು ಅವರ ವಾದ. ಇಂಥ ಕೃತಿಯನ್ನು ಕನ್ನಡಕ್ಕೆ ತರುವುದೇ ಆದರೆ ಇಂಗ್ಲೀಷಿನ ವಾತಾವರಣದ ಆಲೀಸಳ ಕತೆಯಾಗಿಯೇ ತರುವುದು ಸೂಕ್ತ'[೩] ಎಂದು ಅವರು ವಾದಿಸುತ್ತಾರೆ. ಈ ಕೃತಿ ಕನ್ನಡದ ಮಕ್ಕಳ ಜಗತ್ತಿನಲ್ಲಿ ಎಷ್ಟು ಓದಿಗೆ ತೆರೆದುಕೊಂಡಿತೋ ಗೊತ್ತಿಲ್ಲ. ಆದರೆ ಪ್ರಬುದ್ಧ ಸಾಹಿತಿಗಳ ನಡುವೆ ಆಗಾಗ ಪ್ರಸ್ತಾಪಕ್ಕೆ ಬಂದಿದೆ. ಅದು ಬಹುಶಃ ನಾ.ಕಸ್ತೂರಿ ಅವರ ಹೆಸರಿನ, ಬರವಣಿಗೆಯ ಪ್ರಭಾವದಲ್ಲಿ ಆಗಿರಲೂಬಹುದು.

ಈ ಕೃತಿಯ ಒಳಹೊಕ್ಕು ನೋಡಿದವರು ಎಷ್ಟು ಜನವೋ ಗೊತ್ತಿಲ್ಲ. ಮಕ್ಕಳ ಸಾಹಿತ್ಯವನ್ನು ಅಧ್ಯಯನಕ್ಕೆ ವಿಸ್ತೃತವಾಗಿ ಹರವಿಕೊಂಡರೆ ಈ ಬಗೆಯ ಸಮಸ್ಯೆಗಳು ಮುಂದೆ ಬಂದೇ ಬರುತ್ತವೆ. ಪಾತಾಳದಲ್ಲಿ ಪಾಪಚ್ಚಿ ಕನ್ನಡದ್ದೇ ಒಂದು ಕೃತಿಯಾಗಿದೆಯೇ ಹೊರತು ಕೆರೋಲ್‌ನ ಸುಪ್ರಸಿದ್ಧ ಕೃತಿಯನ್ನು ಕನ್ನಡದ ಮಕ್ಕಳಿಗೆ ತಂದಿದ್ದಾಗುವುದಿಲ್ಲ. ಹಾಗೆ ತಂದಾಗಲೂ ಅಲ್ಲಿನ ಅಸಂಗತದ ಫ್ಯಾಂಟಸಿಯ ಸಮಸ್ಯೆ ಉಳಿದೇ ಉಳಿಯುತ್ತದೆ. ಹಾಗಾಗಿ ಪಾತಾಳದಲ್ಲಿ ಪಾಪಚ್ಚಿಯು ರೂಪಾಂತರವಾಗಿ ಕನ್ನಡಕ್ಕೆ ಬಂದು ಈಗ ಕನ್ನಡದ ಮಕ್ಕಳ ಸಾಹಿತ್ಯ ಕೃತಿಗಳಂತೆಯೇ ಕನ್ನಡದ ಓದುಗರಿಗೆ ಹತ್ತಿರವಾಗಿದೆ.

೬.೧.೩. ಮಮ್ಮೂ ಬಯಕೆಗಳು ಮತ್ತು ಫ್ಯಾಂಟಸಿ

ಸ್ವೀಡಿಷ್ ಲೇಖಕಿ ಜುಜ್ಜಾ ಥಾಮಸ್‌ರ ಕೃತಿ ಇಂಗ್ಲೀಷ್ ಮೂಲಕ ಎನ್.ಬಿ.ಟಿ ಪ್ರಕಾಶನ ಅವರಿಂದ ಕನ್ನಡಕ್ಕೆ 'ಉಯ್ಯಾಲೆಯಾಡಿತು ಹಸು' ಆಗಿ ಬಂದಿದೆ. ಇದು ನಮ್ಮ ಪರಂಪರೆಯ ಪ್ರಾಣಿಕತೆಗಳ ಒಂದು ಬಗೆಯ ಮುಂದುವರಿಕೆ ಎಂದು ಮೇಲುನೋಟಕ್ಕೆ ಎನ್ನಿಸಿದರೂ, ಹೊಸಗಾಲದ ತುಡಿತದಿಂದ ಆಕರ್ಷಿಸುತ್ತದೆ. ಲೇಖಕಿಯ ಬದುಕಿನ ಹಿನ್ನೆಲೆಯಿಂದ ಇನ್ನೂ ವಿಶೇಷಗಳನ್ನು ಹೇಳುತ್ತದೆ.

ಇಲ್ಲಿನ ಕತೆಯೇ ವಿಶೇಷದ್ದು. ದನದ ಕೊಟ್ಟಿಗೆಯಲ್ಲಿರುವ ಒಂದು ಹಸು ಮಾತ್ರ ಎಲ್ಲ ಹಸುಗಳ ತರಹ ಯೋಚನೆ ಮಾಡುವುದಿಲ್ಲ. ಅದು ದಿನವೂ ಹೊರಗೆ ಕಾಡಿಗೆ ಹೋಗುವುದು, ಹುಲ್ಲು ಮೇಯುವುದು, ಮನೆಗೆ ಮರಳುವುದು ಇದರಲ್ಲೇ ದಿನ ಕಳೆಯುವುದರಲ್ಲಿ ಬೇಸರ ಅನುಭವಿಸುತ್ತದೆ. ಅದಕ್ಕಾಗಿ ಹೊಸತಿಗೆ ಹಂಬಲಿಸುತ್ತದೆ. ಅದಕ್ಕೆ ಮಾಲಿಕನ ಪುಟ್ಟ ಮಗಳು ಜೋಕಾಲಿ ಆಡಿದುದನ್ನು ನೋಡಿ ತಾನೂ ಆಡಬೇಕೆಂದು ಒಮ್ಮೆ ಅನಿಸುತ್ತದೆ. ಅದಕ್ಕೆ ತಾನೇ ಏನೇನೋ ಪರಿಕರಗಳನ್ನು ಹಳೆಯ ಕೊಟ್ಟಿಗೆಯಲ್ಲಿ ಹುಡುಕಿಕೊಳ್ಳುತ್ತದೆ, ಉಳಿದೆಲ್ಲ ಹಸುಗಳು ಎಂದಿನಂತೆ ಹುಲ್ಲು ಮೇಯಲು ಹೋಗುವಾಗ, ತಾನು ಹೋಗದೆ, ಸೈಕಲ್ ಸವಾರಿ ಮಾಡಿಕೊಂಡು,

ಉಳಿದೆಲ್ಲ ಹಸುಗಳನ್ನು, ಮಾಲಿಕನನ್ನು ತಪ್ಪಿಸಿ ಕಾಡಿಗೆ ಹೋಗುತ್ತದೆ, ಅಲ್ಲಿ ಅದಕ್ಕೊಂದು ಗೆಳೆಯನಾಗಿ ಕಾಗೆ ಇರುತ್ತದೆ. ಕಾಗೆಯ ಹತ್ತಿರ ಗೋಗರೆದು ಮರಕ್ಕೆ ಉಯ್ಯಾಲೆ ಕಟ್ಟಿಸಿಕೊಳ್ಳುತ್ತದೆ, ಕಾಗೆಗೂ ಅದು ಕಷ್ಟದ್ದು, ಆದರೂ ಅದು ಹೇಗೋ ಗೆಳೆಯನಿಗಾಗಿ ಸಿದ್ಧಗೊಳಿಸುತ್ತದೆ. ಇನ್ನು ಆ ಜೋಕಾಲಿಯನ್ನು ಏರುವುದು, ತೂಗಿಕೊಳ್ಳುವುದು ಹಸುವಿಗೆ ಮತ್ತೊಂದು ಸಮಸ್ಯೆಯಾಗುತ್ತದೆ.

ಹಸುವು ಕಾಗೆಗೆ ಗೋಗರೆಯುತ್ತದೆ, ಆದರೆ ಪಾಪದ್ದು ಕಾಗೆ ತನ್ನ ಅಸಹಾಯಕತೆ ವ್ಯಕ್ತಪಡಿಸುತ್ತದೆ. ಸರಿ, ಹಸು ತಾನೇ ಹೇಗೆ ಹೇಗೋ ಪ್ರಯತ್ನ ಮಾಡಿ ಏರುತ್ತದೆ, ಹಾಗೂ ಹೀಗೇ ತನ್ನ ದೊಡ್ಡ ದೇಹ ಅಲುಗಿಸಿ ತೂಗಿಕೊಳ್ಳುತ್ತದೆ. ಜೋಕಾಲಿ ತೂಗತೊಡಗಿತೋ ಆನಂದವೋ ಆನಂದ ಅದಕ್ಕೆ, ಮನಸೋ ಇಚ್ಛೆ ಯಾವ ಪರಿವೆಯಿಲ್ಲದೆ ಆಡುತ್ತದೆ. ಸಂಜೆಯಾಗುತ್ತಾ, ಮಾಲೀಕ ಆ ಹಸುವಿಗಾಗಿ ಹುಡುಕುತ್ತಾ ತನ್ನ ಟ್ರ್ಯಾಕ್ಟರ್ ಏರಿ ಹುಡುಕುತ್ತಾ ಬರುವುದನ್ನು ಕಾಗೆ ಗಮನಿಸಿ ಹಸುವಿಗೆ ತಪ್ಪಿಸಿಕೊಳ್ಳಲು ಹೇಳುತ್ತದೆ. ಹಸು ಈಗಲೂ ಬಲು ಕಷ್ಟಪಟ್ಟು ವೇಗದಲ್ಲಿರುವ ಜೋಕಾಲಿಯಿಂದ ಕೆಳಗಡೆ ಜಿಗಿದು ಈಚೆಗಾಗುತ್ತದೆ, ಓಡಿ ಮರದ ಹಿಂದೆ ಅಡಗಿಕೊಂಡು ಪಾರಾಗುತ್ತದೆ.

ಮಾಲೀಕ ಉಯ್ಯಾಲೆ ನೋಡಿ ಈ ಕಾಡಿನಲ್ಲಿ ಉಯ್ಯಾಲೆ ಕಟ್ಟಿದವರ್‍ಯಾರು ಎಂದು ಅಚ್ಚರಿಪಡುತ್ತಾನೆ, ತಾನೂ ಅದರಲ್ಲಿ ಸ್ವಲ್ಪ ಹೊತ್ತು ವಿರಮಿಸಿ, ತಾನು ಹಾಕಿಕೊಂಡು ಬಂದಿದ್ದ ಮಂಕಿ ಟೋಪಿಯನ್ನು ಇರಿಸುತ್ತಾನೆ. ಅದನ್ನು ಅಲ್ಲೇ ಮರೆತು, ಸ್ವಲ್ಪ ಹೊತ್ತಿಗೆಲ್ಲ ಮರಳುತ್ತಾನೆ. ಹಸುವಿಗೆ ಆ ಟೊಪ್ಪಿಗೆಯನ್ನು ಹಾಕಿಕೊಳ್ಳುವ ಆಸೆಯೂ ಆಗಿಹೋಯಿತು. ಸರಿ ಅದನ್ನೂ ಹಾಕಿಕೊಂಡು ಸಂತಸಪಡುತ್ತದೆ. ಮನೆಗೆ ಮರಳುವ ಸರತಿ ಬಂದಾಗ ಉಯ್ಯಾಲೆಯನ್ನು ಕಾಡಿನಲ್ಲಿಯೇ ಬಿಟ್ಟು ತೆರಳುತ್ತದೆ. ಕಾಗೆ ಯಾಕೆ ಎಂದರೆ, ನನ್ನ ಹಾಗೆ ಮತ್ತೆ ಯಾವ ಪ್ರಾಣಿಗಾದರೂ ಆಸೆಯಾದರೆ, ಅವು ಬಂದಾಗ ಇದು ಅವರಿಗೆ ಒದಗಲಿ ಎಂದು ಹೇಳಿ, ಸ್ನೇಹಿತ ಕಾಗೆಗೆ ಧನ್ಯವಾದ ಹೇಳಿ ಹೋಗುತ್ತದೆ.

ಜುಜ್ಜಾ ಅವರು ಈ ಕತೆಯೊಂದನ್ನೇ ಬರೆಯದೇ ಈ ಮಮ್ಮು ಎನ್ನುವ ಹೆಸರಿಟ್ಟ ಹಸುವನ್ನಿಟ್ಟುಕೊಂಡು ಹಲವಾರು ಕತೆಗಳನ್ನು ಬರೆದಿದ್ದಾರೆ. ಇವೇ ಈಗ ಬಲು ಪ್ರಚುರವಾಗಿ ಹಬ್ಬಿವೆ. ಹಿಂದಿಯಲ್ಲಿ ಈಗಾಗಲೇ ಮೂರು ಕೃತಿಗಳು ಬಂದಿವೆ. ಜುಜ್ಜಾ ತಾನು ಬೆಳೆದಂತೆ ನಗರದ ಬೆಡಗಿಗೆ, ಧಾವಂತದ ಬದುಕಿಗೆ ಹೊರಳದೆ, ಹಸಿರು ಪರಿಸರದ ಹಳ್ಳಿಗಾಡಿನ ಜೀವನವನ್ನೇ ಆಯ್ದುಕೊಂಡರು. ಕೃಷಿ, ತೋಟಗಾರಿಕೆ ಮಾಡಿಕೊಂಡು, ಹಸುವಿನಂತಹ ಪ್ರಾಣಿಸಂಕುಲದ ಮಧ್ಯೆ ಬದುಕನ್ನು ಕಂಡುಕೊಂಡಿದ್ದು ಇಲ್ಲೆಲ್ಲಾ ಈ ಕೃತಿ ರಚನೆಯ ಹಿನ್ನೆಲೆಗಿದೆ. ಅವರು 'ಮಮ್ಮು' ಹಸುವನ್ನು ಎಷ್ಟು ಹಚ್ಚಿಕೊಂಡರು ಎಂದರೆ, ಅವರೇ ಹೇಳಿಕೊಂಡಂತೆ 'ಜುಜ್ಜಾ ಗೊತ್ತಿರಲಿಕ್ಕಿಲ್ಲ, ಮಮ್ಮು ಈಗ ಜಗತ್ತಿಗೇ ಗೊತ್ತು'[3] ಎಂದಿದ್ದಾರೆ. ಇಲ್ಲಿನ ಫ್ಯಾಂಟಸಿ ಸಹಜವಾದುದಾಗಿದೆ. ಇದು

ಲೇಖಕಿಯ ತುಡಿತವಾಗಿ ಅರಳಿದೆ. ಹೊಸಗಾಲದ ಬದುಕಿನ ಹಂಬಲಗಳನ್ನು ಹೇಳಲು ಬಯಸಿದ ಕಥೆಯಾಗಿದೆ.

ಪ್ರಾಣಿಗಳು ಸಂಭಾಷಣೆಗೆ ಇಳಿಯುವ ಮೂಲಕ ಅವಾಸ್ತವ ಬದುಕನ್ನು ತೆರೆದಿಡುವುದು, ಕಾಡಲ್ಲೇ ಇದ್ದರೂ ಅವುಗಳ ವರ್ತನೆ ಮತ್ತು ಸಂಭಾಷಣೆಯ ತಿರುಳು ಮಾತ್ರ ಮನುಷ್ಯನಿಗೆ ಸಂಬಂಧಿಸಿರುತ್ತದೆ. ನೇರವಾಗಿ ಇಲ್ಲವೇ ಪರೋಕ್ಷವಾಗಿ ಮನುಷ್ಯನ ಬದುಕನ್ನು ಪ್ರತಿನಿಧಿಸಿ ಆ ಮೂಲಕ ನೀತಿಯೊಂದನ್ನು ಪ್ರಾಣಿ ಪಕ್ಷಿಗಳ ಮೂಲಕ ನೀತಿ ಹೇಳಿಸುವುದು ನಮ್ಮ ಪರಂಪರೆಯಲ್ಲಿ ಇರುವ ಫ್ಯಾಂಟಸಿ ಕಥೆಗಳ ತಂತ್ರಗಳಲ್ಲಿ ಒಂದು. ಆದರೆ ಮಮ್ಮೂ ಪ್ರಾಣಿಗಳ ಕಥಾನಕದ ಭಿನ್ನಕಥೆ. ಇಲ್ಲಿಯೂ ಹಸುವೊಂದು ಕಾಗೆಯೊಂದಿಗೆ ಸಂಭಾಷಿಸಿದರೂ ಅದರಲ್ಲಿ ಚರ್ವಿತ ಚರ್ವಣವಾದ ಯಾವ ನೀತಿ ಸೂತ್ರಗಳನ್ನು ಬೆರೆಸಲು ಹೋಗಿಲ್ಲ. ಬದಲಾಗಿ ಮನುಷ್ಯನ ಸಹಜದ, ತುಡಿತಗಳಿಗೆ ತೆರೆದುಕೊಂಡುದು ಇಲ್ಲಿ ಹೊಸ ಸಂಗತಿಗೆ ಕಾರಣವಾಗಿದೆ. ಕೃತಿಗೆ ಸಕಾರಾತ್ಮಕತೆಯ ಚಿಮ್ಮುಹಲಗೆಯನ್ನು ನೀಡಲು ನೋಡಿದೆ.

೬.೧.೪. ಕಾಡಿನ ಕಥೆ

ರುಡ್‌ಯಾರ್ಡ್ ಕಿಪ್ಲಿಂಗ್ ತನ್ನ ಜಂಗಲ್‌ಬುಕ್ ಕೃತಿಯಲ್ಲಿ ಕಟ್ಟಿಕೊಂಡ ಫ್ಯಾಂಟಸಿ ಇನ್ನೊಂದೇ ಮಗ್ಗುಲಿನಿಂದ ನೋಡಲು ಸಾಧ್ಯವಾಗುತ್ತದೆ. ಇಲ್ಲಿನ ಫ್ಯಾಂಟಸಿಯಲ್ಲಿ ಕಾಡಿನಲ್ಲಿನ ಪ್ರಾಣಿಗಳ ಲೋಕವಿದೆ. ಅಲ್ಲಿ ಒಂದು ಮಾನವ ಮಗು ಕಾಣಿಸಿಕೊಂಡಾಗ ಉಂಟಾಗುವ ದ್ವಂದ್ವಗಳು, ಅವುಗಳನ್ನು ಈ ಕಾಡಿನ ಪ್ರಾಣಿಲೋಕ ಹೇಗೆ ಪರಿಹರಿಸಿಕೊಳ್ಳಲು ನೋಡಿತು ಎನ್ನುವುದನ್ನು ನೋಡುತ್ತೇವೆ. ರುಡ್‌ಯಾರ್ಡ್ ಕಿಪ್ಲಿಂಗ್ ಭಾರತೀಯ ಪರಿಸರದಲ್ಲಿ ಬಾಲ್ಯ ಕಳೆದ ಸಂದರ್ಭದಲ್ಲಿ ಕೇಳಿದ ಸಂಗತಿಗಳೇ ಈ ಕತೆಯ ಹಿನ್ನೆಲೆಗಿವೆ. ತೋಳಗಳು ಮೋಗ್ಲಿ ಎನ್ನುವ ಮಗುವನ್ನು ತಮ್ಮ ಹಾಗೆ ಸಾಕಲು ಮನಸ್ಸು ಮಾಡುವುದು ಒಂದು, ಬಗೀರಾ ಎನ್ನುವ ಚಿರತೆ ಕಾಡಿನ ನಿಯಮಗಳ ನಡುವೆ ಆ ಮಗುವನ್ನು ಕಾಯುವ, ಕಾಳಜಿವಹಿಸುವ ಪಾತ್ರವನ್ನು ಎಚ್ಚರಿಕೆಯಿಂದ ನಿಭಾಯಿಸಲು ನೋಡುತ್ತದೆ. ಹಾಗೆ ನೋಡುವಾಗಲೂ ಈ ಮಾನವ ಮಗು ಕೊನೆಗೊಮ್ಮೆ ಮಾನವರನ್ನು ಸೇರಬೇಕು, ಅದೇ ಅದಕ್ಕೆ ನ್ಯಾಯವಾದುದು ಎನ್ನುವ ಎಚ್ಚರಿಕೆಯಲ್ಲಿಯೇ ಇರುತ್ತದೆ.

ಭಾಲು ಕರಡಿ ಅಕ್ಕರೆಯಿಂದ, ಮುದ್ದಿನಿಂದ ಮಗುವನ್ನು ನೋಡಿಕೊಳ್ಳಲು ಮುಂದೆ ಬರುತ್ತದೆ. ಷೇರಖಾನ್ ಎನ್ನುವ ಹುಲಿ ಮಾತ್ರ ಇದು ತನಗೆ ಆಹಾರವೇ ಎನ್ನುವ ಹುನ್ನಾರದಲ್ಲೇ ಇರುತ್ತದೆ. ಕೊನೆಗೂ ಮಗುವನ್ನು ಮನುಷ್ಯರ ತಾಣಕ್ಕೆ ಕಳಿಸುವ ಪ್ರಯತ್ನ ಮಾಡಿ ಈ ಗೊಂದಲವನ್ನು ಪ್ರಾಣಿಗಳು ನೀಗುತ್ತವೆ. ಇಡೀ ಕಥಾನಕ ಈ ಬಗೆಯ ಸಮಸ್ಯೆಯನ್ನು ಮುಂದಿಟ್ಟುಕೊಂಡರೂ ಪ್ರಾಣಿ ಲೋಕದ, ಕಾಡಿನ ಪ್ರಾಣಿಲೋಕದ ಜೀವನದ ನಿಯಮಗಳನ್ನು ಹರವಿಕೊಂಡು ಎಲ್ಲವೂ ಪಾಲಿಸುವ, ನೇಮದಿಂದ ನಡೆದುಕೊಳ್ಳುವ ವಾತಾವರಣವನ್ನು ಚಿತ್ರಿಸುತ್ತಾ ಹೋಗಿದೆ.

ಇಡೀ ಕಥಾನಕ ಪ್ರಾಣಿಗಳದೇ ಲೋಕದ ವ್ಯವಹಾರಗಳನ್ನು ಕಾಯುವ, ಅವುಗಳದೇ ಪ್ರಾಕೃತಿಕ ಜೀವನ ಚಕ್ರವನ್ನು ಕಾಯ್ದುಕೊಳ್ಳುವ ಚಿತ್ರಣ ಇಲ್ಲಿ ಕಂಡು ಬರುತ್ತದೆ. ಪ್ರಾಣಿಗಳು ಮಾತನಾಡಿಕೊಳ್ಳುತ್ತಾ, ಮನುಷ್ಯರಂತೆ ಸಂಭಾಷಣೆ ನಡೆಸುತ್ತವೆ. ಮಾತುಕತೆಗಿಳಿದು ನ್ಯಾಯ ಪಂಚಾಯಿತಿ ಸೇರಿಸಿದರೂ ಅವು ಪ್ರಾಣಿಲೋಕದ ನಡವಳಿಕೆಗಳೇ ಆಗಿವೆ. ಅವುಗಳ ನಡುವಿನ ಹೊಂದಾಣಿಕೆ, ಕೂಡು ಬದುಕು ಇವುಗಳ ಬಗೆಗೇ ಮಾತನಾಡಿಕೊಳ್ಳುವುದು ಇಲ್ಲಿದೆ. ಪ್ರಾಣಿಗಳಲ್ಲಿ ಒಂದು ಬಗೆಯ ಹೊಂದಾಣಿಕೆ, ವ್ಯವಸ್ಥೆ ಇರುತ್ತದೆ ಎನ್ನುವ ಗ್ರಹಿಕೆಯಲ್ಲಿ ಕತೆ ಸಾಗುತ್ತದೆ. ಅದು ಎಲ್ಲೂ ಮನುಷ್ಯನ ಬದುಕಿನ ಗೊಂದಲಗಳಿಗೆ ಪರ್ಯಾಯವಾಗಿ, ಪರಿಸರ ಕಾಯುವುದಕ್ಕಾಗಿ ಎಂದು ಕಾಣಿಸಿಕೊಂಡದ್ದಲ್ಲ ಎನ್ನುವುದನ್ನು ಗಮನಿಸಬೇಕು ಇಲ್ಲಿ. ರುಡ್‌ಯಾರ್ಡ್ ಕಿಪ್ಲಿಂಗ್ ಬರೆಯುವಾಗ ಪರಿಸರದ ಕಾಳಜಿಗಳು ಇವತ್ತು ಕಾಡುವ ಹಾಗೆ, ಆಂದು ಅವರಿಗೆ ಕಾಡಿದ್ದಂತೆ ತೋರುವುದಿಲ್ಲ. ಹಾಗಾಗಿ ಇಲ್ಲಿಯದು ಒಟ್ಟಾರೆ ಪ್ರಾಣಿಗಳ ನಡುವಿನ ಲೋಕ, ಅಲ್ಲಿಯ ಮನೋಲೋಕ, ಅಲ್ಲಿಯೂ ಕಾಣುವ ಪ್ರೀತಿ, ದ್ವೇಷಗಳ ಕತೆಯಾಗಿದೆ.

ಕಾಡಿನ ಪರಿಸರದಿಂದ ಬೇರೆಯಾದ ಮಾನವ ಶಿಶು ಕಾಣಿಸಿಕೊಂಡಾಗ ಹುಟ್ಟಿಕೊಳ್ಳುವ ಗೊಂದಲಗಳು ಇಡೀ ಕಥಾನಕಕ್ಕೆ ಕಾರಣವಾದಂತೆ ಚಿತ್ರಣ ಇದೆ. ಮೋಗ್ಲಿ ಮಗು ಮುಗ್ಧವಾದುದು, ಅಮಾಯಕವಾದುದು, ಅದು ಪ್ರಾಣಿಲೋಕವನ್ನೇ ಹಚ್ಚಿಕೊಂಡು ಬೆಳೆಯತೊಡಗುವುದು ಇಲ್ಲಿ ಸಿಗುವ ಇನ್ನೊಂದು ಆಯಾಮವಾಗಿದೆ. ಆ ಮಗು ಮನುಷ್ಯರ ಲೋಕದ ಪರಿಚಯ ಮಾಡಿಕೊಳ್ಳುವುದು, ನಿಧಾನ ಆ ಕಡೆಗೆ ಹೊರಳಿಕೊಳ್ಳುವುದು ನಡೆಯುತ್ತದೆ. ಪ್ರಾಣಿಲೋಕ ಅಂಥ ಅನಗತ್ಯದ ಜೀವನವನ್ನು ಹೇಗೆಲ್ಲ ನೋಡಲು ತೊಡಗಿತು, ಅದರ ಸುತ್ತ ಹೊಂದಿಕೊಳ್ಳಲು, ಕಾಳಜಿ ವಹಿಸಲು ಹವಣಿಸಿತು, ಹಾಗೆಯೇ ತನ್ನದೇ ಆಸೆಗಳಿಗಾಗಿ ವ್ಯತಿರಿಕ್ತವಾಗಿಯೂ ಹೇಗೆ ನಡೆದುಕೊಂಡಿತು ಎನ್ನುವುದು ಎಲ್ಲವೂ ಇಲ್ಲಿ ಕಾಣಿಸಿಕೊಂಡಿದೆ. ಈ ಬಗೆಯ ವ್ಯವಸ್ಥೆ ಖಂಡಿತ ಕಾಡಿನ ಪ್ರಾಣಿ ಲೋಕದಲ್ಲಿ ಇರಲಾರದು. ಮತ್ತೆ ಒಬ್ಬ ಲೇಖಕನಿಂದ ಮನುಷ್ಯರದೇ ಲೆಕ್ಕಗಳ ಹವಣಿಕೆಯಲ್ಲಿ ಇದೆಲ್ಲ ಕಾಣಿಸಿದೆ. ಅದು ಪ್ರಾಣಿಲೋಕದ ಕೆಲವೆಲ್ಲ ಅಚ್ಚರಿಗಳ ಸುಲಿವಿನೊಂದಿಗೆ ಕಂಡುಕೊಂಡಿದ್ದಾಗಿದೆ.

ಈ ಮೊದಲು ಬಂದ ಪ್ರಾಣಿ ಕತೆಗಳು ಇಷ್ಟರ ಮಟ್ಟಿಗೆ ಈ ವ್ಯವಸ್ಥೆಯ ಮಾತುಕತೆಗಳನ್ನು ಹೊಂದಿರಲಿಲ್ಲ. ಅದರಲ್ಲೂ ಮೋಗ್ಲಿಯ ಕಾಡಿನ ಪ್ರವೇಶ, ಆ ಮಾನವ ಮಗುವನ್ನು ತಮ್ಮ ತೆಕ್ಕೆಗೆ ಹಾಕಿಕೊಂಡಿದ್ದು, ಫ್ಯಾಂಟಸಿಯೂ ಹೌದು, ಹಾಗೆಯೇ ಹೊಸಕಲ್ಪನೆಯೂ ಆಗಿ ಮಕ್ಕಳ ಲೋಕವನ್ನು ಇನ್ನಿಲ್ಲದಂತೆ ಸೆಳೆದದ್ದು ಈಗ ಇತಿಹಾಸ. ಕಿಪ್ಲಿಂಗ್‌ಗೆ ಅಪಾರ ಹೆಸರು ತಂದುಕೊಟ್ಟ ಕೃತಿಯೂ ಇದಾಗಿದೆ. ಸಿನಿಮಾ ಆಗಿ ಅನಿಮೇಷನ್ ತಂತ್ರಗಳನ್ನು, ತ್ರೀಡಿ ತಂತ್ರಜ್ಞಾನದಲ್ಲೂ ಇದು ಅರಳಿಕೊಂಡು, ಹೊಸದಾದ ಅಭಿವ್ಯಕ್ತಿ ಸಾಧ್ಯತೆಗಳನ್ನು ಹೇಳಿದೆ. ಇದು ಕನ್ನಡದವರಿಗೆ ಪುಸ್ತಕವಾಗಿ ಮುಟ್ಟಿರುವ ಹಾಗೆ ಟಿವಿ ಸೀರಿಯಲ್ ಆಗಿ ಕೂಡ ಡಬ್ಬಿಂಗ್ ಹೊಂದಿ ತಲುಪಿದೆ.

'ಪಂಚತಂತ್ರ'ದ ಕಥಾ ಸರಣಿಗೂ ಈ ಕಥೆಗೂ ಬಲು ವಿಭಿನ್ನತೆ ಇದೆ. 'ಪಂಚತಂತ್ರ' ವ್ಯಾವಹಾರಿಕ, ಲೌಕಿಕ ಬದುಕಿನ ವ್ಯಾಪಾರಗಳನ್ನೆಲ್ಲಾ ಪ್ರಾಣಿಗಳ ಮೂಲಕ ಹಮ್ಮಿಕೊಂಡಿದೆ. ಅಲ್ಲಿ ಬಹುಮುಖ್ಯವಾಗಿ ಎದ್ದು ಕಾಣುವುದು ಮನುಷ್ಯರ ನಡುವಿನ ಅಗತ್ಯಗಳೇ ಆಗಿವೆ. ಹಾಗಾಗಿ ಈ ಬಗೆಯ ಇನ್ನಷ್ಟು ವಿಸ್ತಾರದ ಚಾಚುಗಳು ಕಾಡಿನ ಕಥೆಯಲ್ಲಿ ಕಾಣಿಸಿಕೊಂಡಿವೆ.

೬.೧.೫. ಪಾಪಣ್ಣನ ಪೋಕರಿತನಗಳು

'ಪೋಕರಿ ಪಾಪಣ್ಣನ ಪರಾಕು' ಮಾಯಾ ವಾಸ್ತವದ ನೆಲೆಗಟ್ಟಿನಲ್ಲಿ ರಚನೆಯಾದ ಕಾದಂಬರಿ ಇದು'[೫].. ಆದರೆ ಈ ಬಗೆಯ ವಾಸ್ತವದ ಪರಸರದಲ್ಲಿ ಕಾಣುವ ಅವಾಸ್ತವ ಸಂಗತಿಗಳ ಕಥಾ ಹಂದರಗಳು ಸಾಮಾನ್ಯವಾಗಿಯೇ ನಮ್ಮ ನಡುವಿವೆ, ಫ್ಯಾಂಟಸಿ ಸಾಹಿತ್ಯದಲ್ಲಿ ಇದೆಲ್ಲ ಇರುತ್ತದೆ. ಈ ಬಗೆಯ ಪದದ ಬಳಕೆಯನ್ನು ಗಿರಡ್ಡಿ ಗೋವಿಂದರಾಜ ಅವರೂ ಜನಪದ ಗೀತಸಾಹಿತ್ಯದ ವಿವರಣೆಯ ಹಿನ್ನೆಲೆಯಲ್ಲಿ ಬಳಸಿದ್ದಾರೆ. ಇಂಗ್ಲೀಷಿನಲ್ಲಿ ಫ್ಯಾಂಟಸಿ ಸಾಹಿತ್ಯ ಹೊಸಗಾಲದಲ್ಲೂ ವಿಪುಲವಾಗಿ ತೆರೆದುಕೊಂಡು ಬೆಳೆದಿರುವಂತೆ ಕನ್ನಡದಲ್ಲಿ ಕಾಣಿಸಿಕೊಳ್ಳಲಿಲ್ಲ. ಅಲ್ಲದೆ ಮಕ್ಕಳ ಸಾಹಿತ್ಯದ ಕಡೆಗೆ ಪ್ರಬುದ್ಧ ಸಾಹಿತ್ಯ ಲೋಕ ಅಷ್ಟಾಗಿ ಹೊರಳದೇ ಹೋದುದರಿಂದ ಈ ಬಗೆಯ ಹೊಸ ಕಾಣುವಿಕೆಯ ಪ್ರಮೇಯಗಳು ಕನ್ನಡದ ಲೇಖಕರಲ್ಲಿ ನಡೆಯುತ್ತಿವೆ. ಇದು ಈಗಾಗಾಲೇ ತುಂಬಾ ಪ್ರಚಾರ ಕಂಡ ಕತೆಯಾಗಿದೆ.

ಪ್ರಭು ಎಂ.ಎಸ್.ಕೆ. ಅವರು ಇಟಾಲಿಯನ್ ಮೂಲದ ಈ ಕೃತಿಯನ್ನು ಕನ್ನಡಕ್ಕೆ ಅದ್ಭುತ ರಮ್ಯವನ್ನು ಪರಿಚಯಿಸುವ ಹಿನ್ನೆಲೆಯಲ್ಲಿ ಅನುವಾದಿಸಿದ್ದಾರೆ. ಇಡೀ ಕಥನ ಪಾಪಣ್ಣನ ತುಂಟಾಟಗಳ ಸುತ್ತ ನಡೆಯುತ್ತದೆ. ಪಾಪಣ್ಣನೆಂಬ ಕಟ್ಟಿಗೆ ತುಂಡಿನಿಂದಾದ ಬೊಂಬೆಯು ಆಲೋಚನಾರಹಿತ ನಡೆವಳಿಕೆಗಳಿಂದ ಪೇಚಿಗೆ ಸಿಕ್ಕಿಹಾಕಿಕೊಳ್ಳುವುದು, ನಂತರ ಹೀಗೆ ಮಾಡಬಾರದೆಂದು ವ್ಯಥೆ ಪಡುತ್ತದೆ. ಮತ್ತೆ ಅಂಥದೇ ತಪ್ಪುಗಳನ್ನು ಪಾಪಣ್ಣ ಮಾಡುತ್ತಾನೆ. ಮಕ್ಕಳ ಲೋಕದಲ್ಲಿ ಅರಳಬಹುದಾದ ಅವಧಾನ ಕೇಂದ್ರೀಕರಿಸಬಲ್ಲ ಕಾದಂಬರಿ ಇದಾಗಿದೆ.

ಮಕ್ಕಳಿಗೆ ಮೌಲ್ಯಗಳನ್ನು ಹೇಳಲು ಈ ಕಥೆಯನ್ನು ಹೆಣೆದಂತಿದೆ. ಶಾಲೆಗೆ ಹೋಗುವ ವಯಸ್ಸಿನ ಮಕ್ಕಳು ಶಾಲೆಯಿಂದ ವಿಮುಖರಾಗುವುದು, ಬದಲಾಗಿ ಏನೋ ಮಾಡಿ ಸಂಕಷ್ಟಕ್ಕೆ ಸಿಕ್ಕುವುದು ಇಂಥದೇ ಘಟನೆಗಳ ಸುತ್ತ ಕಥೆ ಸುತ್ತುತ್ತದೆ. ಶಾಲೆಗೆ ಹೋಗದಿದ್ದರೆ ಹೀಗಾಗುತ್ತಿರಲಿಲ್ಲ. ಎಂದು ಪಾಪಣ್ಣ ವ್ಯಥೆ ಪಡುವುದು ತುಂಬಾ ನಡೆಯುತ್ತದೆ. ಆದರೆ ಎಲ್ಲೂ ಮಕ್ಕಳನ್ನು ಹಿಡಿದಿಡುವಲ್ಲಿ ಕಥೆ ವಿಫಲವಾಗಿಲ್ಲ ಎನ್ನಬಹುದು. ಅದರ ಜನಪ್ರಿಯತೆಯೇ ಅದನ್ನ ಹೇಳುತ್ತಿದೆ. ಕೃತಿಯಲ್ಲಿ ಒಡಮೂಡಿರುವ ಫ್ಯಾಂಟಸಿಯೇ ಈ ಗೆಲುವಿಗೆ ಕಾರಣವಾಗಿದೆ. ಪಾಪಣ್ಣನು ಒಬ್ಬ ಮುಗ್ಧನಾಗಿ ನರಿ, ಬೆಕ್ಕಿನೊಂದಿಗೆ ಮೋಸ ಹೋಗುವುದು, ಮತ್ತೆ ಮತ್ತೆ ಅವರನ್ನು ನಂಬುವುದು ಇಲ್ಲಿ ನಡೆಯುತ್ತದೆ. ಒಮ್ಮೊಮ್ಮೆ ಪಾಪಣ್ಣನ ಮುಗ್ಧತೆ ಅವನ ಬಲಹೀನತೆ ಎನ್ನುವಂತೆ ಬಿಂಬಿತವಾಗಿದೆ.

ಬೆಕ್ಕಿನ ಮುಂಗಾಲಿನ ಪಂಜ ಇಲ್ಲದಿರುವುದನ್ನು ಗಮನಿಸಿದ ಪಾಪಣ್ಣ ಪ್ರಶ್ನೆ ಮಾಡುತ್ತಾನೆ. ಪಾಪಣ್ಣನಿಂದಲೇ ಪಂಜ ಕಿತ್ತಿಸಿಕೊಂಡ ಬೆಕ್ಕು ಏನೂ ಹೇಳದೆ ಪೆಚ್ಚಾಗಿ ನಿಂತಿತು. ನರಿ ಅದಕ್ಕೆ ಸಮಜಾಯಿಸಿಯನ್ನು ನೀಡಿತು. 'ಒಂದು ಗಂಟೆ ಹಿಂದೆ ರಸ್ತೇಲಿ ತೋಳ ಬಿದ್ದಿದ್ದನ್ನು ನೋಡಿದೆವು. ಹೊಟ್ಟೆಗಿಲ್ಲದೆ ಅದು ಜ್ಞಾನ ತಪ್ಪಿದ್ಯೇನೋ ಅನ್ನೋಥರ ಬಿದ್ಕೊಂಡಿತ್ತು.......ದಾನಶೂರನ ಅಪರಾತಾರವೇ ಆದ ಇವಳು ಏನು ಮಾಡಿದಳು? ತನ್ನ ಒಂದು ಬೆಟ್ಟನ್ನೇ ಕಚ್ಚಿ ತುಂಡುಮಾಡಿ, ಅದಕ್ಕೆ ತಿನ್ನಕ್ಕೆ ಕೊಟ್ಟುಬಿಟ್ಟಳು."[೪] ಪಾಪಣ್ಣನು ಆಡಿದ ಮಾತುಗಳು; 'ಎಲ್ಲಾ ಬೆಕ್ಕುಗಳೂ ನಿನ್ನ ಥರಾನೇ ಇದ್ದಿದ್ರೆ, ಇಲಿಗಳೆಲ್ಲಾ ಎಷ್ಟೊಂದು ಅದೃಷ್ಟಶಾಲಿಗಳಾಗ್ತಿದ್ರು!'[೫]. ಹಣದ ಮೇಲಿನ ಅವನ ಮೋಹ ಎಲ್ಲವನ್ನೂ ನಂಬುವಂತೆ ಮಾಡಿಬಿಡುತ್ತದೆ. ಇದು ಅವನ ಆಸೆಗಿಂತ ಮಿಗಿಲಾಗಿ ಬಲಹೀನತೆಯ ಪ್ರತೀಕವಾಗಿದೆ.

ಕತೆಯಲ್ಲಿನ ಅತಿವಾಸ್ತವ ಸಂಗತಿಗಳು ವಾಸ್ತವದಲ್ಲೇ ನಡೆಯುತ್ತಿರುತ್ತವೆ. ಇದನ್ನು ಮುನ್ನುಡಿಯಲ್ಲಿ ಎಲ್.ವಿ.ಶಾಂತಕುಮಾರಿಯವರು ಮಾಂತ್ರಿಕ ವಾಸ್ತವತೆ ಎಂದು ಕರೆದಿದ್ದಾರೆ. 'ವಾಸ್ತವ ಪ್ರಪಂಚದ ನೆಲೆಗಟ್ಟಿನಲ್ಲಿಯೇ ನಡೆಯುವ ಅವಾಸ್ತವ ಅಥವಾ ಅತಿವಾಸ್ತವವೆನಿಸುವ ಘಟನೆಗಳು, ಮತ್ತು ಅಂತಹ ನೆಲೆಗಟ್ಟಿನಲ್ಲಿಯೇ ರೂಪಿಸಲ್ಪಟ್ಟಿರುವ ವಾಸ್ತವ ಪಾತ್ರಗಳು. ಆದರೆ ಅವುಗಳ ನಡೆ, ನುಡಿ, ಕ್ರಿಯೆಗಳು ಅತಿವಾಸ್ತವತೆಯ ಮೆರುಗು ಪಡೆದಿರುತ್ತವೆ.'[೬] ಇದಕ್ಕೆ ಪೂರಕವೆನ್ನುವಂತೆ ಕಥೆಯಲ್ಲಿ 'ಪವಾಡಸ್ಥಳ'ದ ಪ್ರಸ್ತಾಪ ಬರುತ್ತದೆ. ನಮ್ಮಲ್ಲಿರುವ ಹಣವನ್ನು ಮಣ್ಣಿನಲ್ಲಿ ಹೂತು ನೀರು ಹಾಕಿದರೆ, ಅದು ಗಿಡವಾಗಿ ಅದರ ಐದು ಪಟ್ಟು ಹಣ ಬಿಡುತ್ತದೆ ಎಂದು ಪಾಪಣ್ಣನನ್ನು ನಂಬಿಸಲಾಗುತ್ತದೆ. ಪಾಪಣ್ಣನು ದುಡ್ಡಿನ ಭ್ರಮಾಲೋಕದಲ್ಲಿ ಇರುತ್ತಾನೆ. ಹಾಗಾಗಿ ಅದು ಅವನಿಗೆ ಪವಾಡ ಸ್ಥಳವಾಗಿ ಕಾಣುತ್ತದೆ. ಅಲ್ಲೇ ಮರವೊಂದರಲ್ಲಿ ಕುಳಿತಿದ್ದ ಗಿಣಿ ವಾಸ್ತವತೆಯ ಅರಿವಿನಲ್ಲಿರುತ್ತದೆ. ಪಾಪಣ್ಣನಿಗೆ ವಸ್ತುಸ್ಥಿತಿಯನ್ನು ಹೇಳಿ ವಾಸ್ತವತೆಗೆ ತರುತ್ತದೆ. ಇಲ್ಲದ ಅತಿವಾಸ್ತವತೆಯನ್ನು ಸೃಷ್ಟಿಸುವ ಮಾಂತ್ರಿಕ ಅತಿವಾಸ್ತವತೆ ಈ ಕೃತಿಯಲ್ಲಿ ಫ್ಯಾಂಟಸಿಯ ಓಘಕ್ಕೆ ಸಹಕರಿಸಿದೆ.

ಈ ಕೃತಿಯಲ್ಲಿ ಕಂಡು ಬರುವ ದಡ್ಡರ ಹುಂಡಿಯು ಪರ್ಯಾಯ ಜಗತ್ತಿನ ಪ್ರತಿನಿಧಿಯಂತೆ ಪ್ರಸ್ತಾಪಿಸಲ್ಪಟ್ಟಿದೆ. ಪ್ರಾಣಿಗಳ ಪಾರುಪತ್ಯವಿರುವ ನಾಡು ಅದು. ವಾನರ ಅಲ್ಲಿನ ನ್ಯಾಯಾಧೀಶ ಆಗಿದ್ದ. ಪಾಪಣ್ಣ ತನ್ನ ರೂಪಾಯಿಗಳು ಕಳೆದುದರ ಬಗ್ಗೆ ಇಬ್ಬರು ಖೂಳರ ಮೇಲೆ ಫಿರ್ಯಾದು ಮಾಡಿದ. ನ್ಯಾಯಾಧೀಶ ಎಲ್ಲಾ ವಿಚಾರಣೆ ನಡೆಸಿ, 'ಈ ಬಡಪಾಯಿಯ ಬಳಿ ಇದ್ದ ನಾಲ್ಕು ರೂಪಾಯಿಗಳು ದರೋಡೆಯಾಗಿವೆ. ತಕ್ಷಣ ಇವನನ್ನು ಬಂಧಿಸಿ ಕೈ ಕೋಳ ಹಾಕಿ ಬಂದೀಖಾನೆಗೆ ಎಳೆದುಕೊಂಡು ಹೋಗಿ'[೭]. ಗೊಂಬೆ ಪಾಪಣ್ಣನಿಗೆ ದಿಗ್ಭ್ರಮೆಯಾಗಿ ತಲೆಸುತ್ತು ಬಂದಿತು. ನ್ಯಾಯಾಧೀಶ ವಾನರ ನೀಡಿದ ತೀರ್ಪು 'ದಡ್ಡರ ಹುಂಡಿ' ಎನ್ನುವ ಊರಿನ ಹೆಸರನ್ನು ಧ್ವನಿಸುತ್ತದೆ.

ಈ ಬಗೆಯ ಕತೆ ಜನಪದ ಕತೆಯ ಶೈಲಿಯಲ್ಲೇ ಸಾಗಿದ್ದರೂ ಲೇಖಕರ ಉದ್ದೇಶಿತ ಸಂಗತಿಗಳು ಹಲವಕ್ಕೆ ಮೈಯೊಡ್ಡಿಕೊಂಡಿವೆ ಎನ್ನಬಹುದು. ಇದು ಅನುವಾದವಾಗಿ ಕನ್ನಡದ

ಪರಿಸರದಲ್ಲಿ ಬಂದುದರಿಂದ ಮೂಲದಲ್ಲಿನ ಹಲವೆಲ್ಲಾ ಸಂಗತಿಗಳನ್ನು ಹೊಂದಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ನಮ್ಮ ಭಾಷೆಯ ಪರಿಕರವೇ ಮೊದಲಿಗೆ ಇಲ್ಲಿ ಹೊಸದನ್ನು ಕಂಡುಕೊಳ್ಳಲು ಅಗತ್ಯವಾಗಿದೆ. ಪಾಪಣ್ಣನೆಂಬ ಹೆಸರು ಬಂದಿದ್ದೇ ಅಂಥದ್ದಕ್ಕೆ ಉದಾಹರಣೆಯಾಗಿದೆ. ಹಾಗಿದ್ದೂ ಮನುಷ್ಯ, ಪ್ರಾಣಿಗಳು ಮುಂತಾಗಿ ಬೆರೆತುಹೋದ ಬದುಕಿನ ಸಂಗತಿಗಳಲ್ಲಿ ಇದು ಅರಳಿಕೊಳ್ಳಲು ನೋಡಿರುವುದು ಎಲ್ಲ ಕಡೆಗೂ ಸಾಮಾನ್ಯವಾಗಿ ತಲುಪುವ ಸಾಧ್ಯತೆಗಳನ್ನು ಹೇಳುತ್ತಿದೆ. ಈಗಾಗಲೇ ಈ ಕೃತಿ ಕನ್ನಡಕ್ಕೆ ಬೇರೆಯವರಿಂದ ಬಂದಿದೆ. ಅದಕ್ಕೂ ಎಂ.ಎಸ್.ಕೆ ಪ್ರಭು ಅವರ ಕೃತಿಗೂ ಅಂತರಗಳು ಇವೆ. ಅದೆಲ್ಲ ಮತ್ತೊಂದು ಅಧ್ಯಯನದ ಸಂಗತಿಯಾಗುತ್ತದೆ.

೬.೧.೬. 'ಶಾವೋಲಿನ್' ಎಂಬ ಮ್ಯಾಜಿಕ್ ಗಾಳಿಪಟ ಮತ್ತು ಫ್ಯಾಂಟಸಿ

ಭಾರತೀಯ ಇಂಗ್ಲಿಷ್ ಬರವಣಿಗೆ ಇಂದು ಪರಂಪರೆಯ ಮಾದರಿಗಳಿಗೆ ಭಿನ್ನವಾಗಿ ಸಮಕಾಲೀನ ಲೋಕದ ಕಥನ ಕಲೆಯ ನೆಲೆಯಲ್ಲಿ ನಿರೂಪಿತಗೊಳ್ಳುತ್ತಿದೆ. ಶಂಕರ ಪಿಳ್ಳೆ ಅವರು ಚಿಲ್ಡ್ರನ್ಸ್ ಬುಕ್ ಟ್ರಸ್ಟ್ ಹುಟ್ಟುಹಾಕುತ್ತಾ ಈ ಬಗೆಯ ಹೊಸ ಹುಟ್ಟಿಗೆ ಕಾಳಜಿವಹಿಸಿದರು. ಹಾಗಾಗಿ ಭಾರತೀಯ ಪ್ರಾದೇಶಿಕ ಭಾಷೆಗಳಲ್ಲಿಯ ಹಾಗೆ ಹೊರದೇಶದ ಭಾಷೆ ಇಂಗ್ಲೀಷ್ ನಮ್ಮ ಪರಂಪರೆಯನ್ನು ಅಷ್ಟಾಗಿ ಅಪ್ಪಿಕೊಳ್ಳಲಿಲ್ಲ. ಹೀಗಾಗಿ ಇಂದು ಭಾರತೀಯ ಇಂಗ್ಲೀಷ್ ಬರವಣಿಗೆ ಹೊಸತಿಗಾಗಿ, ನಮ್ಮ ನಡುವಿನ ವಾತಾವರಣಕ್ಕೆ ಹೆಚ್ಚು ಸ್ಪಂದಿಸುತ್ತಾ ಹುಟ್ಟಿದೆ. ಅದು ಬಹಳಷ್ಟು ಸಲ ನಗರದ ವಾತಾವರಣದಲ್ಲಿಯೇ, ಅಲ್ಲಿನ ಲೇಖಕರ ಅನುಭವದಲ್ಲಿಯೇ ಅರಳಿದ್ದಾಗಿದೆ. ಅಲ್ಲದೆ ಇಂಗ್ಲೀಷಿನ ಹೊಸಗಾಲದ ಬರವಣಿಗೆಯ ಪ್ರಭಾವವನ್ನು ಅದು ಸಾಕಷ್ಟು ಪಡೆಯುತ್ತಾ ಬಂದಿದೆ. ಹಾಗಾಗಿ ವಾಸ್ತವ ಹಂದರದ, ಕಾದಂಬರಿಯಷ್ಟು ದೀರ್ಘದ ರಚನೆಗಳು ಅಲ್ಲಿ ಮೊದಲಿನಿಂದಲೇ ಮೂಡಿಬಂದಿವೆ. ಈ ನಿಟ್ಟಿನಲ್ಲಿ ರಸ್ಕಿನ್ ಬಾಂಡ್, ಪಾರೋ ಆನಂದ, ಮನೋರಮಾ ಜಾಫಾ, ನೀಲಿಮಾ ಸಿನ್ಹಾ, ಸುರೇಖಾ ಪನಂಡೀಕರ್, ರಾಮೇಂದ್ರ ಕುಮಾರ್, ದೀಪಾ ಅಗರವಾಲ್, ಮಿನಿ ವಿಶ್ವನಾಥ, ವಿಜಯಲಕ್ಷ್ಮೀ ಚಂದ್ರಶೇಖರ್, ಅರೂಪಕುಮಾರ ದತ್ತಾ, ಶಶಿ ದೇಶಪಾಂಡೆ, ಪ್ರಮುಖರಾಗಿದ್ದಾರೆ. ವಿದೇಶದಲ್ಲಿದ್ದು ಭಾರತೀಯ ಪರಿಸರದ ಕಥನಗಳನ್ನು ರಚಿಸಿದ ಅನಿತಾ ದೇಸಾಯಿ, ಧನಗೋಪಾಲ ಮುಖರ್ಜಿ ಮುಂತಾಗಿ ಅನೇಕ ಲೇಖಕರನ್ನು ಇಲ್ಲಿ ಹೆಸರಿಸಬಹುದು.

ಹದಿಹರೆಯದ ಮಕ್ಕಳಿಗಾಗಿ ವಾಸ್ತವ ಮಾದರಿ ಕಥನಗಳಿಗೆ ಪ್ರಸಿದ್ಧರಾದವರು ರಾಮೇಂದ್ರಕುಮಾರ ಅವರು. ಅವರು ಚಿಲ್ಡ್ರನ್ಸ್ ಬುಕ್ ಟ್ರಸ್ಟ್ ನಡೆಸುವ ವಾರ್ಷಿಕ ಸ್ಪರ್ಧೆಗಳಲ್ಲಿ ಅನೇಕ ಸಲ ಪುರಸ್ಕಾರ ಪಡೆದಿದ್ದಾರೆ. ಹೈದರಾಬಾದ್ ಮೂಲದ, ಈಗ ರೂರಕೇಲಾದ ಕಬ್ಬಿಣ ಉಕ್ಕಿನ ಕಾರ್ಖಾನೆಯಲ್ಲಿ ಹಿರಿಯ ಅಧಿಕಾರಿಯಾಗಿರುವ ಅವರು ತಮ್ಮ ಕತೆಗಳಿಗೆ ನಗರದ ತಮ್ಮ ಅನುಭವದ ವಾತಾವರಣವನ್ನೇ ಆರಿಸಿಕೊಳ್ಳುವುದು ಸಹಜವಾಗಿದೆ. ನಗರದಲ್ಲಿ ಅವಕಾಶ ವಂಚಿತ ಮಕ್ಕಳು, ಸ್ಲಮ್‌ಗಳಲ್ಲಿನ ಮಕ್ಕಳು, ಅಲ್ಲಲ್ಲಿ ಕೆಲಸ ಮಾಡುತ್ತಾ ದಿನದೂಡುತ್ತಿರುವ ಮಕ್ಕಳು, ಅವರ ಕಥೆಗಳಲ್ಲಿ ವಿಶೇಷವಾಗಿ

ಕಾಣಿಸಿಕೊಳ್ಳುತ್ತಾರೆ. ಅವರ ಆಯ್ದ ಕಥೆಗಳ ಸಂಕಲನ 'ಶಾವೋಲಿನ್' ಹೆಸರಿನಲ್ಲಿ ಕೆ.ಶಿವಲಿಂಗಪ್ಪ ಹಂದಿಹಾಳು ಇವರಿಂದ ಕನ್ನಡಕ್ಕೆ ಅನುವಾದಗೊಂಡಿದೆ. ಅದರಲ್ಲಿನ ಎರಡು ಕಥೆಗಳ ಕುರಿತು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಈ ಸಂಕಲನದ ಶೀರ್ಷಿಕೆ ಕತೆಯಾದ 'ಶಾವೋಲಿನ್' ಸ್ಲಮ್ ಒಂದರಲ್ಲಿ ವಾಸಿಸುವ ಜಾನಿ ಎನ್ನುವ ಅನಾಥ ಬಾಲಕನ ಸುತ್ತ ಹೆಣೆದ ಕಥೆಯಾಗಿದೆ. ಈ ಕಥೆಯಲ್ಲಿ ಸೈಕಲ್ ಶಾಪಿನಲ್ಲಿ ದುಡಿಯುತ್ತಾ ಬಾಲ್ಯವನ್ನು ಕಳೆದುಕೊಂಡವನಾಗಿದ್ದ. ಒಂದು ದಿನ ಗಾಳಿಪಟವೊಂದು ಆಕಾಶದಿಂದ ಬೀಳುತ್ತಾ ಮರವೊಂದರ ಮೇಲೆ ಇಳಿಯುವುದನ್ನು ನೋಡುತ್ತಿದ್ದ ಜಾನಿ ಉಳಿದ ಹುಡುಗರು ಓಡುವಾಗ ತಾನೂ ಆಸೆಯಿಂದ ಓಡಿ ಓಡಿ ಅದನ್ನು ತನ್ನದನ್ನಾಗಿಸಿಕೊಳ್ಳುತ್ತಾನೆ. ಅದನ್ನು ಪ್ರೀತಿಯಿಂದ ಜೋಪಾನವಾಗಿ ತಂದಿರಿಸಿಕೊಂಡುದೇನೋ ಆಗುತ್ತದೆ. ಆದರೆ ತಲೆದಿಂಬಿನ ಪಕ್ಕದಲ್ಲಿಯೇ ಇರಿಸಿಕೊಂಡು ಮಲಗಿದ ಬಡ ಹುಡುಗನಿಗೆ ಕನಸಿನಲ್ಲಿ ಆ ಗಾಳಿಪಟ ಕಾಣಿಸಿಕೊಂಡು ತನ್ನ ಚೀನಿ ಮೂಲದ ಸಂಗತಿಯನ್ನು ಉಸುರುತ್ತದೆ. ಚೀನಾ ದೇಶದ ರಾಜನ ಬಳಿಯಿದ್ದ ಈ ಗಾಳಿಪಟ ಜಾನಿಯೊಂದಿಗೆ ಸಂಭಾಷಣೆ ನಡೆಸುತ್ತಾ ತನ್ನ ಕಥೆ ಹೇಳಿಕೊಳ್ಳುತ್ತದೆ.

'ಹೆದರಬೇಡ ನಾನು ನಿನ್ನ ನೆಚ್ಚಿನ ಗಾಳಿಪಟ ಮಾತನಾಡುತ್ತಿದ್ದೇನೆ."

'ಆ..ದರೆ ಗಾಳಿಪಟಗಳು ಮಾತನಾಡೋದಿಲ್ಲ."

'ಆದರೆ ನಾನು ಮಾತಾಡ್ತೀನಿ. ಯಾಕಂದ್ರೆ; ನಾನು ಮ್ಯಾಜಿಕ್ ಗಾಳಿಪಟ"

'ಏ...ನೂ ಮ್ಯಾಜಿಕ್ ಪಟವೇ!"

'ಹೌದು ನಿನಗೊತ್ತಾ, ನಾನು ಮೂರು ನೂರು ವರ್ಷದವನು."[೮]

ಇಂಥ ಪ್ರಾಚೀನ ಗಾಳಿಪಟವೊಂದು ಚೈನಾ ಮತ್ತು ಭಾರತ ದೇಶದ ಜನರ ಬಾಂಧವ್ಯದ ಪ್ರತೀಕವಾಗಿ ಭಾರತಕ್ಕೆ ಬಂದಿರುತ್ತದೆ. ಲೇಖಕರು ಮಕ್ಕಳಲ್ಲಿ ಸಾಮರಸ್ಯದ ಪಾಠವನ್ನು ಈ ಬಗೆಯಲ್ಲಿ ಹೇಳಲು ಪ್ರಯತ್ನಿಸಿದಂತಿದೆ. ಅಂಥ ಗಾಳಿಪಟ ಜಾನಿಯನ್ನು ಸಹಾಯ ಕೋರುತ್ತದೆ. ಸ್ವರ್ಗದಲ್ಲಿರೋ ಅವನ ಒಡೆಯ ವಿನ್‌ವ್ಯಾಂಗ್ ಸಂದೇಶದನುಸಾರ ಅಲ್ಲಿಗೆ ಹೋಗಲು ಸಹಕರಿಸು ಎನ್ನುತ್ತದೆ. ಜಾನಿ ತನಗಾಗಿ ಎಂದು ಇರಿಸಿಕೊಂಡಿದ್ದ, ಅದಕ್ಕಾಗಿ ದಿಕ್ಕೆಟ್ಟು ಓಡಿ ಓಡಿ ಸಂಪಾದಿಸಿದ ಗಾಳಿಪಟವನ್ನು ಆಕಾಶದಲ್ಲಿ ತನ್ನದಲ್ಲವೆಂಬಂತೆ ಹಾರಿಬಿಡುವ ಪ್ರಸಂಗ ನಡೆದುಬಿಡುತ್ತದೆ. ಗೆಳೆಯರ್ಯಾರಿಗೂ ಮುಟ್ಟಲೂ ಬಿಡದ ಗಾಳಿಪಟವನ್ನು ಆಕಾಶಕ್ಕೆ ಹಾರಿಬಿಡುವುದು ಹೇಗೆ? ಎಂದು ಬಲು ಪೇಚಾಡಿಕೊಂಡ ಹುಡುಗ ತನ್ನ ತಂದೆಯ ಮಾತನ್ನು ನೆನಪಿಗೆ ತಂದುಕೊಳ್ಳುತ್ತಾನೆ. ಆಗ 'ಮಗೂ ಕೆಲವೊಮ್ಮೆ ಪಡೆಯೋದಕ್ಕಿಂತ ಕೊಡೋದರಿಂದಲೇ ಹೆಚ್ಚು ಆನಂದ ಸಿಗುತ್ತೆ'[೧೦] ಹೀಗೆ ಸಂಭಾಷಣೆ ನಡೆದು ಮುಗಿಯುವ ಹೊತ್ತಿಗೆ ಅವನನ್ನು ಎಬ್ಬಿಸಲು ಶ್ರೀನು ಬರುವಲ್ಲಿಗೆ ಕಥೆಯ ಸ್ವಪ್ನ ಮರೆಯಾಗುತ್ತದೆ.

ಜಾನಿ ಗಾಳಿಪಟವನ್ನು ಹಾರಿಬಿಡುವುದೇನೋ ನಡೆಯುತ್ತದೆ. ಆದರೆ ಅದು ಅವನಲ್ಲಿ ಭರವಸೆಯ, ಸೊಗಸಿನ ಸಂಗತಿಯನ್ನು ಹುಟ್ಟುಹಾಕುತ್ತದೆ. ಇದನ್ನೇ ಪ್ರತಿಫಲಿಸಿದಂತೆ ಅವನ ಸೈಕಲ್ ಅಂಗಡಿಯ ಮುಂದೆಯೇ ಅವನಿಗೆ ಹೊಸ ದಿಕ್ಕುದೆಸೆ ತೋರುವ ವ್ಯಕ್ತಿಯೊಬ್ಬರು ಇದ್ದಕಿದ್ದ ಹಾಗೆ ಕಾಣಿಸಿಕೊಳ್ಳುತ್ತಾರೆ. ಇಮ್ತಿಯಾಜ್ ಖಾನ್ ಎನ್ನುವ ಕ್ರೀಡಾ ನಿರ್ದೇಶಕ ಅವರು. ಜಾನಿ ಗಾಳಿಪಟಕ್ಕಾಗಿ ಓಡಿದುದನ್ನು ಗಮನಿಸಿದ ಅವರು ಈ ಬಡ ಹುಡುಗನಲ್ಲಿ ಇರುವ ಓಟದ ಹುಮ್ಮಸ್ಸು, ಸಾಮರ್ಥ್ಯ ಕಂಡು ಅವರು ಅವನಿಗೆ ಸಹಾಯ ಮಾಡಲು ಬಂದಿರುತ್ತಾರೆ. ಅವನನ್ನು ಓಟದ ಸ್ಪರ್ಧೆಗೆ ಸಿದ್ಧಗೊಳಿಸುವುದು, ಸ್ಪರ್ಧೆಯಲ್ಲಿ ತೊಡಗಿಸುವುದು, ಅವನಲ್ಲಿನ ಪ್ರತಿಭೆ ಬೆಳಕು ಕಾಣುವುದಕ್ಕೆ ದಾರಿಯಗುತ್ತದೆ. ಜಾನಿಯ ಬದುಕಿನಲ್ಲಿ ಹೊಸ ಬೆಳಕು ಕಾಣಿಸಿಕೊಳ್ಳುತ್ತದೆ. ಆಲ್ಫಾ ಕ್ರೀಡಾ ಅಕಾಡೆಮಿಗೆ ಅವನ ಆಯ್ಕೆಯಾಗುತ್ತದೆ. ಜಾನಿ ರಾಷ್ಟ್ರೀಯ ಕೂಟದ ಓಟದ ಸ್ಪರ್ಧೆಯಲ್ಲಿ ಗೆಲ್ಲುವಂತಾಗುತ್ತದೆ.

ಇಲ್ಲಿ ಫ್ಯಾಂಟಸಿ ಒಂದು ಬಗೆಯಲ್ಲಿ ದೂರಾನ್ವಯಗೊಂಡು ಬಳಕೆಯಾಗಿದೆ ಎಂದುಕೊಳ್ಳಬಹುದು. ಅದು ಜಾನಿಯ ಬದುಕಿನಲ್ಲಿ ನಡೆಯುವ ಸಂದರ್ಭಗಳಲ್ಲಿ ಭಾಗವಹಿಸುವುದಿಲ್ಲ. ಆದರೆ ಅವನಲ್ಲಿ ಭರವಸೆಯನ್ನು ತುಂಬುವಲ್ಲಿ ಹಿನ್ನೆಲೆಗೆ ನಿಲ್ಲುತ್ತದೆ. ಅವನಲ್ಲಿ ಮುಂದೆ ಕಾಣುವ ಬೆಳಕಿನ ಸದಾಶಯವನ್ನು ಆಪ್ಯಾಯಮಾನವಾಗಿ ನಿಲ್ಲಿಸುತ್ತದೆ. ಭಾವನಾಮಯವಾದ ಹುಡುಗ ಈ ಬಗೆಯ ತಿರುವಿನಿಂದ ತನ್ನೊಳಗನ್ನು ಇನ್ನೊಂದು ಬಗೆಯಲ್ಲಿ ಬೆಳಗಿಕೊಳ್ಳುತ್ತಾನೆ. ಮತ್ತೆ ತನ್ನ ಎಂದಿನ ವಾಸ್ತವಕ್ಕೆ ಮರಳಲು ಮಾನಸಿಕ ಗಟ್ಟಿತನವನ್ನು ಪಡೆಯುತ್ತಾನೆ. ಆದರೆ ಅವನನ್ನು ವಾಸ್ತವದ ಭರವಸೆ ಹುಡುಕಿಕೊಂಡು ಬರುತ್ತದೆ.

ಮಾಲಾ ಎನ್ನುವ ಕುರೂಪಿ ಹುಡುಗಿ ಮತ್ತು ಗೋಲು ಎನ್ನುವ ಧಡೂತಿ ನೀರಾನೆಯ ಮಧ್ಯದ ಸ್ನೇಹ ಮತ್ತು ಅವರ ಸಾಹಸದ ಕಥೆಯೇ 'ಧೈರ್ಯಶಾಲಿ ಗೆಳೆಯರು' ಎನ್ನುವ ಇನ್ನೊಂದು ರಾಮೇಂದ್ರ ಕುಮಾರ ಅವರ ಕತೆ, ಇದೇ ಸಂಕಲನದ್ದು. ಮೃಗಾಲಯದ ಸೋಮಾರಿ, ಧಡೂತಿ ದೇಹದ ಪ್ರಾಣಿ ಮತ್ತು ತಂದೆ ತಾಯಿ ಇಲ್ಲದ ಅನಾಥೆ ಮಾಲಾ ಇಬ್ಬರೂ ಎಲ್ಲರ ನಿರ್ಲಕ್ಷ್ಯಕ್ಕೆ ಒಳಗಾದವರು. ಬಹಳಷ್ಟು ಸಲ ಅದು ಅವರ ದೈಹಿಕ ಅನಾಕರ್ಷಣೆಗೆ, ಕುರೂಪಿ ಎನ್ನಿಸಿಕೊಂಡೇ ಅನಾದರಕ್ಕೆ ಕರಣರಾದವರು. ಇಂಥವೇ ಕಾರಣಗಳಿಂದ ಅನೇಕ ಕಷ್ಟಗಳನ್ನು ಅವರು ಎದುರಿಸುವುದು ಕತೆಯಲ್ಲಿ ಬರುತ್ತದೆ.

ಈ ವಾಸ್ತವ ಹಂದರದ ಕತೆಯಲ್ಲಿ ಝೂನಲ್ಲಿ ಆ ಒಂಟಿತನ ಅನುಭವಿಸುವ ಪ್ರಾಣಿ ಹಾಗೂ ಜೊತೆಗೆ ಸ್ನೇಹ ಸಿಗದ ಹುಡುಗಿ ಸಂಧಿಸುವುದು, ಅವರಲ್ಲಿ ಸ್ನೇಹ ಕುದುರುವುದು, ಈ ಸ್ನೇಹ ಮುಂದೊಮ್ಮೆ ಒಂದು ಪ್ರಾಣವನ್ನು ಉಳಿಸುವ ಬಲು ದೊಡ್ಡ ಕಾರ್ಯಕ್ಕೆ ಸಹಾಯವಾಗಿಬಿಡುವುದು ನಡೆಯುತ್ತದೆ. ಈಗ ಇವರಿಬ್ಬರೂ ತಮ್ಮೊಳಗಿನ ಒಳ್ಳೆಯತನದ

ಸೌಂದರ್ಯದಿಂದ ಆಕರ್ಷಣೆಗೆ ತೆರೆದುಕೊಳ್ಳುತ್ತಾರೆ. ಇಲ್ಲಿ ನೋವನ್ನು ಅನುಭವಿಸುವುದು ಮನುಷ್ಯರಲ್ಲಿ ಕಾಣಬವುದರೊಂದಿಗೆ ಪ್ರಾಣಿಯಲ್ಲಿಯೂ ಕಾಣುತ್ತದೆ. ಅಲ್ಲಿಯೂ ಒಂಟಿತನವನ್ನು ಭಾವಿಸಿಕೊಳ್ಳುವುದು, ನೋವನ್ನು ಅನುಭಪಿಸುವ ಎರಡೂ ಜೀವಗಳಲ್ಲಿ ಸ್ನೇಹ ಕಾಣಿಸುತ್ತದೆ. ಈ ಬಗೆಯ ಫ್ಯಾಂಟಸಿ ಕಾಣಿಸಿಕೊಂಡು ಕತೆಗೆ ವಿಶಿಷ್ಟತೆ ಪ್ರಾಪ್ತವಾಗಿದೆ. ಪ್ರಾಣಿಗಳನ್ನು ಅವಾಸ್ತವವಾಗಿ ಭಾವಿಸುವುದು, ಅವುಗಳಲ್ಲಿ ಮಾನವೀಯ ಸಂಗತಿಗಳನ್ನು ಗುರುತಿಸುವುದು ಮುಂತಾಗಿ ನಮ್ಮ ಪರಂಪರೆಯ ಕತೆಗಳಲ್ಲಿ ಕಂಡಂತೆ ಇಲ್ಲಿ ಸಂಭವಿಸಿದರೂ ಹೊಸಗಾಲದ ಅಗತ್ಯಗಳಿಗೆ ಸ್ಪಂದಿಸುವುದು ಇಲ್ಲಿ ನಡೆಯುತ್ತದೆ.

೬.೧.೭. ವೈಜ್ಞಾನಿಕ ಕಥನಗಳೊಳಗಿನ ಫ್ಯಾಂಟಸಿ

ಸಲೀಮ್ ಅವರು ತೆಲುಗು ಬಾಷಾವಲಯದಲ್ಲಿ ಈಗಾಗಲೇ ಹೆಸರು ಮಾಡಿರುವ ಪ್ರಬುದ್ಧ ಲೋಕದ ಲೇಖಕರೇ. ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರವೂ ದೊರೆತಿದೆ. ಅವರು ಮಕ್ಕಳಿಗಾಗಿಯೂ ಅನೇಕ ಕೃತಿಗಳನ್ನು, ಅದರಲ್ಲೂ ಕಾದಂಬರಿಗಳಂಥ ದೀರ್ಘದ ಕಥನಗಳನ್ನು ಬರೆದಿರುವುದು ಅವರೊಳಗಿನ ಆಸಕ್ತಿಯ ಹರಹನ್ನು ಹೇಳುತ್ತದೆ. ಇಲ್ಲಿ ಆಯ್ದುಕೊಂಡ 'ಮೇಧಾ ೦೧೭' ಕೃತಿಯನ್ನು ಧನಪಾಲ ನೆಲವಾಗಿಲು ಅವರು ಕನ್ನಡಕ್ಕೆ ತಂದಿದ್ದಾರೆ. ಧನಪಾಲ ನೆಲವಾಗಿಲು ಅವರು ಮಕ್ಕಳ ಆಸಕ್ತಿಯಿಂದಲೇ ಇವನ್ನು ಕನ್ನಡಕ್ಕೆ ತರಬೇಕೆಂದುಕೊಂಡವರಲ್ಲ. ಅವರ ಪ್ರಬುದ್ಧ ಲೋಕದ ಕೃತಿಗಳನ್ನು ಕನ್ನಡಕ್ಕೆ ತರುವುದರ ಜೊತೆಗೆ ಈ ಕಡೆಗೂ ಹೊರಳಿ ತರುತ್ತಿದ್ದಾರೆ[೧೧]. ಪ್ರಸ್ತುತ ಕೃತಿಯನ್ನು ವೈಜ್ಞಾನಿಕ ಕಥಾ ವಲಯದಲ್ಲಿ ಗುರುತಿಸಬಹುದು. ಇಲ್ಲಿ ವೈಜ್ಞಾನಿಕ ಪ್ರಯೋಗ ಮಾಡುತ್ತಾ ಮನುಷ್ಯನ ಮೇಧಾ ಶಕ್ತಿಯನ್ನು ಅಭೂತಪೂರ್ವವಾಗಿ ಬೆಳೆಸುವ ಪ್ರಯತ್ನ ನಡೆಯುತ್ತದೆ. ಹಾಗೆ ನಡೆಸುವಾಗ ಹುಟ್ಟಿಕೊಳ್ಳುವ ಗೊಂದಲಗಳು ಇಡೀ ಕೃತಿಯ ರೋಚಕ ಪ್ರಸಂಗಗಳಿಗೆ ಕಾರಣವಾಗಿವೆ. ಫ್ಯಾಂಟಸಿ ವೈಜ್ಞಾನಿಕ ಕೃತಿಗಳಲ್ಲಿ ಹುಟ್ಟಿಕೊಳ್ಳುವ ಬಗೆಯಲ್ಲಿಯೇ ಇಲ್ಲಿಯೂ ಕಾಣುತ್ತದೆ. ಭವಿಷ್ಯದ ಸಾಧ್ಯತೆಗಳನ್ನು ಕಂಡರಿಸುವ ಲೇಖಕರ ಬಯಕೆಗಳು ಈ ಬಗೆಯ ಕಥೆಗಳನ್ನು ನಮ್ಮ ಮುಂದಿಡುವುದು ಸರ್ವೆ ಸಾಮಾನ್ಯ. ಕನ್ನಡದಲ್ಲಿ ರಾಜಶೇಖರ ಭೂಸನೂರಮಠರು ವಿಶೇಷವಾಗಿ ಈ ಬಗೆಯ ಬರವಣಿಗೆಯನ್ನು ಮಾಡಿದರು. ಮತ್ತೂರು ಸುಬ್ಬಣ್ಣ ಅಂಶು, ರೋಬೊಟ್ ಕೃತಿಯನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.

ಭಾರತೀಯ ಭಾಷೆಗಳ ಮಧ್ಯೆ ಈ ಬಗೆಯ ಕೊಡುಕೊಳುವಿಕೆ ಅಗತ್ಯದ್ದು. ಅದರಲ್ಲೂ ಮಕ್ಕಳ ಸಾಹಿತ್ಯದ ಮಟ್ಟಕ್ಕೆ ಅನಿವಾರ್ಯ ಎನ್ನಬಹುದು. 'ವಿಜ್ಞಾನ ಸಂಶೋಧನೆಯಲ್ಲಿ ಮುಳುಗಿಹೋದ ತಂದೆ ತನ್ನ ಮಕ್ಕಳ ಸಹಜದ ಲೋಕವನ್ನು ನಿರ್ಲಕ್ಷಿಸಿದ್ದು ಈ ಕಾದಂಬರಿಯ ಒಂದು ಮಗ್ಗಲು[೧೨] ಆದರೆ ಹೊಸ ವೈಜ್ಞಾನಿಕ ಸಂಶೋಧನೆಗಳಿಂದ ಅವರ ರಂಜನೆಗೆ ಪರ್ಯಾಯ ಕಂಡುಕೊಳ್ಳುವಲ್ಲಿ ತೊಡಗಿಕೊಳ್ಳುವುದು ಕತೆಗೆ ಇನ್ನೊಂದೇ ಆದ ತಿರುವನ್ನು ನೀಡುತ್ತದೆ. ಹೀಗೆ

ಪರ್ಯಾಯ ದೊರಕಿಸುವ ತಂದೆ ಅಪರೂಪದ ಮೇಧಾ ಶಕ್ತಿಯ ಸಂಶೋಧನೆಯಲ್ಲಿ ಬಿಡುವಿಲ್ಲದೆ ತೊಡಗಿಕೊಂಡು ಅನಿವಾರ್ಯ ಅನುಭವಿಸುತ್ತ. ಹಾಗೆ ತೊಡಗಿಕೊಂಡಿದ್ದು ಹಲವು ಬಗೆಯ ಸಮಸ್ಯೆಗಳಿಗೆ ಕಾರಣವಾಗಿ ಆತಂಕದ ಸ್ಥಿತಿ ಕತೆಯ ಹಂದರಲ್ಲಿ ಕಾಣಿಸಿಕೊಳ್ಳುತ್ತದೆ.

ಕಾಡು ಪ್ರಾಣಿಗಳು ಡಿಜಿಟಲ್ ತಂತ್ರದಲ್ಲಿ ಸೃಷ್ಟಿಯಾಗಿ ನೋಡುತ್ತಿದ್ದ ಮಕ್ಕಳನ್ನೇ ಬೆನ್ನತ್ತಿ ಬರುವುದು ನಡೆದು, ಅವರೆಲ್ಲ ಕಂಗೆಟ್ಟು ಓಡಿ ಅಪ್ಪನ ಕೋಣೆಗೆ ಹೋಗಿ ಬಾಗಿಲು ಮುಚ್ಚಿ ಗಂಡಾಂತರದಿಂದ ಪಾರಾಗುವ ಪ್ರಸಂಗ ನಡೆಯುತ್ತದೆ. ವಿಜ್ಞಾನಿ ತಂದೆ ಮುಂದೆ, ಅಲ್ಲಿನ ತಪ್ಪುಗಳನ್ನು ಪರಿಷ್ಕರಿಸಲು ತೊಡಗುತ್ತಾನೆ, ತನ್ನ ಸಂಶೊಧನೆಗೆ ಇನ್ನಷ್ಟು ಮುತವರ್ಜಿಯಿಂದ ತೊಡಗಿಕೊಳ್ಳುತ್ತಾನೆ. ಸಲೀಮ ಅವರು ವೈಜ್ಞಾನಿಕ ಎನ್ನುವ ಕಾರಣಕ್ಕೇ ಬಹಳಷ್ಟು ಸಲ ಮಕ್ಕಳಿಗಾಗಿ ಎಂದು ಒಂದಿಷ್ಟೆಲ್ಲ ಮಿತಹಿತವಾದ ಬಗೆಯಲ್ಲಿ ನಿರೂಪಿಸಿದಂತಿರುವ ಕೃತಿ ಇದಾಗಿದೆ. ಕತೆಗೆ ಹಲವಾರು ಮಗ್ಗಲುಗಳು ಸಿಗುವಂತೆ ಖಂಡಿತ ನುರಿತ ಲೇಖಕ ಮಾಡಿದ್ದಾರೆ. ಅಂತೂ ವೈಜ್ಞಾನಿಕ ಮಾದರಿಯ ಫ್ಯಾಂಟಸಿ ಇಲ್ಲಿ ತನ್ನತಾನೇ ಸಹಜವಾಗಿಯೇ ಕಾಣಿಸಿಕೊಂಡಿದೆ.

೬.೨. ಚರ್ಚೆ-೨

೬.೨.೧. ಕಾಲ ಘಟ್ಟ ಮತ್ತು ಫ್ಯಾಂಟಸಿ

ಒಂದು ಕೃತಿಯ ಉಗಮಕ್ಕೆ ಲೇಖಕನ ಆಂತರ್ಯದ ತುಡಿತ, ಕಥೆಯೊಂದಿಗೆ ಅವನ ಬದುಕಿನ ಮಿಳಿತ ಕಾರಣವೇ ಸರಿ. ಹಾಗೆಯೇ ಕಾಲವೂ ಲೇಖಕನ ಆಲೋಚನಾ ಕ್ರಮವನ್ನು ನಿರ್ಧರಿಸುತ್ತದೆ. ಬರವಣಿಗೆಯ ಸ್ವರೂಪದ ದಿಕ್ಸೂಚಿಯೂ ಆಗಿರುತ್ತದೆ. ಹಾಗಾಗಿ ಕಾಲ ಕೃತಿ ರಚನೆಯಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಅದರಲ್ಲೂ ಫ್ಯಾಂಟಸಿಯ ಸ್ವರೂಪದ ರಚನೆಗಳನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ಕಾಲದ ಕುರಿತ ಚರ್ಚೆ ಅಗತ್ಯದ್ದು. ಮಕ್ಕಳ ಕಥೆಗಳ ಮೂಲ ಸೆಳೆತ ಅವರ ಅನಂತ ಲೋಕದ ಮನೋಭೂಮಿಕೆಯ ಸಂಗತಿಗಳನ್ನೇ ಕೇಂದ್ರಗಳಾಗಿರಿಸಿಕೊಂಡಿರುತ್ತದೆ. ಇಪ್ಪತ್ತನೇ ಶತಮಾನದಲ್ಲಿ ರೊಬೊಟ್‌ನ ಕುರಿತ ಕಥನಗಳು ಫ್ಯಾಂಟಸಿ ಬರವಣಿಗೆಯ ಪ್ರಧಾನ ಧಾರೆಗಳಲ್ಲಿ ಒಂದಾಗಿದ್ದವು.

ಇಪ್ಪತ್ತೊಂದನೇ ಶತಮಾನದಲ್ಲಿ ರೋಬೋಟ್ ಬಳಕೆ ಹೋಟೆಲ್ ಮಾಣಿವರೆಗೆ ಬಂದು ನಿಂತಿದೆ. ಹೀಗೆ ಫ್ಯಾಂಟಸಿ ಲೋಕ ಯಾವತ್ತಿಗೂ ವರ್ತಮಾನದ ಪರಿಧಿಯನ್ನು ದಾಟಲು ಪ್ರಯತ್ನಿಸುತ್ತಿರುತ್ತವೆ. ಪೀಟರ್ ಪ್ಯಾನ್‌ನ ಇಲ್ಲದ ನಾಡಿನ ಕಲ್ಪನೆ, ಆಲೀಸ(ಪಾಪಚ್ಚಿ)ಳ ಅಸಂಬದ್ಧ ಘಟನೆಗಳು, ಪೋಕರಿ ಪಾಪಣ್ಣನ ದಡ್ಡರ ಹುಂಡಿಯ ನಡೆವಳಿಕೆಗಳು ಮಮ್ಮೂವಿನ ಉಯ್ಯಾಲೆಯ ಬಯಕೆಗಳು ಇವೆಲ್ಲಾ ಇಂದಿಗೂ ಅವಾಸ್ತವ ಲೋಕದ ಅನಾವರಣವೇ ಎನ್ನಿಸುವಂತಿವೆ. ಹಾಗೆಂದು ಫ್ಯಾಂಟಸಿ ಎಲ್ಲಾ ಕಾಲಕ್ಕೂ ಫ್ಯಾಂಟಸಿಯೇ ಆಗಿರುವುದಿಲ್ಲ.

ವರ್ತಮಾನದ ಸಹಜ ಸಂಗತಿಯಾಗಬಹುದಾದ ಸಾಧ್ಯತೆಗಳೂ ಫ್ಯಾಂಟಸಿಯಲ್ಲಿ ಇರುತ್ತವೆ. ನಿನ್ನೆಯ ಫ್ಯಾಂಟಸಿ ಇಂದಿನ ವರ್ತಮಾನವಾಗುವ ಸಾಧ್ಯತೆಗಳು ಇರುತ್ತವೆ. ಪುರಾಣದ ಕಥೆಗಳಲ್ಲಿನ ಆಕಾಶವಾಣಿಯೊಂದಿಗಿನ ಮಾತು ಫ್ಯಾಂಟಸಿಯೇ ಅಲ್ಲವೇ? ಇಂದು ಮೊಬೈಲ್ ಮೂಲಕ ಅದು ವಾಸ್ತವದ ಸಹಜ ಸಂಗತಿಯಾಗಿದೆ. ಹೀಗಿದ್ಯಾಗೂ ಪೀಟರನ ನೆವರ್(ಇಲ್ಲದ ನಾಡು)ಲ್ಯಾಂಡ್, ಮಮ್ಮೂವಿನ ಮುಗ್ಧ ಬಯಕೆಗಳು ಮತ್ತು ಆಲೀಸಳ ಹೊದರಿನ ಪಾತ್ರಗಳು ಇಂದಿಗೂ ಫ್ಯಾಂಟಸಿಯೇ ಆಗಿವೆ. ಕಾಲವು ಬರವಣಿಗೆಯ ಸ್ವರೂಪದ ಮಾರ್ಗದರ್ಶಿಯಾಗಿರುತ್ತದೆ. ಲೇಖಕ ಬರೆಯುವ ಕಾಲದ ಆಲೋಚನೆಗಿಂತ ಭಿನ್ನವಾದ ಅಂದರೆ ಭೂತ ಮತ್ತು ಭವಿಷ್ಯತ್ತುಗಳ ನಡುವಿರುವ ವರ್ತಮಾನದ ಸಂಗತಿಗಳಿಗಿಂತ ಹೊರತಾದ ಬರವಣಿಗೆ ರೂಪವು ಫ್ಯಾಂಟಸಿ ಕಥನಗಳಲ್ಲಿ ಕಂಡು ಬರುತ್ತದೆ.

ಫ್ಯಾಂಟಸಿ ಯಾವತ್ತೂ ಕಾಲಕ್ಕೆ ದೂರವಾಗಿ ನಿಲ್ಲಲು ಬಯಸುತ್ತದೆ ಎಂದು ಕಾಣುತ್ತದೆ. ಹಾಗಿದ್ದೂ ಕಾಲದ ವ್ಯಾಪ್ತಿಯೊಳಗೆ ಫ್ಯಾಂಟಸಿ ಕಥೆಯನ್ನು ತರುವುದು ಲೇಖಕರಿಂದ ನಡೆದೇ ಇರುತ್ತದೆ. ಲೋವರ್ ಫ್ಯಾಂಟಸಿ ಎಂದು ಇಂಗ್ಲೀಷಿನಲ್ಲಿ ಸಾಮಾನ್ಯವಾಗಿ ವಿಭಾಗಿಸಿಕೊಂಡಿರುವ ಸಾಮಾನ್ಯದ ಫ್ಯಾಂಟಸಿ ನಮ್ಮ ನಡುವಿನ ವಾತಾವರಣದಲ್ಲಿಯೇ ನಡೆಯುವುದು ಕಾಣುತ್ತದೆ. ಹೈ ಫ್ಯಾಂಟಸಿ ಎನ್ನುವ ಪ್ರಕಾರ ತನ್ನದೇ ಆದ ಒಂದು ಹೊಸದೇ ಆದ ಜಗತ್ತನ್ನ ಕಂಡುಕೊಂಡಿರುತ್ತದೆ. ವೈಜ್ಞಾನಿಕ ಫ್ಯಾಂಟಸಿಗಳು ಸಾಮಾನ್ಯವಾಗಿ ಭವಿಷ್ಯದ ಆಗುಹೋಗುಗಳ ಸಂಗತಿಗಳನ್ನ ಕಲ್ಪಿಸಿಕೊಳ್ಳುವುದರಲ್ಲಿರುತ್ತವೆ. ಹೀಗೆ ಫ್ಯಾಂಟಸಿ ಬರಹಗಳು ಭೂತ ಮತ್ತು ಭವಿಷ್ಯತ್ತಿನ ಪರಿಧಿಯಲ್ಲಿರುತ್ತವೆ. ಇಲ್ಲವೇ ಯಾವ ಕಾಲದಲ್ಲೂ ನಿಲುಕಲಾರದ ಬಗೆಯೂ ಇರುತ್ತವೆ.

೬.೨.೨ ಲೇಖಕರ ಮನೋಭೂಮಿಕೆಯಲ್ಲಿ ಅರಳುವ ಫ್ಯಾಂಟಸಿ

ಬರವಣಿಗೆಯ ಮೂಲ ಧಾತುವಿಗೆ ಏನೇ ಪ್ರೇರಣೆಗಳು ಇದ್ದರೂ ಲೇಖಕನೊಳಗಿನ ಮನೋವರ್ತನೆಗಳು ಕೃತಿಯ ಮೇಲೆ ಗಾಢವಾದ ಪ್ರಭಾವ ಬೀರುತ್ತವೆ. ಲೇಖಕನ ಸಹಜ ಇಲ್ಲವೇ ವಿಚಿತ್ರ ಮನಸ್ಥಿತಿ ಅವನ ಇಡೀ ಬದುಕನ್ನು ಆವರಿಸಿರುತ್ತದೆ. ಅದು ಸಮಾಜದ ವರ್ತನೆಗೆ ಭಿನ್ನವಾದ ವರ್ತನೆಯೂ ಆಗಿರಬಹುದು, ಇಲ್ಲವೇ ಸಮಾಜದ, ವ್ಯವಸ್ಥೆಯ ಭಾಗವಾದ ನಾಗರಿಕನೊಬ್ಬನ ಸಹಜ ವರ್ತನೆಯಂತೆಯೂ ಇರಬಹುದು. ಇದೇನೇ ಇದ್ದರೂ ಲೇಖಕರ ಕೃತಿಗಳಲ್ಲಿ ಇಡಿಯಾಗಿ ಅಲ್ಲದಿದ್ದರೂ ಒಂದು ಪಾತ್ರವಾಗಿ, ವಿಚಾರಧಾರೆಯಾಗಿ ನುಸುಳುತ್ತಿರುತ್ತದೆ. ಈ ಅಂಶವನ್ನು ಇಲ್ಲಿ ವಿಶ್ಲೇಷಣೆಗೆ ತೆಗೆದುಕೊಳ್ಳಲು ಪ್ರಧಾನ ಕಾರಣ ಈ ಅಧ್ಯಾಯದ ಏಳು ಕೃತಿಗಳ ಲೇಖಕರದು ಭಿನ್ನ ಮನಸ್ಥಿತಿ, ವಿಭಿನ್ನ ವಿಚಾರಧಾರೆಗಳು. ಈ ಕೃತಿಗಳು ರಚನೆಗೆ ಅವರ ಈ ವೈಯಕ್ತಿಕ ಹಿನ್ನೆಲೆಯೇ ಪ್ರಧಾನ ಕಾರಣವಾಗಿದೆ.

ಲೂಯಿ ಕೆರೋಲ್ ತನ್ನ ಕಥಾನಾಯಕಿ ಆಲೀಸಳನ್ನು ಸೃಷ್ಟಿಸಲು ಬಹಳಷ್ಟು ಸಲ ಅವನು ವಾಸ್ತವದಲ್ಲಿ ಅದೇ ಹೆಸರಿನ, ತನ್ನ ಸ್ನೇಹಿತರ ಕುಟುಂಬದಲ್ಲಿನ ಹುಡುಗಿಯೊಂದಿಗೆ ಬೆಳೆಸಿಕೊಂಡ

ಅತಿಯಾದ ಸಲುಗೆಯೇ ಕಾರಣವಾಗಿದೆ. ಇದು ಅಸಂಬದ್ಧಗಳ ಆಶ್ಚರ್ಯಕರ ಜಗತ್ತೊಂದನ್ನು ಸೃಷ್ಟಿಸುವ ಮೂಲಕ ಫ್ಯಾಂಟಸಿ ಕಥನದ ಹೊಸ ಬಗೆಯನ್ನು ಕೆರೋಲ್ ಸೃಷ್ಟಿಸಿರುವುದು ವಿಶೇಷವಾಗಿದೆ. ಅಂದು ಇಂಗ್ಲೆಂಡ್‌ನಲ್ಲಿ ಪ್ರಚಲಿತವಿದ್ದ ರೊಮ್ಯಾಂಟಿಕ್ ಸಾಹಿತ್ಯದ ಹಾದಿ ಬಿಟ್ಟು ಈ ಬಗೆಯ ಅಸಂಬದ್ಧತೆಗೆ ತುಡಿದುದು ಒಮ್ಮೆಲೆ ಎದ್ದು ಕಂಡುದರಲ್ಲಿ ಅಚ್ಚರಿ ಇಲ್ಲ. ನಾ ಕಸ್ತೂರಿಯಂಥ ಅಧ್ಯಾತ್ಮಪ್ರಿಯರು, ಹಾಗಿದ್ದೂ ಹಾಸ್ಯದ ಬರವಣಿಗೆಯಲ್ಲಿ ಕನ್ನಡದಲ್ಲಿ ವಿಶೇಷವಾಗಿಯೇ ಕಾಣಿಸಿಕೊಂಡವರು ಈ ಕೃತಿಯನ್ನು ತಂದಿರುವುದು ಗಮನಿಸಬೇಕಾದ ಸಂಗತಿಯಾಗಿದೆ. ಅವರ ಹೆಸರು ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಹಾಗೇನೂ ವಿಶೇಷವಾಗಿ ಕೇಳಿದುದಿಲ್ಲ, ಆದರೆ ಈ ಕೃತಿ ಅವರನ್ನು ಹೆಸರುವಾಸಿ ಮಾಡಿದೆ. ಇಂಥದೊಂದು ಕೃತಿ ಅವರ ಗಮನಕ್ಕೆ ಬಂದುದು, ಅವರು ಅದನ್ನು ಅನುವಾದಿಸಲು ತುಡಿದುದು ಯಾವ ಬಗೆಯ ಮನೋಸ್ಥಿತಿಯಿಂದ ಎನ್ನುವುದೂ ಕೂಡ ಚಿಂತಿಸಬೇಕಾದ ವಿಷಯವಾಗಿದೆ.

'ಉಯ್ಯಾಲೆಯಲ್ಲಿ ಹಸು' ಕಥೆಯ ಮಮ್ಮೂ ಎನ್ನುವ ಹಸುವನ್ನು ಚಿತ್ರಿಸಿದ ಸ್ವೀಡನ್ನಿನ ಜುಜ್ಜಾ ಥಾಮಸ್ ವೈಸಲ್ಯಾಂಡರ್. ಅವರದು ಕೂಡ ಭಿನ್ನ ಮನಸ್ಥಿತಿ. ಬಾಲ್ಯದಲ್ಲಿಯೇ ಮದುವೆಯಾದರೆ ಒಬ್ಬ ಕೃಷಿಕನನ್ನೇ ಆಗಬೇಕು. ಸಾಕು ಪ್ರಾಣಿಗಳೊಂದಿಗೆ ಜೀವಿಸಬೇಕು ಎಂದು ಅವರು ಅಂದುಕೊಂಡಿದ್ದರು. ಅಜ್ಜಿಯ ಮನೆಯಲ್ಲಿನ ಹಸುಗಳ ಗಾಢ ಅನುಬಂಧ ಬೆಳೆಸಿಕೊಂಡ ಜುಜ್ಜಾ ಅವರು ಥಾಮಸ್ ವೈಸಲ್ಯಾಂಡರ್ ಅವರೊಂದಿಗೆ ಕೂಡಿಕೊಂಡು ಇಡೀ ಬದುಕಿನುದ್ದಕ್ಕೂ ಮಮ್ಮೂ ಕುರಿತು ಹಾಡು ಕಥೆಗಳನ್ನು ಬರೆಯುತ್ತಾ ಬದುಕಿದರು. ಅವರು ತಮ್ಮ ಬಾಲ್ಯದಲ್ಲಿನ ಹಸುವಿನ ಮೇಲಿನ ಪ್ರೀತಿಗೆ ಪ್ರತಿಯಾಗಿ ಥಾಮಸರೊಂದಿಗೆ ಮದುವೆಯಾದ ಮೇಲೆ ಒಂದೂ ಹಸುವನ್ನೂ ಸಾಕಲಿಲ್ಲವಾದರೂ; ಮಮ್ಮೂ ಎನ್ನುವ ಹಸುವನ್ನು ಕಥೆಯಲ್ಲಿ ಕಲ್ಪಿಸಿಕೊಂಡು ಆ ಬಯಕೆಯನ್ನು ತಿರಿಸಿಕೊಂಡರೇನೋ ಎನಿಸುತ್ತದೆ. ಇಂದು ಜುಜ್ಜಾಳಿಗಿಂತ ಮಮ್ಮೂ ಪ್ರಸಿದ್ಧಳು. ಈ ಅಪರೂಪದ ಹಸು ಸಾಮಾನ್ಯದ ಹಸುಗಳಂತಲ್ಲ, ಅದು ಸಾಮಾನ್ಯ ಹಸುಗಳು ಮಾಡದ ಬಗೆಬಗೆಯ ವಿನ್ಯಾಸಗಳು ಮಾಡುತ್ತದೆ. ಇದೆಲ್ಲವೂ ಜುಜ್ಜಾ ಅವರ ಮನಸ್ಸಿನ ಹೆಬ್ಬಯಕೆಗಳ ಪ್ರತಿಬಿಂಬವಾಗಿವೆ.

ಪೀಟರ್‌ಪ್ಯಾನ್ ಎಂಬ ಅಳಿಯದ ಬಾಲ್ಯತನವನ್ನು ಒಳಗೊಂಡ ಬಾಲಕನ ಸಾಹಸ ಗಾಥೆಯನ್ನು ಚಿತ್ರಿಸಿದ ಜೆ.ಎಂ.ಬೆರ‍್ರಿಯವರದು ಮತ್ತೊಂದು ಕಥೆ. ಇಲ್ಲಿನ ಫ್ಯಾಂಟಸಿ ಈಗಾಗಲೇ ಬಳಕೆಯಾದ ಜನಪದ, ಪುರಾಣಗಳ ರೂಢಿಯಾದ ಬಗೆಯದಲ್ಲ ಎನ್ನುವುದು ಮೇಲೆ ನೋಡಲಿಕ್ಕೇ ಕಂಡು ಬರುತ್ತದೆ. ಬೆರ‍್ರಿಯೊಳಗಿನಿಂದಲೇ ಅದು ಕಂಡುಕೊಂಡು, ದಾರಿ ಮಾಡಿಕೊಂಡಿದೆ. ಬಾಲ್ಯದ ಸುತ್ತಲೂ ಅರಳಿಕೊಂಡಿದೆ. ಲೇಖಕನ ವೈಯಕ್ತಿಕ ಬದುಕಿನ ತೀವ್ರತೆಯ ಸ್ಪಂದನವಾಗಿ ಈ ಕಥನ ಹುಟ್ಟಿಕೊಂಡಿದೆ. ಅವನನ್ನು ಬಹಳಷ್ಟು ಕಾಡಿದ ಮಗುವಾಗಿ ಪೀಟರ್ ಒಂದು ಪಾತ್ರವಾಗಿ ಅರಳಿ ನಿಂತಿದೆ. ಮನೋವಿಜ್ಞಾನ ಇನ್ನೂ ಮನಸ್ಸಿನ ಈ ಬಗೆಯ ಒಳಗನ್ನು

ಶೋಧಿಸುವ ಮಟ್ಟಿಗೆ ಆಗ ಬೆಳೆದಿರಲಿಲ್ಲ. ಆದರೂ ಬೆರ್ರಿ ಮಕ್ಕಳ ಮನೋಸ್ಥಿತಿಯನ್ನು ಬಹುವಾಗಿ ಹಚ್ಚಿಕೊಂಡು ಕಂಡುಕೊಂಡಿದ್ದ ಸಂಗತಿಗಳು ಇದಕ್ಕೆ ಹಿನ್ನೆಲೆಯಾಗಿವೆ.

ಬಾಲ್ಯದ ಸುತ್ತ ಮತ್ತೆ ಮತ್ತೆ ತನ್ನ ಕಥಾಹಂದರಗಳನ್ನು ಹರವಿಕೊಳ್ಳುತ್ತಾ 'ಕಿಮ್' 'ಜಂಗಲ್‌ಬುಕ್'ನಂತಹ ಮಹತ್ವದ ಕೃತಿಗಳನ್ನು ನೀಡಿದ ರುಡ್‌ಯಾರ್ಡ್ ಕಿಪ್ಲಿಂಗ್‌ರು ಹುಟ್ಟಿದ್ದು ಮುಂಬೈಯಲ್ಲಿ. ತಂದೆ ತಾಯಿಯೊಂದಿಗೆ ಇಂಗ್ಲಂಡ್‌ಗೆ, ಹೆಂಡತಿಯೊಂದಿಗೆ ಅಮೆರಿಕಕ್ಕೆ ಹೋದರೂ ಅವರ ಮನಸ್ಸು ಮಾತ್ರ ನೆಮ್ಮದಿ ಕಾಣಲಿಲ್ಲ. ಆರು ವರ್ಷದ ಮಗಳು ತೀರಿಹೋಗಿದ್ದು, ಹದಿನೆಂಟು ವರ್ಷದ ಮಗ ಬ್ಯಾಟಲ್ ಆಫ್ ಲೂಸ್‌ನಲ್ಲಿ ಮರಣ ಹೊಂದಿದ್ದು ಅವರನ್ನು ಭಾರತದ ಕಾಡುಗಳ ಕುರಿತು ಆಕರ್ಷಿತರಾಗುವಂತೆ ಮಾಡುತ್ತದೆ.

ಭಾರತದ ಕಾಡುಗಳ ಬಗ್ಗೆ ಬ್ರಿಟನ್ ದೊರೆಗೋಸ್ಕರವಲ್ಲದೇ ತಮ್ಮ ಇಷ್ಟದ ಬರವಣಿಗೆಯಾಗಿಯೇ ಅವರು 'ಜಂಗಲ್‌ಬುಕ್' ಸೃಷ್ಟಿಸಿದರು. ಜಿಗುಪ್ಸೆಗೊಂಡ ಅವರ ಮನಸ್ಸಿಗೆ ಹಸಿರು ಕಾಡು ಮತ್ತು ಅಲ್ಲಿನ ಆದಷ್ಟೂ ನಿಷ್ಕಲ್ಮಷ ಜೀವಿಗಳು ಮತ್ತೆ ಮತ್ತೆ ಸೆಳೆಯತೊಡಗಿದ್ದೇ ಅವರ ಈ ರಚನೆಗೆ ಪ್ರಧಾನ ಕಾರಣವಾಗಿದೆ. ಈ ಕೃತಿಯನ್ನು ಕನ್ನಡಕ್ಕೆ ತಂದವರು ಶಂಕರಾನಂದರು. ಕೇವಲ ಹತ್ತೇ ದಿನಗಳಲ್ಲಿ ಅನುವಾದ ಮಾಡಿ ಮುಗಿಸಿದರು. ಬಹುಶಃ ಅವರ ವೇಗದ ಅನುವಾದಕ್ಕೆ ಮೂಲ ಕಾರಣ; ಜಂಗಲ್ ಬುಕ್ ಅವರ ಮನಸ್ಸಿನಲ್ಲಿ ಸದಾ ಅಚ್ಚೊತ್ತಿಬಿಟ್ಟಿತ್ತು.

ಭಾರತೀಯ ಇಂಗ್ಲಿಷ್ ಮಕ್ಕಳ ಸಾಹಿತ್ಯ ಇಂದು ವಿಶ್ವ ಸಾಹಿತ್ಯದತ್ತ ದೃಷ್ಟಿ ಹಾಯಿಸುತ್ತಿದೆ. ಪರಿಣಾಮವಾಗಿ ದೇಶದಲ್ಲಿ ಅನೇಕರ ರಚನೆಗಳು ಹೊಸ ಬಗೆಯ ತಂತ್ರಗಳಿಗೆ, ಸ್ವರೂಪಗಳಿಗೆ ತೆರೆದುಕೊಳ್ಳುತ್ತಿದ್ದಾರೆ. ಈ ನಿಟ್ಟಿನಲ್ಲಿ ರಾಮೇಂದ್ರ ಕುಮಾರರು ನಗರದ, ಕೆಳಮಧ್ಯಮ ವರ್ಗದ ಮಕ್ಕಳಿಗಾಗಿ ಏನಾದರೂ ಮಾಡಬೇಕೆಂಬ ಅವರ ತುಡಿತ ಅವರ ಕಥೆಗಳಲ್ಲಿ ಕಂಡು ಬರುತ್ತದೆ. ಅವರು ಮಕ್ಕಳಿಗಾಗಿ ಬರೆದ ಕೃತಿಗಳಿಂದ ಆಯ್ದ ಹತ್ತು ಕತೆಗಳು ಕನ್ನಡಕ್ಕೆ ಶಾವೋಲಿನ್ ಹೆಸರಿನಲ್ಲಿ ಕನ್ನಡಕ್ಕೆ ಬಂದಿವೆ. ವಾಸ್ತವ ಮಾದರಿ ಕಥನ ಪರಂಪರೆಯ ಸಾಲಿನಲ್ಲಿ ಈ ಕಥೆಗಳದು ಮುಖ್ಯ ಪಾತ್ರವಿದೆ.

೬.೨.೩. ಭಾರತೀಯ ಪರಿಸರ ಮತ್ತು ಫ್ಯಾಂಟಸಿ

ಇಪ್ಪತ್ತನೇ ಶತಮಾನ ಇಡೀ ಭಾರತೀಯ ಸಾಹಿತ್ಯ ಇತಿಹಾಸವನ್ನು ಮತ್ತೊಂದು ಭಿನ್ನ ಘಟ್ಟಕ್ಕೆ ಕೊಂಡೊಯ್ದ ಕಾಲ. ಇಂಗ್ಲಿಷ್‌ನ ರೊಮ್ಯಾಂಟಿಸಂ ಪ್ರೇರಣೆಯಿಂದ ತುಂಬಾ ಕೃತಿಗಳು ಪ್ರಾದೇಶಿಕ ಭಾಷೆಯನ್ನು ಮುಟ್ಟಿದವು. ಅದರಲ್ಲಿ ಇಲ್ಲವೆನ್ನುವಂತೆ ಮಕ್ಕಳ ಸಾಹಿತ್ಯದ ಕೃತಿಗಳಿಗೂ ಸ್ಥಾನವಿದೆ. ಕನ್ನಡದಲ್ಲಿ ಆ ಸಂದರ್ಭದಲ್ಲಿ ಎಸ್.ಜಿ.ನರಸಿಂಹಾಚಾರ್ಯ, ಕುವೆಂಪುರಂತಹ ಹಿರಿಯ ಲೇಖಕರು ಇಂಗ್ಲಿಷ್‌ನ ಮಹತ್ವದ ರಚನೆಗಳನ್ನು ಕನ್ನಡಕ್ಕೆ ತಂದಿದ್ದಾರೆ. ಮೇವುಂಡಿ ಮಲ್ಲಾರಿ, ಹೊಯ್ಸಳ ರಂತವರು ಇಂಗ್ಲಿಷ್‌ನ ಫ್ಯಾಂಟಸಿಗೆ ಪರ್ಯಾಯವಾದ ಫ್ಯಾಂಟಸಿಯನ್ನು ರಚಿಸಿದ್ದಾರೆ.

ಇಟಾಲಿಯನ್ ಕೃತಿ 'ಪಿನಾಕಿಯೋ'ದಲ್ಲಿ ಕಟ್ಟಿಗೆ ತುಂಡಿನಿಂದ ಮರದ ಬೊಂಬೆ ಮಾಡಿ ಅದಕ್ಕೆ ಜೀವ ಬರಿಸಲಾಗುತ್ತದೆ. ಮೇವುಂಡಿ ಅವರ ಮಡ್ಡಮ್ಮನ ಕತೆಗಳು ಚಿಕ್ಕ ಬೊಂಬೆಗಳು. ಬೊಂಬೆಗಳನ್ನೇ ಕೇಂದ್ರವಾಗಿರಿಸಿಕೊಂಡು ರಚಿಸಿದ ಕಥೆಗಳು ಕನ್ನಡ ಮಕ್ಕಳ ಸಾಹಿತ್ಯದ ಫ್ಯಾಂಟಸಿ ಕಥೆಗಳಲ್ಲಿ ಮೊದಲ ಪಂಕ್ತಿಯಲ್ಲಿ ನಿಲ್ಲುತ್ತವೆ.

ಪರಂಪರೆಯ ಹಿನ್ನೆಲೆಯನ್ನು ಇನ್ನೂ ಪೂರ್ಣ ಬಿಟ್ಟುಕೊಡದ ಆ ಕಾಲದಲ್ಲಿ ರಚಿಸಿದ ಸ್ವತಂತ್ರ ಫ್ಯಾಂಟಸಿಯ ಈ ರಚನೆಗಳು ಮಕ್ಕಳ ಸಾಹಿತ್ಯ ಲೇಖಕರನ್ನು ಇಂಟೆನ್ಸಲ್ ಚೇಂಜ್ ಮಾಡಿದೆ. ಈ ಪ್ರಭಾವ ಖಂಡಿತವಾಗಿ ಲೇಖಕರು ಹೊಸತಿನತ್ತ ತುಡಿಯುವಂತೆ ಮಾಡಿದೆ. ಅನುವಾದಗಳ ರೂಪದಲ್ಲಿಯಾದರೂ ಹೊಸ ಸೆಳವು ಕನ್ನಡಕ್ಕೆ ಬಂದಿದೆ.

ಅನುವಾದಕ ಕೃತಿಯನ್ನು ಕನ್ನಡೀಕರಣ ಮಾಡುವ ಕುಸುರಿಯಲ್ಲಿ ಸ್ಥಳೀಯ ಸಂಸ್ಕೃತಿಗೆ ಅನಗತ್ಯ ಎನ್ನಿಸುವ ಪಾತ್ರ, ಸ್ಥಳ, ಸಂಭಾಷಣೆಗಳನ್ನು ಕೈ ಬಿಡುವ ಮೂಲಕ ಓದುಗರ ನಿರಂತರತೆಗೆ ಬರಬಹುದಾದ ಭಂಗ ದೂರಗೊಳಿಸುತ್ತಾನೆ. 'ಅಕ್ಷರಶಃ ಭಾಷಾಂತರ ಮಾಡಿದ್ದಲ್ಲಿ ಪಾಶ್ಚಾತ್ಯ ಸಂಸ್ಕೃತಿಗೆ ಮಾತ್ರ ರುಚಿಸಬಹುದಾದ ಕೆಲವು ಹಾಸ್ಯಗಳನ್ನೂ ತಿಳಿದುಕೊಳ್ಳಲು ವಾಚಕರಿಗೆ ತೊಂದರೆಯಾಗಬಹುದಾದ್ದರಿಂದ, ಸೂಕ್ತ ತೋರಿದಂತೆ, ಅಲ್ಲಲ್ಲಿ ಬದಲಾವಣೆಗಳನ್ನು ಮಾಡಿದ್ದೇನೆ, ಕೊಂಚ ಮಾರ್ಪಡಿಸಿದ್ದೇನೆ'.[೧೩] ಅವರ ಈ ಹೇಳಿಕೆಯಂತೆ 'ಆಲೀಸ್ ಅಡ್ವೆಂಚರ್ಸ್ ಇನ್ ವಂಡರ್‌ಲ್ಯಾಂಡ್' ಕೃತಿಯನ್ನು ಕನ್ನಡದ ಓದುಗರಿಗೆ ಅನುಕೂಲವಾಗುವಂತೆ ಅನುವಾದಿಸಿದ್ದಾರೆ. ಹಾಗಾಗಿ ವಂಡರ್‌ಲ್ಯಾಂಡ್ ಪಾತಾಳ ಲೋಕವಾಗಿ ಬಿಡುತ್ತದೆ. ಆಲೀಸ್ ಪಾಪಚ್ಚಿಯಾಗುತ್ತಾಳೆ.

ವಾಸ್ತವಕ್ಕಿಂತ ಭಿನ್ನವಾದ ಫ್ಯಾಂಟಸಿ ಸಂಗತಿಗಳನ್ನು ಅನುವಾದಿಸುವ ಹೊಣೆಗಾರಿಕೆಯುಳ್ಳ ಲೇಖಕರು ಪ್ರಾದೇಶಿಕತೆಗೆ ಹೊಂದುವಂತೆ ಭಾಷೆ, ಕಥನದ ಸ್ವರೂಪದ ಬದಲಾವಣೆ ಮಾಡಿಕೊಳ್ಳುತ್ತಾರೆ. ಕುವೆಂಪು ಅವರು 'ಪೈಡ್ ಪೈಪರ್' ಅನ್ನು ಕಿಂದರಿ ಜೋಗಿ ಮಾಡಿದ್ದು ಇದೇ ಕಾರಣಕ್ಕಾಗಿಯೇ. ಮೂಲ ಕೃತಿ 'ಪಿನಾಕಿಯೋ' ಇಟಲಿಯ ಹತ್ತೊಂಬತ್ತನೇ ಶತಮಾನದ ಮಧ್ಯಮ ವರ್ಗದ ಜನರ ಬದುಕಿನ ಪ್ರತಿಬಿಂಬದಂತಿದೆ. ಪ್ರಭುರವರ ಪಾಪಣ್ಣನು ಇಪ್ಪತ್ತನೇ ಶತಮಾನದ, ಭಾರತೀಯ ಪರಿಸರದಲ್ಲಿನ ಶ್ರಮಿಕ ವರ್ಗದ ತಲ್ಲಣಗಳನ್ನು ಹೇಳುತ್ತದೆ. ಫ್ಯಾಂಟಸಿ ಕೃತಿಗಳನ್ನು ಅನುವಾದವಾದಿಸುವ ಈ ಪ್ರಕ್ರಿಯೆಯಲ್ಲಿ ಪರಿಸರ ಬದಲಾದಂತೆ ಸಮಸ್ಯೆಗಳ ಸ್ವರೂಪಗಳೂ ಬದಲಾಗುತ್ತವೆ ಎನ್ನುವುದು ಕಂಡು ಬರುತ್ತದೆ.

೬.೨.೪. ಪ್ರಾಣಿ ಜಗತ್ತು ಮತ್ತು ಫ್ಯಾಂಟಸಿ

ಮಕ್ಕಳ ಸಾಹಿತ್ಯದ ಬಹುತೇಕ ಕತೆ, ಕಾದಂಬರಿಗಳ ಕೇಂದ್ರ ಬಿಂದು ಪಾತ್ರಗಳು ಪ್ರಾಣಿಗಳೇ ಆಗಿರುತ್ತವೆ. ಅದರಲ್ಲೂ ಫ್ಯಾಂಟಸಿ ಕಥೆಗಳಾದರೆ ಪ್ರಾಣಿಗಳ ಪ್ರವೇಶ ಇಲ್ಲದೆ ಕಥೆ ಮುಗಿಯಲಾರದು.

'ಮಕ್ಕಳಿಗೆ ಶಿಕ್ಷಣ ನೀಡಲು, ನೀತಿ ಬೋಧನೆ ಮಾಡಲು ಪ್ರಾಣಿಗಳನ್ನು ಪಾತ್ರವಾಗಿರಿಸಿಕೊಂಡ ಪ್ರಾಣಿಕತೆಗಳು (FABLES) ಹಿಂದಿನ ಕಾಲದ ಮಕ್ಕಳ ಸಾಹಿತ್ಯ ಕೃತಿಗಳಲ್ಲಿ ಪ್ರಧಾನವಾಗಿದ್ದವು'[೧೪].

'ಜಂಗಲ್‌ಬುಕ್' ಕಥೆಯ ಉದ್ದಕ್ಕೂ ಪ್ರಾಣಿ ಲೋಕದ ಅನಾವರಣ ನಡೆಯುತ್ತದೆ. ಭಗೀರ, ಷೇರಖಾನ್, ಭಾಲೂ, ಅಕೇಲ ಪಾತ್ರಗಳು ಇಡೀ ಕಥೆಯ ಕೇಂದ್ರ ಪಾತ್ರಗಳಾಗಿವೆ. ಕಥೆಯಲ್ಲಿ ಇರುವ ಏಕಮಾತ್ರ ಪ್ರಾಣಿಯೇತರ ಪಾತ್ರ ಮೋಗ್ಲಿ ಎನ್ನುವ ಪುಟ್ಟ ಬಾಲಕ. ಅವನೂ ಕೂಡ ಪ್ರಾಣಿ ಸಹಜ ನಡೆವಳಿಕೆಗೆ ಹತ್ತಿರದ ವರ್ತನೆಯನ್ನು ತೋರುತ್ತಾನೆ. ಅಷ್ಟುಮಟ್ಟಿಗೆ ಕಥೆ ಪ್ರಾಣಿಗಳನ್ನು ಆವರಿಸಿಬಿಟ್ಟಿದೆ.

ಕಥೆಯು ಕಾಡಿನಲ್ಲಿ ಜರುಗುವ ಸಹಜ ಸಂಗತಿಗಳ ಪ್ರತಿಬಿಂಬವೆನ್ನುವಂತಿದ್ದರೂ, ಮೋಗ್ಲಿ ಎನ್ನುವ ಬಾಲಕ ಪ್ರವೇಶವಾಗುವುದರೊಂದಿಗೆ ಕತೆ ಫ್ಯಾಂಟಸಿ ಘಟನೆಗಳ ಕೇಂದ್ರವಾಗಿಬಿಡುತ್ತದೆ. ಹೆಣ್ಣು ತೋಳವೊಂದು ಮೋಗ್ಲಿಯನ್ನು ಮಗುವಿನಂತೆ ನೋಡಿಕೊಂಡು ತಾಯಿಯ ಮಮತೆ ತೋರುವುದು, ಭಾಲೂ ಕರಡಿ ಮೋಗ್ಲಿಗೆ ಕಾಡಿನ ನಿಯಮಗಳನ್ನು ತಿಳಿಸಿಕೊಡುತ್ತದೆ. ಕಾಡಿಗೆ ಯಾರಾದರು ಪ್ರವೇಶಿಸಬಹುದು, ಆದರೆ ಕಾಡಿನ ನಿಯಮಗಳನ್ನು ಕಲಿಯದಿದ್ದರೆ ಅಲ್ಲಿ ಅವರಿಗೆ ಜಾಗವಿಲ್ಲ ಎನ್ನುವುದನ್ನು 'ಜಂಗಲ್ ಬುಕ್' ಕಥೆ ಹೇಳುತ್ತದೆ.

ಉಯ್ಯಾಲೆ ಆಡಿದ ಮಮ್ಮೊ ಕಥೆಯಲ್ಲಿ ಪ್ರಾಣಿ ಮಾತನಾಡುವುದು, ಏನೆಲ್ಲಾ ಮನುಷ್ಯರ ಹಾಗೆ ಕೆಲಸ ಪೂರೈಸಿಕೊಳ್ಳುವುದು ನಡೆದರೂ ಹೊಸಗಾಲದ ಲೇಖಕರ ವಾಂಛೆಗಳು ಹರಡಿಕೊಂಡಿರುವುದು ಎದ್ದು ಕಾಣುತ್ತದೆ. ಇಲ್ಲಿನ ಆಶಯಗಳೇ ಸೊಗಸಿನವು, ಹೊಸ ಹಂಬಲದವಾಗಿವೆ. 'ಮಮ್ಮೊ' ಇದೊಂದು ಗೊಂಬೆ. ಪ್ರಾಣಿ ಸಹಜ ನಡೆವಳಿಕೆಯೊಂದಿಗೇ ಮಾನುಷ ಬಯಕೆಗಳನ್ನೂ ಮಮ್ಮೊ ಹೊಂದಿರುತ್ತದೆ. ಇದೆಲ್ಲವನ್ನೂ ಕೃತಿಯಲ್ಲಿ ಹಾಸ್ಯವೆನ್ನುವಂತೆ ಚಿತ್ರಿಸಲಾಗಿದೆ.

ಪ್ರಾಣಿ, ಪಕ್ಷಿಗಳನ್ನು ಕಥನದ ಮುಂದುವರಿಕೆಗೆ ಭಾಗವಾಗಿ ಫ್ಯಾಂಟಸಿ ಕಥನಗಳಲ್ಲಿ ಬಳಸಿಕೊಳ್ಳಲಾಗಿದೆ. ಕೆಲವು ಪ್ರಾಣಿ, ಪಕ್ಷಿಗಳು ಒಳಿತಿನ ಕಡೆಗೆ ಇದ್ದರೆ, ಮತ್ತೆ ಕೆಲವು ಕೆಡುಕನ್ನು ಬಯಸುತ್ತವೆ. ಈ ಬಗೆಯ ಬಳಕೆ ತುಂಬಾ ಕಥೆಗಳಲ್ಲಿ ಕಂಡುಬರುತ್ತದೆ. ನರಿ, ಬೆಕ್ಕು, ಸಿಂಹ, ಹುಲಿ, ತರಹದ ಪ್ರಾಣಿಗಳು, ಗಿಡುಗ, ಕಾಗೆಯಂಥ ಪಕ್ಷಿಗಳು ಖಳನಾಯಕರಾಗಿ ಚಿತ್ರಿತರಾಗಿದ್ದಾರೆ. 'ಮೋಕರಿ ಪಾಪಣ್ಣನ ಪರಾಕು' ಕಾದಂಬರಿಯಲ್ಲಿ ನರಿ, ಬೆಕ್ಕು, ಕಾಡಿನ ಕಥೆಯಲ್ಲಿ ಷೇರಖಾನ್ ವಿಲನ್‌ಗಳಾಗಿದ್ದಾರೆ.

ಸಾಧು ಪ್ರಾಣಿಗಳಾದ ಹಸು, ಮೊಲ, ಇಲಿಗಳಂಥ ಪ್ರಾಣಿಗಳು, ಗಿಳಿ, ಪಾರಿವಾಳದಂಥ ಪಕ್ಷಿಗಳು ಒಳ್ಳೆಯವರಾಗಿ ಗೋಚರಿಸುತ್ತಾರೆ. ಉಯ್ಯಾಲೆಯಲ್ಲಿ ಹಸು ಕಥೆಯ ಮಮ್ಮೊ ಮಾತ್ರ ಇಡೀ ಕಥೆಯನ್ನು ಆವರಿಸುತ್ತದೆ. ಮಾನವ ಸಹಜ ವಾಂಛೆಗಳನ್ನು ಹೊಂದಿ ಪ್ರಾಣಿಕಥೆಗಳ ಸಾಲಿಗೆ ಭಿನ್ನ ಸೇರ್ಪಡೆಯಾಗಿದೆ. ಇದುವರೆಗಿನ ಕಥೆಗಳಲ್ಲಿ ಪ್ರಾಣಿಕಥೆಗಳ ಮೂಲಕ ಮಾನವರಿಗೆ

ನೀತಿಯನ್ನು ಸಾರಲಾಗುತ್ತಿತ್ತು. ಈ ಕಥೆ ಹಸುವೊಂದು ಪ್ರಾಣಿಯಾಗಿಯೇ ಇದ್ದುಕೊಂಡು ಪ್ರಾಣಿಗಳಿಗೆ ಇರಬಹುದಾದ ಮಾನವ ಸಹಜ ಆಸೆಗಳನ್ನು ವ್ಯಕ್ತಪಡಿಸುತ್ತದೆ. ಇಲ್ಲಿ ಕಥೆ ಮನುಷ್ಯನಿಗೆ ನೀತಿ ಎನ್ನುವ ಯಾವ ಆಶಯವನ್ನು ಹೇಳುವ ಗೋಜಿಗೆ ಹೋಗಿಲ್ಲ. ಬದಲಾಗಿ ಪ್ರಾಣಿಯೊಂದು ಹೇಗೆಲ್ಲಾ ಮನುಷ್ಯನಂತೆ ಜೋಕಾಲಿ ಆಡುವುದು, ಸೈಕಲ್ ತುಳಿಯುವುದು, ಪುಸ್ತಕ ಓದುವುದು ಹೀಗೆ ಮಗುವೇ ಆಗಿ ಮೆರೆಯುವ ಈ ಕಥೆ ಕನ್ನಡದ ಓದುಗ ಲೋಕಕ್ಕೆ ಹೊಸದಾಗಿದೆ.

'ಪಾತಾಳದಲ್ಲಿ ಪಾಪಚ್ಚಿ' ಕಾದಂಬರಿಯ ಇಡೀ ಕಥನದ ತುಂಬಾ ಪಾಪಚ್ಚಿಯನ್ನು ಆಟ ಆಡಿಸಿದ ಇಲಿ, ಮೊಲ, ಬೆಕ್ಕುಗಳು ಕೊಂಚ ಆಕೆಯನ್ನು ಗೋಳಾಡಿಸಿದರೂ ಆಕೆಗೆ ಕೆಡುಕನ್ನು ಬಯಸುವುದಿಲ್ಲ. ಬಾಬಾಬುಡನ್ 'ಬೆಕ್ಕು ಸೌಮ್ಯಮೂರ್ತಿ, ಹಾಸ್ಯಪ್ರಿಯ, ಪಾಪಚ್ಚಿ ಬಾಬಾಬುಡನ್! ಎಂದು ಮೆಲ್ಲಗೆ ಮಾತಾಡಿಸಿದಳು'[೧೫]. ಪಾಪಚ್ಚಿ ಪಾತಾಳ ಲೋಕದ ಜೀವಿಗಳೊಂದಿಗೆ ಹೀಗೆ ಯಾವುದೇ ಭಯವಿಲ್ಲದೆ ವ್ಯವಹರಿಸುವುದು ಕಂಡು ಬರುತ್ತದೆ.

ಪಾಪಣ್ಣನ ಪರಾಕಿನಲ್ಲಿ 'ಗಿಣಿ, ಪಾರಿವಾಳಗಳು ಅವನನ್ನು ಸಂಕಷ್ಟದಲ್ಲಿ ಕೈ ಹಿಡಿದು ಸಹಕರಿಸುತ್ತವೆ. ಗಿಣಿಯು ಪಾಪಣ್ಣನಿಗೆ ನರಿ ಬೆಕ್ಕು ಇವರ ಮೋಸವನ್ನು ತಿಳಿಸಿ ಅವನನ್ನು ಮನೆಗೆ ಕಳಹಿಸಲು ಸಹಕರಿಸಿದರೆ, ಪಾರಿವಾಳ ದಿನಗಳಗಟ್ಟಲೆ ಪಾಪಣ್ಣನನ್ನು ತನ್ನ ಬೆನ್ನ ಮೇಲೆ ಕೂರಿಸಿಕೊಂಡು ಸಮುದ್ರದತ್ತ ಬಂದು ಬಿಟ್ಟು, ಕಿಟ್ಟಪ್ಪನನ್ನು ಹುಡುಕಲು ಸಹಾಯ ಮಾಡುತ್ತದೆ'. ಹಾಗೆಂದು ಎಲ್ಲಾ ಕಥೆಗಳಲ್ಲಿ ಹೀಗೆ ಪ್ರಾಣಿಗಳ ನಡೆವಳಿಕೆ ಒಂದೇ ರೀತಿ ಆಗಿರುವುದಿಲ್ಲ. ಕ್ರೂರ ಪ್ರಾಣಿಗಳೂ ಒಳಿತಿಗೆ ತುಡಿಯುತ್ತವೆ. ಕಾಡಿನ ಕಥೆಯ ತೋಳ, ಕರಡಿ, ಕರಿಚಿರತೆಯಂಥ ಕಾಡು ಜೀವಿಗಳು ಮೌಗ್ಲಿ ಎನ್ನುವ ಮಾನವ ಮರಿಯ ಪ್ರಾಣ ಉಳಿಸಿದ್ದಲ್ಲದೆ, ತಮ್ಮ ಮಂದೆಯ ಭಾಗವಾಗಿ ಮಾಡಿಕೊಳ್ಳುತ್ತವೆ. ಈ ಮೂಲಕ ಪ್ರಾಣಿ ಪಕ್ಷಿಗಳು ಕಥೆಯ ಭಾಗವಾಗಿ ಒಳಿತು, ಕೆಡುಕಿನ ಪ್ರತೀಕವಾಗಿ ಬಳಕೆಯಾಗಿವೆ. ಆದರೆ ಇವೆಲ್ಲವೂ ಮಕ್ಕಳಿಗೆ ಆದರ್ಶವೊಂದನ್ನು ಹೇಳಲು ಬಳಕೆಯಾಗಿರುವುದು ಮಕ್ಕಳ ಕಥೆಗಳ ಸಾಮಾನ್ಯ ಉದ್ದೇಶಕ್ಕೆ ಪೂರಕವೆನ್ನುವಂತೆ ಇದೆ.

ಕಥೆಯ ಭಾಗವಾಗಿ ಪ್ರಾಣಿ ಪಕ್ಷಿಗಳು ಒಳಿತನ್ನು ಕೆಡುಕನ್ನು ಪ್ರತಿನಿಧಿಸುವುದು ಮಕ್ಕಳ ಫ್ಯಾಂಟಸಿ ಕಥೆಗಳಲ್ಲಿ ಕಂಡು ಬರುತ್ತದೆ. ಭಾರತೀಯ ಮಕ್ಕಳ ಸಾಹಿತ್ಯ ಪರಂಪರೆಯಂತೆ ವಿಶ್ವ ಸಾಹಿತ್ಯದ ಬಹುತೇಕ ಕಥನಗಳಲ್ಲೂ ಮಕ್ಕಳ ಕಥಾ ಉದ್ದೇಶಕ್ಕೆ ಪ್ರಾಣಿ ಪಕ್ಷಿಗಳನ್ನು ಸಾಧನವಾಗಿ ಬಳಸಿಕೊಂಡಿರುವುದು ಇಲ್ಲಿನ ಅನುವಾದ ಕೃತಿಗಳಲ್ಲೂ ಸಾಬೀತಾಗಿದೆ.

೬.೨.೫. ಮೌಲ್ಯ ಪ್ರಚಾರ ಮತ್ತು ಫ್ಯಾಂಟಸಿ

'ಪೋಕರಿ ಪಾಪಣ್ಣ'ನ ಪರಾಕು ಕಾದಂಬರಿ ಮಕ್ಕಳಲ್ಲಿ ಶೈಕ್ಷಣಿಕ ಜಾಗೃತಿ, ಕಾಳಜಿಯನ್ನು ಬಿತ್ತುವ ಹಿನ್ನೆಲೆಯಲ್ಲಿ ರಚಿಸಿದ ಕಾದಂಬರಿ. ಈ ಕಥನದ ಮಾದರಿ ಜನಪದದ್ದಾಗಿವೆ. ಕಥೆಯ ಉದ್ದಕ್ಕೂ ಪಾಪಣ್ಣನ ಅವಾಂತರಗಳ ಪುನರಾವರ್ತನೆ ಜನಪದ ಕಥೆಗಳಲ್ಲಿ ಕಂಡು ಬರುವ ಘಟನೆಗಳನ್ನು ನೆನಪಿಸುತ್ತದೆ.

ಮಕ್ಕಳ ಬದುಕಿನಲ್ಲಿ ಸತ್ಯದ ಅಗತ್ಯ ಪಾತ್ರವೆಷ್ಟು, ಸುಳ್ಳಿನ ಅನಿವಾರ್ಯತೆ ಎಷ್ಟು ಎಂಬುದನ್ನು ಪಾಪಣ್ಣನ ಲೋಕ ತೆರೆದಿಡುತ್ತದೆ. ಬಾರಿ ಸುಳ್ಳು ಎಷ್ಟೆಲ್ಲಾ ಅವಾಂತರಗಳನ್ನು ತಂದೊಡಡುತ್ತದೆ ಒಳ್ಳೆಯ ವಿದ್ಯಾರ್ಥಿಗಳು ಸುಳ್ಳಿನಿಂದ, ದುರ್ನಡತೆ, ದುಷ್ಟ ಸಂಗದಿಂದ ದೂರ ಇರಬೇಕು ಇಲ್ಲವಾದರೆ ಹಂಚಿಕಡ್ಡಿಯ ಜೊತೆಗೆ, ನರಿ ಮತ್ತು ಬೆಕ್ಕಿನ ಜೊತೆಗೆ ಹೋದಾಗ ಪಾಪಣ್ಣನಿಗೆ ಆದ ಗತಿಯೇ ಆಗುತ್ತದೆ. ಎನ್ನುವುದು ಸಾಂಕೇತಿಕವಾಗಿ ಮೂಡಿ ಬಂದಿದೆ. ಇಡೀ ಮಕ್ಕಳ ಸಮುದಾಯಕ್ಕೆ ಹೇಳಲೇ ಬೇಕಾದ ಅಗತ್ಯದ ಮೌಲ್ಯವೊಂದನ್ನು ಕಥೆಯ ಮೂಲಕ ಸಾಂಕೇತಿಕವಾಗಿ ಹೇಳುವ ಪದ್ಧತಿ ಮಕ್ಕಳ ಜಗತ್ತಿನಲ್ಲಿ ಹಿಂದಿನಿಂದಲೂ ಚಲಾವಣೆಯಲ್ಲಿದೆ.

ಅದು ಮನುಷ್ಯ-ಪ್ರಾಣಿ, ಮನುಷ್ಯ-ವಸ್ತು, ಮನುಷ್ಯ-ಮನುಷ್ಯೇತರ ಜೀವಿಗಳೊಂದಿಗೆ ಹೊಂದಿರಬೇಕಾದ ಅವಿನಾಭಾವತೆಯನ್ನು ಒತ್ತಿ ಹೇಳುತ್ತದೆ. ಕಾಡಿನ ಕಥೆಯ ತೋಳವು ಮಾನವ ಮರಿಯನ್ನು ತೋಳದ ಮರಿಯಂತೆ ಪ್ರೀತಿ ತೋರಿದ್ದು, ಯಕ್ಷಿಣಿ-ಪಾಪಣ್ಣನಿಗೆ ತಾಯಿಯಾಗಿ ಕರುಣೆ ತೋರಿದ್ದು, ಕೊರಡೊಂದಕ್ಕೆ ಕಿಟ್ಟಪ್ಪ ಜೀವ ಬರಿಸುವಷ್ಟು ತನ್ಮಯತೆಯಿಂದ ಗೊಂಬೆಗೆ ರೂಪ ಕೊಟ್ಟದ್ದು, ಇವೆಲ್ಲವೂ ಕಥೆಗಳಲ್ಲಿ ಸಹಜವಾಗಿ ಪಾತ್ರದ ನಡೆವಳಿಕೆಯ ಭಾಗವಾಗಿ ಬಂದಿದ್ದರೂ, ಲೇಖಕನು ಪ್ರಜ್ಞಾ ಪೂರ್ವಕವಾಗಿಯೇ ಮಕ್ಕಳಿಗೆ ಗೊತ್ತಾಗದಂತೆ ಮೌಲ್ಯವೊಂದನ್ನು ಮುಟ್ಟಿಸುವ ಕಾರ್ಯ ಮಾಡಿರುತ್ತಾನೆ. ಪಾಪಣ್ಣನ ಕಥೆಯು ಸುಳ್ಳನ್ನು ಹೇಳದೆ ಸತ್ಯವನ್ನೇ ಹೇಳಬೇಕೆನ್ನುವ ಮೌಲ್ಯವನ್ನು ಮಕ್ಕಳಿಗೆ ಸಾರುವ ಕತೆಯಂತಿದ್ದರೂ, ನಿಜಕ್ಕೂ ಪಾಪಣ್ಣನ ಪ್ರತಿ ದಡ್ಡತನದ ಪರಿಣಾಮವಾಗಿ ಹೊಸದೊಂದು ಸಮಸ್ಯೆ ಉದ್ಭವಿಸಿ ಅದನ್ನು ಶತಾಯಗತಾಯ ಪರಿಹರಿಸಿಕೊಳ್ಳುವ ಈ ಮಾರ್ಗದಲ್ಲಿ ಫ್ಯಾಂಟಸಿ ಜಗತ್ತು ಕಾಣಿಸಿಕೊಂಡು ಕಥೆಗೆ ಕಣ್ಕಟ್ಟು ಮಾಡಿಸಿದಂತಿದೆ. ಓದುಗರ ಅವಧಾನ ಚದುರಿಸದ ರೀತಿಯ ಬರಹ ಶೈಲಿ, ಪ್ರಾದೇಶಿಕತೆ ಭಾಷಾ ಬಳಕೆ, ನುಡಿಗಟ್ಟುಗಳು, ಗಾದೆಗಳು, ಜನಪದ ಕಥಾ ಸ್ವರೂಪ ಪಾಪಣ್ಣನ ಪರಾಕಿಗೆ ಕಾರಣವಾಗಿವೆ.

ಈ ಕಥನ ಮೌಲ್ಯ ನಿರೂಪಣೆಯ ಕಥೆಯಾಗಿದೆ. ಜನಪದ ಕಥನ ಮಾದರಿ ಹೊಂದಿದೆ. ಹೈ ಫ್ಯಾಂಟಸಿಗೆ ಹತ್ತಿರವಾದ ಲಕ್ಷಣಗಳನ್ನು ಹೊಂದಿದೆ ಎನ್ನುವುದು ಎಷ್ಟು ನಿಜವೋ, ಇದೊಂದು ಪಾಪಣ್ಣನ ಸಾಹಸಗಳನ್ನು ಹೊಂದಿರುವ ಅದ್ಭುತ ಸಾಹಸ ಗಾಥೆಯಾಗಿದೆ. ಪೀಟರನ್ನು ಇಲ್ಲದ ನಾಡಿನಲ್ಲಿ ಮಾಡಿದ ಸಾಹಸಗಳು, ನರರಿಲ್ಲದ ಕಾಡಿನಲ್ಲಿ ಮೋಗ್ಲಿ ಮಾಡಿದ ಮೋಡಿಗಳಿಗೆ ಪಾಪಣ್ಣ ಹೋಲಿಕೆಯಾಗುತ್ತಾನೆ.

ಇದು ಬರೀ ಪಾಪಣ್ಣನ ಕಥೆಯಷ್ಟೇ ಅಲ್ಲ. ಆತುರದ ಸ್ವಭಾವ ಹೊಂದಿರುವ, ಅತಿ ಬೇಗ ಎಲ್ಲದನ್ನು ಎಲ್ಲರನ್ನೂ ನಂಬಿಬಿಡುವ ಮನಸ್ಥಿತಿಯ ಮಕ್ಕಳನ್ನು ಪಾಪಣ್ಣ ಪ್ರತಿನಿಧಿಸುತ್ತಾನೆ. ನರಿ ಮತ್ತು ಬೆಕ್ಕಿನ ಸನ್ನಿವೇಶದ ಭಾಗ ಪಂಚತಂತ್ರ ಕಥೆಗಳಲ್ಲಿ ಬರುವ ಮಿತ್ರದ್ರೋಹದ ಕಥನವನ್ನು ಹೋಲುತ್ತದೆ. ಪಾಪಣ್ಣನ ದುರಾಸೆಯ ಮನೋಧೋರಣೆ ನರಿ ಮತ್ತು ಬೆಕ್ಕುಗಳು ಬಳಸಿಕೊಂಡು

ಅವನು ಒಳ ಇರುವ ಐದು ರೂಪಾಯಿಗಳನ್ನು ಕಬಳಿಸಲು ಸಂಚು ಹೂಡುತ್ತಾರೆ ಆಲೋಚನಾ ರಹಿತವಾಗಿ ಎಲ್ಲವನ್ನು ಒಪ್ಪಿಕೊಳ್ಳುವ ಮನಸ್ಥಿತಿಯ ಪಾಪಣ್ಣನನ್ನು ಕುತಂತ್ರಿಗಳಿಬ್ಬರೂ ಮೋಸಗೊಳಿಸುವುದು. ಮಕ್ಕಳು ಚುರುಕಾಗಿರಬೇಕು, ತುಂಬಾ ಜಾಗರೂಕರಾಗಿದ್ದು ಅಪಾಯ ಮುನ್ಸೂಚನೆ ಬಂದಾಗ ಜಾಣ್ಮೆ ತೋರಬೇಕು ಎನ್ನುವ ನೀತಿಯನ್ನು ಈ ಭಾಗ ಹೇಳಲು ಹೊರಡುತ್ತದೆ.

ಈ ಬಗೆಯ ನೀತಿ ಪಾಠಗಳು ಕೃತಿಯ ಉದ್ದಕ್ಕೂ ಕಂಡು ಬರುತ್ತವೆ. ಈಸೋಪನ ನೀತಿಕಥೆಗಳಂತೆ ನೀತಿ ಹೇಳಲಾಗಿದೆ. ಪ್ರತಿ ಭಾಗದಲ್ಲಿ ಪಾಪಣ್ಣನು ಸಂಕಷ್ಟಕ್ಕೆ ಒಳಗಾಗಿ ಕೊನೆಗೆ ಹೇಗೂ ಅದರಿಂದ ಪಾರಾಗುವುದು ಮುಂದೆ ಈ ರೀತಿ ತಪ್ಪು ಎಸಗಲಾರೆ ಎಂದು ನಿರ್ಧಾರಕ್ಕೆ ಬರುವುದು ಮತ್ತೆ ಅದೇ ತಪ್ಪು ಮಾಡುವುದು, ಮತ್ತೆ ಸಂಕಷ್ಟಕ್ಕೆ ಸಿಲುಕಿ ಕೊಳ್ಳುವುದು, ಇವು ಪಾಪಣ್ಣನ ಕಥೆಯಲ್ಲಿ ಮತ್ತೆ ಮತ್ತೆ ಘಟಿಸುವ ಸಂಗತಿಗಳಾಗಿವೆ.

೬.೨.೬. ಸಾಹಸ ಮತ್ತು ಫ್ಯಾಂಟಸಿ

ಫ್ಯಾಂಟಸಿ ಕಥೆಗಿರುವ ಐದು ಮಹತ್ವದ ಗುಣಗಳಲ್ಲಿ ಸಾಹಸವೂ ಒಂದು. ಫ್ಯಾಂಟಸಿ ಲೋಕ ಯಾವಾಗಲೂ ಅಸಾಧ್ಯವಾದ ಯಾವುದೋ ಒಂದು ಕಾರ್ಯವನ್ನು ಸಾಧ್ಯವಾಗಿಸಲು ಪ್ರಯತ್ನಿಸುತ್ತಿರುತ್ತದೆ. ಹಾಗೆ ಸಾಧ್ಯವಾಗಿಸುವಾಗ ಸಾಹಸವು ಖುದ್ದು ಹಾಜರಿಯಾಗುತ್ತದೆ. ಫ್ಯಾಂಟಸಿ ಕಥೆಯನ್ನು ಮಹತ್ತರ ಘಟ್ಟಕ್ಕೆ ಒಯ್ಯುವಲ್ಲಿ ಸಾಹಸ ಕ್ರಿಯೆಗಳಲ್ಲಿ ಪ್ರಯಾಣವು ಒಂದು. ಕಥೆಯಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪ್ರಯಾಣಿಸುವುದು ಒಂದು ಸಾಹಸಕ್ರಿಯೆ. ದುರ್ಗಮವಾದ ಸ್ಥಳವೊಂದಕ್ಕೆ ಸಾಮಾನ್ಯರು ಯಾರೂ ಹೋಗಲಾರರು. ಆಗ ಕಥೆಯ ಮುಖ್ಯ ಪಾತ್ರವೊಂದು ಈ ಸಾಹಸವನ್ನು ಮಾಡುತ್ತದೆ. ಈ ಅಗಾಧವಾದ ಸಾಹಸಕ್ಕೆ ಫ್ಯಾಂಟಸಿ ಸಾಧನವಾಗಿ ಬಳಕೆಯಾಗುತ್ತದೆ.

ಪೀಟರನು ಇಲ್ಲದ ನಾಡಿಗೆ ಮಕ್ಕಳೊಂದಿಗೆ ಸಾಗುವುದು ಅಲ್ಲಿನ ಕಡಲುಗಳ್ಳರೊಂದಿಗೆ ಹೋರಾಡುವುದು, ಗೆಲ್ಲುವುದು ಇವೆಲ್ಲವೂ ಸಾಹಸ ಪ್ರಧಾನತೆಗೆ ಸಾಕ್ಷಿಯಾಗಿವೆ. ಇಲಿಯ ಬಿಲದೊಳಗೆ ಜಾರಿದ ಪಾಪಚ್ಚಿ ಅತಾರ್ಕಿಕ ಲೋಕದೊಳಗೆ ಕಿರಿದಾಗಿ, ಹಿರಿದಾಗಿ,.....ಆಗುವ ಸಾಹಸ ಚಟುವಟಿಕೆಗಳೇ ಕಥೆಯ ಗೆಲುವಿನ ಪ್ರಧಾನ ಭಾಗಗಳಾಗಿವೆ. ನರರಿಲ್ಲದ, ಪ್ರಾಣಿಗಳೇ ತುಂಬಿದ ಕಾಡಿನ ನಿಯಮಗಳ ಮಧ್ಯೆ ಷೇರಖಾನನನ್ನು ಹತಗೊಳಿಸುವ ಸಾಹಸಗೈಯುವ ಮೋಗ್ಲಿ, ಆತುರದ ನಿರ್ಧಾರಗಳಿಂದ ಸಂಕಷ್ಟಕ್ಕೆ ಸಿಲುಕಿದರೂ ಪಾಪಣ್ಣನು ಪ್ರತಿ ಹಂತದಲ್ಲೂ ತನ್ನ ಒಳ್ಳೆಯ ತನ, ಸಾಹಸಗಳಿಂದ ಪಾರಾಗುವುದು, ಹಸುವಾಗಿದ್ದರೂ ಮಾನುಷ ಸಹಜ ಬಯಕೆಗಳನ್ನು ಹೊಂದಿ, ಅವುಗಳನ್ನು ಈಡೇರಿಸಿಕೊಳ್ಳಲು ಮಮ್ಮೂ ಮಾಡುವ ಸಾಹಸದ ತಮಾಷೆಯ ಸಂಗತಿಗಳು ಇವೆಲ್ಲಾ ಫ್ಯಾಂಟಸಿ ಕಥೆಗಳಲ್ಲಿ ಸಾಹಸದ ಪಾತ್ರವನ್ನು ಅದರ ಅಗತ್ಯವನ್ನು ಪ್ರತಿಪಾದಿಸುತ್ತವೆ.

ಸಾಹಸವೆಂದರೆ ಅಸಾಧ್ಯವಾದ ಕಾರ್ಯವೊಂದನ್ನು ಸಾಧ್ಯವಾಗಿಸುವುದು, ಅಂದರೆ ಸಾಮಾನ್ಯರು ಅಶಕ್ತರು ಅಗಾಧವಾದ ಕಾರ್ಯವೆಸಗುವುದು, ಅಲಕ್ಷ್ಯಕ್ಕೆ ಒಳಗಾದವರು ಎಲ್ಲರೂ ಹುಬ್ಬೇರಿಸುವಂತೆ ಸಾಹಸ ತೋರುವುದು, ಹಾಡುವ ಕೋಗಿಲೆ ಕಥೆಯ ಗುಣಶೇಖರ ಏಳು ಸಾಗರ, ಬೆಟ್ಟದಾಟಿ, ಕೋಗಿಲೆಯನ್ನು ತಂದು ರಾಜನಾಗುವುದು, ಮೆಣಸಿನ ಕಾಳಪ್ಪ ಕಳ್ಳರಿಂದ ಜವಳಿಯನ್ನು ಗೆದ್ದುಕೊಂಡು ಬರುವುದು ಹೀಗೆ ಕನ್ನಡದ ಒಳಗೊಂಡಂತೆ ಯಾವುದೇ ಭಾಷೆ ಪ್ರದೇಶದಲ್ಲಾದರೂ ಫ್ಯಾಂಟಸಿ ಕಥೆಗಳಲ್ಲಿ ಸಾಹಸ ಅಗತ್ಯದ ಒಳಗೊಳ್ಳುವಿಕೆಯಾಗಿರುತ್ತದೆ.

ಸಾಹಸ ಪ್ರದಾನ ಗುಣ ಫ್ಯಾಂಟಸಿ ಕಥೆಗಳಲ್ಲಿ ಒಳಗೊಳ್ಳುವುದರಿಂದ ಹೊಸದೊಂದು ಲೋಕದ ಅನಾವರಣ ಸಾಧ್ಯವಾಗುತ್ತದೆ. ಹೊಸ ಬಗೆಯ ಜನ, ಪರಿಸರ, ವರ್ತನೆಗಳ ಪರಿಚಯ ಆಗುತ್ತದೆ. ಎಷ್ಟೋ ಸಂದರ್ಭದಲ್ಲಿ ಕಥೆಯ ಮಹತ್ವದ ತಿರುವಿಗೂ ಈ ಪಯಣ ಕಾರಣವಾಗಿ ಬಿಡುತ್ತದೆ. ಫ್ಯಾ ಕಥೆಗಳಲ್ಲಿ ಕಂಡು ಬರುವ ಮತ್ತೊಂದು ಸಾಹಸದ ಅಂಶವೆಂದರೆ, ಪ್ರಶ್ನಿಸುವುದು, ಫ್ಯಾಂಟಸಿ ಲೋಕದಲ್ಲಿ ಎಲ್ಲವೂ ಸಾಧ್ಯವೆನ್ನುವುದಕ್ಕೆ ಈ ಗುಣವನ್ನು ಮಹತ್ವದ ಕಾರಣವಾಗಿ ತೆಗೆದುಕೊಳ್ಳಬಹುದು ತೀರಾ ನಗಣ್ಯ, ಸಾಮಾನ್ಯ ವೆನಿಸಬಹುದಾದ ವ್ಯಕ್ತಿಗಳು ಪ್ರಬಲರು, ರಾಕ್ಷಸರು, ಅರಸರ ವಿರುದ್ಧ ಧ್ವನಿಯೆತ್ತುವುದು ಕೂಡ ಸಾಹಸ ಕ್ರಿಯೆಯೇ ಆಗುತ್ತದೆ. ಹಾಗೆ ಕಿರಿದಾದ ವ್ಯಕ್ತಿತ್ವವೊಂದು ಪ್ರಬಲತ್ವಕ್ಕೆ ಸವಾಲೆಸೆಯುವ ಸಂದರ್ಭದಲ್ಲಿ ಅತೀತವಾದ ಶಕ್ತಿಯೊಂದು ಬೆನ್ನೆಲುಬಾಗಿ ನಿಲ್ಲುತ್ತದೆ.

ಪಾಪಣ್ಣ ಮೋಸಗಾರರಾದ ನರಿ ಬೆಕ್ಕು ಇವರನ್ನು ಎದುರಿಸುವಲ್ಲಿ ಯಕ್ಷಿಣಿ ಸಹಾಯಕ್ಕೆ ಬರುತ್ತದೆ. ಮೋಗ್ಲಿ ಷೇರಖಾನನನ್ನು ಎದುರಿಸಿ ಗೆಲ್ಲುವಲ್ಲಿ ತೋಳಗಳು, ಭಗೀರ, ಬಾಲು ಜೊತೆಗಿದ್ದು ಷೇರ್‌ಖಾನ್‌ನನ್ನು ಕೊಲ್ಲಲು ಸಹಕರಿಸುವುದು ಕಂಡು ಬರುತ್ತದೆ. ಮಕ್ಕಳ ಫ್ಯಾಂಟಸಿ ಕಥನಗಳಲ್ಲಿ ಇವೆಲ್ಲಾ ಅಶಕ್ತರ ಹಿಂದಿನ ಶಕ್ತಿಯ ಪ್ರತಿನಿಧಿಗಳಂತೆ ಗೋಚರವಾಗುತ್ತವೆ.

೬.೨.೭. ಪರ್ಯಾಯ ಜಗತ್ತು ಮತ್ತು ಫ್ಯಾಂಟಸಿ

ಫ್ಯಾಂಟಸಿ ಲೋಕ ಯಾವತ್ತೂ ಹೊಸದೊಂದು ಲೋಕದ ಅನಾವರಣ ಮಾಡುತ್ತಿರುತ್ತದೆ. ಮಕ್ಕಳ ಲೋಕ ವರ್ತಮಾನದ ವಾಸ್ತವದ ಲೋಕಕ್ಕಿಂತ ಭಿನ್ನವಾಗಿರುತ್ತದೆ. ಹಿರಿಯರ ಜಗತ್ತು ಮಕ್ಕಳನ್ನು ಅಸಹಾಯಕರನ್ನಾಗಿ, ಎಲ್ಲವುದಕ್ಕೂ ದೊಡ್ಡವರ ಸಹಕಾರ ತೆಗೆದುಕೊಳ್ಳುವವರಾಗಿಯೇ ಕಾಣುತ್ತಿರುತ್ತಾರೆ. ಆ ಸಮಯದಲ್ಲಿ ಮಗು ಅತಿವಾಸ್ತವ ಮನಸ್ಥಿತಿಗೆ ತೆರೆದುಕೊಳ್ಳುತ್ತದೆ. ಜೆ.ಎಂ.ಬೆರ್ರಿಯ ಪೀಟರನು ಹಾಗೆ ಮಗುವಾಗಿಯೇ ಉಳಿಯುವನು. ದೊಡ್ಡವರ ಲೋಕ ಮುಗ್ಧತೆಯನ್ನು ಕಳೆದುಕೊಳ್ಳುತ್ತದೆ.

ಫ್ಯಾಂಟಸಿಲೋಕ ಹೊಸದೊಂದು ಜಗತ್ತಿನ ಅನಾವರಣದ ಕಡೆಯೇ ತನ್ನ ಮುಖ ಮಾಡಿರುತ್ತದೆ. ಅದು ಪ್ರಸ್ತುತ ಅಧ್ಯಯನಕ್ಕೆ ಆಯ್ದುಕೊಂಡ ಕೃತಿಗಳಲ್ಲೂ ಕಾಣಬಹುದು. ಜುಜ್ಜಾ ವೈಸಲ್ಯಾಂಡರ್

ಅವರ ಮಮ್ಮೂ ಎನ್ನುವ ಹಸುವಿನ ಗೊಂಬೆಯ ಕಥನದ ಲೋಕ ಮಾತ್ರ ಮಕ್ಕಳ ಫ್ಯಾಂಟಸಿ ಲೋಕದಲ್ಲಿಯೇ ವಿಶಿಷ್ಟ ಪ್ರಯೋಗವಾಗಿದೆ. ಹಸುವೊಂದು ಮಾನವ ಸಹಜ ಆಸೆ ಆಕಾಂಕ್ಷೆಗಳನ್ನು ಹೊಂದಿ ಅದೆಲ್ಲವನ್ನೂ ತೀರಿಸಿಕೊಳ್ಳುವ ತೆಳುಹಾಸ್ಯದ ಫ್ಯಾಂಟಸಿ ಕಥನವಾಗಿದೆ. ಇದು ಅನೇಕ ಸರಣಿಗಳಲ್ಲಿ ಪ್ರಕಟಗೊಂಡಿದೆ. ಈ ಬಗೆಯ ಪ್ರಯೋಗವನ್ನು ನಾವು ಕನ್ನಡದಲ್ಲಿ ಮೇವುಂಡಿ ಮಲ್ಲಾರಿ ಅವರ ಮಡ್ಡಮ್ಮನ ಕಥೆಗಳಲ್ಲಿ ಕಾಣಬಹುದು. ಇನ್ನು 'ಪಿನೋಕಿಯೊ'ದ ದಡ್ಡರ ಹುಂಡಿ, ಜೇನುಗ್ರಾಮಗಳು ವಾಸ್ತವ ಲೋಕದಲ್ಲಿ ಕಾಣಸಿಗದ ವರ್ತನೆಗಳು ಇರುವ ಜಗತ್ತುಗಳಾಗಿವೆ.

ಹೀಗೆ ಫ್ಯಾಂಟಸಿ ಕಥೆಗಳೆಂದರೆ ವಾಸ್ತವ ಜಗತ್ತಿಕ್ಕಿಂತ ಭಿನ್ನವಾದ, ಪರ್ಯಾಯ ಎನ್ನುವ ಲೋಕವೊಂದನ್ನು ಸೃಷ್ಟಿಸುವುದೇ ಆಗಿದೆ. ಹಾಗೆಂದು ಮತ್ತೊಂದೇ ಆದ ಪೂರ್ಣ ಪ್ರಮಾಣದ ಹೊಸ ಲೋಕ ಸೃಷ್ಟಿ ಈ ಕಥೆಗಳಲ್ಲಿ ಕಂಡು ಬರುವುದಿಲ್ಲ. ಆದರೂ ಪ್ರೌಢರ ಲೋಕದೊಳಗೆ ವಾಸ್ತವದಲ್ಲಿ ಯಾವತ್ತೂ ಘಟಿಸಲಾರದ ಅನೇಕ ಸಂಗತಿಗಳು ಇಲ್ಲಿ ಕಂಡು ಬರುತ್ತವೆ. ಹಾಗಾಗಿ ಇವುಗಳನ್ನು ಪರ್ಯಾಯ ಜಗತ್ತು ಎಂದು ಭಾವಿಸಿ ಮೇಲಿನ ಕಥೆಗಳ ವಿಶ್ಲೇಷಣೆ ಮಾಡಲಾಗಿದೆ.

೬.೨.೮. ಶೀರ್ಷಿಕೆಗಳು ಮತ್ತು ಫ್ಯಾಂಟಸಿ

ಮಕ್ಕಳ ಕಥಾ ಲೋಕದಲ್ಲಿ ಫ್ಯಾಂಟಸಿ ಕಥನವು ವಿಶಿಷ್ಟವಾದುದು. ಫ್ಯಾಂಟಸಿಯು ಕಥನದೊಳಗಷ್ಟೇ ಇರುವುದಿಲ್ಲ ಅದು ಕಥೆಯ ಶೀರ್ಷಿಕೆಯಿಂದಲೇ ಶುರುವಾಗುತ್ತದೆ. ಪ್ರಸ್ತುತ ಘಟಕದಲ್ಲಿ ಅಧ್ಯಯನಕ್ಕೆ ಒಳಪಡಿಸಿದ ಆರು ಕೃತಿಗಳ ಶೀರ್ಷಿಕೆಗಳೇ ಫ್ಯಾಂಟಸಿ ಕಥಾ ಲೋಕದ ಆರಂಭವೆನ್ನುವಂತಿವೆ.

ಕಸ್ತೂರಿ ನಾ., ಅವರು ಲೂಯಿ ಕೆರೋಲ್ ಅವರ ಕೃತಿಯನ್ನು 'ಪಾತಾಳದಲ್ಲಿ ಪಾಪಚ್ಚಿ' ಎಂದು ಕನ್ನಡಕ್ಕೆ ಅನುವಾದಿಸಿದ್ದಾರೆ. ಭಾರತದ ಪುರಾಣಗಳಲ್ಲಿ ಬರುವ ಮೂರು ಲೋಕಗಳಲ್ಲಿ ಪಾತಾಳ ಲೋಕವೂ. ಭಾರತೀಯರು ಮಕ್ಕಳಿಗಾಗಿ ಫ್ಯಾಂಟಸಿ ಲೋಕವನ್ನು ಸೃಷ್ಟಿಸುವಾಗ ನಮ್ಮ ಪುರಾಣ, ಪರಂಪರೆಯ ಕಥೆಗಳನ್ನು, ಲೋಕಗಳನ್ನು ಮತ್ತೆ ಮತ್ತೆ ತೆರೆದಿಟ್ಟುದು ಕಂಡು ಬರುತ್ತದೆ. ಅದು ಪಾಪಚ್ಚಿಯ ಕಥೆಗೂ ವಿಸ್ತರಿಸಿಕೊಂಡಿದೆ. ಇಲ್ಲಿ ಹೆಸರೇ ಸೂಚಿಸುವಂತೆ ಇದು ಭೂಲೋಕವಲ್ಲ. ಅಲ್ಲಿ ನಡೆಯುವುದು ಭೂಲೋಕಕ್ಕೆ ಸಂಬಂಧಿಸಿದ್ದಲ್ಲ. ಹಾಗಾಗಿ ಅದು ನಮ್ಮ ವಾಸ್ತವ ಜಗತ್ತಿನಿಂದ ದೂರ ಇರುವಂಥದ್ದು. ಲೂಯಿ ಕೆರೋಲ್‌ನ ಆಲೀಸಳ ಅದ್ಭುತ ಲೋಕ ಭಾರತಕ್ಕೆ ಬರುವ ಹೊತ್ತಿಗೆ ಪಾತಾಳ ಲೋಕ ಆಗಿದ್ದು; ಬೇರೆ ದೇಶದ ಕೃತಿಗಳು ಭಾರತಕ್ಕೆ ಬರುವಲ್ಲಿ ಆಗುವ ರೂಪಾಂತರ ಕ್ರಿಯೆ ಎನ್ನಬಹುದು. 'ಪೈಡ್ ಪೈಪರ್' ಬೊಮ್ಮನಹಳ್ಳಿಯ ಕಿಂದರಿ ಜೋಗಿ ಆಗಿದ್ದು ಹೀಗೆಯೇ.

ಕಾರ್ಲೊ ಕೊಲೋಡಿಯ ಅವರ 'ಪಿನೋಕಿಯ'ವು ಎಂ.ಎಸ್.ಕೆ.ಪ್ರಭು ಅವರ ಕೈಯಲ್ಲಿ 'ಪೋಕರಿ ಪಾಪಣ್ಣನ ಪರಾಕು' ಆಗಿ ಕನ್ನಡದ ಮಕ್ಕಳಿಗೆ ಮುಟ್ಟಿತು. ಕನ್ನಡದಲ್ಲಿ ಫ್ಯಾಂಟಸಿ

ಪರಿಭಾಷೆಯನ್ನು ಬಳಕೆಗೆ ತಂದವರು ಪ್ರಭು ಅವರು ಪಿನೋಕಿಯವನ್ನು ಪೋಕರಿ ಪಾಪಣ್ಣ ಎಂದಾಗಲೇ ಹಾಸ್ಯ ರಸ ಕಥನದೊಳಗೆ ಮಿಳಿತಗೊಂಡಿದೆಯೆಂದೇ ಅರ್ಥ. ಇಲ್ಲಿ ಪಾಪಣ್ಣನೆಂಬ ಮುಗ್ಧ ಹುಡುಗ(ಬೊಂಬೆ) ಮಾಡುವ ಕೀಟಲೆಗಳು, ತರ್ಲೆಗಳೇ ಇಡೀ ಕಥನದ ನಡೆದಿಕ್ಕುಗಳಾಗಿವೆ.

'ಕಾಡಿನ ಕಥೆ' ಎಂದು ಕನ್ನಡಕ್ಕೆ ಬರುವ ಮೊದಲೇ 'ಜಂಗಲ್‌ಬುಕ್' ಎಂದು ಧಾರಾವಾಹಿಯಾಗಿ ಇಡೀ ವಿಶ್ವದ ಮಕ್ಕಳಿಗೆಲ್ಲಾ ಮನೆ ಮಾತಾಗಿತ್ತು. ರುಡ್‌ಯಾರ್ಡ್ ಕಿಪ್ಲಿಂಗ್ ಅವರ ಈ ಕೃತಿ ಅವರ ಕಥೆಯ ಅಭಿಮಾನಿ ಶಂಕರಾನಂದರು ಕಾಡಿನ ಕಥೆಯಾಗಿ ಕನ್ನಡದ ಮಕ್ಕಳಿಗೆ ನೀಡಿದಾಗ ಇಲ್ಲಿಯವರೆಗೆ ದೃಶ್ಯಮಾಧ್ಯಮದಲ್ಲಿದ್ದ ಇದು ಓದು ಕೃತಿಯಾಯಿತು. ಕಾಡು ಯಾವತ್ತಿಗೂ ಅದ್ಭುತ ಜಗತ್ತಿನ ಆಗರವೇ ಆಗಿದೆ. ಕಾಡು ಎಂದ ಕೂಡಲೇ ಅಲ್ಲಿ ರಮ್ಯ, ಆಶ್ಚರ್ಯ, ಭಯಾನಕ ಘಟನೆಗಳು ಘಟಿಸುತ್ತವೆ ಎಂದು ಊಹಿಸಿಕೊಳ್ಳಬಹುದು. ಹಾಗೆ ಶೀರ್ಷಿಕೆಯೊಂದು ಕಥನದ ದಾರಿ ತೋರಿಸಿವುದು ಫ್ಯಾಂಟಸಿ ಕಥನಗಳ ಮತ್ತೊಂದು ಲಕ್ಷಣವಾಗಿದೆ.

'ಉಯ್ಯಾಲೆಯಲ್ಲಿ ಹಸು' ಇದು ಕನ್ನಡಕ್ಕೆ ಬಂದ ವಿಶಿಷ್ಟವಾದ ಕಥೆ. ಪ್ರಾಣಿಗಳು ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಬಳಕೆಯಾದುದರಲ್ಲಿ ಬಹುತೇಕ ಮನುಷ್ಯರ ಬದುಕಿನ ಪ್ರತಿಬಿಂಬಗಳಾದುದೇ ಹೆಚ್ಚು. ಪಂಚತಂತ್ರ, ಹಿತೋಪದೇಶ, ಜನಪದ ಕಥೆಗಳು, ಪುರಾಣ ಹೀಗೆ ಎಲ್ಲಾ ಕಡೆಯೂ ಹೀಗೆ ಬಳಕೆಯಾದ ಪ್ರಾಣಿಲೋಕ ಇಲ್ಲಿ ತನ್ನದೇ ಬದುಕಿನ ವಿಶಿಷ್ಟ ನಡೆವಳಿಕೆಗಳ ಪ್ರತಿರೂಪದಂತಿದೆ. 'ಹಸುವೊಂದು ಉಯ್ಯಾಲೆ ಹಾಡುವುದೇ!' ಈ ಶೀರ್ಷಿಕೆಯೇ ಫ್ಯಾಂಟಸಿ ಕಥಾ ಲೋಕದಲ್ಲಿ ಪ್ರಾಣಿ ಬಳಕೆಗೊಂದು ಭಿನ್ನಮಾರ್ಗ ಹಿಡಿಸುತ್ತದೆ. 'ಮೇಧಾ ೦೧೭' ಇದು ಭಾರತೀಯ ಪ್ರಾದೇಶಿಕ ಭಾಷೆಗಳಲ್ಲಿಯೂ ವೈಜ್ಞಾನಿಕ ಫ್ಯಾಂಟಸಿ ಬರವಣಿಗೆಗಳು ಇವೆ ಎಂದು ಹೇಳುವಂತಿದೆ. 'ಶಾವೋಲಿನ್' ಎನ್ನುವ ಅಪರಿಚಿತ ಹೆಸರೇ ಕನ್ನಡದ ಮಕ್ಕಳಿಗೆ ಈ ಕೃತಿಯ ಕುರಿತು ಕಲ್ಪಿಸಿಕೊಳ್ಳಲು ಉತ್ತೇಜಿಸುತ್ತದೆ. ಚೀನಾ ಮೂಲದ ಈ ಪದವು ಕಥೆಯಲ್ಲಿ ಗಾಳಿಪಟವೊಂದರ ಹೆಸರಾಗಿರುತ್ತದೆ. ಈ ಮಾಯಾ ಗಾಳಿಪಟ ಹೇಗೆಲ್ಲಾ ಜಾನಿ ಎನ್ನುವ ಹುಡುಗನ ಬದುಕಲ್ಲಿ ತಿರುವು ತಂದು ಕೊಡುತ್ತದೆ ಎನ್ನುವುದೇ ಕಥೆ.

ಹೀಗೆ ಶೀರ್ಷಿಕೆಗಳೇ ಕಥೆ ಹೇಳುವ, ಮಕ್ಕಳನ್ನು ಕಲ್ಪಿಸಿಕೊಳ್ಳುವಂತೆ ಮಾಡುವ ಮಟ್ಟಕ್ಕೆ ಫ್ಯಾಂಟಸಿ ಕತೆಗಳ ಪೀಠಿಕೆಯಂತೆ ಕಾರ್ಯನಿರ್ವಹಿಸುತ್ತವೆ. ಇದರ ಕುರಿತು ಹೆಚ್ಚು ಅಧ್ಯಯನದ ಅಗತ್ಯವಿದ್ದು, ಇಲ್ಲಿನ ಉಪಘಟಕದ ಮಿತಿಯಲ್ಲಿ ಇಷ್ಟನ್ನು ಮಾತ್ರ ವಿವರಿಸಲು ಸಾಧ್ಯವಾಗಿದೆ.

ಈ ಫ್ಯಾಂಟಸಿಗಳು ವಿಭಿನ್ನವೂ, ಪರಂಪರೆಯಿಂದ ಬಂದ ಕಥೆಗಳಿಂದ ಬೇರೆಯಾಗಿಯೂ, ನಮ್ಮ ನಡುವಿನ ಬದುಕಿಗೆ ಹತ್ತಿರದವಾಗಿಯೂ, ನಮ್ಮನ್ನು ಹೆಚ್ಚು ಸ್ಪಂದಿಸುವುವಾಗಿಯೂ ಹೊಸತನ್ನು ಹೇಳಿವೆ. ಇವು ಯಾವುವೂ ಫೇಬಲ್ ಹಾಗೆ ನಿರ್ದಿಷ್ಟ ಉದ್ದೇಶದ, ನೀತಿಯ ಪಾಠದ ದಾರಿಗಳಾಗಿಲ್ಲ. ಬದಲಾಗಿ ಹೊಸಗಾಲದ ಬದುಕಿಗೆ ಹತ್ತಿರದವಾಗಿ ಸ್ಪಂದಿಸಿವೆ.

ಪೀಟರ್ ಪ್ಯಾನ್ ಬಾಲ್ಯದ ಮುಗ್ಧತೆಯ, ಸ್ವಚ್ಛಂದದ ವಿಶೇಷದ ಸುತ್ತಲೇ ಹುಟ್ಟಿಕೊಂಡ ಕಥೆ. ಅದೇ ಆಲೀಸ್‌ಳ ಕಥೆ ಮಕ್ಕಳ ಲೋಕ ಕಾಣಿಸಿಕೊಳ್ಳುವ ಚಿತ್ರ ವಿಚಿತ್ರ ಅಸಂಬದ್ಧ ಲೋಕವನ್ನು ಮುಂದಿಟ್ಟಿದೆ. ಜಂಗಲ್ ಬುಕ್ ಹಾಗೆ ನೋಡಿದರೆ ಬಾಲ್ಯವನ್ನು, ಅಲ್ಲಿನ ಮುಗ್ಧತೆಯನ್ನು ಹರಪಿಕೊಂಡುದು ವಿರಳ. ಅಲ್ಲಿ ಮೋಗ್ಲಿ ಪುಟ್ಟ ಹುಡುಗನಾಗಿ ಕಾಣಿಸಿಕೊಂಡರೂ, ಪ್ರಾಣಿಗಳ ನಡುವೆ ಅಪರೂಪದವನಾಗಿ ಓಡಾಡಿಕೊಂಡಿದ್ದರೂ ಅಲ್ಲಿನ ಆಶಯ ಬೇರೆಯೇ ಆಗಿದೆ. ಹಾಗಿದ್ದೂ ಕೃತಿ ಮಕ್ಕಳನ್ನು ಕೈ ಮಾಡಿ ಕರೆಯುವುದು ಅಲ್ಲಿನ ಪ್ರಾಣಿ ಲೋಕ, ಅವುಗಳ ನಡುವೆ ಮಾನವ ಮಗು, ಅಲ್ಲಿನ ಸಮಸ್ಯೆಗಳು, ಅವನ್ನು ಎದುರಿಸುವುದು, ಸಹಾಯಕ್ಕೆ ಬರುವುದು ಮುಂತಾಗಿ ಇರಲು ಸಾಕು. ಬಹು ಮುಖ್ಯ ಚಿಕ್ಕ ಮಕ್ಕಳಿಗೆ ಪ್ರಾಣಿಗಳು ಪಾತ್ರವಾಗಿ ಮಾನವೀಕರಣಗೊಂಡು ಅಡ್ಡಾಡುವುದು, ಮಾತನಾಡುವುದು, ಏನೆಲ್ಲ ಚಟುವಟಿಕೆಗಳಲ್ಲಿ ತೊಡಗುವುದು ಅತ್ಯಂತ ಆಕರ್ಷಕ, ಸೊಗಸಿನ ಸಂಗತಿಯೇ ಆಗಿದೆ.

ಜನಪದ ಮಾದರಿಯ ಕತೆಗಳನ್ನು, ಜನಪದ ಕತೆಗಳನ್ನೇ ಬಳಸಿಕೊಂಡಾಗಲೂ ಹೊಸಗಾಲದ ಸ್ಪಂದನೆ ಇರುವಂತೆ ಪ್ರಸ್ತುತ ಪಡಿಸುವುದೂ ಕೂಡ ಹಲವಾರು ಬಗೆಯಲ್ಲಿ ನಡೆದಿದೆ. ಅದೆಲ್ಲ ಕನ್ನಡದಲ್ಲಿ ನಡೆದಿಲ್ಲ. ವಿರಳಾತಿ ವಿರಳ, ಅನುವಾದವಾಗಿಯೂ ಅಷ್ಟಾಗಿ ಬಂದಿಲ್ಲ. ಇಲ್ಲಿ ಆಯ್ದುಕೊಂಡಿದ್ದು ಕೆಲವು ಉದಾಹರಣೆಗಳು ಮಾತ್ರ ಎನ್ನಬಹುದು.

ಕೊನೆ ಟಿಪ್ಪಣಿಗಳು:

೧. ಮಾಡ್ರನ್ ಫ್ಯಾಂಟಸಿ; ಇದೊಂದು ಫ್ಯಾಂಟಸಿ ಪ್ರಕಾರದ ಘಟಕವೇ ಆಗಿದ್ದು ಇದನ್ನು ಸಮಕಾಲೀನ ಫ್ಯಾಂಟಸಿ ಎಂದೂ ಕೂಡ ಕರೆಯಲಾಗುತ್ತದೆ. ಇದು ನಗರ ಕೇಂದ್ರಿತ ಬರಹಗಳನ್ನೇ ಹೆಚ್ಚಾಗಿ ಹೊಂದಿರುತ್ತದೆ.

೨. ಜನಾರ್ಧನ್ ಭಟ್, ಪೀಟರ್‌ನ ಸಾಹಸಗಳು ಪುಟ:

೩. ಆನಂದ ಪಾಟೀಲ, ಮಕ್ಕಳ ಸಾಹಿತ್ಯ ಓದು: ಒಲವು, ಪುಟ:

೪. ಎಂ.ಎಸ್.ಕೆ.ಪ್ರಭು, ಪೋಕರಿ ಪಾಪಣ್ಣನ ಪರಾಕು, ಪು. ೬೦

೫. ಅದೇ ಪು. ೬೧

೬. ಅದೇ, ಎಲ್.ವಿ.ಶಾಂತಕುಮಾರಿ, ಮುನ್ನುಡಿ, ಪು. ೦೬

೭. ಅದೇ, ಪು. ೬೫

೮. ಕೆ.ಶಿವಲಿಂಗಪ್ಪ ಹಂದಿಹಾಳು, ಶಾವೋಲಿನ್, ಪು. ೧೯

೯. ಪಿನ್‌ವ್ಯಾಂಗ್ ಎನ್ನುವವನು ಕಥೆಯಲ್ಲಿ ಪ್ರಸ್ತಾಪವಾಗುವ ಚೀನೀ ದೊರೆಯ ಹೆಸರಾಗಿದೆ. ಶಾವೋಲಿನ್ ಗಾಳಿಪಟ ಜಾಸಿಗೆ ಸಿಗುವ ಮೊದಲು ಪಿನ್‌ವ್ಯಾಂಗ್ ಬಳಿಯೇ ಇರುತ್ತದೆ. ಶತೃ ದೇಶದವರು ಪಿನ್‌ವ್ಯಾಂಗ್ ಮೇಲೆ ದಾಳಿ ಮಾಡಿ ಅವನನ್ನು ಕೊಂದು ಹೋದ ಮೇಲೆ, ಶಾವೋಲಿನ್ ಅಲ್ಲಿಂದ ಅನೇಕ ಕಷ್ಟಗಳನ್ನು ದಾಟಿ ಬಾಂಧವ್ಯದ ಪ್ರತೀಕವಾಗಿ ಭಾರತಕ್ಕೆ ಬರುವಂತಾಗಿದ್ದು ಪಿನ್‌ವ್ಯಾಂಗ್‌ನಿಂದಲೇ.

೧೦. ಕೆ.ಶಿವಲಿಂಗಪ್ಪ ಹಂದಿಹಾಳು, ಶಾವೋಲಿನ್, ಪು. ೨೧

೧೧. ಆನಂದ ಪಾಟೀಲ, ಮಕ್ಕಳ ಸಾಹಿತ್ಯ : ಓದು ಒಲವು(ಪತ್ರಿಕೆ) ಪು. ೨೫

೧೨. ಅದೇ ಪು. ೨೫

೧೩. ನಾ.ಕಸ್ತೂರಿ, ಪಾತಾಳದಲ್ಲಿ ಪಾಪಚ್ಚಿ, ಪು. ೧೩

೧೪. ಆನಂದಾವಲೋಕನ, ಪುಟ:

೧೫. ನಾ.ಕಸ್ತೂರಿ, ಪಾತಾಳದಲ್ಲಿ ಪಾಪಚ್ಚಿ, ಪು. ೪೫

ಅಧ್ಯಾಯ : ಏಳು

ಹೊಸಗಾಲದ ಮಕ್ಕಳ ಕಥನ ಸಾಹಿತ್ಯ ಮತ್ತು ಫ್ಯಾಂಟಸಿ

೭.೧. ಜನಪದದ ಹೊಸ ಚಲನೆ ಮತ್ತು ಫ್ಯಾಂಟಸಿ

೭.೧.೧. ಹೊಸ ಆಶಯಗಳು ಮತ್ತು ಫ್ಯಾಂಟಸಿ

೭.೧.೨. ಕಲಿಕಾ ಉದ್ದೇಶ ಮತ್ತು ಫ್ಯಾಂಟಸಿ

೭.೧.೩. ಹೊಸ ಪ್ರಯತ್ನ ಮತ್ತು ಫ್ಯಾಂಟಸಿ

೭.೨. ಪ್ರಾಣಿ-ಪಕ್ಷಿ ಲೋಕ ಮತ್ತು ಫ್ಯಾಂಟಸಿ

೭.೨.೧. ಶಶಿಧರ ವಿಶ್ವಾಮಿತ್ರ ಮತ್ತು ಕಾಡಿನ ಪ್ರಾಣಿಗಳು

೭.೨.೨. ನಾ ಡಿಸೋಜ ಮತ್ತು ಹಕ್ಕಿಗಳು

೭.೨.೩. ನೀಲಾಂಬರಿ ಮತ್ತು ಪ್ರಾಣಿ ಲೋಕ

೭.೨.೪. 'ಎದ್ದುನಿಂತ ಬಾಲ' ಹಾಗೂ ವಿಭಿನ್ನ ಪ್ರಾಣಿಪಾತ್ರಗಳ ಲೋಕ

೭.೩. ವೈಜ್ಞಾನಿಕ ಕಥನಗಳು ಮತ್ತು ಫ್ಯಾಂಟಸಿ

೭.೩.೧. ವೈಜ್ಞಾನಿಕ ಕಥನದ ಹಲವು ಸಾಧ್ಯತೆಗಳು

೭.೩.೨. ಅಂತರಿಕ್ಷ ಮತ್ತು ಫ್ಯಾಂಟಸಿ

೭.೩.೩. ಅನ್ಯಗ್ರಹ, ಜೀವಿಗಳು ಮತ್ತು ಫ್ಯಾಂಟಸಿ

೭.೩.೪. ಅಪರಿಚಿತ ವಸ್ತು ಮತ್ತು ಫ್ಯಾಂಟಸಿ

೭.೪. ಕನ್ನಡ ಮಕ್ಕಳ ಕಥನ ಸಾಹಿತ್ಯ: ಫ್ಯಾಂಟಸಿಯ ಹೊಸ ಚಲನೆಗಳು

೭.೪.೧. ವಿಶಿಷ್ಟ ಫ್ಯಾಂಟಸಿ ಸ್ವರೂಪದ ಕತೆಗಳು

೭.೪.೨. ರೂಪಾಂತರ ಮತ್ತು ಫ್ಯಾಂಟಸಿ

ಅಧ್ಯಾಯ : ಏಳು

ಹೊಸಗಾಲದ ಮಕ್ಕಳ ಕಥನ ಸಾಹಿತ್ಯ ಮತ್ತು ಫ್ಯಾಂಟಸಿ

ಪ್ರವೇಶ

ಪ್ರಸ್ತುತ ಅಧ್ಯಾಯದಲ್ಲಿ ಹೊಸಗಾಲದ ಮಕ್ಕಳ ಕಥನ ಸಾಹಿತ್ಯದ ಫ್ಯಾಂಟಸಿ ಸ್ವರೂಪಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಇಲ್ಲಿ 'ಹೊಸಗಾಲ' ಪದವನ್ನು ಬರೀ ವರ್ತಮಾನದ ಪರಿಧಿಗೆ ಸೀಮಿತಗೊಳಿಸಿಕೊಂಡಿಲ್ಲ. ಬದಲಾಗಿ ರಚನೆಯಾದ ಸಾಹಿತ್ಯ ಸ್ವರೂಪವನ್ನು ಉದ್ದೇಶವಾಗಿಟ್ಟುಕೊಂಡು ಈ ಪದಬಳಕೆ ಮಾಡಲಾಗಿದೆ. ಇಪ್ಪತ್ತೊಂದನೇ ಶತಮಾನದ ಈ ತಂತ್ರಜ್ಞಾನದ ಕಾಲದಲ್ಲೂ ನೂರಾರು ವರ್ಷಗಳ ಜನಪದದ ಫ್ಯಾಂಟಸಿ, ಪರಂಪರೆಯ ಪುರಾಣದ ಆದರ್ಶ ಪಾತ್ರಗಳು, ಪಂಚತಂತ್ರದ ಪ್ರಾಣಿಕತೆಗಳು ಕನ್ನಡದ ಮಕ್ಕಳ ಕಥೆಗಳಲ್ಲಿ ನಿರಂತರವಾಗಿ ಮರುನಿರೂಪಣೆಗೊಳ್ಳುತ್ತಲೇ ಬಂದಿವೆ. ಇಷ್ಟಾಗಿಯೂ ಕನ್ನಡದ ಮಕ್ಕಳ ಸಾಹಿತ್ಯವು ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಲೇ ಬಂದಿದೆ. ಇದು ಪಾಶ್ಚಾತ್ಯರಲ್ಲಿ ಕಂಡು ಬಂದಂತೆ ಮಾಡರ್ನ್ ಫ್ಯಾಂಟಸಿಯಷ್ಟು ಸ್ವತಂತ್ರವಾಗಿ, ವಿಸ್ತೃತವಾಗಿ ಬರಲಿಲ್ಲ. ಕಳೆದೊಂದು ಶತಮಾನದಿಂದ ಹಿಡಿದು ಇಲ್ಲಿಯವರೆಗೆ ಫ್ಯಾಂಟಸಿಯ ಹೊಸ ಸ್ವರೂಪಗಳನ್ನು ತಮ್ಮ ಕಥನಗಳಲ್ಲಿ ಒಳಗೊಂಡ ಕೃತಿಗಳನ್ನು ಈ ಅಧ್ಯಾಯದ ವ್ಯಾಪ್ತಿಯಲ್ಲಿ ಚರ್ಚೆಗೆ ಎತ್ತಿಕೊಳ್ಳಲಾಗಿದೆ.

ಹೊಸಗಾಲದ ಫ್ಯಾಂಟಸಿ ನಮ್ಮಲ್ಲಿ ಬಿಡುಬೀಸಾಗಿ ತೆರೆದುಕೊಳ್ಳದೇ ಇರುವುದಕ್ಕೆ ಮಕ್ಕಳ ಕಥಾ ಲೋಕವೇ ಹೆಚ್ಚು ಹೆಚ್ಚು ಸೃಜನಶೀಲವಾಗಿ ತೆರೆದುಕೊಳ್ಳದಿರುವುದೂ ಕಾರಣವಾಗಿದೆ. ಜೊತೆಗೆ ಪಾಶ್ಚಾತ್ಯದ ಪ್ರಯೋಗಗಳ ಕಡೆಗೆ ಕನ್ನಡದ ಲೋಕ ಹೊರಳದೆ ಹೋದುದು ಇನ್ನೊಂದು ಕಾರಣವಾಗಿದೆ. ಪಾಶ್ಚಾತ್ಯ ಲೋಕದಲ್ಲಿ ವಾಲ್ಟ್‌ಡಿಸ್ನಿ ಕಾಣಿಸಿ ದೊಡ್ಡದೊಂದು ಮಕ್ಕಳ ಲೋಕದ ಅನಾವರಣವವಾಗುವುದಕ್ಕೂ ಮೊದಲೇ ಅಲ್ಲಿ 'ಆಲೀಸ್ ಇನ್ ವಂಡರ್ ಲ್ಯಾಂಡ್', 'ವಿನಿ ಪೂಹಾ', 'ಕ್ಯಾಟ್ ಇನ್ ದಿ ಹ್ಯಾಟ್' ಅಂತಹ ಕೃತಿಗಳು ಆಗಲೇ ಅತಿವಾಸ್ತವದ ಬಗೆಬಗೆಯ ರುಚಿಯನ್ನು ತೋರಿಸಿಯಾಗಿತ್ತು. ಜೆ.ಎಂ.ಬೆರ್ರಿಯ ಪೀಟರ್ ಪ್ಯಾನ್ ಬಾಲಕನೇ ಒಂದು ಅದ್ಭುತ ಫ್ಯಾಂಟಸಿಯ ಲೋಕವನ್ನು ತೆರೆದಿರಿಸಿದ್ದ. ಲಾಫ್ಟಿಂಗ್ ಅವರ 'ಡಾ. ಡೂಲಿಟಲ್' ಮತ್ತೊಂದು ಸಾಧ್ಯತೆಯನ್ನು ಹೇಳಿಯಾಗಿತ್ತು. ಈ ಎಲ್ಲ ಹಿನ್ನೆಲೆಯಲ್ಲಿ ಅವಾಸ್ತವವನ್ನು ನಾನಾ ಬಗೆಯಲ್ಲಿ

ಬಳಸಿಕೊಳ್ಳುತ್ತಾ ಅದೇ ಒಂದು ಹೊಸ ಸೃಷ್ಟಿಯಾಗಿ ಅಲ್ಲಿ ಬೆಳೆದು ಬಂದಿತು. ಮಕ್ಕಳದೇ ಆಪ್ಯಾಯಮಾನವಾದ ಲೋಕ ಅಲ್ಲಿ ಅರಳಿತು. ಕನ್ನಡದಲ್ಲಿ ಗ್ರಾಮೀಣದ ಜನಪದ ಲೋಕದಿಂದ, ಪಂಚತಂತ್ರದ ನೀತಿ ಕತೆಗಳಿಂದ ಕಥಾಲೋಕ ಬಿಡುಗಡೆ ಪಡೆಯಲಿಲ್ಲ. ಮಕ್ಕಳದೇ ಸ್ವತಂತ್ರ ಲೋಕ ಇಲ್ಲಿ ಇಲ್ಲವೆನ್ನುವಷ್ಟು ವಿರಳವಾಗಿ ಕಂಡುಬಂದಿದೆ.

ಹೊಸಗಾಲದ ಬರವಣಿಗೆ ಈ ಕಡೆಗೆ ಹೊರಳಿ ಈಗ ಹೆಜ್ಜೆ ಹಾಕತೊಡಗಿರುವುದು ಭರವಸೆಯ ಸಂಗತಿಯಾಗಿದೆ. ನವೋದಯದ ಸಮಯದಲ್ಲಿ ಜನಪದದ ವಾತಾವರಣದಲ್ಲಿಯೇ ತಮ್ಮದೇ ಆದ ಪುಟ್ಟ ಮಡ್ಡಮ್ಮನ ಫ್ಯಾಂಟಸಿಯನ್ನು ಕಂಡುಕೊಂಡ ಮೇವುಂಡಿ ಮಲ್ಲಾರಿ, ಸದಾ ಬಾಲ್ಯದ ಸೊಗಸಿನ ಗುಂಗಿನಲ್ಲಿಯೇ ಉಳಿದ ಹೊಯಿಸಳರ ಪುಟ್ಟ ಕಥನಗಳು ಮಾಡಿಕೊಟ್ಟ ಹಾದಿಯಿಂದ ಬೇರೆ ಬೇರೆ ಲೇಖಕರ ನಿಡಿದಾದ ಬರವಣಿಗೆಯ ಪಯಣಕ್ಕೆ ಇದು ಕಾರಣವಾಗಿದೆ. ಇಲ್ಲಿ ಪ್ರಾಣಿಗಳು ಹೊಸಗಾಲದ ಅಗತ್ಯಗಳಿಗೆ ತುಡಿಯುವುದರೊಂದಿಗೆ ಕೇವಲ ನೀತಿ, ಹಿಂದಿನ ಜೀವನ ಮೌಲ್ಯಗಳಂಥ ಬದುಕಿನ ದೊಡ್ಡ ಸಂಗತಿಗಳಿಗೆ ತಿರುಗದೆ ಸಹಜವಾದ ನಮ್ಮ ನಡುವಿನ, ಅದರಲ್ಲೂ ಮಕ್ಕಳ ಲೋಕದ ಭಾವ ಪ್ರಪಂಚವನ್ನು ತೆರೆದಿಡುವಲ್ಲಿ ಚಾಚಿಕೊಳ್ಳತೊಡಗಿದವು. ಮಕ್ಕಳ ಸುತ್ತಲಿನ ತೀರಾ ಸಹಜದ ಮನೋವ್ಯಾಪಾರ ಇಲ್ಲಿ ಕಾಣಿಸಿಕೊಳ್ಳತೊಡಗಿದೆ. ಮಕ್ಕಳ ಇಂದಿನ ವಾತಾವರಣದ ನಡುವೆ ಈ ಪ್ರಾಣಿಗಳು ಸ್ಪಂದಿಸುವಂತೆ ನಿರೂಪಿತವಾಗತೊಡಗಿದವು. ಪ್ರಾಣಿಗಳನ್ನು ಅವುಗಳದೇ ಇರವು, ಅವುಗಳದೇ ಸಹಜದ ಸುಖ ದುಃಖ ಮಕ್ಕಳ ಮುಂದೆ ಅರಳಿಕೊಳ್ಳುವುದು ಒಂದು ಬಗೆಯಾದರೆ, ಪ್ರಾಣಿಗಳ ಕಾಲ್ಪನಿಕ ಅಸ್ತಿತ್ವ ಲೇಖಕನ ವಿಭಿನ್ನ ಅಭಿವ್ಯಕ್ತಿಗಳಿಗೆ ಆಸರೆಯಾಯಿತು. ಪ್ರಾಣಿಗಳ ಲೋಕದ ಕಾಳಜಿ ಸಹಜವಾಗಿಯೇ ಕನ್ನಡದ ಲೇಖಕರಲ್ಲಿ ಸಾಮಾನ್ಯವಾಗಿ ಕಾಣಿಸಿಕೊಂಡಿರುವುದು ಈ ಹೊಸಗಾಲದ ತೀರಾ ಅಗತ್ಯದ ಹೊರಳು ಎನ್ನಬಹುದು.

ನೀಲಾಂಬರಿ, ನಾ.ಡಿಸೋಜ, ಶಶಿಧರ ವಿಶ್ವಾಮಿತ್ರ, ಆನಂದ ಪಾಟೀಲರಿಂದ ಹಿಡಿದು ಹ.ಸ.ಬ್ಯಾಕೋಡ ಮೊದಲಾದ ಯುವ ಬರಹಗಾರರವರೆಗೆ ಈ ಮಾನವೀಯ ಕಾಳಜಿ ಕಾಣಿಸುತ್ತಲೇ ಬಂದಿದೆ. ಹಾಗೆಯೇ ಒಟ್ಟಾರೆ ನಮ್ಮೆಲ್ಲರ ಸದ್ಯದ ಬದುಕಿನ ಆಶಯಗಳು, ಅಲ್ಲಿನ ನೋವು ನಲಿವುಗಳು ಪ್ರಾಣಿಗಳ ಮೂಲಕ ಹರಿದಿರುವುದು ಗಣೇಶ ನಾಡೋರ ಅಂಥವರಲ್ಲಿ ಕಾಣಿಸುತ್ತದೆ. ಉಳಿದಂತೆ ಫ್ಯಾಂಟಸಿ ಇಲ್ಲಿ ಹಲವಾರು ಬಗೆಯಲ್ಲಿ ದಾರಿ ಕಂಡುಕೊಂಡಿದೆ. ಸಿಸು ಸಂಗಮೇಶರು ಸೃಷ್ಟಿಸಿದ ಪ್ರಾಣಿ ಕತೆಗಳು ನಮ್ಮ ನಡುವಿನ ವಿದ್ಯಮಾನಗಳನ್ನೇ ಮುಂದುವರಿಸುವುದರಿಂದ ಹಿಡಿದು, ಇಂದಿನ ವಾತಾವರಣದಲ್ಲಿನ ಬಲು ಸೂಕ್ಷ್ಮದ ಮನಸ್ಸಿನ ಬರಹಗಳವರೆಗೆ ಕೆಲವೆಲ್ಲ ಉದಾಹರಣೆಗಳು ಸಿಗುತ್ತವೆ.

ವಿರಳವೇ ಆದರೂ ಕನ್ನಡದದಲ್ಲಿ ಯಾವುದೇ ಲೇಖಕರ, ಯಾವುದೇ ಬರಹದ ಹಿಂದೆ ಅವರನ್ನು ಬಹುವಾಗಿ ಪ್ರಭಾವಿಸಿದ ಅನೇಕ ಸಂಗತಿಗಳು ಅವರ ಬರಹದ ಸ್ವರೂಪವನ್ನು

ನಿರ್ಧರಿಸುತ್ತಾ ಬಂದಿರುವುದು ಕಂಡು ಬರುತ್ತದೆ. ಕನ್ನಡದ ಮಕ್ಕಳ ಸಾಹಿತ್ಯದ ರಚನೆಯಲ್ಲಿ ನಮ್ಮ ಪರಂಪರೆಯಲ್ಲಿ ಇರುವ ಸರಕುಗಳೆಲ್ಲವೂ ಪ್ರೇರಣೆ, ಪ್ರಭಾವಗಳಾಗಿ ಕಾರ್ಯ ನಿರ್ವಹಿಸಿವೆ. ಅವುಗಳಲ್ಲಿ ಎಲ್ಲಾ ಸಾಹಿತ್ಯದ ತಾಯಿ ಬೇರೆನಿಸಿರುವ ಜನಪದ ಸಾಹಿತ್ಯ ಅದರ ಜೊತೆಗೆ ಪಂಚತಂತ್ರ, ಪುರಾಣ, ಇತಿಹಾಸ, ನಿಸರ್ಗದ ಪ್ರೀತಿ, ವೈಚಿತ್ರ್ಯಗಳು, ಮನುಷ್ಯತ್ವ ಇವೆಲ್ಲಾ ಲೇಖಕರ ಬರಹದ ಹಿಂದೆ ಪ್ರಭಾವಿಸಿವೆ. ಇವೆಲ್ಲದರ ಹೊರತಾಗಿಯೂ ಲೇಖಕರನ್ನು ಪ್ರಭಾವಿಸಿದ ಸಂಗತಿಗಳು ಹಲವಾರು ಇರಬಹುದು.

ಪ್ರಸ್ತುತ ಅಧ್ಯಾಯದ ನಾಲ್ಕು ಉಪಘಟಕಗಳಲ್ಲಿ ಕನ್ನಡದ ಮಕ್ಕಳ ಕಥನಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಜನಪದ ಕಥನದ ಸ್ವರೂಪವನ್ನೂ ಇಟ್ಟುಕೊಂಡು ರಚನೆಯಾಗಿದ್ದರೂ ಹೊಸದಾದ ಆಶಯಗಳನ್ನು ಕಥೆಗಳಲ್ಲಿ ಒಳಗೊಂಡಿವೆ. ಪ್ರಾಣಿ ಕಥೆಗಳಿಗೆ ರಾಜನಂತಿದ್ದ ಪಂಚತಂತ್ರ ಕಥಾ ಮಾದರಿಗಿಂತ ಭಿನ್ನವಾಗಿ ಪ್ರಾಣಿ ಪಕ್ಷಿಗಳನ್ನು ಚಿತ್ರಿಸಿದ ಕಥೆಗಳು, ಮಕ್ಕಳಲ್ಲಿ ವೈಚಾರಿಕ ಚಿಂತನೆಯನ್ನು ಬೆಳೆಸುವ ಉದ್ದೇಶದಿಂದ ರಚನೆಯಾದ ವೈಜ್ಞಾನಿಕ ಕಥೆಗಳು, ಕೊನೆಯದಾಗಿ ಮಕ್ಕಳ ಕಥನ ಮಾದರಿಯಲ್ಲಿ ವರ್ತಮಾನದ ಆಶಯಗಳನ್ನು ಹೊಂದಿದ ಹೊಸ ಪ್ರಯತ್ನಗಳನ್ನು ಒಂದೆಡೆ ಚರ್ಚಿಸಲಾಗಿದೆ. ಹೀಗೆ ಈ ಘಟಕವು ಮಕ್ಕಳ ಸಾಹಿತ್ಯದಲ್ಲಿ ಆದ ಹೊಸ ಚಲನೆಗಳನ್ನು ವಿಶ್ಲೇಷಣೆ ಮಾಡಲು ಪ್ರಯತ್ನಿಸಿದೆ.

೭.೧. ಜನಪದದ ಹೊಸ ಚಲನೆ ಮತ್ತು ಫ್ಯಾಂಟಸಿ

ಜನಪದ ಸಾಹಿತ್ಯ ಎಲ್ಲಾ ಸಾಹಿತ್ಯ ಪ್ರಕಾರಗಳಿಗೂ ತಾಯಿ ಬೇರಿನಂತಿದೆ. ಇಂದು ಈ ಪ್ರಕಾರವೂ ತನ್ನ ಹೊಸ ಹೊಸ ರೂಪಗಳನ್ನು ಪಡೆಯುತ್ತಿದೆ. ಹೊಸಗಾಲದ ಬರಹಗಾರರು ಬರೆಯುತ್ತಿರುವ ಫ್ಯಾಂಟಸಿ ಕತೆಗಳು ಜನಪದದತ್ತ ಮುಖಮಾಡುತ್ತಿರುವುದೂ ಕಾಣುತ್ತಿವೆ. ಹೊಸಗಾಲದ ಆಶಯಗಳಿಗೆ ತುಡಿಯುವಲ್ಲಿ ಅವು ನಿರೂಪಿತವಾಗುತ್ತಿವೆ. ಅವು ಪಡೆದುಕೊಂಡ ಸ್ವರೂಪ, ಚಲನೆಗಳು ಭಿನ್ನ ಬಗೆಯವಾಗಿವೆ. ಆ ಬಗೆಯ ಕಥನ ಪರಂಪರೆಯನ್ನು ಹೊಸಗಾಲದ ಫ್ಯಾಂಟಸಿಯಲ್ಲಿ ಚರ್ಚಿಸುವ ಅಗತ್ಯವಿದೆ.

ಲೇಖಕನಿಗೆ ಹಳ್ಳಿಗಾಡಿನ ಕತೆ ಬಲು ಅನುಕೂಲದ, ಅಥವಾ ತನ್ನ ಅಗತ್ಯದ ಹಂದರವಾಗಿ, ತನ್ನ ಅಭಿವ್ಯಕ್ತಿಯ ಸಂಗತಿಗಳಿಗೆ ಆಸರೆಯಾಗಿ ದೊರೆಯುತ್ತದೆ. ಅದನ್ನು ಬಳಸಿಕೊಂಡು, ಜೊತೆಗೆ ತನ್ನದೇ ಆದ ಕೆಲವೆಲ್ಲಾ ಬದಲಾವಣೆಗಳನ್ನು ತಂದುಕೊಂಡು ಲೇಖಕ ಹೊಸ ಸೃಷ್ಟಿಗೆ ಕಾರಣನಾಗುತ್ತಾನೆ. ರಾಮಾಯಣ, ಮಹಾಭಾರತದ ಸಂದರ್ಭಗಳನ್ನು, ವ್ಯಕ್ತಿಗಳನ್ನು ಬಳಸಿಕೊಂಡು ಕನ್ನಡದ ಬಹುಪಾಲು ಲೇಖಕರು ವಿಶಿಷ್ಟವಾದ ಕೃತಿಗಳನ್ನು ಸೃಜಿಸಿರುವುದನ್ನು ಗುರುತಿಸಬಹುದು. ಪಂಪನಿಗೆ ತನ್ನ ಕಾಲಧರ್ಮದ ಸಂಗತಿಗಳನ್ನು, ತನ್ನದೇ ಆದ ಬದುಕಿನ ಮೌಲ್ಯಗಳನ್ನು, ಅನುಭವಗಳನ್ನು ಹೇಳಲು ಭಾರತದ ಕತೆ ಅನುವಾಯಿತು. ರನ್ನನಿಗೆ ಕೇವಲ ಸುಯೋಧನನ

ಕೊನೆಗಾಲದ ಪ್ರಸಂಗ ಆಸರೆಗೆ ಬಂದಿತು. ಜನ್ನನಿಗೆ 'ಯಶೋಧರ ಚರಿತೆ' ಮತ್ತೊಂದು ಬಗೆಯಲ್ಲಿ ಅನುಕೂಲಕ್ಕೆ ಸಿಕ್ಕಿತು. ಹೀಗೆ; ಜನಪದ ಪರಂಪರೆಯ ಕಥೆಗಳನ್ನೂ ಮುರಿದು ಕಟ್ಟುವ ಪ್ರಕ್ರಿಯೆಯ ಭಾಗವಾಗಿ ಹೊಸಗಾಲದ ಲೇಖಕರು ಕಥೆ, ಕಾದಂಬರಿಗಳನ್ನು ರಚಿಸಿರುವುದು ಸಾಮಾನ್ಯವಾಗಿ ನಡೆದುಕೊಂಡು ಬಂದಿರುವ ಪ್ರಕ್ರಿಯೆಯಾಗಿದೆ.

ಪರಂಪರೆಯ ಈ ಮಾದರಿಗಳಲ್ಲಿ ಜನಪದದ ಧಾಟಿಯಲ್ಲೇ ಕೆಲವರು ಮುಂದುವರೆದಿದ್ದಾರೆ, ಮತ್ತೆ ಕೆಲವರು ಅದರ ಆಶಯಗಳನ್ನು ಹೊಸ ರೀತಿಯಲ್ಲಿ ಫ್ಯಾಂಟಸಿ ಕಥನಗಳಲ್ಲಿ ಕಟ್ಟಿಕೊಟ್ಟವರಿದ್ದಾರೆ. ಕೆಲವರಂತೂ ಭಿನ್ನ ಬಗೆಯ ಲೋಕವೊಂದನ್ನು ಸೃಷ್ಟಿಸಲು ಪ್ರಯತ್ನಿಸಿದ್ದಾರೆ. ಹೀಗೆ ಬಳಸಿಕೊಂಡಿರುವ ಕೆಲವಾದರೂ ಉದಾಹರಣೆಗಳು ಕನ್ನಡದ ಪರಿಸರದಲ್ಲಿ ಕಾಣುತ್ತಿವೆ. ಕನ್ನಡದಲ್ಲಿ ನೇರವಾಗಿ ಜನಪದ ಕತೆಗಳನ್ನು ಮಕ್ಕಳಿಗಾಗಿ ಎಂದು ನೀಡಿರುವುದಂತೂ ವಿಪುಲವಾಗಿ ಕಂಡು ಬಂದಿದೆ. ಅದನ್ನು ಈಗಾಗಲೇ ಚರ್ಚಿಸಲಾಗಿದೆ. ಕೆಲವರು ಅವುಗಳನ್ನು ಸರಳಗೊಳಿಸಿಯೋ, ಮಕ್ಕಳಿಗೆ ತಕ್ಕುದಾಗಿಯೆಂದು ಕುಬ್ಜಗೊಳಿಸಿದುದೂ ಇದೆ. ಕೆಲವರು ಮಕ್ಕಳಿಗಾಗಿ ಸೂಕ್ತವಾವುದು ಎಂದು ಆಯ್ಕೆಗಿಳಿದಿರುವುದೂ ನಡೆದಿದೆ. ಆದರೆ ಅಲ್ಲಿನ ಕಥಾ ಹಂದರಗಳನ್ನು ತಮ್ಮದೇ ಆದ ಬಗೆಯಲ್ಲಿ ಹೊಸ ಆಶಯಗಳಿಗಾಗಿ ಬಳಸಿಕೊಂಡಿರುವ ಕಥನಗಳನ್ನು, ಕಲಿಕೆಯ ಉದ್ದೇಶಕ್ಕಾಗಿ ಬಳಸಿಕೊಂಡ ಕಥನ ಮಾದರಿಗಳನ್ನು, ಜನಪದ ಎಳೆಯನ್ನು ಬಳಸಿಕೊಂಡರೂ ವರ್ತಮಾನದ ಅಗತ್ಯಗಳು, ಹೊಸ ಫ್ಯಾಂಟಸಿಯ ವಿನ್ಯಾಸವನ್ನು ಬಳಸಿಕೊಂಡು ಹೆಣೆದ ಹೊಸ ಪ್ರಯತ್ನದ ಕಥನಗಳನ್ನು ಹೀಗೆ ಮೂರು ಭಾಗಗಳಾಗಿ ವಿಭಾಗಿಸಿ ಈ ಉಪಘಟಕದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

೭.೧.೧. ಹೊಸ ಆಶಯಗಳು ಮತ್ತು ಫ್ಯಾಂಟಸಿ

ಹೊಸಗಾಲದಲ್ಲಿ ಬರೆಯುತ್ತಿರುವ ಬರಹಗಾರರು ಜನಪದ ಪರಂಪರೆಯ ಸ್ವರೂಪವನ್ನು ತಮ್ಮ ಕಥನಗಳಲ್ಲಿ ಪುನರ್‌ರಚನೆ ಮಾಡುತ್ತಿದ್ದರೂ ಬರೆಯುವ ಕಾಲಕ್ಕೆ ತಕ್ಕುದಾದ ಆಶಯಗಳನ್ನು ಸೇರಿಸಿ ಕಥೆಗಳನ್ನು ಕಟ್ಟುವುದನ್ನು ಕಾಣಬಹುದು. ಈ ಬಗೆಯ ಬರಹ ಪ್ರಯತ್ನಗಳನ್ನು ಹಿರಿಯ ಲೇಖಕರಾದಿಯಾಗಿ ಅನೇಕರು ಮಾಡಿರುವುದು ಕಂಡುಬರುತ್ತದೆ. ಕಥೆಗಳ ಮೂಲದಲ್ಲಿ ಸಾಮ್ಯತೆ ಕಂಡು ಬಂದರೂ ಫ್ಯಾಂಟಸಿಯ ಸ್ವರೂಪಗಳಲ್ಲಿ ಮತ್ತು ಆಶಯಗಳಲ್ಲಿ ಭಿನ್ನತೆ ಕಂಡುಬರುತ್ತದೆ.

ಕನ್ನಡದ ಪ್ರಮುಖ ಲೇಖಕರಾದ ಚಂದ್ರಶೇಖರ ಕಂಬಾರರು ಬಹು ಮುಖ್ಯವಾಗಿ ಜನಪದ ಕತೆಗಳ ಹಂದರಗಳನ್ನೇ ವಿಶೇಷವಾಗಿ ತಮ್ಮ ಅಗತ್ಯಗಳಿಗೆ ಆಸರೆಯಾಗಿ ಬಳಸಿಕೊಳ್ಳುತ್ತಾರೆ. ಅಥವಾ ಅಲ್ಲಿನ ಹೊಳಹುಗಳಲ್ಲಿಯೇ ಇಂದಿನ ಅಗತ್ಯಗಳನ್ನು ಕಂಡುಕೊಳ್ಳುತ್ತಾರೆ. ಜನಪದ ಕಥಾ ಹಂದರಗಳು ಅವರಿಗೆ ಆ ಬಗೆಯಲ್ಲಿ ಬಹು ಅನುಕೂಲಕರವಾಗಿ ಕಾಣಿಸುತ್ತವೆ. ಇಂದಿನ ನಮ್ಮ ನಡುವಿನ ಸಮಸ್ಯೆಗಳಿಗೆ ಜನಪದ ಕತೆಗಳಲ್ಲಿ ಅವರಿಗೆ ಉತ್ತರಗಳು ಸಿಗುತ್ತವೆ. ಹಾಗಾಗಿ ಹಳೆಗಾಲದ ಬದುಕಿನ ಸಂಗತಿಗಳು ಇದ್ದರೂ ಅಲ್ಲಿ ಕಾಣಿಸುವ ಆಶಯಗಳು ಇಂದಿನ ಅಗತ್ಯಕ್ಕೆ

ತುಡಿಯುತ್ತಿರುವುದರಿಂದ ಸದ್ಯಕ್ಕೆ ಪ್ರಸ್ತುತವಾಗುತ್ತವೆ. ಅವರು ಮಕ್ಕಳಿಗೆ ಎಂದು ಪ್ರತ್ಯೇಕವಾಗಿ ನೀಡಿರುವ 'ಮರವೇ ಮರ್ಮರವೇ' ಸಂಕಲನ ದೊಡ್ಡವರಿಗಾಗಿ ಅವರೇ ಬಳಸಿಕೊಂಡ ಕತೆಗಳನ್ನೇ ಸರಳಗೊಳಿಸಿ ಮಕ್ಕಳ ಓದಿಗೆ ನೀಡಿದ್ದಾರೆ. ಇಲ್ಲಿ ಅವರು ಜನಪದರಲ್ಲಿ ಇದ್ದ ಹಾಗೆಯೇ ಕತೆಯನ್ನು ಬಳಸಿಕೊಳ್ಳುತ್ತಾರೆ, ಹಾಗಿದ್ದೇ ಅವು ಹೊಸ ಆಶಯಗಳಿಗೆ ತೆರೆದುಕೊಳ್ಳುವಂತಿರುತ್ತವೆ.

ಚಂದ್ರಶೇಖರ ಕಂಬಾರರ 'ಸಂಪಿಗೆರಾಣಿ' ಕಥೆ ಜನಪದದ್ದೇ ಆದರೂ ಅಲ್ಲಿ ಬರುವ ಮಹಾರಾಣಿ ನಿಸರ್ಗವನ್ನು ದ್ವೇಷಿಸುವವರ ಪ್ರತಿನಿಧಿಯಂತೆ ವರ್ತಿಸುತ್ತಾಳೆ. ಸಂಪಿಗೆರಾಣಿಯು ಇಡೀ ಕಾಡಿನ ಪ್ರತಿನಿಧಿಯಾಗಿ ವರ್ತಮಾನದಲ್ಲಿ ಮನುಷ್ಯ ನಿಸರ್ಗವನ್ನು ಹೇಗೆಲ್ಲಾ ಸ್ವೀಕರಿಸಬೇಕೆಂಬ ಪಾಠ ಹೇಳುತ್ತಾಳೆ. ನಿಸರ್ಗಕ್ಕೆ ಕೇಡು ಬಗೆದವರಿಗೆ ಪಶ್ಚಾತ್ತಾಪಕ್ಕೆ ಒಂದು ಅವಕಾಶವಿರುತ್ತದೆ. ಮಹಾರಾಣಿ ಸಂಪಿಗೆರಾಣಿಯನ್ನು ಮರ ಮಾಡಿ ನಾಲ್ಕನೇ ಕಲ್ಲನ್ನು ಕಳೆದು ಬಿಟ್ಟಿರುತ್ತಾಳೆ. ಆಕೆಯ ಕನಸಿನಲ್ಲಿ ಪುಷ್ಪರಾಣಿಯ ಮಗ ಮಹಾರಾಣಿಯನ್ನು ಮೊಟ್ಟಮೊದಲು ಅಮ್ಮಾ ಎನ್ನುವ ಮೂಲಕ ಅವಳಲ್ಲಿನ ದ್ವೇಷ, ಅಸೂಯೆ ಕೊನೆಗೊಳಿಸಿ ಮಾತೃತ್ವ ಉಕ್ಕುವಂತೆ ಆಗುತ್ತದೆ.

ಇಲ್ಲಿ ಮಹಾರಾಣಿ ಸಂಪಿಗೆರಾಣಿ ಮತ್ತು ಅವಳ ಮಗನ ಮೇಲೆ ತೋರುವ ಪ್ರೀತಿ ಹೀಗಿದೆ; 'ಆಶ್ಚರ್ಯ! ಮಕ್ಕಳ ಹಾಗೆ ತೊದಲಿ ನನಗೇ ಅಮ್ಮಾ ಎನ್ನುತ್ತಿದೆ ಗಿಳಿಮರಿ ಕೇಳಿದೆಯೇನೆ?'..ಈ ಮರಿ ಅಮ್ಮಾ ಎಂದಾಗ ಹೂತು ಹೋಗಿದ್ದ ನಿಧಿ ಹೊರಬಂದು ಕಾಣಿಸಿದ ಅನುಭವವಾಯಿತು. ಕಳೆದ ಜನ್ಮದಲ್ಲಿ ಇದು ನನ್ನ ಮಗುವಾಗಿರಲೇಬೇಕು. ಹೆದರಬೇಡಿ ಹಕ್ಕಿಗಳೇ ಈ ಮರಿಯನ್ನು ನಾನು ಗಿಡುಗನಿಗೆ ಕೊಡುವುದಿಲ್ಲ.'"[೧] ಮಹಾರಾಣಿಯ ಈ ಮಾತುಗಳು ನಿಸರ್ಗದ ಮೇಲೆ ಅವಳು ತೋರಿದ ಪ್ರೀತಿಯ ಪ್ರತೀಕವಾಗಿದೆ. ಈ ಕಥೆಯ ಫ್ಯಾಂಟಸಿ ಜನಪದ ಮೂಲದ್ದೇ, ಆದರೆ ಮಹಾರಾಣಿಯ ಮೂಲಕ ಲೇಖಕರು ಆಡಿಸಿರುವ ಮಾತುಗಳು ಆಧುನಿಕ ಜಗತ್ತಿನಲ್ಲಿ ಮನುಷ್ಯ ನಿಸರ್ಗವನ್ನು ಉಳಿಸುವ, ಪ್ರೀತಿಸುವ ಗುಣವನ್ನು ಬೆಳೆಸಿಕೊಳ್ಳಬೇಕು ಎಂಬ ಸಂದೇಶದ ಧ್ವನಿಯನ್ನು ವ್ಯಕ್ತಮಾಡುತ್ತದೆ.

ಮನುಷ್ಯನ ಉಳಿವು ನಿಸರ್ಗದ ಉಳಿವಿನ ಮೇಲೆ ನಿಂತಿದೆ. ಅದಕ್ಕಾಗಿ ಮನುಷ್ಯ ಬದಲಾಗಬೇಕಾದ ಅಗತ್ಯವನ್ನು ಮಹಾರಾಣಿಯ ಈ ಮಾತು ಒತ್ತಿ ಹೇಳುತ್ತದೆ. 'ನಿಜ ಇಂತಹ ಅಪರೂಪದ ಅವಕಾಶ ಇನ್ನೊಮ್ಮೆ ಸಿಗಲಾರದು'[೨] ಅಷ್ಟಾಗಿಯೂ ಮನುಷ್ಯ ಬದಲಾಗದಿದ್ದರೆ ವಿನಾಶ ಖಂಡಿತ ಎನ್ನುವುದನ್ನು ಕಥೆ ಸಾರುತ್ತದೆ. ಜನಪದ ಫ್ಯಾಂಟಸಿಯನ್ನು ಹೊಸಗಾಲದ ಆಶಯಗಳಿಗೆ ತಕ್ಕಂತೆ, ನಿಸರ್ಗದ ಮೌಲ್ಯಗಳಿಗೆ ತಕ್ಕಂತೆ ಹೀಗೆ ತಕ್ಕುದಾಗಿ ಬಳಸಿಕೊಳ್ಳಲಾಗಿದೆ. ಕಂಬಾರರು ಹೆಚ್ಚು ಜನಪ್ರಿಯವಾಗಿರುವ ಅಲಿಬಾಬಾ ನಲವತ್ತು ಕಳ್ಳರ ಕತೆಯನ್ನೂ ಹೀಗೆಯೇ ಮಕ್ಕಳಿಗಾಗಿ ಒಂದು ನಾಟಕಕ್ಕೆ ಬಳಸಿಕೊಂಡಿದ್ದಾರೆ. ಅಲ್ಲಿನ ರೂಢಿಗತ ಕತೆಯಲ್ಲಿ ಪಾತ್ರಗಳ ಸಂಭಾಷಣೆಯನ್ನು ಬಳಸಿಕೊಂಡು ಹೊಸ ಆಶಯಗಳು ಹೊಮ್ಮುವಂತೆ ನೋಡಿಕೊಳ್ಳಲಾಗಿದೆ.

ಹೀಗೆ ಕಂಬಾರರ ಕತೆಗಳ ಫ್ಯಾಂಟಸಿಯ ಸ್ವರೂಪ ನಮ್ಮಿಂದ ತುಂಬಾ ದೂರದ ಸಂಗತಿಗಳನ್ನು ಒಳಗೊಳ್ಳದೆ, ಸನಿದೂರದ ಲೋಕವು ಅವರ ಕಥೆಗಳಲ್ಲಿ ಅನಾವರಣಗೊಳ್ಳುತ್ತದೆ. ಈ ಕಾರಣದಿಂದಲೇ ಕಂಬಾರರ ಕಥೆಗಳು ವಾಸ್ತವತೆ ಹತ್ತಿರವಾಗಿಯೂ, ಅತಿವಾಸ್ತವತೆಯ ಗುಣಗಳನ್ನು ಹೊಂದಿ ಫ್ಯಾಂಟಸಿ ಕಥನಗಳಾಗಿಯೂ ಓದುಗರನ್ನು ಸೆಳೆಯಲು ಸಾಧ್ಯವಾಗಿದೆ.

ವೈದೇಹಿಯವರ 'ಅಬ್ಬಾಲಕ್ಕ ಅಜ್ಜೀ ಮನೆಗೆ ಹೋಗಿದ್ದು' ಕಥೆಯ ಹಂದರ ಮತ್ತು ಸ್ವರೂಪದಿಂದ ಜನಪದದ ಪ್ರೇರಣೆಯಿಂದ ಹುಟ್ಟಿಕೊಂಡ ಕಥೆಯೇ ಆಗಿದೆ. ದುರ್ಬಲರು ಸಾಹಸವನ್ನು ಮಾಡುವ, ಅಸಾಧ್ಯವಾದುದನ್ನು ಸಾಧಿಸುವ ಮೌಲ್ಯಗಳೆಲ್ಲವೂ ಜನಪದ ಸಾಹಿತ್ಯದಲ್ಲಿ ಸಹಜವಾದವು. ಜನಪದ ಕಥೆಗಳ ಪ್ರೇರಣೆಯಿಂದ ಹುಟ್ಟಿಕೊಂಡ ಈ ಕಥೆಯಲ್ಲಿ ಅಬ್ಬಾಲಕ್ಕ ಎನ್ನುವ ಬಾಲಕಿ ತನ್ನ ಅಜ್ಜಿಯನ್ನು ನೆನಪಿಸಿಕೊಂಡು ರಾತ್ರೋ ರಾತ್ರಿ ಯಾರಿಗೂ ಹೇಳದೆ ಅಜ್ಜಿ ಊರಿಗೆ ಹೋಗಿ ಬರುತ್ತಾಳೆ. ದಾರಿಯಲ್ಲಿ ದುರ್ಗಮ ಕಾಡು, ಪ್ರಾಣಿಗಳು, ನಿಶಾಚರಿಗಳ ಭಯ ಎಲ್ಲವನ್ನೂ ಮೀರುವ ಈ ಪ್ರಕ್ರಿಯೆಯಲ್ಲಿ ಫ್ಯಾಂಟಸಿಯ ಪದರು ಬಿಚ್ಚಿಕೊಳ್ಳುತ್ತದೆ.

ಜನಪದ ಕಥನಗಳಲ್ಲಿ ಇಂಥ ಅಸಾಧ್ಯ ಘಟನೆಗಳೆಲ್ಲವೂ ವಾಸ್ತವದಲ್ಲಿ ಅತ್ಯಂತ ಸಹಜವಾಗಿ ನಡೆಯುತ್ತವೆ. ಆ ಕಥೆಗಳನ್ನು ಕೇಳುವ, ಓದುವವರೆಲ್ಲಾ ಆ ಅದ್ಭುತ ಕಲ್ಪನಾ ಶಕ್ತಿಗೆ ಹೂಂಗುಟ್ಟುತ್ತಾರೆ. ರಮ್ಯವಾದ ಆ ಕಥೆಯ ಸಂದರ್ಭದಲ್ಲಿ ಅದನ್ನೆಲ್ಲ ಒಪ್ಪಿಕೊಳ್ಳುವುದರಲ್ಲಿ ಅವರಿಗೆ ಯಾವ ಆತಂಕವಿಲ್ಲ. ಆದರೆ ಈ ಕಾಲದ ಲೇಖಕರು ಅಂಥದೇ ಪ್ರಸಂಗವನ್ನು ಕಥನ ಪ್ರಕ್ರಿಯೆಯಲ್ಲಿ ಬಳಸಿಕೊಳ್ಳುವಾಗ ತನ್ನದೇ ಆದ ಪರಿಸರದಲ್ಲಿ ನಿಂತು ಸಾಧ್ಯಮಾಡಿಕೊಳ್ಳುವುದು ಸಹಜವಾದುದು. ಹಾಗಾಗಿ ಅಲ್ಲಿನ ಅಸಂಗತ ಸಂಗತಿಗಳನ್ನು ನಿದ್ದೆಯ ಮೂಲಕ ಅರೆ ಪ್ರಜ್ಞಾವಸ್ಥೆಯಲ್ಲಿ ಸಂಭವಿಸುವಂತೆ ಮಾಡಿಕೊಳ್ಳುತ್ತಾರೆ.

ವೈದೇಹಿ ಅವರ ಕತೆಯಲ್ಲೂ ಇದೇ ತಂತ್ರ ಬಳಕೆಯಾಗಿದೆ. ಹಳ್ಳಿಗಾಡಿನ ಕಥೆಯಲ್ಲಿನ ಹಾಗೆಯೇ ಅಬ್ಬಾಲಕ್ಕ ದಾರಿ ಗುರುತಿಗಾಗಿ ದಾರಿ ತುಂಬಾ ಸಕ್ಕರೆ ಚೆಲ್ಲುತ್ತಾ ಸಾಗುತ್ತಾಳೆ. ದಾರಿಯಲ್ಲಿ ಜೀರುಂಡೆ, ಕೀಟ, ಗೂಬೆ ಮತ್ತು ಹಕ್ಕಿಗಳ ಶಬ್ದ ಇವೆಲ್ಲವುಗಳನ್ನು ಧೈರ್ಯದಿಂದ ಸಹಿಸಿ ಅಬ್ಬಾಲಕ್ಕ ಸಾಗುತ್ತಾಳೆ. ಕಾಡಿನಲ್ಲಿ ಸಿಗುವ 'ಹುಲಿಯ ಕಣ್ಣುಗಳು ಎಲೆಕ್ಟ್ರಿಕ್ ಬಲ್ಬ್‌ನಂತೆ ಹೊಳೆಯುತ್ತಿದ್ದವು'[೩] ಎನ್ನುವ ಅಬ್ಬಾಲಕ್ಕಳ ಈ ಮಾತು ಕಥೆ, ವಾಸ್ತವೇತರ ಜಗತ್ತಿನಲ್ಲಿ ಕಥೆ ಸಾಗುತ್ತಿದ್ದರೂ ಲೇಖಕನಿಗೆ ವಾಸ್ತವದ ಎಚ್ಚರವಿರುವುದರಿಂದ ಕಥೆ ಅರೆ ಫ್ಯಾಂಟಸಿಯೆನ್ನುವ ಹಾಗೆ ವ್ಯಕ್ತವಾಗುತ್ತದೆ. ಜನಪದ ಮಾದರಿಯ ಈ ಕಥೆಯಲ್ಲಿ ಎಲೆಕ್ಟ್ರಿಕ್ ಬಲ್ಬ್ ಮುಂತಾದ ಈ ಬಗೆಯ ಪದಗಳು ಕಥೆಯ ವರ್ತಮಾನದ ಹಾಜರಾತಿಯನ್ನು ಎತ್ತಿ ತೋರಿಸುತ್ತವೆ. ಅತಿವಾಸ್ತವ ಕಥೆಯೊಳಗೆ ವಾಸ್ತವದ ಎಚ್ಚರ ಹೊಂದುವುದು ಲೋಯರ್ ಫ್ಯಾಂಟಸಿ ಕತೆಗಳ ಸಹಜ ಗುಣಗಳಲ್ಲಿ ಒಂದೆನ್ನುವಂತೆ ಇದು ಹಲವಾರು ಕಥೆಗಳಲ್ಲಿ ವ್ಯಕ್ತವಾಗಿದೆ.

ಹುಲಿಯಿಂದ ತಪ್ಪಿಸಿಕೊಳ್ಳಲು ಅಬ್ಬಾಲಕ್ಕ ಮಾಡುವ ತಂತ್ರಗಳು, ದೋಣಿಯವನು, ದೋಣಿಯನ್ನು ಮಾತನಾಡಿಸಿ ಅಜ್ಜಿ ಮನೆಗೆ ಹೋಗುವಂತೆ ಹೇಳುತ್ತಾನೆ. ಹೀಗೆಲ್ಲಾ ವಸ್ತುಗಳನ್ನೂ ಮಾತನಾಡಿಸುವ ಅತಿವಾಸ್ತವ ಸಂದರ್ಭಗಳು ಜನಪದ ಕತೆಗಳ ಮಧ್ಯೆ ಸಹಜವಾಗಿ ಕಂಡುಬರುತ್ತವೆ. 'ಮುಂಚೆಲ್ಲಾ ಈ ಕಾಡಿನಲ್ಲಿ ತುಂಬಾ ಹುಲಿಗಳು ಇದ್ದುವಂತೆ. ಈಗ ಮರಗಳೆಲ್ಲಾ ಹೋದುವಲ್ಲ, ಕಾಡು ಹೋಗಿ ಹಾಡಿ ಆಯ್ತಲ್ಲ, ಆ ಮೇಲಿಂದ ಹುಲಿಗಳು ಇಲ್ಲ ಅಂತಿದ್ರು" ಕಲ್ಪನೆಯ ಕತೆಯೊಂದು ವರ್ತಮಾನದ ಕಥೆಯೇ ಆಗಲು ಈ ಬಗೆಯ ವಾಸ್ತವದ ಸಮಸ್ಯೆಗಳು ಸಹಕರಿಸುತ್ತವೆ. ಅಬ್ಬಾಲಕ್ಕಳ ಈ ಮೇಲಿನ ಮಾತುಗಳು ಸಮಕಾಲೀನವಾದ ಸಂಗತಿಯನ್ನು ಹೇಳುವ ಮೂಲಕ ಮನುಷ್ಯನು ಕಾಡಿಗೆ ಮಾಡಿದ ಕೇಡುಗಳನ್ನು ನೆನಪಿಸುತ್ತದೆ.

ಜನಪದದ ಕಥೆಗಳಲ್ಲಿಯಂತೆ ಮನೆಯಲ್ಲಿ ಎಷ್ಟೇ ಜನ ಹಿರಿಯರಿದ್ದರೂ ಕಿರಿಯವಳಾದ ಅಬ್ಬಾಲಕ್ಕಳನ್ನು ಕಥೆ ಕೇಂದ್ರೀಕರಿಸುವುದು ಜನಪದದ ಆಶಯವೇ ಆಗಿದೆ. ಇಲ್ಲಿ ಲೇಖಕಿ ಜನಪದದ ಸ್ವರೂಪ ಬಳಸಿಕೊಂಡಿದ್ದರೂ ಅವಳು ಮಾಡಿದ ಸಾಹಸ ಕಾರ್ಯಗಳೆಲ್ಲವೂ ಕನಸಿನಲ್ಲಿ ನಡೆದ ಘಟನೆಗಳಂತೆ ವಿವರಿಸಿದ್ದಾರೆ. ಅವರು ಕಲ್ಪನೆಯ ಜೊತೆಗೆ ವರ್ತಮಾನದ ವಾಸ್ತವವನ್ನು ಬಿಡದೆ ಇರಿಸಿಕೊಳ್ಳುತ್ತಾರೆ. ಹೊಸ ಲೇಖಕರು ಪರಂಪರೆಯ ಸರಕುಗಳನ್ನು ಕಥೆಯಾಗಿಸುವಾಗ ಮಾಡಿಕೊಳ್ಳುವ ಬದಲಾವಣೆ ಈ ರೀತಿಯಾಗಿರುತ್ತದೆ. ಅಬ್ಬಾಲಕ್ಕ ಕಥೆ ಈ ಬಗೆಯ ಸಹಜವಾಗಿ ಕಾಣುವ ನಮ್ಮ ನಡುವಿನ ಒಂದು ಪ್ರಕ್ರಿಯೆಗೆ ಉದಾಹರಣೆ ಎನ್ನಬಹುದು. ಕಥೆ ಜನಪದದ್ದೇ ಆದರೂ ಅಬ್ಬಾಲಕ್ಕ ಅಜ್ಜಿಯನ್ನು ನೋಡಲು ಕಾತರಿಸುವುದು ಹೊಸಗಾಲದ ಮನಸ್ಸುಗಳು ಪರಂಪರೆಯ ಕುರಿತು ತೋರುವ ಗೌರವಾದರಗಳ ಪ್ರತೀಕವೆನ್ನುವಂತಿದೆ. ಈ ಬಗೆಯ ಆಲೋಚನೆ ಕಥೆಯಲ್ಲಿ ಸಹಜವಾಗಿ ಇರುವಂತೆ ಪ್ರಯತ್ನ ಮಾಡಲಾಗುವ ರೀತಿಯಲ್ಲಿಯೂ ಇಂದು ಫ್ಯಾಂಟಸಿ ಕಥೆಗಳು ರಚನೆಯಾಗುತ್ತಿವೆ.

ವೈದೇಹಿಯವರ 'ಚಿಟ್ಟಬಾಲೆ' ಕೂಡ ಜನಪದ ಮಾದರಿಯ ಕಲ್ಪನೆಯನ್ನು ಆಶ್ರಯಿಸಿದೆ. ಇಲ್ಲಿ ಚಿಟ್ಟಬಾಲೆ ಹಿಂಬದಿಯವರೆಗೆ ಕೂದಲನ್ನು ಹೊಂದಿದ್ದ ಹುಡುಗಿ. ಇರುವೆ, ಹಕ್ಕಿಗಳು ಎಲ್ಲವನ್ನೂ ಹಚ್ಚಿಕೊಂಡು ಸಹಾಯ ಮಾಡುವುದು ಅವಳ ಗುಣವಾಗಿರುತ್ತದೆ. ಆದರೆ ಅವಳ ತುಂಬುಗೂದಲಿನ ತಲೆಯಲ್ಲಿ ಒಮ್ಮೆ ತುರಿಸಿಕೊಳ್ಳುವ ಕಿರಿಕಿರಿ ಶುರುವಾಗುತ್ತದೆ. ಅವಳ ಕೂದಲಿನ ರಾಜ್ಯದಲ್ಲಿ ರಾತ್ರಿ ಹೊತ್ತು ಹೇನು ರಾಜ ತನ್ನ ದಂಡಿನೊಡನೆ ದೊಡ್ಡ ಕಾಡೆಂದು ಅರಸುತ್ತಾ ಬಂದು ಒಳ್ಳೆ ಜಾಗವೆಂದು ಆಸರೆ ಪಡೆಯುತ್ತಾನೆ. ಅಲ್ಲಿ ಅರಮನೆಯನ್ನೇ ಮಾಡಿಕೊಳ್ಳುತ್ತಾನೆ. ಮೊದಲೇ ಅವಳಿಗೆ ಜಡೆ ಹಾಕುವಾಗ ಸಾಕಷ್ಟು ಸಮಯ ಶ್ರಮವಹಿಸುತ್ತಿದ್ದ ಅವರ ಅಮ್ಮನಿಗೆ ಈಗ ಈ ಹೇನುಗಳನ್ನು ಮುಗಿಸಿಹಾಕುವ ಕೆಲಸ ಬೇರೆ ಹತ್ತುತ್ತದೆ. ಸಹಾಯಕ್ಕಿದ್ದ ಚೆನ್ನಿ ಮತ್ತು

ರುಕ್ಕಿ ಪ್ರತಿಬಾರಿಯೂ ದಪ್ಪ ಹಣಿಗೆಯಿಂದ ಹೇನು ತೆಗೆದು ಒರೆಯುತ್ತಿದ್ದರು. ಇದರಿಂದ ಕಷ್ಟ ಅನುಭವಿಸತೊಡಗಿದ ಹೇನು ಪರಿವಾರ ಉಪಾಯ ಹುಡುಕತೊಡಗಿತು. ಅಂತೂ ಒಮ್ಮೆ ನಸುಕಿನಲ್ಲಿ ಇನ್ನೂ ಯಾರೂ ಏಳದಿದ್ದಾಗ ಹೇನರಸ, ಅವನ ರಾಣಿಯು ಚಿಟ್ಟಿಬಾಲೆಯನ್ನೇ ಭೇಟಿಯಾಗಲು ಬಂದವು. ತಮ್ಮ ಗೋಳನ್ನೆಲ್ಲ ಹೇಳಿಕೊಂಡವು.

'ನಾನು ಹೇನರಸ. ಇವಳು ನನ್ನ ರಾಣಿ', ಯಾಕೆ ಬಂದಿರಿ? 'ಅಯ್ಯೋ! ಯಾಕೆ ಹೇಳುವುದು ಚಿಟ್ಟಿಯಮ್ಮ ನಮ್ಮ ಜೀವಕ್ಕೆ ಹಾನಿಯೊದಗಿದೆ....ನಿಮ್ಮವರು ಹಣಿಗೆಯ ಆಯುಧವನ್ನು ನಮ್ಮ ಮೇಲೆ ಬೀಸದಿದ್ದರೆ ಸಾಕು'"[೫] ಸರಿ, ಕರುಣಾಮಯಿಯಾದ ಚಿಟ್ಟಿ ಅವುಗಳಿಗೆ ಆಶ್ವಾಸನೆ ನೀಡಿಬಿಟ್ಟಳು. ಇನ್ನು ಮರುದಿನ ಅಮ್ಮ ಮತ್ತೆ ಜಡೆಹಾಕಲು ಬರುತ್ತಾಳೆ ಅಂತ ಚಿಟ್ಟಿಬಾಲೆ ಎಲ್ಲೋ ಕಾಣೆಯಾದಳು. ಹಾಸಿಗೆಯಿಡುವ ಮೂಲೆಯಲ್ಲಿ ಅವಿತುಕೊಂಡಿದ್ದ ಅವಳನ್ನು ಚೆನ್ನಿ ಪತ್ತೆ ಹಚ್ಚಿಬಿಟ್ಟಳು. ಚಿಟ್ಟಿಬಾಲೆಯದು ಒಂದೇ ಹಟ, ತಲೆ ಬಾಚುವುದು ಬೇಡ ಎಂದು. ಆದರೆ ಅಮ್ಮ ಕೇಳಬೇಕಲ್ಲ, ಅವಳಿಗೆ ತಿಳಿಯದಂತೆ ಹೇನುಗಳೆಲ್ಲ ಸಾಯುವ ಎಣ್ಣೆಯನ್ನು ಕೂದಲುಗಳ ನಡುವೆ ಸುರಿದುಬಿಟ್ಟರು. ಸ್ನಾನದ ಸಮಯದಲ್ಲಿ ಎಣ್ಣೆ ಕುಡಿದು ತಲೆ ತಿರುಗಿಬಿದ್ದ ಹೇನುಗಳೆಲ್ಲ ಹರಿದು ಹೋದವು. ಅಳಿದುಳಿದವನ್ನು ರುಕ್ಕಿ ಚಿಟ್ ಚಿಟ್ ಎಂದು ವರೆದು ಅವುಗಳಿಂದ ರಕ್ತ ಚಿಮ್ಮುವುದನ್ನು ತೋರಿಸಿ ಚಿಟ್ಟಿ ಬಾಲೆಗೆ "ಮುದ್ದು ಚಿಟ್ಟೀ, ಇದು ನಿನ್ನ ರಕ್ತ! ನಿನ್ನ ರಕ್ತ ಹೀರಿ ಅವು ಬದುಕುತ್ತಿದ್ದವು ಕಂಡೆಯಾ"[೬] ಎಂದು ಹೇಳಿದಳು. ಚಿಟ್ಟಿಬಾಲೆಗೆ ಈಗ ಹೇನು ಅರಸ ಒಳ್ಳೆಯವನಲ್ಲ ಅನಿಸಿತು. ಕತೆ ಜನಪದ ಕತೆಯಂತೆಯೇ ಸಾಗುತ್ತದೆ. ಆದರೆ ವಾಸ್ತವದ ಕೆಲವೆಲ್ಲ ಸಂಗತಿಗಳಿಗೆ ನಿಲುಕಿಕೊಂಡು ಹೊರಳಿಕೊಳ್ಳುತ್ತದೆ.

ಮೇಲೆ ವಿಶ್ಲೇಷಣೆ ಮಾಡಿದ ಕಂಬಾರರ ಮತ್ತು ವೈದೇಹಿಯವರ ಕಥೆಗಳಲ್ಲಿ ಮುಖ್ಯವಾಗಿ ಎರಡು ಫ್ಯಾಂಟಸಿ ಸ್ವರೂಪಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಕಂಬಾರರ ಕತೆಗಳು ಜನಪದದ ಕಥೆಗಳನ್ನು ಆಯ್ದುಕೊಂಡು ಸ್ವರೂಪವೂ ಜನಪದದ್ದೇ ಬಳಸಿಕೊಳ್ಳುತ್ತಾರೆ. ಆದರೆ ಕತೆಯ ಆಶಯಗಳು, ಪಾತ್ರದ ಅಭಿವ್ಯಕ್ತಿಗಳು ವರ್ತಮಾನವನ್ನು ಧ್ವನಿಸುತ್ತವೆ. ವೈದೇಹಿಯವರ ಕತೆಗಳಲ್ಲಿಯೂ ಅಬ್ಬಾಳಕ್ಕನ ಮಾತುಗಳ ಮೂಲಕ ಸಮಕಾಲೀನತೆಯು ಇಣುಕುತ್ತದೆ. ಅವರ ಸ್ವರೂಪವೂ ಕಂಬಾರರಂತೆ ಜನಪದ ಮಾದರಿಗಳನ್ನು ಬಳಸಿಕೊಂಡಿದೆ. ಅಜ್ಜಿಯಂಥ ಹಿರಿಯರನ್ನು ಗೌರವಾದರಗಳಿಂದ ಕಾಣಬೇಕು, ಹೇನುಗಳಂಥ ಕ್ಷುಲ್ಲಕ ಜೀವಿಗಳಿಗೂ ಬದುಕಲು ಅವಕಾಶ ನೀಡುಬೇಕು ಎನ್ನುವ ಮೌಲ್ಯ ಜನಪದದ ಆ ಕಾಲಕ್ಕೆ ಸಹಜವಾದುದಾಗಿರಬಹುದು. ಮಾನವೀಯ ಸಂಬಂಧಗಳೇ ಮಾಯವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಅಗತ್ಯದ ವರ್ತಮಾನದ ಮೌಲ್ಯವಾಗಿ ಕಂಡುಬರುತ್ತವೆ.

೭.೧.೩. ಕಲಿಕಾ ಉದ್ದೇಶ ಮತ್ತು ಫ್ಯಾಂಟಸಿ

ಜನಪದ ಕತೆಗಳು ಮಕ್ಕಳಿಗೆ ಮುದ ನೀಡುವ ಸಂಗತಿ ಒಂದು ಕಡೆಯಾದರೆ, ಕನ್ನಡದ ಹೊಸಗಾಲದ ಮಕ್ಕಳ ಕಥಾ ಲೋಕ ಅವನ್ನೇ ನೆಚ್ಚಿಕೊಂಡಿದ್ದು ಇನ್ನೊಂದು ಮಗ್ಗುಲಾಗಿ ಗುರುತಿಸಬಹುದು. ಒಂದು ಊರಿನಲ್ಲಿ ಎಂದು ಒಂದಾವುದೋ ಕಾಲಕ್ಕೆ ಸೇರಿದ್ದು, ಗತಿಸಿಹೋಗಿದ್ದು ಎನ್ನುವ ಸ್ವರೂಪದಲ್ಲಿ ಕತೆಯನ್ನು ಕಂಡುಕೊಳ್ಳುವ ವಿಧಾನವನ್ನೇ ಹೊಸದಾಗಿ ರಚಿತಗೊಳ್ಳುವ ಕತೆಗಳಲ್ಲೂ ಕಾಣುವುದು ಜನಪದ ಕತೆಗಳ ಪ್ರಭಾವ ನಮ್ಮ ಮೇಲೆ ಎಷ್ಟೆಲ್ಲ ಆಗಿದೆ ಎನ್ನುವುದನ್ನು ಹೇಳುತ್ತದೆ. ಅನೇಕ ಲೇಖಕರು ನೀತಿ ಆದರ್ಶದ ಕತೆಗಳನ್ನು ತಾವೇ ರಚಿಸಿಕೊಂಡರೂ ಈ ಜನಪದ ಕಥಾ ಶರೀರವನ್ನು ಆಶ್ರಯಿಸಿರುವುದು ಕಂಡು ಬರುತ್ತದೆ. ಉದಾಹರಣೆಗೆ ತಿರುಮಲಮ್ಮ ಅವರು ವಿಜ್ಞಾನದ ಸಂಗತಿಗಳನ್ನು ಮಕ್ಕಳಿಗೆ ನೀಡುವಲ್ಲಿ ಆಸಕ್ತಿ ವಹಿಸುತ್ತಾ ಈ ಬಗೆಯ ಕಥಾ ಹಂದರಗಳನ್ನು ಆಶ್ರಯಿಸುವುದು ಕಾಣುತ್ತದೆ.

'ಒಂದು ಊರಿನಲ್ಲಿ ರೈತನೊಬ್ಬನಿದ್ದ. ಅವನು ತನ್ನ ಜಮೀನಿನಲ್ಲಿ ಉತ್ತು ಬಿತ್ತು ಭತ್ತವನ್ನು ಬೆಳೆಯುತ್ತಿದ್ದ.'[೭] ಎಂದು ಪ್ರಾರಂಭವಾಗುವ ಕತೆಯಲ್ಲಿ ಮುಂದೆ ಅವನ ಮಗ ಒಂದು ದಿನ ಅಮ್ಮನು ಹೇಳಿದಂತೆ ಸಂತೆಯಿಂದ ಒಂದು ಕೆ.ಜಿ ಅಕ್ಕಿ, ಒಂದು ಕೆ.ಜಿ ಸಕ್ಕರೆ ತರುತ್ತಿದ್ದನು. ಸಕ್ಕರೆಯನ್ನು ಚೀಲದಲ್ಲಿ ಹಾಕಿಸಿಕೊಂಡು, ಅಕ್ಕಿಯನ್ನು ಪೊಟ್ಟಣದಲ್ಲಿ ಕಟ್ಟಿಸಿಕೊಂಡು ಸಕ್ಕರೆಯ ಚೀಲದಲ್ಲಿ ಜೋಕೆಯಿಂದ ಇರಿಸಿಕೊಂಡು ಹೊರಟಿರುತ್ತಾನೆ. ಅವನು, ದಾರಿಯಲ್ಲಿ ಚೀಲ ಬಿದ್ದು ಅಕ್ಕಿ ಸಕ್ಕರೆ ಕೂಡಿಬಿಡುತ್ತದೆ. ಹುಡುಗನಿಗೆ ಪೇಚಾಟವಾಗುತ್ತದೆ. ಅಮ್ಮ ಬೈಯುತ್ತಾಳೆ ಎಂದು ಭಯವಾಗುತ್ತದೆ. ಅವನ್ನು ಬೇರ್ಪಡಿಸಲು ಉಪಾಯಗಳನ್ನು ಯೋಚಿಸತೊಡಗುತ್ತಾನೆ. ಗೆಳೆಯ ಹೇಳಿದಂತೆ ನೀರಲ್ಲಿ ಬೆರೆಸಿದರೆ ಸಕ್ಕರೆ ಕರಗಿ ಅಕ್ಕಿ ಬೇರೆಯಾಗುತ್ತದೆ ಎನ್ನುವ ಉಪಾಯ ಸರಿ ಕಾಣುವುದಿಲ್ಲ. 'ನೀರಿನಿಂದ ಸಕ್ಕರೆಯನ್ನು ಆಚೆ ತೆಗೆಯುವುದು ಹೇಗೆ? ದಾರಿಯಲ್ಲಿ ಕಂಡ ಶಿವಣ್ಣ ಎನ್ನುವವ ಅವನ್ನು ಮಣೆಯಮೇಲೆ ಹಾಕಿಕೊಂಡು ಆರಿಸುತ್ತಾ ಬೇರ್ಪಡಿಸು'[೮] ಎಂದು ಹೇಳುತ್ತಾನೆ. ಉಪಾಯವೇನೋ ಸರಿಯೇ, ಆದರೆ ಅದು ಹೆಚ್ಚು ಸಮಯ ಬಯಸುವ ಬೇಸರದ ಕೆಲಸ. ಸರಿ ಮತ್ತೆ ಹುಡುಕಾಟ, ಮುಂದೆ ಹಿರಿಯ ಅನುಭವಿ ಮುದುಕಿ ಜರಡಿಯಲ್ಲಿ ಹಾಕಿ ಸಕ್ಕರೆ ಕೆಳಗೆ ಬೀಳುವಂತೆ ಮಾಡಿ ಅಕ್ಕಿ ಬೇರ್ಪಡಿಸಿ ಕೊಟ್ಟು ಸಮಸ್ಯೆಯನ್ನು ಬಗೆಹರಿಸುತ್ತಾಳೆ. ಹುಡುಗ ಸಂತೋಷದಿಂದ ಮನೆ ತಲುಪುತ್ತಾನೆ. ಕತೆ ಹಳ್ಳಿ ಕಥಾ ಹಂದರ ಹೊಂದಿದೆ. ಜಾಣತನದ, ಚತುರತೆಯ ತುಂಬಾ ಕತೆಗಳು ಜನಪದರಲ್ಲಿ ಇವೆ. ಆದರೆ ಇಲ್ಲಿ ಅವು ಮಕ್ಕಳಿಗೆ ಕಲಿಕೆಯ ಉದ್ದೇಶದಿಂದ ಬಳಕೆಯಾಗಿವೆ. ಈ ಬಗೆಯಲ್ಲಿ ಜನಪದ ಕತೆಯ ಮಾದರಿಗಳನ್ನು ಆಶ್ರಯಿಸಿ ಕನ್ನಡದಲ್ಲಿ ಅನೇಕರು ಕತೆಗಳನ್ನು ಹೆಣೆದಿರುವುದು ಕಾಣುತ್ತದೆ.

ಮತ್ತೂರು ಸುಬ್ಬಣ್ಣ ಅವರ ಕತೆಯೊಂದರಲ್ಲಿ ಜನಪದ ಕತೆಯ ಹಂದರವೇ ಇದ್ದರೂ ಹೊಸಗಾಲದ ಟಿವಿ ಪ್ರವೇಶಿಸುವುದು ನಡೆಯುತ್ತದೆ. ಕತೆಯಲ್ಲಿ ಅಮ್ಮ ಮಾಡಿದ ಚಪಾತಿ ಕಪ್ಪು

ಕಪ್ಪಾಗಿ ಹೊತ್ತಿದ್ದು ಅದರ ಹೊಣೆಯನ್ನು ಅಮ್ಮನ ಮೇಲೆ, ಅಲ್ಲಿಂದ ಪೇಟೆಯಿಂದ ಅದಕ್ಕಾಗಿ ಹಿಟ್ಟನ್ನು ತಂದ ಪುಟ್ಟನಮೇಲೆ, ಅಲ್ಲಿಗೂ ನಿಲ್ಲದೆ, ಅಂಗಡಿಯ ಶೆಟ್ಟಿಯ ಮೇಲೆ, ಅಲ್ಲಿಯೂ ನಿಲ್ಲದೆ ಗಿರಣಿಯ ಗುಂಡಪ್ಪನ ಕಡೆಗೆ ಸಾಗಿ, ಕೊನೆಗೆ ಗೋದಿ ಬೆಳೆದ ರೈತನ ಬಳಿ ಸಾಗಿದ ದೂರು ಭೂಮಿ ತಾಯಿಯಲ್ಲಿಗೆ ಬಂದು ನಿಲ್ಲುತ್ತದೆ. ಆದರೆ ಸ್ವಲ್ಪ ಹೊತ್ತಿನಲ್ಲಿಯೇ ಅಮ್ಮ ಚೆಂದದ ಚಪಾತಿ ಮಾಡಿ ತಂದಾಗ ಈ ದೂರಿನ ಬದಲು ಮೆಚ್ಚುಗೆ ಹೀಗೆಯೇ ಸಾಗುತ್ತಾ ಸಾಗುತ್ತಾ ಮತ್ತೆ ಭೂಮಿ ತಾಯಿಗೇ ಬಂದು ಸಲ್ಲುತ್ತದೆ. ಈ ಸಮಯದಲ್ಲೇ ಮನೆಯಲ್ಲಿ ಚಾಲೂ ಇದ್ದ ಟಿವಿಯಲ್ಲಿ ನಾಟಕದ ಪಾತ್ರ ವಹಿಸಿದ್ದ ಮಗು 'ಭೂಮಿ ತಾಯಿಯಾಗಿ ತಾನು ಸಹನಾ ಧರಿತ್ರಿಯಾಗಿರುವುದು, ಒಳ್ಳೆಯದಕ್ಕೂ ಕೆಟ್ಟದಕ್ಕೂ ತನ್ನೊಡನೆ ಮನುಷ್ಯ ನಡೆದುಕೊಳ್ಳುವುದೇ ಕಾರಣವಾಗುತ್ತಿದೆ" ಎನ್ನುವ ಸಂದೇಶವನ್ನು ಹೇಳುವಲ್ಲಿಗೆ ಕತೆ ಕೊನೆಗೊಳ್ಳುತ್ತದೆ. ಶೈಕ್ಷಣಿಕ ವ್ಯವಸ್ಥೆ ಆರಂಭವಾದ ಸಂದರ್ಭದಲ್ಲಿ ಕಥೆಗಳ ಮೂಲಕ ಪಾಠಗಳನ್ನು ಕಲಿಸುವ ಪದ್ಧತಿ ಇತ್ತು. ಈ ಮಾದರಿಯನ್ನು ನಂತರವೂ ಅನೇಕರು ಬಳಸಿದರೆನ್ನುವುದಕ್ಕೆ ಈ ಮೇಲಿನ ಕಥೆಗಳು ಉದಾಹರಣೆಗಳಾಗಿವೆ.

ಕಲಿಕೆಯ ಉದ್ದೇಶವನ್ನು ಹೊಂದಿದ ಕತೆಗಳು ವಾಸ್ತವದಿಂದ ದೂರ ಹೋಗಿ ಫ್ಯಾಂಟಸಿ ಸ್ವರೂಪವನ್ನು ಹೊಂದಿರುವುದು ಕಡಿಮೆ ಎನ್ನುವುದನ್ನು ಈ ಕಥೆಗಳು ಸಾಬೀತು ಪಡಿಸುತ್ತವೆ. ಆದರೂ ಭೂಮಿಯ ಪಾತ್ರವನ್ನು ನಾಟಕದಲ್ಲಿ ಅಭಿನಯಿಸಿದ ಮಗು ಭೂಮಿಯ ಮಹತ್ವವನ್ನು ತಾನೇ ಹೇಳುವುದು ವಾಸ್ತವ ಕಥೆಗಳಲ್ಲೂ ಅತಿವಾಸ್ತವತೆ ನುಸುಳಲು ಇರುವ ಅವಕಾಶವನ್ನು ಈ ಕತೆಗಳು ತೋರಿಸುತ್ತವೆ.

೭.೧೧.೩. ಹೊಸ ಪ್ರಯತ್ನ ಮತ್ತು ಫ್ಯಾಂಟಸಿ

ಆನಂದ ಪಾಟೀಲರ 'ಅಜ್ಜಿ ಅಜ್ಜಿ, ಅಜ್ಜಿದೊಂದ್ ಕೌದಿ, ಕೌದಿಗೊಂದ್ ಹುಡುಗಿ, ನಡುವೆ ಒಂದ್ ಟುಣಕ್ ಟುಣಕ್ ಬಾಲದ ಮರಿ' ಎನ್ನುವ ದೀರ್ಘದ ಹರಹಿನ ಕಥನ ಕಾವ್ಯ ಜನಪದದಲ್ಲಿಯದೇ ಕತೆಯ ಆಸರೆಯನ್ನು ಪಡೆದುಕೊಂಡು ಹೊಸದನ್ನು ಹೇಳಲು ಹವಣಿಸಿದೆ, ಅದಕ್ಕಾಗಿ ತುಂಬಾ ವಿಸ್ತಾರವಾಗಿ ನಿರೂಪಿಸಲಾಗಿದೆ. ಆನಂದ ಪಾಟೀಲರು ಕೌದಿ ಹೆಣೆಯುವ ಅಜ್ಜಿ ಮತ್ತು ಹುಡುಗಿಯ ನಡುವಿನ ಜುಗಲ್‌ಬಂದಿ ಬಗೆಯ ಈ ಕಥೆಯನ್ನು ತಮ್ಮ ಚಿಕ್ಕಂದಿನಲ್ಲಿ ಕೇಳಿದ ಕಥೆಯನ್ನು ಆಧಾರವಾಗಿಟ್ಟುಕೊಂಡು ರಚಿಸಿದ್ದೇನೆ ಎಂದು ಪ್ರಾರಂಭದಲ್ಲಿಯೇ ಹೇಳಿಕೊಂಡಿದ್ದಾರೆ. ಹಾಗೆ ಹೇಳುತ್ತಾ ಅದು ಗುಂಗಾಗಿ ಕಾಡಿದರೂ ಒಂದಿಷ್ಟೆಲ್ಲ ಮರೆತೂ ಆಗಿ, ಉಳಿದ ತುಣುಕನ್ನೇ ಆಸರೆಯಾಗಿಸಿಕೊಂಡು, ಅದನ್ನು ಮತ್ತೆ ಹೊಸದಾಗಿ ಬೇಕಾದಂತೆ ಹಿಗ್ಗಿಸಿಕೊಂಡಿರುವುದಾಗಿ ಹೇಳಿಕೊಂಡಿದ್ದಾರೆ. ಹಾಗಾಗಿ ಮೂಲ ಕತೆಯಲ್ಲಿನ ಅಜ್ಜಿ ಖಂಡಿತವಾಗಿಯೂ ಇಲ್ಲಿ ಬದಲಾಗಿದ್ದಾಳೆ. ಲೇಖಕರ ಮರವೆಯಿಂದಾಗಿಯೂ, ಅವರದೇ ಆದ ಆಶಯಗಳಿಗಾಗಿಯೂ ಇದು ಇಲ್ಲಿ ಸಂಭವಿಸಿದೆ. ಮೂಲ ಕತೆಯಲ್ಲಿ ಅಜ್ಜಿ ಇದ್ದು; ಇಲ್ಲಿಯೂ ಅಜ್ಜಿ ಇದ್ದಾಳೆ, ಮೂಲದಲ್ಲಿ

ಅವಳು ಮನೆಯ ಮುಂದೆ ಕಾಲು ಹರಪಿಕೊಂಡು ಕುಳಿತವಳಾಗಿದ್ದರೆ ಇಲ್ಲಿ ಕೌದಿ ಹೊಲಿಯುವ ಕುಸುರಿ ಕಲೆಯ ಅಜ್ಜಿಯಾಗಿ ಉರೂರಲ್ಲೆಲ್ಲಾ ಹೆಸರು ಮಾಡಿದವಳಾಗಿದ್ದಾಳೆ.

ಮೂಲ ಕತೆಯಲ್ಲಿ ಗುಬ್ಬಿಯೊಂದು ಬಂದು ಬಂದು ಕಾಳು ತಿನ್ನುವುದರ ಬದಲು ಇಲ್ಲಿ ಇಲಿಯೊಂದು ಕಾಣಿಸಿಕೊಂಡು ಪದೆ ಪದೇ ಬಂದು ಅವಳು ಹೊಲಿದಿಟ್ಟ ಕೌದಿಯನ್ನು ಕಚ್ಚಿ ಕಚ್ಚಿ ಹಾಳುಮಾಡುತ್ತದೆ. ಮೂಲದಲ್ಲಿಲ್ಲದ ಅಪರೂಪದ ಗಿರಾಕಿಯಾಗಿ ಪುಟ್ಟ ಕೌದಿ ಹೊಲಿದುಕೊಡಲು ಕೇಳಿಕೊಳ್ಳುವ ಪುಟ್ಟ ಹುಡುಗಿ ಕಾಣಿಸಿದ್ದಾಳೆ. ಅವಳಿಗಾಗಿಯೂ ಮುದುಕಿ ಅಸಡ್ಡೆ ಮಾಡದೆ ಬಲು ಆಸಕ್ತಿಯಿಂದ ಚೆಂದದ ಕೌದಿ ಹೊಲಿಯತೊಡಗುತ್ತಾಳೆ. ಅವಳು ಹೇಳಿದ ದಿನ ಬರುವಷ್ಟರಲ್ಲಿ ಮುದುಕಿಗೆ ಕೌದಿ ಹೊಲಿದಿಡುವುದು ಬಲು ದುಸ್ತರದ ಸಂಗತಿಯೇ ಆಗಿರುತ್ತದೆ. ಮಾತು ಕೊಟ್ಟ ತಾನು ಸುಳ್ಳಾಗುವ ಅಹಮಿಕೆ ಬಲು ನಿಡಿದಾಗಿಯೇ ಕಾಡುತ್ತದೆ. ಅದಕ್ಕಾಗಿ ಅವಳು ಇಲಿ ಎಷ್ಟು ಬಾರಿ ಬಂದು ಕಡಿದು ಹಾಕಿದರೂ ಬಿಡದೆ ಹೊಲಿಯುತ್ತಾ ಕೂಡುತ್ತಾಳೆ. ಇಲಿಯ ಕಾಟಕ್ಕೆ, ತನ್ನ ಚೆಂದದ ಕುಸುರಿಯ ಕೆಲಸ ಹಾಳು ಮಾಡುವ ಇಲಿಯ ಮೇಲೆ ಅಸಾಧ್ಯ ಕೋಪವುಂಟಾಗಿ ಅದನ್ನು ಪ್ರತಿಸಲವೂ ಮುಗಿಸಲು ನೋಡುತ್ತಾಳೆ. ಆದರೆ ಆ ಮಾಯದ ಇಲಿ ಪ್ರತಿಸಲವೂ ಮತ್ತೆ ಮತ್ತೆ ಜೀವತಳೆದು ಬರುತ್ತಲೇ ಇರುತ್ತದೆ. ಕೊನೆಗೂ ಅವಳು ಸಾಕಾಗಿ ಇನ್ನು ಹೇಗಾದರೂ ಹುಡುಗಿಗೆ ಕೊಟ್ಟು ಕಡೆಗಾದರೆ ಸಾಕು ಅಂತ ಬದುಕಿನಲ್ಲಿ ತನ್ನ ಹಠದ ತುದಿಗೆ ಬಂದು ಬಸವಳಿದವಳಾದಾಗ ಹುಡುಗಿ ಬರುವುದಲ್ಲದೆ, ಇಲಿಯೂ ಕಾಣೆಸಿ ಹುಡುಗಿಯೂ ಇಲಿಯೂ ತಾನೇ ಎನ್ನುವ ಅಸಾಧ್ಯದ ಗುಟ್ಟು ಬಿಚ್ಚಿಡುತ್ತಾಳೆ.

ಅಜ್ಜಿಯ ಚೆಂದದ ಸಾಧನಾ ಜೀವನವನ್ನು, ಪುಟ್ಟ ಹುಡುಗಿಗೂ ಸಿದ್ಧವಾಗುವ ಅಜ್ಜಿಯ ಹಂಬಲವನ್ನು ಪ್ರಸ್ತುತ ಕಥೆ ಎತ್ತಿ ತೋರಿಸುತ್ತದೆ, ಜೊತೆಗೆ ಮನುಷ್ಯನ ಸಾಧನೆಯ ಹಿಂದಿನ ಅಹಮಿಕೆಯನ್ನೂ, ಅದೂ ಕೂಡ ಕಾಲದಲ್ಲಿ ಒಂದಾಗಿ ಇಲ್ಲದಾಗುವ ಸತ್ಯವನ್ನೂ ಬಯಲಾಗಿಸುತ್ತದೆ. ಹೀಗೆ ಇಡೀ ರಚನೆ ಅಜ್ಜಿಯ ಸುತ್ತ ಹಬ್ಬಿ ಹರಡಿಕೊಂಡಿದೆ. ಅದು ಮಕ್ಕಳ ನಡುವಿನ ಕೀಟಲೆಯ, ಚುರುಕಿನ, ಸೊಗಸಿನ ಕಥೆಯನ್ನು ಆಧರಿಸುತ್ತಲೂ ಅದರಾಚೆಯೂ ವಿಸ್ತರಿಸುವ ತನ್ನೊಡಲಲ್ಲಿನ ಸಾಧ್ಯತೆಗಳಿಗೆ ದನಿಯಾಗಲು ನೋಡಿದೆ. ಜನಪದ ಕಥಾ ರಚನೆಯ ಎಲ್ಲ ತಾಂತ್ರಿಕತೆಯನ್ನೂ ಇಟ್ಟುಕೊಂಡು, ಅದರಲ್ಲಿಯೇ ಈ ಕಾಲದ ಮಕ್ಕಳಿಗೆ ಹತ್ತಿರವಾಗುವ ಎಲ್ಲ ವರಸೆಗಳನ್ನು ಸಾಧ್ಯಮಾಡಿಕೊಂಡು, ರಂಜನೆಯನ್ನು ಅಪಾರವಾಗಿ ನೆಚ್ಚಿಕೊಂಡು, ಲೇಖಕನ ಹೊಸ ಹುಡುಕಾಟಗಳಿಗೆ ದಾರಿಮಾಡಿಕೊಡುತ್ತದೆ.

ಇಡೀ ಕಥಾನಕ ಜನಪದ ಆವರಣದಲ್ಲಿಯೇ ನಡೆಯುತ್ತಾ, ಜನಪದದ ಮಾತು, ಹಾಡಿನ ಶೈಲಿ, ಅಲ್ಲಿನವೇ ಸೌಂದರ್ಯಾತ್ಮಕ ಸಾಧ್ಯತೆಗಳನ್ನು ಇಟ್ಟುಕೊಂಡು ಅರಳಲು ನೋಡಿರುವುದು

ಇಲ್ಲಿನ ಎದ್ದು ಕಾಣುವ ಸಂಗತಿಯಾಗಿದೆ. ಹಾಗಿರುತ್ತಲಿರುತ್ತಲೇ ಹೊಸಗಾಲದ ಮಕ್ಕಳ ಮುಂದೆ ಕಥನ ನಡೆಯುತ್ತಾ ಅವರಿಗಾಗಿ ಅದು ಹೊರಳಿಕೊಂಡಿರುವುದನ್ನು ಇಲ್ಲಿ ಗುರುತಿಸಬಹುದು.

ಚಿಂದಿ ಚಿಪಡಿ ಕೌದಿ ಮತ್ತ
ಮುದಕೀ ಕೈಯಾಗ ಬಂತು
ಸೂಜ್ಯಾಗ ದಾರ ಸರಸರ ಹೊಕ್ಕಿತು
ದಾರದ ಗೆರಿ ಅರಿವಿಮ್ಯಾಲೆ
ಹಾವಿನಂಗ ಹರೀತು[೧೦].

ಎನ್ನುತ್ತಾ ಆಕೆ ಕೌದಿ ಹೊಲಿಯುತ್ತಾಳೆ. "ನಮ್ಮ ಮುದಕೀ ಕೌದಿ ಅಂದ್ರ ಅದೂ ಒಂದು ತೇರ ಇದ್ದಾಂಗ ತಿಳೀರಿ...... ಅದರ ಚೆಂದ ಏನಾ... ಅದರ ಚಿತ್ತಾರ ಏನಾ... ಅದರ ಮಾಟ ಏನಾ... ಮಾಯದ ಆಟ ಏನಾ ..."[೧೧] ಅದು ಸಾಕ್ಷಾತ್ ಕೃಷ್ಣನ ಪೀತಾಂಬರವನ್ನು ಮೀರಿಸಿದ್ದೂ, ಮಯೂರದ ಮೈಮೇಲಿನ ಬಣ್ಣಗಳನ್ನೆಲ್ಲಾ ತಿದ್ದಿ ತೀಡಿ ಮಾಡಿದ ಮಾಯಾ ಕೌದಿ ಅದು. ಅದನ್ನು ಆರ್ಡರ್ ಮಾಡಿದ ಆ ಹುಡುಗಿಯೇ ಧನ್ಯಳು. ಮುದುಕಿ ಕೌದಿ ಹೆಣೆದು ಆ ಹುಡುಗಿಗಾಗಿ ಕಾಯುತ್ತಾ ಕಾಯುತ್ತಾ ಕುಳಿತಿರುವಲ್ಲೇ ಮತ್ತೆ ಅದೇ ಕಾಟ. ಇಷ್ಟೊತ್ತು ತನ್ನನ್ನು ಕಾಡಿದ ಇಲಿಯ ಜೊತೆ ಮುದುಕಿ ಮನಸ್ಸು ಮೃದುವಾಗುತ್ತದೆ.

"ಮುದುಕಿ: ಎಷ್ಟು ಚೆಂದಾಗಿ
ಹೇಳಿ ಬಿಟ್ಟೆಯ ಕಂದ
ನಿನ್ನ ಮಾತಿನಲಿ
ಅದು ಏನು ಅಂದ !
ಇನ್ನೊಂದು ಕೇಳುವೆನು
ಹೇಳುವೆಯಾ ಮುದ್ದ ?"[೧೨]

ಮತ್ತೆ ಅವಳ ಆವೇಶ ಶುರುವಾಗುತ್ತದೆ. ಬೀಸುವ ಕಲ್ಲಿಗೆ ಹಾಕಿ ಗರ ಗರ ಬೀಸಿದಳು, ಒರಳು ಕಲ್ಲಿಗೆ ಹಾಕಿ ರುಬ್ಬಿದಳು. ಅದರೂ 'ಸತ್ತಿಲ್ಲಾ ನಾ ಸತ್ತಿಲ್ಲಾ ಕೆಟ್ಟಿಲ್ಲಾ ನಾ ಕೆಟ್ಟಿಲ್ಲಾ'[೧೩] ಎನ್ನುತ್ತಾ ಮತ್ತೆ ಮತ್ತೆ ಕಾಡುವ ಮಾಯಾ ಇಲಿಯಾಗಿ ಕಾಡುವುದು ಅದನ್ನು ಆರ್ಡರು ಮಾಡಿದ ಹುಡುಗಿಯೇ ಎಂಬುದು ಕ್ಲೈಮ್ಯಾಕ್ಸ್‌ನಲ್ಲಿ ತಿಳಿಯುತ್ತದೆ. ಆದರೆ, ಕೊನೆಗೆ ಹಣ್ಣು ಹಣ್ಣು ಮುದುಕಿಯ ಹಟದ ಮುಂದೆ, ಮುದುಕಿಯ ಕಲೆಯ ಹಂಬಲದ ಮುಂದೆ ಆ ಹುಡುಗಿ ಸೋತು ಹೋಗುತ್ತಾಳೆ. ಹಳ್ಳಿಗಾಡಿನ ಮುಗ್ಧ ಮುದುಕಿ–ಹೊಸ ತಲೆಮಾರಿನ ಮಾಯದ ಹುಡುಗಿಯ ಈ

ಜುಗಲಬಂದಿ ನಿಜಕ್ಕೂ ಗ್ರಾಮೀಣ ಬದುಕು, ಭಾಷೆಯನ್ನು ಮರೆತವರಿಗೆ ತಕ್ಕ ಪಾಠ ಇದಾದೀತು. ಈ ಅಜ್ಜಿಯ ಮೂಲಕ ನಾಡಿನ ಎಲ್ಲಾ ಮಕ್ಕಳಿಗೆ ಅಜ್ಜೀ ಕೊರತೆಯನ್ನು ನೀಗುವಂತೆ ಕಥೆಯ ತುಂಬಾ ಅಜ್ಜಿ ಪಾತ್ರ ಆವರಿಸಿಕೊಂಡಿದೆ. ಕಾರಣ, ಆ ಕೌದಿ ಬರೀ ಆ ಪುಟ್ಟ ಹುಡುಗಿಗೆ ಮಾತ್ರವಲ್ಲ

ಇರಲಿರಲಿ ಈ ಜಗದ ಪುಟ್ಟರೆಲ್ಲರಿಗೆ

ಬಣ್ಣ ಬಣ್ಣದ ಕನಸು ಕಾಣುತಿರಲಿ

ಹೂಂ ಹೌದು ಜೊತೆಯಲ್ಲಿ ನಾನೂ ಇರಲಿ

ಇಲಿಯಾಗಿ ಲುಟು ಲುಟು ಆಡಿಕೊಂಡಿರಲಿ[೪].

ಹೀಗೆ ಜನಪದದ ಎಳೆಯೊಂದನ್ನು ಇಟ್ಟುಕೊಂಡರೂ ಲೇಖಕರ ಪ್ರಯೋಗಶೀಲತೆಯಿಂದ ಕಥೆಗೆ ಆಧುನಿಕ ಸ್ಪರ್ಶ ಸಿಕ್ಕಿದೆ. ಫ್ಯಾಂಟಸಿ ಜನಪದದ್ದೇ ಇಲ್ಲಿ, ಆದರೆ ಅದರ ಬಳಕೆಯೆಲ್ಲಾ ಆಗಿರುವುದು ಹೊಸದಾದ ಜನಪದ ಮಾನಸದಾಚೆಯ ಇಂದಿನ ಲೇಖಕರ ಕಂಡುಕೊಳ್ಳುವಿಕೆಯಲ್ಲಿ ಎಂಬುದು ಇಲ್ಲಿ ಕಂಡುಬರುತ್ತದೆ.

ಆನಂದ ಪಾಟೀಲರು ಪದೇ ಪದೇ ಈ ಜನಪದ ಹಂದರಗಳನ್ನು ಆಸಕ್ತಿಯಿಂದ ಬಳಸಿಕೊಳ್ಳಲು ನೋಡುತ್ತಾರೆ. ಅವರ 'ಮುತ್ಯಾ ಮತ್ತು ಮೂವರು ರಾಕ್ಷಸರು' ನಾಟಕಕ್ಕೆ ಹಿನ್ನೆಲೆಯಾಗಿ ಕಲ್ಪಿಸಿಕೊಂಡ ಕಥೆ ರಾಕ್ಷಸರನ್ನು ಉಳ್ಳದ್ದು. ಅಲ್ಲಿ ನಮ್ಮ ನಡುವಿನ ಹುಡುಗನೊಬ್ಬ ಈ ಕತೆಗಳ ರಾಕ್ಷಸರೊಡನೆ ಸಮಯ ಕಳೆಯುವ ಸಂದರ್ಭ ಕತೆಯಲ್ಲಿ ಬರುತ್ತದೆ. ಹುಡುಗ ಅಜ್ಜಿಯ ಪೆಟ್ಟಿಗೆಯಿಂದ ಮೂವರು ರಾಕ್ಷಸರ ಬೊಂಬೆಯನ್ನು ಕದಿಯುತ್ತಾನೆ. ಅವನ್ನು ಒಬ್ಬನೇ ಇಟ್ಟುಕೊಂಡು ಆಟಕ್ಕೆ ಇಳಿಯುತ್ತಾನೆ. ಆದರೆ ಇದ್ದಕಿದ್ದ ಹಾಗೆ ಅವುಗಳದೇ ವಿಶಿಷ್ಟ ರಾಜ್ಯಕ್ಕೆ ಹೋಗಿಬಿಡುವ, ಅವುಗಳನ್ನು ಸಂಧಿಸಿಬಿಡುವ ಪ್ರಸಂಗ ನಡೆಯುತ್ತಾ ಹೋಗುತ್ತದೆ. ಹೀಗೆ ಆ ಬೊಂಬೆಯಲ್ಲಿದ್ದ ನಿದ್ರಿಸುವ, ತಿಂಡಿ ತಿನ್ನುತ್ತಿರುವ, ಕತೆ ಹೇಳುವ ರಾಕ್ಷಸರ ರಾಜ್ಯಗಳಿಗೆ ಅವನು ಭೇಟಿ ನೀಡುತ್ತಾನೆ. ಆದರೆ ಅಲ್ಲಿ ಎಂದಿನ ಜನಪದ ಕತೆಗಳಲ್ಲಿಯಂತೆ ರಾಕ್ಷಸರು ಕಾಣುತ್ತಾರೆ. ವಿಕಾರ, ಭೀಮಕಾಯದವರಾದರೂ ತದ್ವಿರುದ್ಧರಾಗಿದ್ದು, ತಾವೇ ಬಗೆಹರಿಸಲಾಗದ ವ್ಯಾಕುಲತೆಯಲ್ಲಿರುತ್ತಾರೆ. ಸದಾ ಬಿಟ್ಟುಬಿಡದೆ ನಿದ್ರೆ ಮಾಡುತ್ತಲೇ ಇರುವ, ಬಿಟ್ಟೂ ಬಿಡದೆ ತಿನ್ನುತ್ತಲೇ ಇರುವ, ಹಾಗೆಯೇ ಒಂದಾದ ಮೇಲೊಂದು ಕತೆ ಹೇಳುತ್ತಲೇ ಇರುವ ಶಾಪಮಯವಾದ ಜೀವನ ಕಳೆಯುತ್ತಿರುತ್ತಾರೆ.

ಹುಡುಗ ಅಲ್ಲಿಗೆ ಹೋದಾಗ ಅವರು ಅವನನ್ನು ಅಕ್ಕರೆಯಿಂದ ಕಂಡು ಒಂದಿಷ್ಟಾದರೂ ಸಮಯ ತಮ್ಮ ಶಾಪಗಳಿಂದ ಮುಕ್ತಿಯನ್ನು ಪಡೆದು ಹುಡುಗನಿಗೆ ಸಂತಸದ ಸಮಯ ನೀಡಿ, ಕಾಳಜಿಯಿಂದ ವಾಪಸು ಕಳಿಸಿಕೊಡುತ್ತಾರೆ. ಅವನನ್ನು ಅಲ್ಲಿರಿಸಿ ತಾವು ಅಲ್ಲಿಂದ

ಪಾರಾಗಬಹುದಾಗಿದ್ದರೂ, ಆ ಗುಟ್ಟನ್ನು ಹುಡುಗನ ಮುಂದೆ ಹೇಳಿಯೂ ಅವರು ಹಾಗೆ ಮಾಡದೆ ಆ ಶಾಪ ತಮಗೆ ಮಾತ್ರ ಇರಲಿ, ಬೇರೆಯವರಿಗೆ ಬೇಡ ಎನ್ನುತ್ತಾ ಹಾಗೆಯೇ ಉಳಿದುಬಿಡುತ್ತಾರೆ. ಹುಡುಗ ಅವರ ಬಳಿ ಒಳ್ಳೆಯ ಅಕ್ಕರೆಯ ಸಮಯವನ್ನೇ ಕಳೆದರೂ ಅವರ ಪಾಡಿಗಾಗಿ ಬೇಸರವನ್ನೇ ಅನುಭವಿಸುತ್ತಾ ವಾಪಸಾಗುತ್ತಾನೆ. ಹೀಗಿರುವ ಹುಡುಗನ ಕೈಯಿಂದ ರಾಕ್ಷಸರ ಬೊಂಬೆ ಇದ್ದಕಿದ್ದ ಹಾಗೆ ಬಿದ್ದು ಹೋಗಿ ಒಡೆದು ಹೋಗುತ್ತದೆ. ಈಗ ಆ ಅಮಾಯಕ ರಾಕ್ಷಸರೇನಾದರು ಎಂದು ಹುಡುಗನಿಗೆ ದಿಗಿಲಾಗುತ್ತದೆ. ಹೀಗೆ ಹಲವು ಕುತೂಹಲವನ್ನೆಲ್ಲಾ ನೋಡುವ ಮಕ್ಕಳಿಗೆ ಬಿಡುತ್ತಾ ನಿಗೂಢವಾಗಿಯೇ ನಾಟಕ ಮುಗಿಯುತ್ತದೆ. ನಾಟಕದ ಕತೆ ಹೇಳುವ ಸಂಗತಿಗಳು ಜನಪದ ಮನೋಸ್ಥಿತಿಯಿಂದ ತೀರಾ ಬೇರೆಯಾದವು ಎನ್ನುವುದು ಸ್ಪಷ್ಟವಾಗಿ ಕಂಡು ಬರುತ್ತದೆ.

ಆನಂದ ಪಾಟೀಲ ಅವರ 'ಮಾಯಪ್ಪಜ್ಜನ ರುಮಾಲು' ನಾಟಕವೂ ಜನಪದ ಮಾದರಿಯನ್ನೇ ಆಶ್ರಯಿಸಿದೆ. ಅಲ್ಲಿ ಮಾಯಪ್ಪನ ರುಮಾಲು ಮುತ್ಯಾ ಅನ್ನುವ ಮುದಿ ಹುಡುಗ ಒಮ್ಮೆ ಅಜ್ಜ ಮಲಗಿದಾಗ ಕೀಟಲೆಗಾಗಿ ಎಳೆಯತೊಡಗಿದಾಗ ಅದು ಬೆಳೆಯುತ್ತಾ ಬೆಳೆಯುತ್ತಾ ಎಷ್ಟು ಜಗ್ಗಿದರೂ ಮುಗಿಯದೇ ಹುಡುಗ ಸುಸ್ತಾಗಿ ಬಿಡುವ ಪ್ರಸಂಗ ನಡೆಯುತ್ತದೆ. ಮುದುಕ ತನ್ನ ಹಳೆಯ ರುಮಾಲನ್ನು ಹೊಳೆಯಲ್ಲಿ ಒಗೆಯಲೆಂದು ತೆಗೆದು ಝಾಡಿಸಿದಾಗಲೇ ಹುಡುಗ ಅದರಿಂದ ಉದುರಿಕೊಳ್ಳುತ್ತಾನೆ. ಹಳ್ಳಿಗಾಡಿನ ಕತೆಯ ಫ್ಯಾಂಟಸಿಯನ್ನು ಆಶ್ರಯಿಸಿದರೂ ಇಲ್ಲಿ ಮಕ್ಕಳ ಮುಗ್ಧ ಲೋಕದ ವಿಶೇಷತೆಗಳು, ಮಕ್ಕಳ ಈ ಬಾಲ್ಯದೊಡನೆ ಕಳೆಯ ಬಯಸುವ ವೃದ್ಧರ ಹಂಬಲಗಳು ವಿಶೇಷವಾಗಿ ಕಾಣುತ್ತಾ ಜನಪದದಿಂದ ಬೇರೆಯದಾದ ಆಶಯಗಳನ್ನು ಹೇಳತೊಡಗುತ್ತವೆ.

ಅಸಂಗತ ನಾಟಕಗಳನ್ನು ಬರೆದ ಕನ್ನಡದ ಹಿರಿಯ ಲೇಖಕರಾದ ಚಂದ್ರಶೇಖರ ಪಾಟೀಲರು 'ಟಿಂಗರ ಬುಡ್ಡಣ್ಣ' ನಾಟಕವನ್ನೂ ಬರೆದಿದ್ದರು. ಅದು ಬಹಳಷ್ಟು ಕಡೆಗೆ ರಂಗದಲ್ಲಿ ಪ್ರದರ್ಶನಗೊಂಡಿತು ಕೂಡ. ಅದು ಪೂರ್ತಿಯಾಗಿ ಜನಪದ ಕತೆಯೇ. ಹಾಗೆಯೇ ನಾಟಕವೂ ಅದನ್ನು ಪ್ರಸ್ತುತಗೊಳಿಸುತ್ತದೆ. ಆದರೆ ಹಾಗೆ ಅದನ್ನು ಪ್ರಬುದ್ಧರ ಮುಂದೆ, ಆಧುನಿಕ ರಂಗದಲ್ಲಿ ತರುತ್ತಾ ಹೊಸ ಆಶಯಗಳ ಅಪೇಕ್ಷೆಗಳನ್ನು ಕಂಡುಕೊಂಡಿರುವುದು ಸ್ಪಷ್ಟವಾಗಿದೆ. ಅಲ್ಲಿ ಸಾವಿನ ಸುತ್ತ ಗಂಭಿರವಾದ ಮನುಷ್ಯರ ನೋವುಗಳು ಹರಿಯುವುದು ಇರಬಹುದು, ಒಬ್ಬರಿಂದ ಒಬ್ಬರಿಗೆ ರವಾನೆಯಾಗುತ್ತಾ ಎಲ್ಲರನ್ನೂ ಮೀರಿ ಹೋಗುವ ಅಸಾಧ್ಯದ ಸಂಗತಿಯಾಗಿರಬಹುದು ಹೀಗೇ ಹಲವಾರು ಆಯಾಮಗಳು ಸಿಗುತ್ತಾ ಹೋಗುತ್ತವೆ.

ಪ್ರಸ್ತುತ ಅಧ್ಯಯನವು ಕಥನ ಸಾಹಿತ್ಯದ ವಿಶ್ಲೇಷಣೆಗಳನ್ನೇ ಕೇಂದ್ರವಾಗಿ ಇರಿಸಿಕೊಂಡಿದ್ದರೂ ಇಲ್ಲಿ ಮೂರು ನಾಟಕಗಳ ವಿಶ್ಲೇಷಣೆ ಮಾಡಲಾಗಿದೆ. ಈ ಮೂರೂ ನಾಟಕಗಳು ಜನಪದ ಕಥನದ ಎಳೆಯನ್ನು ಅನುಸರಿಸಿ ರಚನೆಯಾದ ನಾಟಕಗಳು. ಇವು ನಾಟಕಗಳಾಗಿ ಅವುಗಳ

ನಾಟಕೀಯತೆಯಿಂದ ಸೆಳೆಯುವುದಕ್ಕಿಂತ ಅದರೊಳಗಿನ ಫ್ಯಾಂಟಸಿಯ ಕಥನ ವಿನ್ಯಾಸವು ಆಕರ್ಷಣೆಯ ಕೇಂದ್ರವಾಗಿದೆ. ಅದರಲ್ಲೂ ಜನಪದ ಮಾದರಿಗಳನ್ನು ಬಳಸಿ ಹೊಸ ಪ್ರಯತ್ನಗಳಿಗೆ ತುಡಿದ ನಾಟಕಗಳು ಇವಾಗಿವೆ. ಈ ಹಿನ್ನೆಲೆಯಲ್ಲಿ ಪ್ರಾಸಂಗಿವಾಗಿ ಚರ್ಚಿಸಲಾಗಿದೆ.

ನವೋದಯದ ಸಮಯದಲ್ಲಿಯೇ ಮೇವುಂಡಿ ಮಲ್ಲಾರಿ ಅವರು ಜನಪದ ಕತೆಗಳನ್ನು ಮಕ್ಕಳಿಗೆ ವಿಶಿಷ್ಟವಾಗಿ ನೀಡುತ್ತಾ ಅದರ ನಡುವೆ ಕಟ್ಟಿಕೊಡುವ ಮಡ್ಡಮ್ಮನ ಪುಟ್ಟ ಪ್ರಸಂಗಗಳು ವಿಶಿಷ್ಟವಾಗಿಯೇ ಕಾಣುತ್ತವೆ. ಅವೇನೂ ಅದ್ಭುತವೆನ್ನುವ ಸಂಗತಿಗಳನ್ನು ಹೊಂದಲು ನೋಡಿಲ್ಲ. ಆದರೆ ಅಲ್ಲಿ ಸೃಷ್ಟಿಸಿರುವ ಕಥಾ ಹಂದರ ಹೃದ್ಯವಾದುದಾಗಿದೆ. ಇಡೀ ಕತೆಯಲ್ಲಿ ಮಡ್ಡಮ್ಮ ಎನ್ನುವ ಹೆಣ್ಣು ಮಗಳು ತಾಯಿಯಾಗಿ ಮುಖ್ಯ ಪಾತ್ರವಾಗಿ ನಿಲ್ಲುತ್ತಾಳೆ. ಆದರೆ ಈ ಪಾತ್ರವೇ ಗೊಂಬಕ್ಕ ಎಂದು ಕರೆಸಿಕೊಂಡು ಮಕ್ಕಳಾಟದ ಗೊಂಬೆ ಹೀಗೆ ಒಂದು ಪಾತ್ರವಾಗಿ, ಸಹಜವಾಗಿಯೇ ಅವಳ ಸುತ್ತ ಅವಳ ಮಕ್ಕಳಾಗಿ ಬೊಂಬೆಗಳು ಇರಬಹುದಾದ ಕಲ್ಪನೆಯ ಹಂದರವುಳ್ಳ ಪುಟ್ಟ ರಚನೆಗಳು ಆಪ್ಯಾಯಮಾನವಾದ ಫ್ಯಾಂಟಸಿಯನ್ನು ಸೃಷ್ಟಿಸಿವೆ. ಅಲ್ಲೆಲ್ಲ ಜನಪದದ ಬನಿ ಸಾಕಷ್ಟು ತುಂಬಿ ಕಾಣಿಸುವುದು ಕಂಡು ಬರುತ್ತದೆ. ಹೀಗೆ ಜನಪದ ಮೂಲದಲ್ಲಿ ಸಾಕಷ್ಟು ದ್ರವ್ಯ ಸಿಗುವ ಸಾಧ್ಯತೆ ಇರುತ್ತದೆ. ಆದರೆ ದೊಡ್ಡವರ ಕತೆಗಳ ಸಂದರ್ಭದಲ್ಲಿ ಪುರಾಣದ ಕತೆಗಳನ್ನು ಆಶ್ರಯಿಸಿದಂತೆ ಜನಪದ ಕತೆಗಳನ್ನು ಆಶ್ರಯಿಸಿದುದು ಕಡಿಮೆ. ಹೀಗೆಯೇ ಮಕ್ಕಳ ಸಂದರ್ಭದಲ್ಲೂ ಬಳಸಿಕೊಂಡುದು ಕಡಿಮೆಯೇ ಆಗಿದೆ. ಕನ್ನಡದಲ್ಲಿ ಜನಪದ ಕತೆಗಳನ್ನು ನೇರವಾಗಿ ಮಕ್ಕಳಿಗೇ ಎಂದು ನೀಡಿರುವುದು ತುಂಬಾ ಕಾಣುತ್ತದೆ.

ಜನಪದ ಮಾದರಿಯ ಹೊಸ ಆಶಯ, ಪ್ರಯತ್ನಗಳನ್ನು ಹೊಂದಿದ್ದ ಈ ಮೇಲಿನ ಕಥೆಗಳ ಫ್ಯಾಂಟಸಿಯು ಪಾಶ್ಚಿಮಾತ್ಯರ ಮಾಡ್ರನ್ ಫ್ಯಾಂಟಸಿ ಪರಿಕಲ್ಪನೆಗೆ ಹತ್ತಿರವೆನ್ನುವಂತೆ ಇದೆ. ಜನಪದ ಕಥೆಗಳ ಮರುನಿರೂಪಣೆಗಳ ಮುಂದುವರೆದ ಭಾಗಗಳಂತೆ ಈ ಕಥೆಗಳು ಇದ್ದರೂ ಫ್ಯಾಂಟಸಿಯ ಸ್ವರೂಪ ಮತ್ತು ಕಥೆಯನ್ನು ನಿರೂಪಿಸಿದ ಕ್ರಮದಿಂದ ಹೊಸದಾಗಿವೆ.

೭.೨. ಪ್ರಾಣಿ–ಪಕ್ಷಿ ಲೋಕ ಮತ್ತು ಫ್ಯಾಂಟಸಿ

ಲೇಖಕರನ್ನು ಪ್ರಭಾವಿಸಿದ ಮತ್ತೊಂದು ಅದ್ಭುತ ಲೋಕ ಪ್ರಾಣಿ ಜಗತ್ತು. ಬಹುಶಃ ಜಗತ್ತಿನ ಮಕ್ಕಳ ಸಾಹಿತ್ಯ ಪರಂಪರೆಯಲ್ಲಿ ಪ್ರಾಣಿ ಜಗತ್ತಿನ ಪ್ರಭಾವಕ್ಕೆ ಒಳಗಾಗದ ಮಕ್ಕಳ ಸಾಹಿತಿಗಳು ಇರಲಾರರು. ಇದು ಭಾರತೀಯ ಪರಂಪರೆಗೆ ಮತ್ತಷ್ಟು ಹತ್ತಿರದ, ಆಪ್ಯಾಯಮಾನದ ಸಹಜ ಸಂಗತಿಯಾಗಿದೆ. ಪ್ರಾಣಿ ಪಕ್ಷಿಗಳನ್ನು ನಮ್ಮ ಬದುಕಿನ ಭಾಗವಾಗಿ ಪರಿಗಣಿಸಿರುವ ಕನ್ನಡದಲ್ಲಿ ಪ್ರಾಣಿ ಕಥೆಗಳಿಗೆ ಬರವಿಲ್ಲ. ಜನಪದದ ಗೋವು, ಕಾಗೆ ಪುರಾಣಗಳಲ್ಲಿನ ಜಟಾಯು, ಹನುಮಂತ, ಜಾಂಬುವಂತ, ಮಾರೀಚ(ಜಿಂಕೆ) ಮುಂತಾದವು ಕನ್ನಡದ ಮಕ್ಕಳ ಸಾಹಿತ್ಯದ ಭಾಗವಾಗಿವೆ. ಪಂಚತಂತ್ರದ ಪ್ರಾಣಿ–ಪಕ್ಷಿ ಲೋಕ ಪರಿಚಯವಾದ ಮೇಲಂತೂ ಪ್ರಾಣಿಲೋಕ ಮಕ್ಕಳ ಬರಹಗಳಲ್ಲಿ ಬಿಟ್ಟೂ ಬಿಡದೆ ಸ್ಥಾನ ಪಡೆಯುವಂತಾಯಿತು.

ಪ್ರಾಣಿ ಕತೆಗಳೆಂದರೆ; ಅಲ್ಲಿ ಪಕ್ಷಿಗಳು, ಕ್ರಿಮಿಕೀಟಗಳು ಎಲ್ಲ ಜೀವರಾಶಿಯೂ ಸೇರುತ್ತಲೇ ಇರುತ್ತವೆ. ಆ ಬಗೆಯ ಕತೆಗಳು ಜನಪದ ಪರಂಪರೆಯಲ್ಲಾಗಲಿ, ಶಿಷ್ಟ ಪರಂಪರೆಯಲ್ಲಾಗಲಿ ವಿಪುಲವಾಗಿ ಕಂಡುಬಂದಿದೆ. ಇಲ್ಲಿ ಕಂಡುಬರುವ ಕಥೆಗಳು ಪ್ರಾಣಿಗಳ ಸ್ವಭಾವ ಪ್ರಪಂಚವನ್ನು ಆಧರಿಸಿ ರಚನೆಯಾಗಿವೆ. ಹಾಗೆಯೇ ವಿಭಿನ್ನ ಅಗತ್ಯಗಳಿಗಾಗಿ ಬಳಸಿಕೊಂಡಿರುವುದೂ ಕಂಡು ಬರುತ್ತದೆ. ತಾತ್ವಿಕ, ಆಧ್ಯಾತ್ಮಿಕ ಸಂಗತಿಗಳು, ಪ್ರಾಣಿಗಳು ಮಾತನಾಡುವುದು, ತಮ್ಮದೇ ಸ್ವಭಾವದಲ್ಲಿ ದೊಡ್ಡ ಪರಿವರ್ತನೆ ಹೊಂದುವುದು ಕೂಡ ಈ ಬಗೆಯ ಕತೆಗಳಲ್ಲಿ ನಡೆಯುತ್ತದೆ. ಭಾರತೀಯ ಕತೆಗಳಲ್ಲಿ ಕಂಡುದಕ್ಕಿಂತ ವಿಶಿಷ್ಟವಾಗಿ ಹೊಸ ಮಾದರಿಯ ಕತೆಗಳು ಪಾಶ್ಚಾತ್ಯರಲ್ಲಿ ಕಾಣಿಸಿಕೊಂಡು ಈ ಪ್ರಾಣಿ ಕಥಾಲೋಕ ವಿಶಿಷ್ಟವಾಗಿ ಅರಳಿರುವುದು ಓದುಗರ ಮುಂದಿದೆ. ಇಂದಿನ ತಾಂತ್ರಿಕ ಸೌಲಭ್ಯದಲ್ಲಿ ಮಕ್ಕಳೂ ಈ ಹೊಸತನ್ನು ಸಕಾರಾತ್ಮಕವಾಗಿ ಸ್ವೀಕರಿಸಿದ್ದಾರೆ. ಆದರೆ ಕನ್ನಡದ ಮಕ್ಕಳ ಕಥನ ಸಾಹಿತ್ಯ ಈ ಬಗೆಯ ಹೊಸತನ್ನು ಎಷ್ಟು ಮಟ್ಟಿಗೆ ಉಸಿರಾಡಿತು ಎನ್ನುವುದು ಪ್ರಶ್ನೆ. ಹೊಸಗಾಲದ ಕೆಲವು ಲೇಖಕರಾದರೂ ವಿರಳವಾಗಿ ಪ್ರಾಣಿ ಪಕ್ಷಿಗಳನ್ನು ಬಳಸಿಕೊಂಡು ತಮ್ಮ ಕಥಾ ಹಂದರಗಳನ್ನು ಹೊಸದಾದ ಬಗೆಯಲ್ಲಿ, ತಮ್ಮದೇ ಆದ ಅಗತ್ಯಗಳಲ್ಲಿ ಫ್ಯಾಂಟಸಿ ಸೃಷ್ಟಿಸಿದ್ದಾರೆ.

ಅವುಗಳಲ್ಲಿ ಶಶಿಧರ ವಿಶ್ವಾಮಿತ್ರ ಅವರ 'ಕತೆಯಾದ ಹುಲಿ' ಒಂದು ಉದಾಹರಣೆ. 'ಮರಿಯಾನೆ' ಮತ್ತು 'ಬನದ ಹಕ್ಕಿಗಳು' ಎನ್ನುವ ಅವರವೇ ಕೃತಿಗಳಲ್ಲಿ ಕಾಡಿನ ಪ್ರೀತಿ ಮತ್ತು ಪರಿಸರದ ಕಾಳಜಿಯೇ ಮುಖ್ಯವಾಗಿದೆ. ಹಾಗೆಯೇ ಒಂದು ಪಕ್ಷಿಯ ಕುಟುಂಬವನ್ನೇ ಇಟ್ಟುಕೊಂಡು ದೀರ್ಘ ಕತೆಯನ್ನು ಹೆಣೆದ ನಾ.ಡಿಸೋಜ ಅವರ 'ಹಕ್ಕಿಗೊಂದು ಗೂಡುಕೊಡಿ' ಕೃತಿ ವಾಸ್ತವ ಮಾದರಿಯಲ್ಲಿ ಫ್ಯಾಂಟಸಿಯನ್ನು ಒಳಗೊಂಡ ಕೃತಿಯಾಗಿದೆ. ಇದೇ ಮಾದರಿಯನ್ನು ಅನುಸರಿಸಿಕೊಂಡು ಹ.ಸ. ಬ್ಯಾಕೋಡ ಅವರು ರಚಿಸಿರುವ 'ಆಪರೇಷನ್ ಆನೆಮಲೆ' ಕೃತಿಯೂ ಇದೆ. ನೀಲಾಂಬರಿ ಹೆಸರಿನಲ್ಲಿ ಸಾಕಷ್ಟು ಕೃತಿಗಳನ್ನು ಮಕ್ಕಳಿಗೆ ರಚಿಸಿದ ಕೆ.ಪಿ.ಸ್ವಾಮಿ ಅವರು ಪ್ರಾಣಿಗಳನ್ನು ಮಕ್ಕಳೊಡನೆ ಸ್ನೇಹಿಗಳನ್ನಾಗಿ ಕಲ್ಪಿಸಿಕೊಂಡು 'ಬಿದಿರು ಹೊಳೆಗೆ ಬೆಂಕಿ' ಹಾಗೂ 'ಸಿಂಗರಾಯನ ಗವಿ' ಎನ್ನುವ ಎರಡು ದೀರ್ಘದ ಕತೆಗಳನ್ನು ರಚಿಸಿದ್ದಾರೆ. ಅವರ ಇನ್ನೊಂದು ಪುಟ್ಟ ಕತೆ ಹಕ್ಕಿಗಳ ಸುತ್ತ ಹರಡಿಕೊಂಡಿದ್ದು ಇದೆ. ಗಣೇಶ ನಾಡೋರ ಅವರು ಹಿಂದಿನ ಕತೆಗಳನ್ನೇ ಅನುಸರಿಸಿ ಹಲವಾರು ಪ್ರಾಣಿಕತೆಗಳ ಪಾತ್ರವಿರುವ ಕತೆಗಳನ್ನು ರಚಿಸಿದ್ದಾರೆ. 'ಮಕ್ಕಳಿಗಾಗಿ ದಿನಕ್ಕೊಂದು ಕತೆ'ಯಲ್ಲಿ ಅವರು ತಮಗೆ ಬೇಕಾದ ಸಂದೇಶ ನೀಡುವುದಕ್ಕೆ ಪ್ರಾಣಿಲೋಕವನ್ನು ಬಳಸಿಕೊಂಡಿದ್ದಾರೆ. ಆನಂದ ಪಾಟೀಲರು ಪ್ರಾಣಿ ಪಕ್ಷಿಗಳನ್ನು ಇನ್ನೊಂದು ವಿಶಿಷ್ಟ ಬಗೆಯಲ್ಲಿ ಬಳಸಿಕೊಂಡಿದ್ದಾರೆ. ಅದು ಕನ್ನಡಕ್ಕೆ ಹೊಸದು. ಹೊಸ ಸಂವೇದನೆಯಲ್ಲೇ, ತಮ್ಮದೇ ಅಭಿವ್ಯಕ್ತಿಯ ಅಗತ್ಯದಲ್ಲೇ ಅವರು ನಾನಾ ಬಗೆಯ ಪ್ರಾಣಿ, ಪಕ್ಷಿ ಚಟುವಟಿಕೆಗಳನ್ನು ತಂದುಕೊಳ್ಳುವುದು ನಡೆಯುತ್ತದೆ.

ಚ.ಹ.ರಘುನಾಥರ ಪುಟ್ಟಲಕ್ಷ್ಮಿಯ ಕತೆಗಳಲ್ಲಿನ ಪ್ರಾಣಿ ಪ್ರೀತಿ ಇನ್ನೂ ಭಿನ್ನವಾದದ್ದು. ಪ್ರಾಣಿಗಳನ್ನು ತಮ್ಮ ಲಾಭದಾಸೆಗೆ ಬಂಧಿಸುವುದರ ವ್ಯಂಗ್ಯವಾಗಿ ಬೆಂಕಿ ಪೊಟ್ಟಣದಲ್ಲಿ ಪ್ರಾಣಿಗಳು ಮುದುರಿಕೊಂಡಿರುವ ಕಥಾ ಹಂದರ ಅಲ್ಲಿದೆ.

೭.೨.೧. ಶಶಿಧರ ವಿಶ್ವಾಮಿತ್ರ ಮತ್ತು ಕಾಡಿನ ಪ್ರಾಣಿಗಳು

ಶಶಿಧರ ವಿಶ್ವಾಮಿತ್ರರ 'ಕತೆಯಾದ ಹುಲಿ' ಕಾದಂಬರಿಯು ನಿಸರ್ಗ ಮತ್ತು ನಾಡು ಇವೆರಡರ ಮಧ್ಯೆ ಇರುವ ಬದುಕಿನ ಅಂತರಗಳನ್ನು ಹುಡುಕುತ್ತಾ ಹೋಗುತ್ತದೆ. ನಿಸರ್ಗದ ಪ್ರತಿನಿಧಿಯಾಗಿ ಹುಲಿ ಮತ್ತು ನಾಡಿನ ಪ್ರತಿನಿಧಿಯಾಗಿ ಭೋಜಣ್ಣ ಇಬ್ಬರೂ ಕಾಡಿನ ಮಧ್ಯದಲ್ಲಿ ಸಂಧಿಸಿ ಸಂಭಾಷಣೆ ನಡೆಸುತ್ತಾರೆ. ಈ ಮೊದಲು ಶಾಮಣ್ಣನವರ ಮನೆಗೆ ತಿಥಿಗೆಂದು ಬಂದ ಭೋಜಣ್ಣ ಸಾತಜ್ಜಿ ಹೇಳಿದರೂ ಕೇಳದೆ ಸಂಜೆಯೇ ಊರಿಗೆ ಹೊರಡುತ್ತಾನೆ. ಕಡಿದಾದ ಕಾಡು ದಾರಿಯಲ್ಲಿ ಹುಲಿ ಇರಬಹುದೆಂಬ ಊರಗೌಡ ರಾಜಣ್ಣನ ಮಾತು ಅಲ್ಲಿನ ಮಕ್ಕಳನ್ನೂ ಕಥೆಯೊಳಗೆ ಹಾದಿ ಹಿಡಿದು ಹೊರಟರೆ ಇತ್ತ ಮಕ್ಕಳು ರಾಜಣ್ಣನಿಂದ ಸಾತಜ್ಜಿ ಕಥೆಯನ್ನು ಕೇಳುತ್ತಾರೆ.

'ಕಥೆಯಾದ ಹುಲಿ' ಭೋಜಣ್ಣ ಎನ್ನುವ ಮನುಷ್ಯ ಪಾತ್ರ ಮತ್ತು ಒಂದು ಹುಲಿಯ ನಡುವೆ ಕಾಡಿನ ದಾರಿಯಲ್ಲಿ ನಡೆಯುತ್ತಾ ಸಾಗುವ ಸಂಭಾಷಣೆಯಲ್ಲಿಯೇ ಬಿಚ್ಚಿಕೊಳ್ಳುವ ಕಥೆಯಾಗಿದೆ. ರಾಜಣ್ಣ ಹೇಳುವ ಕಥೆ ಕಲ್ಪನೆಯೋ ಭೋಜಣ್ಣ ಹುಲಿಯನ್ನು ಸಂಧಿಸಿದ್ದು ನಿಜವೋ ಎನ್ನುವಂತೆ ಸಮಾನಾಂತರವಾಗಿ ಜರುಗುವ ಈ ಪ್ರಸಂಗ ಕಥೆಯ ಕುತೂಹಲವನ್ನು ಇಮ್ಮಡಿಸುತ್ತದೆ. ಕಾಡಿನೊಳಗೇ ನಡೆಯುವ ಕಥೆಯಾದರೂ 'ರುಡ್‌ಯಾರ್ಡ್ ಕಿಪ್ಲಿಂಗ್‌ರ 'ಜಂಗಲ್ ಬುಕ್' ಹೆಚ್ಚು ಕಲ್ಪನೆಯ ಅಧಾರದಲ್ಲಿ ಹೇಳುವುದನ್ನು ಇಲ್ಲಿ ವಾಸ್ತವದ ಸಂಗತಿಗಳ ನಡುವೆಯೇ ಹೇಳುವ ಪ್ರಯತ್ನ ನಡೆದಿದೆ'[೧೫] ಇಷ್ಟಾಗಿಯೂ ಕಥೆ ಕಲ್ಪನೆಯನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದೆ. 'ಕಥೆಯಾದ ಹುಲಿ' ಶೀರ್ಷಿಕೆಯೇ ಹುಲಿಯು ಇಲ್ಲಿ ಕತೆಯಾಗುತ್ತದೆ ಎನ್ನುವ ಮೂಲಕ ಫ್ಯಾಂಟಸಿಯ ಎಳೆ ಶೀರ್ಷಿಕೆಯಲ್ಲಿಯೇ ಸಿಗುತ್ತದೆ. ಆದರೆ ರಾಜಣ್ಣನ '......ನಿಜಕ್ಕಿಂತ ದಿಟವಾದ್ದೊಂದರೆ ಕತೇನೇಯ..........'[೧೬] ಎನ್ನುವ ಮಾತು ವಾಸ್ತವವನ್ನು ಮುಟ್ಟಿಸುವುದಕ್ಕೆ ಕಲ್ಪನೆ ಎಷ್ಟು ಅಗತ್ಯದ್ದಾಗಿ ನಮಗೆ ಬೇಕಾಗುತ್ತದೆ ಎನ್ನುವುದನ್ನು ಹೇಳುತ್ತದೆ.

'ಒಂದು ರೀತಿಯಲ್ಲಿ ಬದುಕು ಮತ್ತು ಕತೆಗಳು ಬೇರೆ ಬೇರೆಯಾಗಬಾರದು ಎನ್ನುವ ಕಳಕಳಿ ಈ ಕೃತಿಯಲ್ಲಿ ಹುದುಗಿದೆ'.[೧೭] ಈ ಮಾತು ಕಥೆಯ ತಾತ್ಪರ್ಯವನ್ನು ಧ್ವನಿಸುತ್ತದೆ. ಇಡೀ ಕಥೆ ಸಂವಾದ ಸ್ವರೂಪದಲ್ಲಿ ಸಾಗುತ್ತದೆ. ಈ ಸಂವಾದ ಎರಡು ಬಗೆಯಲ್ಲಿದೆ ಒಂದು ಕಥೆ ಕೇಳುವ ಹೇಳುವವರಾದ ರಾಜಣ್ಣ–ಮಕ್ಕಳ ಮಧ್ಯೆ, ಇನ್ನೊಂದು ಕಥೆಯೊಳಗೆ, ದಿಟವಾಗಿಯೇ ಕಾಡಿನಲ್ಲಿ ಇದಿರಾದ ಭೋಜಣ್ಣ–ಹುಲಿಯ ಮಧ್ಯೆ ನಡೆದದ್ದು, ಮಕ್ಕಳಿಗಾಗಿ ಬರೆದ ಕಥೆಗಳು ಅದರಲ್ಲೂ ಪ್ರಕೃತಿಯ ಬಗೆಗಿನ ಕಥೆಗಳು ಮಕ್ಕಳಲ್ಲಿ ಹಸಿರಿನ ಮಹತ್ವವನ್ನೋ,

ಪ್ರಾಣಿದಯಾಪರತೆಯನ್ನೋ ಹೀಗೆ ಏನನ್ನಾದರೂ ಹೇಳಲು ಹೊರಡುತ್ತವೆ. ಅದರ ಸ್ವರೂಪಗಳು ಬೇರೆ ಬೇರೆಯಾಗಿರಬಹುದು ಅಷ್ಟೇ. ಕಥೆಯಲ್ಲಿ 'ಪರಿಸರದ ಪಾಠ ಇಲ್ಲಿ ತರ್ಕವಾಗಿ ರೋಚಕವಾಗಿ, ರಂಜಕವಾಗಿ ತಲುಪುತ್ತ ಮಕ್ಕಳಿಗಾಗಿ ರೂಪುಗೊಂಡಿದೆ'.[೧೮]

ಮುಖ್ಯವಾಗಿ ಈ ಬಗೆಯ ಕಥನಗಳು ಪಾಠವೆನ್ನುವುದಕ್ಕಿಂತ ಮಕ್ಕಳನ್ನೂ ಚಿಂತನೆಗೆ ಹಚ್ಚುವ, ಪರಿಸರದ ಬಗ್ಗೆ ಕಾಳಜಿ ವಹಿಸುವಂತೆ ನಿರ್ದೇಶಿಸುತ್ತವೆ, ಹಾಗೆಂದು ಕಥೆಯಲ್ಲಿ ನಿಸರ್ಗ ಉಳಿಸಿ ಎನ್ನುವ ಯಾವ ಸಾಲೂ ಬರುವುದಿಲ್ಲ. ಇಡೀ ಕತೆ, ಕಾಡಿನ ಪ್ರತಿನಿಧಿಯೆಂತಿದ್ದ ಹುಲಿಯ ಬಗ್ಗೆಯೇ ಸಾಗಿ ಮನುಷ್ಯ, ಕಾಡು, ಕಾಡಿನ ಜೀವಿಗಳೊಂದಿಗೆ ನಡೆದುಕೊಂಡು ಬಂದ ಹಾದಿಯನ್ನು ಬಿಚ್ಚಿಟ್ಟಿದೆ. ಅನೇಕ ಪ್ರಶ್ನೆಗಳನ್ನು ಈ ಕಥೆ ಹುಟ್ಟು ಹಾಕುತ್ತದೆ. ಮನುಷ್ಯನ ವರ್ತನೆಯ ವಾಸ್ತವತೆಯನ್ನು ಬದಲಿಸಲು ಕಥೆ ಕರೆ ನೀಡುತ್ತದೆ.

೬.೨.೨. ನಾ ಡಿಸೋಜ ಮತ್ತು ಹಕ್ಕಿಗಳು

ನಾ.ಡಿಸೋಜ ಅವರ 'ಹಕ್ಕಿಗೊಂದು ಗೂಡು ಕೊಡಿ' ಹಕ್ಕಿಯ ಸ್ವಗತವೊಂದರ ಮೂಲಕ ತೆರೆದುಕೊಂಡಿರುವ ದೀರ್ಘವಾದ ಕಾದಂಬರಿ. ಹಕ್ಕಿಗೆ ಅದರ ಲಕ್ಷಣಗಳ ಆಧಾರದ ಮೇಲೆ ಹಲವಾರು ಹೆಸರುಗಳಿಂದ ಅದನ್ನು ಕರೆಯಲಾಗುತ್ತದೆ. ಇಡೀ ಮೈ ಕಂದು ಬಣ್ಣವಿದ್ದರೂ ರೆಕ್ಕೆಯ ಅಂಚಿನ ಬಳಿ ಮಚ್ಚೆಯಿಂದ ಬಿಳಿಕಂದ ಎಂದೂ, ತೊರ್ರೆ ತೊರ್ರೆ ಎಂದು ಕೂಗುವ ತನ್ನ ಶಬ್ದದಿಂದಲೇ ಮುತ್ತು ಮಾರುವ ಶೆಟ್ಟಿಯನ್ನು ತೊರೆಯಿಂದ ಉಳಿಸಿದ್ದರಿಂದ ಅವನು ನೀಡಿದ ಮುತ್ತುಗಳಿಂದ ಮುತ್ತಿನಶೆಟ್ಟಿ ಹಕ್ಕಿ ಎಂದೂ ಕರೆಯುತ್ತಾರೆ. ಕಾದಂಬರಿಯಲ್ಲಿ ನಿಸರ್ಗದಲ್ಲಿ ಈಗಾಗಲೇ ಗುರುತಿಸಿರುವ ಯಾವೊಂದು ಪಕ್ಷಿಯ ಹೆಸರನ್ನು ಹಕ್ಕಿಗೆ ನೀಡಿಲ್ಲ. ಇಲ್ಲಿ ಇಡೀ ಪಕ್ಷಿ ಸಂಕುಲದ ಪ್ರತಿನಿಧಿಯಾಗಿ, ಪಕ್ಷಿ ಜಗತ್ತಿನ ಸಮಸ್ಯೆಗಳನ್ನು ಬಿಳಿಕಂದ ಹೇಳಿಕೊಂಡಿದೆ.

ಪಕ್ಷಿ ಕಥೆಗಳೆಂದರೆ ಕಾಣುವ ಮಾನವ ಸಹಜ ನಡೆವಳಿಕೆಗಳಿಂದ ದೂರ ಇರುವ ಇಲ್ಲಿನ ಪಕ್ಷಿಗಳು ತಮ್ಮದೇ ಜಗತ್ತಿನ ಬದುಕಿನ ಬವಣೆಗಳನ್ನು ಹೇಳಿಕೊಂಡಿವೆ. ಡಿಸೋಜರ ಎಲ್ಲ ಮಕ್ಕಳ ಕಥೆಗಳಲ್ಲೂ ಪರಿಸರ ಕಾಳಜಿ, ಅದೂ ಪಶ್ಚಿಮ ಘಟ್ಟದ ಸಮಸ್ಯೆಗಳ ಸುತ್ತ ಹರಡಿರುವುದು ಗಮನಕ್ಕೆ ಬರುತ್ತದೆ. ಅವರು ಅವುಗಳ ಸುತ್ತಲಿನ ವಾಸ್ತವವನ್ನು ಇಟ್ಟುಕೊಂಡೇ ಪಕ್ಷಿಗಳನ್ನು ಆಯ್ದುಕೊಳ್ಳುವುದು ಕಂಡು ಬರುತ್ತದೆ. ಇಲ್ಲಿನ ಫ್ಯಾಂಟಸಿಯು ಪ್ರಾಣಿ ಜಗತ್ತಿನ ಕಥಾಲೋಕ ಅನಾವರಣ ಮಾಡಿದರೂ ಮನುಷ್ಯನ ವಾಸ್ತವದ ಆಸೆಬುರುಕತನವು ಹೇಗೆ ನಿಸರ್ಗದ ಇತರ ಜೀವಿಗಳ ಬದುಕನ್ನು ಕಸಿದುಕೊಳ್ಳುತ್ತದೆ ಎಂಬುದನ್ನು ಕಥೆಯು ವಿವರಿಸುತ್ತದೆ. ಬಿಳಿಕಂದ ಹಕ್ಕಿಗಳು ನೆಮ್ಮದಿಯ ತಾವಿಗಾಗಿ ಸಾಗುವ ಹಾದಿಯಲ್ಲಿ ನಿರ್ಗತಿಕರಾಗುತ್ತಲೇ ಹೋಗುವುದು, ಮತ್ತೆ ಮತ್ತೆ ಹೊಸದೊಂದು ಸ್ಥಳ ಹುಡುಕಿ ಹೋಗುವ ಅವರ ಸ್ಥಿತಿ ಪಕ್ಷಿ ಜಗತ್ತು ಅನುಭವಿಸುತ್ತಿರುವ ಕಷ್ಟಕ್ಕೆ ಕನ್ನಡಿಯಂತಿದೆ. ಇದೆಲ್ಲವೂ ಹಕ್ಕಿಯ ಮೂಲಕ ನಿರೂಪಣೆ ಆಗುವಲ್ಲಿ ಫ್ಯಾಂಟಸಿ ಸ್ವರೂಪ ಪಡೆದುಕೊಂಡಿದೆ.

ಹಕ್ಕಿಗಳ ಆವಾಸಕ್ಕೆ ಕುತ್ತು ಬಂದಾಗ ಅಲ್ಲಿನ ಹಕ್ಕಿಗಳು ಆತಂಕಗೊಳಗಾಗುತ್ತವೆ. ತಮ್ಮೊಳಗೆ ಹೀಗೆ ಮಾತನಾಡಿಕೊಳ್ಳುತ್ತವೆ; 'ಕಾಡಿಗೆ ಏನೋ ಆಪತ್ತು ಬಂದಿದೆ' ಎಂದ ಅಪ್ಪ..........'ಅಯ್ಯೋ ನಮ್ಮಗತಿ?' ಎಂದು ಅಮ್ಮ ಪೇಚಾಡಿಕೊಂಡಳು ಹೌದು, ಮರಗಳು ಹೋದವು ಅಂದರೆ ನಾವು ಗೂಡು ಕಟ್ಟೋದು ಎಲ್ಲಿ? ಗೂಡು ಕಟ್ಟಲಿಕ್ಕೆ ಟೊಂಗೆ, ಕಡ್ಡಿ ಎಲ್ಲಿ ಸಿಗುತ್ತೆ? 'ಈ ಗಾಳೀ, ಈ ನೆರಳು, ಈ ತಂಪು ಇರೋಲ್ಲ'[೧೯] ಬೇರೆ ಬೇರೆ ಹಕ್ಕಿಗಳು ಟೊಂಗೆಗಳ ಮೇಲೆ ಕುಳಿತು ಮಾತನಾಡಿಕೊಂಡವು ಹಕ್ಕಿಗಳ ಈ ಸಂಭಾಷಣೆ ಪಕ್ಷಿಲೋಕದ ಬಿಕ್ಕಟ್ಟನ್ನು ವಿವರಿಸುತ್ತದೆ. ಪಕ್ಷಿಗಳೇ ಮಾತನಾಡುವ ಈ ದೃಶ್ಯ ಅತಿವಾಸ್ತವ ಎನ್ನಿಸಿದರೂ, ಮನುಷ್ಯನ ನಿಸರ್ಗ ವಿರೋಧಿ ನಡೆವಳಿಕೆಯ ಕಟುಸತ್ಯವನ್ನು ಇದು ಧ್ವನಿಸುತ್ತಿದೆ. ಮಕ್ಕಳ ಕಥೆಗಳು ಎಂದಿಗೂ ಬರೀ ಮಕ್ಕಳ ಕಥೆಯಾಗಿ ಉಳಿದಿರುವುದಿಲ್ಲ. ಅದು ಪಂಚತಂತ್ರವೇ ಆಗಿರಲಿ, ಜನಪದ, ಪುರಾಣ, ಫ್ಯಾಂಟಸಿ ಕಥನಗಳೇ ಆಗಿರಲಿ ಪ್ರೌಢರಿಗೆ ಪರೋಕ್ಷವಾಗಿ ಎಚ್ಚರಿಕೆಯನ್ನೂ ತಿಳುವಳಿಕೆಯನ್ನೂ ನೀಡುವ ಉದ್ದೇಶದಿಂದ ರಚಿತವಾಗಿರುತ್ತದೆ.

ಕಾಡಿನಿಂದ ಹೊರಬಿದ್ದು, ಹೊಸದೊಂದು ಜಾಗಕ್ಕೆ ಬಂದರೂ ಅಲ್ಲಿ ಕೈಗಾರಿಕೆಗಲ ವಿಷಾನಿಲ ಮತ್ತೆ ಹಕ್ಕಿಗಳ ಬದುಕನ್ನು ಅಸ್ಥಿರಗೊಳಿಸುತ್ತದೆ. ತಾಯಿ ಹಕ್ಕಿ ಅದೆಲ್ಲವನ್ನೂ ಅನುಭವಿಸಿ ಸಲಹೆ ಕೊಡುತ್ತದೆ. 'ಈ ಹೊಗೆ ಕುಡಿದು ನನಗೆ ಸಾಕಾಗಿದೆ. ಉಸಿರಾಡಲು ಆಗುವುದಿಲ್ಲ. ಕುಡಿಯುವ ನೀರು ವಿಷ, ಕಾಳು ವಿಷ, ಹುಳ ಹುಪ್ಪಲೆಗಳಲ್ಲೂ ವಿಷ, ನೀವು ಎಷ್ಟು ದಿನ ಇಲ್ಲಿ ಇರುತ್ತೀರಿ' 'ನೀವಿಬ್ಬರೂ ಇಲ್ಲಿಂದ ಹೊರಟುಬಿಡಿ, ಈ ಕಾರ್ಖಾನೆ ಇಲ್ಲಿ ಎಲ್ಲವನ್ನೂ ವಿಷಮಯ ಮಾಡುತ್ತಿದೆ' ಅಮ್ಮನ ಮಾತು ಅದೇ ಕೊನೆಯಾಯಿತು..... ಗೂಡಿಗಾಗಿ ಕಾಡಿಗಾಗಿ ನಾವು ಪ್ರಯಾಣ ಮಾಡಿದೆವು. ಇದು ನಮ್ಮ ಮೂರನೆಯ ಪ್ರಯಾಣ.'[೨೦] ಗೂಡು ಕಟ್ಟಲು ಕಾಡು ಹುಡುಕ ಹೊರಟು ಹಕ್ಕಿಗಳ ಈ ಪಯಣ ಮುಂದೊಂದು ದಿನ ಮನುಷ್ಯನೂ ಶುದ್ಧ ಗಾಳಿಯ ತಾವು ಹುಡುಕಿ ಹೊರಡುವ ಸಮಯ ದೂರವಿಲ್ಲವೆನ್ನುವುದನ್ನು ಈ ಸಾಲುಗಳು ಧ್ವನಿಸುತ್ತವೆ.

ಹಕ್ಕಿಗಳು ಗೂಡು ಕಟ್ಟುವಿಕೆಗೆ ಎದುರಾಗುವ ವಿಘ್ನಗಳಲ್ಲಿ ಪ್ರಕೃತಿ ವಿಕೋಪಗಳೂ, ಅವುಗಳ ಹಿನ್ನೆಲೆಯಲ್ಲಿ ಮತ್ತೆ ಮನಷ್ಯನ ಲಾಲಸೆಗಳೇ ನಿಂತಿರುವುದೂ ಇಲ್ಲಿ ಕಾಣಿಸಿದೆ. ಬಿಳಿಕಂದ ಹಕ್ಕಿಗಳ ಸಂಸಾರ ನಾಲ್ಕಾರು ದಿನ ಸುತ್ತಲೂ ನೀರು ನಡುವೆ ಇರುವ ಏಕೈಕ ಮರದಲ್ಲಿ ಬದುಕುವುದು ಕಷ್ಟವೆನಿಸಿ ತಮ್ಮ ನಾಲ್ಕನೇ ಪ್ರಯಾಣವನ್ನು ಮುಂದುವರೆಸುತ್ತವೆ. ಹಕ್ಕಿಗಳ ಆತಂಕ ಇಲ್ಲಿಗೆ ಕೊನೆಗೊಳ್ಳುವುದಿಲ್ಲ. ಮನುಷ್ಯ ತನ್ನ ದುರಾಸೆಗೆ ಪ್ರಾಣಿ ಪಕ್ಷಿಗಳ ಸಹಜ ಬದುಕಿಗೆ ವಿಘ್ನ ತಂದಿದ್ದಲ್ಲದೆ ಮೋಜಿಗಾಗಿ, ಮಾಂಸಕ್ಕಾಗಿ ಪಕ್ಷಿಗಳತ್ತ ಗುಂಡು ಹಾರಿಸುವ ಮೂಲಕ ನಗರದಲ್ಲೂ ಬಿಳಿಕಂದಗಳಿಗೆ ನೆಲೆಯಿಲ್ಲದಂತೆ ಮಾಡುತ್ತಾನೆ. ಮುಂದೆ ಮೊಬೈಲ್ ಟವರ್ ಮೇಲೆ ಬಿಳಿಕಂದ ತನ್ನ ಮಕ್ಕಳೊಂದಿಗೆ ಗೂಡು ಕಟ್ಟಿ ಜೀವಿಸಲು ನೋಡಿತು. ಸುತ್ತಮುತ್ತಲ 'ಹೊಲದ ಬೆಳೆಗಳ

ಮೇಲೆ ಅದೇನೋ ಸಿಂಪಡಿಸುತ್ತಾರೆ ಎಂಬ ಮಾತು ಬಂತು. ಈ ಸಿಂಪಡಿಸುವುದು ವಿಷ....ಇದು ನನಗೆ ಹೊಸ ವಿಷಯ ಛೇ! ಈ ಪಕ್ಷಿ ಸಂಕುಲಕ್ಕೆ ಏನೆಲ್ಲ ಕಷ್ಟ ಅಂದುಕೊಂಡೆ.'[೨೧] ಮನುಷ್ಯನ ಈ ಲಾಭಕೋರತನದ ಪರಿಧಿಗೆ ಎಲ್ಲಿ ಎಲ್ಲದಂತಾಗಿವೆ ಎಂದು ಹಕ್ಕಿಗಳು ವ್ಯಥೆ ಪಡುತ್ತವೆ.

ಮನುಷ್ಯರು ವಾಸ್ತವದಲ್ಲಿ ಸುಖ ಪಡುತ್ತಿದ್ದೇವೆ ಎಂದು ಭ್ರಮಿಸಿಕೊಳ್ಳುತ್ತಲೇ ತಮಗೆ ಗೊತ್ತಿಲ್ಲದಂತೆ ಸಂಕಷ್ಟಕ್ಕೆ ಸಿಲುಕಿಕೊಳ್ಳುತ್ತಿದ್ದಾರೆ. ನಮ್ಮನ್ನೂ ಸಿಲುಕಿಸುತ್ತಿದ್ದಾರೆ ಎಂದು ಹಕ್ಕಿಗಳು ಮರುಕ ಪಡುವ ಈ ಸನ್ನಿವೇಶವು ಮನುಷ್ಯರ ಅತಿವಾಸ್ತವ ನಡೆವಳಿಕೆಗೆ ಉದಾಹರಣೆಯಾಗಿದೆ. ಸಮುದ್ರದ ಕಾಡು, ನದಿಯ ಬೀಡು, ಸ್ವಚ್ಛ ಗ್ರಾಮ, ವಿಶಾಲ ನಗರ ಎಲ್ಲವನ್ನೂ ಸಾಗಿ ಕೊನೆಗೆ ಕಬ್ಬಿಣದ ಗೋಪುರದಲ್ಲೂ ತಮಗೆ ಸ್ಥಳ ದೊರಕದೆ ಪಕ್ಷಿಗಳು ನಲುಗುವ ಸನ್ನಿವೇಶ ಪಕ್ಷಿಲೋಕದ ಫ್ಯಾಂಟಸಿ ಕತೆಯೆಂದೆನಿಸುವುದರ ಜೊತೆಗೆ ಹೆಚ್ಚಾಗಿ ಮನುಷ್ಯ ದುರಾಸೆಯ ಅತಿರೇಕದ ಕತೆಯಾಗಿದೆ. ಈ ಮೂಲಕ ವಾಸ್ತವ, ಸಮಸ್ಯೆಗಳ ಮೇಲೆಯೇ ಮತ್ತೆ ಮತ್ತೆ ದೃಷ್ಟಿ ಹಾಯಿಸುತ್ತಾ ಕತೆ ನಿಜ ಬದುಕನ್ನೇ ತೆರೆದಿಟ್ಟಿದೆ.

ಕಥೆಯ ಕೊನೆಯಲ್ಲಿ, ಹಕ್ಕಿಗಳು, ತಾವಿದ್ದ ಕಬ್ಬಿಣದ ಗೋಪುರವು 'ಏನೇನನ್ನೋ ಸಾವಿರ ಜನರಿಗೆ ಮುಟ್ಟಿಸುತ್ತೆ' ಎಂದು ಅವನು ಹೇಳಿದ್ದ. ಸಾವಿರ ಜನರಿಗೆ ತಿಳಿಸಬೇಕಾದ ಒಂದು ವಿಷಯ ನನ್ನಲ್ಲಿ ಇತ್ತು.'[೨೨] ಗೂಡು ಕಟ್ಟಲು ಎಲ್ಲಿಯೂ ಜಾಗ ಸಿಗದ ಹಕ್ಕಿಯು ಮನುಷ್ಯ ಬದಲಾಗದ ಹೊರತು ನಮಗೆ ನೆಮ್ಮದಿಯ ಸ್ಥಳ ಸಿಗಲಾರದು ಎಂದು ಅರಿತುಕೊಂಡು; ಕಬ್ಬಿಣದ ಪಟ್ಟಿಗೆಯ ಮೇಲೆ ಕುಳಿತು ಎಲ್ಲರನ್ನೂ ಉದ್ದೇಶಿಸಿ ಹೀಗೆ ಹೇಳುತ್ತಾಳೆ; 'ಗಂಟಲ ನರ ಹರಿದು ಹೋಗಲಿ. ಆದರೆ ನನ್ನ ಮಾತು ಎಲ್ಲರಿಗೂ ಕೇಳಲಿ, ಹಕ್ಕಿಗೊಂದು ಗೂಡು ಕೊಡಿ, ಹಕ್ಕಿಗೊಂದು ಗೂಡು ಕೊಡಿ'.[೨೩] ಆ ಹಕ್ಕಿಯ ಕೂಗು ಎಲ್ಲಾ ಮನೆಗಳಿಗೆ ತಲುಪಿದೆ ಎಂದು ಲೇಖಕರು ಭಾವಿಸಿರುವುದು ಫ್ಯಾಂಟಸಿಯೇ ಆಗಿದೆ. ಕಾರಣ ಹಕ್ಕಿಗಳು ನಿರಾಶ್ರಿತವಾಗತೊಡಗಿರುವ ದಾರುಣತೆ ನಮ್ಮ ನಡುವಿನ ಕಟು ವಾಸ್ತವವಾಗಿದೆ.

ಡಿಸೋಜ ನಾ. ಅವರು ತಮ್ಮ ಅನೇಕ ಮಕ್ಕಳ ಕಥೆ, ಕಾದಂಬರಿಗಳಲ್ಲಿ ಹಕ್ಕಿಗಳ ಬದುಕಿನ ಕುರಿತು ಕಥನವನ್ನು ಕಟ್ಟಿದ್ದಾರೆ. 'ಮಂಗಟ್ಟೆ ಹಕ್ಕಿ ಸಂಸಾರ', 'ಹಕ್ಕಿ ಗೂಡಿಗೆ ಬೆಂಕಿ' ಹೀಗೆ ಅವರ ಕಥಾಲೋಕದ ಫ್ಯಾಂಟಸಿ ಬಹುತೇಕವಾಗಿ ಪ್ರಾಣಿಪಕ್ಷಿ ಲೋಕವನ್ನೇ ಹೆಚ್ಚಾಗಿ ಒಳಗೊಂಡಿದೆ. ಕನ್ನಡದಲ್ಲಿ ಪರಂಪರೆಯ ಕತೆಗಳು ಮತ್ತೆ ಮತ್ತೆ ಪುನರ್‌ಮುದ್ರಣ ಹಾಗೂ ಮರುನಿರೂಪಣೆಗಳು ಆಗುತ್ತಿರುವಾಗಲೇ ಡಿಸೋಜ ಅವರು ಮಕ್ಕಳಿಗೆ ವರ್ತಮಾನದ ಪ್ರಜ್ಞೆ ಅವಶ್ಯವೆಂದು ಭಾವಿಸಿ; ಸದ್ಯದ ತಲ್ಲಣಗಳನ್ನು ಕಥನಗಳಲ್ಲಿ ತಂದರು. ಆದರೆ ಆ ವಾಸ್ತವ ಮಾದರಿ ಕಥನದೊಳಗೂ ಫ್ಯಾಂಟಸಿಯನ್ನು ಬೆರೆಸಿದ ರಚನೆ ಅವರ ಕಥೆಗಳಲ್ಲಿ ಕಂಡು ಬರುತ್ತದೆ.

ಪ್ರಾಣಿ ಪಕ್ಷಿ ಕಥೆಗಳು ಹಿಂದಿನಿಂದ ರಚನೆಯಾಗುತ್ತಾ ಬಂದಿದ್ದರೂ ಎಲ್ಲವೂ ಒಂದೇ ತೆರನಾಗಿಲ್ಲ. ಆಯಾ ಕಾಲದ ಆಶಯಗಳಿಗೆ ತಕ್ಕಂತೆ ಪ್ರಾಣಿ ಪಕ್ಷಿಗಳನ್ನು ಮಕ್ಕಳ ಫ್ಯಾಂಟಸಿ

ಕಥೆಗಳಲ್ಲಿ ಬಳಸಿಕೊಳ್ಳಲಾಗಿದೆ. ಒಂದು ಕಾಲಕ್ಕೆ ಮನುಷ್ಯನಿಗೆ ನೀತಿ ಹೇಳಲು, ಮಕ್ಕಳಿಗೆ ರಂಜನೆ ನೀಡಲು ಬಳಕೆಯಾದ ಪ್ರಾಣಿ ಪಕ್ಷಿಗಳು ಇಂದು ತಮ್ಮದೇ ನೋವು ಸಂಕಟಗಳನ್ನು ಹೇಳಿಕೊಳ್ಳುತ್ತಿರುವಂತೆ ಕಥೆಯಾಗುತ್ತಿರುವುದು ಇಂದಿನ ತುರ್ತು ಎನ್ನಿಸುತ್ತದೆ. ನಿಸರ್ಗ ಉಳಿವಿನಲ್ಲಿಯೇ ಮನುಷ್ಯನ ಉಳಿವು ಅಡಗಿದೆ ಎನ್ನುವ ನಿಸರ್ಗ ಕಾಳಜಿಯ ಬರಹಗಳೂ ಇಂದು ಕನ್ನಡದಲ್ಲಿ ಸಾಕಷ್ಟು ಕಾಣತೊಡಗಿವೆ.

೭.೨.೩. ನೀಲಾಂಬರಿ ಮತ್ತು ಪ್ರಾಣಿ ಲೋಕ

ನೀಲಾಂಬರಿ ಅವರ 'ಸೂರ್ಯನಲ್ಲಿಗೆ ನಿಯೋಗ', 'ಅಶ್ವ ಶಕ್ತಿ ೫೦೦೦' ಕೃತಿಗಳೂ ಕೂಡ ಹೀಗೆಯೇ ಪ್ರಕೃತಿಯ ವೈಪರೀತ್ಯಗಳ ಸುತ್ತ ಹಬ್ಬಿಕೊಂಡಿರುವ, ಪ್ರಾಣಿಗಳನ್ನು ಪಾತ್ರವಾಗಿಸಿಕೊಂಡಿರುವ ಕತೆಯ ಹಂದರಗಳು. ಅತಿಯಾದ ಬಿಸಿಲಿನಿಂದ ಇಡೀ ಭೂಮಿಯೇ ತತ್ತರಿಸಿ ಹೋಗಿರುವಾಗ, ಎಲ್ಲಾ ಪ್ರಾಣಿಗಳು ಸೂರ್ಯನಲ್ಲಿಗೆ ಮನವಿ ನೀಡಿ ಅವನಿಂದಲೇ ಪರಿಹಾರ ಕಂಡುಕೊಳ್ಳುವ ಕಥೆ ಇದು. ಇಲ್ಲಿ ಮನುಷ್ಯನ ಅತಿ ಆಸೆಯಿಂದ ನಿಸರ್ಗದ ಮೇಲೆ, ಎಲ್ಲಾ ಜೀವಿಗಳ ಮೇಲೆ ದುಷ್ಪರಿಣಾಮ ಬೀರಿರುತ್ತದೆ. ಅದನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸುವುದು ಮನುಷ್ಯರಲ್ಲ; ಬದಲಾಗಿ ಕಾಡಿನ ಜೀವಿಗಳು. ಕಥೆಯ ಫ್ಯಾಂಟಸಿತನ ಇರುವುದೇ ಇಲ್ಲಿ. ಸೂರ್ಯನ ಬಳಿಗೆ ಹೋಗಲು ಮೂರು ರಾತ್ರಿ, ಮೂರು ಹಗಲುಗಳ ಪ್ರಯಾಣಿಸುವುದು ಜನಪದ ಕಥಾ ಶೈಲಿಯಂತಿದೆ. ಶುದ್ಧ ಗಾಳಿಯನ್ನು ನೀಡುವ ವಾಯುರಾಜನೇ ತೀವ್ರವಾದ ಶ್ವಾಸಕೋಶ ರೋಗಪೀಡಿತನಾಗಿರುತ್ತಾನೆ. ಇಡೀ ಕಥೆ ಸಾಗುವುದು ಪ್ರಾಣಿಗಳ ಮುಖಾಂತರ. ಕಾಡಿನ ಪ್ರಾಣಿಗಳು ಆದ ಅನಾಹುತಗಳನ್ನು ಸರಿಪಡಿಸುವುದಕ್ಕಾಗಿ ಇಷ್ಟೆಲ್ಲಾ ಅವಾಂತರಗಳಿಗೆ ಕಾರಣನಾದ ಮನುಷ್ಯನನ್ನು ಇಡೀ ಪ್ರಾಣಿ ಪಕ್ಷಿ ಸಂಕುಲ ದೂಷಿಸುತ್ತದೆ. ನಿಸರ್ಗವೂ ದುಷ್ಪರಿಣಾಮಗಳ ಮೂಲಕ ತನ್ನ ಅಸಮಾಧಾನವನ್ನು ಹೊರ ಹಾಕುತ್ತದೆ.

ವಾಸ್ತವಿಕ ನೆಲೆಯಲ್ಲಿ ರಚನೆಗೊಂಡ ವಾಸ್ತವೇತರ ಹಂದರದ ಕಥೆಯಾಗಿ ಈ ಕಥೆ ಬೆಳೆಯುತ್ತಾ ಸಾಗುತ್ತದೆ. ಜನಪದೀಯ ಕಥಾ ಶೈಲಿಯನ್ನು ಬಳಸಿಕೊಂಡಿರುವುದಕ್ಕೆ ಪುರಾವೆಗಳಾಗಿ ಮೂರು ರಾತ್ರಿ ಮೂರು ಹಗಲು, ಏಳು ಸಾಗರದಾಚೆ ಈ ಸಂದರ್ಭಗಳೂ ಇಲ್ಲಿವೆ. ನೀಲಾಂಬರಿ ಅವರ ಪ್ರಾಣಿಲೋಕ ಅತಿವಾಸ್ತವ ಸ್ವರೂಪಗಳಿಂದ ಕೂಡಿದ್ದರೂ ವಾಸ್ತವದ ಕಥಾ ಚೌಕಟ್ಟು ಒಳಗೊಂಡಿರುತ್ತದೆ. ಇದು ಅವರ ಬಹುತೇಕ ಮಕ್ಕಳ ಫ್ಯಾಂಟಸಿ ಕಥೆಗಳಲ್ಲಿ ಕಂಡುಬರುವ ಸಾಮಾನ್ಯ ಲಕ್ಷಣವಾಗಿ ಗುರುತಿಸಬಹುದು.

೭.೨.೪. 'ಎದ್ದುನಿಂತ ಬಾಲ' ಹಾಗೂ ವಿಭಿನ್ನ ಪ್ರಾಣಿಪಾತ್ರಗಳ ಲೋಕ

ಆನಂದ ಪಾಟೀಲರು ಪ್ರಾಣಿ, ಪಕ್ಷಿಗಳನ್ನು ತಮ್ಮ ಕಥೆಗಳಲ್ಲಿ ತಮ್ಮದೇ ವಿಭಿನ್ನ ಬಗೆಯಲ್ಲಿ ನಿರೂಪಿಸಿದ್ದಾರೆ. ಇಲ್ಲಿನ ಫ್ಯಾಂಟಸಿ ನಮ್ಮ ಪರಂಪರೆಯ ಕತೆಗಳಂತೆ ಅಲ್ಲ. ಪ್ರಾಣಿಗಳನ್ನು

ಸಹಜವಾಗಿ ನಮ್ಮ ನಡುವೆಯೇ ಭಾವಿಸಿಕೊಳ್ಳುವುದು, ಮಾನವೀಯ ಸ್ಪಂದನಗಳಲ್ಲಿ ಅವನ್ನು ರೂಪಾಂತರಿಸಿಕೊಳ್ಳುವುದು, ಸೂಕ್ಷ್ಮದ ಸಂವೇದನಗಳಿಗೆ ದಾರಿ ಮಾಡಿಕೊಳ್ಳುವುದು ಇಲ್ಲಿ ಸಾಮಾನ್ಯವಾಗಿ ನಡೆಯುತ್ತದೆ.

ಪಾಟೀಲರ 'ಎದ್ದು ನಿಂತ ಬಾಲ' ಕತೆಯಲ್ಲಿ ಹಂದಿಯೊಂದು ಲೇಖಕರನ್ನೇ ಕಾಣಲು, ಅದೇನೋ ಉತ್ಸುಕತೆಯಿಂದ ಇದ್ದಕಿದ್ದ ಹಾಗೆ ಒಂದು ಸಂಜೆ ಒಬ್ಬರೇ ಇರುವುದನ್ನು ನೋಡಿಕೊಂಡು ಬಂದುಬಿಡುತ್ತದೆ. ಬರುವಾಗ ಅವರು ಏನೇನೆಲ್ಲ ಹಂದಿಯ ಕುರಿತು ಅಂದುಕೊಳ್ಳಬಹುದು, ಅದಕ್ಕೆಲ್ಲ ತಕ್ಕುದಾಗಿಯೇ ಮೈಯನ್ನು ಕ್ಲೀನ್ ಮಾಡಿಕೊಂಡು, ಸಭ್ಯತೆಯನ್ನು ಪ್ರದರ್ಶಿಸುತ್ತಾ, ಮನೆಗೊಬ್ಬ ಅತಿಥಿ ಬಂದರೆ ಅಗತ್ಯವಾಗುವ ನಡವಳಿಕೆಗಳನ್ನೇ ಇಟ್ಟುಕೊಂಡು ಬರುತ್ತದೆ. ಲೇಖಕರು ಅದರ ಚಿತ್ರ ಬಿಡಿಸುತ್ತಿದ್ದುದನ್ನು ನೋಡಿ, ಆ ಚಿತ್ರವನ್ನು ನೋಡಲು ಬಯಸಿ ಅದು ಬಂದಿರುತ್ತದೆ. ಹಾಗೆ ಅವರ ಚಿತ್ರ ನೋಡುತ್ತಾ, ಅವರ ಮಗಳು ತುಂಟ ಹುಡುಗಿ ಚಿತ್ರಿಸಿದ ಹಂದಿಯ ಚಿತ್ರವನ್ನು ನೋಡಿ, ಅದರಲ್ಲಿ ಬಾಲ ಇರುವ ಹಾಗೆ ಕೆಳಗೆ ಬಿದ್ದುಕೊಂಡಿರದೆ ಮೇಲೆ ಎದ್ದು ನಿಂತಿರುವುದನ್ನು ಕಂಡು ಬಲು ಮುದಗೊಂಡು ತನ್ನ ಬಾಲ್ಯದ ನೆನಪನ್ನು ಹೇಳುತ್ತಾ ಕಥಾ ಪ್ರಸಂಗ ವಿಸ್ತರಿಸಿಕೊಳ್ಳುತ್ತದೆ.

'ಎದ್ದು ನಿಂತ ಬಾಲ'ದ ಹಂದಿಯು "ನಾನು ಬಾಲ ನೆಟ್ಟಗ ಮಾಡೂದರೊಳಗ ಮುಳುಗಿ ಹೋಗಿದ್ದೆ, ಸರಿಯಾಗಿ ಆವಾಗ ಒಂದು ಹುಡುಗ ಒಂದು ಮನಿ ಕಾಂಪೌಂಡ್ ಒಳಗಿನಿಂದ ಬೀಸಿ ಕಲ್ಲ ಒಗದಾ, ಅದು ಬರೋಬ್ಬರಿ ನನ್ನ ಹಿಂದಿನ ಎಡಕಿನ ಕಾಲಿಗೆ ಬಿತ್ತು. ಭಲೋ ಪೆಟ್ಟು ಬಿತ್ತು...'[೨೪], ಹಾಗೆ ತನ್ನ ಎದೆಯಲ್ಲಿ ಉಳಿದು ಹೋದ ನೋವನ್ನು ಬಿಚ್ಚಿಕೊಳ್ಳುತ್ತಿದ್ದಂತೆಯೇ ಹೊರಗೆ ಗುಂಡಿನ ಸದ್ದು ಆಗಿದ್ದುದನ್ನು ಕೇಳಿ ತಕ್ಷಣಕ್ಕೆ ಯಾವ ಮಾತಿಗೂ ನಿಲ್ಲದೆ ತನ್ನ ಧಡೂತಿ ದೇಹವನ್ನು ಹೊರಳಾಸಿಕೊಂಡು ಓಡಿಬಿಡುವ ಪ್ರಸಂಗ ನಡೆಯುತ್ತದೆ. ಲೇಖಕರಿಗೂ ಅದರೊಳಗಿನ ನೋವನ್ನು ಅಂಟಿಸಿಯೇ ಸಾಗುತ್ತದೆ. ಅವರು ತುಂಬಾ ಪೇಚಾಡಿಕೊಳ್ಳುತ್ತಾರೆ. ಹೀಗೆ ತನ್ನೊಳಗಿನ ನೋವುಗಳನ್ನು ಹೇಳಿಕೊಳ್ಳುವಷ್ಟು ಪ್ರಾಣಿಯೊಂದನ್ನು ಪ್ರೀತಿಸುವ ಬಗೆ ಎಲ್ಲ ಜೀವಿಗಳನ್ನು ತನ್ನದೇ ಸಂವೇದನೆಗಳಲ್ಲಿ ಕಾಣುತ್ತಾ ಬದುಕನ್ನು ಜೀವಿಗಳ ಬದುಕಿನ ಮೇರೆಗಳನ್ನು ಮೀರಿ ಭಾವಿಸುವ ವಿಶಾಲತೆಗೆ ವಿಸ್ತರಿಸುವುದೇ ಇಲ್ಲಿ ನಡೆಯುತ್ತದೆ. ವಾಸ್ತವ ನಮ್ಮ ಕೈ ಮೀರಿರಬಹುದು, ಆದರೆ ನಮ್ಮ ಸಂವೇದನಗಳಲ್ಲಾದರೂ ಅವು ಮನೆಮಾಡಿಕೊಂಡಿರಲಿ ಎನ್ನುವ ಹಂಬಲ ಇಲ್ಲಿದೆ.

ಆನಂದ ಪಾಟೀಲರ ಶೀರ್ಷಿಕೆಯಿಲ್ಲದ ಇನ್ನೊಂದು ಕತೆಯಲ್ಲಿ ಕಾಗೆಯೊಂದು ಪುಟ್ಟ ಹುಡುಗಿಯ ಕಿಟಕಿಯಲ್ಲಿ ಕತೆಯ ಪುಸ್ತಕವೊಂದನ್ನು ಇಟ್ಟುಕೊಂಡು ಕುಳಿತಿರುವಲ್ಲಿಗೆ ಬಂದು ಕೂಡುವುದರೊಂದಿಗೆ ತೆರೆದುಕೊಳ್ಳುತ್ತದೆ. ಅವಳು ಆ ಪುಸ್ತಕದಲ್ಲಿನ ಚಿತ್ರದಲ್ಲಿ ಕಾಗೆಯೊಂದು ಚೆಂದದ ಫ್ರಾಕು ಹಾಕಿಕೊಂಡುದು, ಅದು ತನ್ನ ಬಳಿ ಇರುವಂಥದೇ ಆಗಿದ್ದುದು, ಅದನ್ನು ನೋಡಿ ನಕ್ಕುಬಿಡುವುದು ಸಹಜವಾಗಿ ನಡೆಯುತ್ತದೆ. ಕಾಗೆ ತಕ್ಷಣ 'ಹಾಗೆ ನಕ್ಕದ್ದು ಯಾಕೆ' ಅಂತ

ಕೇಳಿ ಅವಳನ್ನು ದಿಗಿಲಿಗೆ ಕೆಡವುತ್ತದೆ. ಅವರ ಮಧ್ಯೆ ಸಂಭಾಷಣೆ ಹುಟ್ಟಿಕೊಳ್ಳುತ್ತದೆ. ಕಾಗೆಯು, 'ನೀನು ಕಾಗೆ ಹಾಗೆ ಫ್ರಾಕು ಹಾಕಬಾರದೆಂದು ಭಾವಿಸಿದೆಯಾ, ಅದು ಸರಿಯಾದುದಲ್ಲ, ಅಸಹಜ ಅಂತೆಲ್ಲಾ ನಕ್ಕೆಯಾ'[25] ಅಂತೆಲ್ಲ ತನ್ನ ಒಳಗಿನ ಅನುಮಾನಗಳನ್ನು ಹೊರಹಾಕತೊಡಗುತ್ತದೆ. 'ಪುಟ್ಟಿ ತಾನು ಹಾಗೆಲ್ಲ ಯೋಚಿಸಿಯೇ ಇಲ್ಲ, ಖಂಡಿತ, ಚೆನ್ನಾಗಿದೆ ಇದು, ಹೀಗಿದ್ದರೆ ಅಂತ ಅಂತ ತನ್ನನ್ನ ಸಾಬೀತು ಪಡಿಸಿಕೊಂಡಾಗ ಕಾಗೆ ಸಂತಸದಲ್ಲಿ ಹಾರಿ ಹೋಗುತ್ತದೆ'[26] ಹಾಗೆ ಹೋಗುವಾಗ 'ನನಗೂ ಅಂಥದ್ದೇ ಒಂದು ಫ್ರಾಕ್ ಹಾಕ್ಕೋಬೇಕು ಅಂತಾ ಆಸೆ, ಅದು ಚೆನ್ನಾಗಿದೆ'[27] ಎಂದು ಹೇಳುತ್ತ ಹೋಗುತ್ತದೆ. ಪುಟ್ಟಿ ಬೇಸರ ಪಟ್ಟುಕೊಳ್ಳುತ್ತಾಳೆ. ಕಾಗೆಯಂಥ ಜೀವಿಯನ್ನು ಮಗುವಿನ ಸುತ್ತಲಿನ ಸೂಕ್ಷ್ಮದ ಸಂವೇದನೆಗಳಿಗೆ ಒಳಗುಮಾಡಿಕೊಂಡು ಕಥೆಯನ್ನು ರಚಿಸುವ ಕಥನ ಸ್ವರೂಪ ಇಲ್ಲಿನ ಫ್ಯಾಂಟಸಿಯಲ್ಲಿ ಕಂಡು ಬರುತ್ತದೆ.

ಪಾಟೀಲರ 'ಕತ್ತೆಯವರು' ಕಥೆ ಹೀಗೆಯೇ ಇನ್ನೊಂದು. ಲೇಖಕರು ಒಂದು ನಸುಕಿನ ಸಮಯದಲ್ಲಿ ವಾಕಿಂಗ್‌ಗೆ ಹೋದಾಗ ಕತ್ತೆಯೊಂದು ನಿಲ್ಲಿಸಿ ಮಾತನಾಡಿಸುತ್ತದೆ. ಲೇಖಕರು ಗಾಬರಿಯಾಗಿ ಅದರೊಂದಿಗೆ ಮಾತಿಗಿಳಿಯುತ್ತಾರೆ. ಈ ಸಂಭಾಷಣೆ ತುಂಬಾ ತಾತ್ವಿಕ ಅನ್ನೋಹಾಗೆ ಸಾಗುತ್ತದೆ:

'ನೀನು ಈ ಹೊತ್ತಿನಲ್ಲಿ'

'ಯಾಕೆ ಇರಬಾರದೇನು? ನೀವು ಇರಬೇಕು ನಾನು ಇರಬಾರದೇ?'

'ಅಲ್ಲ, ನಾನು ವಾಕಿಂಗ್ ಅಂತ.. ..'

'ನಾನೂ ಅದೇ ಕಾರಣಕ್ಕೆ ಬಂದೆ'[28]

ಕಥೆಯ ಕೊನೆಗೆ ಕತ್ತೆಯು ಲೇಖಕನಿಗೆ ನೀಡುವ ಉಪದೇಶ ತುಂಬಾ ಫಿಲಾಸಫಿಕಲ್ ಎನ್ನುವಂತಿದೆ. 'ನಿಮ್ಮ ಜೊತೆ ಒಬ್ಬರು, ನೀವು ನೀವು ಅಂತ ಗೌರವ ಕೊಟ್ಟು ಮಾತನಾಡಿಸುವಾಗ, ನೀನು ನೀನು ಅಂತ ಅವರೊಡನೆ ವ್ಯವಹರಿಸೋದು ಎಷ್ಟು ಉಚಿತ ಅಂತ ಸ್ವಲ್ಪ ಚಿಂತಿಸಿರಿ.'[29] ಪ್ರಾಣಿ ಪಕ್ಷಿಗಳು ಇಷ್ಟೊಂದು ತಾರ್ಕಿಕ ಮಾತುಗಳನ್ನಾಡುವುದನ್ನು ಪಂಚತಂತ್ರ ಕಥೆಗಳಲ್ಲಿ ಕಾಣುತ್ತೇವೆ. ಅಲ್ಲಿ ಮನುಷ್ಯನಿಗೆ ನೀತಿ ಹೇಳಲು ಈ ಬಗೆಯ ಫಿಲಾಸಫಿಕಲ್ ಮಾತುಗಳು ಹೊರಬರುತ್ತಿದ್ದರೆ, ಇಲ್ಲಿ ಕತ್ತೆ ಲೇಖಕರನ್ನು ಪ್ರಶ್ನಿಸುವ ಬಗೆ ವ್ಯಕಿಗತ ಗೌರವ ಮರ್ಯಾದೆಗಳು ಪ್ರಾಣಿ ಜಗತ್ತಿಗೂ ಅನ್ವಯಿಸುತ್ತದೆ ಎನ್ನುವುದನ್ನು ಹೇಳುತ್ತಿದೆ. ಆದರೆ ಇದು ಪರೋಕ್ಷವಾಗಿ ಇಂದಿನ ವರ್ಗ ವ್ಯವಸ್ಥೆಯಲ್ಲಿ ಎಲ್ಲರಿಗೂ ತನ್ನದೇ ಆದ ಸ್ಥಾನಮಾನ ಇದೆಯೆಂದು ಹೇಳುವಂತೆ ಪರೋಕ್ಷವಾಗಿ ಧ್ವನಿಸಿದೆ. ಕತೆಗಳ ಮಾದರಿಗಳು ಎಷ್ಟೇ ಹಳೆಯದಾದರೂ ಈ ರೀತಿಯ ಆಶಯಗಳಿಂದ ಅವು ವರ್ತಮಾನೀಕರಿಸಲ್ಪಡುತ್ತವೆ.

ಹೀಗೆ ಆನಂದ ಪಾಟೀಲರು ಮಾನವೀಯ ಸಂವೇದನೆಗಳ ನೆಲೆಯಲ್ಲಿ ತಮ್ಮದೇ ಅಗತ್ಯಗಳಲ್ಲಿ ಪ್ರಾಣಿಗಳನ್ನು, ಪಕ್ಷಿಗಳನ್ನು, ಕೀಟಗಳನ್ನು ತಮ್ಮ ಕಥೆಗಳಲ್ಲಿ ತಂದುಕೊಳ್ಳುವುದು ಹೆಚ್ಚಾಗಿದೆ. ಇದೇ ಅಧ್ಯಾಯದಲ್ಲಿ ಮುಂದೆಯೂ ಈ ಬಗೆಯ ಅವರ ಕತೆಗಳನ್ನು ಚರ್ಚಿಸಲಾಗಿದೆ.

ಯುವ ಲೇಖಕ ಹ.ಸ.ಬ್ಯಾಕೋಡ ಅವರ 'ಆಪರೇಷನ್ ಆನೆಮಲೆ' ಕಾದಂಬರಿಯಲ್ಲಿ ಆನೆಗಳು ಕಾಡಿನಲ್ಲಿ ಹಸಿರಿಲ್ಲದೆ ರೈತರ ಹೊಲದ ಪಕ್ಕದ ಪ್ರದೇಶಕ್ಕೆ ಬಂದು ನಿದ್ರಿಸುತ್ತಿದ್ದವು. ಆ ಸಂದರ್ಭದಲ್ಲಿ ಮರಿ ಆನೆಯೊಂದು ತನ್ನ ಅಮ್ಮನನ್ನು ತಟ್ಟಿ ಎಬ್ಬಿಸಿ, 'ಅಮ್ಮ ಹಸಿವು, ಸಂಜೆ ತಿಂದ ಸಣ್ಣ ಹುಲ್ಲು ಹೊಟ್ಟೆಯಲ್ಲಿ ಇಲ್ಲಮ್ಮಾ ನೀರು ಮಾತ್ರ ಇದೆ'[೫೦] ಎನ್ನುತ್ತದೆ. ಮರಿ ಆನೆ ರಾತ್ರಿ ರೈತರ ಕಬ್ಬಿನ ಗದ್ದೆಗಳಿಗೆ ತೆರಳಿ ರೈತರಿಂದ ಶಿಕ್ಷೆ ಅನುಭವಿಸುತ್ತದೆ. ಮರಿ ಆನೆಯನ್ನು ದೊಡ್ಡ ಮರಕ್ಕೆ ಹಗ್ಗದಿಂದ ಕಟ್ಟಿ ಮಕ್ಕಳಾದಿಯಾಗಿ ಅನೇಕರು ಆನೆಯನ್ನು ಅನೇಕ ಬಗೆಯಲ್ಲಿ ಹಿಂಸಿಸುತ್ತಾರೆ. ನಂತರ ಎಲ್ಲಾ ಆನೆಗಳು ಸೇರಿ ಮರಿ ಆನೆಯನ್ನೂ ಪಾರು ಮಾಡುತ್ತವೆ. ಆದರೆ ನೆಲೆ ಹುಡುಕಿ ಮತ್ತೆ ಮತ್ತೆ ಬೇರೆ ಬೇರೆ ಕಡೆ ಹೊರಡುತ್ತವೆ. ಹ.ಸ.ಬ್ಯಾಕೋಡರ ಈ ಕಾದಂಬರಿಯ ಆಶಯ ಒಂದು ಹೆಜ್ಜೆ ಮುಂದಿರಿಸಿದೆ.

ಕಾಡಿನ ಪ್ರಾಣಿಗಳನ್ನು ಬೇಟೆಯಾಡುವ ಬೇಟೆಗಾರರನ್ನು ಹಿಡಿದುಕೊಡುವ ಸಾಹಸವನ್ನು ಇಲ್ಲಿನ ಜೀವಿಗಳೆಲ್ಲರೂ ಸೇರಿ ಮಾಡುತ್ತಾರೆ. ಈ ಭಾಗವು ಪ್ರಾಣಿಲೋಕದಲ್ಲಿ ಎಂದೂ ಜರುಗದ ಸಂಗತಿಯಂತಿದೆ. ಫ್ಯಾಂಟಸಿ ಕಥೆಗಳ ವಿನ್ಯಾಸದಲ್ಲಿ ಈ ಬಗೆಯದು ತುಂಬಾ ಬಂದಿದೆ. ಆದರೆ ಬದಲಾದ ಕಾಲದ ಆಶಯಗಳಿಗೆ ತಕ್ಕಂತೆ ಪ್ರಾಣಿಗಳನ್ನು ತೊಡಗಿಸಿಕೊಂಡಿರುವುದನ್ನು ಹೊಸಗಾಲದ ಈ ತರಹದ ಕಥೆಗಳ ಪರಿಯನ್ನು ಗುರುತಿಸಬಹುದು. ನಾ.ಡಿಸೋಜರ 'ಹಕ್ಕಿಗೊಂದು ಗೂಡು ಕೊಡಿ' ಕಾದಂಬರಿಯ ಕಥೆಗೂ ಈ ಕಥೆಗೂ ಸ್ವರೂಪದಲ್ಲಿ ವ್ಯತ್ಯಾಸ ಇದೆಯಾದರೂ ಮನುಷ್ಯನಿಂದ ಸಂಕಷ್ಟಗೊಳಗಾದ ಪ್ರಾಣಿ ಪಕ್ಷಿಗಳ ನರಳುವಿಕೆ ಮನುಷ್ಯನಲ್ಲಿ ಬದಲಾಗಬೇಕಾದ ಮೌಲ್ಯಗಳು ಮಾತ್ರ ಒಂದೇ ಆಗಿವೆ. ಹ.ಸ.ಬ್ಯಾಕೋಡ ಅವರದೇ 'ಹಾರದಿರಲಿ ಪ್ರಾಣಪಕ್ಷಿ' ಡಿಸೋಜಾ ಅವರ ಕೃತಿಯಂತೆಯೇ ಹಕ್ಕಿಗಳದೇ ಸಮಸ್ಯೆಯನ್ನು ಇಟ್ಟುಕೊಂಡು, ಆದರೆ ಬೆಂಗಳೂರಿನಂಥ ನಗರದಲ್ಲಿ ಪಡುವ ಪಡಿಪಾಟಲುಗಳನ್ನು ಪ್ರಧಾನವಾಗಿರಿಸಿಕೊಂಡು ಹೆಣೆದಿರುವ ಕತೆಯಾಗಿದೆ.

ಹೀಗೆ ಇನ್ನೂ ಹಲವಾರು ಕೃತಿಗಳು ಈಗ ನೋಡಲು ಸಿಗುತ್ತಿವೆ. ತಯಬ ಅಲಿ ಹೊಂಬಳ ಅವರು ಇತ್ತೀಚೆಗೆ ಉತ್ಸಾಹದಿಂದ ಬರೆಯುತ್ತಿರುವ ಯುವ ಲೇಖಕ. ಇವರು ನೀತಿಕತೆಗಳಿಗೆ ಬಹು ಹೊರಳಿಕೊಂಡಿದ್ದು ಜನಪದ ಮಾದರಿಯನ್ನೇ ಆಶ್ರಯಿಸುತ್ತಾರೆ. ಆದರೆ ಅವುಗಳ ಒಡಲಲ್ಲಿ ಹೊಸಗಾಲದ ಮಕ್ಕಳು ಕಾಣಿಸುವುದು, ಇಂದಿನ ಮಕ್ಕಳಿಗೆ ಹೇಳಬೇಕಾದ ಮಾತುಗಳು ಕಾಣಿಸುತ್ತವೆ. ಅವರ 'ಹುಲಿಬಾಬಾ ಮತ್ತು ನಲವತ್ತು ಪ್ರಾಣಿಗಳು' ಕಾದಂಬರಿ ಮಾದರಿಯಲ್ಲಿ ದೀರ್ಘ ಹರಹನ್ನು ಪಡೆದ ಕತೆಯಾಗಿದೆ. ಹಳೆಯ ಅಲಿಬಾಬಾ ಮತ್ತು ನಲವತ್ತು ಕಳ್ಳರು ಕತೆಯನ್ನೇ

ಹೋಲಿಕೊಂಡು ಸಾಗಿರುವ, ಅದೇ ಜನಪದ ಕತೆಯ ಮಾದರಿಯನ್ನೇ ತಪ್ಪದೆ ಆಶ್ರಯಿಸಿಕೊಂಡು, ಬದುಕಿನಲ್ಲಿನ ಒಳ್ಳೆಯತನ, ದ್ವೇಷ, ಅಸೂಯೆ, ಹೋರಾಟ ಎಲ್ಲವಕ್ಕೆ ಪ್ರಾಣಿಗಳ ಮೂಲಕ ಉತ್ತರ ಹೇಳಿಸುವ ಪ್ರಯತ್ನ ಮಾಡಿದೆ. ಕಾಡಿನ ಕಥೆಯಾಗಿ ಹರಡಿಕೊಂಡಿದೆ. ವಾಸ್ತವ ಮಾದರಿ ಕಥನಗಳಿಗೆ ಪ್ರಾಣಿ ಪಕ್ಷಿಗಳನ್ನು ತೊಡಗಿಸಿಕೊಳ್ಳುವುದು ಇತ್ತೀಚೆಗೆ ಸಾಮಾನ್ಯವಾಗತೊಡಗಿದೆ. ಹಾಗಿದ್ದು ಫ್ಯಾಂಟಸಿ ಸ್ವರೂಪವು ಕಥನಗಳಲ್ಲಿ ಇಣುಕುವಂತೆ ಮಾಡಲು ಅನೇಕ ಲೇಖಕರು ತಮ್ಮದೇ ಬಗೆಯಲ್ಲಿ ಕಥನಗಳನ್ನು ರಚಿಸಿದ್ದು ಕಂಡು ಬರುತ್ತದೆ.

ಮಲೆನಾಡಿನ ಮಕ್ಕಳ ಕಥೆಗಾರ ತಮ್ಮಣ್ಣ ಬೀಗಾರರ ಕಥೆಗಳಲ್ಲಿ ಬರುವ ಪ್ರಾಣಿ ಪಕ್ಷಿಗಳು ಸೂಕ್ಷ್ಮ ನಡೆವಳಿಕೆ ಹೊಂದಿರುತ್ತವೆ. ಅವರ 'ಕತ್ತಲೆ ಭೂತ' ಕಥೆಯಲ್ಲಿ ಕಾಡಿನ ಮಧ್ಯದ ದೊಡ್ಡ ಮರವೊಂದರಲ್ಲಿದ್ದ ಪೊಟರೆಗಳಲ್ಲಿ ವಾಸವಿದ್ದ ಅಳಿಲುಗಳ ತುಂಟ ಮಾತುಗಳು ಇಡೀ ಕಥೆಯ ಚಲನೆಗೆ ಕಾರಣವಾಗುತ್ತವೆ. ಹಾಡಿನ ಸ್ವರೂಪದ ಮಾತುಗಳು ಇವು:

"ಬೆಳಕಿಗೆ ಹೋಗೋಣ

ಬೆಳಕಿಗೆ ಹೋಗೋಣ

ಬೆಳಕನು ನೀಡುವ

ಸೂರ್ಯನಿಗೊಂದು

ಎಲೆಯನು ಮುಚ್ಚೋಣ"[೨೧].

ಅಳಿಲುಗಳ ಈ ಹಾಡನ್ನು ಗುಬ್ಬಿ ಮರಿ ಕೇಳಿ ಹೆದರಿಕೊಳ್ಳುತ್ತದೆ. ಅದನ್ನೇ ನಂಬಿ ಎಲ್ಲಾ ಪ್ರಾಣಿಗಳು ಭೂತ, 'ಕತ್ತಲೆ ಭೂತ' ಎಂದು ಹೆದರಿಕೊಳ್ಳುತ್ತವೆ. ಕುತಂತ್ರಿ ನರಿ ಈ ಸಂದರ್ಭವನ್ನು ಸ್ವಾರ್ಥಕ್ಕೆ ಬಳಸಿಕೊಳ್ಳಲು ಹವಣಿಸಿ ಇಡೀ ಕಾಡಿಗೆ ಬೆಂಕಿಯನ್ನು ಇಡುವಂತೆ ಪ್ರೇರೇಪಿಸುತ್ತದೆ. ಆದರೆ ಇಡೀ ಕಥೆಗೆ ಫ್ಯಾಂಟಸಿತನ ಪ್ರಾಪ್ತವಾಗುವುದು, ಕಾಡಿಗೆ ಕಾಡೇ ಬೆಂಕಿಯಲ್ಲಿ ದಹಿಸುತ್ತಿರುವಾಗ ಧೋ ಧೋ ಎಂದು ಮಳೆ ಸುರಿದು ಕಾಡಿನ ಅಪಾಯ ತಪ್ಪಿದಾಗ. ಜನಪದ ಕಥೆಗಳಲ್ಲಿಯಂತೆ ನಿಸರ್ಗವು ನಿರ್ಗತಿಕರ ಕಷ್ಟಕ್ಕೆ ನೆರವಾಗುವ ತಂತ್ರ ಇಲ್ಲಿ ಲೇಖಕರು ಬಳಸಿಕೊಂಡಿದ್ದಾರೆ.. ನರಿಗೆ ಶಿಕ್ಷೆ ಆಗುತ್ತದೆ. 'ವಿವೇಚನೆ ಮಾಡದೆ ಯಾವುದನ್ನೂ ಮಾಡಲು ಹೋಗಬೇಡಿ ಎಂದು ಸಿಂಹ ತನ್ನ ಪ್ರಜೆಗಳಿಗೆ ಕಿವಿ ಮಾತು ಹೇಳಿತು'[೨೨].

ಇಲ್ಲಿ ನರಿಯ ಕುತಂತ್ರತನ, ಅಕಾಲಿಕ ಮಳೆ, ಸಿಂಹದ ವೈಚಾರಿಕ ಸಲಹೆ ಇವು ಹೊಸಗಾಲದ ಫ್ಯಾಂಟಸಿ ಕಥೆಗಳಲ್ಲಿ ಕಾಣಿಸುವ ಇಂದಿನ ಅಗತ್ಯದ ಹವಣುಗಳು. ನರಿಯ ಕುತಂತ್ರ ಹಳೆ ಮಾದರಿಯ ಕಥನವನ್ನು ನೆನಪಿಸುತ್ತದೆ. ಜನಪದ ಕಥೆಗಳಲ್ಲಿ ಅಸಹಾಯಕರಿಗೆ ಸಹಾಯವಾಗಿ ಬರುವ ದೈವ, ನಿಸರ್ಗ, ಮಂತ್ರಗಳಂತೆ ಇಲ್ಲಿ ಮಳೆ ಬರುತ್ತದೆ. ಇವರೆಡರ ಮಧ್ಯೆ ಕಥೆಗಳ ಹೊಸ

ಸ್ವರೂಪಕ್ಕೆ ತಕ್ಕಂತೆ ಪ್ರಾಣಿಗಳು ವೈಚಾರಿಕ ಸಲಹೆ ನೀಡುವಷ್ಟು ಮಟ್ಟಕ್ಕೆ ಬೆಳೆದಿರುವುದು ಬದಲಾದ ಕಥನ ಮಾದರಿಗಳಿಗೆ ಉದಾಹರಣೆಯಾಗಿದೆ. ಹೊಸಗಾಲದ ಕತೆಗಳ ಫ್ಯಾಂಟಸಿಯು ಅತಿವಾಸ್ತವತೆಯನ್ನು ಪರಿಚಯಿಸುವುದಷ್ಟೇ ಅಲ್ಲ; ಮಕ್ಕಳನ್ನು ಚಿಂತನಶೀಲರನ್ನಾಗಿ ಮಾಡಲು ಪ್ರಯತ್ನಿಸುತ್ತಿರುತ್ತವೆ ಎನ್ನುವುದನ್ನು ತಮ್ಮಣ್ಣರ ಈ ಕತೆ ಅಭಿವ್ಯಕ್ತಿಸುತ್ತದೆ.

೭.೩. ವೈಜ್ಞಾನಿಕ ಕಥನಗಳು ಮತ್ತು ಫ್ಯಾಂಟಸಿ

ವೈಜ್ಞಾನಿಕ ಕತೆಗಳು ನಮ್ಮ ನಡುವಿಲ್ಲದ ಸಂಭವನೀಯತೆಗಳನ್ನು ಸೃಷ್ಟಿಸಲು ತೊಡಗುತ್ತವೆ. ವೈಜ್ಞಾನಿಕ ಕತೆಗಳಲ್ಲಿ ಕಂಡು ಬರುವ ವಾಸ್ತವ ಸಂಗತಿಯೇ ಅದಾಗಿರುತ್ತದೆ. ಅದರಲ್ಲೂ ಮುಂದಣ ಭವಿಷ್ಯವನ್ನು ಒಳಗೊಳ್ಳುವ ಕತೆಗಳು ಅಗತ್ಯವಾಗಿ ಈ ಬಗೆಯ ಅಸಂಭವನೀಯತೆಗಳನ್ನು ತಮ್ಮೊಡಲಲ್ಲಿ ಇಟ್ಟುಕೊಳ್ಳುತ್ತವೆ. ಹಾಗೆಲ್ಲಾ ಇಟ್ಟುಕೊಳ್ಳುವಾಗಲೂ ಅವು ಈಗಾಗಲೇ ನಡೆದಿರುವ ಸಂಶೋಧನೆಗಳನ್ನು ಆಧಾರವಾಗಿಟ್ಟುಕೊಂಡು ಅದರ ಮುಂದುವರಿಕೆಯಾಗಿ ತಮ್ಮದೇ ಊಹಾಲೋಕವನ್ನು ಬೆಳೆಸಿರುತ್ತವೆ. ಹಾಗಾಗಿ ಇತರೇ ಕತೆಗಳ ಫ್ಯಾಂಟಸಿಗೂ ಇಲ್ಲಿನ ಫ್ಯಾಂಟಸಿಗೂ ಅಂತರವಿರುತ್ತದೆ. ನೇರವಾಗಿ ವಿಜ್ಞಾನ ಕಲಿಸುವ ಅನೇಕರು ಈ ಬಗೆಯ ಕತೆಗಳಿಂದ ಪ್ರಯೋಜನವಾಗಲಾರದು ಎನ್ನುವ ಅಭಿಪ್ರಾಯ ಉಳ್ಳವರೂ ಇದ್ದಾರೆ. ವೈಜ್ಞಾನಿಕ ಕತೆಗಳು ವಿಜ್ಞಾನ ಕಲಿಕೆಯ ವಾತಾವರಣ ಮೂಡಿಸುವುದಕ್ಕಿಂತ ಹೆಚ್ಚಾಗಿ ವೈಜ್ಞಾನಿಕ ಆವಿಷ್ಕಾರಗಳ ಆಧಾರಗಳ ಮೇಲೆ ಮನುಷ್ಯ ಅನುಭವಿಸುವ ನಾನಾ ಬಗೆಯ ಅನುಭವ ಲೋಕವನ್ನು ಸೃಷ್ಟಿಸುವುದಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡುತ್ತವೆ. ಹಾಗಾಗಿಯೇ ಬೇರೆ ಗ್ರಹದ ಜೀವಿಗಳ ಕುರಿತು ಇನ್ನೂ ವೈಜ್ಞಾನಿಕ ಸಂಶೋಧನೆಗಳಲ್ಲಿ ನಿಖರವಾದ ಮಾಹಿತಿ ಇಲ್ಲದಾಗಲೂ ವೈಜ್ಞಾನಿಕ ಕತೆಗಳಲ್ಲಿ ಅನ್ಯಲೋಕದ ಜೀವಿಗಳು ಕಾಣಸಿಕೊಂಡ ಪ್ರಸಂಗಗಳು ಈಗಾಗಲೇ ಸಾಕಷ್ಟು ಬಂದಿವೆ.

ಮಾಂತ್ರಿಕಲೋಕ, ಜಾದೂ ತಂತ್ರಗಳೂ ಹೀಗೇ ಅಲ್ಲಿಯ ಏನೇ ಓದುಗರನ್ನು ಚಕಿತರನ್ನಾಗಿ ಮಾಡುವ ಸಂಗತಿಗಳು ಸಂಭವಿಸಿದರೂ ಆ ಬಗೆಯ ತಂತ್ರದ ವಾಸ್ತವ ಪರಿಣಾಮಗಳೇ ಅವಾಗಿರುತ್ತವೆ. ಜೆ.ಕೆ.ರೌಲಿಂಗ್ ಅವರ 'ಹ್ಯಾರಿಪಾಟರ್' ಕಾದಂಬರಿಯಲ್ಲಿ 'ಹ್ಯಾರಿ' ಸೇರಿಕೊಂಡಿದ್ದ ಹಾಗ್ವರ್ಟ್ಸ್ ಎನ್ನುವ ಹೆಸರಿನ ಶಾಲೆಯು ಮಾಂತ್ರಿಕ ಶಾಲೆಯೇ ಆಗಿತ್ತು. ಅಲ್ಲಿ ಅವರೆಲ್ಲ ಕಲಿಯುತ್ತಿದ್ದುದು ಆ ವಿದ್ಯೆಯನ್ನೇ. ಅಲ್ಲಿನ ವೈಚಿತ್ರ್ಯಗಳು ಅವರ ಮುಂದೆ ನಡೆಯುತ್ತಿದ್ದ ವಾಸ್ತವಗಳೇ ಆಗಿರುತ್ತಿದ್ದವು. ಹಾಗಿದ್ದೂ ಈ ವೈಜ್ಞಾನಿಕ ಕತೆಗಳ ಮಾಯಾಜಾಲವನ್ನು ಫ್ಯಾಂಟಸಿಯಲ್ಲಿ ಗಣಿಸುವುದು ಸಾಮಾನ್ಯವಾಗಿ ಕಾಣುತ್ತಿದೆ. ಆ ನಿಟ್ಟಿನಲ್ಲಿಯೇ ಇಲ್ಲಿಯೂ ನಮ್ಮ ನಡುವಿನ ಕನ್ನಡದ ಮಕ್ಕಳ ಕಥಾ ಜಗತ್ತನ್ನು ಇಟ್ಟುಕೊಂಡು ಫ್ಯಾಂಟಸಿ ಸ್ವರೂಪವನ್ನು ವಿಶ್ಲೇಷಣೆ ಮಾಡಲಾಗಿದೆ.

೭.೩.೧. ವೈಜ್ಞಾನಿಕ ಕಥನದ ಹಲವು ಸಾಧ್ಯತೆಗಳು

ವೈಜ್ಞಾನಿಕ ಫ್ಯಾಂಟಸಿ ಕಥನಗಳಲ್ಲಿ ಹಲವಾರು ಬಗೆಯವು ಕಾಣುತ್ತವೆ. ಇವನ್ನು ವಿವಿಧ ಪ್ರಕಾರಗಳಾಗಿ ಗುರುತಿಸುವಲ್ಲಿ ಒಂದೇ ಅಭಿಪ್ರಾಯ ಕಾಣುವುದಿಲ್ಲ. ಅಧ್ಯಯನದ ದೃಷ್ಟಿಯಿಂದ

ಕೆಲವನ್ನು ಗುರುತಿಸಬಹುದು;[೨೩] ಮುಂತಾದ ನಾನಾ ಬಗೆಯಾಗಿ ಇವು ಕಂಡು ಬರುತ್ತವೆ. ಹೀಗೆ ಕಾಣಬವಾಗಲೂ ಅವು ಒಂದರೊಳಗೊಂದು ಸೇರಿಕೊಂಡ ಹಾಗೇ ಇರುತ್ತವೆ ಎನ್ನುವುದು ಅವುಗಳ ಹೆಸರುಗಳೇ ಸೂಚಿಸುತ್ತವೆ. ಭಾರತೀಯ ಪರಿಸರದಲ್ಲಿ ಈ ಕುರಿತು ಹೆಚ್ಚು ಬರವಣಿಗೆ, ಅಧ್ಯಯನ ನಡೆದಿಲ್ಲ. ಆಸಕ್ತರು ಅಲ್ಲಲ್ಲಿ ಕಾಣಸಿಗುತ್ತಾರೆ. ರಾಜಶೇಖರ ಭೂಸನೂರಮಠರೇ ರಾಷ್ಟ್ರಮಟ್ಟದ ಸಂಸ್ಥೆಯನ್ನು ಹುಟ್ಟುಹಾಕಿದ್ದರು. ಮಕ್ಕಳಿಗೆ ಪ್ರತ್ಯೇಕವಾಗಿ ಇರುವ ಕೃತಿಗಳಲ್ಲಿ ಸಾಮಾನ್ಯವಾಗಿ ಮಕ್ಕಳು ಪಾತ್ರಗಳಾಗಿ ಕಾಣುವುದು ಇರುತ್ತದೆ. ಕಥೆಗಳಲ್ಲಿನ ಮಕ್ಕಳು ಹೊಸ ಆವಿಷ್ಕಾರಗಳಿಗೆ ತೆರೆದುಕೊಳ್ಳುವುದಾಗಲಿ, ಅಚ್ಚರಿಯಿಂದ ಏನನ್ನೋ ಅನುಭವಿಸುವುದು, ತಾವೇ ಸಾಹಸದಿಂದ ಏನೆಲ್ಲಾ ಸೃಷ್ಟಿಸಲು ಮುಂದಾಗುವುದು ಹೀಗೆ ನಾನಾ ಬಗೆಯಲ್ಲಿ ಲೇಖಕರು ಸೃಷ್ಟಿಸಿರುವುದು ಕಂಡು ಬರುತ್ತವೆ.

ಕನ್ನಡದಲ್ಲಿ ಮಕ್ಕಳಿಗಾಗಿ ಕೆಲವರು ವೈಜ್ಞಾನಿಕ ಕತೆಗಳನ್ನು ಬರೆಯುತ್ತಾ ಬಂದಿದ್ದಾರೆ. ಸಾಮಾನ್ಯವಾಗಿ ಇವರಲ್ಲಿ ಶಾಲೆಗಳಲ್ಲಿ ವಿಜ್ಞಾನ ಕಲಿಸುತ್ತಿರುವವರು ಅಥವಾ ವಿಜ್ಞಾನ ವಿಷಯಗಳಲ್ಲಿ ಹೆಚ್ಚಿನ ಅಧ್ಯಯನ ಕೈಕೊಂಡವರು ಕಾಣಸಿಗುತ್ತಾರೆ. ತಿರುಮಲಮ್ಮ, ಗಾಯತ್ರಿಮೂರ್ತಿ, ಎಲ್.ಎಸ್. ಶ್ಯಾಮಸುಂದರಶರ್ಮ ಮುಂತಾದವರನ್ನು ಹರಸರಿಸಬಹುದು. ಇವರು ಸಾಮಾನ್ಯವಾಗಿ ಏನೇ ಕತೆಯ ಹಂದರ ಹುಡುಕಿದರೂ, ಅದು ವಾಸ್ತವ ಮಾದರಿಯದು, ಇಲ್ಲವೆ ಜನಪದ ಮಾದರಿಯದು ಯಾವುದೇ ಆದರೂ ಅಲ್ಲಿ ವಿಜ್ಞಾನ ಕಲಿಕೆಗೆ ಅನುಕೂಲವಾಗುವಂತೆ ಅದನ್ನು ಬಳಸಿಕೊಳ್ಳಲಾಗುತ್ತದೆ. ಹಾಗಾಗಿ ಇಂಥ ಕತೆಗಳಲ್ಲಿ ವೈಜ್ಞಾನಿಕ ಕತೆಗಳ ಫ್ಯಾಂಟಸಿ ವಿಶೇಷವಾಗಿ ಕಾಣಸಿಗುವುದಿಲ್ಲ. ಇನ್ನೂ ಕೆಲವರು ಒಂದಿಷ್ಟೆಲ್ಲ ಸೊಗಸಿನ ಫ್ಯಾಂಟಸಿಯ ಕಥಾಹಂದರ ಹೆಣೆದು ಇಡಲು ಬಯಸುತ್ತಾರೆ, ಅವರಾದರೂ ವಿಜ್ಞಾನ ಸಂಗತಿಗಳನ್ನು ಮಕ್ಕಳಿಗೆ ಮುಟ್ಟಿಸಲು ಬಯಸುವವರೇ ಆದರೂ ಅಲ್ಲಿ ಸೊಗಸಾದ ಕಾಲ್ಪನಿಕ ಸಂಗತಿಯನ್ನು ಕಾಣುತ್ತೇವೆ. ನಾಗೇಶ ಹೆಗಡೆ, ಶಾಂತಾರಾಮ ಸೋಮಯಾಜಿ ಮುಂತಾದವರು ಈ ಬಗೆಯಲ್ಲಿ ಬರೆದಿರುವುದಿದೆ.

ಶ್ರೀನಿವಾಸ ಎನ್. ಉಡುಪರ 'ಗೂಬಜ್ಜಿಯ ಗೊರಕೆ' ಕತೆಗಳ ಸಂಕಲನ ಮಕ್ಕಳಿಗೆ ಒಳ್ಳೇ ಕಲ್ಪನೆಯ ಹಂದರದ, ಜನಪದ ಕತೆಗಳ ಮಾದರಿಯದೆಂದು ಅನಿಸುತ್ತಾ ನಮ್ಮ ಸುತ್ತಲಿನ ಸಂಗತಿಗಳನ್ನು ತಿಳಿದುಕೊಳ್ಳಲು ಬಯಸುವಂಥ ಸಾಮಗ್ರಿಯನ್ನು ಹೊಂದಿದೆ. ಇಲ್ಲಿ, ಆಮೆಗೆ ದಪ್ಪನೆಯ ಹೊದಿಕೆ ಬಂದಿದ್ದು ಹೇಗೆ, ಎಮ್ಮೆಯ ಮೇಲೆ ಬೆಳ್ಳಕ್ಕಿ ಕೂರುವುದರ ಹಿಂದಿನ ಪ್ರಕೃತಿಯ ಅನುಕೂಲದ ಗುಟ್ಟು, ಗಾಳಿಯಲ್ಲಿ ಮನೆ ತಪ್ಪಿಸಿಕೊಂಡ, ಕಾಲು ನೋವು ಮಾಡಿಕೊಂಡ ಪುಟಾಣಿ ಇರುವೆ ಮನೆ ಸೇರಲು ದಾರಿಯಲ್ಲಿ ಸಿಗುವ ನಾನಾ ಬಗೆಯ ಕೀಟಗಳನ್ನು ವಿನಂತಿಸಿಕೊಳ್ಳುತ್ತಾ, ಅವುಗಳ ಸಹಾಯ ಪಡೆಯುತ್ತಾ, ಅದರೆ ಅವುಗಳದೇ ಆದ ವಿಶಿಷ್ಟ ದೇಹ, ನಡಿಗೆಯ ರೀತಿಗಳಿಂದ ಗೋಳಾಟವೊ ಗೋಳಾಟವಾಗಿ ಅಂತೂ ಮನೆ ತಲುಪುವ ಕತೆ ಒಳ್ಳೇ

ಫ್ಯಾಂಟಸಿಯ ಕತೆಯನ್ನೇ ಉಳ್ಳದ್ದಾದರೂ ಆದರ ಉದ್ದೇಶ ಮಕ್ಕಳಿಗೆ ವಿವಿಧ ಕೀಟಗಳ ರೀತಿಗಳನ್ನು ಪರಿಚಯಿಸುವ ವಿಜ್ಞಾನದ ಅಂಗದಂತೆ ಕಥೆಗಳು ವರ್ತಿಸುತ್ತವೆ.

ಪ್ರಾಣಿ ಪಕ್ಷಿ, ಕೀಟಗಳನ್ನು ಪರಿಚಯಿಸುತ್ತಾ ಅವುಗಳ ಜೀವನದ ಸೂಕ್ಷ್ಮ ಭಾವನಾತ್ಮಕ ಅಭಿವ್ಯಕ್ತಿಯನ್ನು ಈ ಕಥೆಗಳು ವ್ಯಕ್ತಪಡಿಸುತ್ತವೆ. ತೂರಾಡಿಕೊಂಡು ಬರುತ್ತಿದ್ದ ಉದ್ದ ಕಾಲಿನ ಜೇಡವೊಂದನ್ನು ಇರುವೆ ಸಹಾಯವನ್ನು ಹೀಗೆ ಕೇಳುತ್ತದೆ; 'ಅಕ್ಕಾ, ಜೇಡಕ್ಕಾ, ಕಾಲು ತುಂಬಾ ನೋಯ್ತಾ ಇದೆ. ಮನೆಗೆ ಹೋಗ್ಬೇಕು... ಸಹಾಯ ಮಾಡ್ತೀಯಾ, ಪ್ಲೀಸ್..' ಎಂದು ಕೈಜೋಡಿಸಿ ಕೇಳಿಕೊಂಡಿತು.'[೩೪]

ವೈಜ್ಞಾನಿಕ ವಿಷಯ ಹೇಳುವಾಗ ಫ್ಯಾಂಟಸಿ ಕಥನಾತ್ಮಕ ಅಂಶ ಬೆರೆತರೆ ಮಾತ್ರ ಕಥೆಯ ಲಾಲಿತ್ಯ ಹೆಚ್ಚುತ್ತದೆ. 'ಗೂಬಜ್ಜಿಯ ಗೊರಕೆ' ಕಥೆಯಲ್ಲಿ ಮಲಗಿರುವ ಗೂಬಜ್ಜಿಯನ್ನು ಎಬ್ಬಿಸಿ ಗೊರಕೆಯ ಕಾಟದಿಂದ ತಪ್ಪಿಸಿಕೊಳ್ಳಲು, ಮೊಲದ ಮರಿ ಮಿಂಟೂ ಜೊತೆಗೆ ಕಾಡಿನ ಎಲ್ಲಾ ಜೀವಿಗಳು ಒಟ್ಟಾಗಿ ತಮ್ಮ ಶಬ್ದ ಕೊಡುಗೆಯನ್ನು ನೀಡಿ ಕಥೆಯ ಓಘಕ್ಕೆ ಸಹಕರಿಸಿವೆ. ಚಿಲ್ಟಾರಿ ಅಳಿಲೊಂದು ನಿಸರ್ಗದ ಬದಲಾವಣೆಗಳ ಸಹಾಯ ಪಡೆದುಕೊಂಡು ಗೂಬಜ್ಜಿಯ ಗೊರಕೆಯನ್ನು ತಪ್ಪಿಸಲು ಪ್ರಯತ್ನಿಸುತ್ತದೆ. ಅದರಂತೆ ಎಲ್ಲಾ ಪ್ರಾಣಿಗಳು ತಮ್ಮ ತಮ್ಮ ಪಾಲಿನ ಕೆಲಸ ನಿರ್ವಹಿಸುತ್ತವೆ. 'ಸ್ವಲ್ಪ ಹೊತ್ತಿನಲ್ಲೇ ಮೋಡ ಸೂರ್ಯನನ್ನು ಪೂರ್ತಿ ಮುಚ್ಚಿ ಬಿಟ್ಟಿತು. ಎಲ್ಲಾ ಕಡೆಯೂ ಕತ್ತಲು ! ಅದನ್ನೇ ಕಾಯುತ್ತಿದ್ದ ಅಳಿಲು ಕಪ್ಪೆ ಜೀರುಂಡೆಗಳಿಗೆ ಸೂಚನೆ ಕೊಟ್ಟಿತು. ತಕ್ಷಣವೇ ಕಪ್ಪೆಗಳು– ಮಳೆಗಾಲದ ರಾತ್ರಿಗಳಲ್ಲಿ ಕೂಗುವ ಹಾಗೆ ಟ್ರೊಂಯ್ ಡ್ರೊಂಯ್... ಟ್ರೊಂಯ್ ಡ್ರೊಂಯ್...'ಎಂದು ಸಮೂಹ ಸಂಗೀತ ಶುರುಮಾಡಿದವು. ಜೀರುಂಡೆಗಳೂ ಜಿರ್ರೋೕಂಂಂ...' ಎಂದು ಶೃತಿ ಮೀಟಲು ಪ್ರಾರಂಭಿಸಿದವು. ಗೊರಕೆ ಹೊಡೆಯುತ್ತಿದ್ದ ಗೂಬಜ್ಜಿಗೆ ಎಚ್ಚರವಾಯಿತು.'[೩೫]

ಸಣ್ಣ ಅಳಿಲೊಂದು ಯಾರಿಂದಲೂ ಬಗೆ ಹರಿಯದ ಸಮಸ್ಯೆಗೆ ಪರಿಹಾರವನ್ನು ಹುಡುಕಲು ಹೊರಟು ಯಶಸ್ವಿಯಾಗುತ್ತದೆ. ಕ್ಷುಲ್ಲಕ ಜೀವಿಯೊಂದು ಹಿರಿದಾದ ಸಮಸ್ಯೆಯನ್ನು ಬಿಡಿಸುವುದು ಜನಪದ ಫ್ಯಾಂಟಸಿ ಕಥೆಗಳಲ್ಲಿ ಕಾಣುತ್ತೇವೆ. ಆದರೆ ಇಲ್ಲಿ ಪ್ರಾಣಿಲೋಕದ ಸಹಜ ನಡೆವಳಿಕೆಗಿಂತ ಭಿನ್ನವಾದ ಮಾನುಷವಾದ ವರ್ತನೆ ಗೊರಕೆಯನ್ನು ತಪ್ಪಿಸಲು ಅಳಿಲು ಪರಿಹಾರ ಹುಡುಕುವ ಹಾದಿಯಲ್ಲಿ ಮಕ್ಕಳಿಗೆ ಪ್ರಾಣಿ ಪಕ್ಷಿಗಳ ಶಬ್ದವನ್ನು ಪರಿಚಯಿಸುವ ಕಾರ್ಯವೂ ನಡೆದಿದೆ. ಹಾಗಾಗಿ ಈ ಕಥೆಗೆ ವೈಜ್ಞಾನಿಕ ಸಾಧ್ಯತೆಯೂ ಸೇರಿಕೊಳ್ಳುತ್ತದೆ.

ನೀಲಾಂಬರಿ ಅವರು ಬರೆದ ಕತೆಗಳಲ್ಲಿ ನಮ್ಮ ನಡುವಿನ ಕೆಲವೆಲ್ಲ ವ್ಯಂಗ್ಯಗಳನ್ನು ಬಳಸಿಕೊಂಡು ರಚಿಸಿದ 'ಅಂತರಿಕ್ಷ ಷಟಲ್ ಅಂಗಾರಕ' ಎನ್ನುವ ಕತೆಯೊಂದಿದೆ. ಅಲ್ಲಿ ಮಂಗಳಗ್ರಹದಲ್ಲಿ ನಡೆದ ವಿಜ್ಞಾನಿಗಳ ಸಭೆಯನ್ನು ಮುಗಿಸಿ ಈ ಷಟಲ್ ಭೂಮಿಗೆ ಮರಳುತ್ತಿತ್ತು. ವೈಕುಂಠದ ನಿಲ್ದಾಣದಲ್ಲಿ ಸೂರ್ಯಮುಖಿ ಪತ್ರಿಕೆಯ ಸಂಪಾದಕ ನಾರದ ಹತ್ತಿಕೊಂಡ. ಈ

ನಾರದ ನಮ್ಮ ಪುರಾಣ ಪಾತ್ರವೇ. ವಿಜ್ಞಾನಿಗಳಂಥವರೂ ಪಡುವ ಬವಣೆ, ಎದುರಿಸುವ ಗೊಂದಲಗಳನ್ನು ಇಲ್ಲಿ ಹಾಸ್ಯಕ್ಕೆ ಬಳಸಿಕೊಳ್ಳಲಾಗಿದೆ. ನಾರದ ಎಲ್ಲವನ್ನೂ ಜಾಲಾಡಿಬಿಡುವ ಪತ್ರಕರ್ತ. ತಮ್ಮದೇ ಅಹಮಿಕೆಯಲ್ಲಿದ್ದ ಅವರ್‍ಯಾರೂ ಈ ನಾರದನನ್ನು ಕಣ್ಣೆತ್ತಿ ಸಹ ನೋಡಲು ಹೋಗಲಿಲ್ಲ. ನಾರದನಿಗೆ ಬೇಜಾರಾಯಿತು. ಇದ್ದಕ್ಕಿದ್ದ ಹಾಗೆ ಷಟಲ್‌ದಲ್ಲಿ ಏನೋ ತಂತ್ರಜ್ಞಾನ ದೋಷ ಉಂಟಾಗಿ ಆ ಕುರಿತು ಎಲ್ಲರಿಗೂ ಎಚ್ಚರಿಕೆ ಕೊಡಲಾಯಿತು.

ಭೂಮಿಗೆ ಹತ್ತಿರವೇ ವೇಗದಿಂದ ನುಗ್ಗುತ್ತಿದ್ದ ಷಟಲ್ ತನ್ನ ರಾಕೆಟ್ ಸ್ಫೋಟಿಸದಿದ್ದರೆ ಷಟಲ್ ಭೂಮಿಯ ಗುರುತ್ವಾಕರ್ಷಣ ವಲಯ ಪ್ರವೇಶಿಸದೆ ಅಂತರದಲ್ಲಿ ಸುತ್ತು ಹಾಕಿಕೊಂಡು ಇರಬೇಕಾಗುತ್ತಿತ್ತು. ವಿಜಾನಿಗಳ ತಲೆ ಓಡುತ್ತಿತ್ತು. ಒಬ್ಬ ಮಹಿಳಾ ವಿಜ್ಞಾನಿ ಮದ್ಯವನ್ನು ಬಳಸಿದರೆ ಕೆಲಸವಾಗಬಹುದು ಎಂದು ಸಲಹೆ ನೀಡಿದಳು. ಆದರೆ ಷಟಲ್‌ನಲ್ಲಿ ಇದ್ದ ಎಲ್ಲ ಮದ್ಯವನ್ನಾಗಲೇ ಎಲ್ಲರೂ ಗುಟುಕರಿಸಿ ಆಗಿಬಿಟ್ಟಿತ್ತು. ಎಲ್ಲಾ ಕೈಚೆಲ್ಲಿ ಕೂಡುವ ಪ್ರಸಂಗ. ಆಗ ನಾರದನಿಗೆ ತಕ್ಷಣ ಹೊಳೆಯಿತು. ವಸಂತ ಸಂಭ್ರಮದಲ್ಲಿ ವೈಕುಂಠದಲ್ಲಿ ಅವನಿಗೆ ಗೆಳೆಯನೊಬ್ಬ ದ್ರಾಕ್ಷಾರಸ ನೆನಪಿಗೆ ನೀಡಿದ್ದ. ಅದು ನಾರದರ ಬಳಿ ಇತ್ತು. ನಾರದ ಈಗ ಅದನ್ನು ಉಪಾಯವಾಗಿ ಬಳಸಿಕೊಂಡ. ಉಪಾಯ ಫಲಿಸಿತು. ಎಲ್ಲ ಬದುಕಿಕೊಂಡರು. ಸೂರ್ಯಮುಖಿ ಪತ್ರಿಕೆ ರೋಚಕ ಕಥೆಯನ್ನು ದೊಡ್ಡದಾಗಿ ಪ್ರಕಟಿಸಿತು! ಇದೊಂದು ಮೋಜಿನ ಪ್ರಸಂಗವಾಗಿ ಕತೆಯ ರೂಪತಳೆದುದರ ಜೊತೆಗೆ ವೈಜ್ಞಾನಿಕ ಸಂಗತಿಯನ್ನೂ ಒಡಲಲ್ಲಿ ಇಟ್ಟುಕೊಂಡಿದೆ. ಕಥೆ ವೈಜ್ಞಾನಿಕ ಹಿನ್ನೆಲೆಯಲ್ಲಿ ಸಾಗುತ್ತಿದ್ದರೂ ಭಾರತೀಯರು ಪುರಾಣ, ಪರಂಪರೆಯ ಪ್ರಭಾವಗಳನ್ನು ಅಷ್ಟು ಸುಲಭವಾಗಿ ಬಿಟ್ಟುಕೊಡುವುದಿಲ್ಲ. ಈ ಮೇಲೆ ವಿಶ್ಲೇಷಣೆ ಮಾಡಿದ ಕಥೆಯಲ್ಲಿ ನಾರದನ ಆಗಮನ ಇದಕ್ಕೆ ಪುಷ್ಟೀಕರಿಸುತ್ತದೆ.

ನೀಲಾಂಬರಿ ಅವರ 'ಅಶ್ವಶಕ್ತಿ ೫೦೦೦' ಕಥೆಯಲ್ಲಿ ಸೂರ್ಯ ಕೂಡ 'ಅಶ್ವಶಕ್ತಿ ೫೦೦೦' ಎನ್ನುವ ರಾಕೆಟ್ ಬಳಸಿಕೊಂಡು ಒಂದಿಷ್ಟು ರಜೆ ಅನುಭವಿಸುವ ಸಾಧ್ಯತೆಯನ್ನು ಇಟ್ಟು ಮೋಜು ಹುಟ್ಟಿಸುತ್ತದೆ. ಈ ರಾಕೆಟ್‌ನಲ್ಲಿ ರೋಬೋಟ್ ಸೂರ್ಯ ಇದ್ದು ಅದು ಎಲ್ಲ ಸೂರ್ಯನ ಕೆಲಸ ನಿರ್ವಹಿಸಬಲ್ಲದು. ಅಂಥದನ್ನು ವಿಜ್ಞಾನಿಗಳು ಕಂಡುಹಿಡಿದುದರ ಕಲ್ಪನೆ ಇಲ್ಲಿದೆ. ಸೂರ್ಯನ ಕುದುರೆಗಳು ಸೂರ್ಯನ ಐಡಿಯಾ ಕೇಳಿ ಅವಾಕ್ಕಾಗುತ್ತವೆ.

ಶಾಂತಾ ನಾಗರಾಜ್ ಅವರ 'ಕಾಗಜ್ಜನ ನ್ಯಾಯ' ಇದೇ ಬಗೆಯ ನಮ್ಮ ಸುತ್ತಲಿನ ಪರಿಸರದ ಕಾಳಜಿಯ ಸುಂದರ ಕಥಾ ಹಂದರಗಳನ್ನ ಹೊಂದಿರುವುದು. ಇಲ್ಲಿ ಹತ್ತು ಕತೆಗಳಿದ್ದು, ಎಲ್ಲವೂ ಕಾಗೆ ಹಾಗೂ ಇತರ ಹಲವು ಪಕ್ಷಿಗಳ ಸುತ್ತಲೇ ಹೆಣೆದವು. ಇಲ್ಲಿಯೂ ಪಕ್ಷಿಗಳು ಮಾತನಾಡುತ್ತಾ, ಒಂದಾವುದೋ ಪ್ರಸಂಗದ ಪಾತ್ರಗಳಾಗುತ್ತಾ, ಬದುಕಿನ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾ ದಾರಿ ಕಂಡುಕೊಳ್ಳುವ ಬಗೆ ಕಾಣುತ್ತದೆ. ಎಲ್ಲದರ ಹಿಂದೆಯೂ ನಮ್ಮ ಪರಿಸರವು ಮನಷ್ಯನ ಲಾಲಸೆಯಲ್ಲಿ ಹಾಳಾಗುತ್ತಿರುವುದು, ಅದರಿಂದ ಪಕ್ಷಿಸಂಕುಲ ನಲುಗುತ್ತಿರುವುದು,

ಬದುಕಲು ಏನೋ ದಾರಿ ಕಂಡುಕೊಳ್ಳುತ್ತಿರುವುದು ಇಲ್ಲಿ ಕಾಣುತ್ತದೆ. ಉದಾಹರಣೆಗೆ ಇಲ್ಲಿನ 'ಕಾಗಜ್ಜನ ನ್ಯಾಯಾಲಯ'ದಲ್ಲಿ ಜಪಾನಿನ ದೇಶದಲ್ಲಿನ ಈಚೆಗ ಕಂಡು ಬಂದ ವಾಸ್ತವ ವಿದ್ಯಮಾನವನ್ನೇ ಆಧರಿಸಿಕೊಂಡು ಇಲ್ಲಿ ಕಾಗೆಗಳ ಸುತ್ತ ಪ್ರಸಂಗ ಹುಟ್ಟಿಕೊಂಡಿದೆ.

'ಕಾಗೆಗಳಿಗೆ ಎಲ್ಲೂ ಮರಗಳೇ ಸಿಗದೆ, ಹಾರಿ ಹಾರಿ ಸುಸ್ತಾಗಿ ಕೊನೆಗೆ ನಗರದಲ್ಲಿಯೇ ಅನಿವಾರ್ಯವಾಗಿ ಒಂದು ಸುಂದರ ಗಾರ್ಡನ್ನಿನಲ್ಲಿನ ಮರಗಳಲ್ಲಿ ಎಲ್ಲರ ಹಿರಿಯ ಕಾಗಜ್ಜನ ಸಲಹೆಯಂತೆ ವಾಸ ಹೂಡುತ್ತವೆ. ಅಲ್ಲಿ ಹುಲ್ಲಿನಲ್ಲಿ ಅವಕ್ಕೆ ಬಸವನ ಹುಳು ಬಿಟ್ಟರೆ ಬೇರೆ ಆಹಾರವಿಲ್ಲ. ಎಲ್ಲವಕ್ಕೆ ಅವನ್ನೇ ತಿಂದು ತಿಂದು ಬೇಸರ. ಹಿರಿಯವು ಹೇಗೋ ಅವನ್ನು ನೆಚ್ಚಿಕೊಂಡವು. ಕಿರಿಯವು ಕಿರಿಕಿರಿ ಮಾಡಿಕೊಳ್ಳತೊಡಗಿದವು. ಆದರೆ ಅವು ವಾಸವಾಗಿದ್ದ ಆ ಪರಿಸರದಲ್ಲಿ ಆಕ್ರೋಟ್ ವಾಲ್‌ನಟ್ ಮರಗಳಿದ್ದುದು, ಅವುಗಳಲ್ಲಿ ಕಾಯಿಬಿಟ್ಟವು, ಅವು ಈ ಕಾಗೆಗೆಳಿಗೆ ಹೊಸ ಸಂಗತಿ. ಅವು ತಿನ್ನಲು ಹೋಗಿ ಬಲು ಗಟ್ಟಿಯಾದುದರಿಂದ ಕೆಳಗೆ ಚೆಲ್ಲಾಡಿದವು. ಹಾಗೆ ಬಿದ್ದ ಕೆಲವನ್ನು ತಿಂದ ಕಾಗೆಗಳು ಅವುಗಳ ರುಚಿ ಕಂಡು ಮನಸೋತು ಬಿಟ್ಟವು. ಆದರೆ ಅವನ್ನು ಒಡೆದು ತಿನ್ನುವ ಉಪಾಯ ತಿಳಿಯದು. ಆಗ ಅವಕ್ಕೆ ಪಕ್ಕದಲ್ಲಿಯೇ ಟ್ರಾಫಿಕ್ ಇನ್ನಿಲ್ಲದಂತೆ ಇರುವುದು, ಅಲ್ಲಿ ಈ ಕಾಯಿಗಳು ಹಾರಿ ಬಿದ್ದಾಗ ವಾಹನಗಳ ಗಾಲಿಗೆ ಸಿಕ್ಕು ಒಡೆದು ಹೋಗುವುದು ಕಂಡು ಸುಲಭದ ಉಪಾಯವಾಗಿ ಕಂಡಿತು. ಆದರೆ ಆ ವಾಹನಗಳ ಓಡಾಟದ ಭರಾಟೆಯಲ್ಲಿ ಹಕ್ಕಿಗಳೇ ಸಿಕ್ಕು ಸಿಕ್ಕು ಸಾಯತೊಡಗಿದವು. ಕೊನೆಗೂ ಅವಕ್ಕೆ ದಿನದಿನವೂ ನೋಡುತ್ತಾ ದಾರಿ ಹೊಳೆಯಿತು. ಸಿಗ್ನಲ್‌ಗೆ ವಾಹನಗಳು ನಿಂತಾಗ ಕಾಯಿಗಳನ್ನು ಚೆಲ್ಲುವುದು, ಮತ್ತೊಮ್ಮೆ ಸಿಗ್ನಲ್‌ಗೆ ವಾಹನಗಳು ಮತ್ತೆ ನಿಂತಾಗ ಒಡೆದು ಹೋದ ಕಾಯಿಗಳನ್ನು ಹಾರಿ ಆಯ್ದುಕೊಳ್ಳುವುದು ನಡೆಯತೊಡಗಿತು'.[೨೭]

ಬದಲಾದ ಪರಿಸರದಲ್ಲಿ ಅವು ತಮ್ಮದೇ ಜಾಣ ದಾರಿಕೊಂಡುಕೊಂಡವು. ಇದು ಸುಂದರ ಕಾಲ್ಪನಿಕ ಕತೆಯೇ, ಆದರೆ ನಮ್ಮ ಸುತ್ತ ನಡೆದಿರುವ ಸತ್ಯ ವಿದ್ಯಮಾನದ ಸಂಗತಿಯನ್ನೇ ಮುಟ್ಟಿಸಲು ಮಕ್ಕಳಿಗಾಗಿ ಚೆಂದವಾಗಿ ಬಳಸಿಕೊಂಡುದು. ಇಲ್ಲಿನ ಕತೆಗಳನ್ನು ನಮ್ಮ ಪ್ರಾಣಿ ಕತೆಗಳ ಸಾಲಿಗೆ ಸೇರಿಸಬಿಡಬಹುದು. ಆದರೆ ಇವನ್ನು ವಿಜ್ಞಾನದ ಸಂಗತಿಗಳಾಗಿಯೂ ಅಷ್ಟೇ ಅಗತ್ಯವಾಗಿ ಗಣಿಸಬಹುದು. ವೈಜ್ಞಾನಿಕ ಸಂಗತಿಗಳ, ನಮ್ಮ ಸುತ್ತಲಿನ ಪರಿಸರದ ಕಾಳಜಿಯ ನಡುವೆಯೇ ಇವು ಹುಟ್ಟಿಕೊಂಡವು.

ಲಿಂಗರಾಜ ರಾಮಾಪೂರ, ಇತ್ತೀಚೆಗೆ ವಿಜ್ಞಾನ ವಿಷಯಗಳನ್ನು ಮಕ್ಕಳಿಗೆ ತಲುಪಿಸಲು ಸಾಕಷ್ಟು ತೊಡಗಿಕೊಂಡಿರುವ ಯುವ ಶಿಕ್ಷಕ. ರಚಿಸಿಕೊಳ್ಳುತ್ತಿರುವ ಕಥಾಹಂದರಗಳು ಇಂಥವೇ ಹಲವಿವೆ. ಅವರ 'ಗುಬ್ಬಿಗೊಂದು ಮನೆಯ ಮಾಡಿ' ದೀರ್ಘವಾದ ಕತೆ ಗುಬ್ಬಿಗಳ ಸುತ್ತಲಿನ ಕಾಳಜಿ ಹೊಂದಿರುವಂಥದು. ಆದರೆ ಕತೆಯಲ್ಲಿ ವಾಸ್ತವದ ಮಕ್ಕಳ ಕಾಳಜಿ, ಆತಂಕ ಇರುವ

ಹಾಗೆ ಗುಬ್ಬಿಗಳೇ ಮಾತನಾಡುತ್ತಾ ತಮ್ಮದೆಲ್ಲವನ್ನು ಮಕ್ಕಳೊಂದಿಗೆ ಹಂಚಿಕೊಳ್ಳುವುದು ನಡೆಯುತ್ತದೆ. ಹಾಗಾಗಿ ಕತೆಯುದ್ದಕ್ಕೂ ಮಕ್ಕಳು ಮಾತ್ರ ಪಾತ್ರವಾಗದೆ ಹಕ್ಕಿಗಳೂ ಪಾತ್ರವಾಗಿ ಕತೆಯನ್ನು ಕಟ್ಟುತ್ತವೆ. ಈ ಬಗೆಯಯವು ನಮ್ಮ ಸುತ್ತಲಿನ ವಾಸ್ತವದ ಸತ್ಯಗಳ ಅರಿವಿಗೇ ಕಲ್ಪಿಸಿಕೊಂಡಂಥವು. ನೀಲಾಂಬರಿಯವರ ಕತೆಗಳಲ್ಲಿ ಕೂಡ ಈ ಬಗೆಯ ಕಲ್ಪನೆಯ ಹಂದರಗಳು ಕಾಣಿಸುವುದನ್ನು ಪ್ರಾಣಿ ಕತೆಗಳ ಮಾತುಕತೆಯ ಸಂದರ್ಭದಲ್ಲಿ ಚರ್ಚಿಸಿದೆ. ಪರಿಸರದ ಕಾಳಜಿ, ಪರಿಸರ, ಗಿಡಮರಗಳನ್ನು ಅಭ್ಯಸಿಸುವುದು, ಪ್ರಾಣಿಗಳ ನಾನಾ ಬಗೆಗಳನ್ನು ಪರಿಚಯಿಸಿಕೊಳ್ಳುವುದು, ನದಿ ಕೊಳ್ಳಗಳ ಬಗೆಗೆ ಅರಿಯುವುದು ಎಲ್ಲ ವಿಜ್ಞಾನದ ಭಾಗವಾಗಿಯೇ ಬರುವಂಥವವಾಗಿವೆ. ಇವುಗಳ ಅಧ್ಯಯನವೇ ಆಗಲಿ, ಕಾಳಜಿಯೇ ಆಗಲಿ ಇದುವರೆಗೆ ಮಾತನಾಡಿದ ಕಥಾ ಮಾದರಿಗಳಿಗೆ ಕಾರಣವಾಗುತಿದ್ದು ಇವೆಲ್ಲ ಇಂಗ್ಲೀಷಿನ 'ಸೈನ್ಸ್ ಫಿಕ್ಸನ್' ಎನ್ನುವ ಕಥಾ ಜಗತ್ತಿಗೆ ಸಲ್ಲುವುವಲ್ಲ.

ಕನ್ನಡದಲ್ಲಿ ರಾಜಶೇಖರ ಭೂಸನೂರಮಠರು ವಿಶೇಷವಾಗಿಯೇ ವೈಜ್ಞಾನಿಕ ಕಥಾಲೋಕದಲ್ಲಿ ತೊಡಗಿದವರಾಗಿದ್ದರು. ಅವರು ದೊಡ್ಡವರಿಗಾಗಿ ರಚಿಸಿದಂತೆ ಮಕ್ಕಳಿಗಾಗಿಯೂ ಆಸಕ್ತಿಯಿಂದ ಅನೇಕ ಕೃತಿಗಳನ್ನು ರಚಿಸಿರುವುದು ಕಂಡು ಬರುತ್ತದೆ. ಇವರನ್ನು ಬಿಟ್ಟರೆ ಇನ್ನೂ ಕೆಲವರು ವಿರಳವಾಗಿಯಾದರೂ ಹಲವು ಕೃತಿಗಳನ್ನು ರಚಿಸಿದ್ದಾರೆ. ನಾಗೇಶ ಹೆಗಡೆ ಅವರು ಜನಪ್ರಿಯ ವಿಜ್ಞಾನ ಮಾದರಿಯಾಗಿ ರಚಿಸುವ ಕತೆಗಳಲ್ಲಿ ಈ ಬಗೆಯ ಕಾಲ್ಪನಿಕ ಸಂಗತಿಗಳನ್ನು ತಂದುಕೊಳ್ಳುವುದು ನಡೆಯುತ್ತದೆ. ಸಂಪಟೂರು ವಿಶ್ವನಾಥ ಅವರು ನಮ್ಮ ನಡುವೆಯೇ ನಡೆಯುವ ಸ್ವಾರ್ಥದ ಹಿನ್ನೆಲೆಯ ಪ್ರಸಂಗವನ್ನು ಇಟ್ಟುಕೊಂಡು ವೈಜ್ಞಾನಿಕ ಕಾದಂಬರಿಯೊಂದನ್ನು ಸೃಷ್ಟಿಸಿದ್ದಾರೆ. ಮತ್ತೂರು ಸುಬ್ಬಣ್ಣ ಅವರು 'ಅನು ಮತ್ತು ರೋಬೋಟ್' ಕೃತಿಯನ್ನು ಇದೇ ಬಗೆಯಲ್ಲಿ ಹೊಸ ಅವಿಷ್ಕಾರಗಳನ್ನಿಟ್ಟುಕೊಂಡು ರಚಿಸಿದ್ದಾರೆ. ಎಚ್.ಎಸ್.ಭೈರನಟ್ಟಿ ಸಹ ಇದೇ ವಿಷಯವನ್ನಿಟ್ಟುಕೊಂಡು ಅವರು ಒಂದು ಕೃತಿಯನ್ನು ರಚಿಸಿದ್ದಾರೆ. ಇಲ್ಲಿ ಫ್ಯಾಂಟಸಿ ಎನ್ನಬಹುದಾದ ಅಸಂಭವನೀಯವಾಗಿ ಕಾಣುವ ಸಂಗತಿಗಳು ಕಾಣಸಿಗುತ್ತವೆ.

ರಾಜಶೇಖರ ಭೂಸನೂರಮಠರು ಈಗ ನಮ್ಮ ನಡುವೆ ಇಲ್ಲ. ಆದರೆ ಅವರು ಈ ಬಗೆಯ ಕತೆಗಳನ್ನು ರಚಿಸುತ್ತಿದ್ದುದರ ಹಿಂದೆ ಅನೇಕ ಊಹಾತೀತ ಸಂಭಾವ್ಯಗಳ ಸಾಧ್ಯತೆಗಳನ್ನು ಅವರು ಮುಂದಿಡಲು ನೋಡುತ್ತಿದ್ದರು ಎನಿಸುತ್ತದೆ. ಸೈನ್ಸ್ ಫಿಕ್ಷನ್ ಎಂದು ಇಂಗ್ಲೀಷಿನಲ್ಲಿ ಗುರುತಿಸುವ ಪ್ರಕಾರದಲ್ಲಿಯೇ ಅವರ ಎಲ್ಲಾ ರಚನೆಗಳು ಕಾಣಸಿಗುತ್ತವೆ. ಅಲ್ಲೆಲ್ಲೂ ವಿಜ್ಞಾನದ ಪಾಠ ಕಾಣಿಸುವುದಿಲ್ಲ. ಬದಲಿಗೆ ಕಲ್ಪನೆಯ ಕಥಾ ಹಂದರದೊಡನೆ, ನಾನಾಬಗೆಯ ಊಹಾತೀತ ಸಂಭವಗಳು ನಡೆಯುತ್ತಾ, ಮನುಷ್ಯನ ಸಂವೇದನೆಗಳ ಸ್ಪಂದನವೇ ಬಹು ಮುಖ್ಯವಾಗಿ ಕಾಣುತ್ತದೆ. ಅವರು ಜೀವನ ಪೂರ್ತಿ ಸಂಶೋಧನೆಯಲ್ಲಿ ತೊಡಗಿಕೊಂಡಿದ್ದರು. ಭೂಸನೂರಮಠರು ದೊಡ್ಡವರಿಗೆ ಬರೆದಂತೆ, ತುಂಬಾ ಆಸಕ್ತಿಯಿಂದಲೇ ಮಕ್ಕಳಿಗೆ ಬರೆದರು. ಅವರ ಕೃತಿಗಳಲ್ಲೆಲ್ಲಾ ಚುರುಕಿನ, ಸಾಹಸದ ಮಕ್ಕಳು ಭಾಗವಹಿಸುವುದಲ್ಲದೆ ಅನೇಕ ಸಾಹಸದ, ಪ್ರಾಯೋಗಿಕ ಸಂಗತಿಗಳಿಗಿಳಿಯುವುದು

ಸಾಮಾನ್ಯವಾಗಿ ಕಾಣುತ್ತದೆ. ಅಲ್ಲದೆ ಬಹು ಮುಖ್ಯವಾಗಿ ಹೆಣ್ಣು ಮಕ್ಕಳು ಮುಂದುವರೆದು ಇಂಥ ಸಾಹಸದಲ್ಲಿ ತೊಡಗುವುದನ್ನು ಅವರು ಚಿತ್ರಿಸಿರುವುದು.

'ಭಲೆ ಪಿಂಕಿ' ಕಾದಂಬರಿಯ ಪಿಂಕಿಯನ್ನು ಇಲ್ಲಿ ಉದಾಹರಿಸಬಹುದು. ಅವರು ಕಿರು ಕಾದಂಬರಿ ರೂಪಗಳನ್ನೇ ವಿಶೇಷವಾಗಿ ನೀಡಿದ್ದು ಅಲ್ಲೆಲ್ಲ ಅಂತರಿಕ್ಷದ ಸಂಗತಿಗಳನ್ನೇ ಹೆಚ್ಚಾಗಿ ಆಯ್ದುಕೊಂಡಿರುವುದು ಕಂಡುಬರುತ್ತದೆ. ಇವು ಮಕ್ಕಳಲ್ಲಿ ಹೊಸ ಸಂಗತಿಗಳೆಡೆಗೆ ಕುತೂಹಲ ಹುಟ್ಟಿಸಲು, ಸಾಹಸಕ್ಕಿಳಿಯಲು ಪ್ರೇರೇಪಿಸುತ್ತವೆ. ಇಪ್ಪತ್ತನೇ ಶತಮಾನದ ಅಂತ್ಯದ ಆ ಸಂದರ್ಭದಲ್ಲಿ ಗಗನಯಾನ ತುಂಬಾ ಅಚ್ಚರಿಯ ಸಂಗತಿಯಾಗಿತ್ತು. ಹಾಗಾಗಿಯೇ ಅವರ ಬಹುತೇಕ ಬರಹಗಳು ಆ ಬಗೆಯ ಕಥನಗಳನ್ನೇ ಒಳಗೊಂಡಿವೆ.

೭.೩.೨. ಅಂತರಿಕ್ಷ ಮತ್ತು ಫ್ಯಾಂಟಸಿ

ಭೂಸನೂರ ಮಠ ಅವರ ನಿಯಮಗಳ ನಾಡಿನಲ್ಲಿ ಕಥೆಯನ್ನು 'ದಿ ಆಬ್ಸೆಂಟ್ ಮೈಂಡೆಡ್ ಪ್ರೊಫೆಸರ್' ಸಿನಿಮಾದ ಎಳೆಯನ್ನು ಇಟ್ಟುಕೊಂಡು ರಚಿಸಲಾಗಿದೆ ಎಂದು ಅವರೇ ಹೇಳಿದ್ದಾರೆ. ಸಿನಿಮಾದಲ್ಲಿ ಫ್ಲಬರ್ ಎನ್ನುವ ವಸ್ತುವೇ ಹಾರಲು ಕಾರಣ. ಆ ಫ್ಲಬರ್ ಎನ್ನುವ ವಸ್ತು ಅನಿರೀಕ್ಷಿತವಾಗಿ ಮಕ್ಕಳ ಕೈಗೆ ಸಿಗುತ್ತದೆ. "ವಿಮಾನಕ್ಕೆ ಫ್ಲಬರ್ ಹಚ್ಚಿರತಾರೇನು ಪಾಪೂ? ಅವೂ ಹಾರತಾವಲ್ಲ?."[೩೭] ಮಕ್ಕಳ ಈ ಊಹೆ, ಅವರನ್ನು ನಿಯಮಗಳ ನಾಡಿಗೆ ಕರೆದೊಯ್ಯುತ್ತದೆ. ವೈಜ್ಞಾನಿಕ ಕಥನಗಳ ಜಾಡು ಬಹುತೇಕ ಹೀಗೆಯೇ ಇರುತ್ತದೆ. ಕಥೆಯ ಆರಂಭದಲ್ಲಿ ಯಾವುದೋ ಒಂದು ಸೋಜಿಗದ ವಿಷಯ ಪಾತ್ರಗಳನ್ನು, ಕಥೆಯನ್ನು ಮುನ್ನಡೆಸುತ್ತವೆ. 'ಭಲೇ ಪಿಂಕಿ' ಕಾದಂಬರಿಯಲ್ಲಿ ಪಿಂಕಿಗೆ ಹೆದರಿಸಲೆಂದು ಅವರ ತಂದೆ 'ಪಿಂಕಿ! ಮಲಗು ನೋಡೋಣ? ಇಲ್ಲದಿದ್ದರೆ.....ವೀಡಿಯೋಫೋನಿನಲ್ಲಿ ಗುಮ್ಮನನ್ನು ಕರೆಯುವೆ'[೩೮] ಹೀಗೆ ಹೇಳಿದ ಮಾತೇ ಮಂಗಳ ಲೋಕದ ಮಾಂಗಳಿಕನೊಂದಿಗೆ ವ್ಯವಹರಿಸಲು ದಾರಿಯಾಗುತ್ತದೆ, ಅಲ್ಲಿಂದ ಕಥೆ ಮುಂದಕ್ಕೆ ಸಾಗುತ್ತದೆ. 'ನಿಯಮಗಳ ನಾಡಿನಲ್ಲಿ'ನ ಗೊಂದಲಪುರದಲ್ಲಿ ಎಲ್ಲವೂ ತಿರುವು ಮುರುವು. ಹೋಟೆಲಿನಲ್ಲಿ ತಿಂಡಿ ನೀಡಿ, ದುಡ್ಡು ಕೂಡ ಕೊಟ್ಟರು. ಶಾಲೆಯ ಫಲಕ ಉಲ್ಟಾ ಇತ್ತು, ಚಿಕ್ಕ ಮಗುವು ಶಿಕ್ಷಕನಾಗಿದ್ದರೆ ಮುದುಕರು ಒಂದನೇ ತರಗತಿ ಮಕ್ಕಳಾಗಿದ್ದರು.

ಒಂದನೇ ತರಗತಿಗೆ ಕ್ವಾಂಟಂ ಥೇರಿ, ಥರ್ಮೋಡೈನಾಮಿಕ್ಸ್ ಕಲಿಸಲಾಗುತ್ತಿತ್ತು, ವಿಶ್ವವಿದ್ಯಾಲಯದಲ್ಲಿ ಮಗ್ಗಿ, ವರ್ಣಮಾಲೆ ಕಲಿಸುತ್ತಿದ್ದರು. ಮೊಲ ಗರ್ಜಿಸಿದರೆ, ಹುಲಿ ಸಾಧುವಾಗಿತ್ತು. ವೈಜ್ಞಾನಿಕತೆಯನ್ನು ಹೇಳುತ್ತಲೇ ಫ್ಯಾಂಟಸಿಯನ್ನು ಕಂಡರಿಸುವ ಮಾದರಿ ಇದರಲ್ಲಿದೆ. ಗೊಂದಲಪುರದ ಸನ್ನಿವೇಶವು ಮಕ್ಕಳ ಓದು ಪ್ರೀತಿಯನ್ನು ಬೆಳೆಸುವಂತಿದೆ. ಅದರಲ್ಲಿನ ಹಾಸ್ಯಮಯ ಸ್ವರೂಪ ಕೂಡ ಕಥೆಗೆ ಓಘ ತಂದುಕೊಟ್ಟಿದೆ.

'ಭಲೇ ಪಿಂಕಿ' ಕಾದಂಬರಿಯ ಪಿಂಕಿಯು ಇಡೀ ಕಥನದ ಉದ್ದಕ್ಕೂ ತನ್ನ ತಂದೆಯನ್ನೂ ಬೆರಗು ಗೊಳಿಸುವ ಜಾಣ್ಮೆಯನ್ನು ತೋರುತ್ತಾಳೆ. ಹೆಣ್ಣುಮಕ್ಕಳನ್ನು ಕಥೆಯ ನಾಯಕಿಯರನ್ನಾಗಿ ಮಾಡಿ ಹೆಣೆದ ಕಥೆಗಳು ಕಡಿಮೆ. ಭೂಸನೂರ ಮಠ ಅವರು ಪಿಂಕಿ ಎನ್ನುವ ಹುಡುಗಿಯನ್ನು ಕೇಂದ್ರವಾಗಿಟ್ಟುಕೊಂಡು ಕಥೆ ರಚಿಸಿದ್ದಾರೆ. ಫ್ಯಾಂಟಸಿ ಕಥನಗಳಲ್ಲಿ ಲಿಂಗಬೇಧಕ್ಕಿಂತ ಕಥೆಯೇ ಪ್ರಧಾನವಾಗಿರುತ್ತದೆ. ಉತ್ತರ ಧ್ರುವ ಪ್ರದೇಶದಲ್ಲಿ ವಿಜ್ಞಾನಿಗಳಿಗೆ ಬ್ರಾಂಟಾರಸ್ ಎಂಬ ಪೆಡಂಭೂತದ ಮೊಟ್ಟೆಯೊಂದು ದೊರಕಿತ್ತು. ಅದು ನಲವತ್ತಾರು ದಿನಗಳ ನಂತರ ಮೊಟ್ಟೆ ಒಡೆದು ಮರಿಯಾಗಿ ಬಂದಿತು. ಅದನ್ನು ಪ್ರಾಣಿ ಸಂಗ್ರಹಾಲಯದಲ್ಲಿ ಇರಿಸಿದ್ದರು. ಪಿಂಕಿಗೆ ಬ್ರಾಂಟಿ ಇಷ್ಟವಾಯಿತು. ಅದರೊಡನೆ ಸಂಭಾಷಿಸುತ್ತಿದ್ದಳು. 'ಬ್ರಾಂಟಿ ಅವರೆಲ್ಲಾ ಬಹಳ ಕೆಟ್ಟವರಿದ್ದಾರೆ. ದಿನಾ ಬಾಳೆಹಣ್ಣು ಕೊಟ್ಟರೆ ನಾನೂ ನಿನ್ನಂತೆ ಉಪವಾಸ ಮಾಡುತ್ತಿದ್ದೆ ತಗೋ ತಿನ್ನು'[೬೯] ಹೀಗೆ ಬ್ರಾಂಟಿಯಲ್ಲದೇ ಶೂಶ, ರೋಬೊಟ್, ನಾಯಿ ಎಲ್ಲರೊಂದಿಗೂ ಅವಳು ಬೆಳೆಸಿಕೊಂಡ ಸಲುಗೆಯು ಅತಿಮಾನುಷತನವೂ ಮುಗ್ಧತೆಗೆ ಒಲಿಯುತ್ತದೆ ಎನ್ನುವುದನ್ನು ಇಲ್ಲಿ ಎತ್ತಿ ತೋರಿಸುತ್ತದೆ. ಮತ್ತೂರು ಸುಬ್ಬಣ್ಣ ಅವರ ಅಂಶು ಮತ್ತು ರೋಬೊ ಹಾಗೂ ಅಂಶು, ಅನು ಮತ್ತು ರೋಬೊಟ್ ಕಾದಂಬರಿಗಳನ್ನು ಇಲ್ಲಿ ಉಲ್ಲೇಖಿಸಬಹುದು.

ಭೂಸನೂರ ಮಠರ ವಿಜಯನ ಕಥೆಯಲ್ಲಿ; ಚಿದಾನಂದರು ಭಾರತೀಲೋಕದಿಂದ ಹೊರಟು 'ಅನ್ಯ ಲೋಕದ ಬುದ್ಧಿಜೀವಿಗಳ ಶೋಧ'[೭೦] ಎನ್ನುವ ಯೋಜನೆಯನ್ನು ಹಾಕಿಕೊಂಡು ಗಗನಯಾನ ಮಾಡುತ್ತಾರೆ. ಇದರಲ್ಲಿ ಸಾಗುವ ಸಂಗತಿಗಳೆಲ್ಲವೂ ಗಗನಯಾನಿಗಳಂತೆಯೇ ವೈಜ್ಞಾನಿಕ ತಳಹದಿಯಲ್ಲಿಯೇ ಇರುತ್ತವೆ. ಆದರೆ ಇಂದಿಗೂ ಅಂಥದ್ದೊಂದು ಸಂಶೋಧನೆ ಇಡೀ ಜಗತ್ತಿನ ವಿಜ್ಞಾನಿಗಳಿಂದ ಆಗಿಲ್ಲ ಇದು ಲೇಖಕನ ಕಲ್ಪನೆಯಲ್ಲಿಯೇ ಇನ್ನೂ ಉಳಿದಿದೆ. ಕಥೆ ಸಾಗುವ ಸ್ವರೂಪ ವೈಜ್ಞಾನಿಕತೆಯ ನಿಯಮಗಳಲ್ಲೇ ಆಗಿರುವುದರಿಂದ ಇಂಥದ್ದನ್ನು ವೈಜ್ಞಾನಿಕ ಫ್ಯಾಂಟಸಿಯೆಂದು ಸುಲಭವಾಗಿ ವಿಭಾಗಿಸಬಹುದಾಗಿದೆ.

ವೈಜ್ಞಾನಿಕ ಫ್ಯಾಂಟಸಿಗಳಲ್ಲಿ ಮತ್ತೊಂದು ಸ್ವರೂಪವನ್ನು ಗುರುತಿಸಬಹುದು. ಭೂಸನೂರ ಮಠ ಅವರ 'ಪರಮಾಣು ಲೋಕದಲ್ಲಿ' ಕಾದಂಬರಿಯು ಪರಮಾಣು ಲೋಕದ ಎಲೆಕ್ಟ್ರಾನ್, ಪ್ರೋಟಾನ್, ನ್ಯೂಟ್ರಾನ್ ಎಂಬ ಅಣುಗಳ ಕ್ರಿಯೆ ಪ್ರತಿಕ್ರಿಯೆಗಳನ್ನು ವಿವರಿಸುತ್ತದೆ. ಆ ಲೋಕಕ್ಕೆ ಅನಿರೀಕ್ಷಿತವಾಗಿ ಬಿರುಗಾಳಿ ದೆಸೆಯಿಂದ ಬೇಬಿ, ಪಾಮು ಮತ್ತು ಮೋತಿ ಎನ್ನುವ ನಾಯಿ ಮೂರೂ ಜನ ಹೋಗಿರುತ್ತಾರೆ. ಅಲ್ಲಿ ಎಲೆಕ್ಟ್ರಾನ್ ಎನ್ನುವ ಋಣಾವೇಷ ಕಣವನ್ನು ಹೆಣ್ಣಿಗೆ ಹೋಲಿಸಿ ಧನಾವೇಷ ಕಣಕ್ಕೆ ಪ್ರೋಟಾನ್ ಎನ್ನುವ ಗಂಡು ಪಾತ್ರವನ್ನು ಹೋಲಿಸಿ ಬರೆಯಲಾಗಿದೆ. ನ್ಯೂಟ್ರಾನ್‌ನ್ನು ಗುಣದಂತೆ ತಟಸ್ಥವಾಗಿ ಉಳಿಸಲಾಗಿದೆ. ಈ ಪರಮಾಣುಗಳ ಗುಣಗಳನ್ನು ಹೊರತು ಪಡಿಸಿದರೆ ಇಲ್ಲಿ ಯಾವುದೇ ವೈಜ್ಞಾನಿಕತೆ ಇಲ್ಲ. ಬೇಬಿ, ಪಾಮು, ಮೋತಿಯಂತೆ

ಎಲೆಕ್ಟ್ರಾನ್, ಪ್ರೋಟಾನ್, ನ್ಯೂಟ್ರಾನ್ ಮೂರೂ ಕೂಡ ಪಾತ್ರಗಳಾಗಿಯೇ ಕಥೆಗೆ ಸಹಕರಿಸುತ್ತವೆ ಎನ್ನುವುದೇ ಇಲ್ಲಿದೆ. ಹಾಗೆ ನೋಡಿದರೆ ಎಲೆಕ್ಟ್ರಾನ್ ಹೆಣ್ಣಾಗಿ ಪ್ರೋಟಾನ್ ಎನ್ನುವ ಗಂಡಿಗಾಗಿ ಪರಿತಪಿಸುವ ಸನ್ನಿವೇಶ ಮಕ್ಕಳಿಗೆ ತಕ್ಕುದಲ್ಲವಾದ ಪ್ರಸಂಗವೂ ಇಲ್ಲಿ ಕಂಡುಬರುತ್ತದೆ. ಹಾಗಾಗಿ ಈ ಬಗೆಯ ಕಥನಗಳು ವೈಜ್ಞಾನಿಕ ಅಂಶಗಳನ್ನು ಬಳಸಿಕೊಂಡು ರಚನೆಯಾದ ಫ್ಯಾಂಟಸಿ ಕಥನಗಳಾಗಿವೆ.

೭.೩.೩. ಅನ್ಯಗ್ರಹ, ಜೀವಿಗಳು ಮತ್ತು ಫ್ಯಾಂಟಸಿ

ಕನ್ನಡದಲ್ಲಿ ವಿರಳವಾದರೂ ಹಲವು ಕತೆಗಳು ಈ ಬಗೆಯಲ್ಲಿ ಮಕ್ಕಳ ಲೋಕದಲ್ಲಿ ಕಾಣತೊಡಗಿವೆ. ಮಕ್ಕಳಿಗಾಗಿ ಸಾಕಷ್ಟು ಕತೆಗಳನ್ನು ರಚಿಸಿರುವ ತಮ್ಮಣ್ಣ ಬೀಗಾರ ಕಥೆಯೊಂದರಲ್ಲಿ ಚಿನ್ನದ ಕಡ್ಡಿಯನ್ನು ಬೆನ್ನಟ್ಟಿ ಹೊರಟ ಶಾಂತು ಅನ್ನುವ ಹುಡುಗನಿಗೆ ತನಗೆ ಅದು ಸಿಕ್ಕು ಯೋಚಿಸಿದ್ದೆಲ್ಲಾ ಆಗುವ ಕನಸು ಕಟ್ಟಿಕೊಳ್ಳುವುದು ನಡೆಯುತ್ತದೆ. ಬೇರೆ ಬೇರೆ ಗ್ರಹಗಳಿಗೆ ಹೋಗುವುದು ನಡೆಯುತ್ತಾ ರೋಚಕತೆ ಉಂಟಾಗಿದೆ. ಮಕ್ಕಳ ಹೊಸ ಆಲೋಚನೆಗೆ ಇಂಬು ಕೊಡುವಂತೆ ಕಥೆ ಸಾಗುತ್ತದೆ. ವಾಸ್ತವ, ನಂಬಿಕೆ, ಕಾಲ್ಪನಿಕ ಸಂಗತಿಗಳು ಮೂರೂ ಅಂಶಗಳನ್ನು ಕಥೆ ಕೇಂದ್ರೀಕರಿಸಿದೆ. ನಂಬಿಕೆ ಮತ್ತು ಕಾಲ್ಪನಿಕತೆ ಮೂಲಕ ಚಿನ್ನದ ಕಡ್ಡಿಯು ವಾಸ್ತವೇತರ ಜಗತ್ತನ್ನು ಬಿಚ್ಚಿಡಲಾಗಿದೆ. ಪಾರ್ಡುಲಾ, ಪಿಕಿಚಾಂಗ್ ಗ್ರಹಗಳ ಹೆಸರುಗಳು ಜನಪದ ಮಕ್ಕಳ ಕಥೆಗಳಲ್ಲಿ ಮಕ್ಕಳ ಆಸಕ್ತಿ ಕೇಂದ್ರೀಕರಿಸಲು ಬಳಸುವ ಮಂತ್ರಗಳಂತೆ ಆಪ್ತವಾಗಿವೆ. ಬೀಗಾರರ ಬರಹಗಳು ವಾಸ್ತವ ನೆಲೆಗಟ್ಟಿಗೇ ಮತ್ತೆ ಮತ್ತೆ ತುಡಿಯುತ್ತವೆ ಎನ್ನುವುದು ಚಿನ್ನದ ಕಡ್ಡಿಯಲ್ಲಿಯೂ ಕಾಣಬಹುದು. ಶಾಂತು ಕೆಂಬೂತದ ಗೂಡು ನೀರು ಹರಿಯುವ ದಿಕ್ಕಿಗೇ ಚಲಿಸುತ್ತದೆ. 'ಪಾಪ, ಹಕ್ಕಿಯ ಗೂಡು ಹಾಳು ಮಾಡಿದೆನಲ್ಲ. ಅಷ್ಟೇ ಅಲ್ಲ ಗೆಳೆಯ ಹೇಳಿದ ಯಾರದೋ ಆಧಾರವಿಲ್ಲದ ಮಾತು ನಂಬಿದೆನಲ್ಲ ಎಂದು ನೊಂದುಕೊಂಡ'[೪೧]. ಗೂಡು ನೀರು ಚಲಿಸುವ ದಿಕ್ಕಿನಲ್ಲಿಯೇ ತೇಲಿ ಹೋದರೂ ಚಿನ್ನದ ಕಡ್ಡಿ ಕಥೆಯು ಮೌಢ್ಯದ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತದೆ. ಫ್ಯಾಂಟಸಿ ಕಥೆಗಳೆಂದರೆ ವಾಸ್ತವೇತರ ಜಗತ್ತಿನ ಅನಾವರಣವಷ್ಟೇ ಅಲ್ಲ, ವೈಚಾರಿಕ ತಳಹದಿಯ ನೆಲೆಯಲ್ಲೂ ಕಥೆಯ ಸ್ವರೂಪ ನಿಗದಿತವಾಗಿರುತ್ತದೆ.

ನವೀನ ಐನಳ್ಳಿ ಅವರ 'ಗೇಗ್ರಾನ್' ಕಾದಂಬರಿ ರೋಚಕವಾದ ಕಥಾನಕವನ್ನು ಮಕ್ಕಳಿಗೆ ನೀಡುತ್ತದೆ. ಅಲ್ಲಿ ಶಾಲೆಗೆ ಹೋಗುವ ಬಸ್ಸಿನಲ್ಲಿ ಹೊರಡುವ ಮಕ್ಕಳ ಮಾನಸ ಲೋಕದೊಂದಿಗೆ ಪ್ರಯಾಣಕ್ಕೆ ತೆರೆದುಕೊಳ್ಳುವ ಕಥೆ ಇದೆ. ಅವರು ಶಾಲೆಗೆ ಹೋಗಬೇಕಿರುವ ಬಸ್ ಇದ್ದಕ್ಕಿದ್ದ ಹಾಗೆ ಬೇರೆ ದಾರಿ ಹಿಡಿದು, ತನ್ನ ವೇಗ ಹೆಚ್ಚಿಸಿಕೊಂಡು, ಡ್ರೈವರ್, ಕಂಡಕ್ಟರ್ ಇಬ್ಬರೂ ಸ್ಥಗಿತರಾಗಿ, ಇದ್ದಕಿದ್ದ ಹಾಗೆ ಮೇಲೆ ಏರತೊಡಗಿ ಆಕಾಶದಲ್ಲಿ ಹಾರತೊಡಗುತ್ತದೆ. ಕಿಟಕಿಗಳೆಲ್ಲ ಮುಚ್ಚಿಕೊಂಡು ಬಿಡುತ್ತವೆ. ಮಕ್ಕಳು ದಿಗಿಲುಗೊಂಡರು, ಗಾಬರಿಗೊಳ್ಳುವರು, ಬಸ್ ಮಾತ್ರ ಹಾರುತ್ತಲೇ ಹೋಗುತ್ತದೆ.

ಹಾಗೆ ಹಾರಿ ಹಾರಿ ಹೋದುದು ಚಂದ್ರನನ್ನು ದಾಟಕೊಂಡು, ಮಂಗಳಗ್ರಹವನ್ನೂ ದಾಟಕೊಂಡು ಸಾಗಿತು. ಮಕ್ಕಳು ತಾವು ಶಾಲೆಯಲ್ಲಿ ಕಲಿತುದರ ಆಧಾರದಿಂದ ಏನೇನೋ ಗುರುತಿಸತೊಡಗಿದ್ದರು. 'ಹೌದು ಕಣೋ..ಇದು ಮಂಗಳ ಗ್ರಹ.. ಇದಕ್ಕೆ ಎರಡು ಉಪಗ್ರಹಗಳಿವೆಯಂತೆ ಫೋಬೋಸ್ ಮತ್ತು ಡಿಮೋಸ್ ಎಂಬ ಎರಡು ಉಪಗ್ರಹಗಳು.'[೪೨] ಮಕ್ಕಳು ಫ್ಯಾಂಟಸಿ ಲೋಕದಲ್ಲಿದ್ದರೂ ಸೌರವ್ಯೂಹದ ಕುರಿತು ಅವರಿಗಿರುವ ಜ್ಞಾನವನ್ನು ವ್ಯಕ್ತಪಡಿಸುತ್ತಾ ಹೋಗುತ್ತಾರೆ.

ಸೂರ್ಯನಿಂದ ಅವರ ಪುಸ್ತಕ ಪೆನ್ನು, ಟಿಫಿನ್ ಬಾಕ್ಸ್‌ಗಳು ಎಲ್ಲಾ ಮೇಲೇರಿ ತೇಲಾಡತೊಡಗಿದ್ದವು. ಹಾರುತ್ತಿದ್ದ ಬಸ್ ಅಂತೂ ಒಂದೆಡೆ ಬಂದು ನಿಂತಿತ್ತು. ಎಲ್ಲಾ ನಿದ್ರೆಗೆ ಜಾರಿ ಹೋಗಿದ್ದವರು ಒಬ್ಬೊಬ್ಬರಾಗಿ ಎದ್ದು ಗಾಬರಿಗೊಳ್ಳತೊಡಗಿದರು. ಡ್ರೈವರ್ ಕಂಡಕ್ಟರ್‌ಗೆ ಏನು ಮಾಡಬೇಕು ತಿಳಿಯುತ್ತಿರಲಿಲ್ಲ. ಅಷ್ಟರಲ್ಲಿ ಒಂದು ವಿಚಿತ್ರ ಪ್ರಾಣಿ, ನಾಲ್ಕು ನಾಲ್ಕುವರೆ ಅಡಿ ಎತ್ತರದ್ದು ಕಾಣಿಸಿಕೊಂಡಿತು. ಅದು ಮಕ್ಕಳ ಹೆಸರು ಹಿಡಿದು ಮಾತನಾಡತೊಡಗುತ್ತದೆ. ಅವರಿಗೆಲ್ಲ ವಿಚಿತ್ರವೆನಿಸುತ್ತದೆ. ಅದಕ್ಕೆ ಅವರೆಲ್ಲರ ಪರಿಚಯ ಚೆನ್ನಾಗಿ ಇತ್ತು. ಅದು ಇನ್ನೊಂದು ಗ್ರಹವಾಗಿತ್ತು. ಅಲ್ಲಿನ ಜೀವಿ ಇದು ಎನ್ನುವುದು ನಿಧಾನ ಮಕ್ಕಳ ಅರಿವಿಗೆ ಬಂದಿತ್ತು. ಆ ವಿಚಿತ್ರ ಜೀವಿಯ ಹೆಸರು ಗೇಗ್ರಾನ್. ಆ ಜೀವಿ ಸ್ನೇಹಮಯವಾಗಿದ್ದು ಅಪಾಯಕಾರಿಯಾಗಿರಲಿಲ್ಲ, ಎನ್ನುವುದು ಸ್ವಲ್ಪ ಹೊತ್ತಿಗೆಲ್ಲ ಅರಿವಾಯಿತು. ಅದು ಅವರನ್ನು ತನ್ನ ಮನೆಗೆ ಕರೆದುಕೊಂಡು ಹೋಯಿತು. ಅಲ್ಲಿರುವವೆಲ್ಲಾ ಪುಟ್ಟ ಪುಟ್ಟ ಮನೆಗಳು. ಪೃಥ್ವಿಯಲ್ಲಿನ ಹಾಗೆ ಅಲ್ಲಿಯೂ ಮೊದಲು ದೊಡ್ಡದೊಡ್ಡ ಕಟ್ಟಡಗಳು ಇದ್ದವು. ಭೂಕಂಪದಂಥ ವಿಕೋಪದಲ್ಲಿ ಎಲ್ಲ ಕಳೆದುಹೋದುದಕ್ಕೆ ಅವರು ಪರಿಸರಕ್ಕೆ ಅಪಾಯವಾಗದಂತೆ ಈಗ ಈ ಬಗೆಯ ಪುಟ್ಟ ಪುಟ್ಟ ಮನೆಗಳಿಗೆ ಬದಲಾಗಿದ್ದರು.

ಮನೆಯ ಜಾಗದ ಇಪ್ಪತ್ತು ಪಟ್ಟು ಜಾಗದಲ್ಲಿ ಮರಗಳನ್ನು ಬೆಳೆಸುವ ನಿಯಮ ಪಾಲಿಸುತ್ತಿದ್ದರು. ಮನೆಗೆ ನೆಂಟರು ಇಷ್ಟರು ಬಂದರೆ ಗೋಡೆಗಳು ಸರಿದು ಇದ್ದಕ್ಕಿದ್ದ ಹಾಗೆ ಕೋಣೆಗಳು ನಿರ್ಮಾಣಗೊಳ್ಳುತ್ತಿದ್ದ ತಂತ್ರಜ್ಞಾನ ಅವರದಾಗಿತ್ತು. ಮರಗಿಡಗಳಿಗೆ ಏನೂ ಬಾಧೆಯಾಗದಂತೆ ಈ ಬಗೆಯ ನಿರ್ಮಾಣಗಳು ಅಲ್ಲಿ ನಡೆಯುತ್ತಿದ್ದವು. ಅಲ್ಲಿ ವಾಹನಗಳ ಓಡಾಟವನ್ನೂ ಮಕ್ಕಳು ಕಾಣಲಿಲ್ಲ, ಬದಲಿಗೆ ನೀರು ಗಾಳಿ ಸೌರಶಕ್ತಿಯಿಂದ ಚಲಿಸುವ ಹಾರಿಕೊಂಡಿರುವ ವಾಹನಗಳು ಅಲ್ಲಿ ಅವರಿಗೆ ಕಾಣಿಸಿದವು. ಡ್ರೈವರ್ ಇಲ್ಲದೆ, ನಾವು ಇಚ್ಛಿಸಿದ ಪ್ರೋಗ್ರಾಮ್‌ನಂತೆ ಅವು ನಡೆದುಕೊಳ್ಳುವ ಬಗೆ ಅಲ್ಲಿತ್ತು. ಹೀಗಿರುವ ಗೇಗ್ರಾನ್ ಜೀವಿಗಳ ಮೇಲೆ ಇದ್ದಕಿದ್ದಹಾಗೆ ಮಿಂಟೊ ಚಂದ್ರನ ಮೇಲೆ ವಾಸಿಸುವ ದೈತ್ಯ ಆಕಾರದ ಕಟಿಪ್ಪ ಎನ್ನುವ ಜೀವಿಗಳ ದಾಳಿ ಮಕ್ಕಳಿದ್ದಾಗಲೇ ಆಗಿಬಿಡುತ್ತದೆ. ವಿಷಕಾರಿ ಹುಳುಗಳನ್ನು ಸಾಕಿಕೊಂಡಿದ್ದ ಈ ಜೀವಿಗಳ ದೇಹದ ಮೇಲೆಲ್ಲಾ ಅವು ಅಡ್ಡಾಡುತ್ತಿದ್ದುದನ್ನು ಮಕ್ಕಳು ನೋಡಿದರು. ಇದುವರೆಗೂ ಮಕ್ಕಳಿಗೆ ಅರಿವಿಗೇ ಬಂದಿರಲಿಲ್ಲ, ಅವರೆಲ್ಲಾ ಗೇಗ್ರಾನಗಳಂತೆಯೇ ಬದಲಾಗಿಬಿಟ್ಟಿದ್ದರು.

ಆ ಕಟಿಸ್ಟಗಳು ಈ ಮಕ್ಕಳ ಮೇಲೂ ದಾಳಿ ಇಟ್ಟಿದ್ದವು. ಗೇಗ್ರಾನ್ ಹೇಗೋ ಹೋರಾಡಿ, ತನ್ನಲ್ಲಿನ ಬೆಳೆದ ತಂತ್ರಜ್ಞಾನದಿಂದ ಮಕ್ಕಳನ್ನೆಲ್ಲ ಪಾರು ಮಾಡಿಕೊಂಡು ಒಂದು ರಾತ್ರಿ ಕಳೆಯುತ್ತಿರುವಂತೆ ಸಿಗ್ಲೋಪಿಯಾ ಎನ್ನುವ ಇನ್ನೊಂದು ವಿಚಿತ್ರದ ಒಕೆಟ್ಟಿನಂತಹ ಜೀವಿ, ಊಸರವಳ್ಳಿಯಂತೆ ತನ್ನ ಬಣ್ಣ ಬದಲಾಯಿಸುವಂಥದು, ಅಲ್ಲಿಗೆ ಬಂದು ಮಲಗಿದ ಮಕ್ಕಳಲ್ಲಿ ಕಾರುಣ್ಯನನ್ನು ತನ್ನ ಉದ್ದದ ನಾಲಿಗೆಯಿಂದ ಸೆಳೆದುಕೊಂಡು ದೇಹದೊಳಕ್ಕೆ ಹಾಕಿಕೊಂಡು ಬಿಟ್ಟಿತ್ತು. ಮುಂದೆ ಎಲ್ಲ ಮಕ್ಕಳು ಅಲ್ಲಿಂದ ಭೂಮಿಯ ಕಡೆಗೆ ತೆರಳಲು ಗೇಗ್ರಾನ್ವಾಹನ ಹತ್ತಿ, ವಾಹನ ಮೇಲೇರತೊಡಗಿದಾಗ ತಕ್ಷಣ ಕಾರುಣ್ಯ ಇಲ್ಲದಿರುವುದು ಗಮನಕ್ಕೆ ಬರುತ್ತದೆ. ಮತ್ತೆ ಗೇಗ್ರಾನ್ ವಾಹನ ತನ್ನ ತಂತ್ರಜ್ಞಾನದ ಸಾಧ್ಯತೆಯಿಂದ ಆ ಬಣ್ಣಬದಲಿಸುವ ಸೊಗ್ಲೋಪಿಯಾ ಅವಳನ್ನು ನುಂಗಿರುವುದನ್ನು ಪತ್ತೆ ಹಚ್ಚಿ, ಅದು ಇರುವಲ್ಲಿಗೆ ವಾಹನ ಒಯ್ಯುತ್ತದೆ.

ಸೊಗ್ಲೋಪಿಯ ಮತ್ತೆ ಮಣ್ಣಿನ ಹಾಗೆ ಬಣ್ಣ ತಿರುಗಿಸುತ್ತಿರುವಾಗಲೇ ಅದನ್ನು ಹೊಡೆದು ತುಂಡಾಗಿಸಿ ಹುಡುಗಿಯನ್ನ ಪಾರು ಮಾಡಿತು. ಮಕ್ಕಳೆಲ್ಲ ನಂತರ ಭೂಮಿಗೆ ಗೇಗ್ರಾನಿನ ವಾಹನದಲ್ಲಿಯೇ ಬಂದಿಳಿದರು. ಗೇಗ್ರಾನ್ ಪರಿಸರ ಹಾಳು ಮಾಡಿಕೊಳ್ಳುವ ಮನುಷ್ಯರ ಬಗೆಗೆ ಎಚ್ಚರಿಕೆಯ ಮಾತುಗಳನ್ನು ಮಕ್ಕಳಿಗೆ ಹೇಳುತ್ತ ಹೋಯಿತು. ಗೇಗ್ರಾನ್ ಎನ್ನುವ ಬೇರೆ ಗ್ರಹದ ಜೀವಿಗಳ ಒಡನಾಟ ಮಕ್ಕಳಿಗೆ ಸಿಕ್ಕಿತು. ಇದಿಷ್ಟು ಕತೆ. ಅನ್ಯಗ್ರಹಗಳ ಜೀವಿಗಳ ಕುರಿತು ಇದುವರೆಗೂ ನಮಗೆ ನಿಖರವಾಗಿ ಯಾವ ಮಾಹಿತಿಯೂ ಸಿಕ್ಕಿಲ್ಲ. ಆದರೆ ಅನುಮಾನಗಳು ಇವೆ. ಆ ಕಲ್ಪನೆಯನ್ನು ಹಿಡಿದು ಈಗಾಗಲೇ ಅನೇಕ ಕತೆಗಳು ಹುಟ್ಟಿವೆ. ಅಂಥದೇ ಪ್ರಭಾವದಲ್ಲಿ ಹೆಣೆದ ಸರಳ ಕತೆಯಿದು. 'ಶುದ್ಧ ಪರಿಸರದ ಜೊತೆ ವಿಜ್ಞಾನದ ಕುರಿತೂ ತಿಳುವಳಿಕೆ ಮೂಡಿಸುವ ಕಥನವಿದು'[೮೨] ಮಕ್ಕಳಿಗಾಗಿ ಬರೆದ ಕೃತಿಗಳು ಬಹುವಿಧದ ಸಾಧ್ಯತೆಯನ್ನು ಹೊಂದಿರುತ್ತವೆ ಎನ್ನುವುದಕ್ಕೆ ಈ ಕೃತಿ ಉದಾಹರಣೆಯಂತಿದೆ. ಅಲ್ಲದೇ, ಒಂದು ಬಗೆಯಲ್ಲಿ ಜನಾಂಗೀಯ ದ್ವೇಷ, ಪರಿಸರದ ಹಾನಿಯ ದುಷ್ಪರಿಣಾಮ ಮುಂತಾದ ನಮಗೆ ಪರಿಚಿತವಾದ, ಮನುಷ್ಯರವೇ ಆದ ಬದುಕಿನ ಆಶಯಗಳನ್ನು ಅನ್ಯಗ್ರಹದ ಜೀವಿಗಳ ಮೂಲಕ ಇಲ್ಲಿ ಫ್ಯಾಂಟಸಿಯಲ್ಲಿ ಚಿತ್ರಿಸಲಾಗಿದೆ.

೭.೩.೪. ಅಪರಿಚಿತ ವಸ್ತು ಮತ್ತು ಫ್ಯಾಂಟಸಿ

ಭೈರನಟ್ಟಿ.ಹ.ಸಿ. ಅವರ ಕೃತಿ 'ಆರೋಹಣ'ದಲ್ಲಿ ಹುಡುಗಿಯೊಬ್ಬಳಿಗೆ ಆಡುವಾಗ ಸಿಕ್ಕ ಹೇರ್‌ಬ್ಯಾಂಡ್ ವಿಶಿಷ್ಟವಾದ ಶಕ್ತಿ ಹೊಂದಿರುವುದು ಅಕಸ್ಮಾತ್ ಗಮನಕ್ಕೆ ಬರುತ್ತದೆ. ಊರಿಂದ ಅಜ್ಜ ಅಜ್ಜಿ ಬರುತ್ತಿರುವುದರ ವಿವರವೆಲ್ಲವನ್ನೂ ಪುಟ್ಟಿ ಉಸುರಿದಾಗಿನಿಂದ ಮನೆಯಲ್ಲಿ ಗುಮಾನಿ ಶುರುವಾಗುತ್ತದೆ. ಆ ಹೇರ್‌ಬ್ಯಾಂಡ್ ಧರಿಸಿದಾಗ ಅಂದುಕೊಂಡಿದ್ದು ಕಣ್ಣಮುಂದೆ ಗೋಚರಿಸತೊಡಗುತ್ತಿತ್ತು. ಇದು ಪುಟ್ಟಿಗೆ ಮಾತ್ರ ಗೊತ್ತು. ಸರಿ ಅಜ್ಜ ಅಜ್ಜಿ ಬಂದಮೇಲೆ ಈ ಗುಟ್ಟು ನಿಧಾನ ಎಲ್ಲರಿಗೂ ರವಾನೆಯಾಗಿ ಮನೆಯಲ್ಲಿ ಎಲ್ಲರನ್ನೂ ದಿಗಿಲಿಗೆ ದೂಡುತ್ತದೆ. ಅದನ್ನು

ಹಾಕಿಕೊಂಡು ಏನೇನೆಲ್ಲ ನೋಡತೊಡಗುತ್ತಾರೆ. ಜೊತೆಗೆ ಆತಂಕಕ್ಕೂ ಒಳಗಾಗುತ್ತಾರೆ. ಅದನ್ನು ಮರಳಿಸಿಬಿಡುವ ಯೋಚನೆ ಕೂಡ ಮಾಡುತ್ತಾರೆ. ಆದರೆ ಯಾರದು ಅದು ಎನ್ನುವುದೇ ಪತ್ತೆ ಆಗುವುದಿಲ್ಲ. ಆಗ ಅವರಿಗೆ ನೆನಪಾಗಿದ್ದು ಪುಟ್ಟಿಯ ಸ್ನೇಹಿತೆ ಪಮ್ಮಿಯ ಅಪ್ಪ ಅಮ್ಮಂದು. ಅವರು ದೂರವಾಣಿಯಲ್ಲಿ ಸಂಪರ್ಕಿಸಿದಾಗ ಕೂಡಲೆ ಒಪ್ಪಿಕೊಂಡು ಆ ಕೂಡಲೆ ಬಂದರು. ಪಮ್ಮಿಯ ಅಪ್ಪ ಸುಧಾಕರ ಅದೊಂದು ಎಚ್ಚಿ ಎನ್ನುವ ಉಪಕರಣವೆಂದೂ ಅದನ್ನು ವಿಶುವಲ್ ಪೊಸಿಷನ್ ಸಿಸ್ಟಮ್‌ಗೆ ಅಳವಡಿಸಿದ್ದು ಹೀಗೆಲ್ಲಾ ಸಾಧ್ಯಮಾಡಿಕೊಟ್ಟಿದೆ. ಇದೆಲ್ಲಾ ಈಗ ತೀರಾ ವಿಚಿತ್ರದ ಸಾಧನೆಯೇನಲ್ಲ ಎಂದು ಅವರು ಹೇಳಿದರು. ಅಷ್ಟೇ ಅಲ್ಲ ಆ ಬ್ಯಾಂಡನ್ನು ನೀವೇ ಇಟ್ಟುಕೊಳ್ಳಿ ಎಂದು ಬಿಟ್ಟೂ ಹೋದರು. ಅಲ್ಲಿಗೇ ಪ್ರಕರಣ ಮುಗಿಯದೇ ಅದರಿಂದ ಆಟವಾಗಿ ಮನೆಯಲ್ಲಿ ಏನೇನನ್ನೋ ನೋಡತೊಡಗಿದ ಮಕ್ಕಳಿಗೆ ಇದ್ದಕಿದ್ದ ಹಾಗೆ ಒಂದು ದನಿ ಕೇಳಿತು. ಅದು ಅಂಟ್ಲಾಂಟಿಸ್ ಎನ್ನುವಲ್ಲಿಂದ ಬಂದಿದ್ದು ಎನ್ನುವ ಮಾತೂ ಕೇಳಿತು. 'ಇತಿಹಾಸದಲ್ಲಿ ಮರೆಯಾಗಿ, ಅದೊಂದು ಬರಿ ಕಲ್ಪನೆಯೆಂದು ಕರೆಸಿಕೊಂಡ ಅಟ್ಲಾಂಟಿಸ್ ಕುರಿತು ಹೀಗೆ ಇದ್ದಕಿದ್ದ ಹಾಗೆ ಮಾತು ಕೇಳಿದುದು ರೋಚಕ ಸಂಗತಿ ಎನ್ನಿಸಿತು. ಹೌದು ಹಾಗೆ ಕೇಳಿದುದು ಮತ್ತಿನ್ನಾರೂ ಅಲ್ಲ, ಭೂಸನೂರಮಠರೇ!''' ಅವರು ಅಟ್ಲಾಂಟಿಸ್ ನಿವಾಸಿಗಳ ಹಾಗೆ ಮನೋಮಯರಾಗಿ ಆ ಕುರಿತಾದ ನಿಗೂಢಗಳನ್ನು ಶೋಧಿಸತೊಡಗಿದ ಸಂಗತಿ ಹೇರ್‌ಬ್ಯಾಂಡಿನಿಂದ ತಿಳಿಯುತ್ತದೆ. ಕತೆಗೆ ಮತ್ತೊಂದೇ ರೋಚಕ ತಿರುವು ಸಿಕ್ಕುತ್ತದೆ.

ಮಕ್ಕಳನ್ನು ಕುತೂಹದಲ್ಲಿ ಕೆಡಹುವ ಕಾದಂಬರಿಆನಂದ ಪಾಟೀಲರ 'ಬೆಳದಿಂಗಳು' ಇದೊಂದು ವೈಜ್ಞಾನಿಕ ಫ್ಯಾಂಟಸಿಯ ಎಳೆಯನ್ನು ಇಟ್ಟುಕೊಂಡು ರಚನೆಯಾದ ಕಿರು ಕಾದಂಬರಿ. ಕತೆಯಲ್ಲಿ ಒಬ್ಬ ಗ್ರಾಮೀಣ ಹುಡುಗ ಮತ್ತೊಂದು ಊರಿನ ಸಂತೆಗೆ ಬಂದವನು, ಬಸ್ಸು ಬಂದು ಇನ್ನೇನು ಹತ್ತಬೇಕು ಎಂದುಕೊಂಡವನು ಇದ್ದಕಿದ್ದ ಹಾಗೆ ತಾನು ಎಲ್ಲರಿಂದ ದೂರದಲ್ಲಿ ಇದುವರೆಗೂ ಕುಳಿತುಕೊಂಡಿದ್ದ ಕಲ್ಲಿನಲ್ಲಿ ಏನೋ ಚಿತ್ರಗಳಿರುವುದನ್ನು ಗಮನಿಸಿ, ಒಳ್ಳೇ ಕುತೂಹಲದಲ್ಲಿ ಬೀಳುತ್ತಾನೆ. ಕೊನೆಯ ಬಸ್ಸಾದರೂ ಹತ್ತದೆ ಬಿಟ್ಟು ಬಿಡುತ್ತಾನೆ. ಸರಿ ಕಲ್ಲಿನಲ್ಲಿ ಕೆಲ ಚುಕ್ಕೆಗಳ ಚಿತ್ರಗಳಿರುವುದನ್ನು ಗಮನಿಸಿ, ಕಲ್ಲು ನೇರವಾಗಿರದೆ ಒಂದು ದಿಕ್ಕಿನಲ್ಲಿ ವಾಲಿಕೊಂಡಿರುವುದನ್ನು ಗಮನಿಸಿ, ಸಂಜೆಯಲ್ಲಿ ಆ ದಿಕ್ಕಿನಲ್ಲಿಯೇ ಅರಸುತ್ತಾ ನಡೆಯುತ್ತಾನೆ. ನಡೆಯುತ್ತಾ ನಡೆಯುತ್ತಾ ಊಹಿಸಿದ ಹಾಗೆ ಇನ್ನೊಂದು ಕಲ್ಲನ್ನು ಪತ್ತೆಹಚ್ಚುತ್ತಾನೆ. ಅಲ್ಲಿ ಈ ಮೊದಲಿನ ಕಲ್ಲಿನಲ್ಲಿ ಇದ್ದಂತೆ ಚುಕ್ಕೆಗಳಿದ್ದವು. ಅವು ಸಂಖ್ಯೆಯಲ್ಲಿ ಹೆಚ್ಚಿರುವುದು ಕಂಡು, ಏನೋ ಗುಟ್ಟು ಇವುಗಳಲ್ಲಿದೆ ಎಂದು ಹುಡುಗ ಮತ್ತಷ್ಟು ಕುತೂಹಲ ತಳೆದು ಅದೇ ದಿಕ್ಕಿನಲ್ಲಿ ಪಯಣಿಸುತ್ತಾನೆ. ಅವನಿಗೆ ಮುಂದಿನ ಊರಿನ ಗೆಳೆಯ ಜೊತೆಯಾಗುತ್ತಾನೆ.

ಶಾಲೆಯ ರಜೆಯ ದಿನಗಳನ್ನು ನೋಡಿಕೊಂಡು ಅವರು ತಮ್ಮದೇ ಆದ ಬಗೆಯಲ್ಲಿ ಸಂಶೋಧನೆಗೆ ತೊಡಗಿಕೊಳ್ಳುತ್ತಾರೆ. ಪಯಣಿಸುತ್ತಾ ಕರ್ನಾಟಕ, ಮಹಾರಾಷ್ಟ್ರ ಗಡಿಯಲ್ಲಿ ದೊಡ್ಡದೊಂದು

ಕೊಳ್ಳದ ಪ್ರದೇಶಕ್ಕೆ ಬಂದು ತಮ್ಮ ಊಹೆಯಂತೆಯೇ ಅಂತರಗಳಲ್ಲಿ ಅನೇಕ ಕಲ್ಲುಗಳನ್ನು ಗುರುತಿಸುತ್ತಾ ಬರುತ್ತಾರೆ. ಹೀಗೆ ಸಾಗುವಾಗ ಅವರಿಗೆ ದಾರಿಯಲ್ಲಿ ಮಹಾರಾಷ್ಟ್ರದ ಇತಿಹಾಸ ಸಂಶೋಧಕರು ಭೇಟಿಯಾಗುತ್ತಾರೆ. ಅವರು ಹುಡುಗರ ಕುತೂಹಲದ ಪಯಣದ ಕತೆ ಕೇಳಿ ತಾವೂ ಕುತೂಹಲ ತಾಳಿ, ಜೊತೆಯಾಗುತ್ತಾರೆ. ಈಗ ಅವರ ಪಯಣ ಶಿಸ್ತುಬದ್ಧವಾಗಿ ಸಾಗುತ್ತದೆ. ಅವರ ಊಹೆಯಂತೆಯೇ ಅವರು ಒಂದು ದೊಡ್ಡ ಕಲ್ಲುಗಳ ನಿಡಿದಾಗಿ ಚಾಚಿಕೊಂಡ ಕೋಟೆ ಗೋಡೆಯಂಥಲ್ಲಿಗೆ ಬಂದು ತಲುಪುತ್ತಾರೆ. ಮುಂದೆ ಹೇಗೆ ಪಯಣಿಸುವುದು ಎನ್ನುವುದು ತಿಳಿಯದು. ಆಗ ಅವರಿಗೆ ಹೊಳೆದಿದ್ದು, ಇದುವರೆಗೆ ನೋಡುತ್ತಾ ಬಂದ ಚಂದ್ರನ ಗುರುತಾಗಳಾಗಿದ್ದು, ಇಲ್ಲಿಗೆ ಆ ಗುರುತು ಪೂರ್ಣ ಆಕಾರವನ್ನು ಹೊಂದಿದ್ದು ಹುಣ್ಣಿಮೆಯ ವಿಶೇಷವನ್ನೇನೋ ಹೇಳುತ್ತಿರಬೇಕು ಎಂದು ಗುರುತಿಸಿದರು. ಸರಿ ಅವರು ಮತ್ತೆ ವ್ಯವಸ್ಥೆ ಮಾಡಿಕೊಂಡು ಹುಣ್ಣಿಮೆಯ ರಾತ್ರಿಗಾಗಿ ಅಲ್ಲಿ ಬಂದು ಕಾಯುತ್ತಾರೆ. ಸರಿಯಾಗಿ ಬೆಳ್ಳಂಬೆಳಕು ಹರಡಿದಾಗ ಅಲ್ಲಿದ್ದ ಎಲ್ಲಾ ದೈತ್ಯಾಕಾರದ ಕಲ್ಲುಗಳಲ್ಲಿ ಒಂದೇ ಒಂದು ತೀರಾ ಹಗುರಾಗಿ ಸರಿಸಲು ಬರುವಂತೆ ಆಗುವುದನ್ನು ಅಕಸ್ಮಾತ್ ಗಮನಿಸುತ್ತಾರೆ.

ಚಂದ್ರನ ಬೆಳಕು ಅದರ ಮೇಲೆ ಬಿದ್ದುದರಿಂದಲೇ ಅದು ಆದುದು ಎಂದು ಅವರಿಗೆ ದಿಗಿಲಾಗುತ್ತದೆ. ಸರಿ ಒಳಗೆ ಹೊಕ್ಕವರು ವಿಶಾಲವಾದ ಜಾಗ, ನಡುವೆ ದೊಡ್ಡದೊಂದು ಕಟ್ಟೆಯ ಆಕೃತಿ ಗಮನಿಸಿ ಅಲ್ಲಿಯೂ ಏನೋ ಅಡಗಿರಬಹುದು ಎಂದು ನೋಡುತ್ತಾರೆ. ಹಿರಿಯ ಸಂಶೋಧಕರು ಎಚ್ಚರಿಕೆ ನೀಡಿ ಮಕ್ಕಳು ಅದನ್ನು ಏರದಂತೆ ಸೂಚಿಸುತ್ತಾರೆ. ಅವರು ಅಲ್ಲಿ ಸುತ್ತಾಡುತ್ತಾ ಒಂದು ಕಲ್ಲಿನ ಮೇಲೆ ಬರಹವೊಂದನ್ನು ಕಂಡು ಅದನ್ನು ಪ್ರತಿಮಾಡಿಕೊಂಡು ಹೋಗುತ್ತಾರೆ. ಅವರು ವಾಪಸು ಹೋಗುವಾಗ ದಾರಿಯಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿನ ಆಚರಣೆಯೊಂದರ ಚಿತ್ರಗಳನ್ನು ಗುಡಿಯ ಗೋಡೆಯಲ್ಲಿ, ಮನೆಮನೆಯ ಗೋಡೆಗಳ ಮೇಲೆ ಗಮನಿಸಿ, ಅದರ ವಿವರಗಳನ್ನು ಪಡೆಯುತ್ತಾರೆ.

ಆ ಆಚರಣೆಯ ಕತೆಯಲ್ಲಿ ದೈತ್ಯಾಕಾರದ ರಾಕ್ಷಸ ಬರುತ್ತಿದ್ದುದು, ಬಂದು ದೋಚಿಕೊಂಡು ಹೋಗುತ್ತಿದ್ದುದು, ಅದಕ್ಕಾಗಿ ಹುಣ್ಣಿಮೆಯ ಚಂದ್ರನನ್ನು ಆರಾಧಿಸುವ ಆಚರಣೆ ಎಂದು ಅಲ್ಲಿನ ಕತೆಗಳು ಹೇಳುತ್ತವೆ. ಅಲ್ಲಿಂದ ಮರಳಿದ ನಂತರ ವಿಶ್ವವಿದ್ಯಾಲಯದಲ್ಲಿ ಆ ಗುಟ್ಟಿನ ಬರಹದ ಪತ್ತೆಯಾಗಿ ಅದು ಬಹು ಹಿಂದಿನದು, ಅದು ಒಬ್ಬ ಹುಡುಗನದೇ, ಅವನು ಹುಣ್ಣಿಮೆಯ ಹೊತ್ತಿಗೆ ಅಕಸ್ಮಾತ್ ಅಲ್ಲಿಗೆ ಹೋಗಿದ್ದು, ಒಳಗಿನ ಆ ಕಟ್ಟೆಯನ್ನೇರಿ ಕುಳಿತದ್ದು, ಹಾಗೆ ಕುಳಿತವನು ಇದ್ದಕಿದ್ದ ಹಾಗೆ ದೈತ್ಯಾಕಾರದಲ್ಲಿ ಬೆಳೆಯುತ್ತಾ ಹೋದುದು, ಅದರಿಂದ ಇನ್ನಿಲ್ಲದ ತೊಂದರೆಗೆ ಸಿಲುಕಿದುದು, ಹೊಟ್ಟೆಗೆ, ಬಟ್ಟೆಗೆ ಸಾಕಷ್ಟು ಸಿಕ್ಕದೆ ಅಲೆದುದು, ದುರಂತದ ಅಂತ್ಯಕ್ಕೆ ಸಾಗಿದುದು ಎಲ್ಲವನ್ನು ಆ ಬರಹ ಅರುಹುತ್ತದೆ. ಇದೆಲ್ಲದರ ಹಿಂದೆ ಯಾವುದೋ ಗ್ರಹಗಳ ವಿಜ್ಞಾನ ಜಗತ್ತು

ಇಲ್ಲಿ ಒಂದು, ಆ ಕಲ್ಲುಗಳಿಗೆ ಏನನ್ನೋ ಲೇಪಿಸಿದ್ದು, ಆ ಲೇಪದಿಂದಲೇ ಕಲ್ಲು ಹುಣ್ಣಿಮೆಯ ಬೆಳಕಿಗೆ ತೀರಾ ಹಗುರಾಗಿ ಬದಲಾಗುತ್ತಿತ್ತು. ಹೀಗೆ ವೈಜ್ಞಾನಿಕ ಊಹೆಗಳು ಕಾಣಿಸಿಕೊಳ್ಳುತ್ತಾ ನಿಗೂಢವಾಗಿಯೇ ಕತೆ ಮುಗಿಯುತ್ತದೆ.

ವೈಜ್ಞಾನಿಕ ಸಂಶೋಧನೆಯ ವಿಭಿನ್ನ ಸಾಧನೆಯ ಹಿನ್ನೆಲೆಯನ್ನು ಕಥೆ ಒಳಗೊಂಡಿದೆ. ವಿಚಿತ್ರವಾದ ಸಾಧ್ಯತೆಗಳನ್ನು ಕಂಡುಕೊಳ್ಳುತ್ತಾ, ಭೂಮಿಯ ಜೀವಿಯೊಂದು ಅರಿಯದೆ ನಲುಗಿಹೋಗಿ, ಮಾನವೀಯ ಸ್ಪಂದನದ ಕರುಣದ ಕತೆಯಾಗಿ ಹೊರಳುತ್ತದೆ. ಮಕ್ಕಳ ಸಾಹಸದ ಸಂಗತಿಯೂ ಇದಕ್ಕೆ ಅಂಟಿಕೊಂಡಿದೆ.

ಮತ್ತೂರು ಸುಬ್ಬಣ್ಣ ಅವರು ಬಹುದಿನದಿಂದ ಮಕ್ಕಳಿಗೆ ಕತೆಗಳನ್ನು ಬರೆಯುತ್ತಿದ್ದು ಅವರ 'ಅಂಶು, ಅನು ಮತ್ತು ರೋಬೊ' ಎನ್ನುವ ಕಾದಂಬರಿ ರೋಬೋಟ್ ಆವಿಷ್ಕಾರದ ಹಿನ್ನೆಲೆಯಲ್ಲಿ ಅರಳಿದ ಮಕ್ಕಳಿಗೆ ಹಿಡಿಸುವ ಕಥಾಹಂದರ ಒಳಗೊಂಡಿದೆ. ಅಂಶು ಮತ್ತು ಅನು ಎನ್ನುವ ನಗರದ ಅಣ್ಣ ತಂಗಿ ರಜೆಗೆ ಅಜ್ಜನ ಊರಿಗೆ ಹೋಗುವಾಗ ತಮ್ಮೊಂದಿಗೆ ಇಟ್ಟುಕೊಂಡಿದ್ದ ಯಂತ್ರಮಾನವ ರೋಬೋವನ್ನೂ ಕರೆದುಕೊಂಡು ಹೋಗುತ್ತಾ ಕತೆ ಕುತೂಹಲದ ಪಯಣ ಆರಂಭಿಸುತ್ತದೆ. ತಂತ್ರಜ್ಞಾನದ ಸಾಧ್ಯತೆಗಳು ಅರಳಿರುವ ಈ ಸಂದರ್ಭದಲ್ಲಿ ಕಥೆಯಲ್ಲಿ ರೋಬೊವನ್ನು ಕಥನದ ವಿಸ್ತರಣೆಯ ಭಾಗವಾಗಿ, ತಂದಿರುವುದು ವಾಸ್ತವವೇ ಆದರೂ ರೋಬೋ ಬಳಕೆ ಇನ್ನೂ ವಿಜ್ಞಾನಿಗಳ ಅಂಗಳದಲ್ಲಿಯೇ ಇರುವುದರಿಂದ ಇದು ಅತಿವಾಸ್ತವ ಸಂಗತಿಯಾಗುತ್ತದೆ. ಕಥೆಯ ಹಂದರವನ್ನು ಫ್ಯಾಂಟಸಿಯಲ್ಲಿ ಗುರುತಿಸಬಹುದಾಗಿದೆ. ರೋಬೋಗೆ ಟಿಕೆಟ್ ರಿಸರ್ವ್ ಮಾಡುವಲ್ಲಿಯೇ ಅವರ ದಿಗಿಲು ಶುರುವಾಗುತ್ತದೆ. ಯಂತ್ರ ಮಾನವನಿಗೆ ಟಿಕೆಟ್ ಮಾಡುವುದಿಲ್ಲ ಎಂದು ಉತ್ತರ ಬಂದಾಗ ದಿಗಿಲಿಗೆ ಒಳಗಾದ ಮಕ್ಕಳು ಕೂಡಲೆ ರಾಬರ್ಟ್ ಎನ್ನುವ ಹೆಸರು ಹೇಳಿ ಟಿಕೆಟ್ ಪಡೆಯುತ್ತಾರೆ. ಅವರಿಗೆ ಇದಕ್ಕೆಲ್ಲಾ ಹಿನ್ನೆಲೆಯಾಗಿ ವಿಜ್ಞಾನಿ ಮೂರ್ತಿ ಅವರ ಬೆಂಬಲ ಸಿಕ್ಕಿರುತ್ತದೆ. ಅವರು ಊರಿಗೆ ಹೋಗುವುದಕ್ಕೆ ಮುಂಚೆ ರೋಬೋಗೆ ಇನ್ನಷ್ಟು ಸೌಲಭ್ಯಗಳನ್ನು ಒದಗಿಸಿರುತ್ತಾರೆ. ರೋಬೊವನ್ನು ಊರಿಗೆ ಮಕ್ಕಳು ಕರೆದೊಯ್ಯುತ್ತಾರೆ. ರೈಲು ಸಾಗುತ್ತಿರುವಾಗಲೇ ರೋಬೋ ಸಾಹಸ ಪ್ರಾರಂಭವಾಗಿರುತ್ತದೆ. ಅದು ದಾರಿ ಮಧ್ಯದಲ್ಲಿ ಯಾರೋ ರೈಲಿನ ಹಳಿಗಳನ್ನು ಕಿತ್ತು ಹಾಕುತ್ತಿರುವುದನ್ನು ಪತ್ತೆ ಹಚ್ಚಿ ಸೂಚನೆ ನೀಡುತ್ತದೆ. ಮಕ್ಕಳು ಚೈನು ಎಳೆದು ರೈಲು ನಿಲ್ಲಿಸುತ್ತಾರೆ. ಅಪಾಯದಿಂದ ರೈಲಿನ ಜನವೆಲ್ಲಾ ಪಾರಾಗುತ್ತಾರೆ. ತಮ್ಮ ಮುತ್ತಳ್ಳಿ ಹತ್ತಿರವೇ ಇರುವುದರಿಂದ ಕತ್ತಲಿನಲ್ಲಿ ನಡೆಯುತ್ತಾ ಹೊರಟ ಇವರು ದಾರಿಯಲ್ಲಿ ಗಂಧದ ಕಟ್ಟಿಗೆಯ ಕಳ್ಳರನ್ನು ಪತ್ತೆ ಹಚ್ಚುವ ಸಾಹಸವನ್ನು ಕೂಡ ಮಾಡುತ್ತಾರೆ.

ರೋಬೋ ಪೋಲೀಸರನ್ನು ಸಂಪರ್ಕಿಸಲು ಅನುವು ಮಾಡಿಕೊಡುತ್ತದೆ. ಹೀಗೆಯೇ ಅವರು ಹತ್ತಿರದ ಗಾಜಿನ ಹಳ್ಳಿಯ ಮಾನಸಿಕ ಅಸ್ತವ್ಯಸ್ತದ ಹುಡುಗ ಚಂದ್ರುವನ್ನು ಬಳಸಿಕೊಂಡು

ಮೋಸಮಾಡುತ್ತಿದ್ದ ಅಮೇರಿಕಾದ ವಿಜ್ಞಾನಿಯೊಬ್ಬನನ್ನು ಓಡಿಯಲು ಪ್ರಯತ್ನಿಸಿ ಯಶಸ್ವಿಯಾಗುತ್ತಾರೆ. ಇನ್ನು ಮುಂದುವರೆದು ಹತ್ತಿರದ ಕಾಡಿನ ಐತಿಹಾಸಿಕ ದೇವಸ್ಥಾನದ ವಿಗ್ರಹ ಚೋರರನ್ನು ಓಡಿಯುವಲ್ಲಿಯೂ ಕೈ ಜೋಡಿಸುತ್ತಾರೆ. ಹೀಗೆ ಹಳ್ಳಿಗೆ ರೋಬೋದೊಂದಿಗೆ ಬಂದ ಮಕ್ಕಳು ಹಲವಾರು ಸಾಹಸದ ಕೆಲಸಗಳನ್ನು ನಿರ್ವಹಿಸಿ ಗೆಲುವು ಸಾಧಿಸುತ್ತಾರೆ. ಕತೆಯ ಹಿನ್ನೆಲೆಯಲ್ಲಿ ರೋಬೋ ಅಂಥ ಯಂತ್ರದಿಂದ ಏನೆಲ್ಲಾ ಸಾಹಸಗಳನ್ನು ಮಾಡಬಹುದು ಎನ್ನುವುದು ರವಾನೆಯಾಗುವಂತಿದೆ. ಯಂತ್ರವು ಇಲ್ಲಿ ಕಥನದ ತಂತ್ರವಾಗಿ ಬಳಕೆಯಾಗಿದೆ.

ಎಂಬತ್ತರ ದಶಕದ ಆ ಕಾಲಘಟ್ಟದಲ್ಲಿ ವಿಜ್ಞಾನದ ಆವಿಷ್ಕಾರಗಳು, ನೂತನ ಪ್ರಯೋಗಗಳು ಎಲ್ಲ ಕ್ಷೇತ್ರಗಳಲ್ಲೂ ಎಂದಿನಂತೆ ದಾಪುಗಾಲಿನಲ್ಲಿ ಮುಂದುವರೆಯುತ್ತಿದ್ದ ಸಂದರ್ಭದಲ್ಲಿ ಯಂತ್ರಮಾನವನ ಕಲ್ಪನೆ ನಮ್ಮ ಆಲೋಚನೆಗಳಿಗೆ ಹೊಸ ಆಯಾಮಗಳನ್ನು ಸೃಷ್ಟಿಸುತ್ತಿತ್ತು. ಮನುಷ್ಯ ಮಾಡುವ ಕೆಲಸಗಳನ್ನೆಲ್ಲಾ ಯಂತ್ರವೇ ಮಾಡಬಹುದಾದ ಸಾಧ್ಯತೆಗಳು ರೋಮಾಂಚನವಾಗಿರುತ್ತಿದ್ದವು. ಆ ನಿಟ್ಟಿನಲ್ಲಿಯೇ ಅನೇಕ ಕತೆಗಳು ಹುಟ್ಟಿವೆ.

ಹೀಗೆ ಕನ್ನಡದಲ್ಲಿ ವಿರಳವಾಗಿಯಾದರೂ ಕಲ್ಪನೆಯ ಹಂದರಗಳನ್ನು ಹರವಿಕೊಂಡು, ರೋಚಕ ಸಾಮಗ್ರಿಯನ್ನು ನೀಡುತ್ತಾ ಫ್ಯಾಂಟಸಿಯ ಆಸಕ್ತಿಯಲ್ಲಿ ಕತೆಗಳು ಹುಟ್ಟಿಕೊಂಡಿವೆ, ಹುಟ್ಟಿಕೊಳ್ಳುತ್ತಿವೆ. ಇಲ್ಲಿ ಕೆಲವಾದರೂ ವೈಜಾನಿಕ ಶಿಕ್ಷಣದ ಮೇರೆ ಮೀರಿ ಫ್ಯಾಂಟಸಿಯ ಸಾಧ್ಯತೆಗಳಿಗೆ ತುಡಿಯುವತ್ತ ಸಾಗಿವೆ. ಹಾಗೆಯೇ ಮಾನವನ ಬದುಕಿನ ಅನುಭವಗಳನ್ನು ವಿಸ್ತರಿಸಿಕೊಳ್ಳುವತ್ತ ತುಡಿಯುತ್ತಿರುವುದು ಗೋಚರಿಸುತ್ತದೆ. ವೈಜ್ಞಾನಿಕ ಮಾಹಿತಿ ನೀಡುವುದು, ಶೈಕ್ಷಣಿಕ ಪರೋಕ್ಷತೆಯ ಕೆಲಸಕ್ಕಿಳಿಯುವುದು ಒಂದು ಬಗೆಯಾದರೆ ಈ ಬಗೆಯ ಊಹಾತ್ಮಕ ಕಥಾ ಹಂದರಗಳು ವೈಜ್ಞಾನಿಕ ಆವಿಷ್ಕಾರದ ಹಿನ್ನೆಲೆಯಲ್ಲಿ ಮಾನವನ ರೋಚಕ ಅನುಭವ ದ್ರವ್ಯವನ್ನು ಹಿಗ್ಗಲಿಸುವ, ಮನುಷ್ಯನ ಮನೋಭೂಮಿಕೆಯ ವಿಶೇಷಗಳನ್ನು ಕೆದಕುವ ಕೆಲಸ ಮಾಡುತ್ತಾ ಕಥಾ ಜಗತ್ತಿಗೆ ಹೊಸತನ್ನು ಕೂಡಿಸುತ್ತಿರುತ್ತವೆ. ಕನ್ನಡದ ಮಕ್ಕಳಲೋಕ ಈ ನಿಟ್ಟಿನಲ್ಲಿ ಹೊಸತನ್ನು ಕಾಣತೊಡಗಿದೆ ಎನ್ನಬಹುದು.

೭.೪. ಕನ್ನಡ ಮಕ್ಕಳ ಕಥನ ಸಾಹಿತ್ಯ: ಫ್ಯಾಂಟಸಿಯ ಹೊಸ ಚಲನೆಗಳು

ಇಪ್ಪತ್ತೊಂದನೇ ಶತಮಾನದ ಈ ಹೊತ್ತಿನಲ್ಲಿ ವಿಶ್ವದ ಮಕ್ಕಳ ಸಾಹಿತ್ಯಲೋಕ ತುಂಬಾ ವಿಸ್ತಾರವಾದ ಮತ್ತು ಹೊಸ ಬಗೆಯ ಪ್ರಯೋಗಾತ್ಮಕ ಪ್ರಯತ್ನಗಳನ್ನು ಮಾಡಿ ಯಶಸ್ವಿಯಾಗುತ್ತಿದೆ. ಇದಕ್ಕೆ ಭಾರತೀಯ ಇಂಗ್ಲಿಷ್ ಮಕ್ಕಳ ಸಾಹಿತ್ಯವೂ ವಿಶೇಷ ರೀತಿಯಲ್ಲಿಯೇ ಪ್ರತಿಸ್ಪಂದಿಸುತ್ತಿದೆ. ಈ ಬಗೆಯಲ್ಲಿ ಕನ್ನಡ ಭಾಷೆಯ ಮಕ್ಕಳ ಸಾಹಿತ್ಯ ಸವೆಸಿದ ಹಾದಿ ತುಂಬಾ ಕಿರಿದು. ಆದ್ಯಾಗಿಯೂ ಇಂದು ಕನ್ನಡದಲ್ಲಿ ಮಕ್ಕಳಿಗಾಗಿ ಬರೆಯುತ್ತಿರುವ ಲೇಖಕರಲ್ಲಿ ಕೆಲವರು ಭರವಸೆಯ ಬರಹಗಳನ್ನು ಮಕ್ಕಳಿಗೆ ನೀಡುತ್ತಿದ್ದಾರೆ. ಪರಂಪರೆಯ ಜನಪದ, ಪುರಾಣ, ಪಂಚತಂತ್ರ ಇತ್ಯಾದಿ ಎಲ್ಲಾ

ಬಗೆಯ ಸರಕುಗಳಿಗಿಂತ ಭಿನ್ನವಾಗಿ ಇ-ಕಾಲದ ಮಕ್ಕಳ ಮನಸ್ಸಿಗೆ ಹತ್ತಿರವಾಗುವಂತೆ ಕಥೆಗಳು ರಚನೆಯಾಗುತ್ತಿವೆ. ವರ್ತಮಾನದ ಫ್ಯಾಂಟಸಿಯಲ್ಲಿ ನಗರ, ಗ್ರಾಮೀಣ ಎಲ್ಲಾ ಬಗೆಯ ವಾಸ್ತವಿಕತೆಗೆ ಕಥೆ ಹತ್ತಿರವಾಗಲು ಬಯಸುತ್ತದೆ. ಆದರೆ ಆಧುನಿಕ ಫ್ಯಾಂಟಸಿ ಮುಖ್ಯವಾಗಿ ನಗರ ಫ್ಯಾಂಟಸಿಯನ್ನು ಹೆಚ್ಚು ಕೇಂದ್ರೀಕರಿಸಿರುತ್ತದೆ. ಆದಾಗಿಯೂ ಕನ್ನಡದಲ್ಲಿ ಗ್ರಾಮೀಣ ಸಂವೇದನೆಯ ಬರಹಗಳೂ ಬರುತ್ತಿವೆ.

ಹೊಸಗಾಲ ಯಾವತ್ತೂ ಹೊಸ ಹೊಸ ಬಗೆಯ ಪರಿವರ್ತನೆಗಳಿಗೆ ಸದಾ ತುಡಿಯುತ್ತಿರುತ್ತದೆ. ಈ ಹೊಸತು ಮಕ್ಕಳ ಲೋಕದಲ್ಲಿ ಹೊಸ ಲೋಕದ ಸೃಷ್ಟಿಗೆ ಕಾರಣವಾಗಿಬಿಡುತ್ತದೆ. ಅದುವೇ ಮಾಯಾಲೋಕ. ಈ ಲೋಕದಲ್ಲಿ ಎಲ್ಲವೂ ಸಾಧ್ಯವಾಗುತ್ತದೆ. ಅಸಾಧ್ಯವೆಂಬುದು ಇರದ ಲೋಕ ಅದು. ಅಂತಹ ಕೃತಿಗಳು ಕನ್ನಡದ ಮಟ್ಟಿಗೆ ಇನ್ನೂ ವಿಪುಲವಾಗಿ ಬಂದಿಲ್ಲ. ಇಲ್ಲವೆನ್ನುವಂತೆ ತೆಳುವಾಗಿ ಅಲ್ಲಲ್ಲಿ ಆನಂದ ಪಾಟೀಲ, ಚ.ಹ.ರಘುನಾಥ ಅಂತವರ ಕೆಲ ಕೃತಿಗಳು ಈ ಬಗೆಯ ಭಿನ್ನ ಜಗತ್ತನ್ನು ಅನಾವರಣ ಮಾಡಿವೆ. ಹೀಗೆ ಏನೂ ಇಲ್ಲದಲ್ಲಿ ಒಂದಷ್ಟು ಹೊಸತಿಗೆ ತುಡಿದ ಬರಹಗಳನ್ನು ಕಂಡು ಬರುತ್ತಲಿವೆ. ವರ್ತಮಾನಕ್ಕೆ ಸ್ಪಂದಿಸುತ್ತಲೇ ಆಧುನಿಕ ಫ್ಯಾಂಟಸಿಯನ್ನು ರಚಿಸಿದ ಕಥನಗಳನ್ನು ಪ್ರಸ್ತುತ ಉಪಘಟಕದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

೭.೪.೧. ವಿಶಿಷ್ಟ ಫ್ಯಾಂಟಸಿ ಸ್ವರೂಪದ ಕತೆಗಳು

ಮೇವುಂಡಿ ಮಲ್ಲಾರಿ ಅವರು ರಚಿಸಿದ 'ತಿರುವು ಮುರುವು' ಎನ್ನುವ ದೀರ್ಘದ ಕತೆಯೊಂದನ್ನು ರಚಿಸಿದ್ದರು. ಇಲ್ಲಿ ಸಿ.ಎಸ್.ಲೂಯಿಯ 'ಕ್ರಾನಿಕಲ್ಸ್ ಆಫ್ ನಾರ್ನಿಯಾ' ಕೃತಿಯಲ್ಲಿಯಂತೆ ಒಂದು ಕಪಾಟಿನಿಂದ ವಿಚಿತ್ರವಾದ ಜಗತ್ತಿಗೆ ತೆರಳುವುದು ನಡೆಯುತ್ತದೆ. ನವೋದಯದ ಸಮಯದಲ್ಲಿಯೇ ಈ ಬಗೆಯ ಹೊಸ ಕಲ್ಪನೆಯನ್ನು ಸೃಷ್ಟಿಸಿದ್ದು ವಿಶಿಷ್ಟವಾದುದಾಗಿದೆ. ಅವರಿಗೆ ಪ್ರೇರಣೆ 'ನಾರ್ನಿಯಾ'ದಿಂದಲೋ ಅಥವಾ ಸ್ವತಂತ್ರದ್ದೋ ಎನ್ನುವುದು ತಿಳಿಯುತ್ತಿಲ್ಲ. ಕನ್ನಡದ ನವೋದಯ ಸಮಯದಲ್ಲಿ ಮಕ್ಕಳ ಸಾಹಿತ್ಯ ಮೊದಲುಗೊಂಡಿತಾದರೂ ವಯಸ್ಕರ ಸಾಹಿತ್ಯ ಇಂಗ್ಲೀಷಿನಿಂದ ಪ್ರಭಾವ ಪ್ರೇರಣೆ ಪಡೆದುಕೊಂಡಷ್ಟು ಪಡೆದುಕೊಳ್ಳಲಿಲ್ಲ. ಅಲ್ಲಿ ಆಗಲೇ 'ಮಕ್ಕಳ ಸಾಹಿತ್ಯದ ಬಂಗಾರದ ಯುಗ' ಎಂದು ಗುರುತಿಸುವಷ್ಟು ವಿಶೇಷದ ಕೃತಿಗಳು ಕಂಡುಬಂದರೂ ಕನ್ನಡದ ಲೇಖಕರಾರೂ ಆ ಕಡೆ ಹೊರಳಲಿಲ್ಲ.

ಸಿ.ಎಸ್.ಲೂಯಿಯ 'ನಾರ್ನಿಯಾ' ಇಂದಿಗೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಸಿನಿಮಾ ಆಗಿ ಪ್ರಯೋಗಗೊಳ್ಳುತ್ತಲೇ ಇದೆ. ಅಲ್ಲಿ ಮಕ್ಕಳು ಮನೆಯಲ್ಲಿನ ಒಂದು ಕವಾಟದ ಮೂಲಕ ವಿಚಿತ್ರ ಲೋಕಕ್ಕೆ ಹೋಗುವುದರ ಮೂಲಕ ಕತೆ ತೆರೆದುಕೊಳ್ಳುತ್ತದೆ. ಮಲ್ಲಾರಿ ಅವರು ಕೂಡ ಈ ಬಗೆಯದನ್ನು ಮಾಡಿದ್ದಾರೆ. ಅವರಿಗೆ ಈ ಹೊಸ ಹೊಳಹು ಹೇಗೆ ಹೊಳೆಯಿತೋ, ಇದಕ್ಕೆ ಪ್ರೇರಣೆ ಅಥವಾ ಕಥೆಯ ಹುಟ್ಟಿನ ಹಿನ್ನೆಲೆಗೆ ಕಾರಣದ ಹುಡುಕಾಟ ಮತ್ತೊಂದು ಸಂಶೋಧನೆಯ

ವಿಷಯ. ಇದರಲ್ಲಿ ಹರಿದುಹೋದ ಒಂದು ಚಿತ್ರವನ್ನು ಕಿಟ್ಟು ಕೂಡಿಸುತ್ತಾ ಹೋಗಿ ಅದೊಂದು ಮನುಷ್ಯನ ಆಕಾರವಾಗುತ್ತದೆ. ಇನ್ನೂ ತುಸು ಉಳಿದಿರುವಾಗಲೇ ಆ ಮನುಷ್ಯ ಜೀವಂತವಾಗಿ ಉಳಿದ ಬೂಟನ್ನು ತೊಡಿಸು ಎಂದು ಅವಸರ ಮಾಡುತ್ತಾನೆ. ಗಡಿಬಿಡಿಯಲ್ಲಿ ಕಿಟ್ಟು ತಿಳಿಯದೆ ಅದನ್ನು ಅವನ ಕೈಗೆ ತೊಡಿಸಿಬಿಡುತ್ತಾನೆ. ಆ ಮನುಷ್ಯ ಕಿಟ್ಟುವನ್ನು ಕರೆದುಕೊಂಡು ಕಪಾಟಿನಿಂದ ಬೇರೆ ಜಗತ್ತಿಗೆ ಕರೆದುಕೊಂಡು ಹೋಗುತ್ತಾನೆ. ಭೂಮಿಯ ಮೇಲೆ ಫಳಫಳ ಹೊಳೆಯುವ ಸೂರ್ಯ, ಬುಡಮೇಲಾದ ಗಿಡಗಳು, ದೊರೆಸಾನಿಯೊಬ್ಬಳ ಕುದುರೆ ಗಾಡಿ ಎಲ್ಲ ನೋಡುತ್ತಾ ಕಿಟ್ಟು ವೈಚಿತ್ರ್ಯ ಅನುಭವಿಸುತ್ತಾ ಕೊನೆಗೊಮ್ಮೆ ಕಪಾಟಿನಿಂದ ಈಚೆ ಮರಳುತ್ತಾನೆ. ಅವನಿಗೆ ತಾನು ತಪ್ಪು ತಪ್ಪಾಗಿ ಬೂಟು ಕೈಗೆ ತೊಡಿಸಿದುದರಿಂದ ಆ ಚಿತ್ರದ ಮನುಷ್ಯನಿಗೆ ಏನೆಲ್ಲಾ ಕಷ್ಟವಾಯಿತು ಎಂಬುದರಿಂದ ಕನಿಕರವಾಗಿ ಮುಂದಿನ ಸಲ ಮಾಡುವುದಿಲ್ಲ ಎಂದು ಮಾತು ಕೊಡುತ್ತಾನೆ. ಎಲ್ಲೂ ಮಲ್ಲಾರಿ ಈ ಯಾವ ಕಲ್ಪನೆಯನ್ನೂ, ನೀತಿ ಹೇಳಲು ಬಳಸುವುದಿಲ್ಲ. ಬದಲಿಗೆ ತಾವೇ ಈ ಹಂದರಗಳು ಏನನ್ನೋ ಹೇಳುವಂತೆ ಮುಂದಿಡುತ್ತಾರೆ. ಮಾನವೀಯ ಸ್ಪಂದನವೇ ಕೊನೆಗೆ ಉಳಿಯುವಂಥದಾಗಿರುತ್ತದೆ.

ಮೇವುಂಡಿ ಮಲ್ಲಾರಿ ಕಟ್ಟಿಕೊಡುವ ಮಡ್ಡಮ್ಮನ ಕತೆಗಳು ಅವರದೇ ಆದ ಸೊಗಸಿನ ಸೃಷ್ಟಿಗಳಾಗಿವೆ. ಅದು ಒಂದು ಬಗೆಯಲ್ಲಿ ಅದ್ಭುತ ಎನ್ನಲಾಗದ, ಬಲು ಸಹಜವಾದ ಫ್ಯಾಂಟಸಿಯಾಗಿದೆ. ನಮ್ಮ ಸುತ್ತಮುತ್ತಲಿನ ಅಗುಹೋಗು ಎನ್ನುವಂತೆ ನಡೆಯುವುವಂಥದ್ದಾಗಿದೆ. ಮಡ್ಡಮ್ಮ ಹಳ್ಳಿಯ ಸಾದಾ ಸೀದಾ ಹೆಣ್ಣುಮಗಳು, ದಿಟ್ಟೆ, ವ್ಯಾವಹಾರಿಕ ಜಾಣೆ, ತನ್ನ ಐವರು ಮಕ್ಕಳ ಜವಾಬುದಾರಿ ಎಲ್ಲ ಅವಳದೇ ಆಗಿರುತ್ತದೆ. ಗಂಡನ ಪ್ರಸ್ತಾಪವೇ ಕತೆಯಲ್ಲಿ ಬರುವುದಿಲ್ಲ. ಈ ಮಡ್ಡಮ್ಮ ಮತ್ತು ಮಕ್ಕಳ ಸುತ್ತಲೇ ಕಟ್ಟಿಕೊಂಡ ಫ್ಯಾಂಟಸಿಯ ತುಣುಕು ತುಣುಕು ಚಿತ್ರಗಳು ಈ ಪುಟ್ಟ ಕತೆಗಳು. ಮಡ್ಡಮ್ಮನ ಕುರಿತು ಮಲ್ಲಾರಿಯವರ ಪುಸ್ತಕಗಳಲ್ಲಿಯೇ ನೋಡಿ ಓದುಗರು ಊಹಿಸಿಕೊಳ್ಳಬೇಕು, ಈ ಮಡ್ಡಮ್ಮ ಎಂಬುವವಳು ಒಂದು ಗೊಂಬಕ್ಕ. ಅಲ್ಲಿ ಅವರು ಬೊಂಬೆಯ ಚಿತ್ರವನ್ನೇ ಕೊಟ್ಟಿರುವುದು. ಈ ಗೊಂಬಕ್ಕ ಮಡ್ಡಮ್ಮನ ಐವರು ಮಕ್ಕಳು ಅಂದರೆ ಅವರೂ ಗೊಂಬೆಗಳೇ. ಆದರೆ ಅವು ನಮ್ಮ ನಡುವೆ ಕತೆಯಾಗಿ ಜೀವಂತವಾಗುತ್ತವೆ. ನಮ್ಮ ಮಕ್ಕಳ ಹಾಗೆ, ನಮ್ಮ ಹಳ್ಳಿಯ ಮಕ್ಕಳ ಹಾಗೆ ಆಡಿಕೊಳ್ಳುತ್ತವೆ. ಲುಟುಪುಟು ಪುಟ್ಟು, ಕಪ್ಪುರ ಕನಕ, ಕಿಟ್ಟದ ಕಿಟ್ಟಿ, ಚೆಂದನ ಚೆಲುವೆ, ಕಾಜಿನ ಕಾಸಿ, ಹೀಗೆ ಬಲು ಹಳ್ಳಿಯ ಖಾಸಾ ಹೆಸರುಗಳು ಅವರಾಗಿರುತ್ತವೆ.

ಮಡ್ಡಮ್ಮ ಒಂದು ಸಲ ತನ್ನ ಚಾಳೀಸು ಕಳೆದು ಕೊಳ್ಳುತ್ತಾಳೆ. ಅವಳು ಮನೆಯೆಲ್ಲಾ ಹುಡುಕತೊಡಗುತ್ತಾಳೆ. ಪಾಟಿಯಲ್ಲಿ ತಾನು ಬರೆದುದನ್ನು ತೋರಿಸಲು ಬಂದ ಲುಟುಪುಟು ಪುಟ್ಟು ಅವ್ವ ಹುಡುಕುವುದನ್ನು ನೋಡಿ ತಾನೂ ಹುಡುಕತೊಡಗುತ್ತಾನೆ. ಕಾಜಿನಕಾಸಿ ಮಾವ ಕೊಡಿಸಿದ ಹೊಸ ಲಂಗ ತೋರಿಸಲು ಬಂದವಳು, ಅವ್ವನ ಚಾಳೀಸು ಕಳೆದುದನ್ನು ಕೇಳಿ ತಾನೂ

ಹುಡುಕತೊಡಗುತ್ತಾಳೆ. ಹೀಗೆಯೇ ಎಲ್ಲಾ ಮಕ್ಕಳೂ ಅವ್ವನ ಸುತ್ತ ಹುಡುಕತೊಡಗುತ್ತಾರೆ. ಮನೆಯಲ್ಲೆಲ್ಲೂ ಸಿಗದೆ ಮಡ್ಡಮ್ಮ ಪೇಟೆಗೆ ಹೋಗಿ ಅಲ್ಲಿ ಒಳಗಿನದು ತಿನ್ನು, ಹೊರಗಿನದು ಎಸೆ ಎನ್ನುವ ಬಾಳೆಯಹಣ್ಣಿನ ಬುಟ್ಟಿಯಲ್ಲಿ, ಹೊರಗಿನದು ತಿನ್ನು ಒಳಗಿನದು ಎಸೆ ಎನ್ನುವ ಮಾವಿನಹಣ್ಣಿನ ಬುಟ್ಟಿಯಲ್ಲಿ, ಹೊರಗಿನದು ಒಳಗಿನದು ತಿನ್ನು ಎನ್ನುವ ಪೇರಲಹಣ್ಣಿನ ಬುಟ್ಟಿಯಲ್ಲಿ, ಹಾಗೆಯೇ ಉಡು, ಹೊದೆ, ಹಾಸು, ಹೊಲಿದು ಕೊಡು ಎನ್ನುವ ಬಟ್ಟೆಯ ಅಂಗಡಿಯಲ್ಲಿ, ಎಲ್ಲೆಲ್ಲೂ ಹುಡುಕಿ ಸಿಗದೆ ನಿರಾಸೆಗೊಂಡು ಮರಳುತ್ತಾಳೆ. ದಾರಿಯಲ್ಲಿ ಪುಟಾಣಿ ಗುಬ್ಬಚ್ಚಿಯೊಂದು ಅವಳನ್ನು ಕರೆಯುತ್ತದೆ. ಅದು ಹೊಸ ಮನೆಯನ್ನು ಕಟ್ಟಿಕೊಂಡಿರುತ್ತದೆ. ಮಡ್ಡಮ್ಮ ಆಯ್ತು ಎಂದು ಗಿಡದಲ್ಲಿ ಅದರ ಮನೆಯನ್ನು ನೋಡಿ ಸಂತಸಪಡುತ್ತಾಳೆ. ಅವಳವೇ ಚಾಳೀಸಿನ ಗಾಜುಗಳು ಅಲ್ಲಿ ಬಾಗಿಲಿನ ಆಚೀಚೆ ಕಿಟಕಿಗಳಾಗಿರುವುದು ಅವಳಿಗೆ ಅರಿವಿಗೆ ಬರುತ್ತದೆ. ಮನೆ ಚೆಂದವಾಗಿತ್ತು, ಪುಟ್ಟ ಗುಬ್ಬಕ್ಕನದು, ಆಕೆ ಸಂತೋಷಪಟ್ಟಳೇ ಹೊರತು, ಚಾಳೀಸು ತನ್ನದು ಅದು, ಕೊಡು ಎಂದು ಮರಳಿ ಕೇಳದೆ ಮನೆಗೆ ಮರಳಿದಳು. ಈ ಕತೆಯಲ್ಲಿ ಮಕ್ಕಳಿಗೆ, ಗುಬ್ಬಿಯಂಥ ಕಿರು ಜೀವಿಗಳಿಗೆ ಮಡ್ಡಮ್ಮ ತೋರುವ ಕರುಣೆ ಆದರ ವಾಸ್ತವ ಜಗತ್ತಿನಲ್ಲಿ ಯಾರೂ ತೋರದೆ ಇರುವ ಭಾವವಾಗಿದೆ. ಫ್ಯಾಂಟಸಿ ಕಥೆಗಳು ಮಕ್ಕಳಲ್ಲಿ ಬೆಳೆಸಬಹುದಾದ ಮೌಲ್ಯಗಳನ್ನು ಮೇವುಂಡಿಯವರ ಕಥೆಗಳಲ್ಲಿ ಕಾಣಬಹುದು.

ಮಡ್ಡಮ್ಮನೊಳಗಿನ ತಾಯಿ ಹೃದಯವೇ ಹಲವಾರು ಪ್ರಸಂಗಗಳಲ್ಲಿ ಕಾಣಿಸಿ ಮಡ್ಡಮ್ಮನ ಕತೆಗಳು ಹೆಣೆಯಲ್ಪಟ್ಟಿವೆ. ಇನ್ನೊಂದು ಸಲ ಬಿಟ್ಟಿ ಬೆನಕ ಇಂಜಿನ್ನಾಗಿ ಹಸಿರು ಬೋರಂಗಿ, ಎಮ್ಮೆಗೊಡ್ಡುಗಳು ಡಬ್ಬಿಗಳಲ್ಲಿ ಕುಳಿತು ಗಾಡಿ ಆಟ ನಡೆದಿತ್ತು. ಮಡ್ಡಮ್ಮ ಕುತೂಹಲದಿಂದ ನೋಡುತ್ತಾಳೆ. ಮಡ್ಡಮ್ಮ ತನ್ನ ಆಟಕ್ಕೆ ಮಕ್ಕಳಿಗೆಂದು ಕೂಡಿಸಿ ಇಟ್ಟಿದ್ದ ಕಡ್ಡಿಪೆಟ್ಟಿಗೆಳನ್ನು ಒಯ್ದು ಗಾಡಿ ಆಟ ಮಾಡಿ ಆಡಿಕೊಂಡಿದ್ದವು ಅವು. ಮಡ್ಡಮ್ಮ ತನ್ನ ಕಡ್ಡೀಪೆಟ್ಟಿಗೆಗಳು ಕಳುವಾಗಿವೆ ಎಂದು ಗೋಳಾಡಲಿಲ್ಲ, ಬದಲಿಗೆ ಸಂತಸ ಪಟ್ಟಳು, ತಿರುಗಿ ಬೇಡಲಿಲ್ಲ. ಹೀಗೆಯೇ ಗಾಳಿಯ ಹಾವಳಿ ಹೆಚ್ಚಾಗಿ ಅವಳು ಒಗೆದು ಒಣಹಾಕಿದ ಬಟ್ಟೆಗಳು ಹಾರಿ ಹೋಗಿ ಅವನ್ನು ಪ್ರಾಣಿಗಳೆಲ್ಲ ಸಂತಸದಿಂದ ತಮಗೇ ಎಂದು ಧರಿಸಿಬಿಟ್ಟಿದ್ದವು.

ಮಡ್ಡಮ್ಮನ ಮಕ್ಕಳು ಆಟ ಆಡಲಿಕ್ಕೆಂದು ಹೋದವರು ತಮ್ಮವೇ ಬಟ್ಟೆಗಳು ಪ್ರಾಣಿಗಳ ಮೇಲಿರುವುದನ್ನು ನೋಡಿ ಅವನ್ನೆಲ್ಲ ಕರೆದುಕೊಂಡು ಅವ್ವನ ಬಳಿಗೆ ಬಂದವು. ಮಡ್ಡಮ್ಮ ರಮಿಸಿ ರಮಿಸಿ ಒಂದೊಂದನ್ನೇ ತೆಗೆದುಕೊಂಡಳು. ಆದರೆ ಪುಟಾಣಿ ಗಿಣಿಮರಿ ತಾನು ಹಾಕಿಕೊಂಡಿದ್ದ ಕಸೂತಿ ಕುಪ್ಪುಸ ಕೊಡಲೊಪ್ಪಲಿಲ್ಲ, ಅದು ತನಗೇ ಬೇಕು ಎಂದು ಹಟ ಹಿಡಿಯಿತು. ಸರಿ, ಮಡ್ಡಮ್ಮ ಅದರ ಮನಸ್ಸನ್ನು ನೋಯಿಸಲಿಲ್ಲ, ಅದಕ್ಕೇ ಕೊಟ್ಟಳು. ಹೀಗೆ ಈ ಪುಟ್ಟ ಪುಟ್ಟ ಕತೆಗಳು ಮಡ್ಡಮ್ಮನ ತಾಯಿ ವ್ಯಕ್ತಿತ್ವವನ್ನು ಪುಟ್ಟದಾಗಿ ಕಟ್ಟಿಕೊಡುವ ಫ್ಯಾಂಟಸಿ ಆಪ್ಯಾಯಮಾನವಾದುದಾಗಿದೆ.

ಮನುಷ್ಯನೊಳಗೆ ಇರಬೇಕಾದ ಮಾನವೀಯ ಗುಣಗಳನ್ನು ಮಡ್ಡಮ್ಮ ಎನ್ನುವ ಪುಟ್ಟ ಗೊಂಬೆಯೊಂದರ ಮೂಲಕ ಮೇವುಂಡಿಯವರು ಹೇಳಿಸಿರುವುದು, ಅತಿವಾಸ್ತವ ಲೋಕದ ಅನಾವರಣವನ್ನು ತೆರೆದಿಡುತ್ತದೆ.

ಮಕ್ಕಳಿಗಾಗಿ ಆಸ್ಥೆಯಿಂದ ಬರೆದ ಕನ್ನಡದ ಮುಖ್ಯ ಲೇಖಕರಲ್ಲಿ ಚಂದ್ರಕಾಂತ ಕರದಳ್ಳಿ ಅವರೂ ಒಬ್ಬರು. ಅವರು ಬರೆದ 'ಉಪ್ಪಿನ ಗೊಂಬೆ' ಕಾದಂಬರಿಯು ಗೊಂಬೆಗಳ ನಿರೂಪಣೆಯ ಮೂಲಕ ಫ್ಯಾಂಟಸಿ ಕಥೆಯೊಂದನ್ನು ಹೇಳುತ್ತದೆ. ಗೊಂಬೆಗಳ ಮೂಲಕ ಕಥೆಗಳನ್ನು ಹೇಳಿದ್ದು ಕನ್ನಡದಲ್ಲಿ ಇದು ಮೊದಲಲ್ಲವಾದರೂ, ಕರದಳ್ಳಿ ಅವರ ಈ ಗೊಂಬೆಗಳ ಲೋಕ ವಾಸ್ತವಲೋಕದ ಜೊತೆ ಜೊತೆಗೇ ಸಾಗುತ್ತಲೇ ಅತಿವಾಸ್ತವ ಜಗತ್ತನ್ನು ತೆರೆದಿಡುವ ಮೂಲಕ ಹೊಸತನ್ನು ತಂದಿರಿಸಿದೆ. ಕನ್ನಡದಲ್ಲಿ 'ಮಡ್ಡಮ್ಮನ ಕಥೆಗಳು' ಮೂಲಕ ಗೊಂಬೆಗಳ ಬದುಕಿನ ಅತಿವಾಸ್ತವ ಲೋಕವನ್ನು ಹಿರಿಯ ಲೇಖಕರಾದ ಮೇವುಂಡಿ ಮಲ್ಲಾರಿ ಈಗಾಗಲೇ ಹೇಳಿಯಾಗಿದೆ. ಪ್ರಸ್ತುತ ಕೃತಿ ಮಲ್ಲಾರಿಯವರ ಕಥನ ಮಾದರಿ ಅನುಸರಿಸಿದರೂ ಫ್ಯಾಂಟಸಿ ಕಥೆ ಹೇಳುತ್ತಲೇ ವಾಸ್ತವ ಪ್ರದೇಶ, ಕಾಲ, ಮೌಲ್ಯಗಳ ಎಚ್ಚರಗಳನ್ನು ಒಳಗೊಂಡು ರಚಿತವಾಗಿರುವ ಸ್ವರೂಪ ವಿಶಿಷ್ಟವಾಗಿದೆ.

ಕರದಳ್ಳಿಯವರ ಈ ಕಥೆಯಲ್ಲಿ; ಸಮುದ್ರದ ದಡದ ಮಡಿಗಳಲ್ಲಿ ತಯಾರಿಸುತ್ತಿದ್ದ ಉಪ್ಪಿನ ರಾಶಿಯಲ್ಲಿನ ಒಂದು ಉಪ್ಪಿನ ತುಂಡು ಗೊಂಬೆಯ ಆಕಾರ ಪಡೆಯುತ್ತದೆ. ಜೀವವನ್ನೂ ತಳೆಯುತ್ತದೆ. ಮಾನುಷ ಲೋಕದ ಎಲ್ಲಾ ಸಂಗತಿಗಳನ್ನು ಬೆರಗುಗಣ್ಣಿನಿಂದ ನೋಡುತ್ತಲೇ ತನ್ನ ಗೊಂಬೆಗಳ ಲೋಕದ ಪ್ರಸಿದ್ಧ ಸ್ಥಳ ಚನ್ನಪಟ್ಟಣಕ್ಕೆ ಹೋಗಲು ಬಯಸಿ ಲಾರಿಯೊಂದರ ಮೂಲಕ ಚನ್ನಪಟ್ಟಣಕ್ಕೆ ಬರುತ್ತದೆ. ತುಂಬಾ ಕಷ್ಟ ಪಟ್ಟು ಹುಡುಕಿದ ನಂತರ ಗೊಂಬೆಗಳ ಅಂಗಡಿಯೊಂದು ಸಿಕ್ಕು ಅವುಗಳೊಂದಿಗೆ ಸಂಭಾಷಣೆ ನಡೆಸುತ್ತದೆ. ಈ ಸಂಭಾಷಣೆ ಮಾನವೇತರ ಜಗತ್ತಿನ ಭಿನ್ನ ಸಂವಹನ ಮಾಧ್ಯಮಕ್ಕೆ ಉದಾಹರಣೆಯಂತಿದೆ. 'ಎಲ್ಲಾ ಗೊಂಬೆಗಳು ಒಂದು ಕಡೆ ಕೂಡಿದವು. ಎಂದರೆ ಕಣ್ಣು ಕಣ್ಣು ಕೂಡಿದವು. ತಮ್ಮ ತಮ್ಮ ಭಾಷೆಯಲ್ಲಿ ಮಾತನಾಡಿದವು'.[೪೫] ಕಣ್ಣುಗಳ ಮೂಲಕ ನಡೆಸುವ ಈ ಸಂಭಾಷಣೆ ವಿಶಿಷ್ಟವಾದುದಾಗಿದೆ.

ಮಕ್ಕಳಿಗೆ ನಿಸರ್ಗ ಕಾಳಜಿಗಳ ಕಥೆ, ನಾಟಕಗಳನ್ನು ಸೃಷ್ಟಿಸುವ ಮೂಲಕ ಮಕ್ಕಳಲ್ಲಿ ನೆಲಮೂಲ ಸಂಸ್ಕೃತಿಯ ಅರಿವನ್ನು ಮೂಡಿಸಲು ಪ್ರಯತ್ನಿಸುತ್ತಿರುವ ಕನ್ನಡದ ಹಿರಿಯ ಲೇಖಕರಾದ ಕೃಷ್ಣಮೂರ್ತಿ ಬಿಳಿಗೆರೆ ಅವರು ಕೂಡ 'ಇರುವೆ ಗೂಡೊಳಗೆ ಒಂದು ಸುತ್ತು' ಕಥೆಯ ಮೂಲಕ ಇರುವೆಗಳ ಸಂಭಾಷಣಾ ಮಾಧ್ಯಮವನ್ನು ಪರಿಚಯಿಸಿದ್ದಾರೆ. 'ನೂರಾರು ಇರುವೆಗಳು ಗೂಡೊಳಗೆ ಹೋಗುವುದು ಬರುವುದು ನಡೆಯುತ್ತಿತ್ತು. ಪರಸ್ಪರ ಮುತ್ತಿಟ್ಟು ಸಾಗುತ್ತಿದ್ದವು. ಇವರಿಬ್ಬರಿಗೂ ಮುತ್ತಿಟ್ಟು ಮುತ್ತಿಟ್ಟು ಸಾಗುತ್ತಿದ್ದುದು ಸಹಜವೇ ಆಗಿತ್ತು. ಆಗ ಭೂಮಿಕಾ ಇದೇಕೆಂದು ಕೇಳಿದಳು. ಎಲ್ಲರಿಗೂ ಭಾಷೆ ಇದ್ದೇ ಇದೆ. ಇದು ನಮ್ಮ ಭಾಷೆ'[೪೬](ಇರುವೆ ಗೂಡೊಳಗೆ ಒಂದು ಸುತ್ತು)ಇಲ್ಲಿ ಬಿಳಿಗೆರೆಯವರು ಇರುವೆಗಳ ಸಂವಹನ ಮಾಧ್ಯಮ ಮುತ್ತು ಕೊಡುವ ಮೂಲಕ ನಡೆಯುತ್ತದೆ,

ಎಂದು ತಿಳಿಸಿಕೊಡುವ ಮೂಲಕ ಫ್ಯಾಂಟಸಿ ಕಥೆಗಳ ಜೊತೆಗೆ ನಿಸರ್ಗದ ಜೀವಿಗಳ ಕುರಿತಾದ ವಿವರಗಳನ್ನೂ ಕಟ್ಟಿಕೊಡುತ್ತಾರೆ. ಆದರೆ ಚಂದ್ರಕಾಂತ ಕರದಳ್ಳಿ ಅವರ ಪ್ರಸ್ತುತ ಕಾದಂಬರಿಯಲ್ಲಿ ನಿರ್ಜೀವ ಗೊಂಬೆಗಳ ಕಣ್ಣುಗಳ ಮಾತುಕತೆ ಕಣ್ಣುಗಳ ಮೂಲಕ ನಡೆಯುತ್ತಿರುವಂತೆ ಚಿತ್ರಿಸಲಾಗಿದೆ. 'ಉಪ್ಪಿನ ಗೊಂಬೆ' ಕಾದಂಬರಿ ಫ್ಯಾಂಟಸಿ ಕಥನವೇ ಆದರೂ ವಾಸ್ತವದ ಎಚ್ಚರವನ್ನು ಒಳಗೊಂಡಿರುವ ಆಧುನಿಕ ಬರಹವಾಗಿದೆ. ಇದರಲ್ಲಿ ಪಟ್ಟಣ ಮತ್ತು ಗ್ರಾಮೀಣ ಬದುಕಿನ ಅಂತರಗಳನ್ನು ಭಾವನಾತ್ಮಕವಾಗಿ ನಿರೂಪಿಸಲಾಗಿದೆ. ಚನ್ನಪಟ್ಟಣದ ಗೊಂಬೆಗಳು ಸಮುದ್ರದ ಪರಿಸರದ ಅರಿವಿಲ್ಲದೆ ವರ್ತಿಸಿದಾಗ ಉಪ್ಪಿನ ಗೊಂಬೆ ನುಡಿಯುವ ಮಾತುಗಳು ನಗರದ ಮಕ್ಕಳು ಮತ್ತು ಗ್ರಾಮೀಣ ಜಗತ್ತಿನ ನಡುವೆ ಇರುವ ಅಂತರವನ್ನು ಸೂಚಿಸುತ್ತದೆ. 'ಅಯ್ಯೋ! ನೀವು ಚಿಪ್ಪು ನೋಡಿಲ್ವಾ ಎಷ್ಟೆಂದರೂ ನೀವು ಪಟ್ಟಣದ ಗೊಂಬೆಗಳಲ್ಲವೇ'.[೪೭] ಮನುಷ್ಯರ ಜಗತ್ತಿನ ಭಾಗವಾಗಿಯೇ ವರ್ತಿಸುವ ಮೇವುಂಡಿಯವರ ಮಡ್ಡಮ್ಮನ ಗೊಂಬೆಗಳ ಲೋಕಕ್ಕೂ ಪ್ರಸ್ತುತ ಉಪ್ಪಿನ ಗೊಂಬೆಗಳ ಅತಿವಾಸ್ತವ ಲೋಕಕ್ಕೂ ಅಂತರವಿರುವುದು ಕಂಡುಬರುತ್ತದೆ.

ಫ್ಯಾಂಟಸಿ ಕಥೆಗಳಲ್ಲಿ ಅತಿವಾಸ್ತವ ಸಂಗತಿಗಳು ಇರುವುದು ಸಹಜ. ಆದರೆ ಹೊಸಗಾಲದ ಫ್ಯಾಂಟಸಿ ಕಥೆಗಳು ಅತಿವಾಸ್ತವ ಸಂಗತಿಗಳಿಂದ ಕೂಡಿದರೂ ವಾಸ್ತವದ ಎಚ್ಚರವನ್ನು ಸದಾ ಹೊಂದಿರುತ್ತವೆ. ಅದರಲ್ಲೂ ಪ್ರಾದೇಶಿಕ ವಿವರಣೆಗಳು ಬಂದಾಗ ನಿರ್ದಿಷ್ಟ ಪ್ರದೇಶದ ಕುರಿತಾದ ವಿವರಣೆಗಳನ್ನು ವಾಸ್ತವದಲ್ಲಿ ಇರುವಂತೆ ನೀಡಲಾಗುತ್ತದೆ. ಈ ಕಥನದಲ್ಲಿ ಉಳವಿ ಚನ್ನಬಸವಣ್ಣನ ಕುರಿತು ಪ್ಲಾಸ್ಟಿಕ್ ಗೊಂಬೆಯೊಂದು ವಿವರಣೆ ನೀಡುವುದನ್ನು ಉಲ್ಲೇಖಿಸಬಹುದು. ಕಥೆಯ ಕೊನೆಯಲ್ಲಿ, ಸಮುದ್ರಕ್ಕೆ ಚನ್ನಪಟ್ಟಣದ ಗೊಂಬೆಗಳನ್ನು ಕರೆತಂದ ಉಪ್ಪಿನಗೊಂಬೆಯು ಗೊಂಬೆಗಳಿಗಾಗಿ ಮುತ್ತು-ಹವಳಗಳನ್ನು ತರುವ ಸಲುವಾಗಿ ನೀರಿಗಿಳಿದು ಕರಗಿ ಹೋಗುತ್ತದೆ. ಉಪ್ಪು ನೀರಿನಲ್ಲಿ ಕರಗುತ್ತದೆ ಎನ್ನುವ ತತ್ವವನ್ನು ಫ್ಯಾಂಟಸಿ ಕಥೆಯೊಂದರಲ್ಲಿ ಸಹಜವೆನ್ನುವಂತೆ ತೋರಿಸಿರುವುದು ಆಧುನಿಕ ಫ್ಯಾಂಟಸಿ ಕಥೆಗಳು ಅತಿವಾಸ್ತವ ಸಂಗತಿಗಳನ್ನು ಒಳಗೊಂಡಿದ್ದರೂ ಕೆಲವು ನೈಜ ಸಂಗತಿಗಳಿಂದ ಮುಕ್ತವಾಗಿರುವುದಿಲ್ಲ ಎನ್ನುವುದನ್ನು ಪ್ರಸ್ತುತ ಕತೆ ಸಾಬೀತು ಪಡಿಸುತ್ತದೆ.

ಗೊಂಬೆಗಳ ಮೂಲಕ ಕಥೆ ಕಟ್ಟುವ ಪರಂಪರೆ ಎಲ್ಲಾ ಕಾಲ, ಭಾಷೆಗಳ ಕಥೆಗಳಲ್ಲೂ ಕಂಡುಬರುತ್ತದೆ. ಇದೇ ಪ್ರಬಂಧದ ಮತ್ತೊಂದು ಘಟಕದಲ್ಲಿ ವಿಶ್ಲೇಷಣೆ ಮಾಡಿರುವ ಸ್ವೀಡನ್ನಿನ ಲೇಖಕಿ ಜುಜ್ಜಾ ಥಾಮಸ್ ವೈಸ್‌ಲ್ಯಾಂಡರ್ ಅವರ 'ಉಯ್ಯಾಲೆಯಲ್ಲಿ ಹಸು' ಕಥೆಯ ಹಸು ಗೊಂಬೆಯೇ ಆಗಿದೆ. ನಿರ್ಜೀವ ಜೀವಿಯೊಂದು ಮಾನುಷ ಬಯಕೆಗಳನ್ನು ಹೊಂದಿದ್ದರೂ ಗೊಂಬೆಯೊಂದು ನಡೆಸುವ ತುಂಟತನಗಳ ಅತಿವಾಸ್ತವ ನಡೆವಳಿಕೆಗಳ ಮೂಲಕ ಮಕ್ಕಳ ಮನಸ್ಸನ್ನು ಸೆಳೆಯುವ ವಿಧಾನವನ್ನು ಲೇಖಕಿ ಅಲ್ಲಿ ಅನುಸರಿಸಿದ್ದಾರೆ. ಕನ್ನಡದ ಲೇಖಕರೂ ಹೊಸಗಾಲದಲ್ಲಿ ಈ ಬಗೆಯಲ್ಲೂ ವಿಶಿಷ್ಟ ಪ್ರಯತ್ನಗಳನ್ನು ಮಾಡುತ್ತಿರುವುದಕ್ಕೆ ಈ ಮೇಲಿನ ಕೆಲವು ಕಥೆಗಳು ಉದಾಹರಣೆಗಳಾಗಿವೆ.

ಹೊಸಗಾಲದ ಹೊಸ ಸ್ಪಂದನೆಯ ಹಂದರಗಳು ಆನಂದ ಪಾಟೀಲರ ಕೃತಿಗಳಲ್ಲಿ ವಿಶೇಷವಾಗಿ ಸಿಗುತ್ತವೆ. ಅದು ಅವರ ಸ್ವಭಾವವೇ ಎನ್ನುವಷ್ಟು ಅವರು ಈ ಬಗೆಯ ಕಥಾ ಹಂದರಗಳಿಗೆ ಹೊರಳುವುದು ಕಾಣುತ್ತದೆ. ಅನೇಕ ಪುಟ್ಟ ರಚನೆಗಳು, ದೀರ್ಘದವು, ಕೇವಲ ಮಾತುಕತೆ ಎನ್ನುವಂಥವು, ಪುಟ್ಟ ಪತ್ರದ ಬರವಣಿಗೆಯಂಥವು ಹೀಗೆ ನಾನಾಬಗೆಯಲ್ಲಿ ಈ ಬಗೆಯ ಬರವಣಿಗೆ ಅವರವು ಇವೆ. 'ಪುಟ್ಟಾರಿ ಆನೆ ಪುಟ್ ಪುಟ್' ಅವರ ದೀರ್ಘವಾದ ಕೃತಿ ಹೊಸಗಾಲದ ಒಂದು ವಿಶಿಷ್ಟವಾದ ಫ್ಯಾಂಟಸಿಯನ್ನು ಪ್ರತಿನಿಧಿಸುತ್ತದೆ. ಇದು ಇಂದು ಪಾಶ್ಚಾತ್ಯರಲ್ಲಿ ಕಾಣುತ್ತಿರುವ ದೀರ್ಘದ ಕಥಾ ಹಂದರಗಳನ್ನು ಉಳ್ಳಂತೆಯೇ ದೀರ್ಘವಾಗಿ ಹರಿದಿದ್ದರೂ ನಮ್ಮ ನಡುವಿನ ವಾಸ್ತವದ ಪರಿಸರದಲ್ಲಿ ಸೃಷ್ಟಿಸಿಕೊಂಡ ಫ್ಯಾಂಟಸಿಯಾಗಿರುವುದು ವಿಶೇಷವಾಗಿದೆ.

ಈ ಬಗೆಯ ಫ್ಯಾಂಟಸಿಯನ್ನು ಕನ್ನಡದ ಪರಿಸರದಲ್ಲಿ ಯಾರೂ ಸೃಷ್ಟಿಸಿಲ್ಲವಾದುದರಿಂದ ವಿಚಿತ್ರ ಭಾವದಿಂದಲೇ ಓದುಗರು ಭಾವಿಸುವ ಸಾಧ್ಯತೆ ಇದೆ. ಆದರೆ ಇಂಗ್ಲೀಷಿನಲ್ಲಿ ಇಂದು ಸಾಕಷ್ಟು ಕೃತಿಗಳು ಈ ಮಾದರಿಯ ಫ್ಯಾಂಟಸಿಯನ್ನು ಸೃಷ್ಟಿಸಿದ್ದು, ಅಲ್ಲಿ ಓದುಗರ ಸಂಖ್ಯೆಯೂ ಸಾಕಷ್ಟು ಕಾಣಿಸಿಕೊಂಡಿದೆ. ಅ ಕುರಿತ ಚರ್ಚೆಗಳೂ ನಡೆಯುತ್ತಿವೆ. ಇಲ್ಲಿ ಕಥಾನಾಯಕಿ ಶಾಲೆಗೆ ಹೋಗುವ ಹುಡುಗಿ, ಕತೆ ಅವಳ ನಿರೂಪಣೆಯಾಗಿಯೇ ನಡೆಯುತ್ತದೆ. ಅವಳ ಅಜ್ಜಿ ಸಾಯುವ ಮುಂದೆ ಯಾರಿಗೂ ಗೊತ್ತಾಗದಂಗೆ ಕೈಯಲ್ಲಿ ಇರಿಸಿ ಹೋದ ಪುಟ್ಟ ಡಬ್ಬದಲ್ಲಿ ಇದ್ದ ಪುಟ್ಟ ಆನೆಮರಿ, ಅದು ಅಂಗೈಯಲ್ಲಿ ಪುಟ್ಟದಾಗಿ ನಿಲ್ಲಬಲ್ಲಂಥದು, ಆದರೆ ಅದು ಮಾತನಾಡಬಲ್ಲದು, ಏನೆಲ್ಲ ಮಾಡಬಲ್ಲದಾಗಿರುತ್ತದೆ. ಅಂಥದು ಮುಂದೆಲ್ಲಾ ಹುಡುಗಿಯ ಜೊತೆಯಾಗಿ ಸೃಷ್ಟಿಸುವ ಮಾಯಾ ಜಗತ್ತು ಕಾದಂಬರಿಯುದ್ದಕ್ಕೂ ವಿಶಾಲವಾಗಿ ಹರಡಿದೆ. ಹುಡುಗಿ ಇತ್ತ ತನ್ನ ಸುತ್ತಲಿನ ವಾಸ್ತವಕ್ಕೂ ಸ್ಪಂದಿಸುತ್ತಾ, ಅತ್ತ ಫ್ಯಾಂಟಸಿಯ ಅವಾಸ್ತವಕ್ಕೂ ತೆರೆದುಕೊಳ್ಳುತ್ತಾ ದಿಗಿಲಿಗೆ ಒಳಗಾಗಿಬಿಡುತ್ತಾಳೆ. ಅವಳಿಗೆ ಹೀಗೆ ತನ್ನ ಕಾಲದಲ್ಲಿರುವುದು, ಜೊತೆಗೇ ಕಾಲವೇ ಇಲ್ಲದ ಮುಕ್ತ ವಾತಾವರಣದಲ್ಲಿ ಹೇಗೆಲ್ಲಾ ಇರುವುದು ಗೊಂದಲಗಳನ್ನು ಸೃಷ್ಟಿಸತೊಡಗುತ್ತದೆ. ಆನೆ ಅವಳಿಗೆ ಸ್ನೇಹದಲ್ಲಿ ತಾಯಿ, ಅಜ್ಜಿಯ ಹಾಗೆ ಜೊತೆಗೇ ಸಾಗುತ್ತದೆ. ಕೊನೆಗೂ ತನ್ನ ವಾಸ್ತವದ ಪರಿಧಿಯಿಂದ ಆಚೆಗಾಗದ ಹುಡುಗಿ ಆ ಮಾಯಾ ಜಗತ್ತಿನಿಂದ ಹೊರಬರಲು ನೋಡುತ್ತಾಳೆ. ಫ್ಯಾಂಟಸಿ ಮತ್ತು ವಾಸ್ತವಗಳ ತಾಕಲಾಟಗಳು ಇಲ್ಲಿ ಕಾಣುತ್ತಾ ಹೋಗಿವೆ. ಮನುಷ್ಯನ ಒಳ ಆಕಾಂಕ್ಷೆಯ, ಎಂದಿಗೂ ಕೈಗೂಡದ ಸ್ವಚ್ಛಂದ, ಸ್ವಾತಂತ್ರ್ಯ ಇಲ್ಲಿ ಪ್ರಶ್ನೆಯಾಗಿ ಕಾಡುತ್ತದೆ.

ವಾಸ್ತವವನ್ನು ಬಿಡದ, ಅವಾಸ್ತವ ಜಗತ್ತಿನಲ್ಲಿ ವ್ಯವಹರಿಸುತ್ತಲೇ ಅಲ್ಲಿನ ಸಂಗತಿಗಳಿಗೆ ಪ್ರತಿಕ್ರಿಯೆ ನೀಡುವ ಮಾದರಿಗಳು ಇಂಗ್ಲಿಷ್‌ನಲ್ಲಿ ಈಗಾಗಲೇ ಪ್ರಚುರವಾಗಿವೆ. 'ಆಲೀಸ್ ಇನ್ ವಂಡರ್‌ಲ್ಯಾಂಡ್' ಒಂದು ಉದಾಹರಣೆಯಾಗಿದೆ. ಆದರೆ ಇಲ್ಲಿನ ಹುಡುಗಿ ಆಲೀಸಳಂತೆ ಅತಿವಾಸ್ತವ ಜಗತ್ತಿನಲ್ಲಿ ಬರೀ ಪ್ರೇಕ್ಷಕಳಾಗುವುದಿಲ್ಲ. ಆ ಜಗತ್ತಿನೊಳಗೆ ಬಹು ದೂರ ಸಾಗಿ ಬಿಡುತ್ತಾಳೆ.

ಹಾಗಾಗಿಯೇ ಕೊನೆಗೆ ಅವಳಿಗೆ ಮಾಯಾ ಜಗತ್ತಿನಿಂದ ಹೊರ ಬರಲು ಕಷ್ಟವಾಗುತ್ತದೆ. ಕಾಲವೇ ಇಲ್ಲದ ಜಗತ್ತಿನಲ್ಲಿ ಹುಡುಗಿಯ ವಿಹಾರದ ಸಂದರ್ಭಗಳು ಕೃತಿಯನ್ನು ಹೈಯರ್ ಫ್ಯಾಂಟಸಿ ಸ್ವರೂಪದ ಹತ್ತಿರಕ್ಕೆ ಒಯ್ಯುತ್ತವೆ. ಹೊಸಗಾಲದ ಈ ಸಂದರ್ಭದಲ್ಲಿ ಈ ಕೃತಿಯ ಫ್ಯಾಂಟಸಿ ಸ್ವರೂಪವು, ಕನ್ನಡ ಮಕ್ಕಳ ಫ್ಯಾಂಟಸಿ ಕಥೆಗಳಿಗೆ ಮಾರ್ಗದರ್ಶಿ ಎನ್ನುವಂತಿದೆ.

ಆನಂದ ಪಾಟೀಲರ ಪುಟ್ಟ ಪ್ರಸಂಗಗಳ ಕಥಾಹಂದರಗಳೂ ವಿಶೇಷವಾಗಿ ಸೆಳೆಯುತ್ತವೆ. ಪ್ರಾಣಿ ಕಥೆಗಳ ವಿಭಾಗದಲ್ಲಿ ಅಂಥ ಕೆಲವನ್ನು ಚರ್ಚಿಸಲಾಗಿದೆ. ಅವರ 'ಹತ್ತು ಹತ್ತು ಇಪ್ಪತ್ತು' ಸಂಕಲನದಲ್ಲಿ ಹಲವಾರು ಒಂದು ಕಡೆಗೆ ಸಿಗುತ್ತವೆ. ಉದಾಹರಣೆಗೆ ಆಟದಲ್ಲಿ ಮುದದಿಂದ ಬಳಕೆಯಾಗಿ, ಆಮೇಲೆ ಕಡೆಗಣನೆಯಾದ ಮೇಲೆ ಬೊಂಬೆಯೇ ಹಳೆಯದನ್ನೆಲ್ಲ ನೆನೆಯುತ್ತಾ ಸ್ವಗತಕ್ಕೆ ಇಳಿಯುವ ಹತ್ತು ಬಗೆಗಳನ್ನು ನೋಡಬಹುದು. 'ಗೊಂಬೆ ಕೋಣೆಯೊಂದರ ಮೂಲೆಯಲ್ಲಿ ಸ್ಥಿತವಾಗಿ, ಮರೆತು ಹೋಗಿರುವುದು, ತನ್ನ ಸುತ್ತಲಿನ ದೃಶ್ಯಗಳನ್ನು ನೋಡುತ್ತಾ ಹಳೆಯ ದಿನಗಳನ್ನು ನೆನೆಯುತ್ತಾ ಬೇಸರ ಪಟ್ಟುಕೊಳ್ಳುವುದು, ತನ್ನನ್ನು ಹಚ್ಚಿಕೊಂಡ ಹುಡುಗಿ ಹೇಗೆಲ್ಲಾ ತನ್ನೊಡನೆ ಆಡುತ್ತಿದ್ದಳು'.[೪೮] ಹೀಗೆ ಏನೇನೋ ಅಪರೂಪದ ಪ್ರಸಂಗಗಳೆಲ್ಲಾ ನಡೆದದ್ದು ಎಲ್ಲ ಅಲ್ಬಮ್ ಹಾಗೆ ಅದರ ಮುಂದೆ ಸುಳಿದು ಹೋಗುವುದು ನಡೆಯುತ್ತದೆ.

ಒಂದು ಬಗೆಯಲ್ಲಿ ಆರ್ದ್ರ ಹೃದಯದ ಪಿಸುಮಾತಾಗಿ ಓದುಗರ ಹೃದಯವನ್ನು ಹೊಕ್ಕು ಸೂಕ್ಷ್ಮ ಸಂವೇದನಗೆಳಿಗೆ ಕಾರಣವಾಗುವ ಮಾತುಗಳು ಇಲ್ಲಿ ಕೇಳಿಬಿಡುತ್ತವೆ. ಇದೊಂದು ಅಪರೂಪದ ಸ್ವಗತವಾಗಿದೆ. ಹಾಗೆಯೇ ಇದೇ ಕೃತಿಯಲ್ಲಿನ ಇನ್ನೊಂದು ಪ್ರಸಂಗದಲ್ಲಿ ಒಬ್ಬ ಹುಡುಗ ವಿಜ್ಞಾನ ಪ್ರಯೋಗಾಲಯದಲ್ಲಿ ಪಾಠ ನಡೆದಿರುವಾಗ, ಹಿಂದೆ ನಿದ್ರೆ ಹೋಗಿ, ಎಲ್ಲರೂ ಬಿಟ್ಟೇ ಹೋಗಿ ಒಬ್ಬನೇ ಬಂದಿಯಾಗಿ ಬಿಡುತ್ತಾನೆ. ಅಲ್ಲಿ ಅವನು, ಅವನ ಎದುರಿಗೆ ಗಾಜಿನ ಕಪಾಟಿನಲ್ಲಿ ಗಾಳಿಗೆ ಮೆಲ್ಲಗೆ ಅಲುಗಾಡುತ್ತಿರುವ ಅಸ್ಥಿಪಂಜರ ಇಬ್ಬರೇ ಇರುತ್ತಾರೆ. ಅಸ್ಥಿಪಂಜರ ಇದ್ದಕಿದ್ದ ಹಾಗೆ ಹುಡುಗನೊಡನೆ ಮಾತನಾಡತೊಡಗುತ್ತದೆ. ಹುಡುಗನಲ್ಲಿನ ಯಾವ ಭಯಕ್ಕೂ ಅವಕಾಶ ಕೊಡದೆ ಮಾನವೀಯ ಸ್ಪಂದನಕ್ಕೇ ಎಳಸುವ ಈ ಸಮಯ ಮಕ್ಕಳ ಮನೋಲೋಕವನ್ನು ಕುತೂಹಲಕಾರಿಯಾಗಿ ತೆರೆಯುವಲ್ಲಿ ವಿಶೇಷವಾಗಿ ಕಾಣುತ್ತದೆ.

'ಗೊತ್ತಾಯ್ತು, ಗೊತ್ತಾಯ್ತು, ನೀನು ನನ್ನನ್ನೂ ಕೇವಲ ಅಸ್ಥಿಪಂಜರ ಅಂತ ತಿಳಿದಿಲ್ಲವಲ್ಲ ಸದ್ಯ ... ಆದರೆ ನೀನೀಗ ಕುಳಿತಿದಿಯಲ್ಲ ನನ್... ಎದುರಿಗೆ... ನಿನ್ನೊಳಗೆ ಎಲುವಿನ ಹಂದರ ಹೇಗೆ ಮಡಿಸಿಕೊಂಡು ಯಾವುದರ ಮೇಲೆ ಯಾವುದು ಬಂದು ಕುಳಿತಿದೆ...ಎಲ್ಲ ಸ್ಪಷ್ಟವಾಗಿ ನೋಡಬಲ್ಲೆ...'

'ಅಂದ್ರೆ ನಾನು ಅಸ್ಥಿಪಂಜರವಾಗಿ ಕಾಣತಾ ಇದ್ದೀನಾ ನಿನಗೆ...'

'ಹೂಂ... ಮತ್ತೆ... ಇಲ್ಲವಾ ಅಲ್ಲಿ ಒಳಗೆ... ನನ್ ಹಾಗೆ ಇದೆ ಮರಿ... ನನ್ ಹಾಗೇ ಇದೆ... ಆದರ ಮೇಲೆ ಕವಚ ಇದೆ'

'ಏರೀ ಕವಚ ಮಾತ್ರ ಇಲ್ಲ... ಒಟ್ಟೆ ಇದೆ... ಹಾಗೇ ಒಳಗಡೆ ಜೀವ ಇದೆ'

'ಹೂಂ ಇದೆ ಇದೆಯಪ್ಪ... ನಾನೆಲ್ಲಿ ಇಲ್ಲಾ ಅಂದೆ... ಅದಕ್ಕೇ ನಿನಗೆ ಬಿದ್ರೆ ಬಂತು...ಮಲಕ್ಕೊಂಡೆ... ನಿನ್ ಗೆಳೆಯರು ನಿನ್ನನ್ನು ಬಿಟ್ ಹೋಗಿಬಿಟ್ರು ಬಾಗಲೂ ಹಾಕ್ಕೊಂಡ್ಬಿಡ್ತು ನೀನೀಗ ಒಬ್ಬನೇ ಉಳಕೊಂಡಿರುವೆ. ಅದಕ್ಕೇ ನನ್ ಜೊತೆ ಇಷ್ಟೆಲ್ಲ ಮಾತನಾಡ್ತಾ ಇದೀಯಾ... ಜೀವ ಇಲ್ಲದೆ ಇದ್ರೆ ನೀನೂ ನನ್ ಹಾಗೇ ಇರತಾ ಇದ್ದೆ... ಇಬ್ರೂ ಪಕ್ ಪಕ್‌ದಲ್ಲಿ ಹೀಗೆ ನಿಂತಕೊಂಡಿರಬಹುದಾಗಿತ್ತು... ಹೂಂ ನನಗೂ ಒಳ್ಳೇ ಕಂಪನಿ ಆಗ್ತಿತ್ತು ... ಹಹ್ಹಹಹ್ಹ...''

ಹೀಗೆಲ್ಲಾ ಮಾತುಕತೆ ನಡೆಯುವುದು ಅಲ್ಲಿ ಕಾಣುತ್ತದೆ. ಅವರ ಇನ್ನೊಂದು ಪ್ರಸಂಗದಲ್ಲಿ ರಾತ್ರಿ ಪುಟ್ಟ ಕಪ್ಪೆ ಮರಿ ಕಾಣಿಸಿಕೊಂಡು ಒಬ್ಬರೆ ಇರುವ ಲೇಖಕರಿಗೆ ಆ ಮನೆಯಲ್ಲಿ ಏನೇನೆಲ್ಲ ಅವರಿಗೇ ಅರಿಯದೆ ನಡೆಯುತ್ತದೆ, ಏನೆಲ್ಲಾ ಜೀವಗಳು ಸಾಮ್ರಾಜ್ಯ ಮಾಡಿಕೊಂಡಿವೆ, ಏನೇನೆಲ್ಲಾ ಹಿಂಸಾಕಾಂಡ ನಡೆಯುತ್ತದೆ, ಅದರಲ್ಲಿ ಲೇಖಕರೂ ಗೊತ್ತಿಲ್ಲದೆ ಹೇಗೆ ಭಾಗಿಯಾಗುತ್ತಿದ್ದಾರೆ ಎಲ್ಲವನ್ನೂ ನಿಡಿದಾಗಿ ಕತೆ ಮಾಡಿ ಹೇಳಲಾಗಿದೆ.

ಕೊನಗೆ ಅವರ ಕೈಗೆ ಸಿಗದೆ ಕುಪ್ಪಳಿಸುತ್ತಾ ಕುಪ್ಪಳಿಸುತ್ತಾ ಹೊರಗೆ ಸಾಗಿ, ಅವರ ಕೈಗೆ ಸಿಗದೆ ಮರೆಯಾಗಿ ಬಿಡುತ್ತದೆ. ಹಾಗೆಯೇ ಅಳಿಲು, ಗಾರ್ಡನ್ನಿನಲ್ಲಿನ ಎರಡು ಕಪ್ಪೆಗಳು, ದಿನವೂ ದಾರಿಯಲ್ಲಿ ಮರೆಯಲ್ಲಿ ಲೇಖಕರನ್ನೇ ನೋಡುವ ನಾಯಿ ಮುಂತಾದ ಅನೇಕ ಜೀವಗಳು ಲೇಖಕರಿಗೆ ಪತ್ರ ಬರೆಯುವ ಬರಹವೂ ಒಂದಿದೆ. ಇದೆಲ್ಲಾ ಹೊಸ ಬಗೆಯ, ನಮ್ಮ ನಡುವೆಯ ಸೂಕ್ಷ್ಮದ ಸಂವೇದನೆಗಳ ಲೋಕವನ್ನು ಬಿಚ್ಚಿಡುವ ಚೆಂದದ ದಾರಿಯಾಗಿ ಕಾಣತ್ತದೆ. ಇದು ಅವರದೇ ಲೋಕವಾಗಿದೆ.

'ಪಿಟ್ಟೂನ ಡೈರಿ' ಎನ್ನುವ ದೀರ್ಘಕಥನ ಒಂದಿದೆ. ಅಲ್ಲಿ ನಾಯಿಯೊಂದು ಶಾಲೆಯ ಒಬ್ಬ ಹುಡುಗನ ಬಳಿ ಇರುವ ಪುಟ್ಟದಾದ ಡೈರಿಯನ್ನು ಅದೇನೋ ಕುತೂಹಲಪಟ್ಟು ತೆಗೆದುಕೊಂಡು ಬರುತ್ತದೆ. ಆಮೇಲೆ ಆ ಹುಡುಗ ಎಷ್ಟೆಲ್ಲಾ ಹುಡುಕಿರಬಹುದು, ಏನೆಲ್ಲಾ ಮಾನಸಿಕವಾಗಿ ನೋವು ಅನುಭವಿಸಿರಬಹುದು ಎಂದು ತಾನೇ ಕಲ್ಪಿಸಿಕೊಳ್ಳುತ್ತದೆ. ಅವನಿಗೆ ಮರಳಿ ಮುಟ್ಟಿಸಲು ಬಯಸುತ್ತದೆ. ಆದರೆ ಆ ಹುಡುಗ ಅದಕ್ಕೆ ಸಿಗದೆ ಹೋಗುತ್ತಾನೆ. ಇಡೀ ಕತೆ ಆ ಹುಡುಗನನ್ನು ಹುಡುಕುವ, ಮಾನಸಿಕವಾಗಿ ಅದಕ್ಕಾಗಿ ನಲುಗುವ, ತನ್ನದೇ ಸುತ್ತಲಿನ ನಾನಾ ಬಗೆಯ ಅನುಭವಗಳನ್ನೆಲ್ಲಾ ಮುಂದಿಡುವ ಭಾವನಾತ್ಮಕವಾದ ಪ್ರಸಂಗ ಇದಾಗಿದೆ.

ಆನಂದ ಪಾಟೀಲರ 'ಗುಬ್ಬಿಯ ಕಥೆಗಳು' ಅತ್ಯಂತ ಸಹಜವಾದ ನಡೆವಳಿಕೆಗಳು ಮತ್ತು ಲೇಖಕರ ಸೂಕ್ಷ್ಮ ದೃಷ್ಟಿಕೋನ ಇರುವ ಕಥೆಗಳಾಗಿವೆ. ಈ ಕಥೆಯಲ್ಲಿ ಗುಬ್ಬಿಯೊಂದು ಲೇಖಕರನ್ನು ಗಟ್ಟಿ ಧ್ವನಿಯಲ್ಲಿ ಪ್ರಶ್ನಿಸುವ ಹೀಯ್ಯಾಳಿಸುವ ಮಟ್ಟಕ್ಕೆ ಸಲುಗೆಯನ್ನು ವ್ಯಕ್ತಪಡಿಸುತ್ತದೆ. ಲೇಖಕರ ಕಛೇರಿಯ ಟೇಬಲ್ಲಿನ ಮೇಲೆ ಬಂದು ಕೂತ ಗುಬ್ಬಿಯನ್ನು ಹೀಗೆ ಪ್ರಶ್ನಿಸುತ್ತಾರೆ:

'ಎಲ್ಲಿ ಸರ್ಕಸ್ ಸೇರಬೇಕು ಅಂದುಕೊಂಡಿರುವೆ?'

ನಿನಗೆ ಯಾವುದಾದರೂ ಸರ್ಕಸ್ ಕಂಪೆನಿ ಗೊತ್ತಿದೆಯೆ?

ನನಗೆಲ್ಲಿ ಗೊತ್ತು

'ಮತ್ತೆ ನಿಮ್ಮನೆ ಯಾಕೆ ಕೇಳೋದು?'[೫೦]

ಮೇಲ್ಕಾಣಿಸಿದ ಸಂಭಾಷಣೆಯಲ್ಲಿ ಗುಬ್ಬಿಯದೇ ಮೇಲುಗೈ, ಗುಬ್ಬಿಗಳೇ ಇಲ್ಲದಾಗಿರುವ ಈ ಹೊತ್ತಿನಲ್ಲಿ ಗುಬ್ಬಿಯೊಂದಿಗೆ ಲೇಖಕರು ಮಾಡಿರುವ ಈ ಬಗೆಯ ವಿನಯಪೂರ್ವಕ ಸಂಭಾಷಣೆ ಹೊಸತು ಮತ್ತು ವಿಶಿಷ್ಟವಾಗಿದೆ. ಇಷ್ಟಕ್ಕೂ ಸುಮ್ಮನಾಗದೆ ಗುಬ್ಬಿಯು ಒಮ್ಮೆ ಲೇಖಕರ ತಲೆಯ ಮೇಲೆ ಮಲ ಮಾಡಿ ಹೋಗುತ್ತದೆ. ಅದರ ಸಂಭಾಷಣೆ ಹೀಗಿದೆ;

'ಟಪ್' ತಲೆ ಮೇಲೆ ಏನೋ ಬಿತ್ತು, ಕೈ ಇಟ್ಟು ನೋಡಿದೆ ಇಶ್ಯ? 'ಥೂ ಹಾಳಾದ್ದು' ಅಂದೆ, ಅಯ್ಯೋ ಅವಸರವಾಗಿತ್ತು ಮಾರಾಯ ಅಂತು ಅದು.

'ನಿನಗವಸರ ಆದರೆ ನನ್ನ ತಲೆಯೇ ಬೇಕಿತ್ತೇನು?

'ಭಾರಿ ಸಿಟ್ಟು, ನೀನ್ಯಾವತ್ತೂ ಅವಸರ ಅನುಭವಿಸಿಲ್ಲಾ ನೋಡು'[೫೧].

ಗುಬ್ಬಿಯ ಈ ಮಾತು ಕೇಳಿ ಲೇಖಕರು ತಮ್ಮ ಬಾಲ್ಯದ ಪ್ರಸಂಗ ನೆನಪಿಸಿಕೊಂಡು ಹೋಗುತ್ತಾರೆ. ನಿಸರ್ಗದಲ್ಲಿನ ಇಂಥ ಕ್ಷುಲ್ಲಕ ಜೀವಿಗಳ ಬಗ್ಗೆಯೂ ಹೊಸಗಾಲದ ಲೇಖಕರು ಲಕ್ಷ್ಯವಹಿಸಿ ಬರೆಯುತ್ತಿರುವುದಕ್ಕೆ ಈ ಬಗೆಯ ಬರಹಗಳು ಉದಾಹರಣೆಗಳಾಗಿ ಕಂಡುಬರುತ್ತವೆ.

'ಪುಟ್ಟ ಲಕ್ಷ್ಮಿ ಕಥೆಗಳು' ಇದು ರಘುನಾಥ ಚ ಹ., ಅವರ ಹೊಸಗಾಲದ ಹೊಸ ಕಥೆಗಳ ಸಂಕಲನವಾಗಿದೆ. ಪುಟ್ಟಲಕ್ಷ್ಮಿ ಎನ್ನುವ ಹಡುಗಿಯ ಸುತ್ತ ಸುತ್ತುವರೆದಿರುವ ಕಥೆಗಳು ಮಂತ್ರಗಳಿದ್ದರೂ ಜನಪದವಲ್ಲದ, ಪ್ರಾಣಿಗಳಿದ್ದರೂ ಪಂಚತಂತ್ರವಲ್ಲದ ವಿಶಿಷ್ಟ ಬಗೆಯ ರಚನೆಯಾಗಿದೆ. ಕತೆಯಲ್ಲಿ ಬರುವ ಎಲ್ಲಾ ಕತೆಗಳಲ್ಲೂ ಪುಟ್ಟಲಕ್ಷ್ಮಿ ದೆವ್ವಗಳಿಗೆ ನೀಡುವ ಶಿಕ್ಷೆ ಇಡೀ ಕಥನಗಳ ಹಿಂದೆ ಅಡಗಿರುವ ಉದ್ದೇಶವನ್ನು ಎತ್ತಿ ತೋರಿಸುತ್ತದೆ. ಪ್ರತೀ ಬಾರಿ ಅವಳಿಂದ ಶಿಕ್ಷೆಗೆ ಒಳಗಾಗುವ ದೆವ್ವಗಳು ಯಂತ್ರಗಳಾಗಿ, ಜೀವಗಳಿಲ್ಲದ ಕಟ್ಟಡಗಳಾಗಿ ಬದಲಾಗುವ ತಂತ್ರವು ನಿಸರ್ಗವನ್ನು ನೋಯಿಸಿದವರಿಗೆ ಆಗುವ ಶಿಕ್ಷೆಯನ್ನು ಸಂಕೇತಿಸುತ್ತದೆ. ಮನುಷ್ಯ ಮಾನವೀಯತೆ ಮರೆತು ತನ್ನೊಳಗಿನ 'ಗಿಬಾಕು' ದೆವ್ವವನ್ನು ಹೊರ ತಂದರೆ ಶಿಕ್ಷೆ ಖಂಡಿತ ಎನ್ನುವುದನ್ನು ಪುಟ್ಟಲಕ್ಷ್ಮಿ ಸಾಬೀತು ಪಡಿಸುತ್ತಾಳೆ.

'ಗಿಬಾಕು ಮತ್ತು 'ಕು ಬೇಂ ಶಿ ಮಾ ಗೋ ಅ ಗಿ ಚಂ' ಕತೆಯಲ್ಲಿ ಪುಟ್ಟಲಕ್ಷ್ಮಿ ತನ್ನ ಅಜ್ಜಿಯೊಂದಿಗೆ ಗಂಗಮ್ಮಜ್ಜಿಯ ಹೆಣ್ಣು ಪಾಮು ನೋಡಲು ಹಳ್ಳಿಗೆ ಹೋಗಿರುತ್ತಾಳೆ. ಆ ಹಳ್ಳಿಯ

ಜನಗಳಿಗೆ ಗಿಬಾಕು ಎನ್ನುವಂತಹ ದೆವ್ವದಿಂದ ಆದ ತೊಂದರೆಗಳನ್ನು ಪುಟ್ಟಲಕ್ಷ್ಮಿ ಹೇಗೆ ನಿವಾರಿಸಿದಳು ಎನ್ನುವುದೇ ಕಥೆಯ ತಿರುಳು. ಗಿಬಾಕು ದೆವ್ವ ಊರಿನ ಒಂಟಿ ಮನೆ, ಕಟ್ಟಡ, ಬಾವಿಯ ನೀರನ್ನು ನುಂಗುವ ಮೂಲಕ ತನ್ನ ಹಸಿವನ್ನು ತೀರಿಸಿಕೊಳ್ಳುತ್ತಿರುತ್ತದೆ. ಸುಂಯ್ ಟಪಕ್ ಮಂತ್ರವೇ ಅದರ ಮಾಯದ ಮರ್ಮ. ಇಲ್ಲಿ ಬಳಸಲಾಗಿರುವ ಈ ಮಂತ್ರಗಳು ಅಲಿಬಾಬನ ಖುಲ್ಲಾ ಸಿಮ್ ಸಿಮ್ ಮಂತ್ರಗಳನ್ನು ನೆನಪಿಸುತ್ತವೆ. 'ಹೀಗೆ ತೊಂದರೆ ಕೊಡುವ ನೀನು, ಸಾವಿರಾರು ಜನರು ವಾಸ ಮಾಡಬಹುದಾದಷ್ಟು ದೊಡ್ಡದಾದ ಒಂದು ಮನೆಯಾಗಿಬಿಡು'[೫೨] ಎಂದು ಹೀಗೆ ಅವಳು 'ಫಾಚರ್ ಫೋಚರ್ ಫಾಚರ್ ಫೋಚರ್ ಎಂದು ಮಂತ್ರ ಹಾಕಿದಳು'[೫೩] ಕಥೆಯ ಆರಂಭದಲ್ಲಿ ಪುಟ್ಟಲಕ್ಷ್ಮಿ ಯೋಚಿಸಿದ ಸಂಗತಿಗಳಾವವು ನಡೆಯದೇ ಬೇರೊಂದು ತಿರುವಿಗೆ ತಿರುಗಿ ಬಿಡುತ್ತವೆ ಎನ್ನುವುದೇ ಫ್ಯಾಂಟಸಿ ಕಥೆಯ ಜೀವಾಳ.

ಜನರಿಗೆ ಸಮಸ್ಯೆ ಬಂದಾಗ ಅದನ್ನು ದೇವರಿಗೆ, ಅದೃಶ್ಯ ಶಕ್ತಿಗೆ ತಳುಕು ಹಾಕಿಬಿಡುತ್ತಾರೆ. ಪುಟ್ಟಲಕ್ಷ್ಮಿಯೇ ಕಥೆಯ ನಾಯಕಿಯಾದರೂ ಗಿಬಾಕುವಿನ ಸ್ಥಾನಕ್ಕೇನೂ ಕೊರತೆಯಾಗಿಲ್ಲ. ಇಬ್ಬರೂ ಸರಿಸಮವೆನ್ನುವಂತೆ ಕಥೆಯನ್ನು ಆವರಿಸಿಕೊಂಡುಬಿಟ್ಟಿದ್ದಾರೆ. ಇದೆಲ್ಲವನ್ನೂ ಮೀರಿಸುವಂತೆ ಫ್ಯಾಂಟಸಿಯೇ ಕಥೆಯ ಕೇಂದ್ರವಾಗಿದೆ. ಪುಟ್ಟಲಕ್ಷ್ಮಿಯ, ಗಿಬಾಕುವಿನ ಮಂತ್ರಗಳು ಕಥೆಗೆ ಶಬ್ದ ಸಾಂಗತ್ಯವನ್ನು ನೀಡಿವೆ. ಮನೆಗಳನ್ನು ನುಂಗಿದ ಗಿಬಾಕು ಮುಂದೆ ಶಾಪದ ಫಲವಾಗಿ ಕಟ್ಟಡವಾಗಿ ಬದಲಾಗುತ್ತದೆ. ನಾಲ್ಕಾರು ಜನ ಸಂತೋಷವಾಗಿ ಬದುಕುತ್ತಿದ್ದ ಸ್ಥಳಗಳನ್ನು ನುಂಗಿದ ಜಾಗದಲ್ಲಿ ಇಂದು ಸಾವಿರಾರು ಜನರು ನರಳುವಂತಾದದ್ದು ವಿಪರ್ಯಾಸದ ಸಂಗತಿ. ಜನ ಸಾಮಾನ್ಯರಿಗೆ ತೊಂದರೆ ಕೊಟ್ಟ ಭೂತ ಪ್ರೇತಗಳೆಲ್ಲಾ ಜನರನ್ನು ಸಹಿಸಿಕೊಳ್ಳಬೇಕಾದ, ಸಲುಹಬೇಕಾದ, ಸೌಲಭ್ಯಗಳನ್ನು ಒದಗಿಸಬೇಕಾದ ಉಪಕರಣ, ವಸ್ತುಗಳಾಗಿ ಬದಲಾಗಿ ಬಿಡುತ್ತವೆ. ಈ ಪರಿವರ್ತನೆ ಪುಟ್ಟಲಕ್ಷ್ಮಿಯ ಬಹುತೇಕ ಕಥೆಗಳಲ್ಲಿ ಕಂಡು ಬರುತ್ತದೆ. ಹೀಗೆ ಪುಟ್ಟಲಕ್ಷ್ಮಿಯ ಕಥೆಗಳೆಲ್ಲವೂ ವಾಸ್ತವದ ಹಂದರದಲ್ಲಿಯೇ ರಚನೆಗೊಂಡ ಅತಿವಾಸ್ತವ ಸಂಗತಿಗಳಿಂದ ತುಂಬಿಕೊಂಡ ಕಥೆಗಳಾಗಿವೆ.

ಹಿರಿಯ ಸಾಹಿತಿಗಳಾದ ಹೊಯ್ಸಳರು ನಾನಾ ಬಗೆಯಲ್ಲಿ ಕತೆಗಳನ್ನು ಮಕ್ಕಳಿಗಾಗಿ ರಚಿಸಿದ್ದಾರೆ. ಅವರು ತಮ್ಮದೇ ಆದ ಫ್ಯಾಂಟಸಿಯನ್ನು ಕಟ್ಟಿಕೊಟ್ಟಿದ್ದು ಕಡಿಮೆ. ಆದರೆ ಅವರ ಕವಿತೆಗಳು ಫ್ಯಾಂಟಸಿಯ ರಮ್ಯ ಜಗತ್ತು ಅವರೊಳಗಿನದು ಎನ್ನುವುದನ್ನು ಸಾರಿ ಸಾರಿ ಹೇಳುತ್ತವೆ. ಅವರದೊಂದು ಪುಟ್ಟ ಕತೆ. 'ಅಲ್ಲಿ ರಾತ್ರಿ ದೀಪ ಹಚ್ಚಿಯಾಗಿ, ಪುಟ್ಟ ಪಾಪ ಮಲಗಿಕೊಂಡು ಬಿಟ್ಟಿತು. ಕತೆ ಹೇಳುವ ಹುಡುಗ/ಹುಡುಗಿ ಆಗ ತೊಟ್ಟಿಲಿನ ಬಳಿ ಹೋಗಿ ಕುಳಿತಿತು. ಆಗ ಕನಸಾಯಿತಂತೆ, ಹತ್ತು ಜನ ಸಣ್ಣವರು ಕೋಣೆಯೊಳಗೆ ಬಂದರು, ತಮ್ಮ ಬಳಿಗೇ ಅವರು ಬರುತ್ತಿದ್ದುದು, ಕೆಂಪಂಗಿ ಮಕಮಲ್ಲು ಟೋಪಿ, ಅವೆಲ್ಲ ಬೆಂಕಿ ಬಣ್ಣ, ಕೈಯಲ್ಲಿ ಬಾವುಟ ಹಿಡಿದಿದ್ದರೂ, ಒಬ್ಬನ ಕೈಲಿ ಮಾತ್ರ ಒಂದು ಡೋಲು, ಅವನು ಅದನ್ನು ಬಡಿಯುತ್ತಿದ್ದ. ಹತ್ತಿರ ಬಂದವರೆ ತಮ್ಮ

ಗದ್ದಲವೆಲ್ಲ ನಿಲ್ಲಿಸಿದರು ಈ ಪುಟ್ಟರು. ಎಲ್ಲ ಗುಂಡಾಗಿ ಸುತ್ತ ನಿಂತರು. ಪುಟ್ಟ ಪಾಪನ ತೊಟ್ಟಿಲಿಗೆ ತಲೆ ಬಾಗಿ ನಮಸ್ಕರಿಸಿದರು, ಬಾವುಟ ಅಲ್ಲಾಡಿಸಿದರು, ಒಂದೇ ಒಂದು ಹಾಡು ಹಾಡಿದರು, ಶಿಸ್ತಿನಿಂದ ಹಿಂತಿರುಗಿದರು. ಮನೆಯ ದೀಪ ಇತ್ತಲ್ಲ, ಅದರೊಳಗೆ ಅವರೆಲ್ಲ ಮಾಯವಾಗಿ ಬಿಟ್ಟರಂತೆ. ನಿಲ್ಲಿ ನಿಲ್ಲಿ ಎಂದು ಕೂಗಿದರೂ ನಿಲ್ಲಲಿಲ್ಲ'.[೫೪] ಇದೊಂದು ಪುಟ್ಟದಾದ ಕಲ್ಪನೆಯಾಗಿದ್ದು ಆದರೆ ನವಿರಾದ ರಮ್ಯ ಜಗತ್ತನ್ನು ಅನಾವರಣ ಮಾಡುತ್ತದೆ.

ಹೊಯ್ಸಳ ಅವರ ಇನ್ನೊಂದು ಕತೆ 'ಕುಂಟು ನಾಯಿ'ಯಲ್ಲಿ ಸಮುದ್ರ ತಟದಲ್ಲಿ ತನ್ನ ಕಾಲಿಗೆ ಏನೋ ಸಿಕ್ಕಿಕೊಂಡು ಕಾಲೂರಲಾಗದೆ ಕುಂಟುತ್ತಾ, ತನ್ನ ಯಜಮಾನ ಅದನ್ನು ತೆಗೆಯುವನು, ಎಂದು ಅವನನ್ನು ಹುಡುಕುತ್ತಾ ಅಲೆದಾಡುವ ನಾಯಿಯ ಕತೆ ಫ್ಯಾಂಟಸಿಯ ಎಳೆಯನ್ನು ಹೊತ್ತಿದೆ. ನಾಯಿ ಅಲ್ಲಿ ಸೇರಿದ ಯಾರ ಯಾರ ಬಳಿಗೋ ಹೋಗುತ್ತದೆ, ಹುಡುಗಿಯೊಬ್ಬಳ ಬಳಿಗೆ ಹೋಗುತ್ತದೆ. ಅವಳು ಕಿರುಚಿ ತೊಲಗಾಚೆ ಎಂದು ಬಿಟ್ಟಳು. ಅದಕ್ಕೆ ನಿರಾಸೆಯಾಯಿತು. ಚೆಂದನೆಯ ಹುಡುಗಿ ಹೀಗೆ ಎಂದು ಬೇಸರಪಟ್ಟುಕೊಂಡಿತು. ಮುಂದೆ ಅದು ತಲೆ ಬೆಳ್ಳಗಾದ ಹಿರಿಯರ ಬಳಿಗೆ ಹೋಗುತ್ತದೆ. ನಂತರ, ಆಟದಲ್ಲಿ ಮುಳುಗಿದ್ದ ಇನ್ನೊಂದು ಪುಟ್ಟ ಹುಡುಗಿಯ ಬಳಿಗೆ ಆಸೆಯಿಂದ ಹೋಗುತ್ತದೆ. ಒಬ್ಬಮ್ಮನ ಬಳಿ ಹೋಗುತ್ತದೆ. ಊಂ ಹೂಂ ಯಾರ ಬಳಿಗೆ ಹೋದರೂ ಯಾರೂ ಅದು ಊಹಿಸಿಕೊಂಡಂತೆ ನಡೆಯುವುದಿಲ್ಲ.

ಕೊನೆಗೆ ಹರಕು ನಿಕ್ಕರಿನ ಬಡ ಹುಡುಗ ಚೆಂಡು ಆಡುತ್ತಿದ್ದವನ ಹತ್ತಿರ ಅವನ ಚೆಂಡು ಬಾಯಲ್ಲಿ ಕಚ್ಚಿಕೊಂಡು ನೀಡಿತು, ಅವನು ಮಾತ್ರ ಅದರ ಕುಂಟು ಕಾಲನ್ನು ಗಮನಿಸಿ ಪ್ರೀತಿ ತೋರಿಸುತ್ತಾನೆ. ಕಾಲಲ್ಲಿಯ ಮೊಳೆ ಕಿತ್ತು ಹಾಕುತ್ತಾನೆ. ಆದರೆ ಕಾಲಲ್ಲಿ ಸಿಕ್ಕಿ ಹಾಕಿಕೊಂಡಿದ್ದು ಮೊಳೆಯಾಗಿರದೆ ಮೂಗು ಬೊಟ್ಟಾಗಿತ್ತು. ಅವನು ಅಪ್ಪ ಅಮ್ಮನ ಬಳಿಗೆ ಓಡಿ ತೋರಿಸುತ್ತಾನೆ. ಅವರೂ ಅದನ್ನು ಮುಚ್ಚಿಟ್ಟುಕೊಳ್ಳಲಿಲ್ಲ, ಬದಲಿಗೆ ಕಳೆದುಕೊಂಡು ಹುಡುಕುತ್ತಿದ್ದವಳಿಗೆ ಕೊಟ್ಟರು. ಅದು ವಜ್ರದ್ದೇ ಆಗಿತ್ತು. ಹುಡುಗ ಮಾತ್ರ ಹುಡುಕಿದುದು ನಾಯಿಯೇ ಎಂದು ಹೇಳುತ್ತಾನೆ. ಈ ಗದ್ದಲದಲ್ಲಿ ತನ್ನ ಯಜಮಾನನ್ನು ಕಂಡ ನಾಯಿ ಚಂಗನೆ ಹಾರಿ ಓಡಿತು. ನಾಯಿಯದೇ ಸುತ್ತಲಿನ ವಿದ್ಯಮಾನವಾದರೂ ಅದು ಮಾನವೀಯ ಮನೋಭೂಮಿಕೆಯನ್ನು ಮುಂದಿಡುವ ಕತೆಯಾಗಿ ಸೆಳೆಯುತ್ತದೆ.

ಹೊಸಗಾಲದ ಕಥೆಗಳು ವರ್ತಮಾನದ ಸಮಸ್ಯೆಗಳನ್ನು ಫ್ಯಾಂಟಸಿಗೆ ಅಳವಡಿಸಿಕೊಂಡಾಗ ರಂಜನೆಯನ್ನು, ಅತಿವಾಸ್ತವ ಲೋಕದ ಜೀವಿಗಳನ್ನು, ಸಂಗತಿಗಳನ್ನು ವೈಭವೀಕರಿಸದೆ; ಅತ್ಯಂತ ಸಹಜವೆನ್ನುವ ಮಾನವೀಯ ಗುಣಗಳನ್ನು ಮನುಷ್ಯನಲ್ಲಿ ತರುವಂತೆ ಮಾಡಲು ಪ್ರಾಣಿ ಪಕ್ಷಿಗಳ ಹೃದಯ ಕಲಕುವ ಘಟನೆಗಳನ್ನು ಈ ಕಥೆಗಳು ಅಭಿವ್ಯಕ್ತಿಸುತ್ತವೆ.

ಫ್ಯಾಂಟಸಿ ಕಥೆಗಳೆಂದರೆ, ತೀರಾ ವಾಸ್ತವೇತರ ಜಗತ್ತನ್ನು ತೆರೆದಿಡುವುದಷ್ಟೇ ಅಲ್ಲ; ವರ್ತಮಾನಕ್ಕೆ ಸ್ಪಂದಿಸುವಂತೆ ಫ್ಯಾಂಟಸಿ ಸ್ವರೂಪದಲ್ಲಿ ಹೇಳುವುದು ನಮ್ಮ ನಡುವೆ ನಡೆದೇ ಇದೆ. ಗಣೇಶ ನಾಡೋರರ ಮಾಯದ ಪುಗ್ಗಿಯೂ ಈ ಬಗೆಯದೇ ಪ್ರಯತ್ನವಾಗಿದೆ. ಸಮಾಜದ ಸಮಸ್ಯೆಗಳಿಗೆ ಪರಿಹಾರ ಹುಡುಕದ ರಾಜ ಅಧಿಕಾರದಲ್ಲಿ ಇರಬಾರದೆನ್ನುವ ನಿರ್ಧಾರಕ್ಕೆ ಬಂದು ಜನಸಾಮಾನ್ಯನಾಗಿಯೇ ನಾನು ಬದುಕುತ್ತೇನೆ ಎನ್ನುವ ಸಿಂಹರಾಜನ ನಿಲುವು, ವಾಸ್ತವದಲ್ಲಿರುವ ಅಧಿಕಾರೀ ಶಾಹಿಗಳ ವರ್ತನೆಗೆ ವಿರುದ್ಧ ದಿಕ್ಕಿನ ಪಯಣದಲ್ಲಿರುವುದೇ ಫ್ಯಾಂಟಸಿಯ ಬಹು ಮುಖ್ಯ ಸ್ವರೂಪದಂತಿದೆ. ಕತೆಯು ಉತ್ತರ ಕನ್ನಡ ಜಿಲ್ಲೆಯಲ್ಲಿ ಪುಗ್ಗಿಯೆಂದು ಸ್ಥಳೀಯವಾಗಿ ಕರೆಯಲ್ಪಡುವ ಬಲೂನಿನ ಕಥೆ. ದೇಶ-ವಿದೇಶಗಳ, ಶ್ರೇಷ್ಠ-ಕನಿಷ್ಠಗಳ, ಸಂಪ್ರದಾಯ-ಆಧುನಿಕತೆಗಳ ಮಧ್ಯೆ ನಡೆಯುವ ಭಾವನಾತ್ಮಕ ಸಂಘರ್ಷವನ್ನು ಮಾಯದ ಪುಗ್ಗಿ ತೆರೆದಿಡುತ್ತದೆ.

ಇಡೀ ಕಥೆಯ ಜೀವಕೇಂದ್ರವಾಗಿ ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆ ನಿಲ್ಲುತ್ತದೆ. ದೇಶಕ್ಕೆ ಸಲ್ಲುವ ಪ್ರಜೆಗಳನ್ನು ತಯಾರು ಮಾಡಬೇಕಾದ ಶಿಕ್ಷಣ, ವಿದೇಶಕ್ಕೆ ಹಾರುವ ಯಂತ್ರಗಳನ್ನು ನಿರ್ಮಾಣ ಮಾಡಿರುವುದರ ವಿರುದ್ಧದ ಆಕ್ರೋಶವನ್ನು ಮಾಯದ ಪುಗ್ಗಿ ಸೌಮ್ಯವಾಗಿ ಹೊರಹಾಕುತ್ತದೆ. ಪೋಷಕರಲ್ಲೂ ಇದೇ ಮನೋಭಾವವನ್ನು ಬಿತ್ತಿ ವರ್ಗಾತೀತವಾಗಿ ಎಲ್ಲರೂ ಇದೇ ಸಿಸ್ಟಮ್ಮಿಗೆ ಸ್ಟಿಕನ್ ಆಗಿರುವುದು ಕೂಲಿ ಕಾರ್ಮಿಕ ದೇವಯ್ಯನಿಂದ ಹಿಡಿದು ಸೇನೆ ಅಧಿಕಾರಿ ಕೃಷ್ಣಪ್ಪನವರೆಗೆ ಎಲ್ಲರೂ ಮಕ್ಕಳಿಗೆ ಕಂಪ್ಯೂಟರ್ ಪುಗ್ಗಿಯನ್ನು ಕೊಡಿಸುವುದು ಸಾಫ್ಟ್‌ವೇರ್ ಸಿಸ್ಟಮ್ ಹಿಂದೆ ಹೊರಟ ಪೋಷಕರ ಹಲುಬುತನವನ್ನು ಸೂಚಿಸುತ್ತದೆ. ಅಮೇರಿಕವೆಂಬ ಆಗಸಕ್ಕೆ ಹಾರಿದ ಯುವಕರು ಸುಖದ ಭ್ರಮೆಯಲ್ಲಿ ತೇಲಿ ಸ್ವದೇಶ ಪ್ರೀತಿಯನ್ನು ಕಳೆದುಕೊಳ್ಳುತ್ತಾರೆ. ಹುಟ್ಟಿ ಬೆಳೆದ ನೆಲ-ಜಲವನ್ನು ಬಿಡಲೊಪ್ಪದ ಹಿರೀಕರು, ಮಾಂತ್ರಿಕ ಸುಖಕ್ಕೆ ಶರಣಾಗಿ ಮನೆಗೆ ಬಾರದ ಯುವಕರ ಮಧ್ಯೆ ಇಗೋನೆಸ್ ಯಶಸ್ಸು ಸಾಧಿಸಿಬಿಡುತ್ತದೆ. ಕೊನೆಗೆ ಆಶ್ರಯ ಕಳೆದುಕೊಂಡ ಪೋಷಕರು, ಭಾವನೆಗಳಿಗೆ ದೂರವಾದ ಯುವಕರೂ ಇಬ್ಬರಲ್ಲೂ ಅನಾಥ ಪ್ರಜ್ಞೆ ಕಾಡುತ್ತದೆ.

ಕಂಪ್ಯೂಟರ್ ಪುಗ್ಗಿ ಹಿಡಿದು ಹಾರಿದ ಮಕ್ಕಳು ಮತ್ತೆ ಮರಳಿ ಗೂಡಿಗೆ ತರಿಸಲು ವೈದ್ಯನಾಗಿ ಮಹಾಜ್ಞಾನಿ ಬರುತ್ತಾನೆ. ಪುಗ್ಗಿಯ ಉಸುರು ತೆಗೆದು ಕೆಳಗೆ ಕುಸಿಯುವಂತಾಗಲು ಆರ್ಥಿಕ ಕುಸಿತವೇ ಸರಿ. ಇದನ್ನು ಹೊರತು ಪಡಿಸಿ ಯಾವುದರಿಂದಲೂ ಅವರು ವಾಪಸ್ಸು ಬರಲಾರರೆಂಬ ಅರಿವಿನಿಂದ ಸೂಜಿ ಪರಿಹಾರ ನೀಡುತ್ತಾನೆ. ಅದೂ ಕಾಗೆರಾಯನಿಂದ ಸಮಸ್ಯೆಗೆ ಪರಿಹಾರ ಹುಡುಕಿರುವುದು ಶ್ರೇಷ್ಠ-ಕನಿಷ್ಠತಮಗಳ ತರತಮವನ್ನು ಹೊಡೆದುಹಾಕುವಲ್ಲಿ ಮೊದಲ ಹೆಜ್ಜೆಯಾಗಿದೆ. ಕಾಗೆಯನ್ನು ಅನಿಷ್ಠ, ಮಾಂಸಾಹಾರಿ, ಕೊಳಕು ಎಂದೆಲ್ಲಾ ದೂರುವವರು ತಮ್ಮ ಮಕ್ಕಳಿಗಾಗಿ ಅದೊಂದು ನಿನ್ನ ಆಹಾರ ಕ್ರಮವೆನ್ನುವಲ್ಲಿಗೆ ಬೆಳೆಯುವುದು ಅಥವಾ ಸಮಯಕ್ಕೆ ತಕ್ಕಂತೆ ಬದಲಾಗುವುದು ಕೆಳವರ್ಗದವರ ಆಹಾರಕ್ರಮವನ್ನು ವಿರೋಧಿಸುವವರ ಮನದಲ್ಲಿ ವಿಶ್ವಭಾವ ಬೆಳೆದುದರ ಸಂಕೇತವಾಗಿದೆ.

ಕಾಗೆಯನ್ನು ಮಂದಿ ತನ್ನನ್ನು ಓೀಗೆಲ್ಲಾ ಓೀಗಳೆದರೂ ಕಾಗೆರಾಯನಿಗೆ ಕರುಣೆ ಉಕ್ಕುವುದು ಒಡವರ ಹೃದಯ ವೈಶಾಲ್ಯವನ್ನು ವ್ಯಕ್ತಪಡಿಸುತ್ತದೆ. ಮಹಾಜ್ಞಾನಿ ನೀಡಿದ ಸೂಜಿಯೂ ಕೂಡ ಪ್ರತಿಮಾತ್ಮಕವಾಗಿದೆ. ಜಾಗತೀಕರಣದ ಹೈಲು ಹತ್ತಿಸಿಕೊಂಡವರಿಗೆ ಚುಚ್ಚುಮದ್ದು ಕೊಡದೆ ಹುಚ್ಚು ವಾಸಿಯಾಗದು ಎನ್ನುವ ಪ್ರಜ್ಞೆಯೊಂದಿಗೆ ಬಲೂನುಗಳ ಗಾಳಿ ತೆಗೆದು ಭೂಮಿಗೆ ಬಿಡಲಾಗುತ್ತದೆ. ಮಕ್ಕಳ ಸಹಿತದ ಬಲೂನುಗಳು ಭೂಮಿಗೆ ಬೀಳುವಲ್ಲಿಯೂ ವಾಸ್ತವ ಮತ್ತು ಫ್ಯಾಂಟಸಿ ಪಾಲುದಾರಿಕೆ ಪಡೆದುಕೊಂಡಿದೆ. ರಾಮಭಟ್ಟರ ಕಂಪ್ಯೂಟರ್ ಪುಗ್ಗಿ, ಕೂಲಿ ಕಾರ್ಮಿಕ ದೇವಯ್ಯ ನಾಯ್ಕನ ಮನೆ ಮೇಲೆ ಬೀಳುತ್ತದೆ. ಸೇನೆ ಕೃಷ್ಣಪ್ಪನ ಮಗನ ಕಂಪ್ಯೂಟರ್ ಪುಗ್ಗಿ ಕಿರಾಣಿ ವ್ಯಾಪಾರಿ ಹೂವಯ್ಯ ಶೆಟ್ಟಿ ಅಂಗಡಿ ಮೇಲೆ, ದೇವಯ್ಯ ನಾಯ್ಕನ ಮಗ ರಾಮಭಟ್ಟರ ಅಂಗಳದಲ್ಲಿ ಬೀಳುತ್ತಾನೆ. ಇನ್ನು ಕೆಲವರು ಗಟಾರಿನಲ್ಲಿ, ಬಾವಿ-ಕೆರೆಗಳಲ್ಲಿ, ಹೊಲ ಗದ್ದೆಗಳಲ್ಲಿ, ರಸ್ತೆಗಳಲ್ಲಿ ಬೀಳುತ್ತಾರೆ. ಬೀಳುವ ಈ ಕ್ರಿಯೆಯಲ್ಲಿಯೂ ಜಾತಿ ವ್ಯವಸ್ಥೆ ತನ್ನ ಪಾರಮ್ಯವನ್ನು ಮೆರೆದಿದೆ.

ರಾಮಾಭಟ್ಟರಿಂದ ಹಿಡಿದು, ಸೇನೆ ಕೃಷ್ಣಪ್ಪನ ಮಗ ಮನೆ ಮೇಗಡೆ ಬಿದ್ದರೆ; ದೇವಯ್ಯ ನಾಯ್ಕರ ಮಗ ಮಾತ್ರ ರಾಮಾಭಟ್ಟರ ಮನೆ ಅಂಗಳದಲ್ಲಿ ಬೀಳುವುದು ಕೆಳವರ್ಗದವರ ಪಾಲಿಗೆ ಅಂಗಳವೇ ಹೆಚ್ಚೆನ್ನುವಂತಿದೆ. ಬಿದ್ದ ಮಕ್ಕಳನ್ನು ಎಲ್ಲಿ ಬಿದ್ದರೇನು ನಮ್ಮ ಮಕ್ಕಳೇ ಅಲ್ಲವೇ ಎಂದು ಅಪ್ಪಿಕೊಳ್ಳುವ ಪೋಷಕರು, ಮಾತೃ ಸಮಾನ ದೇಶದ ಪ್ರತೀಕವಾಗುತ್ತಾರೆ. ಪುಗ್ಗಿಯನ್ನು ಮಾರುವವನ ಬಳಿ ಮಿಕ್ಕಿ ಮೌಸ್, ಟಿ.ವಿ, ಹೃದಯ, ಬಂದೂಕು ಮುಂತಾದ ಪುಗ್ಗಿಗಳಿದ್ಯಾಗೂ ಎಲ್ಲರೂ ಕಂಪ್ಯೂಟರ್ ಹಿಂದೆ ಬೀಳುವುದು; ಹೃದಯದ ಪುಗ್ಗಿಯನ್ನು ಯಾರೂ ಕೊಳ್ಳದಿರುವುದು ಮಾನವತ್ವ ಮರೆತ ಸಮಾಜಕ್ಕೆ ಉದಾಹರಣೆಯಾಗಿದೆ. ಒಟ್ಟು ಕಥೆಯ ಉದ್ದಕ್ಕೂ ವಾಸ್ತವ ಸಂಗತಿಯೆನ್ನೆಲ್ಲಾ ಕಾಲ್ಪನಿಕವೆನ್ನುವಂತೆ ಹೇಳಹೊರಟು ಮತ್ತೆ ವಾಸ್ತವದ ತೆಕ್ಕೆಗೆ ಪದೇ ಪದೇ ಜಾರಿ ಇದೊಂದು ಅರೆ ಫ್ಯಾಂಟಸಿ ಕಥೆಯಾಗಿದೆ.

೭.೪.೨. ರೂಪಾಂತರ ಮತ್ತು ಫ್ಯಾಂಟಸಿ

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ರೂಪಾಂತರವಾಗುವ ಕ್ರಿಯೆ ಹೊಸದೇನಲ್ಲ. ರಾಮಾಯಣ, ಮಹಾಭಾರತ ಕಥೆಗಳಿಂದ ಹಿಡಿದು, ಅನೇಕ ಪುರಾಣ ಕಥೆಗಳು, ಜನಪದ ಕಥೆಗಳಲ್ಲೂ ಈ ಬಗೆಯ ಪ್ರಕ್ರಿಯೆ ಕಂಡುಬರುತ್ತದೆ. ಕನ್ನಡದ ಮಟ್ಟಿಗೆ ಹೇಳುವುದಾದರೆ; ಚಂದ್ರಶೇಖರ ಕಂಬಾರ ಅವರ 'ಸಂಪಿಗೆರಾಣಿ'ಯೇ ಬಹುದೊಡ್ಡ ಉದಾಹರಣೆಯಾಗಿದೆ. ಅಲ್ಲಿ ಮರವೊಂದು ಹುಡುಗಿ ಆಗುವ ಪುನಃ ಮರವಾಗುವ ಸಂಗತಿಗಳಿವೆ. ಇದಕ್ಕೆ ಜೋಡಣೆ ಎಂಬಂತೆ ಮೇವುಂಡಿ ಮಲ್ಲಾರಿ ಅವರ 'ತಿರುವು ಮುರುವು' ಕಾಗದವೊಂದು ವ್ಯಕ್ತಿಯಾಗಿ ಜೀವತಳೆಯುತ್ತದೆ. ಈ ರೂಪಾಂತರ ಕ್ರಿಯೆ ನಿಸರ್ಗದ ಒಳಿತಿಗೋಸ್ಕರವೇ ಆಗಬೇಕು, ಎನ್ನುವ ಧೋರಣೆ ಇಟ್ಟುಕೊಂಡು ಬರೆದವರು. ಕನ್ನಡದ ಮುಖ್ಯ ಲೇಖಕರಲ್ಲಿ ಒಬ್ಬರಾದ ಕೃಷ್ಣಮೂರ್ತಿ ಬಿಳಿಗೆರೆ ಅವರು. ಅವರ

ಕಥೆಗಳೆಲ್ಲವೂ ನಿಸರ್ಗದ ನೆಲುವಿನಿಂದ ಜಾರಿದವುಗಳೇ ಆಗಿವೆ. ಅದಕ್ಕೆ ಪೂರಕವಾಗಿ ಅವರ ಅನೇಕ ಕೃತಿಗಳು ಇವೆ. ಪ್ರಸ್ತುತ ಅಧ್ಯಯನದಲ್ಲಿ ಅವರ 'ಚಗಚೆ ಹೂವಿನ ಹುಡುಗಿ' ಸಂಕಲನದ ಕತೆಗಳನ್ನು ಫ್ಯಾಂಟಸಿ ಸ್ವರೂಪಗಳ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಕೃಷ್ಣಮೂರ್ತಿ ಬಿಳಿಗೆರೆ ಅವರ ಕಥೆಗಳು ಜನಪದದ ಧಾರೆಯನ್ನು ಪ್ರಭಾವಿಸಿದ ಕಥೆಗಳಾದರೂ ಹೊಸಗಾಲದ ಅಗತ್ಯಗಳಿಗೆ ತುಡಿಯುತ್ತಲೇ ಬದಲಾದ ಆಶಯಗಳ ಮೂಲಕ ಹೊಸತನ್ನು ಹೊಂದಿವೆ. ಅವರ 'ಅಗಲ ಕಿವಿಯ ಅರಿವುಗಾರ ಹಕ್ಕಿಯಾಗಿ ಹಾರಿದ್ದು' ಕಥೆಯು ಅರಿವುಗೇಡಿ, ಸಾಧು ಸ್ವಭಾವದವನಾಗಿದ್ದ ಅಮಾಯಕನನ್ನು ಜನರು ಹೀಯ್ಯಾಳಿಸುವ ಪ್ರಸಂಗ ಇದೆ. ಜನಪದ ಕತೆಗಳಲ್ಲಿಯಂತೆ ಕೊನೆಗೆ ಅವನು ಅರಿವುಗಾರನಾಗುತ್ತಾನೆ. ಮಕ್ಕಳಿಗೆಲ್ಲಾ ಕಾಡನ್ನು, ನಾಡನ್ನು ಉಳಿಸಿಕೊಳ್ಳುವಂತೆ ಸಲಹೆ ಕೊಡುವ ಮಟ್ಟಕ್ಕೆ ಬೆಳೆಯುತ್ತಾನೆ. ಆದರೆ ನಿಸರ್ಗವನ್ನು ಉಳಿಸಬೇಕೆಂಬ ಕಾಳಜಿ ಮಾತ್ರ ಹೊಸದು.

ಕಥೆಯ ಬಹುಮುಖ್ಯ ಫ್ಯಾಂಟಸಿ ಅಂಶ ಕಂಡುಬರುವುದು, ಅವನ ಕಿವಿಯಲ್ಲಿ ಹಕ್ಕಿಯೊಂದು ಒಂದೇ ಒಂದು ಮೊಟ್ಟೆಯನ್ನು ಇಟ್ಟು ಕಾವು ಕೊಟ್ಟು ಮರಿಗಾಗಿ ಕಾಯುತ್ತಿತ್ತು. 'ಮೊಟ್ಟೆ ಒಡೆದು ಪುಟ್ಟಮರಿ ಈಚೆ ಬರುವುದೆಂದು ಹಕ್ಕಿ ಕಾದದ್ದು ಸುಳ್ಳಾಯಿತು. ತಾಯಿಹಕ್ಕಿಗೆ ಏನಾಗುತ್ತಿದೆ ಎಂದು ಗೊತ್ತಾಗುವುದಕ್ಕೆ ಮುಂಚೆಯೇ ಆ ಅಗಲಕಿವಿಯೊಳಗೆ ಆ ಹಕ್ಕಿಯಿಟ್ಟ ಮೊಟ್ಟೆ ಮಾಯವಾಗಿ ಹೋಯಿತು. ಅಗಲಕಿವಿಯ ಅರಿವುಗೇಡಿಯೂ ಮಾಯವಾಗಲು ಸಿದ್ಧತೆ ನಡೆಸುತ್ತಿರುವಂತೆ ಕಂಡಿತು. ಅರಿವುಗೇಡಿಯ ಅಕ್ಕಪಕ್ಕಗಳಲ್ಲಿ ರೆಕ್ಕೆಗಳು ಮೂಡುತ್ತಿದ್ದವು. ಮೈಮೇಲೆ ಪುಕ್ಕಗಳು ಏಳುತ್ತಿದ್ದವು. ಮೂಗು ಇದ್ದ ಜಾಗದಲ್ಲಿ ಕೊಕ್ಕು ಒಡಮೂಡುತ್ತಿತ್ತು... ಅಗಲಕಿವಿಯ ಅರಿವುಗಾರ ತನ್ನ ರೆಕ್ಕೆಗಳನ್ನು ಉದ್ದಕ್ಕೆ ಚಾಚುತ್ತಾ ತಾನು ನೆಲೆಗೊಂಡಿದ್ದ ಶಿಲಾಮಂಚದಿಂದ ಗಗನಕ್ಕೆ ಹಾರಿದನು'.[೫೫](ಅಗಲಕಿವಿಯ ಅರಿವುಗಾರ ಹಕ್ಕಿಯಾಗಿ ಹಾರಿದ್ದು)ಈ ಸನ್ನಿವೇಶ ಹೊಸಗಾಲದ ಮಕ್ಕಳ ಕಥನ ಸಾಹಿತ್ಯದಲ್ಲಿ ಜನಪದ ಕಥನಗಳ ಮರುನಿರೂಪಣೆಗೆ ಭಿನ್ನ ಸೇರ್ಪಡೆ ಎನ್ನುವಂತಿದೆ. ಒಬ್ಬ ಮನುಷ್ಯ ಅರೆ ಹಕ್ಕಿಯಾಗಿ ಮಾರ್ಪಾಡುಗೊಳ್ಳುವ ಈ ಬಗೆಯ ಕಥನಗಳು ಜನಪದ ಕಥೆಗಳಲ್ಲಿ ಕಂಡುಬಂದಿದ್ದರೂ ಇಲ್ಲಿನ ಫ್ಯಾಂಟಸಿ ಬಳಕೆಯಾಗಿರುವುದು ನಿಸರ್ಗದ ಕಾಳಜಿಯ ಹಿನ್ನೆಲೆಯಲ್ಲಿ. ಫ್ರಾಂಝ್ ಕಾಫ್ಕಾ ಅವರ 'ಮೇಟಾಮಾರ್ಫಸಿಸ್' ಹಾಗೂ ಮೇವುಂಡಿ ಮಲ್ಲಾರಿ ಅವರ 'ತಿರುವು ಮುರುವು' ಕಥೆಯ ಥರಹದಲ್ಲಿ ಪೂರ್ಣ ರೂಪಾಂತರವಲ್ಲ. ಆದರೂ ಅರಿವುಗೇಡಿಯೊಬ್ಬ ಅರಿವುಗಾರನಾಗಿ ಬದಲಾಗುವ ಕ್ರಿಯೆಯು ಮನುಷ್ಯ ತನ್ನ ವಿಕೃತತೆಯನ್ನು ಮರೆತು ನಿಸರ್ಗವನ್ನು ಉಳಿಸುವ ಗುಣದವರಾಗಿ ಬದಲಾಗಬೇಕೆಂಬ ರೂಪಾಂತರ ಕ್ರಿಯೆಯನ್ನು ಇದು ವ್ಯಕ್ತಪಡಿಸುತ್ತದೆ.

ಕೃಷ್ಣಮೂರ್ತಿ ಬಿಳಿಗೆರೆ ಅವರ 'ಚಿಗುರುವ ಮನುಷ್ಯ' ಕಥೆಯಲ್ಲಿ ವ್ಯಕ್ತಿಯೊಬ್ಬ ಬೀಜವಾಗಿ ಮೊಳೆತು ಗಿಡವಾಗಿ ಚಿಗುರುವ ಮೂಲಕ ಮತ್ತೆ ಹಸಿರು ಕಾಡನ್ನು ಸೃಷ್ಟಿಸಲು ಹೊರಡುವುದು

ಮತ್ತೊಂದು ರೂಪಾಂತರ ಕ್ರಿಯೆಯೇ ಆಗಿದೆ. ಪಂಚತಂತ್ರ ಕಥೆಗಳಲ್ಲಿ ದುಷ್ಟ ಪಾತ್ರವಾಗಿ ಚಿತ್ರಿತಗೊಂಡಿದ್ದ ನರಿಯು ಇಲ್ಲಿ ಕಾಡಿಲ್ಲದೆ, ಹೊಲದಲ್ಲಿನ ವಿಷದ ಬೆಳೆ ತಿನ್ನಲು ಹೋಗಿ ರೈತನಿಂದ ಕಾಲು ಮುರಿದುಕೊಂಡು ಸಾಯುವ ಸ್ಥಿತಿಯಲ್ಲಿ ಅಳುತ್ತಾ ಕುಳಿತಿತ್ತು. ಕಥೆಯಲ್ಲಿ ಬರುವ ಚಿಕ್ಕಿ, ಮೌನಿ ಎನ್ನುವ ಇಬ್ಬರು ಮಕ್ಕಳು ಪ್ರಾಣಿಗಳ ಪರಿಸ್ಥಿತಿ ಸುಧಾರಿಸಲು ಆ ವ್ಯಕ್ತಿಯ ಬಳಿ ಹೋಗುತ್ತಾರೆ. ಆ ವ್ಯಕ್ತಿ, 'ಇಗೋ ನೀವು ಅತ್ತರೂ ಅಷ್ಟೆ. ಪ್ರಾಣಿಗಳೇ, ನೀವು ಸತ್ತರೂ ಅಷ್ಟೆ ಅದರಿಂದ ಏನೂ ಆಗುವುದಿಲ್ಲ. ಇಗೋ ಕಾಡಿನ ಕುರುಹು ಇನ್ನೂ ಇದೆ. ಅದನ್ನು ಮುಟ್ಟಿ ನಿಮ್ಮ ಕನಸು ನನಸಾಗುತ್ತದೆ, ಮನಸ್ಸಿದ್ದರೆ ಮಾರ್ಗವಿದೆ'[೫೬] ಎಂದಿತು. ಆ ವ್ಯಕ್ತಿಯ ಈ ಸಾಲುಗಳಲ್ಲಿ ಕಾಡಿನ ಕುರುಹು ಇನ್ನೂ ಇದೆ ಎನ್ನು ಮಾತು ಕಾಡನ್ನು ಬೆಳೆಸುವ ಕುರಿತು ನೀಡಿದ ಸಲಹೆಯಾಗಿದೆ.

ಕಾಡು ಇಲ್ಲದೆ ಎಲ್ಲವನ್ನೂ ಕಳೆದುಕೊಂಡ ಪ್ರಾಣಿಗಳಿಗೆ ಆ ವ್ಯಕ್ತಿಯ ಪ್ರತಿಯೊಂದು ಮಾತುಗಳು ಜೀವಸೆಲೆಯಂತೆ ಕೇಳಿಸಿದವು. ಪ್ರಾಣಿಗಳೆಲ್ಲಾ ವ್ಯಕ್ತಿಯ ಸಲಹೆಯಂತೆ ಗುಂಡಿ ತೋಡಿದರು. ಮುಂದೇನು ಎಂದು ಎಲ್ಲರೂ ನೋಡುತ್ತಿರುವಾಗಲೇ, 'ಇಗೋ ನನ್ನನ್ನು ಇದರೊಳಗೆ ನೆಟ್ಟುಬಿಡಿ'[೫೭] ಈ ಮಾತಿನಿಂದ ಎಲ್ಲರೂ ಬೇಸರಗೊಂಡರು. ಕೊನೆಯಲ್ಲಿ ಆ ವ್ಯಕ್ತಿಯ ಮಾತುಗಳು ಹೀಗಿವೆ; 'ಹಾಗೆನ್ನುವಂತಿಲ್ಲ ನೀವು ನನ್ನನ್ನು ನೆಡಲೇಬೇಕು. ನೆಟ್ಟರೆ ನಾನು ಚಿಗುರುವುದು. ನಾನು ಚಿಗುರುವ ಮನುಷ್ಯ. ನನ್ನನ್ನು ಮಣ್ಣಿಗಿಟ್ಟರೆ ಸಾಯುವುದಿಲ್ಲ. ಬದಲಾಗಿ ಚಿಗುರಿ ಚಿಮ್ಮುತ್ತೇನೆ. ಹೂಬಿಟ್ಟು ಬೀಜ ಸುರಿಸುತ್ತೇನೆ. ನೀವು ನನ್ನೊಂದಿಗೆ ಸೇರಿ, ಮತ್ತೆ ಹಸಿರುಕಾಡು ಹುಟ್ಟುತ್ತದೆ. ತಡಮಾಡಬೇಡಿ.. ಎನ್ನುತ್ತಾ ಆ ವ್ಯಕ್ತಿ ತಾನೇ ಗುಂಡಿಗೆ ಇಳಿಯಿತು.'[೫೮](ಚಿಗುರುವ ಮನುಷ್ಯ) ಕಾಡಿನ ಪ್ರಾಣಿಗಳು ಹಾಗೇ ಮಾಡಿದರು. 'ಆ ವ್ಯಕ್ತಿ ಚಿಗುರೊಡೆದು ಆಕಾಶಕ್ಕೆ ಚಾಚಿಕೊಂಡಿತು.'[೫೯] ಇಲ್ಲಿ ಪ್ರಾಣಿಗಳಿಗೆ ಸಹಾಯ ಮಾಡಿದ ವ್ಯಕ್ತಿ ಚಿಗುರುವ ಮನುಷ್ಯನಾದರೂ ಮನುಷ್ಯನಂತೆ ಚಿತ್ರಿಸಿಲ್ಲ. ಬದಲಾಗಿ ಅದೊಂದು ಅತೀತವಾದ ಶಕ್ತಿಯಾಗಿ, ನಿಸರ್ಗದ ಪ್ರತಿನಿಧಿ ಎನ್ನುವಂತೆ ಪ್ರಾಣಿ ಪಕ್ಷಿಗಳ ಜೀವಗಳನ್ನು ಉಳಿಸುತ್ತದೆ. ಮಕ್ಕಳಿಗಾಗಿ ಅರಿವಿನ ವಿಸ್ತಾರದ ಭಾಗವಾಗಿ ರಚನೆಯಾದ ಇಂತಹ ಫ್ಯಾಂಟಸಿ ಕತೆಗಳು ಹೊಸಗಾಲದಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

'ಚಗಚೆ ಹೂವಿನ ಹುಡುಗಿ' ಕತೆಯಲ್ಲಿ ಮನುಷ್ಯನ ದುರಾಸೆ, ದುರ್ವರ್ತನೆಗಳಿಂದ ತನ್ನ ಅಂಗಗಳನ್ನೆಲ್ಲಾ ಕಳೆದುಕೊಂಡ ರಾಜ್ಯವೇ ಅಂಗಭಂಗದ ಹೀನ ಸ್ಥಿತಿ ಇದೆ. 'ಕಲ್ಲುನೀರು ಕರಗುವ ಹೊತ್ತಿನಲ್ಲಿ ಚಗಚೆ ಗಿಡದಲ್ಲಿ ಭಾರೀ ಗಾತ್ರದ ಹೂವೊಂದು ಕಾಯಿಯಾಗುವ ಬದಲು ಉದ್ದನೆಯ ಹುಡುಗಿಯಾಗಿ ಮಹಾಬೆಳಕಾಗಿ ನೆಲಕ್ಕೆ ಉದುರಿದಳು.'[೬೦] ಚಗಚೆ ಹೂವಿನ ಹುಡುಗಿಯು ಪೂರ್ವದ ದಿಕ್ಕಿಗೆ ರಾಜನನ್ನು ಹುಡುಕಿ ಹೊರಡುತ್ತಾಳೆ. ಆ ಹಾದಿಯಲ್ಲಿ ಆ ರಾಜ್ಯದ ಜನರು ಕುಂಟರು, ಕುರುಡರು, ಹುಚ್ಚರು, ತಲೆ ಕೆಳಗಾಗಿ ನಡೆವವರು, ಗಾಯಗೊಂಡವರು ಹೀಗೆ ಅನೇಕ ಪಾಪಗಳಿಂದ

ತೊಳಲಾಡುತ್ತಿರುತ್ತಾರೆ. ಆ ರಾಜ್ಯದ ರಾಜನೂ ಗಾಯದಿಂದ ನರಳುತ್ತಿರುತ್ತಾನೆ. ಅದನ್ನು ಮರೆಮಾಚಲು ಮುಖವಾಡ ಧರಿಸಿರುತ್ತಾನೆ. ಕಥೆಯ ಈ ಭಾಗ ತೀರಾ ಗಹನವಾದ ತಾತ್ವಿಕತೆಯನ್ನು ಮಕ್ಕಳಿಗೆ ಫ್ಯಾಂಟಸಿ ಸ್ವರೂಪದಲ್ಲಿ ನೀಡಿದೆ. 'ಮಹಾರಾಜಾ ಈ ಮುಖವಾಡದಿಂದ ಗಾಯಗಳು ಹೆಚ್ಚುತ್ತವೆಯೇ ಹೊರತು, ವಾಸಿಯಾಗುವುದಿಲ್ಲ. ಮುಖವಾಡವನ್ನು ತೆಗೆ, ಎನ್ನುತ್ತಾ ಅವಳು ಮುಖವಾಡವನ್ನು ನಿಧಾನವಾಗಿ ತೆಗೆದಳು. ಅಲ್ಲಿ ಇದ್ದುದೇನು? ಇನ್ನೊಂದು ಮುಖವಾಡ! ಅದನ್ನೂ ತೆಗೆದಳು, ಮತ್ತೊಂದು, ಅದನ್ನೂ ತೆಗೆದಳು. ಹೀಗೆ ಮುಖವಾಡಗಳ ರಾಶಿ ಬಿತ್ತೇ ಹೊರತು ವ್ಯಕ್ತಿಯ ಮುಖ ಕಾಣಲೇ ಇಲ್ಲ.'[೬೧] ಮನುಷ್ಯರು ತಮ್ಮ ತಪ್ಪುಗಳನ್ನು ಮುಚ್ಚಲು ತಮ್ಮ ಮೂಲ ಸ್ವರೂಪಗಳನ್ನು ಮರೆಮಾಚುವ ಕ್ರಿಯೆಯನ್ನು ಇಲ್ಲಿ ನಿರೂಪಿಸಲಾಗಿದೆ.

ಮನುಷ್ಯರು ತಾವು ನಿಸರ್ಗಕ್ಕೆ ಮಾಡಿದ ತಪ್ಪುಗಳನ್ನು ತಿದ್ದಿಕೊಳ್ಳಲು ಮತ್ತೆ ನಿಸರ್ಗದೊಳಗೆ ಒಂದಾಗಬೇಕು ಎನ್ನುವ ಆಶಯವು ಈ ಕಥೆಯಲ್ಲಿದೆ. ಹೂವಿನ ಹುಡುಗಿ ಈ ಪರಿವರ್ತನೆಗೆ ಕಾಡಿನ ಪ್ರತಿನಿಧಿ ಎನ್ನುವಂತೆ ಬಂದು ಎಲ್ಲರಿಗೂ ಸಲಹೆ ನೀಡುತ್ತಾಳೆ. 'ನೀವೀಗ ನಿಮ್ಮ ರೂಪ ಬದಲಿಸಬೇಕು. ನಿಮ್ಮ ಮನುಷ್ಯ ರೂಪ ತೊರೆಯಬೇಕು. ತೊರೆದು, ನೀವು ಕೊಂದ ಮೊಲವಾಗಬೇಕು, ನೀವು ಕೊಂದ ಹಾವಾಗಬೇಕು, ಕಡಿದ ಗಿಡವಾಗಬೇಕು, ನೂರು ತರವಾಗಬೇಕು ಮರವಾಗಬೇಕು ಸಾವಿರ ವರವಾಗಬೇಕು, ಹುಲ್ಲಾಗಬೇಕು, ಹುಳಹುಪ್ಪಡಿ ಕ್ರಿಮಿಕೀಟ, ಎರೆಹುಳುವಾಗಬೇಕು...'[೬೨] ಹೀಗೆ ಮನುಷ್ಯರು ತಮ್ಮ ಶ್ರೇಷ್ಠತೆಯನ್ನು ತೊರೆದು ಶ್ರೇಷ್ಠರಾಗಬೇಕು, ನಿಸರ್ಗ ಉಳಿಸುವುದರೊಂದಿಗೆ ತಾವು ಉಳಿಯಬೇಕು ಎಂದು ಹೇಳುತ್ತಲೇ, 'ಆ ಎಲ್ಲದನ್ನು ಕಣ್ಣಿಗೆ ತುಂಬಿಕೊಂಡು ಆ ಹುಡುಗಿ ತಾನೂ ಒಂದು ಚಗಚೆ ಗಿಡವಾಗಿ ರೂಪಾಂತರಗೊಂಡಳು. ಗಾಳಿಗೆ ಓಲಾಡುತ್ತಾ ಕಾಡಿನೊಳಗೆ ಒಂದಾದಳು.'[೬೩] ಈ ರೂಪಾಂತರ ಕ್ರಿಯೆಯು ಕೇವಲ ಭೌತಿಕಕ್ಕೆ ಸೀಮಿತಗೊಳ್ಳದೆ ಮನುಷ್ಯರ ದುರ್ವರ್ತನೆಗಳೂ ರೂಪಾಂತರಗೊಳ್ಳಬೇಕು ಎನ್ನುವ ನಿಸರ್ಗ ಉಳಿಸುವ ಆಶಯವನ್ನು ಒಳಗೊಂಡಿದೆ. ಕನ್ನಡ ಮಕ್ಕಳ ಸಾಹಿತ್ಯವನ್ನು ಲೋಯರ್ ಫ್ಯಾಂಟಸಿಯ ಗಡಿಯನ್ನು ದಾಟಿಸುವಷ್ಟು ಅತಿವಾಸ್ತವತೆಯನ್ನು, ಫ್ಯಾಂಟಸಿ ಕಥೆಗಳು ಸದಾ ವರ್ತಮಾನದ ಎಚ್ಚರದಲ್ಲೇ ಇರುವಂತೆ ನೊಡಿಕೊಳ್ಳುವ ಹೀಗೆ ಭಿನ್ನ ಬಗೆಯಲ್ಲಿ ಮಕ್ಕಳಿಗೆ ನಿಸರ್ಗದ ಮೌಲ್ಯಗಳನ್ನು ಕಥೆಗಳ ಮೂಲಕ ಕೃಷ್ಣಮೂರ್ತಿ ಬಿಳಿಗೆರೆಯವರು ನೀಡಿದ್ದಾರೆ.

ಹೊಸಗಾಲದ ಕಥನಗಳು ವರ್ತಮಾನದ ಆಶಯಗಳನ್ನು ಕಥೆಯಲ್ಲಿ ತರುವ ಮೂಲಕ ಇಂದಿನ ಕಥೆಗಳಾಗುತ್ತವೆ. ಅವು ಇಂದಿನ ಬದುಕಿನ ಸ್ಪಂದನೆಗಳಾಗಿ ಕಾಣುತ್ತವೆ. ಈ ಹೊತ್ತಿನ ನಮ್ಮ ನಡುವಿನ ಸಮಸ್ಯೆಗಳ ಸುತ್ತ ಹಬ್ಬಿಕೊಳ್ಳುತ್ತವೆ. ಓದುಗರ ಮಾನಸ ಪಯಣ ಇಲ್ಲಿಯವರೆಗೆ ಸಾಗಿ ಬಂದುದರ ಪ್ರತಿಫಲನವೇ ಇಂಥ ಕತೆಗಳ ರೂಪದಲ್ಲಿ ಕಾಣುತ್ತದೆ ಎನ್ನಬಹುದು. ಈ ವರ್ತಮಾನದ ಜಗತ್ತಿನ ಕಟುವಾಸ್ತವ, ನಿಸರ್ಗದ ಸೂಕ್ಷ್ಮಾತಿಸೂಕ್ಷ್ಮ ವಸ್ತು ಸಂಗತಿಗಳು, ಪ್ರಾಣಿಪಕ್ಷಿ ಲೋಕದ ಹೊಸ ಸ್ಪಂದನೆಗಳು, ವೈಚಾರಿಕ ಅರಿವನ್ನು ನೀಡುವ ಕೌತುಕಮಯವಾದ ಸಂದರ್ಭಗಳು;

ಹೀಗೆ ಹೊಸಗಾಲವು ತನ್ನ ಅನೇಕ ಕಥನ ಮಾದರಿಗಳಿಗೆ ತಂತ್ರವಾಗಿ ಫ್ಯಾಂಟಸಿಯನ್ನು ಬಳಸಿಕೊಂಡಿದೆ. ಇದು ಒಬ್ಬೊಬ್ಬ ಲೇಖಕನೂ ತನ್ನದೇ ಆದ ಅನುಭವಗಳ ಹಿನ್ನೆಲೆಯಲ್ಲಿ ನೋಡುವ, ಅವನ್ನು ತನ್ನ ಸುತ್ತಲೂ ಹರಡಿಕೊಳ್ಳುವ, ವಿವೇಚನಗೆ ಇಳಿಯುವ ಪ್ರಕ್ರಿಯೆ ಇಲ್ಲಿ ಕಥೆಯಾಗಿ ರೂಪುಗೊಂಡಿದೆ. ಒಬ್ಬೊಬ್ಬರದೂ ಒಂದೊಂದು ಬಗೆಯ ದೃಷ್ಟಿಕೋನ, ಒಂದೊಂದು ತೊಡಗುವಿಕೆ, ಅಪೇಕ್ಷೆಗಳ ಲೋಕವಾಗಿರುತ್ತದೆ. ಹೀಗಾಗಿ ಹೊಸಗಾಲದ ಹೊರಳು ಸಾಕಷ್ಟು ಮಾನವೀಯ ಸ್ಪಂದನೆಗಳಿಂದ ತುಂಬಿ ತನ್ನದೇ ಅಸ್ತಿತ್ವವನ್ನು ತೋರಿಸುತ್ತಿದೆ. ಅದು ಕೇವಲ ಮಕ್ಕಳಿಗೆ ಒಂದಷ್ಟು ಕತೆಗಳನ್ನು ಸೃಷ್ಟಿಸಿ ರಂಜಿಸುವ ಸರಳ ದಾರಿಯಾಗಿಲ್ಲ. ಬದಲಿಗೆ ಲೇಖಕನ ಒಳದನಿಗೆ ಉತ್ತರಿಸುವ ದಾರಿಯಾಗಿ ತೆರೆದುಕೊಳ್ಳುತ್ತಿದೆ. ಹಾಗಾಗಿ ತುಂಬ ಸೂಕ್ಷ್ಮವಾದ ಮನೋವ್ಯಾಪಾರಗಳು ಅಲ್ಲಿ ಸಹಜವಾಗಿಯೇ ತೆರೆದುಕೊಳ್ಳುತ್ತವೆ. ಅಲ್ಲದೆ ಮಕ್ಕಳ ಲೋಕದ ಆಪ್ಯಾಯಮಾನವಾದ ಮನೋಲೋಕದೊಡನೆ ಸಂವಾದ ನಡೆಸುತ್ತವೆ. ಬಹು ಮುಖ್ಯವಾಗಿ ಇವು ಕನ್ನಡದಲ್ಲಿ ಮಕ್ಕಳ ಲೋಕದ ಹೊಸ ಕಥಾಲೋಕದ ಅಗತ್ಯವನ್ನು ಬೆರಳು ಮಾಡಿತೋರಿಸುತ್ತಿವೆ. ಇಲ್ಲಿ ಫ್ಯಾಂಟಸಿ ಕೇವಲ ತಂತ್ರವಾಗದೆ ಓದುಗನೊಳಗಿನ ಅಪೇಕ್ಷೆಯಾಗಿ ಮತ್ತೆ ಮತ್ತೆ ಕಾಡುವಂತೆ ಬರಹ ಸಾಫಲ್ಯವನ್ನು ಪಡೆದಿದೆ.

ಕೊನೆ ಟಿಪ್ಪಣಿಗಳು

೧ ಚಂದ್ರಶೇಖರ ಕಂಬಾರ, ಮರವೇ ಮರ್ಮರವೇ, ಪು. ೮೩

೨ ಅದೇ, ಪು. ೮೩

೩ ವೈದೇಹಿ, ಅಬ್ಬಾಲಕ್ಕ ಅಜ್ಜೀಮನೆಗೆ ಹೋಗಿದ್ದು, ಪು. ೦೪

೪ ಅದೇ, ಪು. ೦೫

೫ ವೈದೇಹಿ, ಚಿಟ್ಟಿಬಾಲೆ, ಪು. ೧೪

೬ ಅದೇ, ಪು. ೧೭

೭ ತಿರುಮಲಮ್ಮ, ಪುಟಾಣಿ ಮಕ್ಕಳ ವೈಜ್ಞಾನಿಕ ಕಥೆಗಳು, ಪು. ೧೧

೮ ಅದೇ, ಪು. ೧೩

೯ ಮತ್ತೂರು ಸುಬ್ಬಣ್ಣ, ಕತೆ ಕೀರ್ತಿ ಯಾರಿಗೆ ಪು. ೩೨

೧೦ ಆನಂದ ಪಾಟೀಲ, ಅಜ್ಜ ಅಜ್ಜಿ, ಅಜ್ಜಿದೊಂದ್ ಕೌದಿ, ಕೌದಿಗೊಂದ್ ಹುಡುಗಿ, ನಡುವೆ ಒಂದ್ ಟುಣಕ್ ಟುಣಕ್ ಬಾಲದ ಮರಿ', ಪು. ೮೭

೧೧ ಅದೇ, ಪು. ೧೧೭

೧೨ ಅದೇ, ಪು. ೯೮

೧೩ ಅದೇ, ಪು. ೯೯

೧೪ ಅದೇ, ಪು. ೧೨೭

೧೫ ಆನಂದ ಪಾಟೀಲ, ಅಲರು, ಪು. ೧೦೬

೧೬ ಅದೇ ಪು. ೧೧೦

೧೭ ಬಸುಬೇವಿನ ಗಿಡದ, ಮಕ್ಕಳ ಸಾಹಿತ್ಯ, ಪು. ೨೮೬

೧೮ ಆನಂದ ಪಾಟೀಲ, ಅಲರು, ಪು. ೧೦೯

೧೯ ನಾ ಡಿಸೋಜ, ಹಾಡುವ ಹಕ್ಕಿಗೆ ಹಸಿರೆಲೆ ತೋರಣ, ಪು. ೩೧೭

೨೦ ಅದೇ, ಪು. ೩೨೯

೨೧ ಅದೇ, ಪು. ೩೫೧

೨೨ ಅದೇ, ಪು. ೩೫೩

೨೩ ಅದೇ, ಪು. ೩೫೩

೨೪ ಆನಂದ ಪಾಟೀಲ, ಎದ್ದು ನಿಂತ ಬಾಲ, ಪು. ೦೪

೨೫ ಆನಂದ ಪಾಟೀಲ, ಹತ್ತು ಹತ್ತು ಇಪ್ಪತ್ತು, ಪು. ೩೮

೨೬ ಅದೇ, ಪು. ೩೮

೨೭ ಅದೇ, ಪು. ೩೯

೨೮ ಆನಂದ ಪಾಟೀಲ, ಎದ್ದು ನಿಂತ ಬಾಲ, ಪು. ೨೧೫

೨೯ ಅದೇ, ಪು. ೨೧೬

೩೦ ಹ.ಸ.ಬ್ಯಾಕೋಡ, ಆಪರೇಷನ್ ಆನೆಮಲೆ, ಪು. ೦೬

೩೧ ತಮ್ಮಣ್ಣ ಬೀಗಾರ ಕತ್ತಲೆ ಭೂತ, ಪು. ೨೮

೩೨ ಅದೇ, ಪು. ೩೨

೩೩ heard Science Fiction, Soft Science Fiction, Military Science Fiction, Robot Fiction, Social Science Fiction, Space Opera, steampunk, Cyberpunk, Biopunk, Nanopunk, Superhero Fiction, Voyages Extordinaires, Science Romance, Gothic Scince Fiction, Mundane Scinece Fiction, Scifi /Horror, SCIFI/Comedy, SCIFI/ Fantasy(or Scinece Fantasy), Apocaclyptic Science Fiction, Post-apocalyptic Fiction, Zombie Fiction, Alien Invasion, Alien Conspiracy, Time Travel, Alternative History, Parallel Worlds, Lost Worlds, Dystopian Fiction, Space Western, Retro Futurism'

೬೦ ಅದೇ, ಪು. ೩೩

೬೧ ಅದೇ, ಪು. ೩೭

೬೨ ಅದೇ, ಪು. ೩೮

೬೩ ಅದೇ, ಪು. ೩೯

ಅಧ್ಯಾಯ : ಎಂಟು

ತಂತ್ರಜ್ಞಾನ ಮತ್ತು ಫ್ಯಾಂಟಸಿ

೮.೧. ತಂತ್ರಜ್ಞಾನ: ಪರಿಕಲ್ಪನಾತ್ಮಕ ಚರ್ಚೆ

೮.೨. ಧ್ವನಿ ಮಾಧ್ಯಮದ ಸಾಧ್ಯತೆಗಳು

೮.೨.೧. ಆಕಾಶವಾಣಿ ಕಾರ್ಯಕ್ರಮಗಳು ಮತ್ತು ಫ್ಯಾಂಟಸಿ ಕಥನಗಳು

೮.೨.೨. ರೇಡಿಯೋ ಪಾಠಗಳು ಮತ್ತು ಪಠ್ಯ ಸಾಹಿತ್ಯ

೮.೨.೩. ಮಕ್ಕಳ ಕೇಳು ಕಥಾ ಲೋಕದ ಪ್ರಯತ್ನಗಳು;

೮.೩. ದೃಶ್ಯ ಮಾಧ್ಯಮದ ಸಾಧ್ಯತೆಗಳು

೮.೩.೧. ಸಿನಿಮಾ ಮತ್ತು ಮಕ್ಕಳ ಸಾಹಿತ್ಯ

೮.೩.೨. ಅನಿಮೇಷನ್ ಮತ್ತು ಮಕ್ಕಳ ಸಾಹಿತ್ಯ

೮.೩.೨.೧. ಭಾರತೀಯ ಅನಿಮೇಷನ್ ಮತ್ತು ಮಕ್ಕಳ ಸಾಹಿತ್ಯ

೮.೩.೨.೩. ಭಾರತದಲ್ಲಿ ಅನಿಮೇಟ್ ಆದ ಸಿನಿಮಾಗಳ ಪಟ್ಟಿ

೮.೩.೨.೪. ಅನಿಮೇಷನ್‌ನಲ್ಲಿ ಕನ್ನಡಿಗರ ಒಂದು ಪ್ರಯತ್ನ.

೮.೪. ಮುದ್ರಣ ತಂತ್ರಜ್ಞಾನ ಮತ್ತು ಮಕ್ಕಳ ಸಾಹಿತ್ಯ

೮.೪.೧. ಕಾಮಿಕ್ಸ್ ಮತ್ತು ಫ್ಯಾಂಟಸಿ

೮.೪.೨. ಅಂಕಲ್ ಪೈ ಮತ್ತು ಕಾಮಿಕ್ಸ್

೮.೪.೩. ಕನ್ನಡದ ಪತ್ರಿಕೆಗಳು ಮತ್ತು ಕಾಮಿಕ್ಸ್

೮.೫. ಕನ್ನಡ ಮಕ್ಕಳ ಸಾಹಿತ್ಯ ಮತ್ತು ತಂತ್ರಜ್ಞಾನ

೮.೬. ಡಬ್ಬಿಂಗ್ ಸಿನಿಮಾಗಳು ಮತ್ತು ಕನ್ನಡ ಸಾಹಿತ್ಯ

೮.೭. ತಂತ್ರಜ್ಞಾನದ ಮಿತಿಗಳು

ಅಧ್ಯಾಯ: ಎಂಟು

ತಂತ್ರಜ್ಞಾನ ಮತ್ತು ಫ್ಯಾಂಟಸಿ

ಪ್ರಸ್ತಾವನೆ

೨೧ನೇ ಶತಮಾನದಲ್ಲಿ ತಂತ್ರಜ್ಞಾನದ ಗೈರು ಹಾಜರಿಯನ್ನು ನಾವು ಎಂದಿಗೂ ಊಹಿಸಿಕೊಳ್ಳಲು ಸಾಧ್ಯವೇ ಇಲ್ಲ. ಪ್ರತಿಯೊಂದು ಕ್ಷೇತ್ರದಲ್ಲೂ ತಂತ್ರಜ್ಞಾನ ಹಾಸುಹೊಕ್ಕಾಗಿದೆ. ಸಾಹಿತ್ಯ ಕ್ಷೇತ್ರದ ಕಲ್ಪನಾ ವಿಲಾಸಕ್ಕೆ ತಂತ್ರಜ್ಞಾನ ಬಹುದೊಡ್ಡ ಸಾಧನವಾಗಿ ಲೇಖಕರಿಗೆ ಸಹಾಯ ಮಾಡುತ್ತಿದೆ. ಫ್ಯಾಂಟಸಿ ಬರಹಗಾರರಿಗೆ ತಂತ್ರಜ್ಞಾನದ ಅಂಶಗಳು ಸೇರಿಕೊಂಡು ಕಥನದ ಕುತೂಹಲತೆಯನ್ನು ನಿರ್ಮಾಡಿಸುತ್ತದೆ. ಫ್ಯಾಂಟಸಿ ಕಥನಗಳಲ್ಲಿ ಕಂಡುಬರುವ ಕಲ್ಪನೆ, ಅದ್ಭುತ ಹಾಗೂ ಜಾದೂಗಳಿಗೆ ಇರುವ ಹಿನ್ನೆಲೆ ಇಂದಿನದಲ್ಲ. ಜನಪದ ಎನ್ನುವ ವಿಶಾಲ ವ್ಯಾಪ್ತಿಯು ಕಾಲದ ಬಹು ದೂರದ ಸಂಗತಿಗಳನ್ನೆಲ್ಲ ತನ್ನೊಳಗೆ ಒಳಗೊಳ್ಳುತ್ತದೆ. ಹಿಂದಿನ ಬಹಳಷ್ಟು ಕಥೆಗಳಲ್ಲಿ ಬೆರೆತುಕೊಂಡಿದ್ದ ಮಾಟ ಮಂತ್ರ ತಂತ್ರಗಳ ಅದ್ಭುತ ಲೋಕವು ಇಂದಿನ ವಿಜ್ಞಾನದ ಮೊದಲ ಹಂತವೇ ಆಗಿದೆ.

ಇತ್ತೀಚೆಗೆ ಜಾಗತಿಕವಾಗಿ ಅತ್ಯಂತ ಪ್ರಚುರ ಪಡೆದಿರುವ ಜೆ.ಕೆ.ರೌಲಿಂಗ್ ಅವರ ಹ್ಯಾರಿಪಾಟರ್ ಕೃತಿ ತನ್ನ ಕಥೆಯುದ್ದಕ್ಕೂ ಹಿಂದಿನ ಸಾಂಪ್ರದಾಯಿಕ ಸಮಾಜಗಳಲ್ಲಿದ್ದ ಮಾಟ ಮಂತ್ರಗಳ ಸಾಧ್ಯತೆಗಳನ್ನು ಇಂದಿನವರೆಗೂ ತಂದುಕೊಂಡಿದೆ. ಅಲ್ಲಿನ ತಾಂತ್ರಿಕ ಮಾಯಾ ವಿದ್ಯೆಯ ಹಾಗ್ವರ್ಟ್ ಶಾಲೆಯು ಇಂದಿನ ಹೊಸಗಾಲದ ನಗರದ ವಾತಾವರಣದಲ್ಲಿಯೇ ಒಂದೆಡೆ ಬಚ್ಚಿಟ್ಟುಕೊಂಡು ಗುಟ್ಟಾಗಿತ್ತು. ಹಾಗಾಗಿ ನಾವು ಇಂದಿನ ನಮ್ಮ ಕಾಲದ ಪರಿಸರದಲ್ಲಿ ನಿಂತು ನೋಡುವಾಗ ಹಳೆಯ ಕತೆಗಳಲ್ಲಿ ನಾವು ಕಂಡುಕೊಂಡಿರುವ ವೈಜ್ಞಾನಿಕ ವಾತಾವರಣ ಹಾಗೆ ಹಾಗೇ ಇರಲಾರದು ಎಂಬುದು ನಿಜವೇ. ಇಂದಿನ ವೈಜ್ಞಾನಿಕ ಕಥಾ ಜಗತ್ತು ತನ್ನೊಳಗೆ ಹೊಸ ಆವಿಷ್ಕಾರಗಳನ್ನು ಇರಿಸಿಕೊಂಡು ಹೊಸಬಗೆಯ ಅಭಿವ್ಯಕ್ತಿಯನ್ನು, ಹೊಸ ಕಲ್ಪನೆಗಳ ಕಥಾ ಹಂದರಗಳನ್ನು ಮುಂದಿರಿಸಿದೆ. ಆಧುನಿಕ ತಾಂತ್ರಿಕ ಹಾಗೂ ವೈಜ್ಞಾನಿಕತೆಯ ಸಾಧನೆಯ ಆಧಾರದಲ್ಲಿ ಕಂಡುಕೊಳ್ಳುವ ಭವಿಷ್ಯದ ಕಲ್ಪನೆಯ ಕಥಾಲೋಕವೇ ಇಂದು ದೊಡ್ಡ ಮಟ್ಟದಲ್ಲಿ ಬೆಳೆದುನಿಂತಿದೆ.

ಮಕ್ಕಳ ಕಥಾಜಗತ್ತು ತನ್ನ ವಸ್ತುವಿನಲ್ಲಿ ತಂದುಕೊಂಡಿರುವ ವೈಜ್ಞಾನಿಕತೆಯೊಂದು ಬಗೆಯಾದರೆ ಇಂದಿನ ಹೊಸ ಆವಿಷ್ಕಾರಗಳು ಕತೆಗಳನ್ನು ಮಕ್ಕಳಿಗೆ ರವಾನಿಸುವಲ್ಲಿ ಸಹಾಯಕವಾಗಿ ಬಂದು

ದೊಡ್ಡದೊಂದು ಸಂಚಲನವನ್ನು ಉಂಟುಮಾಡಿರುವ ಪ್ರಕ್ರಿಯೆ ಮತ್ತೊಂದು ಬಗೆಯದು. ಈ ಸಾಧ್ಯತೆಗಳ ಪ್ರಭಾವದಲ್ಲಿ ಕಥಾಜಗತ್ತೇ ಹೊಸ ರೂಪವನ್ನು ಹೊಂದಿದ್ದು, ಇಂದು ನಮ್ಮ ಕಣ್ಣಮುಂದೆ ಇದೆ. ಇದೊಂದು ಬಗೆಯಲ್ಲಿ ಮಕ್ಕಳ ಜಗತ್ತಿನ ಅದ್ಭುತ ಲೋಕವಾಗಿ ನಮಗೀಗ ಕಾಣುತ್ತಿದೆ. ಹಿಂದಿನ ತಲೆಮಾರಿನ ತೊಂಡೀ ಸಂಪ್ರದಾಯದ ಕಥಾ ಸಂವಹನಕ್ಕೂ ಇಂದಿನ ಸಂವಹನ ಸಾಧ್ಯತೆಗಳಿಗೂ ಅಜಗಜಾಂತರ ಅಂತರ ಕಾಣಿಸಿಕೊಂಡಿದೆ.

ತಂತ್ರಜ್ಞಾನದ ಯಾವ ಲೇಪವೂ ಇಲ್ಲದ ಹಳೆಗಾಲದ ಬರಹವೊಂದನ್ನು ಇಂದಿನ ಸಿನಿಮಾ, ಅನಿಮೇಷನ್, ಕಾಮಿಕ್ಸ್ ಜಗತ್ತು ತನ್ನದೇ ಹೊಸ ಸಾಧ್ಯತೆಗಳಿಂದ ಮಕ್ಕಳಿಗೆ ತಲುಪಿಸುವ ಬಲು ಭಿನ್ನ ದಾರಿಯನ್ನು ಕಂಡುಕೊಂಡಿದೆ. ಬಹುಶಃ ಆ ಕಾರಣಕ್ಕಾಗಿಯೇ ಶತಶತಮಾನಗಳ ಹಿಂದೆಯೇ ರಚಿತವಾದ, ಬರೀ ಬಾಯಿ ಮಾತಿನಲ್ಲಿಯೇ ಬಂದುಳಿದ ಜನಪದ, ಪುರಾಣ ಕತೆಗಳೆಲ್ಲಾ ಇಂದು ಮೊಬೈಲ್, ಇಂಟರ್‌ನೆಟ್ ಮೂಲಕ ಅಂಗೈಯಲ್ಲೇ ಬಂದು ಕುಳಿತುಕೊಳ್ಳಲು ಸಾಧ್ಯವಾಗಿದೆ. ಹಾಗೆಯೇ ಹೊಸದಾದ ಕಥಾಪಾತ್ರಗಳ ಸೃಷ್ಟಿ, ಅವುಗಳಿಂದ ನವೀನ ಕಥಾಲೋಕವು ಇಂದು ಅರಳಿಕೊಂಡಿದೆ. ಅವನ್ನು ಪ್ರಸ್ತುತಪಡಿಸುವಲ್ಲಿಯೇ ಬಹುಬಗೆಯ ದಾರಿ ಇಂದು ನಮ್ಮ ಮುಂದಿವೆ. ಮುದ್ರಣ ಮಾಧ್ಯಮ, ಧ್ವನಿಮಾಧ್ಯಮಗಳಿಂದ ಹಿಡಿದು ದೃಶ್ಯಮಾಧ್ಯಮ, ಅನಿಮೇಷನ್, ಮೊಬೈಲ್ ಎಂಡ್ರಾಯ್ಡ್‌ಗಳ ನಾನಾಬಗೆಯ ತಾಂತ್ರಿಕ ಬೆಳವಣಿಗೆಯಲ್ಲಿ ಈ ಬದಲಾವಣೆಯನ್ನು ಗುರುತಿಸಬಹುದು.

ಪ್ರಸ್ತುತ ಅಧ್ಯಾಯದಲ್ಲಿ ವೈಜ್ಞಾನಿಕವಾಗಿ, ತಂತ್ರಜ್ಞಾನದ ಹೊಸತಿನಿಂದಾಗಿ ಕನ್ನಡದ ಮಕ್ಕಳಲೋಕಕ್ಕೆ ಪ್ಯಾಂಟಸಿ ಕಥಾಲೋಕ ಎಷ್ಟೆಲ್ಲಾ ಮುಟ್ಟಲು ಸಾಧ್ಯವಾಗಿದೆ ಎನ್ನುವುದನ್ನು ಚರ್ಚೆಗೆ ಇಟ್ಟುಕೊಳ್ಳಲಾಗಿದೆ. ಅದರ ಜೊತೆಯಲ್ಲಿಯೇ ಭಾರತೀಯ ಮಕ್ಕಳ ಸಾಹಿತ್ಯ ಲೋಕದಲ್ಲಿ ಈ ಬಗೆಯ ಸಂಚಲನ ಹೇಗೆಲ್ಲಾ ಕಾಣಿಸಿಕೊಂಡಿದೆ ಎನ್ನುವುದನ್ನೂ ಪ್ರಾಸಂಗಿಕವಾಗಿ ಚರ್ಚೆಗೆ ಎತ್ತಿಕೊಳ್ಳಲಾಗಿದೆ. ಜೊತೆಗೆ ವಿಶ್ವಮಟ್ಟದಲ್ಲಿ ನಡೆಯುತ್ತಿರುವ ಪ್ರಯೋಗಗಳನ್ನು ಭಾರತದ ಪ್ರಾದೇಶಿಕ ಭಾಷೆಗಳೊಂದಿಗೆ (ಕನ್ನಡವನ್ನು ಅನುಲಕ್ಷಿಸಿ) ತೌಲನಿಕ ಅಧ್ಯಯನ ಮಾಡಲಾಗಿದೆ.

೮.೧. ತಂತ್ರಜ್ಞಾನ: ಪರಿಕಲ್ಪನಾತ್ಮಕ ಚರ್ಚೆ

ಆಧುನಿಕ ಜಗತ್ತು ತಂತ್ರಜ್ಞಾನವಿಲ್ಲದೆ ಇಲ್ಲವೇ ಇಲ್ಲವೆನ್ನುವಷ್ಟು ತಂತ್ರಜ್ಞಾನವನ್ನು ಅವಲಂಬಿಸಿದೆ. ಮಾನವನೇ ಶೋಧಿಸಿದ ಈ ಜ್ಞಾನಶಾಖೆ ಇಂದು ಎಲ್ಲಾ ಕ್ಷೇತ್ರಗಳಲ್ಲೂ ತನ್ನ ಚಾಚುಗಳನ್ನು ಹಬ್ಬಿಸಿದೆ. ಕಳೆದೊಂದು ಶತಮಾನದಿಂದ ವಿಶ್ವಮಟ್ಟದಲ್ಲಿ ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಆಗುತ್ತಿರುವ ಹೊಸ ಹೊಸ ಬೆಳವಣಿಗೆ ಹಾಗೂ ಪ್ರಯೋಗಗಳನ್ನು ಭಾರತೀಯರು ಬೆರಗುಗಣ್ಣಿನಿಂದ ನೋಡುವುದೇ ಆಗಿದೆ. ಕಾರಣ ನಮ್ಮಲ್ಲಿ ಬರುತ್ತಿರುವ ಬರಹಗಳು ನಮ್ಮ ಪರಂಪರೆಯ ಪುರಾಣ, ಜನಪದ ಮೂಲಗಳನ್ನು ದಾಟಿ ಮುಂದೆ ಬಂದುದು ತುಂಬಾ ಕಡಿಮೆ. ಇನ್ನು ಮಕ್ಕಳ ಸಾಹಿತ್ಯವನ್ನು ತಂತ್ರಜ್ಞಾನದ ವ್ಯಾಪ್ತಿಗೆ ತಂದು ಸಿನಿಮಾ, ಅನಿಮೇಷನ್, ಕಾಮಿಕ್ಸ್‌ಗಳಲ್ಲಿ ಅಳವಡಿಸಿದ್ದು ಇಲ್ಲವೆನ್ನುವಷ್ಟು

ಕಡಿಮೆ. ಪಾಶ್ಚಿಮಾತ್ಯರು ಈ ನಿಟ್ಟಿನಲ್ಲಿ ಬಹುಮುಂದೆ ಸಾಗಿದ್ದಾರೆ. ಜಪಾನ್, ಅಮೇರಿಕಾ ದೇಶಗಳು ಸಾಕಷ್ಟು ಸಾಧ್ಯತೆಗಳನ್ನು ಓದುಗರ ಮುಂದೆ ಇರಿಸಿಯಾಗಿದೆ. ಇದರಿಂದಲೇ ಮಾರುಕಟ್ಟೆ ಹೊಸ ಹೊಸ ಸಾಧ್ಯತೆಗಳನ್ನು ರೂಪಿಸಿಕೊಂಡಿವೆ.

ಕಿರುಚಿತ್ರಗಳಲ್ಲದೆ ಎಪಿಕಲ್‌ನಂತಹ ದೀರ್ಘ ಅವಧಿಯ ಕಥಾನಕವನ್ನೂ ಮಕ್ಕಳಿಗೆ ಅವರಿಗಿಷ್ಟದ ಸ್ವರೂಪದಲ್ಲಿ ನೀಡುವ ಪ್ರಯತ್ನಗಳನ್ನೂ ಲೇಖಕರು ಮಾಡುತ್ತಿದ್ದಾರೆ. ಇಪ್ಪತ್ತನೇ ಶತಮಾನದ ಆರಂಭದಿಂದ ಈ ಬಗೆಯ ಹುಡುಕಾಟ, ಚಟುವಟಿಕೆ ಪಾಶ್ಚಾತ್ಯರಲ್ಲಿ ಕಾಣಿಸಿಕೊಂಡಿದೆ. ಹೀಗೆ ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ತಂತ್ರಜ್ಞಾನದ ಒಳಗೊಳ್ಳುವಿಕೆಯ ಅನಿವಾರ್ಯತೆಯನ್ನು ಇ-ಕಾಲದ ಮಕ್ಕಳು, ಮನೋವಿಜ್ಞಾನಿಗಳು ಒತ್ತಿ ಹೇಳುತ್ತಿದ್ದಾರೆ. ಅದಕ್ಕೂ ಪೂರ್ವದಲ್ಲಿ ತಂತ್ರಜ್ಞಾನದ ಅರ್ಥವನ್ನು ತಿಳಿಯುವುದು ಮುಖ್ಯ. '**Technology**, the application of scientific knowledge to the practical aims of human life or, as it is sometimes phrased, to the change and manipulation of the human environment.'[1] ಇದೊಂದು ತಂತ್ರಜ್ಞಾನ ಕುರಿತ ಸಾಮಾನ್ಯೀಕರಿಸಿದ ಹೇಳಿಕೆಯಷ್ಟೇ. ಇಂದು ನಾವು ಕಾಣುತ್ತಿರುವ ಯೂಟ್ಯೂಬ್‌ನಿಂದ ಹಿಡಿದು ಅಂಡ್ರಾಯ್ಡ್‌ವರೆಗಿನ ಸಂವಹನ ಮಾಧ್ಯಮಗಳ ಭರಾಟೆ ಈ ಹೊಸಗಾಲದ ವೈಜ್ಞಾನಿಕದ ಸಾಧ್ಯತೆಗಳನ್ನು ಇನ್ನಿಲ್ಲದಂತೆ ನಮ್ಮ ಮುಂದೆ ಇರಿಸಿ ಇದೊಂದು ಅಗಾಧವಾದ ಸಾಧ್ಯತೆಗಳ ಜಗತ್ತು ಎನ್ನುವುದನ್ನು ಅನುಭವಕ್ಕೆ ತಂದಿದೆ. ಇಲ್ಲಿ ಇನ್ನೂ ಹೊಸ ಹೊಸ ಸಾಧ್ಯತೆಗಳು ಗೋಚರಿಸಬಹುದು. ಹೀಗೆ ತೋರಿಕೊಳ್ಳುತ್ತಿರುವ ಹೊಸಗಾಲದ ಸಾಧ್ಯತೆಗಳು ಖಂಡಿತ ನಮ್ಮ ಕಲಾಪ್ರಕಾರಗಳ ಮೇಲೆ ಪರಿಣಾಮ ಬೀರುತ್ತಲೇ ಇವೆ. ಮಕ್ಕಳ ಕಥಾ ಜಗತ್ತು ಇದರಿಂದ ಹೊರತಾಗಿರಲು ಸಾಧ್ಯವೇ ಇಲ್ಲ. ಮೊದಲು ಸಮುದಾಯದಲ್ಲಿ ಒಂದಾಗಿ ನಗಣ್ಯವಾಗಿದ್ದ ಬಾಲ್ಯ ಇಂದು ಮಾರುಕಟ್ಟೆಯಲ್ಲಿ ತನ್ನದೇ ಆದ ದೊಡ್ಡ ರಹದಾರಿಗಳನ್ನು ತೋರಿಸಿದೆ[2]. ಮಕ್ಕಳು ಈಗ ಎಷ್ಟೊಂದು ಆಕರ್ಷಣೆಯ, ಅಗತ್ಯದ ಸಂಗತಿಯಾಗಿದ್ದಾರೆ ಎನ್ನುವುದೇ ಅಚ್ಚರಿಯ ಸಂಗತಿಯಾಗಿದೆ.

ತಂತ್ರಜ್ಞಾನವು ಇಷ್ಟೆಲ್ಲಾ ಬಗೆಯಲ್ಲಿ ಮಕ್ಕಳ ಸಾಹಿತ್ಯವನ್ನು ಮುಟ್ಟಿಸುವ ಮಾಧ್ಯಮವಾಗಿ ಬಳಕೆಯಾಗಿ, ಸಾಹಿತ್ಯದ ಸ್ವರೂಪವೇ ಬದಲಾಗುವಷ್ಟು ಮಟ್ಟಿಗೆ ಮಕ್ಕಳನ್ನು, ಲೇಖಕರನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಪ್ರಸ್ತುತ ಅಧ್ಯಾಯದಲ್ಲಿ ಮಕ್ಕಳ ಫ್ಯಾಂಟಸಿ ಕಥನಗಳನ್ನು ತಂತ್ರಜ್ಞಾನ ಹೇಗೆಲ್ಲಾ ಪ್ರಭಾವಿಸಿದೆ, ಈ ಬಗೆಯ ಕಥನಗಳ ಮುಟ್ಟಿಸುವಿಕೆಯಲ್ಲಿ ತಂತ್ರಜ್ಞಾನದ ಪಾತ್ರ ಯಾವೆಲ್ಲಾ ಸ್ವರೂಪದಲ್ಲಿದೆ ಎನ್ನುವುದನ್ನು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ.

೮.೨. ಧ್ವನಿ ಮಾಧ್ಯಮದ ಸಾಧ್ಯತೆಗಳು

ಭಾರತದಲ್ಲಿ, ಹಾಗೆಯೇ ಕರ್ನಾಟಕದಲ್ಲಿ ೨೦ನೆಯ ಶತಮಾನದ ಮಧ್ಯದ ಹೊತ್ತಿಗೆ ವಿದ್ಯುನ್ಮಾನ ಮಾಧ್ಯಮವಾಗಿ ರೇಡಿಯೊ ಕಾಣಿಸಿ ಎಲ್ಲರನ್ನು ಆಕರ್ಷಿಸಿದ್ದು ಇತಿಹಾಸ. ಕರ್ನಾಟಕದಲ್ಲಿ

೬ ಆಕಾಶವಾಣಿ ಕೇಂದ್ರಗಳು ಮೊದಲು ಕಾಣಿಸಿಕೊಂಡು, ನಂತರ ಎಫ್.ಎಂ ಕೇಂದ್ರಗಳಾಗಿ ಜಿಲ್ಲಾ ಕೇಂದ್ರಗಳವರೆಗೂ ವ್ಯಾಪಿಸಿಕೊಂಡಿವೆ. ಮುದ್ರಣ ಮಾಧ್ಯಮದ ಪತ್ರಿಕೆಗಳ ನಂತರ ಆಕಾಶವಾಣಿ ಆಕರ್ಷಣೆಯ ಮಾಧ್ಯಮವಾಗಿ ಕಾಣಿಸಿಕೊಂಡಿದ್ದು ಆಚ್ಚರಿಯ ಸಂಗತಿಯೇನಲ್ಲ. ಇಂಥ ಪ್ರಭಾವಕಾರಿ ಮಾಧ್ಯಮವು ಮಕ್ಕಳ ಜಗತ್ತನ್ನು ಪ್ರಾರಂಭದ ದಿನಗಳಿಂದಲೇ ಗುರುತಿಸಿಕೊಂಡಿತು. ಎಲ್ಲಾ ಕೇಂದ್ರಗಳಲ್ಲಿಯೂ ಮಕ್ಕಳಿಗಾಗಿಯೇ, ಸಾಮಾನ್ಯವಾಗಿ ಶಾಲಾ ರಜೆಯ ದಿನಗಳಾದ ಶನಿವಾರ, ರವಿವಾರಗಳಂದು ಈ ಕಾರ್ಯಕ್ರಮಗಳು ಪ್ರಸಾರವನ್ನು ವ್ಯವಸ್ಥೆ ಮಾಡಿಕೊಂಡವು. ಈ ಕಾರ್ಯಕ್ರಮಗಳಲ್ಲಿ ಮಕ್ಕಳು ನೇರವಾಗಿ ಭಾಗವಹಿಸುವುದಲ್ಲದೆ, ಹಿರಿಯರು ಭಾಗವಹಿಸುತ್ತಾ ಮಕ್ಕಳಿಗೆ ನಾನಾ ಬಗೆಯ ಅಗತ್ಯದ, ರಂಜನೆಯ ಉಣಿಸನ್ನು ನೀಡುತ್ತಾ ಬಂದರು. ಆಯಾ ಭಾಷಾವಲಯದಲ್ಲಿ ಹೀಗೆ ಮಕ್ಕಳೊಡನೆ ಭಾಗವಹಿಸುತ್ತಾ ಹೆಸರುವಾಸಿಯಾದ ಕಲಾವಿದರೂ ಕಾಣಿಸಿಕೊಂಡಿದ್ದಾರೆ. ಇದರೊಟ್ಟಿಗೆ ವರ್ತಮಾನದ ತಾಂತ್ರಿಕ ಬೆಳವಣಿಗೆಗಳನ್ನು ಬಳಸಿಕೊಂಡು ಕಥೆಗಳನ್ನು, ಮಕ್ಕಳ ಕೇಳು ಪುಸ್ತಕಗಳನ್ನು ಹಂಚುವ ಬ್ಲಾಗ್‌ಗಳು, ಸಂಸ್ಥೆಗಳು ಕೂಡ ಮಕ್ಕಳ ಕಲ್ಪನಾ ಲೋಕದ ಅನಾವರಣಕ್ಕೆ ಸಹಕರಿಸುತ್ತವೆ. ಇಂಥಹ ಪ್ರಯತ್ನಗಳನ್ನೂ ಪ್ರಸ್ತುತ ಉಪಘಟಕದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

೮.೨.೧. ಆಕಾಶವಾಣಿ ಕಾರ್ಯಕ್ರಮಗಳು ಮತ್ತು ಫ್ಯಾಂಟಸಿ ಕಥನಗಳು

ಧಾರವಾಡ ಆಕಾಶವಾಣಿಯ 'ಗಿಳಿವಿಂಡು' ಕಾರ್ಯಕ್ರಮದ ಕಾಕಾ, ಅಕ್ಕಮ್ಮ, ಸಣ್ಣಕ್ಕಿ ಎಲ್ಲರ ಮನೆಮಾತಾಗಿ ಇಂದಿಗೂ ಹಿರಿಯರನೇಕರ ನೆನಪುಗಳಲ್ಲಿ ಮಾಸದೆ ಉಳಿದಿದೆ. ಹೀಗೆ ಮಕ್ಕಳ ಜಗತ್ತು ಕಾಣಿಸಿಕೊಂಡಾಗ, ಕಥೆಗಳು ಅಲ್ಲಿ ಅಗತ್ಯವಾಗಿ ಸ್ಥಾನಪಡೆದುಕೊಂಡವು. ನಾನಾ ಬಗೆಯ ಕತೆಗಳನ್ನು ಆರಿಸಿ ಮಕ್ಕಳಿಗೆ ಸೊಗಸಾಗಿ ಹಿರಿಯರು ಹೇಳುತ್ತಿದ್ದುದು ಸಾಮಾನ್ಯದ ಪರಿಪಾಠ. ಕತೆ ಹೇಳುವುದಕ್ಕೇ ವಿಶೇಷವಾದ ಸಮಯ ಮಾಡಿಕೊಂಡದ್ದೂ ಕೆಲ ಕೇಂದ್ರಗಳಲ್ಲಿ ನಡೆದಿದೆ. ಆಗೆಲ್ಲಾ ಸಾಮಾನ್ಯವಾಗಿ ನಮ್ಮ ಜನಪದ ಕತೆಗಳೇ ಬಹುಪಾಲು ಆಸರೆಯಾಗುತ್ತಿದ್ದು. ಮೊದಮೊದಲು ಈ ಕಾರ್ಯಕ್ರಮಗಳೆಲ್ಲಾ ಲೈವ್ ಆಗಿ ನೇರಪ್ರಸಾರದಲ್ಲಿ ತಲುಪುತ್ತಿದ್ದುದೇ ಇತ್ತು. ರಿಕಾರ್ಡಿಂಗ್, ಎಡಿಟಿಂಗ್ ವ್ಯವಸ್ಥೆ ನಂತರ ತೊಡಗಿಕೊಂಡಿತು. ಈ ಬಗೆಯ ಮಕ್ಕಳ ಕಾರ್ಯಕ್ರಮದ ಮಾಹಿತಿ ದಾಖಲೆ ಆಗಿರುವುದು ಕಡಿಮೆ. ಹಾಗಾಗಿ ಕತೆಗಳನ್ನೇ ಇಟ್ಟುಕೊಂಡರೂ ಏನೆಲ್ಲಾ ಪ್ರಯತ್ನಗಳು ನಡೆದವು, ವಿಶೇಷದ ಪ್ರಯತ್ನಗಳೇನಾದರೂ ನಡೆದವೇ ಮುಂತಾದ್ದು ತಿಳಿಯುತ್ತಿಲ್ಲ. ಹಾಗಿದ್ದೂ ಕೆಲವನ್ನು ಇಲ್ಲಿ ಉದಾಹರಿಸಬಹುದಾಗಿದೆ.

ಭದ್ರಾವತಿ ಆಕಾಶವಾಣಿ ಕೇಂದ್ರದಿಂದ(೨೦೦೦-೨೦೦೪ ಸುಮಾರಿನ ಅವಧಿಯಲ್ಲಿ) ಶ್ರೀನಿವಾಸರಾವ್ ಎಸ್.ವಿ. ಅವರ 'ಹಾರೋ ಹನುಮ' ಕಾದಂಬರಿ ಪ್ರಸಾರವಾಗಿತ್ತು. ಅದು ಕಾದಂಬರಿ ವಾಚನದ ಮಾದರಿಯಲ್ಲಿಯೇ ಪ್ರಸಾರವಾದರೂ ಅದರಲ್ಲಿನ ಕೆಲ ಪಾತ್ರಗಳ ಧ್ವನಿ

ಅಭಿನಯಗಳನ್ನು ಅಳವಡಿಸಿಕೊಂಡು ಪ್ರಸ್ತುತಪಡಿಸಲಾಗಿತ್ತು. ಅಲ್ಲದೆ ವಿಶೇಷ ಅಂದರೆ ಈ ಕಾದಂಬರಿಯನ್ನು, ಧ್ವನಿ ಮಾಧ್ಯಮದ ಅಗತ್ಯವಾಗಿ ನಿಗದಿತ ಕಂತುಗಳಲ್ಲಿ, ನಿಗದಿತ ಸಮಯಗಳಲ್ಲಿ ಪ್ರಸಾರಮಾಡುತ್ತಾ, ಕೊನೆಯ ಕಂತು ಇರುವಾಗ, ಮಕ್ಕಳಿಗೆ ಕರೆ ಕೊಟ್ಟು ಕೊನೆ ಹೇಗೆಲ್ಲಾ ಆಗಬಹುದು, ನಿಮ್ಮ ಕಲ್ಪನೆಯಲ್ಲಿ ಮುಂದುವರಿಸಿ ಕಳಿಸಿ ಎಂದು ಕೇಳಿಕೊಳ್ಳಲಾಗಿತ್ತು. ಅದಕ್ಕೆ ಬಲು ಉತ್ಸಾಹದ ಪ್ರತಿಕ್ರಿಯೆ ಕಾಣಿಸಿ ಅನೇಕ ಬರಹಗಳು ಬಂದಿದ್ದವು. ಅವುಗಳಲ್ಲಿ ಆಯ್ದುವನ್ನು ಮತ್ತೆ ಧ್ವನಿ, ಅಭಿನಯ ಅಳವಡಿಸಿಕೊಂಡು ಪ್ರಸ್ತುತಪಡಿಸಲಾಯಿತು, ನಂತರ ಮೂಲ ಲೇಖಕರ ಕೊನೆಯನ್ನು ಪ್ರಸಾರ ಮಾಡಲಾಗಿತ್ತು. ಇದು ಮಕ್ಕಳಲ್ಲಿನ ಕಲ್ಪನೆಯ ಬೆಳವಣಿಗೆಗೆ ಪ್ರೋತ್ಸಾಹ ನೀಡುತ್ತಲೇ ಧ್ವನಿಮಾಧ್ಯಮಗಳು ಮಕ್ಕಳಲ್ಲಿ ಫ್ಯಾಂಟಸಿತನವನ್ನು ತರಲು ಮಾಡಿದ ಪ್ರಯತ್ನದ ಭಾಗವಾಗಿ ಈ ಕಾರ್ಯಕಮಗಳನ್ನು ಗುರುತಿಸಬಹುದು.

'ಹಾರೋ ಹನುಮ' ಕೃತಿಯು ಫ್ಯಾಂಟಸಿ ಕಾದಂಬರಿಯಾಗಿದ್ದು, ರಾಮಾಯಣದ ಗೊಂಬೆಯಾಟದಲ್ಲಿ ಬಳಕೆಯಾದ ಬಲೂನು ಹನುಮಗೊಂಬೆ ಹಾರಿಕೊಂಡು, ಬಾಲಕನೊಬ್ಬನೊಡನೆ ಗೆಳೆತನ ಮಾಡಿಕೊಂಡು ಸಾಗುವ, ಗ್ರಾಮೀಣ ಪರಿಸರದ, ಬಡತನ, ಕಷ್ಟಗಳ ಪರಿಸರದ ಹಿನ್ನೆಲೆಯ ಕತೆಯಾಗಿತ್ತು. ಈ ಫ್ಯಾಂಟಸಿಯೇ ಮಕ್ಕಳಿಗೆ ಮುದನೀಡುವ ಸಂಗತಿಯಾಗಿತ್ತು ಎನ್ನುವುದು ಮಕ್ಕಳ ಪತ್ರ ಪ್ರತಿಕ್ರಿಯೆಗಳಿಂದ ವ್ಯಕ್ತವಾಗಿತ್ತು. ಹೀಗೆ ಫ್ಯಾಂಟಸಿ ಸಂಗತಿಗಳಿರುವಾಗ ಧ್ವನಿ ಮಾಧ್ಯಮದಲ್ಲಿ ರಸವತ್ತಾಗಿ ರೂಪಿಸುವ ಸಾಧ್ಯತೆಗಳು ಸಹಜವಾಗಿರುತ್ತವೆ. ಹಾಗಾಗಿ ಬಾನುಲಿಯಂಥ ಮಾಧ್ಯಮ ಈ ನಿಟ್ಟಿನಲ್ಲಿ ಸಾಕಷ್ಟು ವ್ಯಾಪಕವಾಗಿ ಫ್ಯಾಂಟಸಿ ಕೃತಿಗಳನ್ನು ತೊಡಗಿಸಿಕೊಳ್ಳುವ ಸಾಧ್ಯತೆ ಇದೆ. ಈ ನಿಟ್ಟಿನಲ್ಲಿ ಗುಲಬರ್ಗಾ ಆಕಾಶವಾಣಿ ಕೇಂದ್ರದಿಂದ ಪ್ರಸಾರವಾದ ಹಲವು ಮಕ್ಕಳ ನಾಟಕಗಳು ಈ ಬಗೆಯ ಸಾಧ್ಯತೆಗಳನ್ನು ಬಳಸಿಕೊಂಡಿವೆ.

ಆನಂದ ಪಾಟೀಲರ 'ಮುತ್ಯಾ ಮತ್ತು ಮೂವರು ರಾಕ್ಷಸರು' ಇಂಥದೊಂದು. ಅದರಲ್ಲಿ ನಮ್ಮ ನಡುವಿನ ಹುಡುಗನೊಬ್ಬ ತನ್ನ ಅಜ್ಜಿಯ ಕತ್ತಲೆ ಕೋಣೆಯಲ್ಲಿ ಬಚ್ಚಿಟ್ಟಿದ್ದ ರಾಕ್ಷಸರ ಗೊಂಬೆಗಳನ್ನು ಕದ್ದು ಅವುಗಳೊಡನೆ ಆಡುವ ಸಂದರ್ಭ ಬರುತ್ತದೆ. ಆದರೆ ಮುತ್ಯಾ ಆ ಗೊಂಬೆಗಳನ್ನು ಸ್ಪರ್ಶಿಸುತ್ತಲೇ ಆ ರಾಕ್ಷಸರ ವಿಚಿತ್ರ ಲೋಕಗಳಿಗೆ ಹೋಗುವುದು, ರಾಕ್ಷಸರೊಡನೆ ಸಮಯ ಕಳೆಯುವುದು ನಡೆಯುತ್ತದೆ. ರಾಕ್ಷಸರು ಭಯಾನಕರಾಗಿರದೆ ಹುಡುಗನ ಮುಂದೆ ತೀರಾ ಕರುಣೆಯುಳ್ಳವರಾಗಿ ಕಾಣಿಸಿಕೊಳ್ಳುತ್ತಾರೆ. ಹುಡುಗನನ್ನು ಪ್ರೀತಿ ಮಮತೆಗಳಿಂದ ನೋಡಿಕೊಳ್ಳುವ ಪ್ರಸಂಗ ನಡೆಯುತ್ತದೆ. ಹುಡುಗ ತನ್ನ ವಾಸ್ತವದ ಸಂದರ್ಭ ಮತ್ತು ಈ ಮಾಯದ ಲೋಕದ ದ್ವಂದ್ವದಲ್ಲಿ ಸಿಕ್ಕು ಅನುಭವಿಸುವ ಸಂಗತಿಗಳು ನಾಟಕದ ಕತೆಯನ್ನು ಹಲವು ಆಚೆಯ ಹರವುಗಳಿಗೆ ದೂಡಿಕೊಳ್ಳುವುದು ನಡೆಯುತ್ತದೆ. ಈ ನಾಟಕ ಪ್ರಸಾರದ ಸಾಧ್ಯತೆಗಳನ್ನು ಸಾಕಷ್ಟು ತೋರಿಸಿತು, ಮಕ್ಕಳಿಗೆ ಬಲು ಹಿಡಿಸಿತು ಕೂಡ. ಅದು ಅನೇಕ ಬಾರಿ ಹಲವಾರು ಕೇಂದ್ರಗಳಿಂದ ಪ್ರಸಾರವಾಯಿತು

ಕೂಡ. ರಾಕ್ಷಸರ ವಿಚಿತ್ರ ಲೋಕಕ್ಕೆ ಹೋಗುವುದು, ಅಲ್ಲಿನ ದೊಡ್ಡ ಬಾಗಿಲು ತೆರೆಯುತ್ತಿದ್ದಂತೆ ವಿಚಿತ್ರ ಆಕಾರದ ರಾಕ್ಷಸರು ಕಾಣಿಸಿಕೊಳ್ಳುವುದು, ಅಲ್ಲಿ ವಿಚಿತ್ರ ಸಂಗತಿಗಳು ನಡೆಯುವುದು ಎಲ್ಲ ಧ್ವನಿಮಾಧ್ಯಮದಲ್ಲಿ ತರಲು ಸಾಧ್ಯವಾಗಿತ್ತು. ಇಂಥದು ಮಕ್ಕಳನ್ನು ಬಹುಬೇಗ ಕಲ್ಪನಾ ಲೋಕಕ್ಕೆ ಕರೆದುಕೊಂಡು ಹೋಗಲು ಸಹಾಯ ಮಾಡುತ್ತದೆ.

ಧಾರವಾಡ ಆಕಾಶವಾಣಿ ಕೇಂದ್ರದಿಂದ 'ಮಾಯಪ್ಪಜ್ಜನ ರುಮಾಲು' ನಾಟಕ ಪ್ರಸಾರವಾಗಿತ್ತು. ಅದರಲ್ಲಿನ ಬಾಲಕನ ಪಾತ್ರವನ್ನು ಅಭಿನಯಿಸಿದ ಬಾಲಕನ ಅಭಿನಯ ಚಾತುರ್ಯದಿಂದ ತುಂಬಾ ಜನರನ್ನು ತಲುಪಿತ್ತು. ಇಲ್ಲಿಯೂ ಫ್ಯಾಂಟಸಿಯೇ ಇಡೀ ನಾಟಕವನ್ನು ಆವರಿಸಿರುವುದು ಕಂಡು ಬರುತ್ತದೆ. ಈ ನಾಟಕದಲ್ಲಿ ಮಾಯಪ್ಪಜ್ಜ ಎನ್ನುವ ಒಂದು ಹಳ್ಳಿಯಲ್ಲಿನ ಒಂಟಿ ಮುದುಕನ ರುಮಾಲನ್ನು ಮುತ್ಯಾ ಎನ್ನುವ ಹುಡುಗ ಅದೇನೋ ಆಟಕ್ಕೆ ಎಳೆಯಲು ಹೋಗಿ ಅದು ಅಪರಂಪಾರ ಬೆಳೆಯುತ್ತಾ, ಅವನನ್ನು ದಿಗಿಲಿಗೆ ಕೆಡವಿ, ಅವನನ್ನೂ ಅದರಲ್ಲಿಯ ಚಿತ್ರದ ಗೊಂಬೆಗಳಲ್ಲಿ ಒಂದಾಗಿ ಮಾಡಿಕೊಂಡುಬಿಡುತ್ತದೆ. ಹುಡುಗ ಚಿತ್ರವಾಗಿ ಎಷ್ಟು ಕೂಗಿದರೂ ಮುದುಕನಿಗೆ ಕೇಳದು. ಕೊನೆಗೂ ಮುದುಕ ಆ ರುಮಾಲನ್ನು ಹಳ್ಳದಲ್ಲಿ ಒಗೆಯುತ್ತಾ ಒಣಗು ಹಾಕಲು ಚೆನ್ನಾಗಿ ಝಾಡಿಸಿದಾಗ ಇದ್ದಕ್ಕಿದ್ದಂತೆ ಬಿದ್ದುಬಿಡುವ ಹುಡುಗ ಸತ್ತೆನೊ ಬಿದ್ದೆನೊ ಎಂದು ಓಡಿಹೋಗತೊಡಗಿದವನು, ಮುದುಕ ಜಾತ್ರೆಯಿಂದ ತಂದಿರುವ ಇನ್ನೊಂದು ಮಾಯದ ರುಮಾಲು ಕೊಡುವೆ ಎಂದೊಡನೆ ಓಡೋಡಿ ಬರುವುದರೊಂದಿಗೆ ನಾಟಕ ಮುಕ್ತಾಯವಾಗುತ್ತದೆ. ಇಲ್ಲಿ ಧ್ವನಿ ಮಾಧ್ಯಮ ಸಾಕಷ್ಟು ಬಗೆಯಲ್ಲಿ ಫ್ಯಾಂಟಸಿಯನ್ನು ತರಲು ಅನುಕೂಲವಾಗಿ ಪರಿಣಮಿಸಿದ್ದು ಕಂಡು ಬರುತ್ತದೆ.

ವಾಸ್ತವದೊಡನೆ ಫ್ಯಾಂಟಸಿ ಬೆರೆತ ಕಥಾನಕವೊಂದು ಹೊಸಪೇಟೆ ಆಕಾಶವಾಣಿ ಕೇಂದ್ರದಿಂದ ಪ್ರಸಾರವಾಗಿತ್ತು. 'ಡಂ ಡಂ ಊರಿಗೆ ಡಿಂ ಡಿಂ ಗಾಡಿ' ಎನ್ನುವ ಹೆಸರಿನ ಇದೊಂದು ಗಂಭೀರವಾದ ಕತೆ. ಇದರಲ್ಲಿ ಇಡೀ ಕತೆಯ ಕೇಂದ್ರ ಪಾತ್ರ ಹೀಗೆ ನಡೆಯಿತು ಎನ್ನುವಂತೆ ನಿರೂಪಿಸುತ್ತಾ ಹೋಗುವ ಬಗೆಯಲ್ಲಿ ಪ್ರಸ್ತುತ ಪಡಿಸಲಾಗಿತ್ತು. ಅಲ್ಲಿರುವ ವಿಭಿನ್ನ ಬಾಲ ಪಾತ್ರಗಳು ಸಂದರ್ಭಕ್ಕೆ ತಕ್ಕಂತೆ ತಮ್ಮ ಧ್ವನಿಗಳನ್ನು ನೀಡುತ್ತಿದ್ದರು. ಇದು ಕೂಡ ಧಾರವಾಹಿಯಾಗಿ ಹಲವು ಕಂತುಗಳಲ್ಲಿ ಪ್ರಸಾರವಾಯಿತು. ಇದರಲ್ಲಿ ಕೊನೆಯಲ್ಲಿ ಮಕ್ಕಳು ಆಟವಾಗಿ ಅಂದುಕೊಳ್ಳುವ ಮೋಜಿನ ಲೋಕ ಡಂ ಡಂ ಊರಿನಿಂದಲೇ ಇಳಿದು ಬಂದ ಹುಡುಗನೊಬ್ಬ ಇದ್ದಕಿದ್ದಂತೆ ಕಾಣಿಸಿಕೊಂಡು ಚಕಿತರನ್ನಾಗಿ ಮಾಡಿಬಿಡುತ್ತಾನೆ. ಮಕ್ಕಳು ಕಂಗಾಲಾಗಿ ಬಿಡುತ್ತಾರೆ. ಆ ಡಂಡಂ ಊರಿನಲ್ಲಿ ಯಾವ ಬದಲಾವಣೆಗಳು ಆಗದೆ ಜೀವನ ನಡೆಯುತ್ತಿದ್ದು, ಮುಪ್ಪು ಆಗುವುದೇ ಇಲ್ಲ, ಆಡಿಕೊಂಡೇ ಇರಬಹುದು ಎಂದು ಇನ್ನೂ ಅಚ್ಚರಿ ಮುಂದಿಟ್ಟು ಆ ಹುಡುಗ ಎಲ್ಲರನ್ನು ಅಲ್ಲಿಗೆ ಬರುವಂತೆ ಕರೆಯುತ್ತಾನೆ. ಮಕ್ಕಳು ಇನ್ನಷ್ಟು ದಿಗಿಲಿಗೆ ಬೀಳುತ್ತಾರೆ. ಕೊನೆಗೂ ಕಥಾನಾಯಕಿ,

ಎಲ್ಲರಿಗಿಂತ ತುಸು ದೊಡ್ಡವಳು ತಾನೇ ನಿರ್ಧಾರ ತೆಗೆದುಕೊಂಡು ನಿರಾಕರಿಸಿಬಿಡುತ್ತಾಳೆ. ಅವಳ ಈ ನಿರಾಕರಣೆಗೆ ಕಾರಣ, ಮನೆಯಲ್ಲಿನ ಕತ್ತಲೆ ಕೋಣೆಯಲ್ಲಿನ ಮುಪ್ಪಿನ ಅಜ್ಜಿ! ಒಂದು ದೊಡ್ಡ ನೋವನ್ನು ಆ ಹುಡುಗಿಯ ಮುಂದಿಡುತ್ತಾಳೆ.

ಹೀಗೆಯೇ ಇನ್ನೊಂದು ಫ್ಯಾಂಟಸಿ ಕತೆಯ ಎಳೆಯುಳ್ಳ ಪುಟ್ಟ ಕಾರ್ಯಕ್ರಮ ಹೊಸಪೇಟೆ ಕೇಂದ್ರದಿಂದ ಪ್ರಸಾರವಾಗಿ ರಾಷ್ಟ್ರಮಟ್ಟದ ಪುರಸ್ಕಾರಕ್ಕೆ ಪಾತ್ರವಾಗುತ್ತದೆ. 'ಗುಬ್ಬಿ ಮತ್ತು ಐಸ್‌ಕ್ರೀಮ್'(ಲೇಖಕರು) ಎನ್ನುವ ಈ ಪುಟ್ಟ ಏಳು ನಿಮಿಷದ ಕಾರ್ಯಕ್ರಮದಲ್ಲಿ ಪುಟ್ಟ ಹುಡುಗಿಯೊಬ್ಬಳು ಮನೆಯ ಟೆರೇಸಿನಲ್ಲಿ ಹಾರಿಬಂದ ಪುಟಾಣಿ ಗುಬ್ಬಿಯೊಡನೆ ನಡೆಸುವ ಸಂಭಾಷಣೆಯಿಂದ ಈ ಕಾರ್ಯಕ್ರಮ ಚುರುಕು ಪಡೆಯುತ್ತದೆ. ಹುಡುಗಿ ಗುಬ್ಬಿಯನ್ನು, ನಿನಗೆ ಐಸ್‌ಕ್ರೀಮ್ ಇಷ್ಟಾನಾ? ಅಂತ ಕೇಳಿದರೆ ಗುಬ್ಬಿ ನನಗೂ ಇಷ್ಟ, ಕೊಡು ಅನ್ನುತ್ತದೆ. ಹುಡುಗಿ ಪೇಚಾಡಿಕೊಂಡು, ಅಮ್ಮನ ಹತ್ತಿರ ಹೋಗಿ ಗೋಗರೆಯುತ್ತಾಳೆ, ನೌಕರಿಯ ಗಡಿಬಿಡಿಯ ಅಮ್ಮ ಇದೇನು ಹುಚ್ಚು ಅಂತ ಸಾಗು ಹಾಕುತ್ತಾಳೆ, ಅಪ್ಪ ತನ್ನ ಕಂಪೂಟರಿನಿಂದ ಏಳಲೇ ಒಲ್ಲದವನಾಗಿ ಇವಳ ಮಾತಿಗೇ ಕಿವಿಯನ್ನೇ ಕೊಡುವುದಿಲ್ಲ. ಬೇಜಾರಿನಿಂದ ಹುಡುಗಿ ಅಮ್ಮನನ್ನು ನೀನೇ ಕೇಳುಬಾ ಅಂತ ಟೆರೇಸಿಗೆ ಕರೆದುಕೊಂಡು ಬಂದರೆ ಗುಬ್ಬಿ ಮಾತಾಡುವುದು ಅಮ್ಮನಿಗೆ ತಿಳಿಯವುದೇ ಇಲ್ಲ. ಹುಡುಗಿಗೆ ಮಾತ್ರ ಅದು ತಿಳಿಯುವುದು. ಹಾಗಾಗಿ ಅಮ್ಮ ರೇಗಿಕೊಂಡು ಹುಷ್ ಅಂತ ಅದನ್ನು ಹಾರಿಸಿಬಿಡುತ್ತಾಳೆ, ಹುಡುಗಿ ದುಃಖದಲ್ಲಿ ಮುಳುಗಿಹೋಗುತ್ತಾಳೆ. ಈ ಪುಟ್ಟ ಅವಧಿಯ ಕಾರ್ಯಕ್ರಮ ಸಂವಹನಗೊಳಿಸಿದ ಸಂಗತಿ ಬಲು ದೊಡ್ಡದಾಗಿತ್ತು. ಮಕ್ಕಳಂತೂ ಬಲು ಆಸಕ್ತಿಯಿಂದ ಕೇಳಿದರು ಇದನ್ನು. ಜೊತೆಗೆ ದೊಡ್ಡವರೂ ತುಂಬಾ ಆಸಕ್ತಿವಹಿಸಿದ್ದರು.

ಹಾಸನ ಆಕಾಶವಾಣಿ ಕೇಂದ್ರದಿಂದ 'ಪುಟ್ಟಕ್ಕಂದೆಲ್ಲಾ ಪುಟ್ ಪುಟಾಣಿ ಕತೆ' ಎನ್ನುವ ಸರಣಿ ಬೆಳಗಿನ ಸಮಯ, ಎಲ್ಲರೂ ವಾಕಿಂಗ್‌ಗೆ ರೇಡಿಯೋ ಕೇಳುತ್ತಾ ಸಾಗುವ ಹೊತ್ತಿಗೇ ಪ್ರಸಾರವಾಗಿ ಬಲು ಜನಪ್ರಿಯವಾದುದನ್ನು ಇಲ್ಲಿ ಹೇಳಬೇಕು. ಹಾಸನದ ಜಿಲ್ಲಾ ಕ್ರಿಡಾಂಗಣದಲ್ಲಿ ಹಾಗೂ ಮುನ್ಸಿಪಾಲಿಟಿ ದೊಡ್ಡ ಗಾರ್ಡನ್‌ನಲ್ಲಿ ರೇಡಿಯೋ ದೊಡ್ಡ ಸ್ಪೀಕರುಗಳಿಂದ ಜನರು ಕೇಳುವ ವ್ಯವಸ್ಥೆ ಇದೆ. ಜನ ಅಡ್ಡಾಡುತ್ತಾ ಬೆಳಗಿನ ವಾತಾವರಣದಲ್ಲಿ ಈ ಪುಟ್ಟ ಅವಧಿಯ ಕಾರ್ಯಕ್ರಮವನ್ನು ಕೇಳಿ ಖುಷಿಯನ್ನು ಅನುಭವಿಸಿದ್ದು ನಡೆಯಿತು. ಅದರಲ್ಲಿ ಪುಟ್ಟ ಹುಡುಗಿ ತನ್ನ ಸುತ್ತಲೇ ನಡೆಯುವ ಅನೇಕ ಪ್ರಸಂಗಗಳನ್ನು ಹೇಳುತ್ತಾ ಹೋಗುವುದು ನಡೆಯುತ್ತದೆ. ಆ ಬಗೆಯ ಪ್ರಸಂಗಗಳಲ್ಲಿ ಫ್ಯಾಂಟಸಿಯ ಹಲವೆಲ್ಲಾ ಘಟನೆಗಳು ಅಡಕಗೊಂಡಿದ್ದವು. ಒಂದು ಪುಟ್ಟ ಕಾಗೆ ಮಾತಿಗಿಳಿಯುವುದು, ಪುಟ್ಟದೊಂದು ಮಂಗ ಪುಟ್ಟಕ್ಕನ ಗೊಂಬೆಯನ್ನು ಇಷ್ಟ ಎಂದು ತೆಗೆದುಕೊಂಡು ಹೋಗಿ ಮರಳಿ ತಂದುಕೊಟ್ಟಿದ್ದು, ಹಾಗೂ ತನಗೊಂದು ಹೊಸ ಸೊಗಸಾದ ಹೆಸರು ಸೂಚಿಸು ಅಂತ ಹೇಳಿದ್ದು, ಇಂಥದ್ದೆಲ್ಲಾ ಹೊಸ ಬಗೆಯ ಹಲವಾರು ಪ್ರಸಂಗಗಳು ಕಂಡು ಬರುತ್ತವೆ.

ಧ್ವನಿಮಾಧ್ಯಮದಲ್ಲಿ ಈ ಬಗೆಯ ಮಾನವ ಮತ್ತು ಮಾನವೇತರ ಜೀವಿಗಳ ಧ್ವನಿಗಳನ್ನು ಫ್ಯಾಂಟಸಿ ಕಥೆಗಳನ್ನು ಪ್ರಸ್ತುತ ಪಡಿಸಲು ಆಕಾಶವಾಣಿ ಕಾರ್ಯಕ್ರಮಗಳು ಸಾಧನವಾಗಿ ಸಹಕರಿಸಿವೆ. ಮಕ್ಕಳು ಓದಿ ಸಂತಸಪಡಬಹುದಾಗಿದ್ದ ಕೃತಿಗಳೆಲ್ಲಾ ತಂತ್ರಜ್ಞಾನದ ಸಹಾಯದಿಂದ ಕೇಳು ಮಾಧ್ಯಮದ ಮೂಲಕ ಭಿತ್ತರಿಸಲ್ಪಡುತ್ತಿರುವುದು, ಮಕ್ಕಳ ಕಥೆಗಳ ತಾಂತ್ರಿಕ ಚಲನೆಗೆ ಕುರುಹುಗಳಾಗಿವೆ. ಅಲ್ಲದೆ ಧ್ವನಿಗಳ ಮೂಲಕವೇ ಚಿತ್ರ ವಿಚಿತ್ರವಾದ ಸಂಗತಿಗಳನ್ನು ಮುಂದಿರಿಸುವುದರಿಂದ ಮಕ್ಕಳಲ್ಲಿ ಪ್ರಾಣಿ ಪಕ್ಷಿಗಳ ಕುರಿತು ಇರುವ ಪ್ರೀತಿ ಕಾಳಜಿಗಳು ದುಪ್ಪಟ್ಟಾಗುತ್ತವೆ. ಮಕ್ಕಳಿಗೆ ಓದಿನಲ್ಲಿ ದಕ್ಕಬಹುದಾಗಿದ್ದ ಕಲ್ಪನಾ ಲೋಕದ ಅನಾವರಣ ಧ್ವನಿಯ ಏರಿಳಿತ, ಉತ್ತಮವಾದ ವಾಚನದೊಂದಿಗೆ ದೊರಕಬಹುದಾಗಿರುತ್ತದೆ. ಧ್ವನಿ ಮಾಧ್ಯಮದಲ್ಲಿ ಭಿತ್ತರಗೊಳ್ಳುವ ನಾಟಕವೊಂದು ಮಕ್ಕಳಿಗೆ ಶ್ರವ್ಯದ ಮೂಲಕವೇ ತಲುಪುವುದರಿಂದ ಅದರಲ್ಲಿನ ಆಂಗಿಕ ನಾಟಕ ಶೈಲಿಗಿಂತ ಅದರಲ್ಲಿನ ಕಥನ ಸ್ವರೂಪಕ್ಕೆ ಮಕ್ಕಳು ಮಾರು ಹೋಗುತ್ತಾರೆ. ಹಾಗಾಗಿ ರೇಡಿಯೋದಲ್ಲಿ ಪ್ರಸಾರವಾದ ನಾಟಕಗಳು, ಪದ್ಯ ವಾಚನಗಳೂ ಮಕ್ಕಳನ್ನು ಕಥನ ಮಾದರಿಗಳಾಗಿ ಮುಟ್ಟಲು ಸಾಧ್ಯವಾಗುತ್ತದೆ. ರೇಡಿಯೋ ಮೂಲಕ ಮಕ್ಕಳಿಗೆ ಕಥೆಗಳನ್ನು ಬಿತ್ತರಿಸುವುದು, ಬಾಲ್ಯದಲ್ಲಿ ನಾವು ಕೇಳುತ್ತಿದ್ದ ಅಜ್ಜಿ ಕಥೆಗಳನ್ನು ನೆನಪಿಸುತ್ತದೆ. ಕೇಳು ಸಂಸ್ಕೃತಿಯ ಪರಂಪರೆಯನ್ನು ಮುಂದುವರೆಸುವ ಪ್ರತಿನಿಧಿಯಾಗಿ ಧ್ವನಿ ಮಾಧ್ಯಮ ಸಹಕರಿಸಿದೆ.

೮.೨.೨. ರೇಡಿಯೋ ಪಾಠಗಳು ಮತ್ತು ಪಠ್ಯ ಸಾಹಿತ್ಯ

ಪ್ರಾಥಮಿಕ ಶಿಕ್ಷಣದ ಗುಣಾತ್ಮಕ ಬದಲಾವಣೆಗಾಗಿ ಹಲವಾರು ಪ್ರಯತ್ನಗಳು ನಡೆಯುತ್ತಿವೆ. ಅಂತಹ ಪ್ರಯತ್ನಗಳಲ್ಲಿ ರೇಡಿಯೋ ಪಾಠಗಳು ಮಹತ್ವದ ಪಾತ್ರವಹಿಸುತ್ತವೆ. ಅದರಲ್ಲಿ ಕೇಳಿ ಕಲಿ ಬಾನುಲಿ ಕಾರ್ಯಕ್ರಮವು ೨೦೦೦-೦೧ನೇ ಶೈಕ್ಷಣಿಕ ವರ್ಷದಲ್ಲಿ ಆಕಾಶವಾಣಿ ಗುಲ್ಬರ್ಗಾ ಮತ್ತು ರಾಯಚೂರು ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಶಾಲೆಗಳಲ್ಲಿ ಆರಂಭಿಸಲಾಯಿತು. ನಂತರ ರಾಜ್ಯದ ಎಲ್ಲಾ ಶಾಲೆಗಳ ವ್ಯಾಪ್ತಿಗೂ ವಿಸ್ತರಿಸಲಾಯಿತು. ಶೈಕ್ಷಣಿಕ ಪಠ್ಯಗಳ ಸಾಹಿತ್ಯವನ್ನು ಧ್ವನಿ ಮಾಧ್ಯಮದ ಮೂಲಕ ಸುಲಭ ಮತ್ತು ಪರಿಣಾಮಕಾರಿಯಾಗಿ ಮುಟ್ಟಿಸುವ ಈ ವ್ಯವಸ್ಥೆ ಶಿಕ್ಷಣ ಇಲಾಖೆಯ ಮಹತ್ವದ ಕಾರ್ಯಕ್ರಮಗಳಲ್ಲಿ ಒಂದಾಗಿದೆ.

ಈ ಬಾನುಲಿ ಪಾಠಗಳನ್ನು ಮೂರು ಬಗೆಯಲ್ಲಿ ವಯೋಮಾನಕ್ಕೆ, ತರಗತಿಗೆ ತಕ್ಕಂತೆ ವಿಭಾಗಿಸಿ ಪ್ರಸಾರ ಮಾಡಲಾಯಿತು. ೧ ಮತ್ತು ೨ನೇ ತರಗತಿಗಳಿಗೆ ಚಿಣ್ಣರ ಚುಕ್ಕಿ, ೩,೪ ಮತ್ತು ೫ನೇ ತರಗತಿಗಳಿಗೆ ಚುಕ್ಕಿ ಚಿನ್ನ ಹಾಗೂ ೬, ೭ ಮತ್ತು ೮ನೇ ತರಗತಿಗಳಿಗೆ ಕೇಳಿ ಕಲಿ ರೇಡಿಯೋ ಪಾಠಗಳು ಪ್ರಸಾರವಾದವು. ಈ ಪಾಠಗಳನ್ನು ಪ್ರಸ್ತುತ ಪಡಿಸುವಾಗ ಹಾರುವ ಕುದುರೆ, ಮಾಯಾ ಲೋಕದ ಸಂಗತಿಗಳನ್ನು ನೆನಪಿಸುವ ಘಟನೆಗಳು, ಪಾತ್ರಗಳನ್ನು ಕಾರ್ಯಕ್ರಮ ಪ್ರವಾಚಕರು ಪ್ರಸ್ತಾಪ ಪಡಿಸುತ್ತಿದ್ದರು. ಇದು ಶೈಕ್ಷಣಿಕ ಪಠ್ಯಗಳನ್ನು ಭಿತ್ತರಿಸುವ ಸರ್ಕಾರೀ

ಕಾರ್ಯಕ್ರಮವಾದರೂ ಇದರಲ್ಲಿ ಪ್ರಸಾರವಾಗುವ ಪಾಠಗಳಲ್ಲಿ ಕೆಲವು ಕಥೆಗಳು ಮಕ್ಕಳ ಫ್ಯಾಂಟಸಿತನದ ವಿಸ್ತರತೆಗೆ ಸಹಾಯಕವಾಗಿರುವುದೇ ಈ ಬಾನುಲಿ ಪಾಠಗಳನ್ನು ಈ ಉಪಘಟಕದಲ್ಲಿ ಚರ್ಚಿಸಲು ಕಾರಣವಾಗಿದೆ.

ಧ್ವನಿಮಾಧ್ಯಮದ ಸಾಧ್ಯತೆಗಳು ಇನ್ನಷ್ಟು ವಿಸ್ತರಿಸಕೊಳ್ಳತೊಡಗಿದ್ದು, ೨೧ನೆಯ ಶತಮಾನದಲ್ಲಿಯೇ ಎಂದರೆ ತಪ್ಪಾಗಲಾರದು. ಕ್ಯಾಸೆಟ್ ಮೂಲಕ ಕವಿ ಲಕ್ಷ್ಮೀನಾರಾಯಣಭಟ್ಟರ ಹಾಡುಗಳು, ಅದರಲ್ಲು 'ಭಾಳಾ ಒಳ್ಳೇವ್ರ ನಮ್ಮಿಸ್ಸ' ಅಂಥ ಗೀತೆ ಎಲ್ಲೆಡೆ ಪ್ರಚಾರ ಹೊಂದಿತು. ಹಾಗೆಯೇ ಎಚ್.ಎಸ್.ವೆಂಕಟೇಶಮೂರ್ತಿ ಅವರ ರಚನೆಗಳು ಸಿ.ಡಿ ಮೂಲಕ ಎಲ್ಲೆಡೆ ಕೇಳಿಸುವಂತಾಗಿದ್ದು ೨೦ನೆಯ ಶತಮಾನದ ಕೊನೆಯಲ್ಲೇ ನಡೆದಿತ್ತಾದರೂ, ಕ್ಯಾಸೆಟ್‌ಗಳ ಕಾಲವನ್ನು ಸಿ.ಡಿಗಳ ಕಾಲ ಬಲು ಬೇಗ ಹಿಂದೆ ಹಾಕಿತೆನ್ನಬಹುದು. ಈಗ ಮಕ್ಕಳ ಕತೆಗಳೂ ಈ ಬಗೆಯಲ್ಲಿ ಮುಟ್ಟುವ ಸಾಧ್ಯತೆಗಳನ್ನು ಅನೇಕರು ಕಂಡುಕೊಂಡಿರುವುದು ಕಾಣುತ್ತದೆ. ಮಕ್ಕಳ ಕಥೆಗಾರರಾದ ಮತ್ತೂರು ಸುಬ್ಬಣ್ಣ ಅವರು 'ತಮ್ಮಣ್ಣ ಮತ್ತು ಇರುವೆ ರಾಜಕುಮಾರಿ' ಪುಸ್ತಕದೊಂದಿಗೆ ಅದರ ಕಥಾ ವಾಚನದ ಸಿ.ಡಿ ಯನ್ನೂ ನೀಡಿದ್ದನ್ನು ಇಲ್ಲಿ ಉಲ್ಲೇಖಿಸಬಹುದು.

೮.೨.೩ ಮಕ್ಕಳ ಕೇಳು ಕಥಾಲೋಕದ ಪ್ರಯತ್ನಗಳು:

ಮಕ್ಕಳ ಸಾಹಿತ್ಯವನ್ನು ತಂತ್ರಜ್ಞಾನದ ಸಹಕಾರದಿಂದ ಹರಡುವಲ್ಲಿ ಚೆನ್ನೈ ಈಗ ಮಕ್ಕಳ ಲೋಕದ ಕೇಂದ್ರವಾದಂತೆ ಕಂಡು ಬರುತ್ತದೆ. ಅಷ್ಟರ ಮಟ್ಟಿಗೆ ಅಲ್ಲಿ ಹೊಸ ಸಾಧ್ಯತೆಗಳು ಕಾಣಿಸಿವೆ. ೧೯೯೬ರಲ್ಲಿ ಶೋಭಾ ವಿಶ್ವನಾಥ ಹಾಗೂ ಸಂಗಡಿಗರಿಂದ 'ಕರಡಿ ಟೇಲ್ಸ್' ಎಂದು ಮಕ್ಕಳ ಸಾಹಿತ್ಯವನ್ನು ಪ್ರವುರಗೊಳಿಸಲು ಹುಟ್ಟುಹಾಕಿದ ಸಂಸ್ಥೆಯ ಈ ಪ್ರಯತ್ನ ಬಲು ದೊಡ್ಡ ಪ್ರಮಾಣದಲ್ಲಿ ವ್ಯಾಪಿಸಿಕೊಂಡು, ಮಾರುಕಟ್ಟೆಯನ್ನೂ ಗಳಿಸಿಕೊಂಡು, ಪ್ರಾದೇಶಿಕ ಭಾಷೆಗಳಾದ ತಮಿಳು, ತೆಲುಗು, ಮಲಯಾಳಿಗಳನ್ನೂ ಒಳಗೊಂಡಂತೆ ಹಿಂದಿ ಹಾಗೂ ಇಂಗ್ಲೀಷಿನಲ್ಲಿ ಇವು ವಿಸ್ತರಿಸಿ ಮಾರುಕಟ್ಟೆಯ ಸಾಧ್ಯತೆಗಳನ್ನು ಹೆಚ್ಚಿಸಿಕೊಂಡಿವೆ. ಅಂತರರಾಷ್ಟ್ರೀಯ ಮಟ್ಟದ ಹಲವಾರು ಪ್ರತಿಷ್ಠಿತ ಪುರಸ್ಕಾರಗಳಿಗೂ ಈ ಪ್ರಯತ್ನ ಭಾಜನವಾಗಿದೆ. ನಾಸಿರುದ್ದೀನ ಶಾ ರಂತಹ ಕಲಾವಿದರು ಇಲ್ಲಿ ಮಕ್ಕಳ ಕತೆಗಳನ್ನು ಪ್ರಸ್ತುತ ಪಡಿಸಿದ್ದಾರೆ. ಇವು ಪುಟಾಣಿಗಳಿಗಲ್ಲದೆ ಹದಿಹರೆಯದ ಮಕ್ಕಳನ್ನೂ ತಲುಪುವಲ್ಲೂ ವಿಸ್ತರಿಸಿಕೊಂಡವು. ಈಗಾಗಲೇ ಇಲ್ಲಿನ ಕಥೆಗಳು ಹಿರಿತಲೆಮಾರಿಗೆ ಕೇಳಿ, ಓದಿಯಾಗಿ ದಶಕಗಳೇ ಕಳೆದಿದೆ. ಕಥೆಗಳ ಆಯ್ಕೆಯಲ್ಲಿ ಹೊಸತನವೇನಿಲ್ಲವಿದ್ದರೂ ಕೃತಿಯ ಮಾಧ್ಯಮ ಬದಲಾದ ಕೂಡಲೇ ಮತ್ತೆ ಅದು ಹೊಸ ಪ್ರಯತ್ನವಾಗಿ, ಆಕರ್ಷಣೆಯ ಭಾಗವಾಗಿಬಿಡುತ್ತದೆ. ಮಕ್ಕಳನ್ನು ಆಕರ್ಷಿಸಲು ನೆರವಾಗುತ್ತದೆ.

ಫ್ಯಾಂಟಸಿ ಕಥನಗಳನ್ನು ತಂತ್ರಜ್ಞಾನದ ಸಹಾಯದಿಂದ ಮಕ್ಕಳಿಗೆ ಮುಟ್ಟಿಸುವ ಪ್ರಯತ್ನಗಳು ಕನ್ನಡ ಭಾಷೆಗೆ ಇನ್ನೂ ವಿಸ್ತರಿಸಿಕೊಂಡಿಲ್ಲ. ಕನ್ನಡದಲ್ಲಿ ಆ ಬಗೆಯ ಪ್ರಯತ್ನಗಳು ನಡೆಯಲೂ

ಇಲ್ಲ. ಆದರೆ ಈಚಿನ ದಿನಗಳಲ್ಲಿ ಒಂದಷ್ಟು ಉತ್ಸಾಹಿಗಳ ಸಣ್ಣಪುಟ್ಟ ಪ್ರಯತ್ನಗಳು ಕಾಣಿಸುತ್ತಿವೆ. ಮಕ್ಕಳಿಗೆ ಕತೆಗಳನ್ನು ಬಹುದಿನದಿಂದ ಬರೆಯುತ್ತಿರುವ, ಹಿರಿಯ ರಂಗ ಕಲಾವಿದ ಮತ್ತೂರು ಸುಬ್ಬಣ್ಣ ಅವರು ಸಾಭಿನಯವಾಗಿ ಮಕ್ಕಳಿಗೆ ಕತೆ ಮುಟ್ಟಿಸುವಲ್ಲಿ ಹೆಸರು ಮಾಡಿದ್ದಾರೆ. ಅವರು ತಮ್ಮದೊಂದು ಜನಪದ ಮಾದರಿಯ ಫ್ಯಾಂಟಸಿ ಕತೆ 'ತಮ್ಮಣ್ಣ ಮತ್ತು ಇರುವೆ ರಾಜಕುಮಾರಿ' ಎನ್ನುವುದನ್ನು ಪುಸ್ತಕ ರೂಪದಲ್ಲಿ ತರುವುದರೊಂದಿಗೆ ಸಿ.ಡಿಯಲ್ಲೂ ಧ್ವನಿಮಾಧ್ಯಮದ ಪ್ರಸ್ತುತಿಯಾಗಿಯೂ ತಂದಿದ್ದಾರೆ. ಆದರೂ ಈ ಬಗೆಯ ಪ್ರಯತ್ನಗಳು ಕನ್ನಡದಲ್ಲಿ ನಗಣ್ಯ ಎನ್ನುವಂತೆ ಇವೆ. ಫ್ಯಾಂಟಸಿ ಕಥನಗಳನ್ನು ಮಕ್ಕಳಿಗೆ ಮುಟ್ಟಿಸಬೇಕೆಂಬ ವಿಶೇಷ ಆಸ್ಥೆಯ ಪ್ರಯತ್ನಗಳು ಕಾಣಿಸುತ್ತಿಲ್ಲ ಎನ್ನುವುದನ್ನು ಇಲ್ಲಿ ಗುರುತಿಸಲಾಗಿದೆ.

ಧ್ವನಿ ಮಾಧ್ಯಮವು ದೃಶ್ಯ ಮಾಧ್ಯಮ ಬಂದ ಮೇಲೂ ಮಕ್ಕಳ ಸಾಹಿತ್ಯವನ್ನು ಮಕ್ಕಳಿಗೆ ತಲುಪಿಸಲು ಮಾಧ್ಯಮವಾಗಿ ಬಳಕೆಯಾಗುತ್ತಿದೆ. ಇದಕ್ಕೆ ತಂತ್ರಜ್ಞಾನದ ಸಹಕಾರವೂ ಹೆಚ್ಚೆನ್ನುವಂತೆ ಪಾತ್ರ ವಹಿಸಿದೆ. ಬರೀ ರೇಡಿಯೋ ಇದ್ದ ಕಾಲದಲ್ಲಿ ಅದು ಪ್ರಮುಖವಾಗಿದ್ದುದಷ್ಟೇ ಅಲ್ಲ; ಇಂದು ತಂತ್ರಜ್ಞಾನದ ಸಾಧನಗಳು ಅಂಗೈಗೆ ಬಂದಿರುವಾಗ ಎಫ್.ಎಂ ಚಾನಲ್‌ಗಳು, ಕರಡಿ ಟೇಲ್ಸ್ ಥರಹದ ಸಂಸ್ಥೆಗಳು ಕಥನ ವಿಸ್ತರಣೆಗೆ ಸಾಧನಗಳಾಗಿ ಸಹಕರಿಸುವುದು ಕಂಡು ಬರುತ್ತದೆ.

೮.೩. ದೃಶ್ಯ ಮಾಧ್ಯಮದ ಸಾಧ್ಯತೆಗಳು

ಕೇಳುವಿಕೆಯ ಮೂಲಕ ಮಕ್ಕಳನ್ನು ಸೆಳೆದುಕೊಂಡ ನಂತರ ಮಕ್ಕಳ ಶ್ರವಣಾನುಭವದ ಜೊತೆಗೆ ದೃಶ್ಯ ಮೂಲಕ ಅವರನ್ನು ಮತ್ತಷ್ಟು ರಂಜಿಸಲು, ಫ್ಯಾಂಟಸಿ ಕಥನಗಳನ್ನು ಇನ್ನಷ್ಟು ಹತ್ತಿರವಾಗಿಸಲು, ಅವರ ಕಲ್ಪನೆಗಳಿಗೆ ಮೂರ್ತ ರೂಪ ಕೊಡಲು ಸಿನಿಮಾ, ಹಾಗೆಯೇ ಟಿ.ವಿ ಮಾಧ್ಯಮಗಳ ಪಾತ್ರ ಮಹತ್ವದ್ದಾಗಿದೆ. ಇದು ಹೊಸದೊಂದು ಜಗತ್ತನ್ನು ಕಣ್ಣ ಮುಂದೆಯೇ ಕಾಣಿಸಿಕೊಳ್ಳುವಂತೆ ಮಾಡಿತು. ಸಿನಿಮಾ ಎಂದಾಗ ಮೊದಮೊದಲು ಕಲಾವಿದರೇ ಪಾತ್ರವಹಿಸಿ ಕಾಣಿಸಿಕೊಂಡ ಚಿತ್ರಗಳು ಬರುತ್ತಿದ್ದವು. ಮುಂದೆ ಈ ರಂಗವು ತನ್ನ ಸಾಧ್ಯತೆಗಳನ್ನು ವಿಸ್ತರಿಸಿ ತೋರಿಸಿತು. ಪರಿಣಾಮವಾಗಿ ಅನಿಮೇಷನ್ ಎನ್ನುವ ಹೊಸದಾದ ಜಗತ್ತು ನಮ್ಮ ಮುಂದೆ ಅವತರಿಸಿತು. ಹೀಗೆ ಈ ಎರಡು (ಕಲಾವಿದರು ಅಭಿನಯಿಸುವ ಮತ್ತು ಅನಿಮೇಷನ್) ಸಿನಿಮಾ ಮಾಧ್ಯಮಗಳು ಹೇಗೆ ನಮ್ಮನ್ನೆಲ್ಲಾ ಸಂಮ್ಮೋಹನಗೊಳಿಸಿದವು ಎನ್ನುವುದು ಇಲ್ಲಿ ಚರ್ಚಿಸುವ ಅಗತ್ಯವಿದೆ.

೮.೩.೧. ಸಿನಿಮಾ ಮತ್ತು ಮಕ್ಕಳ ಸಾಹಿತ್ಯ

ಕಲಾವಿದರು ಭಾಗವಹಿಸಿ ಅಭಿನಯಿಸುವ ಸಿನಿಮಾಗಳೂ ಮಕ್ಕಳನ್ನು ರಂಜಿಸುವಲ್ಲಿ ಬಹು ಮುಖ್ಯವಾದ ಪಾತ್ರವನ್ನು ವಹಿಸಿವೆ. ಅವು ಮಕ್ಕಳಿಗೆಂದು ಪ್ರತ್ಯೇಕವಾಗಿ ಕಾಣಿಸಿಕೊಂಡಿಲ್ಲ. ಆದರೆ ದೊಡ್ಡವರೊಡನೆ ಕುಳಿತು ಮಕ್ಕಳು ಕುತೂಹಲದಿಂದ ವೀಕ್ಷಿಸುವ ಬಹಳಷ್ಟು ಸಂಖ್ಯೆಯ ಸಿನಿಮಾಗಳು

ಕನ್ನಡದಲ್ಲಿಯೇ ಕಾಣಿಸಿಕೊಂಡಿವೆ. ಜನಪದ ಕತೆಗಳು ನಮ್ಮ ಮುದ್ರಣ ಮಾಧ್ಯಮದ ಪುಸ್ತಕಗಳಲ್ಲಿ ಮಕ್ಕಳಿಗಾಗಿಯೇ ಕಾಣಿಸಿದಂತೆ, ಸಿನಿಮಾ ಜಗತ್ತಿನಲ್ಲಿಯೂ ವಿಶೇಷ ಆಕರ್ಷಣೆಯನ್ನು ಹೊಂದಿದವು. ಅನೇಕ ಚಿತ್ರ ವಿಚಿತ್ರ ಕಥಾ ಹಂದರಗಳ ಜನಪದ ಕತೆಗಳನ್ನು ಆಧರಿಸಿ ಸಿನಿಮಾಗಳು ಬಂದಿವೆ. ಇಲ್ಲೆಲ್ಲಾ ಜನಪದದ ಫ್ಯಾಂಟಸಿ ಕಂಡಿದೆ. ಅದನ್ನು ಸೆಲ್ಯುಲಾಯ್ಡ್ ಸಾಧ್ಯಮಾಡಿಕೊಂಡಿದ್ದೇ ಒಂದು ಇತಿಹಾಸ. ಜನಪದ ಕತೆಗಳಲ್ಲಿ ಕಾಣಿಸುವ ಮಾಯಾ, ಜಾದೂ ಜಗತ್ತು, ಮಾಂತ್ರಿಕರು, ಆಕಾಶದಲ್ಲಿ ಹಾರುವುದು, ಹಕ್ಕಿಗಳ ಮೇಲೆ ಪಯಣಿಸುವುದು, ಇದ್ದಕಿದ್ದ ಹಾಗೆ ಮನುಷ್ಯರು ಕಲ್ಲಾಗಿಬಿಡುವುದು, ಪಾತಾಳಕ್ಕೆ ಇಳಿಯುವುದು, ನಾಗಲೋಕ ಕಾಣಿಸಿಕೊಳ್ಳುವುದು ಮುಂತಾಗಿ ಫ್ಯಾಂಟಸಿಯ ದೊಡ್ಡ ಜಗತ್ತು ನಮ್ಮ ಕಪ್ಪು ಬಿಳಿ ಚಿತ್ರಗಳಲ್ಲೇ ಸಾಕಷ್ಟು ಕಾಣಿಸಿಕೊಂಡಿದೆ.

'ಪಾತಾಳ ಮೋಹಿನಿ,' 'ದೇವರಗೆದ್ದ ಮಾನವ,' 'ಜಂಬೋ ನಗರ ಪ್ರವೇಶ,' 'ರತ್ನಗಿರಿ ರಹಸ್ಯ,' 'ಬಾಲನಾಗಮ್ಮ,' 'ರಂಗಮಹಲ್ ರಹಸ್ಯ' ಮುಂತಾಗಿ ಸಾಕಷ್ಟು ಉದಾಹರಣೆಗಳನ್ನು ಇಲ್ಲಿ ನೀಡಬಹುದು. ಇವು ಎರಡು ಮೂರು ತಾಸುಗಳ ಅವಧಿಗೆ ವಿಸ್ತರಿಸಿಕೊಂಡು, ದೊಡ್ಡವರೂ ಸಣ್ಣವರೂ ಎಲ್ಲರೂ ಸವಿಯುವಂತೆ ವಿಸ್ತರಿಸಿಕೊಂಡು ಪ್ರಸ್ತುತಗೊಳ್ಳುತ್ತಿದ್ದವು. ಹಾಗಾಗಿ ಅಲ್ಲಿ ದೊಡ್ಡವರೊಂದಿಗೆ ಮಕ್ಕಳು ಸಾಕಷ್ಟು ಫ್ಯಾಂಟಸಿಯ ಉಣಿಸನ್ನು ಪಡೆಯುತ್ತಿದ್ದರು. ಇಂದು ೪೦–೫೦ರ ಆಸುಪಾಸಿನಲ್ಲಿರುವವರೆಲ್ಲಾ ಆ ಸಮಯದ ಚಿತ್ರಗಳನ್ನು ಬಲು ಕುತೂಹಲದಿಂದ ಸವಿದ ನೆನಪುಗಳು ಇದ್ದೇ ಇವೆ. ಬರುಬರುತ್ತಾ ಸಿನಿಮಾ ಜಗತ್ತು ವಿಸ್ತರಿಸಿಕೊಂಡಂತೆ ಅಲ್ಲಿನ ತಾಂತ್ರಿಕ ಸಾಧ್ಯತೆಗಳು ಹೆಚ್ಚಿದಂತೆ ಅನೇಕ ಸಾಹಸಗಳು ಅಲ್ಲಿ ನಡೆದಿವೆ.

ಮಕ್ಕಳಿಗೆ ಸಿನಿಮಾಗಳನ್ನು ರೂಪಿಸುವ, ಅದಕ್ಕಾಗಿಯೇ ಪ್ರತ್ಯೇಕ ಪುರಸ್ಕಾರ ನೀಡುವ ವ್ಯವಸ್ಥೆ ಕಾಣಿಸಿಕೊಳ್ಳುತ್ತಿದೆ. ಇಂಥಲ್ಲಿ ಸಾಮಾನ್ಯವಾಗಿ ವಾಸ್ತವ ಮಾದರಿಯ ಸಿನಿಮಾಗಳೇ ಕಾಣಿಸಿಕೊಂಡಿದ್ದರೂ ಹಲವೆಲ್ಲಾ ಉದಾಹರಣೆಗಳು ಫ್ಯಾಂಟಸಿ ಮಾದರಿಯವು ಕಾಣಿಸಿದ್ದೂ ಇದೆ. 'ನಕ್ಕಳಾ ರಾಜಕುಮಾರಿ' ಎನ್ನುವ ಸಿನಿಮಾ ಜನಪದ ಕತೆಯನ್ನೇ ಆಧರಿಸಿದ್ದು. ಮಕ್ಕಳಿಗಾಗಿ ಪೆದ್ದನೊಬ್ಬನನ್ನು ಕೇಂದ್ರವಾಗಿರಿಸಿಕೊಂಡು ಸಾಗುವ ಈ ಕಥೆಯಲ್ಲಿ ಕತ್ತೆಮರಿಯೊಂದರ ಮೂಲಕ ಪೆದ್ದ ರಾಜಕುಮಾರಿಯನ್ನು ನಗಿಸುವುದು, ಅವಳನ್ನೇ ವರಿಸುವುದು ನಡೆಯುತ್ತದೆ. ಇಡೀ ಕಥನ ಹಾಸ್ಯ ಮತ್ತು ಮುಗ್ಧತೆಯ ನಡೆವಳಿಕೆಗಳ ಮೂಲಕ ಸಾಗುತ್ತಾ ಮಕ್ಕಳನ್ನು ಇನ್ನಿಲ್ಲದಂತೆ ರಂಜಿಸಿ ಸಿನಿಮಾ, ಮಕ್ಕಳನ್ನು ನೋಡು ಓದುಗರಾಗಿಸಲು ಸಹಕರಿಸಿದೆ.

ಹಿರಿಯ ಕಲಾವಿದೆ ಖುಷ್ಬೂ ಪಾತ್ರವಹಿಸಿದ 'ಮ್ಯಾಜಿಕ್ ಅಜ್ಜಿ' ಚಲನಚಿತ್ರ ೨೦೦೫ರಲ್ಲಿ ಮಕ್ಕಳನ್ನೇ ಉದ್ದೇಶಿಸಿಕೊಂಡು ಬಂದಿದೆ. ಅಲ್ಲಿ ನಮ್ಮ ನಡುವಿನ ವಾಸ್ತವ, ಫ್ಯಾಂಟಸಿ ಬೆರೆತುಕೊಂಡ ಕಥೆ ಇದೆ.

ಟಿವಿ ಮಾಧ್ಯಮ ದೂರದರ್ಶನದ ಪ್ರಸಾರದೊಂದಿಗೆ, ಅನೇಕ ಚಾನೆಲ್‌ಗಳು ಈಗ ಕಾಣಿಸಿಕೊಂಡಿದ್ದು ಇಲ್ಲಿ ಮಕ್ಕಳಿಗೆ ಆಪ್ಯಾಯಮಾನವಾದ ಚಿತ್ರಗಳು, ಕಥಾಕಥನಗಳು ನಡೆಯುತ್ತಲೇ

ಇವೆ. 'ಪೋಗೋ', 'ಚಿಂಟೂ ಟಿವಿ' ತರಹದ ಅನೇಕ ಚಾನೆಲ್‌ಗಳು ಮಕ್ಕಳ ಲೋಕವನ್ನೇ ಅವಲಂಬಿಸಿ ಮಾರುಕಟ್ಟೆಯನ್ನು ಸೃಷ್ಟಿಸಿಕೊಂಡಿವೆ. ಹಾಗಾಗಿ ನಾನಾ ಬಗೆಯ ಸರಕು ಅವುಗಳಿಗೆ ಅಗತ್ಯವಾಗುತ್ತದೆ. ಕನ್ನಡದಲ್ಲಿ ಮಕ್ಕಳಿಗೇ ಇರುವ ಚಿಕ್ಕ ಅವಧಿಯ ಚಲನಚಿತ್ರಗಳು, ಜೊತೆಗೆ ಬೇರೆ ಭಾಷೆಯಲ್ಲಿ ಲಭ್ಯವಿರುವ ಚಿತ್ರಗಳನ್ನು ಕನ್ನಡದಲ್ಲಿ ಡಬ್ ಮಾಡಿ ನೀಡುವುದು ಸಾಮಾನ್ಯವಾಗಿ ಕಂಡುಬರುತ್ತದೆ.

ಟಿವಿ ಮಾಧ್ಯಮಕ್ಕಾಗಿಯೇ ಸಿದ್ಧವಾಗುವ ದೃಶ್ಯ ಕಥಾನಕಗಳು ನಿರಂತರವಾಗಿ ಪ್ರಸಾರವಾಗುತ್ತಲೇ ಇರುತ್ತವೆ. ಇವುಗಳಲ್ಲಿ ವಾಸ್ತವ ಹಂದರದ ಕತೆಗಳೊಡನೆ ಫ್ಯಾಂಟಸಿಯ ಕತೆಗಳು ಇವೆ. ಅಷ್ಟಾಗಿಯೂ ಪಾಶ್ಚಾತ್ಯರಿಂದ ಸಿಗುವ ಈ ಬಗೆಯ ನಿರ್ಮಾಣಗಳು ಮಕ್ಕಳಿಗೆ ಬಲು ಮುದಕೊಡುವುವಾಗಿದ್ದು, ವಿಶೇಷ ತಂತ್ರಜ್ಞಾನ, ಕಲಾವಂತಿಕೆಯಿಂದ ರೂಪುಗೊಂಡಂಥವು ಇರುವುದರಿಂದ, ಅವನ್ನು ಕನ್ನಡ ಭಾಷೆಗೆ ಅಳವಡಿಸಿಕೊಂಡೋ, ಇಲ್ಲವೆ ನೇರವಾಗಿಯೋ ಪ್ರಸಾರಗೊಳಿಸುವುದು ನಡೆದುಕೊಂಡು ಬರುತ್ತಿದೆ.

ಮಕ್ಕಳಿಗೆ ಹಿರಿಯರು ನೇರವಾಗಿ ಕತೆ ಹೇಳುವ ಸಮಯಗಳೂ ಟಿವಿಯಲ್ಲಿ ಕಾಣಿಸಿಕೊಂಡಿದೆ. ಬಿ.ಜಯಶ್ರೀ ರಂಥಹ ಖ್ಯಾತ ಕಲಾವಿದರು ಮಕ್ಕಳ ನಡುವೆ ಫ್ಯಾಂಟಸಿ ಕತೆಗಳನ್ನು ಪ್ರಸ್ತುತ ಪಡಿಸಿದ್ದಾಗಿದೆ. ರಂಗಭೂಮಿಯ ಮಕ್ಕಳ ನಾಟಕಗಳನ್ನು ಈ ಮಾಧ್ಯಮ ತನಗಾಗಿ ಬಳಸಿಕೊಂಡದ್ದೂ ಇದೆ. ಹೀಗೆ ಸಿನಿಮಾ, ಟಿ.ವಿ.ಗಳು ಮಕ್ಕಳ ಕಥನಗಳನ್ನು ದೃಶ್ಯ ಮಾಧ್ಯಮಕ್ಕೆ ಬಳಸಿಕೊಂಡು ಹೊಸಗಾಲದ ಮಕ್ಕಳಿಗೆ ನೋಡು ಸಾಹಿತ್ಯವನ್ನು ನೀಡಲು ಸಹಕರಿಸುತ್ತಿವೆ.

ಸಿನಿಮಾ ಮಾಧ್ಯಮದಲ್ಲಿ ಭಿತ್ತರಗೊಳ್ಳುವ ಚಲನಚಿತ್ರಗಳು ನೇರವಾಗಿ ಮಕ್ಕಳ ಸಾಹಿತ್ಯದ ವ್ಯಾಪ್ತಿಗೆ ಬರುವುದಿಲ್ಲವಾದರೂ ಜನಪದ, ಐತಿಹಾಸಿಕ, ಪುರಾಣ ಕಥೆಗಳನ್ನು ಆಧರಿಸಿದ ಅನೇಕ ಚಲನಚಿತ್ರಗಳು ಹಿರಿಯರಂತೆ ಮಕ್ಕಳನ್ನೂ ಉದ್ದೇಶವಾಗಿಟ್ಟುಕೊಂಡು ತಯಾರಾಗಿವೆ. ಹಾಗಾಗಿಯೇ ದೃಶ್ಯ ಮಾಧ್ಯದ ಫ್ಯಾಂಟಸಿ ಗುಣಗಳನ್ನು ಚರ್ಚಿಸಲಾಗಿದೆ.

ಕಥೆಯೊಂದರ ಮೂಲ ಆಶಯಗಳನ್ನು ಮಕ್ಕಳಿಗೆ ಮುಟ್ಟಿಸುವ ಉದ್ದೇಶವಿಟ್ಟುಕೊಂಡು ವಿಶ್ಲೇಷಣೆ ಮಾಡಿದಾಗ ಮೌಖಿಕ, ಲಿಖಿತ ಮಾಧ್ಯಮಕ್ಕಿಂತ ದೃಶ್ಯ ಮಾಧ್ಯಮವು ಮಕ್ಕಳನ್ನು ಸೆಳೆಯುವಲ್ಲಿ ಹೆಚ್ಚು ಸಫಲವಾಗುತ್ತದೆ. ಆದರೆ ಈ ಸಫಲತೆ ಮೂಲ ಕಥೆಗಿಂತ ಪರದೆಯ ಮೇಲೆ ತಂತ್ರಜ್ಞಾನದ ಪರಿಧಿಯೊಳಗೆ ನಡೆದ ಚಮತ್ಕಾರದಿಂಲೇ ಆಗಿರುತ್ತದೆ. ಆಧುನಿಕ ಮಕ್ಕಳ ಸಾಹಿತ್ಯದ ಕಥನವನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ಅದರಲ್ಲಿಯೂ ಕಥನದ ಫ್ಯಾಂಟಸಿಯ ಸ್ವರೂಪವನ್ನು ಚರ್ಚಿಸುವುದಾದರೆ: ತಂತ್ರಜ್ಞಾನದ ಸಾಂಗತ್ಯ ಅತ್ಯಗತ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ವರ್ತಮಾನದ ಸಿನಿಮಾ ಮತ್ತು ಮಕ್ಕಳ ಸಾಹಿತ್ಯದ ಸಹಸಂಬಂಧವನ್ನು ಈ ಮೇಲಿನಂತೆ ವಿಶ್ಲೇಷಣೆ ಮಾಡಲಾಗಿದೆ.

೮.೩.೨. ಅನಿಮೇಷನ್ ಮತ್ತು ಮಕ್ಕಳ ಸಾಹಿತ್ಯ

ಅನಿಮೇಷನ್ ಜಗತ್ತು ಮಕ್ಕಳಿಗಾಗಿಯೇ ಅವತರಿಸಿತು ಎಂದುಕೊಳ್ಳುವಷ್ಟು ಮಟ್ಟಿಗೆ ಮಕ್ಕಳ ಜಗತ್ತಿಗೆ ಲಗ್ಗೆ ಇಟ್ಟಿದ್ದು ಸುಳ್ಳಲ್ಲ. ಅಮೇರಿಕಾದ ಡಿಸ್ನಿ ಲೋಕ ಇಂದು ದೊಡ್ಡ ವಿಸ್ತಾರವನ್ನೇ ಜಗತ್ತಿನ ಮುಂದಿಟ್ಟಿದೆ. ಇಲ್ಲಿ ಫ್ಯಾಂಟಸಿ ತನ್ನ ತಾನೇ ಅನಾಯಾಸವಾಗಿ ಆವರಿಸಿಕೊಳ್ಳಲು ಸಾಧ್ಯವಾಯಿತು. ಈ ತಂತ್ರಜ್ಞಾನದಲ್ಲಿಯೇ (ಕಾಮಿಕ್ಸ್ ಗಳಿಂದ ವಿಸ್ತರಿಸಿಕೊಂಡಂತೆ ಎಂದರೂ) ಅರಳಿಕೊಂಡ ಮಿಕಿಮೌಸ್, ಡೊನಾಲ್ಡ್‌ಡಕ್, ಸ್ಪೈಡರ್‌ಮ್ಯಾನ್, ಬ್ಯಾಟ್‌ಮ್ಯಾನ್ ಮುಂತಾದ ವಿಶಿಷ್ಟ ಪಾತ್ರಗಳು ರೂಪುಗೊಂಡಿದ್ದೇ ಈ ಸಾಧ್ಯತೆಗಳಲ್ಲಿ. ಈ ದೃಶ್ಯ ಮಾಧ್ಯಮ ಕೇವಲ ಸಿನಿಮಾ ಥೇಟರ್‌ಗಳನ್ನು ಆಶ್ರಯಿಸದೇ ಮನೆಮನೆಗೆ ಟಿ.ವಿಯಲ್ಲಿ ಸರಣಿಗಳಾಗಿ ನಿಗದಿತವಾಗಿ ಕಾಣಿಸಿಕೊಳ್ಳುತ್ತಾ, ಅವುಗಳಿಗೇ ಪ್ರತ್ಯೇಕ ಚಾನಲ್‌ಗಳು ಕಾಣಿಸಿಕೊಳ್ಳುತ್ತಾ ದೊಡ್ಡದೊಂದು ಸಾಧ್ಯತೆಯೇ ಇಂದು ತೆರೆದುಕೊಂಡಿದೆ.

ಅನಿಮೇಷನ್ ಮತ್ತು ಕಾಮಿಕ್ಸ್‌ಗಳ ಮೂಲ ಮಕ್ಕಳ ಸಾಹಿತ್ಯವೇ ಆಗಿರುತ್ತದೆ. ಇಲ್ಲಿ ಚಿತ್ರಗಳು ಪ್ರಧಾನ ಪಾತ್ರವಹಿಸುವುದರಿಂದ ಇವು ಮಕ್ಕಳ ಆಕರ್ಷಣೆಯ ಕೇಂದ್ರಬಿಂದುಗಳಾಗುತ್ತವೆ. ಈ ಕಾರಣಗಳಿಂದ ಮಕ್ಕಳ ಸಾಹಿತ್ಯದ ಪರಿಧಿಗೆ ಇವನ್ನು ಒಳಪಡಿಸಬಹುದಾಗಿದೆ. ಅನಿಮೇಷನ್‌ನಲ್ಲಿ ಕನ್ನಡದ ಮಕ್ಕಳ ಸಾಹಿತ್ಯದ ಲೇಖಕರ ಕೃತಿಗಳು ಅನಿಮೇಟ್ ಆದದ್ದು ಕಡಿಮೆ. ಆದರೆ, ಜನಪದ, ಪುರಾಣದ ಕಥೆಗಳು ಅನಿಮೇಟ್ ಆಗಿವೆ. ಭಾರತೀಯ ಸಾಹಿತ್ಯದ ಮಕ್ಕಳ ಸಾಹಿತ್ಯದಲ್ಲಿ ಜನಪದ, ಪುರಾಣ, ಪಂಚತಂತ್ರ ಕಥೆಗಳು, ಐತಿಹಾಸಿಕ ಘಟನೆಗಳನ್ನೆಲ್ಲಾ ಮಕ್ಕಳ ಸಾಹಿತ್ಯವೆಂದು ನೀಡಿದ್ದು ಕಂಡು ಬರುತ್ತದೆ. ಹಾಗಾಗಿ ಈ ಉಪಘಟಕದಲ್ಲಿ ಹಾಗೆ ಅನಿಮೇಟ್ ಆದ ಮೇಲಿನ ಪ್ರಕಾರದ ಕಥೆಗಳಲ್ಲದೆ ಮಕ್ಕಳಿಗೆಂದು ಮಾಡಿದ ಹೊಸ ಬಗೆಯ ಪ್ರಯತ್ನಗಳು, ಡಬ್ ಆದ ವೀಡಿಯೋ, ಸಿನಿಮಾಗಳನ್ನು ವಿಶ್ಲೇಷಣೆ ಮಾಡಲಾಗಿದೆ.

೮.೩.೨.೧. ಭಾರತೀಯ ಅನಿಮೇಷನ್ ಮತ್ತು ಮಕ್ಕಳ ಸಾಹಿತ್ಯ

ಪ್ರಸ್ತುತ ಉಪಘಟಕವು ಅನಿಮೇಟ್ ಆದ ಮಕ್ಕಳ ಕಥೆಗಳನ್ನು ವಿಶ್ಲೇಷಣೆ ಮಾಡುತ್ತಾದರೂ ಓದಿನಿಂದ ದೃಶ್ಯಕ್ಕೆ ಬದಲಾಗುವ ಈ ಹಂತದಲ್ಲಿ ಮಕ್ಕಳಿಗೆಂದು ನೀಡಿದ ಸಾಹಿತ್ಯ ಮುಟ್ಟಲು ಮಾರುಕಟ್ಟೆ ಎಂಬ ಮಧ್ಯವರ್ತಿಯ ಪ್ರವೇಶ ಅಗತ್ಯವಾಗಿರತ್ತದೆ. ಹಾಗಾಗಿ ಅದರ ಕುರಿತೂ ಚರ್ಚೆ ಮಾಡುತ್ತಲೇ ಮಕ್ಕಳ ಫ್ಯಾಂಟಸಿ ಕಥೆಗಳನ್ನು ತುರ್ತಾಗಿ ಮುಟ್ಟಿಸುತ್ತಿರುವಲ್ಲಿ ಪಾತ್ರವಹಿಸುತ್ತಿರುವ ಅನಿಮೇಷನ್ ಸಿನಿಮಾ, ಟಿ.ವಿ ಸರಣಿಗಳನ್ನು ಇಲ್ಲಿ ಚರ್ಚೆ ಮಾಡಲಾಗಿದೆ.

ಅನಿಮೇಷನ್ ಜಗತ್ತು ಇಂದು ಪ್ರಪಂಚದಾದ್ಯಂತ ಟ್ರಿಲಿಯನ್ ಕೋಟಿಗಳಲ್ಲಿ ತನ್ನ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳುತ್ತಿದೆ. ಭಾರತದಲ್ಲಿ ಈ ಕ್ಷೇತ್ರ ಇನ್ನೂ ಈಗಷ್ಟೇ ಕಣ್ತೆರೆಯುತ್ತಿದೆ. ೧೯೦೬ರಲ್ಲಿ ವಿಶ್ವದ ಮೊದಲ ಅನಿಮೇಷನ್ ಸಿನಿಮಾ ತೆರೆಗೆ ಬಂದಿತು. ಈ ಬೆಳವಣಿಗೆ ಭಾರತಕ್ಕೆ

ತಲುಪಲು ಒರೋಬ್ಬರಿ ಅರ್ಧ ಶತಮಾನ ಬೇಕಾಯಿತು. ಹಾಗಾಗಿ ೧೯೫೬ರಲ್ಲಿ ಭಾರತದಲ್ಲಿ ಟೂ.ಡಿ ಅನಿಮೇಷನ್ ಚಿತ್ರ ತೆರೆಗೆ ಬಂದಿತು, ಅದೂ ಬಣ್ಣದಲ್ಲಿಯೇ ಬಂದದ್ದು 'ದಿ ಬನ್ಯಾನ್ ಡೀರ್' (೧೯೫೭)[೫]. ಭಾರತೀಯ ಅನಿಮೇಷನ್ನಿನ ಪಿತಾಮಹ ಎಂದೇ ಕರೆಸಿಕೊಳ್ಳುತ್ತಿರುವ ರಾಮ್‌ಮೋಹನ್ ನಿರ್ದೇಶನದಲ್ಲಿ ಇದು ತಯಾರಾಯಿತು. ಈ ಸಂದರ್ಭದಲ್ಲೂ ಡಿಸ್ನಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕ್ಲೇರ್, ಭಾರತದಲ್ಲಿಯೇ ಹುಟ್ಟಿ ಬೆಳೆದವನಾಗಿದ್ದುದರಿಂದ, ಇಲ್ಲಿಗೆ ಕರೆಸಿ ಇಲ್ಲಿನ ಕಲಾವಿದರಿಗೆ ತರಬೇತಿ ನೀಡಲಾಯಿತು. ಈ ಚಿತ್ರ ಸರಕಾರದ್ದೇ ಸಂಸ್ಥೆಯಾದ ಫಿಲ್ಮ್ ಡಿವಿಜನ್ ಆಫ್ ಇಂಡಿಯಾ ಸಂಸ್ಥೆಯಿಂದ ಸಿದ್ಧವಾಯಿತು. ಬುದ್ಧನ ಜಾತಕ ಕತೆಯಿಂದ ಇಲ್ಲಿನ ಕತೆಯನ್ನು ಆರಿಸಿಕೊಳ್ಳಲಾಗಿತ್ತು.

ಭಾರತದ ಮೊದಲ ಥ್ರೀಡಿ ಅನಿಮೇಷನ್ನಿನ 'ರೋಡ್‌ಸೈಡ್ ರೋಮಿಯೋ' ಚಿತ್ರವು ಜುಗಲ್ ಹನ್ಸರಾಜ್ ನಿರ್ದೇಶನದಲ್ಲಿ ಬಂದಿತು. ಭಾರತದ ಅನಿಮೇಷನ್ ಲೋಕ ಆರಂಭವಾಗಿ ಇಂದಿಗೆ ಆರೇಳು ದಶಕಗಳೇ ಕಳೆದರೂ ಭಾರತವಿನ್ನೂ ಆ ಕ್ಷೇತ್ರದ ಅ ಆ ಇ ಈ ಮಾತ್ರ ಕಲಿಯಲು ಸಾಧ್ಯವಾಗಿದೆಯಷ್ಟೇ. ವಿದೇಶೀ ಇಂಗ್ಲಿಷ್ ಅನಿಮೇಷನ್ ಲೋಕ ಬೆಳೆದಷ್ಟು ಬಿಡುಬೀಸಾಗಿ ಭಾರತದ ಪರಿಸರದಲ್ಲಿ ಆಗಿಲ್ಲ. ಅಲ್ಲಿ ಪರಂಪರೆಯ ಸರಕುಗಳಲ್ಲದೇ ಲೇಖಕರ ಕಥೆಗಳನ್ನೇ ತಂತ್ರಜ್ಞಾನದ ಚಮತ್ಕಾರಿಕೆಯಲ್ಲಿ ಇಡೀ ವಿಶ್ವಕ್ಕೆ ಪರಿಚಯಿಸುವ ಕಾರ್ಯ ಆಗುತ್ತಾ ಬರುತ್ತಿದೆ.

ಭಾರತದಲ್ಲಿ ಈ ಕ್ಷೇತ್ರ ಪುರಾಣ, ಜನಪದ ಕಥೆಗಳ ಆಚೆ ಸಾಗಿದ್ದು ವಿರಳ. ಈಗೀಗ ಹೊಸ ಹೊಸ ಪ್ರಯತ್ನಗಳು ನಡೆಯುತ್ತಿವೆ. ಹಾಗಿದ್ದರೂ ಅದು ದೇಶದ ಯಾವುದೇ ಪ್ರಾದೇಶಿಕ ಭಾಷೆಗಳಲ್ಲಿ ಅಲ್ಲ. ಮತ್ತೆ ಇಂಗ್ಲಿಷ್‌ನಲ್ಲಿ, ಹಿಂದಿಯಲ್ಲಿ ಮಾತ್ರ. ಈ ಮಧ್ಯೆಯೂ ಅಲ್ಲಲ್ಲಿ ಆಗಿರುವ ಪ್ರಯತ್ನಗಳನ್ನು ಅವಲೋಕಿಸುವ ಮುನ್ನ ಭಾರತದ ಆನಿಮೇಷನ್‌ನಲ್ಲಿ ಏನೆಲ್ಲಾ ಬಂದಿದೆ ಎನ್ನುವುದರ ಪಟ್ಟಿಯು ಈ ಕೆಳಗಿದೆ. ಅದರ ನಂತರ ವಿಷದವಾಗಿ ಚರ್ಚಿಸಬಹುದು.

೮.೩.೨.೩. ಭಾರತದಲ್ಲಿ ಅನಿಮೇಟ್ ಆದ ಸಿನಿಮಾಗಳ ಪಟ್ಟಿ

೨೦೦೨-ಪಾಂಡವಾಸ್-ದಿ ಫೈವ್ ವಾರಿಯರ್ರ್ಸ್

೨೦೦೨-ಅಲಿಬಾಬ ಅಂಡ್ ಆರ್ಸ್ ದಿ ಫೋರ್ಥ ಥೀವ್ಸ್

೨೦೦೩-ಸನ್ ಆಫ್ ಅಲಾದ್ದೀನ್

೨೦೦೫-ಗಲಿವರನ ಸಾಹಸಗರು –ಅನಿತಾ ಉದೀಪ್ (ಹಿಂದಿ)

೨೦೦೬-ಕೃಷ್ಣ – ಅಮನ್ ಖಾನ್(ಹಿಂದಿ)

೨೦೦೭-ಬಾಲ ಗಣೇಶ - ಪಂಕಜ್ ಶರ್ಮಾ (ಹಿಂದಿ)

೨೦೦೭-ರಿಟರ್ನ ಆಫ್ ಹನುಮಾಣ್- ಅನುರಾಗ ಕಶ್ಯಪ್ (ಹಿಂದಿ)

೨೦೦೮-ರೋಡ್‌ಸೈಡ್ ರೋಮಿಯೋ-ಜುಗಲ್ ಹನ್ಸರಾಜ್, ವಾಲ್ಟ್ ಡಿಸ್ನಿ ಪಿಚ್ಚರ್ಸ್(
ಭಾರತದ ಮೊದಲ ೩ಡಿ ಸಿನಿಮಾ

೨೦೦೮-ಜಂಬೋ-ಕೊಂಪಿನ್ ಕೆಮಗುಮ್ಲಿರ್ಡ

೨೦೧೧-ಜಂಬೋ೨- ತವೀಲಿಪ್ ಶ್ರಿವುತುರ್ಗ

೨೦೦೯-ಬಾಲಗಣೇಶ ೨ ,ಪಂಕಜ್ ಶರ್ಮಾ(ಹಿಂದಿ)

೨೦೧೦-ಬಾಲ ಹನುಮಾನ್೨, ಪಂಕಜ್ ಶರ್ಮಾ - ಹಿಂದಿ

೨೦೧೦-ರಾಮಾಯಣ -೨ ಚೇತನ ದೇಸಾಯಿ - ಹಿಂದಿ

೨೦೧೦-ತೂನ್‌ಪುರ್ ಕಾ ಸೂಪರ್ ಹೀರೋ-ಕಿರೀಟ್ ಖುರಾನ್(ಹಿಂದಿ)

೨೦೧೧-ಕ್ರಾಕರ್ಸ್-ಅನಿಲ್ ಗೋಯಲ್(ಹಿಂದಿ)

೨೦೧೧-ಸೂಪರ್ ಕೆ-ವಿಜಯ್ ಎಸ್.ಭಾನುಶೋಲಿ ಸ್ಮಿತಾ ಮರೋ(ಹಿಂದಿ)

೨೦೧೨-ಚೋಟಾ ಭೀಮ್ ಅಂಡ್ ದಿ ಕರ್ಸ್ ಆಫ್ ದಮ್ಯಾನ್-ರಾಜೀವ್ ಚಿಲಕ

೨೦೧೨-ದೆಹಲಿ ಸಫಾರಿ- ನಿಖಿಲ್ ಅಡ್ವಾನಿ (ಹಿಂದಿ, ಇಂಗ್ಲೀಷ್)

೨೦೧೨-ಚೂರನ್ ಗೋಲಿ-ಪಂಕಜ್ ಶರ್ಮಾ

೨೦೧೨-ಕೀಮೋನ್ ಬಲಾನಿ ಇನ್ ಸ್ಪೇಸ್ ಅಡ್ವೆಂಚರ್-ಆರ್.ಕೆ.ದೀಪಕ್(ಹಿಂದಿ)

೨೦೧೩-ಸಿಂದಬಾದನ ಸಾಹಸಗಳು-ಪಿಂಜಾನ್ ನಿಯೋಗಿ-ಅಭಿಷೇಕ್ ಪಂಚಲ್ - ಹಿಂದಿ

೨೦೧೩-ಗುಂಜ ಎ ವಂಡರ್ ಗರ್ಲ್ - ರೇಷ್ಮಾ ಜೈಶ್ವಾಲ್ (ಹಿಂದಿ)

೨೦೧೬-ಮೋಟು ಪತ್ಲು-ಕಿಂಗ್ ಆಫ್ ಕಿಂಗ್ಸ್- ಸುಹಾಸ್ ಡಿ.ಕದಾವ್(ಹಿಂದಿ)
ಟಿ.ವಿ. ಧಾರವಾಹಿ.

ಪಾಶ್ಚಿಮಾತ್ಯರು ಅನಿಮೇಷನ್ ಕ್ಷೇತ್ರದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಲೇ ಬಂದಿದ್ದಾರೆ. ಹೊಸ ಹೊಸ ಪಾತ್ರಗಳನ್ನು ಹುಟ್ಟುಹಾಕುತ್ತ ತಂತ್ರಜ್ಞಾನದ ಬಳಕೆಯ ಸಾಧ್ಯತೆಗಳನ್ನು ವಿಸ್ತರಿಸುತ್ತಾ ಬಂದಿದ್ದಾರೆ. ಸ್ಪೈಡರ್‌ಮ್ಯಾನ್, ಬ್ಯಾಟ್‌ಮ್ಯಾನ್ ತರಹದ ಫ್ಯಾಂಟಸಿಯ, ರೋಚಕ ಕಥನಗಳು ಸೃಷ್ಟಿಗೊಂಡಿದ್ದೇ ಈ ಸಾಧ್ಯತೆಗಳಲ್ಲಿ. ಇಂಥವು ಡಾಲರ್‌ಗಳ ಬಜೆಟ್‌ಗಳನ್ನೇ ಹೊಂದಿ ತಯಾರಾದುವು. ಭಾರತದಲ್ಲಿ ಈ ಕ್ಷೇತ್ರ ಮೂರ್‍ನಾಲ್ಕು ದಶಕಗಳಿಂದ ಸಾಗಿ ಬರುತ್ತಿದ್ದರೂ ಹೊಸ ಪ್ರಯತ್ನಗಳಿಗೆ ಕೈ ಹಾಕಲು ಅಧೀರತೆಯನ್ನು ಅನುಭವಿಸುತ್ತಿದೆ. ಕೋಟ್ಯಂತರ ಹಣವನ್ನು ಈ ತರಹದ ಚಿತ್ರಗಳಿಗೆ ಹೂಡುವುದು ಹರಸಾಹಸದ ಕೆಲಸ ಎನಿಸಿದೆ. ಒಂದು ವೇಳೆ ಹೂಡಿದರೂ ಅದು ಲಾಭ ತರುತ್ತದೆ ಎನ್ನುವ ನಂಬಿಕೆಯನ್ನು ನಂಬುವ ಸ್ಥಿತಿಯಲ್ಲಿ ನಿರ್ಮಾಪಕರು ಇಲ್ಲ. ಭಾರತಮುದ್ದಕ್ಕೂ ಪರಿಚಿತವಾಗಿರುವ ಭಾರತದ ಪರಂಪರೆಯ ಕಥನಗಳನ್ನು ಆಯ್ದುಕೊಳ್ಳುವುದು

ಅವರಿಗೆ ಸುಲಭದ ದಾರಿಯಾಗಿ ಕಂಡಿದ್ದರಲ್ಲಿ ಎರಡು ಮಾತಿಲ್ಲ. ಅದರ ಭಾಗವಾಗಿ ರಾಮಾಯಣ, ಮಹಾಭಾರತ, ಬಾಲಗಣೇಶ್, ಬಾಲ ಹನುಮಾನ್ ಮೊದಲಾದವು ತೆರೆ ಕಾಣುತ್ತಾ ಬಂದವು.

ತಂತ್ರಜ್ಞಾನದ ಕುಶಲತೆಯಷ್ಟೇ ಚಿತ್ರದ ಗೆಲುವಿಗೆ ಕಾರಣವಾಗುವುದಿಲ್ಲ. ಅದು ಚಿತ್ರಕ್ಕೆ ಮಹತ್ವದ ಪರಿಣಾಮ ಬೀರಬಲ್ಲಂಥಹ ಸಂಗತಿಯಾದರೂ, ದೇಶದ ಮಾರುಕಟ್ಟೆಯ ವ್ಯಾಪ್ತಿಯೂ ಅಷ್ಟೇ ಪ್ರಮುಖವಾಗಿ ಗೆಲುವನ್ನು ನಿರ್ಧರಿಸುತ್ತದೆ. ಭಾರತದಲ್ಲಿನ ಮಾರುಕಟ್ಟೆ ವಿಶ್ವದ ಅನಿಮೇಷನ್ ಮಾರುಕಟ್ಟೆಯ ಮುಂದೆ ಆನೆಯ ಮುಂದಿನ ಇರುವೆಯಷ್ಟೇ. ಚಿತ್ರದ ಗೆಲುವೆನ್ನವುದು ಈಗ ಹಣ ಗಳಿಕೆಯ ಪ್ರಮಾಣದ ಮೇಲೆ ನಿಂತಿರುವ ಈ ಹೊತ್ತಿನಲ್ಲಿ ಭಾರತದಲ್ಲಿ ಕಥನಗಳು ಅನಿಮೇಟ್ ಆಗುವಲ್ಲಿ ಮಾರುಕಟ್ಟೆ ವ್ಯಾಪ್ತಿಯ ಸವಾಲು ಬಹು ದೊಡ್ಡದಿವೆ. ಅದರ ಎದುರು ಈಜುವುದು ಭಾರತದಂತಹ ದೇಶಗಳಿಗೆ ಇನ್ನೂ ಕಷ್ಟ ಸಾಧ್ಯವೇ ಎನಿಸಿದೆ.

ಭಾರತದಲ್ಲಿ ಪ್ರತಿಭೆಗಳಿಗೆ ಕೊರತೆ ಇಲ್ಲ. ಹೊರದೇಶದ ಚಿತ್ರಗಳಿಗೆ ದುಡಿಯುತ್ತಿರುವ ಭಾರತದ ಯುವಪಡೆ ದೊಡ್ಡದಿದೆ. ಭಾರತದಲ್ಲಿ ಈ ಉದ್ಯಮ ಬಹಳಷ್ಟು ಪಾಲು ವಿದೇಶೀ ಚಿತ್ರಗಳಿಗಾಗಿ ಇಲ್ಲಿನ ಪ್ರತಿಭೆಯನ್ನು ಬಳಸಿಕೊಳ್ಳುತ್ತಿದೆ. ಈಗೀಗ ಹಾಲಿವುಡ್ ಸಿನಿಮಾಗಳೂ ಭಾರತೀಯ ಭಾಷೆಗಳಾದ ಹಿಂದಿ, ತೆಲುಗು, ತಮಿಳು ಭಾಷೆಗಳಿಗೆ ಡಬ್ ಆಗುತ್ತಿವೆ. ಇಂಥಹ ಪರಿಸರದಲ್ಲಿ ಭಾರತೀಯ ಪ್ರಾದೇಶಿಕ ಭಾಷಾವಲಯದ ವಿಸ್ತೃತತೆ ಇನ್ನೂ ಸಮಸ್ಯೆಗಳನ್ನು ತಂದಿಡುತ್ತಲೇ ಇದೆ. ಆಯಾ ಪ್ರಾದೇಶಿಕ ಭಾಷೆಗಳಲ್ಲಿ ಇಂದಿನ ಪೈಪೋಟಿ ಎದುರಿಸುವ ಚಿತ್ರಗಳನ್ನು ಎದುರಿಸುವುದು ಕನಸಿನ ಮಾತು. ಏನಿದ್ದರೂ ಒಂದು ಭಾರತೀಯ ಚಿತ್ರ ತಯಾರಾದರೆ ಅದು ದೇಶದ ಎಲ್ಲಾ ಭಾಷೆಗಳಲ್ಲಿ ಡಬ್ಬಿಂಗ್ ಮೂಲಕ ಅವತರಿಸಬೇಕೇ ವಿನಃ ಬೇರೆ ದಾರಿಯಿಲ್ಲ. ಈಗ ಆಗುತ್ತಿರುವುದೂ ಅದೇ.

೮.೩.೨.೪. ಅನಿಮೇಷನ್‌ನಲ್ಲಿ ಕನ್ನಡಿಗರ ಒಂದು ಪ್ರಯತ್ನ.

ಮಕ್ಕಳ ಕಥಾಲೋಕದ ಪರ್ಯಾಯ ಚಲನೆಗಳು ಇಂದು ಟಿವಿಯಲ್ಲಿ ಕಾರ್ಟೂನ್‌ಗಳ ರೂಪದಲ್ಲಿ ತೆರೆದುಕೊಂಡಿವೆ. ನಮ್ಮ ಮನೆಯ ಅಜ್ಜ-ಅಜ್ಜಿಯರು ಹೇಳಬಹುದಾದ ಹೂಂಗುಡುವ ಕಥೆಗಳನ್ನು ಅನಿಮೇಷನ್ ಲೋಕ ತನ್ನದೇ ಆದ ಬಗೆಯಲ್ಲಿ ಪರಿವರ್ತಿಸಿಕೊಂಡಿದೆ. ಇದು ಇ-ತಲೆಮಾರಿನ ಮಕ್ಕಳನ್ನೆಲ್ಲಾ ಇನ್ನಿಲ್ಲದಂತೆ ಆಕರ್ಷಿಸಿದೆ. ಕಾರ್ಟೂನ್‌ಗಳಲ್ಲಿ ಸಂಭಾಷಣೆ ರಹಿತ, ಸಂಭಾಷಣೆ ಸಹಿತವಾದ ಬಗೆಗಳಿವೆ.

ಕಾರ್ಟೂನ್‌ಗಳ ಜೀವಾಳ ಅವಾಸ್ತವ ಸಂಗತಿಗಳು, ಮೋಜು, ಹಾಸ್ಯ, ರಂಜನೆ, ಚುರುಕಿನ ತಿರುವಿನ ಪ್ರಸಂಗಗಳು, ಬಹುಮುಖ್ಯವಾಗಿ ಪ್ರಾಣಿ ಪಾತ್ರಗಳ ಓಡಾಟಗಳು. ಈ ಬಗೆಯ ಫ್ಯಾಂಟಸಿಯಿಲ್ಲದೆ ಹೋದರೆ ಮಕ್ಕಳಿಗೆ ಸಪ್ಪಗೆ ಹಿಟ್ಟು ತಿಂದಂತಾಗುತ್ತದೆ, ರುಚಿಸದು. ತುಳು ಭಾಷೆಯ 'ಅಂಡೆಪಿರ್ಕಿ'(ತಲೆ ಇಲ್ಲದವನು) ಎನ್ನುವ ನುಡಿಗಟ್ಟಿನ ಶೀರ್ಷಿಕೆ ಇಟ್ಟುಕೊಂಡು ಕೇವಲ

ಎರಡು ಪ್ರಧಾನ ಪಾತ್ರಗಳ ಸೃಷ್ಟಿಯಲ್ಲಿ ಕಂಡುಕೊಂಡಿರುವ ಪ್ರಸಂಗಗಳ ರಂಜನೀಯ ಸರಣಿ ಇತ್ತೀಚೆಗೆ ಕಾಣಿಸಿಕೊಂಡು ಬಹುಸಂಖ್ಯೆಯ ಮಕ್ಕಳನ್ನು ರಂಜಿಸಿತು.

ಆ್ಯಂಡಿ ಎನ್ನುವ ಡೈನೋಸಾರ್ ಮತ್ತು ಪಿರ್ಕಿ ಎನ್ನುವ ಆದಿಮಾನವ ಇಬ್ಬರ ನಡುವೆ ಘಟಿಸುವ ರಂಜನೀಯ ಸಂಗತಿಗಳು ಈ ಪ್ರಸಂಗದಲ್ಲಿವೆ. ಇಲ್ಲಿ ಶೀರ್ಷಿಕೆಯನ್ನು ಬಿಟ್ಟರೆ ಅಕ್ಷರ ಭಾಷೆಯ ಬಳಕೆಯೇ ಇಲ್ಲದಿರುವುದರಿಂದ ಇದು ಎಲ್ಲರಿಗೂ ಅವರವರದೇ ಕತೆಯಾಯಿತು. ಅಲ್ಲದೆ ಶೀರ್ಷಿಕೆಯೊಂದು ತುಳುವಿನ ಸಂಸ್ಕತಿ ಮೂಲವನ್ನು ಹೇಳುವುದನ್ನು ಬಿಟ್ಟರೆ ಕೃತಿಯಲ್ಲಿ ಯಾವ ಒಂದು ಸಾಂಸ್ಕೃತಿಕ ಪರಿವೇಷವೂ ಇದಕ್ಕಿರಲಿಲ್ಲ. ಹಾಗಾಗಿ ಇದು ಒಟ್ಟಿಗೇ ಕನ್ನಡದ, ತುಳುವಿನ, ಭಾರತೀಯ, ಹಾಗೆಯೇ ವಿದೇಶೀಯ ಯಾರಿಗೂ ಆಗಬಹುದಾದುದಾಗಿ ಹುಟ್ಟಿಕೊಂಡಿತು. ಬಹುಮುಖ್ಯವಾಗಿ ಮಕ್ಕಳನ್ನೇ ಆಕರ್ಷಿಸಿದ ಇದು ಮಂಗಳೂರಿನಲ್ಲಿಯೇ, ಸ್ಥಳೀಯ ಕಲಾವಿದರ ನಡುವೆ, ತಯಾರಕರ ನಡುವೆ ಸಿದ್ಧಗೊಂಡು, ಅಂತರರಾಷ್ಟ್ರೀಯ ಮಟ್ಟದ ಪುರಸ್ಕಾರಕ್ಕೂ ಅರ್ಹವಾದ ಅಪರೂಪದ ಸಂಗತಿಯಾಗಿದೆ.

ಒಂದು ಭಾಷೆಯ ಹಂಗಿಗೆ ಒಳಗಾಗದಿರುವುದು ಸಂಭಾಷಣೆ ರಹಿತ ಧಾರವಾಹಿಗಳ ಧನಾತ್ಮಕ ಅಂಶಗಳಲ್ಲಿ ಒಂದು. ಆದರೆ ಅದು ಯಾವುದೋ ಒಂದು ಪ್ರಾದೇಶಿಕ ಕಲ್ಚರಲ್ ಐಡೆಂಟಿಟಿಯನ್ನು ಒತ್ತಿ ಹೇಳುತ್ತಿರುತ್ತದೆ. ಹಾಗೆ ಯಾವ ಪ್ರದೇಶದ ಸಂಸ್ಕೃತಿಯ ಹಂಗಿಗೂ ಒಳಗಾಗದೆ ಕಾರ್ಯಕ್ರಮಗಳನ್ನು ಸೃಷ್ಟಿಸುವುದು ತುಂಬಾ ಸವಾಲಿನ ಕೆಲಸ. ಟಾಮ್ ಅಂಡ್ ಜೆರ್ರಿ ಚಿತ್ರಗಳಲ್ಲಿ ಭಾರತೀಯ ಪರಿಸರದಲ್ಲಿ ಅರಳಿದುದಲ್ಲ ಎನ್ನುವುದನ್ನು ಅದನ್ನು ನೋಡುತ್ತಿದ್ದಂತೆಯೇ ಕಂಡುಕೊಳ್ಳುತ್ತೇವೆ. ಅಲ್ಲಿನ ಮನೆಗಳು, ಜನರು, ಅವರ ಉಡುಗೆ ತೊಡುಗೆ, ಅವರ ಆಹಾರ ವಿಹಾರಗಳು, ಎಲ್ಲವೂ ಅಲ್ಲಿ ಕಾಣಿಸಿಕೊಳ್ಳುತ್ತಿದ್ದುದು ಪಶ್ಚಿಮ ದೇಶಗಳದ್ದು. ಆ್ಯಂಡಿಪಿರ್ಕಿ ಈ ಸವಾಲನ್ನು ಮೀರಲು ಪ್ರಯತ್ನಿಸಿದೆ.

೮.೪. ಮುದ್ರಣ ತಂತ್ರಜ್ಞಾನ ಮತ್ತು ಮಕ್ಕಳ ಸಾಹಿತ್ಯ

೮.೪.೧. ಕಾಮಿಕ್ಸ್ ಮತ್ತು ಫ್ಯಾಂಟಸಿ

ಕಾಮಿಕ್ಸ್ ಜಗತ್ತು ಮುದ್ರಣ ತಂತ್ರಜ್ಞಾನದಲ್ಲಿನ ಬದಲಾವಣೆಗಳಿಂದ ಸಾಧ್ಯವಾಗಿಸಿಕೊಂಡ ಮಕ್ಕಳ ಹೊಸ ಜಗತ್ತು ಎನ್ನಬಹುದು. ಹಾಗೆ ನೋಡಿದರೆ ಕಾಮಿಕ್ಸ್ ಆ ಶಬ್ದ ಹೇಳುವಂತೆ ಹಾಸ್ಯದ ಸಾಮಗ್ರಿಯೇ ಆಗಿ ಕಾಣಿಸಿಕೊಂಡಿದ್ದಿಲ್ಲ. ಅದು ಕಾಮಿಕ್ ಸ್ಟ್ರಿಪ್ ಆಗಿ ಪುಟ್ಟ ಪುಟ್ಟ ಚಿತ್ರ ಪ್ರಸಂಗಗಳ ಸರಣಿಯಾಗಿ ಪತ್ರಿಕೆಗಳಲ್ಲಿ ಕಾಣಿಸಿಕೊಂಡು ತನ್ನ ದಾರಿಯನ್ನು ಸೃಷ್ಟಿಸಿಕೊಂಡಿತು. ಇದರ ಇತಿಹಾಸ ಚಿತ್ರಕಾರರು, ಶಿಲ್ಪಿಗಳ ಸಾಂಪ್ರದಾಯಿಕ ಕಲಾ ಪ್ರಸ್ತುತಿಯಷ್ಟು ಹಿಂದೆ ಹೋಗುತ್ತದೆ. ಗುಹಾ ಚಿತ್ರಗಳು, ನಂತರದ ಭಿತ್ತಿ ಚಿತ್ರಗಳು, ತಾಳೆಗರಿಗಳು ಮುಂತಾದ ಬರವಣಿಗೆಯ ಸಾಧನಗಳು, ಚಿಕಣಿ ಚಿತ್ರಗಳು ಮುಂತಾಗಿ ಬರಹದೊಂದಿಗೆ ಇಲ್ಲವೆ; ಕೇವಲ ಸರಣಿ ಚಿತ್ರಗಳಾಗಿ ಅಭಿವ್ಯಕ್ತಿ

ಹೊಂದುತ್ತಾ ಬಂದದ್ದು ಇದೆ. ನಂತರದ ಹೊಸಗಾಲದ ಮುಂದುವರಿಕೆಯಲ್ಲಿ ಇವು ಪತ್ರಿಕೆಯ ಕಾಲಮ್ಮುಗಳಲ್ಲಿ ಜಾಗ ಪಡೆಯುತ್ತಾ ತಮ್ಮದೇ ವಿಶಿಷ್ಟ ಪ್ರಕಾರವಾಗಿ ಬೆಳೆಯುತ್ತಾ ಬಂದಿವೆ.

ಒಬ್ಬ ಒಳ್ಳೇ ಪ್ರತಿಭಾವಂತ ಚಿತ್ರಕಾರ, ಅದರಲ್ಲೂ ಒಬ್ಬ ಸೊಗಸಿನ ರೇಖಾ ಚಿತ್ರಗಾರ, ಅದರಲ್ಲೂ ವಿಶೇಷವಾಗಿ ಒಬ್ಬ ವ್ಯಂಗ್ಯ ಚಿತ್ರಕಾರ ಇಂಥ ಸೃಷ್ಟಿಯ ಕಾರಣೀಕರ್ತನಾಗಿರುವುದೇ ಹೆಚ್ಚು. ಹಾಗಾಗಿ ಆ ಕಲಾವಿದ, ಸರಣಿಯ ಸೃಷ್ಟಿಕರ್ತನ ಹೆಸರಿನಲ್ಲಿ ಇವು ಪ್ರಚುರವಾಗುತ್ತಾ ಬಂದಿರುವುದು ಕಂಡು ಬರುತ್ತದೆ. ಕಿರು ಹಾಸ್ಯದಿಂದ ಹಿಡಿದು, ರಾಜಕೀಯದ ವಿಡಂಬನೆಯವರೆಗೆ ಇವು ಹಬ್ಬಿಕೊಂಡಿವೆ. ನಿಗದಿತ ಪಾತ್ರಗಳನ್ನಿಟ್ಟುಕೊಂಡು ನಿಗದಿತವಾಗಿ ಪತ್ರಿಕೆಯ ಒಂದಷ್ಟು ಕಾಲಮ್ಮುಗಳ ಅವಕಾಶದಲ್ಲಿ ಕಾಣಿಸಿಕೊಳ್ಳುತ್ತಾ ಒಂದೊಂದು ಬಿಡಿ ಪ್ರಸಂಗಗಳಾಗಿ ಪ್ರಕಟವಾಗುತ್ತಾ ಬಂದಿವೆ.

ದೀರ್ಘಕತೆಗಳಾಗಿ ಧಾರಾವಾಹಿಯಾಗಿ ಬಹುಕಾಲ ಪ್ರಕಟವಾಗುವ ಚಿತ್ರಕತೆಗಳು ಇವು. ಫ್ಯಾಂಟಮನ್ ಅಂಥ ಸರಣಿ ಕತೆ ಬಹು ತಲೆಮಾರುಗಳವರೆಗೆ ಬಂದು ಬಹು ಪ್ರಚುರವಾಗಿತ್ತು. ಇಂದು ಬ್ಯಾಟ್‌ಮನ್, ಸೂಪರ್‌ಮ್ಯಾನ್, ಸೂಪರ್‌ವುಮನ್ ಮುಂತಾಗಿ ನಾನಾ ಬಗೆಯ ಸಾಹಸಮಯ ಪಾತ್ರ ಪ್ರಧಾನವಾಗಿಯೇ ಕಾಣಿಸಿಕೊಂಡ ಕಥಾಸರಣಿಗಳು ಬಹುಪಾಲು ಈ ಬಗೆಯ ಕಾಮಿಕ್ಸ್ ಪ್ರಕಾರ ಪ್ರಚುರವಾಗಲು ಕಾರಣವಾಗಿವೆ.

ಭಾರತದಲ್ಲೂ, ಬಹುಶಃ ವಿಶ್ವದಲ್ಲಿಯೇ ಈಗ ಕಾಮಿಕ್ಸ್ ಪದ ಒಪ್ಪಿತವಾಗಿ ಬಳಕೆಯಾಗುತ್ತಿದೆ. ಕನ್ನಡದಲ್ಲಿಯೂ ಇದು ಹೀಗೆಯೇ, ಇದನ್ನು ಚಿತ್ರಕತೆ ಎಂದು ನಾವು ಅಂದುಕೊಳ್ಳಬಹುದಾದರೂ ಅದು ಸೂಕ್ತವಾದ ಶಬ್ದವಲ್ಲ. ಪುಟ್ಟ ಪುಟ್ಟ ಪ್ರಸಂಗಗಳ, ಹಾಸ್ಯದ ಪ್ರಸಂಗಗಳ ಸರಣಿಗಳಿಗೆ ಅದು ಸರಿಹೊಂದುವುದಿಲ್ಲ. ಸಾಮಾನ್ಯವಾಗಿ ವ್ಯಂಗ್ಯ ಚಿತ್ರಗಳು, ಹಾಗೆಯೇ ನೈಜ ವಿವರಗಳ ಯಥಾರ್ಥ ಕಲೆಯ ಪ್ರಸ್ತುತಿಯೂ ಧಾರಾವಾಹಿ ಚಿತ್ರಕತೆಗಳಿಗೆ ಬಳಕೆಯಾಗುತ್ತಾ ಬಂದಿದೆ. ವ್ಯಂಗ್ಯಚಿತ್ರ ಕಲಾವಿದರು ಅನೇಕರು ಕೆಲ ವಿಶಿಷ್ಟ ಪಾತ್ರಗಳನ್ನು ಸೃಷ್ಟಿಸಿ ಆ ಮೂಲಕವೇ ಪ್ರಸಿದ್ಧಿಗೆ ಬಂದಿರುವುದನ್ನು ಕಾಣಬಹುದು. ಪ್ರಾಣ್ ಅಂಥವರು ಇದಕ್ಕೆ ದೊಡ್ಡ ಉದಾಹರಣೆ.

ಇಪ್ಪತ್ತನೆಯ ಶತಮಾನದ ಮೊದಲರ್ಧದ ಹೊತ್ತಿಗೆ ಅಮೇರಿಕಾ ಈ ಬಗೆಯ ಹೊಸಗಾಲದ ಕಾಮಿಕ್ಸ್‌ಗಳ ದೊಡ್ಡ ಅಸ್ತಿತ್ವಕ್ಕೆ ನಾಂದಿ ಹಾಡಿತು. ಹಾಗೆಯೇ ಜಪಾನ್, ಪಶ್ಚಿಮ ಯುರೋಪಿನ ಫ್ರಾನ್ಸ್, ಬೆಲ್ಜಿಯಮ್ ಮುಂತಾದೆಡೆಗಳಲ್ಲೂ ಈ ಬಗೆಯ ಉಪಕ್ರಮ ಕಾಣಿಸಿಕೊಂಡಿತು. ಸುದ್ದಿ ಪತ್ರಿಕೆಗಳಲ್ಲಿ ಸ್ಥಳ ಪಡೆಯುತ್ತಾ ಮಹತ್ವವನ್ನು ಗಳಿಸುತ್ತಾ, ಸಮೂಹ ಮಾಧ್ಯಮದ ಮೇಲ್ದರ್ಜೆ ಇವಕ್ಕೆ ದೊರೆಯತೊಡಗಿತು. ೧೯೩೦ರ ಹೊತ್ತಿಗೆಲ್ಲಾ ಸೂಪರ್‌ಮ್ಯಾನ್ ಸರಣಿ ಕಾಣಿಸಿಕೊಂಡಿತು. ಎರಡನೆಯ ಮಹಾಯುದ್ಧದ ನಂತರ ಈ ಕಾಮಿಕ್ಸ್‌ಗಳ ಜಗತ್ತು ವಿಶೇಷವಾಗಿಯೇ ಬೆಳೆಯತೊಡಗಿತು. ಯುರೋಪಿನ ದೇಶಗಳಲ್ಲಿ 'ಟಿನ್ ಟಿನ್ ಸಾಹಸಗಳು' ಪ್ರಸಿದ್ಧಿಗೆ ಬಂದಂತೆ ಜಪಾನಿನಲ್ಲಿ 'ಒಸಾಮು

ಟೆರಝುಕ್' ಪ್ರಸಿದ್ಧಿಗೆ ಬಂದು ಇತಿಹಾಸ ಬರೆದವು. ಬಲು ಪ್ರಸಿದ್ಧಿಯಲ್ಲಿದ್ದ 'ಪಂಚ್' ಪತ್ರಿಕೆ ಹಾಸ್ಯಮಯವಾದ ಈ ಬಗೆಯ ಕಾಮಿಕ್ಸ್‌ಗಳನ್ನು ದೊಡ್ಡ ಪ್ರಮಾಣದಲ್ಲಿ ಪ್ರಚಾರಕ್ಕೆ ತಂದಿದೆ. ಇಪ್ಪತ್ತನೆಯ ಶತಮಾನದ ಮೊದಲರ್ಧವನ್ನು ಕಾಮಿಕ್ಸ್‌ಗಳ ಚಿನ್ನದ ಯುಗವೆಂದೇ ಕರೆಯಬಹುದಾದಷ್ಟು ಇವು ಪ್ರಚುರತೆಯನ್ನು ಪಡೆದವು.

ಭಾರತದಲ್ಲಿ ಕಾಮಿಕ್ಸ್‌ಗಳ ಕಾಲವನ್ನು 'ದಿ ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆ ಹೊರದೇಶದ ಯಶಸ್ವಿ ಸರಣಿಗಳನ್ನು ಬಳಸಿಕೊಂಡು ೧೯೬೪ಳರಿಂದ ನೀಡತೊಡಗಿದ ಇಂದ್ರಜಾಲ ಕಾಮಿಕ್ಸ್‌ದಿಂದ ಗುರುತಿಸಬಹುದು.[2] ದಿ ಫ್ಯಾಂಟಮ್, ಮಾಂಡ್ರಕೆ, ಫ್ಲಾಷ್ ಗೋರ್ಡನ್, ರಿಪ್ ಕಿರ್ಬಿ, ಬಝ್ ಸಾವೆರ್, ಮೈಕ್ ನೊಮ್ಯಾಡ್, ಕೆರ್ರಿ ಡ್ರಾಕೆ, ಗಾರ್ಥ ಮುಂತಾದ ಅನೇಕ ಸೂಪರ್ ಹಿರೋಗಳು ಜನಪ್ರಿಯತೆ ಪಡೆದರು.

ಇವುಗಳ ಮಧ್ಯೆ ಭಾರತೀಯ 'ಬಹಾದೂರ್' ಪಾತ್ರದ ಸೃಷ್ಟಿಯೂ ಆಯಿತು. ಬೆಂಗಾಲಿ ಭಾಷೆ ಮೊದಲುಗೊಂಡು ಮರಾಠಿ, ಕನ್ನಡ, ಮಲಯಾಳಿ, ತಮಿಳು, ಗುಜರಾತಿ, ಹಿಂದಿ ಭಾಷೆಗಳಿಗೂ ಈ ಕಾಮಿಕ್ಸ್‌ಗಳು ಹಬ್ಬಿದವು. ಇಪ್ಪತ್ತೇಳು ವರ್ಷಗಳ ದೀರ್ಘ ಅವಧಿಯ ಈ ಪ್ರಕಟಣೆ ೧೯೯೦ರ ಹೊತ್ತಿಗೆ ನಿಂತು ಹೋಯಿತು.

೧೯೯೦ರ ಹೊತ್ತಿಗೆ ಭಾರತೀಯವಾದ ಕಾಮಿಕ್ಸ್ ಜಗತ್ತು ಬೆಳೆಯತೊಡಗಿತ್ತು. ಆಗಲೇ ಐದು ಲಕ್ಷದಷ್ಟು ಪ್ರತಿಗಳು ಮಾರಾಟವಾಗುವಷ್ಟು ಈ ಕಾಮಿಕ್ಸ್ ಪುಸ್ತಕಗಳ ರೂಪದಲ್ಲಿ ಕಾಣಿಸಿಕೊಂಡವು. ಆದರೆ ಡಿಜಿಟಲ್, ಟಿವಿ ಮೀಡಿಯಾದ ಸ್ಪರ್ಧೆಯ ಮುಂದೆ ನಿಲ್ಲಲಾಗದೆ ಈ ಉದ್ಯಮ ಕೆಳಗಿಳಿಯುತ್ತಾ ಬಂದುದನ್ನು ಭಾರತೀಯ ಸಂದರ್ಭ ಹೇಳುತ್ತಿದೆ. ಡೈಮಂಡ್ ಕಾಮಿಕ್ಸ್, ರಾಜ್ ಕಾಮಿಕ್ಸ್, ಟಿಂಕಲ್, ಹಾಗೂ ಅಮರ ಚಿತ್ರಕಥಾದಂಥ ಕಾಮಿಕ್ಸ್‌ಗಳು ಒಂದಿಷ್ಟೆಲ್ಲಾ ದೀರ್ಘ ಅವಧಿಯ ಸಾಧನೆ ಮಾಡಿದ್ದು ಕಂಡು ಬರುತ್ತದೆ. ಅಬೀದ್ ಸುರ್ತಿ, ಅಂಕಲ್ ಪೈ, ಪ್ರಾಣ್(ಪ್ರಾಣ್ ಕುಮಾರ್ ಶರ್ಮಾ) ಅವರೇ ಭಾರತೀಯರ ಈ ರಂಗದಲ್ಲಿ ಕಾಣಸಿಗುವ ವಿಶೇಷದ ವ್ಯಕ್ತಿಗಳು. 'ಚಾಚಾಚೌಧರಿ', 'ಡಿಟೆಕ್ಟಿವ್ ಮೂಛ್‌ವಾಲಾ', 'ನಾಗರಾಜ್', 'ಸುಪರ್ ಕಮಾಂಡೊ ಧೃವ್', 'ಡೋಗಾ', 'ವೇದ್', 'ವರುಣ್', 'ಕರ್ಮಾ', 'ಬಹಾದ್ದೂರ್' ಮುಂತಾದ ಭಾರತೀಯ ಹೀರೋಗಳು ಮಕ್ಕಳಲ್ಲಿ ಪ್ರಸಿದ್ಧಿ ಪಡೆದರು.

ಭಾರತದಲ್ಲಿ ಒಟ್ಟಾರೆ ಕಾಮಿಕ್ಸ್ ಜಗತ್ತನ್ನು ಸೃಷ್ಟಿಸುತ್ತಾ, ಮಕ್ಕಳ ನಡುವೆ ಚಾಲ್ತಿಯಲ್ಲಿಟ್ಟವು. ೧೯೬೨ರಲ್ಲಿ ಪ್ರಕಟವಾಗತೊಡಗಿ ೨೦೧೭ರ ವರೆಗೆ ಬೆಂಗಾಲಿಯ 'ಶುಕತಾರಾ' ಪತ್ರಿಕೆಯಲ್ಲಿ ಪ್ರಕಟವಾಗುತ್ತಾ ಬಂದ ನಾರಾಯಣ ದೇಬ್‌ನಾಥ್ ಅವರ 'ಹಂಡಾಭೊಂಡಾ' ಎನ್ನುವ ಇಬ್ಬರು ಹುಡುಗರ ಕಾಮಿಕ್ಸ್ ಸರಣಿ ಒಬ್ಬ ಕಲಾವಿದನಿಂದ ಮೂಡಿಬಂದ ವಿಶ್ವದಲ್ಲಿಯೇ ದೀರ್ಘ ಅವಧಿಯ ಸರಣಿ ಎನ್ನುವ ಅಭಿಪ್ರಾಯವೂ ಇದೆ.

೬.೪.೨. ಅಂಕಲ್ ಪೈ ಮತ್ತು ಕಾಮಿಕ್ಸ್

ಮುದ್ರಣ ತಂತ್ರಜ್ಞಾನ ಸಾಧ್ಯತೆಯ ಕಾಮಿಕ್ಸ್ ಎಂದೊಡನೆ ಕನ್ನಡಿಗರಾದ ಅಂಕಲ್ ಪೈ ಅವರ ಹೆಸರು ನೆನಪಾಗುತ್ತದೆ. ಅಷ್ಟರಮಟ್ಟಿಗೆ ಅವರ ಹೆಸರು ಈ ಪ್ರಕಾರದೊಂದಿಗೆ ಸೇರಿ ಹೋಗಿ ಕನ್ನಡದವರಿಗೆ ಇದು ಪರಿಚಿತವಾಗಿದೆ. ಪೈ ಐ.ಬಿ.ಹೆಚ್ ಪ್ರಕಾಶನದಲ್ಲಿದ್ದಾಗ ಕಂಡ ಕನಸು ಬಹು ಶ್ರಮದಿಂದ ಸಾಧ್ಯಮಾಡಿಕೊಂಡ ಮಕ್ಕಳ ಲೋಕ ಇದು. ಇದಕ್ಕಿಂತಲೂ ಮೊದಲಿಗೆ ಮಹಾಭಾರತ ಆಧಾರಿತ ಕಾಮಿಕ್ಸ ಸರಣಿ ಬಂದ ಉದಾಹರಣೆ ಇತ್ತು. ಆದರೆ ಅಂಕಲ್ ಪೈ ಅವರು ಅದಕ್ಕೊಂದು ವಿಸ್ತೃತ ರೂಪ ನೀಡಿ ಅದರ ಸಾಧ್ಯತೆಗಳನ್ನು ವಿಸ್ತರಿಸಿ, ಭಾರತದ ಪರಿಸರದಲ್ಲಿ ದೊಡ್ಡ ಉದಾಹರಣೆಯಾಗಿದರು. ಅವರ ಈ ಕಾಮಿಕ್ಸ್ ಸೃಷ್ಟಿಯ ಕುರಿತು ನಂದಿನಿಚಂದ್ರ ಅವರು ಸಂಶೋಧನಾ ಪ್ರಬಂಧ[೫] (‘The classic popular Amar Chitra katha, 1967-2007’ – Nandini Chandra – Yoda Press, New Delhi - 2008) ರಚಿಸಿದ್ದು ವಿಶೇಷವಾಗಿ ಗಮನಿಸುವಂತಿದೆ. ಪಾಶ್ಚ್ಯಾತ್ಯ ಕಾಮಿಕ್ಸ್ ಸರಣಿ ಭಾರತವನ್ನು, ಹಾಗೇ ಮಕ್ಕಳ ಜಗತ್ತಿನದೇ ಆಗಿ ಬಂಗಾಲಿಯ 'ಸಂದೇಶ್' ಪತ್ರಿಕೆಯ ಪುಟಗಳಲ್ಲಿ ಕಾಣಿಸಿಕೊಂಡಾಗಿತ್ತು. ಸತ್ಯಜಿತ್ ರೇ ಥರಹದ ಪ್ರತಿಭಾವಂತ ನಿರ್ದೇಶಕರು ಆ ಬಗೆಯ ಪ್ರಯತ್ನಗಳಿಗೆ ಕೈಹಾಕಿದ್ದರು. ಅವರೇ ಅಂಥ ಕತೆಗಳನ್ನೂ ಹುಟ್ಟುಹಾಕಿದ್ದುದೂ ಇತ್ತು.

ಅಂಕಲ್ ಪೈ ಕಾಮಿಕ್ಸ್ ಜಗತ್ತನ್ನು ಭಾರತೀಯವಾಗಿ ಕಂಡುಕೊಂಡರು. ಮಕ್ಕಳ ನಡುವೆ ಅಗತ್ಯವಾಗಿ ಭಾವಿಸಿಕೊಂಡು ಸೃಷ್ಟಿಸಿದರು. ಹಾಗಾಗಿ ಅದು ಸಂಪೂರ್ಣವಾಗಿ ಭಾರತೀಯ ಸಾಧ್ಯತೆಗಳನ್ನು ಹೇಳಿತು. ಅವರು ಆರಿಸಿಕೊಂಡ ಕತೆಗಳು ಭಾರತೀಯ ಮೂಲದವು. ಚಿತ್ರಕಾರರು ಇಲ್ಲಿನವರು; ಈ ಚಿತ್ರಗಳಲ್ಲಿನ ಹಿನ್ನೆಲೆಯ ಪರಿಸರ (ಚಿತ್ರವಾಗಿ ಮೂಡಿ ಬಂದಿದ್ದು) ಭಾರತೀಯವಾದುದು ಸಹಜವಾಗಿತ್ತು. ಅಲ್ಲದೆ ಇದು ಸೃಷ್ಟಿಗೊಳ್ಳುತ್ತಿದ್ದಂತೆ ಚಿತ್ರ ಅಂದರೆ ಟೂಡೈಮೆನ್ಷನ್‌ನಲ್ಲಿ ಮೂಡಿಸುವುದರ ಕುರಿತು ಸಾಧ್ಯತೆಗಳನ್ನು ಕಲಾವಿದರು ಕಂಡುಕೊಂಡಿದ್ದು ಹೊಸದಾಗಿತ್ತು.

ಅಂದು ಬರುತ್ತಿದ್ದ ಸಿನಿಮಾಗಳಿಗೆ ಪೋಸ್ಟರ್ ರಚಿಸುತ್ತಿದ್ದುದೂ ಕೂಡ ಪ್ರಭಾವ ಬೀರಿತು. ಈ ಚಿತ್ರಕಾರಿಕೆಯ ಕುರಿತಾಗಿಯೇ ವಿಶೇಷ ಅಧ್ಯಯನವಿದೆ. ಇರಲಿ, ಇಲ್ಲಿನ ವಸ್ತುವಿನ ಕುರಿತಾಗಿ ಈ ಪ್ರಬಂಧದ ಅಪೇಕ್ಷೆಯಲ್ಲಿ ಮಾತನಾಡುವುದಿದೆ.

ಪೈ ಅವರ ಉದ್ದೇಶವೇ ಈ ವಸ್ತುವಿನ ಹಿನ್ನೆಲೆಯಲ್ಲಿರುವುದು. ಮಕ್ಕಳಿಗೆ ಮರೆತುಹೋಗಿರುವ ಭಾರತದ ಪರಂಪರೆಯನ್ನು ಅರಿವಿಗೆ ತರುವುದೇ ಅವರ ತಲೆಯಲ್ಲಿದ್ದಂತೆ ತೋರುತ್ತದೆ. ಹಾಗಾಗಿ ಅವರು ಭಾರತೀಯ ಪುರಾಣದ, ಇತಿಹಾಸದ, ಹಾಗೆಯೇ ಅನೇಕ ನಾಯಕರ ವ್ಯಕ್ತಿತ್ವಗಳ ಚಿತ್ರಣಗಳನ್ನು ಇಲ್ಲಿ ತಂದರು. ಹಾಗಾಗಿಯೇ ಅವರಿಗೆ ಭಾರತದಲ್ಲಿ ದೊಡ್ಡ ಮಾರುಕಟ್ಟೆಯೂ

ಲಭ್ಯವಾಯಿತು. ಅಲ್ಲದೆ ಅವರು ಹಿಂದಿ, ಇಂಗ್ಲೀಷ್ ಅಲ್ಲದೆ ಉಳಿದ ಅನೇಕ ಭಾಷೆಗಳಲ್ಲಿ ಒಂದೇ ಸಲಕ್ಕೆ ಸಾಧ್ಯಮಾಡಿಕೊಂಡಿದ್ದು ಮತ್ತಷ್ಟು ವಿಸ್ತಾರವಾಗಿ ತಲುಪುವುದಕ್ಕೆ ಸಾಧ್ಯವಾಯಿತು ಕೂಡ. ಬಹು ಮುಖ್ಯವಾಗಿ ಚಿತ್ರಕತೆಗಳಾದುದರಿಂದ ಅಕ್ಷರ ಭಾಷೆಯನ್ನು ಮಾತ್ರ ಬದಲಿಸಿಕೊಂಡು ಇದನ್ನು ಎಲ್ಲಾ ಕಡೆ ಸುಲಭವಾಗಿ ಸಾಧ್ಯಮಾಡಿಕೊಳ್ಳಲಾಯಿತು.

ಹೀಗೆ ಭಾರತೀಯ ಪರಂಪರೆಯೆನ್ನುವುದು ಅಂಕಲ್ ಪೈ ಅವರ ಮನೋಭಾವನೆಯಲ್ಲಿ ಹೀಗೆ ಕಂಡು ಬಂದಿದೆ. ಅದನ್ನು ಆದರ್ಶ ಅಂತ ಇಂದು ಎಲ್ಲರೂ ಭಾವಿಸುವುದಿಲ್ಲ. ಈ ಕುರಿತು ವಿಭಿನ್ನವಾದ ಅಭಿಪ್ರಾಯಗಳು ಇವೆ. ಬಹು ಮುಖ್ಯವಾಗಿ ಧಾರ್ಮಿಕ ಸಂಗತಿಗಳು ಹಿನ್ನೆಲೆಯಲ್ಲಿ ನಿಲ್ಲುತ್ತಲೇ ಇವೆ. ವಾಜಪೇಯಿ ಅಂಥವರೇ ನೆಹರು ನಂತರದ ಮಕ್ಕಳ ಚಾಚಾ ಎಂದು ಪೈ ಅವರನ್ನು ಕರೆದುದು ಇದೆ[೮] (ವಾಜಪೇಯಿ ಅವರ ಹೇಳಿಕೆ ಉಲ್ಲೇಖ). ಅದೇನೇ ಇರಲಿ, ಭಾರತೀಯರ ಮಟ್ಟಕ್ಕೆ ದೊಡ್ಡದೊಂದು ಚಿತ್ರಕತೆಗಳ ಜಗತ್ತು ಕಾಣಿಸಿದ್ದು ತುಂಬಾ ಹೆಮ್ಮೆಯ ಸಂಗತಿಯಾಗಿದೆ.

೮.೪.೩. ಕನ್ನಡದ ಪತ್ರಿಕೆಗಳು ಮತ್ತು ಕಾಮಿಕ್ಸ್

ಭಾರತದಲ್ಲಿ ಕಾಮಿಕ್ಸ್ ಕಥೆಗಳು ಪುಸ್ತಕಗಳಿಂದಲ್ಲದೇ ಹಿಂದಿ ಸೇರಿದಂತೆ ಪ್ರಾದೇಶಿಕ ಭಾಷೆಗಳಲ್ಲಿ ಕೆಲ ಆಸಕ್ತ ಪತ್ರಿಕೆಗಳಿಂದಲೂ ನಿಗದಿತವಾಗಿ ಪ್ರಕಟವಾಗುತ್ತಾ ಬಂದಿವೆ. ಹಾಗೆ ಕನ್ನಡದಲ್ಲಿ ಕಾಮಿಕ್ಸ್‌ನ್ನು ಪ್ರಕಟಿಸಿದ ಕೆಲವು ಪತ್ರಿಕಗಳನ್ನು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ.

'ಚಂದಮಾಮ' ಪತ್ರಿಕೆ ಭಾರತದಾದ್ಯಂತ ಪ್ರಚುರವಾಗಿ ಇತಿಹಾಸ ಸೃಷ್ಟಿಸಿದ್ದು ಗಮನಿಸಬೇಕಾದ ಸಂಗತಿ. ಈ ಪತ್ರಿಕೆಯನ್ನು ಒಂದಿಷ್ಟೆಲ್ಲ ಕಾಮಿಕ್ಸ್ ಪ್ರಕಾರಕ್ಕೆ ಸೇರಿಸಿಕೊಂಡು ನೋಡಬಹುದು. ಅಲ್ಲಿ ಚಿತ್ರಗಳು ಪುಟದಲ್ಲಿ ಹೆಚ್ಚು ಸ್ಥಳವನ್ನು ಆಶ್ರಯಿಸಿ, ಅವನ್ನೂ ಅಗತ್ಯವಾಗಿ ಗಮನಿಸುವಂತೆ ಕಾಣಿಸಿಕೊಂಡಿದ್ದವು. ಈ ಪತ್ರಿಕೆಯನ್ನು ಚಿತ್ರಗಳಿಗಾಗಿಯೇ ಕೊಂಡುಕೊಳ್ಳುವ ಮಟ್ಟಿಗೆ ಅದು ಮಕ್ಕಳನ್ನು, ಹಿರಿಯರನ್ನು ಆಕರ್ಷಿಸಿತ್ತು. ಆದರೆ ಅಲ್ಲಿ ಬರಹದ ಪಾತ್ರವೇ ಬಹುಮುಖ್ಯವಾಗಿ ಅದು ಓದುವ ಕೃತಿಯಾಗಿಯೇ ಹೆಚ್ಚು ಕಾಣಿಸಿಕೊಂಡುದ್ದನ್ನು ಗಮನಿಸಬಹುದು. ಕನ್ನಡದ ನವಗಿರಿನಂದ ಅವರು ಕನ್ನಡದ ಆವೃತ್ತಿಗಳಿಗಾಗಿ ಬಹು ಸಮಯ ತೊಡಗಿಕೊಂಡಿದ್ದರು. ಹಿರಿಯ ಕಲಾವಿದ ಆಚಾರ್ಯ ಎಂ ಟಿ ವಿ., ಅವರು ಚಿತ್ರ ಬರೆಯುತ್ತಿದ್ದುದದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಕನ್ನಡದಲ್ಲಿಯೂ ಈ ಬಗೆಯ ಪ್ರಯತ್ನಗಳು ಈಗೆಲ್ಲಾ ಕಾಣಿಸಿಕೊಂಡಿವೆ. ಪತ್ರಿಕೆಗಳಲ್ಲಿ ನಿಗಧಿತವಾಗಿ, ಅದರಲ್ಲೂ ಬಣ್ಣಗಳಲ್ಲಿ ಕಾಣಿಸುವಷ್ಟು ಇನ್ನೂ ನಮ್ಮ ವಾತಾವರಣ ರೂಪುಗೊಂಡಿಲ್ಲ. ಆದರೂ ವಿರಳವಾಗಿ ಕಾಣತೊಡಗಿವೆ. ಇವು ಮಕ್ಕಳಿಗೇ ಅಂತ ಅಲ್ಲ, ದೊಡ್ಡವರಿಗೂ ಬರತೊಡಗಿವೆ. ಕನ್ನಡದ್ದೇ ಆದ ಮಣಿಪಾಲ್ ಪ್ರೆಸ್ ನಿಂದ ಬರುತ್ತಿರುವ 'ತುಂತುರು' ಮಕ್ಕಳ ಪತ್ರಿಕೆ ನಿಗದಿತವಾಗಿ ತನ್ನ ಪುಟಗಳಲ್ಲಿ ಕಾಮಿಕ್ಸ್ - ನಿಗದಿತ ಪಾತ್ರಗಳನ್ನಿಟ್ಟುಕೊಂಡು ಪ್ರಕಟಿಸುತ್ತಿದೆ. ಇದನ್ನು ಬಿಟ್ಟರೆ

ಕನ್ನಡದಲ್ಲಿ ಬರುತ್ತಿರುವ ಮಲಯಾಳಿ ಮೂಲದ, ಕನ್ನಡದ ಆವೃತ್ತಿಯಾಗಿಯೂ, ಜೊತೆಗೆ ಕನ್ನಡದ ಲೇಖಕರ ಬರವಣಿಗೆಗಳನ್ನೂ ಹೊತ್ತು ತರುತ್ತಿರುವ 'ಬಾಲಮಂಗಳ' ಪತ್ರಿಕೆ ಇಂಥವನ್ನು ತರುತ್ತಿದ್ದು ಅಲ್ಲಿ ಡಿಂಗ ಮುಂತಾದ ಕೆಲ ಪಾತ್ರಗಳು ಮಕ್ಕಳಲ್ಲಿ ಬಹು ಪ್ರಚುರವಾಗಿವೆ. 'ಡಿಂಗ' ಅಭಿಮಾನಿಗಳ ಸಂಘವನ್ನು ಕಾಣುವಷ್ಟು ಪ್ರಚುರವಾದದ್ದೂ ಇದೆ. ಇನ್ನೊಂದು 'ಶಕ್ತಿಮದ್ದು' ಇದೊಂದು ಕಾಡಿನ ಔಷಧಿ. ಇದು ಲಂಬೋದರನ ಮೂಲಕ ಸಮಾಜದ ದುಷ್ಟ ವ್ಯಕ್ತಿಗಳನ್ನು ಮಟ್ಟ ಹಾಕುತ್ತಾನೆ. ವಾಸ್ತವದಲ್ಲಿ ಸಾಮಾನ್ಯ ಇಲಿಯಾಗಿದ್ದ ಡಿಂಗನನ್ನು ವಿಜ್ಞಾನಿಗಳು ಅದ್ಭುತ ಶಕ್ತಿ ನೀಡಿದ್ದು, ಮತ್ತು ಶಕ್ತಿಮದ್ದು ಮೂಲಕ ಲಂಬೋದರ ಮಾಡುವ ಸಾಹಸ ಕಾರ್ಯ ಮತ್ತು ಸಾಮಾಜಿಕ ಕಾರ್ಯಗಳು ಫ್ಯಾಂಟಸಿಯ ಹಿನ್ನೆಲೆಯಲ್ಲಿ ರಚನೆಗೊಂಡಿವೆ. ಕನ್ನಡದ ಮಟ್ಟಿಗೆ ಬಾಲಮಂಗಳ ಪತ್ರಿಕೆಯ ಕಾರ್ಯ ಮಹತ್ವದ್ದಾಗಿದೆ.

ಇಂದು ವಿರಳವಾಗಿಯಾದರೂ ಕನ್ನಡದ ಮಕ್ಕಳಿಗೆ ಸಿಗುತ್ತಿರುವ ಕಾಮಿಕ್ಸ್‌ಗಳು ಹಾಸ್ಯಮಯವಾದ, ಕಿರು ಅವಧಿಯ ಸರಣಿಗಳು, ಇಲ್ಲವೆ ಕೆಲ ನಿಗದಿತಪಾತ್ರಗಳಲ್ಲಿ ನಡೆಯುವ ಹಾಸ್ಯದ ಪ್ರಸಂಗಗಳು. ನಗರದ ಮಕ್ಕಳಿಗೆ ಲಭ್ಯವಾಗುವ ಟಿನ್‌ಟಿನ್ ಇಂಗ್ಲೀಷ್ ಮಕ್ಕಳಿಗೆ ಮಾತ್ರವೇ ಆಗಿದೆ. ಕಿರುಚಿತ್ರಗಳು, ಯುಟ್ಯೂಬ್, ಡಿಜಿಟಲ್ ಮಾಧ್ಯಮದ ಮೂಲಕ ಇಂದು ನಾನಾಬಗೆಯ ಸರಕು ನಮ್ಮ ಮಕ್ಕಳಿಗೆ ಮುಟ್ಟುತ್ತಿವೆ. ಅದರಲ್ಲೂ ಗೇಮ್ಸ್ ಎಂದುಕೊಂಡು ಸಾಹಸದ, ಫ್ಯಾಂಟಸಿಯ ನಾನಾ ಬಗೆಯ ಕಥಾ ಹಂದರಗಳು ಕಾಣಿಸಿಕೊಳ್ಳುತ್ತಲೇ ಇವೆ.

೮.೫. ಕನ್ನಡ ಮಕ್ಕಳ ಸಾಹಿತ್ಯ ಮತ್ತು ತಂತ್ರಜ್ಞಾನ

ಕನ್ನಡ ಮಕ್ಕಳ ಸಾಹಿತ್ಯ ಚರಿತ್ರೆಗೆ ಮೂರು ನಾಲ್ಕು ಶತಮಾನಗಳ ಇತಿಹಾಸವೇನಿಲ್ಲ. ಕಳೆದ ನೂರು–ನೂರೈವತ್ತು ವರ್ಷಗಳಲ್ಲಿ ಬಂದಿರುವ ಸಾಹಿತ್ಯ ವ್ಯಾಪ್ತಿಯದಾಗಿದೆ. ಅದರಲ್ಲೂ ಬಹುಪಾಲು ಮಕ್ಕಳ ಭವಿಷ್ಯದ ಕಾಳಜಿ, ಪರಂಪರೆಯಲ್ಲಿರುವ ಉತ್ತಮ, ಮಾದರಿ ಎಂದುಕೊಂಡುದ್ದನ್ನು, ಭಾವಿಸಿಕೊಂಡ ಬದುಕಿನ ಮೌಲ್ಯಗಳನ್ನು ಇಟ್ಟುಕೊಂಡೇ ಈ ಸಾಹಿತ್ಯವು ರೂಪುಗೊಂಡಿತು. ಅದರ ಭಾಗವಾಗಿ ಪುರಾಣದ, (ಭಕ್ತ ಮಾರ್ಕಂಡೇಯ, ಹನುಮಾನ್, ಕೃಷ್ಣ, ಗಣೇಶ, ಧೃವ...ಇತ್ಯಾದಿ) ಇತಿಹಾಸದ ಪರಿಸರವಿರುವ ರಾಜರಾಣಿಯರ ಕತೆಗಳು, ಹಾಗೆಯೇ ಶಿಷ್ಟವೆನಿಸಿಕೊಳ್ಳುವ ಪರಂಪರೆಯ ಇನ್ನೊಂದು ಮಗ್ಗಲುಗಳಲ್ಲಿ ಅರಳಿದ, ಗೋವಿನ ಹಾಡು, ಪಂಚತಂತ್ರದ ಕತೆಗಳು, ಬೇತಾಳ, ಬತ್ತೀಸು ಪುತ್ಥಳಿ ಕತೆಗಳು' ಮುಂತಾದುವು ಮಕ್ಕಳಿಗಾಗಿ ಮತ್ತೆ ಮತ್ತೆ ಮರು ನಿರೂಪಣೆಗಳಾದವು. ಇವುಗಳಲ್ಲಿ ಜನಪದ ಕತೆಗಳ ದೊಡ್ಡ ಸಂಗ್ರಹವೇ ಮಕ್ಕಳ ಸಾಹಿತ್ಯಕ್ಕೆ ಪುನರಪಿಯಾಗಿ ಪ್ರೇರಣೆ ನೀಡಿತು. ಈಗಲೂ ಅದು ಮುಂದುವರೆಯುತ್ತಿದೆ.

ಕನ್ನಡದಲ್ಲಿ ಮಕ್ಕಳ ಸಾಹಿತ್ಯ ರಚಿಸುವವರು ಈಗೀಗ ತುಸು ಹೊಸ ಗಾಳಿಯನ್ನು ಉಸಿರಾಡುತ್ತಿದ್ದು ವಿರಳವಾಗಿಯಾದರೂ ಫ್ಯಾಂಟಸಿ ಸೃಷ್ಟಿಯೆಡೆಗೆ ಹೊರಳುತ್ತಿದ್ದಾರೆ. ವೈಜ್ಞಾನಿಕ ಕತೆಗಳು ಎನ್ನುವ

ಪ್ರತ್ಯೇಕ ಪ್ರಕಾರ ಹಾಗೆ ನೋಡಿದರೆ ಪ್ರಬುದ್ಧ ಓದುಗರನ್ನು ತಲುಪುತ್ತಾ ಕನ್ನಡದಲ್ಲೂ ತುಸು ದಾರಿ ಕ್ರಮಿಸಿದೆ. ಮಕ್ಕಳ ಜಗತ್ತಿನಲ್ಲೂ ಹಿರಿಯ ಸಾಹಿತಿಗಳಾದ 'ರಾಜಶೇಖರ ಭೂಸನೂರಮಠ' ಅಂಥವರ ಪ್ರಯತ್ನದಿಂದ ಮುನ್ನಲೆಗೆ ಬಂದಿದೆ. ಕನ್ನಡದಲ್ಲಿನ ಮಕ್ಕಳ ಸಾಹಿತ್ಯದಲ್ಲಿ ತಂತ್ರಜ್ಞಾನದ ಬೆಳವಣಿಗೆಯನ್ನು ನಾವು ಈ ಕೆಳಗಿನ ಬಗೆಯಲ್ಲಿ ವಿಭಾಗಿಸಿಕೊಂಡು ಅಧ್ಯಯನಿಸಿವುದು ಸೂಕ್ತವೆನ್ನಿಸುತ್ತದೆ.

೧ ತಂತ್ರಜ್ಞಾನದ ಸಾಧ್ಯತೆಯಲ್ಲೇ ರೂಪುಗೊಂಡ ಕೃತಿಗಳ ಅಧ್ಯಯನ

೨ ಈಗಾಗಲೇ ಮಕ್ಕಳಿಗೆ ಸ್ವತಂತ್ರವಾಗಿ ತಲುಪುತ್ತಾ ಬಂದಿರುವ ತೋಂಡೀ ಮಾಧ್ಯಮದ, ಹಾಗೂ ಸಾಹಿತ್ಯ ಜಗತ್ತಿನಲ್ಲಿ ಓದಿನ ಕೃತಿಗಳಾಗಿ ಕಾಣಿಸಿಕೊಂಡು ನಂತರ ತಂತ್ರಜ್ಞಾನದ ಸಾಧ್ಯತೆಯಲ್ಲಿ ಅರಳಿದವು. ಎನ್ನುವ ಎರಡು ಗುಂಪುಗಳಲ್ಲಿ ಇಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

೧. ಮಿಕಿಮೌಸ್, ಡೊನಾಲ್ಡ್ ಡಕ್ ಅಂಥ ಪುಟ್ಟ ಪುಟ್ಟ ಪಾತ್ರಗಳಿಂದ ಹಿಡಿದು ಇಂದಿನ ಸ್ಪೈಡರ್ ಮ್ಯಾನ್, ಬ್ಯಾಟ್‌ಮಾನ್‌ದಂಥ ಕೃತಿಗಳವರೆಗೆ ಇವುಗಳದೇ ಒಂದು ಲೋಕ. ಇವೆಲ್ಲಾ ತಂತ್ರಜ್ಞಾನದ ಸಾಧ್ಯತೆಯಲ್ಲಿ ವಿಶೇಷವಾಗಿಯೇ ಸೃಷ್ಟಿಗೊಂಡವು. ಆ ಹಿನ್ನಲೆಯಿಲ್ಲದಿದ್ದರೆ ಇವಕ್ಕೆ ಬೇರೆ ಅಸ್ತಿತ್ವ ಇಲ್ಲ ಎನ್ನುವಷ್ಟರ ಮಟ್ಟಿಗೆ ಇವು ಅವಿನಾಭಾವ ಹೊಂದಿವೆ. ಮಿಕಿಮೌಸ್ ಆಗಲಿ, ಡೋನಾಲ್ಡ್‌ಡಕ್ ಆಗಲಿ ನಾವು ದೃಶ್ಯ ಮಾಧ್ಯಮದಲ್ಲಿ ನೋಡಿಯೇ ಆ ಪಾತ್ರದ ಚಹರೆಗಳನ್ನು ಕಂಡುಕೊಳ್ಳಬೇಕು. ಅದೊಂದು ಇಲಿಯೋ, ಒಂದು ಬಾತೋ ಆಗಿ ಅಲ್ಲ. ಟಾಮ್ ಮತ್ತು ಜೆರ್ರಿಯ ಓಡಾಟ, ಪರಸ್ಪರ ಮೇಲಾಟ ದೃಶ್ಯ ಪರದೆಯಲ್ಲೇ ನೋಡಬೇಕು, ಅದೂ ಅನಿಮೇಷನ್ ಮಾಧ್ಯಮದಲ್ಲೇ ಪರಿಭಾವಿಸೊಳ್ಳಬೇಕು. ಹೀಗೆ ಹಲವಾರು ವಿಶಿಷ್ಟ ಪಾತ್ರಗಳು, ವಿಶಿಷ್ಟ ಕಥಾ ಹಂದರಗಳು ಈ ತಾಂತ್ರಿಕತೆಯ ಸಾಧ್ಯತೆಗಳಲ್ಲಿಯೇ ಜನ್ಮ ತಳೆದವು. ಇವಕ್ಕೆ ಬರಹದ ಕತೆಗಾರನಂತೆ ಕೇವಲ ಕತೆಯ ಒಂದು ಹೊಳಹು ಸಾಕಾಗದು, ಅಲ್ಲಿ ದೃಶ್ಯವಾಗಿ ಕಂಡುಕೊಳ್ಳುವ ಸಾಧ್ಯತೆಯನ್ನೂ ಅಗತ್ಯವಾಗಿ ಪರಿಭಾವಿಸಿಕೊಳ್ಳಬೇಕಾಗುತ್ತದೆ.

ಮಕ್ಕಳ ಲೋಕದಲ್ಲಿ ಈಗಾಗಲೇ ಓದಿನ ಮಾಧ್ಯಮವಾಗಿ ಪ್ರಚುರವಾಗಿರುವ ಜಂಗಲ್ ಬುಕ್, 'ಕ್ರಾನಿಕಲ್ಸ್ ಆಫ್ ನಾರ್ನಿಯಾ', 'ಆಲೀಸ್ ಇನ್ ವಂಡರ್‌ಲ್ಯಾಂಡ್', 'ವಿನಿ ಪೂಹಾ', 'ಹ್ಯಾರಿ ಪಾಟರ್', 'ನಾಡಿ' ಅಂಥ ಕೃತಿಗಳ ದೊಡ್ಡ ಲೋಕ ನಮ್ಮ ಕಣ್ಣಮುಂದಿದೆ. ಇವು ಓದಿನಲ್ಲಿ ತಮ್ಮ ಸಾಧ್ಯತೆಗಳನ್ನೆಲ್ಲ ಆಗಲೇ ಕಾಣಿಸಿಕೊಂಡಿವೆ. ಹಾಗಾಗಿಯೂ ಇವು ದೃಶ್ಯ ಮಾಧ್ಯಮದ ಕೆಲವೆಲ್ಲ ಸಾಧ್ಯತೆಗಳಿಂದ ಮತ್ತೆ ಮತ್ತೆ ಹೊಸದಾಗಿ ಅರಳಿ ನಿಂತಿರುವುದು ಗೋಚರಿಸುತ್ತದೆ.

ಡಾ. ಡೂಲಿಟಲ್ ಕೃತಿ ಒಂದು ಅಪರೂಪದ ಫ್ಯಾಂಟಸಿಯಾಗಿ ಓದಿನ ಮಾಧ್ಯಮದಲ್ಲಿ ತೆರೆದುಕೊಂಡಿದೆ. ಆದರೆ ಅದು ಸಿನಿಮಾ ಆಗಿ ಡಿಜಿಟಲ್ ಸಾಧ್ಯತೆಗಳನ್ನು ಕಂಡುಕೊಂಡಮೇಲೆ ಅದರ ಚಲನೆ ಮತ್ತೊಂದು ಏರುಗತಿಯೊಂದನ್ನು ಕಂಡಿತು. ಅಲ್ಲಿ ಡೂ ಲಿಟಲ್ ಡಾಕ್ಟರ್ ಪ್ರಾಣಿ ಪಕ್ಷಿಗಳ ಲೋಕದಲ್ಲಿಯೇ ತನ್ನನ್ನು ಕಂಡುಕೊಂಡ ಪ್ರಸಂಗ ಕತೆಯುದ್ದಕ್ಕೂ ಅದು ಈ ತಂತ್ರಜ್ಞಾನದ

ಸಾಧ್ಯತೆಯಲ್ಲಿ ಗುಂಗು ಹಿಡಿಸುವ, ರಂಜನೀಯವಾಗಿ ನೋಡುಗರನ್ನು ಮುಳುಗಿಸಿಬಿಡುವಂತೆ ರೂಪುಗೊಂಡಿದೆ. ಇದನ್ನು ಈ ಬಗೆಯ ಸಾಧ್ಯತೆಗಳಲ್ಲದೆ ಇನ್ನು ಹೇಗೆ ಕಂಡುಕೊಳ್ಳಲು ಸಾಧ್ಯ?. ಬಹು ಮುಖ್ಯವಾಗಿ ಪ್ರಾಣಿ ಲೋಕ ಇರುವಾಗ ಈ ಬಗೆಯ ಡಿಜಿಟಲ್ ತಂತ್ರಜ್ಞಾನವೇ ಆಸರೆಗೆ ಬರಬೇಕು, ಬೇರೆ ದಾರಿ ಇರುವುದಿಲ್ಲ.

ಕುವೆಂಪು ಅವರಿಗೆ ಸ್ಫೂರ್ತಿಯಾದ ಕಿಂದರಿಜೋಗಿಯ ಮೂಲ ಕಥೆ ಮೊದಲೊಮ್ಮೆ ನಿಜವಾದ ಇಲಿಗಳನ್ನು ಬಳಸಿಕೊಂಡು ಹಾಗೇ ಸಿನಿಮಾ ಆಗಿತ್ತು. ಆದರೆ ಈ ತಾಂತ್ರಿಕ ಸಾಧ್ಯತೆಗಳು ಬಂದಮೇಲೆ ಅದರ ಯಶಸ್ಸು ತುಂಬಾ ಸುಲಭವಾಯಿತು. ಎನಿಡ್ ಬ್ಲೈಟನ್‌ಳ 'ನಾಡಿ'ಯು ಹುಡುಗನೊಬ್ಬನ ಸುತ್ತಲಿನ ತೀರಾ ಸರಳವಾದ ಕೃತಿ ಸರಣಿಯಾಗಿ ಟಿವಿ ಚಾನಲ್‌ಗಳಲ್ಲಿ ನೋಡುಗರನೇಕರಿಂದ ಮೆಚ್ಚುಗೆ ಗಳಿಸಿತ್ತು. ಅಲ್ಲಿ ಅದನ್ನು ಮಕ್ಕಳಷ್ಟೇ ಅಲ್ಲ, ದೊಡ್ಡವರೂ ನೋಡಿ ಪ್ರಶಂಸಿದರು. ಹಾಗೆ ಅದು ನೋಡುಗರನ್ನು ಆವರಿಸಿಕೊಂಡು ಬಿಟ್ಟಿತು. ಹೀಗಾಗಿ ತಂತ್ರಜ್ಞಾನ ತಂದುಕೊಂಡಿರುವ ಸೌಲಭ್ಯಗಳಿಂದ ಅಪರೂಪವಾಗಿ, ಹೆಚ್ಚು ಸೊಗಸಾಗಿ ನಿರೂಪಿತವಾಗುವ ಕತೆಗಳು ಮಕ್ಕಳ ಜಗತ್ತಿನಲ್ಲಿ ಇಂದು ತಮ್ಮ ಸಾಧ್ಯತೆಗಳನ್ನು ತೋರಿಸಿವೆ. ಕ್ರಾನಿಕಲ್ಸ್ ಆಫ್ ನಾರ್ನಿಯಾ ಪುಸ್ತಕದಿಂದ ಹುಟ್ಟಿಸಿಕೊಂಡ ಪ್ರಚುರತೆಗಿಂತ ಸಿನಿಮಾ ಆಗಿ ಕಂಡುಕೊಂಡ ಪ್ರೇಕ್ಷಕರ ಸಂಖ್ಯೆ ಬಲು ದೊಡ್ಡದಿದೆ.

ಭಾರತದ್ದೇ ಆದ ಬಾಲನಾಗಮ್ಮದಂಥ ಅತ್ಯಂತ ಕುತೂಹಲ ಹುಟ್ಟಿಸಬಲ್ಲ, ಮಾಂತ್ರಿಕ ಸಂಗತಿಗಳನ್ನೊಳಗೊಂಡ ಜನಪದ ಕತೆ ಈ ಬಗೆಯ ತಾಂತ್ರಿಕತೆಯಲ್ಲಿ ಬಹು ವಿಶಿಷ್ಟವಾಗಿ ಅರಳುವ ಸಾಧ್ಯತೆಗಳಿದ್ದೇ ಇರುತ್ತವೆ. ಅದರಲ್ಲೂ ಕನ್ನಡದ ಮಕ್ಕಳಿಗೆ ಈ ಜನಪದ ಕತೆಗಳೆಲ್ಲಾ ಹಿಡಿಸುವುದು ಅಲ್ಲಿನ ಹಳೆಯ ಮೌಲ್ಯದ ಕಾರಣಕ್ಕಲ್ಲವೇ ಅಲ್ಲ. ಅಲ್ಲಿನ ಕುತೂಹಲದ, ಮೈನವಿರೇಳಿಸುವ, ಮಾಟ ಮಂತ್ರದ ಜಾದೂ ಸಂಗತಿಗಳಿಗೆ. ಅದನ್ನು ಈ ತಂತ್ರಜ್ಞಾನ ಪರಿಣಾಮಕಾರಿಯಾಗಿ ಸೃಷ್ಟಿಸಬಲ್ಲದು. ಇದು ಪುಸ್ತಕಗಳಿಗಿಂತ ಬಹುವಾಗಿಯೇ ಆಕರ್ಷಣೀಯವಾಗಿರಲೂ ಬಲ್ಲುದು. ಕಪ್ಪು ಬಿಳುಪು, ಹೊಸ ತಂತ್ರಜ್ಞಾನದ ಆಸರೆಯಿಲ್ಲದೆ ಬರುತ್ತಿದ್ದ ಸಿನಿಮಾಗಳಿಗಿಂತ ತ್ರೀಡಿ ತಂತ್ರಜ್ಞಾನದಲ್ಲಿ ಉತ್ತಮ ಮತ್ತು ಗುಣಾತ್ಮಕವಾಗಿ ಮೂಡಿಬರುತ್ತಿದೆ.

ಇತ್ತೀಚೆಗೆ ಅತ್ಯಂತ ಜನಪ್ರಿಯವಾದ, ಭಾರತದಲ್ಲಿ ಬಾಲಿವುಡ್ ಮುಂದೆ ಎದೆಯುಬ್ಬಿಸಿನಿಂತ, 'ಬಾಹುಬಲಿ' ಚಿತ್ರವನ್ನೇ ಒಂದು ಉದಾಹರಣೆಯಾಗಿ ನೀಡಬಹುದು. ಇದೊಂದು ನಮ್ಮ ಜನಪದ ಕತೆಗಳ, ಚರ್ವಿತ ಚರ್ವಣದ ಕಥಾ ಹಂದರವೇ. ಆದರೆ ಅದು ತಂತ್ರಜ್ಞಾನದ, ಡಿಜಿಟಲ್ ಸಾಧ್ಯತೆಗಳನ್ನು ಬಳಸಿಕೊಂಡು ಎಷ್ಟೊಂದು ಅಚ್ಚರಿಯಿಂದ ನೋಡುವಂತೆ ಮಾಡಿತು ಎನ್ನುವುದು ಗಮನಿಸಬೇಕಾದ ಸಂಗತಿ. ಮಕ್ಕಳ ಕಥಾಲೋಕ ಬರಹದ, ಪುಸ್ತಕಗಳಾಚೆ ಹುಟ್ಟಿಕೊಳ್ಳುವುದು, ತನ್ನದೇ ಆದ ಆಕೃತಿಗಳನ್ನು ಕಂಡುಕೊಳ್ಳುವುದು ಈ ಬಗೆಯಲ್ಲಿ.

ಕನ್ನಡದಲ್ಲಿ ಇದುವರೆಗೆ ಅನಿಮೇಷನ್‌ಗೆ ಅಳವಡಿಸಲ್ಪಟ್ಟಿರುವ ಕೃತಿಗಳನ್ನು ಸ್ವತಂತ್ರ ಕೃತಿಗಳು ಹಾಗೂ ಡಬ್ಬಿಂಗ್ ಆಗಿರುವ ಕೃತಿಗಳು ಎಂದು ವಿಭಾಗಿಸಿ ನೋಡಬಹುದು. ಕನ್ನಡದಲ್ಲಿ ಸ್ವತಂತ್ರವಾಗಿ ಅನಿಮೇಷನ್ ಆಗಿರುವ ಕೃತಿಗಳು ಯಾವುದೂ ಈಚಿನ ಲೇಖಕರ ಸ್ವತಂತ್ರ ರಚನೆಗಳಲ್ಲ. ಕನ್ನಡದ ಜನಪದ ಕಥೆಗಳು ಪಂಚತಂತ್ರ ಕತೆಗಳು, ಈಸೋಪನ ನೀತಿ ಕಥೆಗಳು, ಅಕ್ಬರ್ ಮತ್ತು ಬೀರಬಲ್ಲರ ಕಥೆಗಳು, ಅಲಿಬಾಬಾ ಮತ್ತು ೪೦ ಕಳ್ಳರ ಕತೆಗಳು, ತೆನಾಲಿ ರಾಮನ ಕತೆಗಳು ಇಂಥವು ಟಿವಿ ಸೀರಿಯಲ್‌ಗಳಾಗಿ ಟೂಡಿಯಲ್ಲಿ ಸಿದ್ಧಗೊಂಡವು. ಇವು ಯೂಟ್ಯೂಬ್‌ನಲ್ಲಿ ಸಿಗುವ, ಇಂದಿನ ಎಂಡ್ರಾಯ್ಡ್ ಮೊಬೈಲ್‌ಗಳಲ್ಲಿ ಅಂಗೈಯಗಲದಲ್ಲೇ ದಕ್ಕತೊಡಗಿರುತ್ತದೆ.

ಈಗಾಗಲೇ ಸೃಷ್ಟಿಗೊಂಡಿರುವ ತೀರಾ ವಿರಳವಾದ ಕೃತಿಗಳನ್ನು ಬಿಟ್ಟರೆ ತುಸು ವಿಭಿನ್ನವಾದ ಸಾಧ್ಯತೆಗಳನ್ನು ತೋರಿಸಿಕೊಂಡುವೇ ಹೊರತು ಅಲ್ಲೆಲ್ಲೂ ಪರಿಣತಿ ಕಾಣುವಂಥವಲ್ಲ. ಉದಾಹರಣೆಗೆ ಕನ್ನಡದ ಟಿವಿ ಚಾನಲ್‌ಗಳಲ್ಲಿ ಕಾಣಿಸಿದ ಪಂಚತಂತ್ರ ಉಲ್ಲೇಖಿಸಬಹುದು. ಇಲ್ಲಿ ಟುಡಿ ತಂತ್ರಜಾನದ ಬಳಕೆ ಇದ್ದರೂ ಅದು ನಮ್ಮ ಗೊಂಬೆಯಾಟಗಳ ಮಾದರಿಯಾಗಷ್ಟೇ ಉಳಿದಿದೆಯೇ ವಿನಃ ಯಾವ ಸಾಧ್ಯತೆಗಳನ್ನೂ ಒಳಗೊಂಡಿಲ್ಲ. ತಂತ್ರಜ್ಞಾನವನ್ನೇ ವಿಶೇಷವಾಗಿ ಅಪೇಕ್ಷಿಸುವ, ಅಲ್ಲಿನ ಸಾಧ್ಯತೆಗಳ ಹಿನ್ನೆಲೆಯಲ್ಲೇ ಸೃಷ್ಟಿಗೊಳ್ಳುವ ಕೃತಿಗಳು ಕನ್ನಡದಲ್ಲಿ ಇದುವರೆಗೂ ಕಂಡಿಲ್ಲ.

೨. ಚ.ಹ.ರಘುನಾಥರ "ಪಟ್ಟಲಕ್ಷ್ಮಿ ಕತೆಗಳು' ಕೃತಿ ಓದಿನಲ್ಲಿಯೇ ಅನಿಮೇಷನ್ ಆಗಿ ನೀಡಬಹುದಾದ ಎಲ್ಲಾ ಲಕ್ಷಣಗಳು ಹೊಂದಿರುವ ಕೃತಿಯಾಗಿದೆ. ಕನ್ನಡದಲ್ಲಿ ಈ ರೀತಿಯ ಕೃತಿ ರಚನೆ ತೀರಾ ಹೊಸದು. ಈ ಕೃತಿಯಲ್ಲದೇ ಆನಂದ ಪಾಟೀಲರ ಅಜ್ಜಿಗೊಂದು ಕೌದಿ..... ಕಥನ ಕವನ ತನ್ನ ಲಯ ಮತ್ತು ಸಾಹಿತ್ಯದ ಸೊಗಸುಗಾರಿಕೆಯಿಂದ ನೋಡು ಕಾವ್ಯ ಸಾಧ್ಯತೆಯನ್ನು ಒಳಗೊಂಡಿದೆ. ಅವರದೇ ಇನ್ನೊಂದು ಇತ್ತೀಚಿನ ತೀರಾ ದೀರ್ಘ ಕಾದಂಬರಿ....ಇದೂ ಕೂಡ ಈ ಬಗೆಯ ಸಾಧ್ಯತೆಗಳಿಂದ ಕೂಡಿದೆ. ಅವರ ಪುಟ್ಟ ಪುಟ್ಟ ರಚನೆಗಳು ಹಲವು ಪ್ರಾಣಿಗಳನ್ನು, ಪಕ್ಷಿಗಳನ್ನು ಹೊಂದಿದ್ದು ಅವು ಈ ಬಗೆಯ ತಂತ್ರಜ್ಞಾನದಲ್ಲಿ ಅರಳುವ ಸಾಧ್ಯತೆಯನ್ನು ಹೇಳುತ್ತವೆ.

ಡಿಸೋಜ ನಾ. ಅವರ 'ಹಕ್ಕಿಗೊಂದು ಗೂಡುಕೊಡಿ' ಕೃತಿ ಡಿಜಿಟಲ್ ಮಾಧ್ಯಮದಲ್ಲಿ ಸೊಗಸಾಗಿ ನಿರೂಪಣೆಗೊಳ್ಳಬಹುದು. ಇತ್ತೀಚಿನ ಕೆ.ಮಾದುಪ್ರಸಾದ ಹುಣಸೂರು ಅವರ 'ತೊಟ್ಟಿಲಗೊಂಬೆ' ಇದೇ ಬಗೆಯ ಸಾಧ್ಯತೆಗಳಿಗೆ ಸರಿಹೊಂದುತ್ತದೆ. ನೀಲಾಂಬರಿ ಅವರ ಕೃತಿಗಳು ಕೂಡ ಇವೆ. ತುಸುವೇ ಬಂದಿರುವ ವೈಜ್ಞಾನಿಕ ಕತೆಗಳಂತೂ ಇದ್ದೇ ಇವೆ.

೮.೬. ಡಬ್ಬಿಂಗ್ ಸಿನಿಮಾಗಳು ಮತ್ತು ಕನ್ನಡ ಸಾಹಿತ್ಯ

ಕನ್ನಡದಲ್ಲಿ ಅನಿಮೇಷನ್ ಆಗಿರುವ ಸಿನಿಮಾಗಳು, ವೀಡಿಯೋಗಳ ಡಬ್ಬಿಂಗ್ ಆಗಿ ಲಭ್ಯವಾಗಿದ್ದರೂ ಭಾಷೆ ಕನ್ನಡದಲ್ಲಿ ಇದ್ದುದರಿಂದ ಅವು ಕನ್ನಡದ ಕತೆಗಳಾಗಿ ಕನ್ನಡದ ಮಕ್ಕಳಿಗೆ ಮುಟ್ಟುತ್ತಿವೆ. ಹಾಗೆ ಬಂದವು ಥಂಬೆಲಿನ(ಡೆನ್ಮಾರ್ಕ್ ಲೇಖಕ-ಹ್ಯಾನ್ಸ್ ಕ್ರಿಸ್ಟಿಯನ್ ಆ್ಯಂಡರ್‌ಸನ್),

ರುಪೆಂಜಲ್-ಜರ್ಮನಿಯ ಜನಪದ ಕಥೆ-ಗ್ರಿಮ್ ಸಹೋದರರು), ಸಿಂಡ್ರೆಲ್ಲಾ(ಚಾರ್ಲ್ಸ್ ಪೆರಾಲ್ಟ್-ಫ್ರೆಂಚ್ ೧೬೯೭), ಆಲಿಸ್ ಇನ್ ವಂಡರ್ ಲ್ಯಾಂಡ್(ಲೂಯಿ ಕೆರೋಲ್-ಇಂಗ್ಲಂಡ್). ಇವು ಕನ್ನಡದ ಮಕ್ಕಳಿಗೆ ಕನ್ನಡದ ಕೃತಿಗಳೇ ಎನ್ನುವಂತೆ ಮೆಚ್ಚುಗೆಯಾಗಿವೆ. ಯೊಟೂಬ್‌ನಲ್ಲಿ ಲಕ್ಷಾಂತರ ಜನರು ಇವುಗಳನ್ನು ವೀಕ್ಷಿಸಿದ್ದಾರೆ. ಕನ್ನಡಿಗರು ತೊಡಗಿಕೊಂಡಾಗ ಭಾರತದ ಪುರಾಣದ ಸರಕನ್ನು ಬಲು ನೆಚ್ಚಿಕೊಳ್ಳುವುದರಿಂದ ಛೋಟಾಭೀಮ್, ಹನುಮಾನ್, ಕೃಷ್ಣ ಇಂಥ ಸರಣಿಗಳು ಹಲವೆಲ್ಲ ಹೊಸಗಾಲದ ಅಪೇಕ್ಷೆಗಳನ್ನಿಟ್ಟುಕೊಂಡು ರೂಪಿತವಾಗಿದ್ದು ಇಂದು ಭಾರತಿಯ ಚಾನಲ್‌ಗಳಲ್ಲಿ ಭರಾಟೆಯಿಂದ ಪ್ರಸಾರ ಕಾಣುತ್ತಿವೆ.

ಬದಲಾದ ಕಾಲ ಘಟ್ಟದಲ್ಲಿ ಓದುಗರ ಆಲೋಚನೆ, ಬೇಡಿಕೆಗಳೂ ಬದಲಾಗುತ್ತಿರುತ್ತವೆ. ಲೇಖಕ ತನ್ನ ಬರಹದ ಆಶಯವನ್ನಲ್ಲದಿದ್ದರೂ ಮಾಧ್ಯಮವನ್ನಾದರೂ ವಿಶಿಷ್ಟವಾಗಿ ಬಳಸಿಕೊಳ್ಳುವ ಅನಿವಾರ್ಯತೆ ಇದೆ. ಪುಸ್ತಕ ಓದುವವರು ಕಡಿಮೆಯಾಗಿದ್ದಾರೆ ಎನ್ನುವುದಕ್ಕಿಂತ ಸುಲಭವಾಗಿ ಸಿಗುವ ಮೊಬೈಲ್‌ನಲ್ಲೇ ಸಾಹಿತ್ಯ ಹಂಚುವ ಕಾರ್ಯವನ್ನು ಲೇಖಕ ಅಪೇಕ್ಷಿಸುತ್ತಿದ್ದಾನೆ. ಇ-ಕಾಲದ ಮಕ್ಕಳು ಪುಸ್ತಕಗಳಿಗಿಂತ ಗ್ಯಾಜೆಟ್‌ಗಳನ್ನು ಹೆಚ್ಚು ಅವಲಂಬಿಸಿರುವುದರಿಂದ ಮಕ್ಕಳು ಪುಸ್ತಕಗಳನ್ನು ಓದುವುದಿಲ್ಲ ಎಂದು ದೂರುವುದಕ್ಕಿಂತ ಅವರ ನೋಡು ಓದುವಿಕೆಯನ್ನು ಪೋಷಕರು, ಶಿಕ್ಷಕರು ಸ್ವಾಗತಿಸಬೇಕಿದೆ.

ಕನ್ನಡದ ಲೇಖಕರು ತಮ್ಮ ಕತೆಗಳನ್ನು ಅನಿಮೇಷನ್ ಕೃತಿಯಾಗಿ ಪರಿವರ್ತಿಸುವಲ್ಲಿ ಇಲ್ಲವೇ ಯೊಟೂಬ್ ಪುಸ್ತಕವಾಗಿ ನೀಡುವ ಅನಿವಾರ್ಯತೆಯನ್ನು ತಂತ್ರಜ್ಞಾನದ ಸಂದರ್ಭ ಒತ್ತಿ ಹೇಳುತ್ತಿದೆ. ಅದರಲ್ಲೂ ಕನ್ನಡದ ಫ್ಯಾಂಟಸಿ ಕೃತಿಗಳೂ ಈ ಗ್ರಾಫಿಕ್ಸ್ ಯುಗದಲ್ಲಿ ಅನಿಮೇಷನ್ ಇಲ್ಲವೇ ಸಿನಿಮಾ ಸ್ವರೂಪವನ್ನು ಪಡೆದುಕೊಂಡರೆ ಬಹು ಜನರನ್ನು ಮುಟ್ಟಿದಂತಾಗುತ್ತದೆ.

ಇಂದು ಕೆಲ ಲೇಖಕರು ಪುಸ್ತಕದ ಜೊತೆಗೆ ಡಿವಿಡಿಯನ್ನೂ ನೀಡುತ್ತಿದ್ದಾರೆ. ಆಡಿಯೋ ಫಾರ್ಮೆಟ್‌ನ್ನೂ ನೀಡುತ್ತಿದ್ದಾರೆ. ಮತ್ತೂರು ಸುಬ್ಬಣ್ಣ ಅವರ ತಮ್ಮಣ್ಣ ಮತ್ತು ಇರುವೆ ರಾಜಕುಮಾರಿ ಕತೆಯನ್ನು ಅವರು ಪುಸ್ತಕದೊಂದಿಗೆ ಅವರೇ ಕತೆಯನ್ನೂ ಹೇಳಿರುವ ಆಡಿಯೋ ಸಿಡಿಯನ್ನೂ ನೀಡುವ ಪ್ರಯತ್ನ ಮಾಡಿದ್ದಾರೆ.

೮.೭ ತಂತ್ರಜ್ಞಾನದ ಮಿತಿಗಳು

ತಂತ್ರಜ್ಞಾನ ಮಕ್ಕಳಿಗೆ ಬೇಕಿದ್ದೆಲ್ಲವೂ ಕ್ಷಣಾರ್ಧದಲ್ಲಿ ತಂದು ಮುಂದಿರಿಸುತ್ತದೆ. ಯಾವ ದೇಶದ, ಪ್ರಕಾರದ ಸಾಹಿತ್ಯವಾಗಿರಲಿ ಬರೀ ಮಾತಿನಲ್ಲಿ ಕೇಳಿದರೆ ಸಾಕು ತತ್‌ಕ್ಷಣ ಪ್ರತ್ಯಕ್ಷ ಮಾಡಿಬಿಡುವಷ್ಟು ಮಾಯಾಜಾಲವನ್ನು ಇಂದಿನ ಗೂಗಲ್ ಮತ್ತು ಯೊಟೂಬ್‌ಗಳು ಸೃಷ್ಟಿ ಮಾಡಿವೆ. ಇದು ಮಕ್ಕಳ ಸಾಹಿತ್ಯವನ್ನು ಲೇಖಕನಿಂದ ಅದರ ಆದ್ಯ ಓದುಗನಾದ ಮಗುವಿಗೆ ಅತಿ ತುರ್ತಾಗಿ ಮುಟ್ಟಿಸಲು ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತದೆ. ಕೃತಿಯೊಂದನ್ನು ಪುಸ್ತಕದ

ಮೂಲಕ ಓದುವುದಕ್ಕೂ ವೀಡಿಯೋದಲ್ಲಿ ನೋಡುವುದಕ್ಕೂ ಬಹಳ ವ್ಯತ್ಯಾಸವಿರುತ್ತದೆ. ಕತೆಯೊಂದನ್ನು ಓದಿದಾಗ, ಕೇಳಿದಾಗ ಅನುಭವಿಸುವ ಆನಂದದ ಉತ್ಕಂಠತೆಯನ್ನು, ಏಕಾಗ್ರತೆಯನ್ನು ಅದನ್ನು ಮೊಬೈಲ್ ಅಥವಾ ಟಿ.ವಿಯಲ್ಲಿ ನೋಡಿದಾಗ ಅದರ ಅರ್ಧದಷ್ಟು ತೃಪ್ತಿಯನ್ನು ಕಡಿತಗೊಳಿಸಿದಂತೆ ಆಗುವ ಸಂಭವವಿರುವ ಸಾಧ್ಯತೆಯಿದೆ. ಇದನ್ನು ಹೊಸಗಾಲದ ಮಕ್ಕಳೇ ನಿರ್ಧರಿಸಬೇಕಾಗುತ್ತದೆ.

ಲೇಖಕ–ಓದುಗನ ಮಧ್ಯೆ ಇದ್ದ ಸಾವಯವ ಸಂಬಂಧ ಮೊಬೈಲ್, ಕಂಪ್ಯೂಟರ್ ಮೂಲಕ ನೋಡುವ ವೀಡಿಯೋ ಸಿನಿಮಾದೊಂದಿಗೆ ಇರಲಾರದು. ಇದ್ದರೂ ಅದು ಬರೀ ನಿಷ್ಕ್ರಿಯ ನೋಡುಗನನ್ನಾಗಿ ಮಗುವನ್ನು ಬದಲಿಸಿಬಿಡುತ್ತದೆ. ಯಾವುದೇ ಪ್ರತಿಕ್ರಿಯೆ, ಉದ್ಗಾರಗಳಿಗೆ ಪ್ರಶಂಸೆಗಳಿಗೆ, ಟೀಕೆಗಳಿಗೆ ಅವಕಾಶವಿರುವುದಿಲ್ಲ ಎಂದೆಲ್ಲ ಸಾಮಾನ್ಯ ಗ್ರಹಿಕೆ ಇದೆ. ಆದರೆ ಹೊಸಗಾಲದ ಮನಸ್ಸುಗಳ ಅನುಭವಗಳು ವಿಭಿನ್ನವಾಗಿರುತ್ತವೆ ಎನ್ನುವುದೂ ಅಷ್ಟೇ ಸತ್ಯ. ಇಂದಿನ ತರುಣರ, ಅದರಲ್ಲೂ ಮಕ್ಕಳ ಲೋಕ ಹೊಸದೇ ಆದ ಅನುಭವಗಳನ್ನು ಹೇಳುತ್ತಿದೆ.

ಫ್ಯಾಂಟಸಿ ಕತೆಯೊಂದನ್ನು ಓದುವ, ಕೇಳುವ ಮತ್ತು ನೋಡುವುದರ ಸಂದರ್ಭದಲ್ಲಿ ಮಕ್ಕಳಲ್ಲಿ ಉಂಟಾಗಬಹುದಾದ ಬಹುದೊಡ್ಡ ಮೌಲ್ಯ ಅಥವಾ ಅವರಲ್ಲಿ ಬೆಳೆಸಬಹುದಾದ ಸಾಮರ್ಥ್ಯವೆಂದರೆ; ಕಲ್ಪನಾಶಕ್ತಿ. ಅವರ ಮನಸ್ಸಿನ ಒಳಗೆ ಇರುವ ಅನಂತ ಕಲ್ಪನಾಶಕ್ತಿ ಯಾರೂ ಎಣಿಸದ್ದು, ನಿಲುಕದ್ದು. ಮಗು ಕೇಳುವ–ಓದುವ ಪ್ರಕ್ರಿಯೆಯಲ್ಲಿ ತನ್ನತಾನೇ ಬೆಳೆಸಿಕೊಳ್ಳುವ ಸಾಮರ್ಥ್ಯ ಅಥವಾ ಫ್ಯಾಂಟಸಿ ಓದಿನ ಪ್ರತಿಫಲವೂ ಹೌದು.

ಕತೆಯೊಂದನ್ನು ಮಗುವು ಕೇಳುವ ಸಂದರ್ಭದಲ್ಲಿ 'ಏಳು ಕುದುರೆಯ ಮೇಲೆ ಬಂಗಾರದ ಧ್ವಜವನ್ನು ಹೊಂದಿರುವ, ವಜ್ರದ ಕಿರೀಟವನ್ನು ಧರಿಸಿ ಬರುವ ರಾಜಕುಮಾರನ ತೇಜಸ್ಸು ಸುತ್ತ ಮೂರು ಲೋಕಗಳನ್ನು ಮುಟ್ಟಿತು'. ಇದನ್ನು ಕೇಳಿದೊಡನೆಯೇ ಮಕ್ಕಳ ಕಲ್ಪನೆಯ ಚಾನಲ್ ಆನ್ ಆಗಿಬಿಡುತ್ತದೆ. ಅವರದೇ ಕಲ್ಪನೆಯ ರಾಜ ಅವನು ಛೋಟಾ ಭೀಮನೋ, ಲಿಟಲ್ ಕೃಷ್ಣನೋ ಅಥವಾ ಶಕ್ತಿಮಾನ್, ಬ್ಯಾಟ್‌ಮ್ಯಾನ್ ಯಾರೋ ಗೊತ್ತಿಲ್ಲ. ಅಥವಾ ಅದೆಲ್ಲವನ್ನೂ ಮೀರಿದ ರೂಪವೊಂದನ್ನು ತನ್ನ ಕಣ್ಣ ಮುಂದೆ ತಂದುಕೊಳ್ಳುತ್ತದೆ. ಆದರೆ ಈ ಸಾಧ್ಯತೆ ತಂತ್ರಜ್ಞಾನದ ಮೂಲಕ ವೀಕ್ಷಿಸಿದ ಸಿನಿಮಾ, ವೀಡಿಯೋವನ್ನು ನೋಡುವಾಗ ಇರುವುದಿಲ್ಲ. ಅವನ ಕಣ್ಣ ಮುಂದೆಯೇ ನಿರ್ದೇಶಕನ ಮನದೊಳಗೆ ಮೂಡಿದ ರಾಜನ ಚಿತ್ರವೊಂದು ದೃಶ್ಯದಲ್ಲಿ ಕಣ್ಣಿಗೆ ಕಾಣುತ್ತದೆ. ಅದು ಮಗುವಿನ ಮನಸ್ಸಿನಲ್ಲಿ ಮೂಡಬಹುದಾದ ರೂಪಕ್ಕಿಂತ ತೀರಾ ತದ್ವಿರುದ್ಧ ಇಲ್ಲವೇ ಭಿನ್ನವಾಗಿರುತ್ತದೆ. ಮಗು ತನಗೆ ಇಷ್ಟವಿದ್ದರೂ, ಇಲ್ಲದೆಯೂ ಅಲ್ಲಿರುವುದನ್ನು ನಂಬಬೇಕಾದ ಅನಿವಾರ್ಯತೆ ಸೃಷ್ಟಿಯಾಗುತ್ತದೆ.

'ಸುಮ್ಮನೆ ಬಾಯಿ ತೆರೆದು ಪ್ರಶ್ನೆ ಕೇಳಿದರೆ ಉತ್ತರ ನೀಡುವ ಅಮೆಜಾನ್ ಎಕೋ ಎಂಬ ಪುಟ್ಟ ಸ್ಪೀಕರ್‌ವರೆಗೆ ತಂತ್ರಜ್ಞಾನ ಸಾಕಷ್ಟು ಬೆಳೆದಿದೆ.[೧೦] ಆದರೆ ಇದ್ಯಾವುದೂ ಸಹ ಪುಸ್ತಕದ ಓದು

ಎಂಬ ಸಂಸ್ಕೃತಿಗೆ ಸರಿಸಾಟಿಯಾಗಿ ಬೆಳೆದಿಲ್ಲ ಎನ್ನುವುದು ಒಂದು ತಲೆಮಾರಿನ ಮನೋಭಾವವಾಗಿದೆ. ಬರುವ ದಿನಗಳು ಇದನ್ನು ಇನ್ನೂ ಹೆಚ್ಚು ಹೆಚ್ಚು ತಿಳಿಗೊಳಿಸಲಿವೆ. ಹಾಳೆಯ ಬಳಕೆಯನ್ನೇ ಇಲ್ಲವಾಗಿಸುವ ಪರಿಸರದ ಅನಿವಾರ್ಯದ ಸಂಗತಿಗಳು ಮುಂದೆ ಬರಬಹುದು.

'ಪುಸ್ತಕದ ಓದು, ಓದುತ್ತಾ ಬೆಳೆಯುವ ಕೌತುಕ, ಕಲ್ಪನೆ, ನಾನು ಮತ್ತು ನನ್ನ ಪುಸ್ತಕವೆಂಬ ಮಾಯಾಲೋಕವೆಂಬ ಭಾವನೆ ಬೆಳೆಯಲು ಪುಸ್ತಕವೇ ಬೇಕು. ಪುಸ್ತಕಕ್ಕೆ ಇರುವ ಈ ಸಾಧ್ಯತೆಯನ್ನು ಯಾವ ತಂತ್ರಜ್ಞಾನವೂ ಒದಗಿಸಲಾರದು. ಓದುತ್ತಲೇ ಹೊಸದನ್ನು ಆಲೋಚಿಸುವ ಹೊಸ ರೀತಿಯಲ್ಲಿ ವ್ಯಾಖ್ಯಾನಿಸುವ 'ಓದಿನ ಜೊತೆಗೆ ಕಲ್ಪನಾಶಕ್ತಿ ಬೆರೆಸುವ ಸಾಮರ್ಥ್ಯ ಇರುವವರಿಗೆ ಅನುಭವದ ಮರುಹುಟ್ಟು ಮಾಡಬಲ್ಲ ತಾಕತ್ತು ಪುಸ್ತಕಕ್ಕಿದೆ'[೧೧] ಎನ್ನುವ ಅಭಿಪ್ರಾಯಗಳು ಈಗ ಮಾತ್ರ ಹೆಚ್ಚಾಗಿಯೇ ಕೇಳುತ್ತಿವೆ. ಇದೊಂದು ಬಗೆಯಲ್ಲಿ ಸಂಕರದ ಕಾಲಘಟ್ಟವೇ, ಬಲು ವೇಗವಾಗಿ ಸರಿಯುತ್ತಿರುವ ಕಾಲಘಟ್ಟವೂ ಹೌದು.

ಬದಲಾವಣೆ ಯಾವತ್ತೂ ಏಕಮುಖಿಯಾಗಿರುವುದಿಲ್ಲ. ಅದು ನಿರಂತರ ಚಲನಶೀಲವಾಗಿರುತ್ತದೆ. ಹಾಗೆ ಅದು ಜಂಗಮವಾಗಿದ್ದಾಗಲೇ ಅದು ಸಾಹಿತ್ಯದ ಘನತೆಯ ಸಾಣೆಕಲ್ಲಾಗಿ ಪಾತ್ರ ನಿರ್ವಹಿಸುತ್ತದೆ. ಇಂದಿನ ತಂತ್ರಜ್ಞಾನವೂ ಅದರ ಪ್ರಾಮುಖ್ಯತೆಯನ್ನು ಎಲ್ಲಾ ಕಾಲಕ್ಕೂ ಉಳಿಸಿಕೊಳ್ಳುತ್ತದೆ ಎಂದೇನಿಲ್ಲ. ಒಂದು ಕಾಲದಲ್ಲಿ ಟೂಡಿ ತಂತ್ರಜ್ಞಾನವೇ ಅದ್ಭುತ, ಹುಬ್ಬೇರಿಸುವಂತಾದ್ದು ಎನ್ನುವಂತ ಧೋರಣೆಯಿತ್ತು. ಈಗ ಅನಿಮೇಷನ್ ಕ್ಷೇತ್ರ ಟಿಡಿಯನ್ನೂ ದಾಟುತ್ತಿದೆ. ಹಾಗಾಗಿ ಮಕ್ಕಳ ಸಾಹಿತ್ಯ ಕೃತಿಗಳ ಈ ಪಲ್ಲಟವನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸುವ ಅಗತ್ಯವಿದೆ.

ಕೊನೆ ಟಿಪ್ಪಣಿಗಳು

೧. https://en.wikipedia.org/wiki/Technology ಪು. 01

೨. ಮುದ್ರಣ ಹೆಚ್ಚಿನ ಜನರಿಗಿನ್ನೂ ಮುಟ್ಟದ ಕಾಲದಲ್ಲಿ ರಾತ್ರಿ ಹಿರಿಯರು ಹೇಳುತ್ತಿದ್ದ ಕತೆಗಳು, ಪುರಾಣ, ಕಥಾ ವಾಚನ ಇತ್ಯಾದಿಗಳಲ್ಲಿ ಮಕ್ಕಳು ಭಾಗವಾಗಿರುತ್ತಿದ್ದರೇ ವಿನಾ ಕೇಂದ್ರವಾಗಿರುತ್ತಿರಲಿಲ್ಲ. ಅಲ್ಲಿನ ಚರ್ಚೆ, ವಿಚಾರ ಮಂಥನಗಳು ಮಕ್ಕಳ ಮುಂದೆಯೇ ನಡೆಯುತ್ತಿದ್ದರೂ ಬಹುತೇಕ ಮಕ್ಕಳ ವಯೋಮಾನ ಮೀರಿದ ಸಂಗತಿಗಳೇ ಅಲ್ಲಿ ಹಾದು ಹೋಗುತ್ತಿದ್ದವು. ಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡು ನಡೆಸುವ ಚಟುವಟಿಕೆಗಳು ಈಗೀಗ ಹೆಚ್ಚುತ್ತಿವೆ.

೩. ಗಿಳಿವಿಂಡು ಇದು ಧಾರವಾಡ ಆಕಾಶವಾಣಿಯಲ್ಲಿ ಅರವತ್ತರ ದಶಕದಲ್ಲಿ ತುಂಬಾ ಪ್ರಸಿದ್ಧವಾದ ಕಾರ್ಯಕ್ರಮ. ಕಾಕಾ, ಅಕ್ಕಮ್ಮಾ, ಸಣ್ಣಕ್ಕ ಪಾತ್ರಗಳು ಮಕ್ಕಳೊಂದಿಗೆ ಬೆರೆತು ಮೋಡಿ ಮಾಡಿದ್ದವು. ಆಕಾಶವಾಣಿಯ ಜಿ.ವಿ.ಹಿರೇಮಠರು ಕಾಕಾ ಆಗಿ, ಸುಶೀಲಾನಾಯಕ್ ಅವರು ಅಕ್ಕಮ್ಮ ಆಗಿ ಮತ್ತು ಸಣ್ಣಕ್ಕ ಆಗಿ ಪೂರ್ಣಿಮಾ ಗುಡುಗುಡಿ ಅವರು ಮಕ್ಕಳೊಂದಿಗೆ ಒಂದಾಗಿ ಮಕ್ಕಳಿಗಾಗಿ ಅನೇಕ ಕಥೆ, ಕವಿತೆ, ಮನರಂಜನಾ ಕಾರ್ಯಕ್ರಮಗಳನ್ನು ನೀಡುತ್ತಿದ್ದರು.

೪. ಕರಡಿ ಟೇಲ್ಸ್ ಇದು ೧೯೯೬ರಲ್ಲಿ ಸಿ.ಪಿ.ವಿಶ್ವನಾಥ ಅವರ ತಂಡದಿಂದ ಆರಂಭಗೊಂಡ ಧ್ವನಿಪುಸ್ತಕಗಳ, ಚಿತ್ರಪುಸ್ತಕಗಳನ್ನು ಹರಡುವ ಯೋಜನೆಯಾಗಿದೆ. ಮಕ್ಕಳಿಗಾಗಿಯೇ ರಚನೆಗೊಂಡಿರುವ ಈ ಸಂಸ್ಥೆ ಅಂತರ್ಜಾಲದ ಮೂಲಕ ತನ್ನ ಮಾರುಕಟ್ಟೆಯನ್ನು ವಿಸ್ತರಿಸಿಕೊಂಡಿದೆ. ಈಗಾಗಲೇ ಪ್ರಚುರವಿರುವ ಪ್ರಸಿದ್ಧ ಬರಹಗಳಿಗೆ ಖ್ಯಾತನಾಮರಿಂದ ಕಥೆ ಹೇಳಿಸಿ, ಚಿತ್ರ ಬರೆಸಿ ಅಂತರ್ಜಾಲ ಮತ್ತು ಸಿ.ಡಿ/ ಡಿ.ವಿ.ಡಿ ರೂಪದಲ್ಲಿ ಸಾಹಿತ್ಯದ ಪುಸ್ತಕಗಳನ್ನು ಮಕ್ಕಳಿಗೆ ಮುಟ್ಟಿಸುವ ಕಾರ್ಯವನ್ನು ಮಾಡುತ್ತಿದೆ. ಈ ಸಂಸ್ಥೆಯ ಧ್ವನಿ, ಚಿತ್ರ ಪುಸ್ತಕಗಳು ಹಿಂದಿ, ಇಂಗ್ಲಿಷ್ ಸೇರಿದಂತೆ ತಮಿಳು, ಬೆಂಗಾಲಿ, ತೆಲುಗು ಮತ್ತಿತರ ಪ್ರಾದೇಶಿಕ ಭಾಷೆಗಳಲ್ಲಿ ಇವೆ. ಈ ಭಾಷೆಗಳಲ್ಲಿ ಕನ್ನಡ ಸೇರಿಲ್ಲ. ಈ ಸಂಸ್ಥೆ ಚೆನ್ನೈಯನ್ನು ಕೇಂದ್ರವಾಗಿಟ್ಟುಕೊಂಡು ಕಾರ್ಯನಿರ್ವಹಿಸುತ್ತಿದೆ.

೫. https://en.wikipedia.org/wiki/Indian_animation_industry ಪು. 2

೬. https://en.wikipedia.org/wiki/List_of_indian_animated_feature_films ಪುಟ. 02

೭. https://en.wikipedia.org/wiki/Indian_comics ಪುಟ. 1

೮. ರಿಮಿ ಬಿ. ಚಟರ್ಜಿ. ('ಎರಡು ಸಂಸ್ಕೃತಿಗಳ ನಡುವಿನ ಬಾಲ್ಯದ ಸೃಷ್ಟಿ: ಧನಗೋಪಾಲ್ ಮುಖರ್ಜಿ ಮತ್ತು ರುಡ್‌ಯಾರ್ಡ್ ಕಿಪ್ಲಿಂಗ್') ಆನಂದಾವಲೋಕನ, ಪು. ೧೪೪

೯. ಬತ್ತೀಸು ಎಂದರೆ ೩೨ ಎಂದರ್ಥ. ಪುತ್ಥಳಿ ಅಂದರೆ ಗೊಂಬೆಗಳು. ವಿಕ್ರಮ ರಾಜನ ಸಿಂಹಾಸನದ ಮೆಟ್ಟಿಲುಗಳಲ್ಲಿದ್ದ ಮೂವತ್ತೆರಡು ಗೊಂಬೆಗಳು ಹೇಳುವ ಕಥೆಯೇ ಬತ್ತೀಸು ಪುತ್ಥಳಿ ಕಥೆಗಳು.

೧೦. (ಮೂಲ: ಆರ್ಯಂಕ ಗುಹಾ) ಬಿ. ನೀಲಕಂಠಪ್ಪ, ಹಾಸನ (ಅಮರ ಚಿತ್ರಕತೆ ಮೂಲ ಮತ್ತು ಪರಿವರ್ತನೆ), ಆನಂದಾವಲೋಕನ ಪು. ೮೯

೧೧. ಕೆ.ಗಣೇಶ ಕೋಡೂರು, 'ನಿಮ್ಮ ಮ್ಕಕಳು ಯಾವ ಪುಸ್ತಕಗಳನ್ನು ಓದಬೇಕು? ಪು. ೧೦೪

೧೨. ಅದೇ ಪು. ೧೭

ಅಧ್ಯಾಯ : ಒಂಬತ್ತು

ಸಮಾರೋಪ

ಅಧ್ಯಾಯ : ಒಂಬತ್ತು

ಸಮಾರೋಪ

ಮಕ್ಕಳ ಸಾಹಿತ್ಯವು ಇತರೆ ಪ್ರಕಾರಗಳ ಭರಾಟೆಯಲ್ಲಿ ತನ್ನ ಅಸ್ತಿತ್ವ ಪಡೆದು ಮುನ್ನೆಲೆಗೆ ಬರಲು ಹವಣಿಸುತ್ತಿದೆ. ಇಂಥ ಹೊತ್ತಿನಲ್ಲಿ ಆ ಕುರಿತು ಮಕ್ಕಳ ಸಾಹಿತ್ಯ ಪ್ರಕಾರದ ಮೇಲೆ ವಿಮರ್ಶೆ, ವಿಶ್ಲೇಷಣೆ, ಸಂಶೋಧನೆ ನಡೆಯುವುದು ವಿರಳ. ಆದರೂ ಕೆಲವು ವರ್ಷಗಳಿಂದ ಕನ್ನಡದಲ್ಲಿ ಈ ಕುರಿತು ಕೆಲವು ಸಂಶೋಧನೆಗಳು ನಡೆದಿವೆ. ಆದರೆ ಮಕ್ಕಳ ಕಥಾಸ್ವರೂಪಗಳ ಚರ್ಚೆಯನ್ನು ಫ್ಯಾಂಟಸಿಯ ನೆಲೆಯಲ್ಲಿ ಯಾರೂ ಸಂಶೋಧನೆ ಮಾಡಿಲ್ಲ. ಪ್ರಸ್ತುತ ಸಂಶೋಧನಾ ಪ್ರಬಂಧದಲ್ಲಿ ಕನ್ನಡದ ಕಥಾ ಪರಂಪರೆಯನ್ನು ಆಕರವಾಗಿಸಿಕೊಂಡು ಅದರೊಳಗಿನ ಫ್ಯಾಂಟಸಿಯ ಸ್ವರೂಪಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಮಕ್ಕಳ ಸಾಹಿತ್ಯ ಎಂದಾಕ್ಷಣ 'ಫ್ಯಾಂಟಸಿ' ಎನ್ನುವ ಮಾತು ಸಹಜವಾಗಿ ಬಂದು ಬಿಡುತ್ತದೆ. ಅಷ್ಟರಮಟ್ಟಿಗೆ ಫ್ಯಾಂಟಸಿಯು ಮಕ್ಕಳ ಲೋಕದೊಡನೆ ಬೆರೆತುಹೋಗಿದೆ. 'ಫ್ಯಾಂಟಸಿ' ಇಂಗ್ಲಿಷ್ ಶಬ್ದವಾದರೂ ಅದರ ಬಳಕೆಯೇ ಎಲ್ಲೆಡೆ ಮುನ್ನೆಲೆಗೆ ಬಂದಿದೆ. ಬಹುಶಃ ಇಂಗ್ಲೀಷಿನಲ್ಲಿ ಮಕ್ಕಳ ಸಾಹಿತ್ಯದ ಕುರಿತು ಹೆಚ್ಚು ಹೆಚ್ಚು ಮಾತುಕತೆ ನಡೆದಿರುವುದು, ಫ್ಯಾಂಟಸಿ ಹೊಸಬಗೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಅಲ್ಲಿ ಹೊಸಗಾಲದಲ್ಲಿಯೇ ಕಾಣಿಸಿಕೊಂಡಿರುವುದು ಈ ಮುನ್ನೆಲೆಗೆ ಕಾರಣವಿರಬಹುದು. ಕನ್ನಡ ಸಾಹಿತ್ಯದಲ್ಲಿ 'ಅದ್ಭುತ ಕತೆಗಳು' ಎನ್ನುವ ಪರಿಭಾಷೆ ಹಿಂದಿನಿಂದಲೂ ಇದೆ. ಆದರೆ 'ಫ್ಯಾಂಟಸಿ' ಎಂಬ ಪರಿಭಾಷೆ ಇಲ್ಲ. ಇಂಗ್ಲೀಷಿನಲ್ಲಿ ಇದರ ಸುತ್ತ ಹಲವು ಬಗೆಯ ಚರ್ಚೆ, ವ್ಯಾಖ್ಯಾನ ನಡೆದಿವೆ. ಸಾಮಾನ್ಯವಾಗಿ ಅತಿವಾಸ್ತವ, ಅಸಂಗತ ಎನ್ನಬಹುದಾದ ಲಕ್ಷಣವನ್ನು ಅಲ್ಲಿ ಗುರುತಿಸಲಾಗಿದೆ. ಕನ್ನಡದ ಇದಕ್ಕೆ ಸಮಾನಂತರವಾಗಿ ಬಳಸಲಾಗುತ್ತಿರುವ 'ಅದ್ಭುತ' ಶಬ್ದವು ಈ ನಿಟ್ಟಿನಲ್ಲಿ ಪರಿಮಿತ ಅರ್ಥವುಳ್ಳದ್ದು. ಹಾಗಾಗಿ 'ಫ್ಯಾಂಟಸಿ' ಎನ್ನುವ ಶಬ್ದವನ್ನೇ ಇಲ್ಲಿ ಇರಿಸಿಕೊಂಡಿದೆ.

ಸದ್ಯದ ಪ್ರಬಂಧ ಕನ್ನಡ ಮಕ್ಕಳ ಸಾಹಿತ್ಯದ ಸಂದರ್ಭದಲ್ಲಿ ಈ ಫ್ಯಾಂಟಸಿ ಹೇಗೆಲ್ಲ ಕಾಣಿಸಿಕೊಳ್ಳುತ್ತದೆ, ಅದರ ಸ್ವರೂಪವೇನು, ಪರಂಪರೆಯಾಗಿ ಅದನ್ನು ಕಂಡುಕೊಳ್ಳುವುದಕ್ಕೂ, ಹೊಸಗಾಲದ ಬಗೆಯಾಗಿ ಅದನ್ನು ಕಂಡುಕೊಳ್ಳುವುದಕ್ಕೂ ವಿಭಿನ್ನತೆಗಳೇನು ಎನ್ನುವುದನ್ನು

ಚರ್ಚೆ ಮಾಡಲಾಗಿದೆ. ಇದಕ್ಕಾಗಿ ಕನ್ನಡದ ನವೋದಯ ಕಾಲದ ಬರಹರೂಪದಲ್ಲಿ 'ಮಕ್ಕಳ ಸಾಹಿತ್ಯ', 'ಬಾಲ ಸಾಹಿತ್ಯ' ಎಂದು ಪ್ರಾರಂಭವಾದ ಸಾಹಿತ್ಯವು ಇಂದಿನವರೆಗೂ ಹರಿದುಕೊಂಡು ಬಂದಿರುವುದನ್ನು ಇಲ್ಲಿ ಅಧ್ಯಯನದ ವ್ಯಾಪ್ತಿಯಲ್ಲಿ ಇಟ್ಟುಕೊಂಡಿದೆ. ಇದಲ್ಲದೆ, ಪರಂಪರೆಯ ಜನಪದ ಹಾಗೂ ಭಾರತದುದ್ದಕ್ಕೂ ಹರಿದಿರುವ ಶಿಷ್ಟ ಪರಂಪರೆಯ ಪುರಾಣ, ಪಂಚತಂತ್ರ ಮೊದಲಾದ ಮಕ್ಕಳಿಗೆ ತಲುಪತೊಡಗಿದ ಸಾಹಿತ್ಯವನ್ನೂ ಹಿನ್ನೆಲೆಯಲ್ಲಿ ಇರಿಸಿಕೊಂಡು ಅಧ್ಯಯನ ಮಾಡಲಾಗಿದೆ. ಜನಪದ ಪರಂಪರೆಯಿಂದ ಹಿಡಿದು ಹೊಸಗಾಲದ ಬರಹಗಳನ್ನು ಅವಲೋಕಿಸಿದಾಗ ಕಥನದ ಮಾದರಿಗಳಲ್ಲಿ ಸಾಮ್ಯತೆ ಇದೆಯಾದರೂ ಫ್ಯಾಂಟಸಿಯ ಸ್ವರೂಪಗಳು ಭಿನ್ನವಾಗಿರುವುದು ಕಂಡುಬಂದಿದೆ.

ಪಸ್ತುತ ಪ್ರಬಂಧವವು ಪ್ರತಿಪಾದಿಸುತ್ತಿರುವ ಸಂಗತಿ ಎಂದರೆ, ಫ್ಯಾಂಟಸಿಯು ಎಲ್ಲೆಡೆಯ ಹಾಗೆ ಭಾರತೀಯ ಪರಂಪರೆಯಲ್ಲೂ ತೀರಾ ಸಹಜವಾಗಿ ಬೆರೆತು ಹೋಗಿದೆ. ಮನುಷ್ಯನೊಂದಿಗೆ ಪ್ರಾಣಿ ಪಕ್ಷಿ ಮುಂತಾದ ಜೀವಸೃಷ್ಟಿ ಕೂಡ ಕಥಾಮಾಧ್ಯಮದ ಅಭಿವ್ಯಕ್ತಿಯಲ್ಲಿ ಪಾತ್ರಗಳಾಗಿ ಬಳಕೆಯಾಗುತ್ತಲೇ ಬಂದಿವೆ. ಜೀವಿಗಳಾಗಿ ಗುರುತಿಸಲಾಗದ ಜಡವಸ್ತುವಿನ ಪ್ರಪಂಚವೂ ಕೂಡ ಭಾಗವಹಿಸಿರುವುದು ಕಂಡುಬರುತ್ತದೆ. ಈ ಬಗೆಯಲ್ಲಿ ಪರಿಭಾವಿಸುವಿಕೆಗೆ ಭಾರತೀಯ ಪರಂಪರೆಯಲ್ಲಿಯೇ ಸಾಂಸ್ಕೃತಿಕ ಹಿನ್ನೆಲೆಯಿದೆ. ಮಾನವೇತರ ಜೀವ ಲೋಕವಾಗಲಿ, ಸಸ್ಯದಂಥ ಪ್ರಾಕೃತಿಕ ಸಂಪತ್ತಾಗಲಿ ಮೊದಲಿನಿಂದಲೂ ಜೀವ ಧರಿಸಿದ್ದು ಎಂದು ಕಂಡುಕೊಂಡ ಮನೋಭಾವವು ಅಲ್ಲಿ ರೂಪುಗೊಂಡಿದೆ. ಇದರೊಂದಿಗೆ ಮಂತ್ರ ತಂತ್ರಗಳ ಲೋಕವೂ ಬೆರೆತುಕೊಂಡು ವಾಸ್ತವದಿಂದಾಚೆಗಿನ ಅತಿವಾಸ್ತವ ಪ್ರಕ್ರಿಯೆಗಳು ಜನಜೀವನದೊಡನೆ ಬೆರೆತುಹೋಗಿವೆ. ಇದರೊಂದಿಗೆ ಪುನರ್ಜನ್ಮದಂಥ ಕಲ್ಪನೆ ಕೂಡ ದೊಡ್ಡ ಪ್ರಮಾಣದಲ್ಲಿ ಬೆರೆತು ಹೋಗಿದೆ. ಇದರಿಂದ ಫ್ಯಾಂಟಸಿಯಾಗಿ ಕಂಡುಕೊಳ್ಳುವ ಅಸಂಭಾವ್ಯಗಳು ನಾನಾ ಬಗೆಯಲ್ಲಿ ಒಪ್ಪಿಕೊಂಡಿರುವ ಸಂಗತಿಗಳಾಗಿವೆ. ಇದೆಲ್ಲದರ ಪರಿಣಾಮ ಕನ್ನಡ ಕಥಾಪ್ರಪಂಚದಲ್ಲಿ ಅತಿವಾಸ್ತವ ಅಸಂಗತ ಎನ್ನಲಾಗುವ ವ್ಯಾಪಾರಗಳು ಸಹಜವಾಗಿ ಒಪ್ಪಿತವಾಗಿ ನಡೆಯುತ್ತಲೇ ಬಂದಿವೆ. ವಿಶ್ವದ ವಿಭಿನ್ನ ದೇಶಗಳಲ್ಲಿ ಫ್ಯಾಂಟಸಿಯನ್ನು ಕಂಡುಕೊಳ್ಳುವಿಕೆಗೂ ಭಾರತೀಯ ಬಗೆಯಲ್ಲಿ ಕಂಡುಕೊಳ್ಳುವುದಕ್ಕೆ ವ್ಯತ್ಯಾಸಗಳೂ ಇವೆ. ಸದ್ಯ ಕನ್ನಡದ ಮಕ್ಕಳ ಕಥಾಲೋಕದಲ್ಲಿ ಈ ಬಗೆಯ ಅಭಿವ್ಯಕ್ತಿಯನ್ನು ಇಟ್ಟುಕೊಂಡು ಪ್ರಸ್ತುತ ಪ್ರಬಂಧದಲ್ಲಿ ಅಧ್ಯಯನ ಮಾಡಲಾಗಿದೆ. ಇದರ ಭಾಗವಾಗಿ ಕನ್ನಡಕ್ಕೆ ಅನುವಾದಗೊಂಡ ಕೃತಿಗಳ ಮೂಲಕ ಕನ್ನಡಕ್ಕಿಂತ ಭಿನ್ನವಾದ ಫ್ಯಾಂಟಸಿಯ ಸ್ವರೂಪಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಕನ್ನಡದ ಮಕ್ಕಳ ಕಥಾಲೋಕವು ಜನಪದದ, ಹಾಗೆಯೇ ಶಿಷ್ಟ ಎಂದು ಕರೆಯುವ ಬರಹಕ್ಕೆ ತಿರುಗಿರುವ, ಕಲಿಕೆಗೆ ತೆರೆದುಕೊಂಡ ಮೇಲುವರ್ಗದ ನಡುವೆ ಕಾಣಿಸಿಕೊಂಡ

ಪರಂಪರೆಯಿಂದ ಸ್ವೀಕರಿಸಿರುವುದು ದೊಡ್ಡ ಪ್ರಮಾಣದಲ್ಲಿ ಕಾಣುತ್ತದೆ. ಇದು ಬಾಯಿಂದ ಬಾಯಿಗೆ ಹರಿಯುತ್ತಾ ಹಿರಿಯರಿಂದ ಮನೆಮನೆಯಲ್ಲಿ ಮಕ್ಕಳಿಗೆ ತಲುಪಿದಂತೆಯೇ ನಾನಾ ಬಗೆಯ ಆಚರಣೆಗಳು, ಕಲಾಪ್ರಕಾರಗಳ ಮೂಲಕವೂ ಹರಿದುಬಂದಿರುವುದು ಕಾಣುತ್ತದೆ. ಇಲ್ಲೆಲ್ಲಾ ಕಾಣುವ 'ಫ್ಯಾಂಟಸಿ' ಒಟ್ಟಾರೆ ಭಾರತೀಯ ಪರಂಪರೆ ಕಂಡುಕೊಂಡಿರುವ ಬದುಕಿನೊಡನೆ ಸಹಜವಾಗಿ ಬೆರೆತುಕೊಂಡಿರುವ ಪ್ರಕ್ರಿಯೆಯಾಗಿಯೇ ಕಾಣುತ್ತದೆ. ಜನಪದ ಪರಂಪರೆಯಲ್ಲಿ ಅದು ಆದಷ್ಟು ಲೌಕಿಕ ಬದುಕಿಗೆ ಸ್ಪಂದಿಸುತ್ತಲೇ ಕಂಡರೆ; ಶಿಷ್ಟ ಪರಂಪರೆಯಲ್ಲಿ ಅಧ್ಯಾತ್ಮದ, ತಾತ್ವಿಕ ಸಂಗತಿಗಳಿಗೂ ಅನುವಾಗಿ ಬಂದಿದೆ. ಉಪನಿಷತ್ತಿನ ಅನೇಕ ಕತೆಗಳು, ಪ್ರಸಂಗಗಳು, ಬೌದ್ಧರ ಜಾತಕ ಕತೆಗಳು, ಜೈನ ಪರಂಪರೆಯಲ್ಲಿಯೂ ಈ ಬಗೆಯ ಕಥಾಲೋಕ ಕಂಡಿದೆ. ಹೀಗೆ ಒಟ್ಟಾರೆ ಭಾರತೀಯ ಪರಂಪರೆಯೇ ಸಹಜವಾಗಿ ತನ್ನೊಡನೆ ಈ ಅತಿವಾಸ್ತವ ಪ್ರಕ್ರಿಯೆಯನ್ನು ಒಟ್ಟಿಕೊಂಡುಬಿಟ್ಟಿದೆ. ಕನ್ನಡದ ಮಕ್ಕಳ ಕಥಾಲೋಕ ಈ ಬಗೆಯ ಮೂಲವನ್ನೇ ಬಹುವಾಗಿ ಆಶ್ರಯಿಸಿದ್ದರಿಂದ ಅಲ್ಲಿನ ಫ್ಯಾಂಟಸಿಯೆಲ್ಲ ಇಲ್ಲಿ ಕಾಣುತ್ತದೆ. ನವೋದಯದ ಸಮಯದಲ್ಲಿ ಪಠ್ಯಪುಸ್ತಕಗಳಿಂದ ಹಿಡಿದು, ಅದರಾಚೆ ಸೃಷ್ಟಿಗೊಳ್ಳುತ್ತಾ ಬಂದ ಕಥಾಲೋಕವೆಲ್ಲ ಈ ಪರಂಪರೆಯನ್ನೇ ಆಕರವಾಗಿ ಬಳಸಿಕೊಂಡುಬಿಟ್ಟಿದೆ. ಬಹಳಷ್ಟು ಸಲ ರಂಜನೆಯಾಗಿ, ನೀತಿ, ಜೀವನದ ಮೌಲ್ಯಗಳ ಪಾಠವಾಗಿ ಪರಂಪರೆಯ ಕಥಾಲೋಕ ಬಳಸಿಕೊಳ್ಳಲ್ಪಟ್ಟಿದೆ ಎನ್ನುವುದನ್ನು ಗುರುತಿಸಲಾಗಿದೆ.

ಹೊಸಗಾಲದ ಫ್ಯಾಂಟಸಿಯು ಹೊಸತಿನ ಅಗತ್ಯವನ್ನು ಕಾಣತೊಡಗಿದೆ. ೨೦ನೆಯ ಶತಮಾನದ ಕೊನೆಯ ಎರಡು ದಶಕಗಳಿಂದ ಈ ಬಗೆಯ ಹೊಸತು ಕನ್ನಡ ಮಕ್ಕಳ ಕಥಾ ಜಗತ್ತಿನಲ್ಲಿ ನಿಧಾನವಾಗಿ ಕಾಲಿಟ್ಟಿದೆ. ಈ ಸಮಯದಿಂದ ಹಿಡಿದು ಇಲ್ಲಿಯವರೆಗಿನ ಮಕ್ಕಳ ಕಥಾಲೋಕವನ್ನು ವಿಸ್ತೃತವಾಗಿ ಪ್ರಬಂಧ ಅವಲೋಕಿಸಿದೆ. ಹಾಗೆ ನೋಡಿದರೆ ಹೊಸಗಾಲ ಹೆಚ್ಚು ಹೆಚ್ಚು ವಾಸ್ತವಕ್ಕೆ ಹೊರಳಿದುದನ್ನೇ ಹೇಳುತ್ತದೆ. ನಮ್ಮ ನಡುವಿನ ಮಕ್ಕಳಲೋಕ ಇಲ್ಲಿ ಸಾಮಾನ್ಯವಾಗಿ ಚಿತ್ರಣಕ್ಕೆ ಒಳಗಾಗುತ್ತಾ ಬಂದಿದೆ. ರಾಜ ಮಹಾರಾಜರ, ಮಾಂತ್ರಿಕರ ಕತೆಗಳೆಲ್ಲ ಹಿಂದೆಸರಿದು, ಮಕ್ಕಳು ವಾಸ್ತವದಲ್ಲಿ ಏನನ್ನು ಅನುಭವಿಸುತ್ತಿವೆಯೋ, ಅಂಥ ಅನುಭವಲೋಕ ಹೊಸಗಾಲದ ಲೇಖಕರ ಅಗತ್ಯವಾಗಿರುವುದು ಗಮನಕ್ಕೆ ಬರುತ್ತದೆ. ಹೀಗಿರುವಾಗ ಅಲ್ಲಿ ಫ್ಯಾಂಟಸಿಯ ಅತಿವಾಸ್ತವ ಅಷ್ಟು ಆಕರ್ಷಣೀಯವಾಗಿ ಕಂಡಿಲ್ಲ. ಆದರೆ ಫ್ಯಾಂಟಸಿ ಪಾಶ್ಚಾತ್ಯದ, ಇಂಗ್ಲೀಷಿನ ಬರವಣಿಗೆಯಲ್ಲಿ ಅತ್ಯಂತ ಮುನ್ನೆಲೆಯಲ್ಲಿ ಕಾಣಿಸಿಕೊಂಡಿದ್ದು, ದೀರ್ಘಹಾಸಿನ ಕಥಾನಕಗಳು ಅಲ್ಲಿ ಕಾಣಿಸಿವೆ. ಇದರ ಪ್ರಭಾವ ಕನ್ನಡದ ಮನಸ್ಸುಗಳ ಮೇಲೆ ನಿಧಾನವಾಗಿಯಾದರೂ ಆಗತೊಡಗಿದೆ. ಅದರಲ್ಲೂ ಕನ್ನಡದಲ್ಲಿ ಈ ಹೊಸ ಹೊರಳಿನಲ್ಲಿ ಒಬ್ಬೊಬ್ಬ ಲೇಖಕರ ಮನೋಧರ್ಮ ಒಂದೊಂದು ಬಗೆಯಾಗಿರುವುದರಿಂದ, ಫ್ಯಾಂಟಸಿಯನ್ನು ತಮ್ಮ ಅಗತ್ಯ ಮತ್ತು ಕಲ್ಪನೆಗೆ ತಕ್ಕಂತೆ ಬಳಸಿಕೊಂಡಿರುವುದು ಕಾಣುತ್ತದೆ.

ಕನ್ನಡ ಲೇಖಕರು ಫ್ಯಾಂಟಸಿಯನ್ನು ಅನುಸಂಧಾನಿಸಿರುವ ಮುಖ್ಯ ಬಗೆಗಳೆಂದರೆ:

ಅ. ಹಿಂದಿನ ಪರಂಪರೆಯ ಬಗೆಯಲ್ಲಿಯೇ ಫ್ಯಾಂಟಸಿಯನ್ನು ಬಳಸಿಕೊಳ್ಳುತ್ತಾ ಇಂದಿನ ಅಗತ್ಯಗಳಿಗಾಗಿ ತುಡಿಯುವುದು. ಇದು ಸಾಮಾನ್ಯವಾಗಿ ಪ್ರಾಣಿ ಪಕ್ಷಿ ಸಂಕುಲ ಮಾತನಾಡುವುದು, ಮನುಷ್ಯನ ಹಾಗೆ ವರ್ತಿಸುವುದು, ಸುಖ ದುಃಖದಲ್ಲಿ ಭಾಗಿಯಾಗುವುದು ಮುಂತಾಗಿ ನೋಡಬಹುದು. ಇಲ್ಲಿಯೂ ಪ್ರಾಣಿ ಪಕ್ಷಿಗಳ ಪ್ರಾಕೃತಿಕ ಜೀವನದ ಕಾಳಜಿಗಳು ವಿಶೇಷವಾಗಿ ಕಾಣಿಸಿದ್ದು, ಅದು ಇಂದಿನ ಪರಿಸರದ ಅಗತ್ಯವಾಗಿಯೂ ಕಾಣುತ್ತದೆ. ಹೀಗೆ ಪರಿಸರದ ಕಾಳಜಿಯನ್ನು ಇಟ್ಟುಕೊಳ್ಳುವಾಗ, ಪ್ರಾಣಿ ಪಕ್ಷಿಗಳು ಮನುಷ್ಯರಂತೆ ವರ್ತಿಸಿದರೂ, ಅವುಗಳ ವ್ಯವಹಾರವೆಲ್ಲಾ ಅವುಗಳದೇ ನೈಸರ್ಗಿಕ ಬದುಕಿನ ಆಕಾಂಕ್ಷೆಗಳಲ್ಲಿ ಹೊಮ್ಮಿರುತ್ತದೆ.

ಆ. ಕಥೆಗಳಲ್ಲಿ ಪ್ರಾಣಿ ಪಕ್ಷಿಗಳು ಕಾಣಿಸಿಕೊಂಡಾಗಲೂ ಅಲ್ಲಿ ಒಟ್ಟಾರೆ ಮಾನವೀಯ ಸ್ಪಂದನ, ಮನುಷ್ಯನ ಮನಸ್ಸಿನ ವ್ಯಾಪಾರಗಳು ಪ್ರಮುಖವಾಗುವುದು ಇನ್ನೊಂದು ಮುಖ. ಇದು ಕನ್ನಡದ ಪರಂಪರೆಯ ಕತೆಗಳಲ್ಲೂ ಇತ್ತು. ಆದರೆ ಈಗ ಬದಲಾದ ಕಾಲದ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಇಲ್ಲಿ ಅವುಗಳ ಸ್ವರೂಪಗಳು ಬದಲಾಗಿವೆ. ಅತ್ಯಂತ ಸೂಕ್ಷ್ಮದ ಸಂವೇದನಾಶೀಲತೆ ಕೂಡ ಕಾಣಿಸುತ್ತದೆ. ಹಾಗೆಯೇ ವಿಡಂಬನೆ, ವ್ಯಂಗ್ಯವೂ ಕೂಡ ಕಂಡುಬಂದಿದೆ.

ಇ. ಅತಿವಾಸ್ತವದ ಕಥಾ ಹಂದರಗಳಲ್ಲಿ ಹಿಂದಿನ ಪರಂಪರೆಯಲ್ಲಿ ಕಾಣಿಸಿದ ಸ್ವರೂಪಗಳೂ ಈಗಲೂ ಕೆಲವರ ಬರವಣಿಗೆಯಲ್ಲಿ ಕಾಣಿಸುತ್ತಿವೆ. ಉದ್ದೇಶ ಮಾತ್ರ ಬೇರೆಯಾಗಿವೆ. ಒಂದು ಜೀವದಿಂದ ಇನ್ನೊಂದು ರೂಪಕ್ಕೆ ಹೊರಳುವುದು, ನಿರ್ಜೀವ ವಸ್ತುಗಳನ್ನು ಮಾಂತ್ರಿಕವಾಗಿ ಎಂಬಂತೆ ಬಳಸಿಕೊಳ್ಳುವುದು ಮುಂತಾದವನ್ನು ಇಲ್ಲಿ ಉದಾಹರಿಸಬಹುದು. ಸಾಮಾನ್ಯವಾಗಿ ಅಶಕ್ತರು, ಅನುಕೂಲವಿಲ್ಲದವರು ಈ ಬಗೆಯ ಸಹಾಯ ಪಡೆಯುತ್ತಾ ತಮ್ಮ ಬಯಕೆಗಳನ್ನು ತೀರಿಸಿಕೊಳ್ಳುವುದು ನಡೆಯುತ್ತದೆ. ಇದೊಂದು ಬಗೆಯಲ್ಲಿ ಪಲಾಯನವಾದದಂತೆ ಕಾಣುತ್ತದೆ. ಪರಂಪರೆಯ, ಅದರಲ್ಲೂ ಜನಪದ ಕತೆಗಳಲ್ಲಿ ಇದೇ ಬಗೆಯ ತಂತ್ರಗಾರಿಕೆ ಸಾಮಾನ್ಯವಾಗಿ ಕಾಣುತ್ತದೆ.

ಈ. ಹೊಸಗಾಲದ ಫ್ಯಾಂಟಸಿ ಜಪಾನ್‌ನಂಥ ಪೌರ್ವಾತ್ಯ ರಾಷ್ಟ್ರದಲ್ಲಿ, ಅಮೇರಿಕಾ ಇಂಗ್ಲಂಡ್‌ಗಳಂಥ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ದೃಶ್ಯದ ಮೂಲಕವಾಗಿಯೇ ಅನಿಮೇಷನ್ ತಂತ್ರಗಾರಿಕೆಯಾಗಬಹುದು, ಕಲಾವಿದರು ಚಿತ್ರಗಳಲ್ಲಿ ಕಂಡುಕೊಂಡ ಆಕೃತಿಗಳಾಗಬಹುದು, ಇದರಿಂದ ಉಂಟಾಗಿರುವ ವಿಶಿಷ್ಟ ಫ್ಯಾಂಟಸಿ ಪಾತ್ರಲೋಕವು ಇಂದು ಮಕ್ಕಳನ್ನು ವಿಶೇಷವಾಗಿ ಆಕರ್ಷಿಸಿದೆ. ಇದು ಒಟ್ಟಾರೆ ಕನ್ನಡದಲ್ಲಿ ಆಗುತ್ತಿಲ್ಲ. ಅದಕ್ಕೆ ಬಲುದೊಡ್ಡ ಕಾರಣ ಆರ್ಥಿಕತೆಯದು, ಇಲ್ಲಿನ ವಿಭಿನ್ನ ಭಾಷಾವಲಯದ ಸೀಮಿತ ಮಾರುಕಟ್ಟೆಯ ವಲಯಗಳು ಕಾರಣವಾಗಿವೆ. 'ಪೀಟರ್ ಪ್ಯಾನ್' ಅಂಥ ಕೃತಿಯಲ್ಲಿ ಪೀಟರ್ ಎಂದಿಗೂ ಬಾಲ್ಯದಲ್ಲಿಯೇ ಉಳಿಯಲು ಬಯಸುವುದು,

ಲಾಫ್ಟಿಂಗರ 'ಡಾ ಡೂ ಲಿಟಲ್' ಕೃತಿಯಲ್ಲಿ ಪ್ರಬುದ್ಧ ಮನಸ್ಥಿತಿಗೆ ಬಂದ ಡಾಕ್ಟರ್ ಒಬ್ಬ ಪ್ರಾಣಿಗಳ ಜಗತ್ತಿಗೆ ಮರಳಿ ಅಲ್ಲಿ ಬದುಕಿನ ಸಮಾಧಾನಗಳನ್ನು ಕಂಡುಕೊಳ್ಳುವುದು, ಈ ಬಗೆಯ ವಿಶಿಷ್ಟವಾದ ಫ್ಯಾಂಟಸಿ ಒಟ್ಟಾರೆ ಭಾರತೀಯ, ಹಾಗೆಯೇ ಕನ್ನಡದ ಜಗತ್ತಿನಲ್ಲಿ ಕಾಣುತ್ತಿಲ್ಲ. ಅದಕ್ಕೆ ಇಲ್ಲಿನವರ ಮನೋಭಾವವೇ ಕಾರಣವಾಗಿದೆ. ಇಂಥಲ್ಲಿ ಅತಿವಾಸ್ತವ, ವಸ್ತುಪ್ರಪಂಚ ಕೇವಲ ಸಾಧನವಾಗಿ ಬಳಕೆಯಾಗುವುದಿಲ್ಲ, ಬದಲಿಗೆ ಒಂದಿಡೀ ಪರಿವರ್ತನೆಯೇ ಮುಖವಾಗಿ ಕಾಣುತ್ತದೆ.

ಉ. ಕಾಲದ ಅಂತರದಲ್ಲಿ ತೆರೆದುಕೊಳ್ಳುವ ಕಥನ ಮಾದರಿಯಾದ 'ಹೈ ಫ್ಯಾಂಟಸಿ'ಯು ಇಡಿಯಾದ ವ್ಯವಸ್ಥೆ, ಬದುಕಿನ ಬಗೆ, ಒಂದಾವುದೋ ಲೋಕದ ಹುಟ್ಟಿಗೆ ಕಾರಣವಾಗುವ ಫ್ಯಾಂಟಸಿಯು ಇಂಗ್ಲೀಷ್ ಜಗತ್ತಿನಲ್ಲಿ ಹೆಚ್ಚು ಪ್ರಚುರವಾಗಿದೆ. ಇದೊಂದು ರೀತಿಯಲ್ಲಿ ಹೊಸತಾಗಿ ಪುರಾಣಗಳನ್ನು ಸೃಷ್ಟಿಸಿದ ಹಾಗೆ ಇರುತ್ತದೆ. ಸಿ.ಎಸ್.ಲೂಯಿಸ್, ಫಿಲಿಪ್‌ಪುಲ್ಮನ್ ಮುಂತಾದ ಹೆಸರುಗಳು ಇಂಥದರಲ್ಲಿ ಖ್ಯಾತಿಯನ್ನು ಗಳಿಸಿದವು. ಈ ಬಗೆಯ ಹೈ ಫ್ಯಾಂಟಸಿ ಕನ್ನಡದ ಮಕ್ಕಳ ಜಗತ್ತಿನಲ್ಲಿ ಇನ್ನೂ ಗೋಚರವಾಗಿಲ್ಲವೆನ್ನುವುದು ಪ್ರಸ್ತುತ ಮಹಾಪ್ರಬಂಧದಲ್ಲಿ ಗುರುತಿಸಲಾಗಿದೆ.

ಊ. ಫ್ಯಾಂಟಸಿಯು ವಾಸ್ತವದಲ್ಲಿ ಮಕ್ಕಳಿಗೆ ಸಾಧ್ಯವಾಗದೆ ಇರುವುದನ್ನು ಅವರು ಕಲ್ಪನೆ, ಕನಸುಗಳ ಮೂಲಕ ಸಾಧಿಸಿಕೊಳ್ಳುವ ಸಾಧ್ಯತೆಯನ್ನು ಕಥೆ, ಕಾದಂಬರಿಗಳಲ್ಲಿ ಕಲ್ಪಿಸುತ್ತದೆ. ಈ ಮೂಲಕ ಫ್ಯಾಂಟಸಿಯು ಅಸಹಾಯಕರು, ಅಮಾಯಕರನ್ನು ಗೆಲ್ಲಿಸುತ್ತದೆ. ವಾಸ್ತವದಲ್ಲಿ ಅವರು ಎಂದು ಗೆಲ್ಲಲಾರರು ಎನ್ನುವುದನ್ನೂ ಇದು ಅಭಿವ್ಯಕ್ತಿಸುತ್ತದೆ. ಈ ಮೂಲಕ ಫ್ಯಾಂಟಸಿಯು ಮಕ್ಕಳು ನೈಜ ಜೀವನದಲ್ಲಿ ಗೆಲ್ಲಲಾರರು ಎನ್ನುವ ಕೀಳರಿಮೆಯನ್ನು ಮೂಡಿಸುವ ಸಾಧ್ಯತೆಯನ್ನೂ ಫ್ಯಾಂಟಸಿ ಕಥನಗಳು ಹುಟ್ಟುಹಾಕುತ್ತವೆ.

ಒಟ್ಟಾರೆ ಹೇಳುವುದಾದರೆ, ಕನ್ನಡದ ಹೊಸಗಾಲದ ಕಥಾಜಗತ್ತು ಫ್ಯಾಂಟಸಿಯನ್ನು ವಿಶೇಷವಾಗಿ ಕಾಣುತ್ತಿಲ್ಲ ಎನ್ನುವುದು ಪ್ರಸ್ತುತ ಪ್ರಬಂಧದ ವ್ಯಾಪ್ತಿಯ ಕಥೆಗಳನ್ನು ವಿಶ್ಲೇಷಣೆ ಮಾಡಿದಾಗ ಕಂಡುಬಂದಿದೆ. ಈ ಬಗೆಯ ಹೊಸತು ಕಾಣಿಸುವ ಲಕ್ಷಣಗಳು ಕೆಲವರಲ್ಲಿಯಾದರೂ ಹೊಸ ಸಾಧ್ಯತೆಯಾಗಿ ಕಾಣಿಸುತ್ತಿವೆ. ಪ್ರಸ್ತುತ ಅಧ್ಯಯನದಲ್ಲಿ ಈ ಬಗೆಯ ಕನ್ನಡದ ಕಥಾಜಗತ್ತನ್ನು ಉದಾಹರಣೆಗಳೊಂದಿಗೆ ವಿಸ್ತೃತವಾಗಿ ಚರ್ಚಿಸಿದೆ. ಬಹುಮುಖ್ಯವಾಗಿ ಈ ಬಗೆಯ ದೃಷ್ಟಿಕೋನದಿಂದ ಕಥಾಲೋಕವನ್ನು ನೋಡುವುದು ಕನ್ನಡದಲ್ಲಿ ಸಾಧ್ಯವಾಗಿರಲಿಲ್ಲ.

ಪ್ರಸ್ತುತ ಮಹಾಪ್ರಬಂಧವು ಹೀಗೆ ಹಲವು ಬಗೆಗಳಲ್ಲಿ ಕನ್ನಡ ಕಥನ ಸಾಹಿತ್ಯದ ಫ್ಯಾಂಟಸಿಯ ಸ್ವರೂಪಗಳನ್ನು ವಿಶ್ಲೇಷಣೆ ಮಾಡುವ ಪ್ರಯತ್ನ ಮಾಡಿದೆಯಾದರೂ ಇದೆಲ್ಲವೂ ಪ್ರಾತಿನಿಧಿಕವಾಗಿದೆ. ಕನ್ನಡದ ಸಮಗ್ರ ಕಥನ ಸಾಹಿತ್ಯವನ್ನು ಪ್ರಸ್ತುತ ಅಧ್ಯಯನದಲ್ಲಿ ಸಹಜವಾಗಿಯೇ ಒಳಗೊಳ್ಳಲು ಸಾಧ್ಯವಾಗಿಲ್ಲ. ಈ ಕೆಲಸವು ಮುಂದಿನ ದಿನಗಳಲ್ಲಿ ಸಾಧ್ಯವಾಗಬೇಕಿದೆ. ಸದ್ಯಕ್ಕೆ ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಳ್ಳಲಾದ ಹೊಳಹುಗಳನ್ನು ಫಲಿತಗಳ ರೂಪದಲ್ಲಿ ಈ ಕೆಳಕಾಣಿಸಿದಂತೆ ಮಂಡಿಸಲಾಗಿದೆ.

ಫಲಿತಗಳು

೧. ಜನಪದ ಕಥೆಗಳಲ್ಲಿ ಅಮಾಯಕರು, ಅಸಹಾಯಕರು, ಅನುಕೂಲವಿಲ್ಲದವರು ಅನೇಕ ಸಲ ಕಿರಿಯರು ಅನಿರೀಕ್ಷಿತವಾಗಿ ಜಯ ಸಾಧಿಸುತ್ತಾರೆ. ಅವರಿಗೆ ಕೊನೆಯಲ್ಲಿ ಉನ್ನತ ಸ್ಥಾನ ಸಿಗುತ್ತದೆ. ಅದಕ್ಕಾಗಿ ಅವರು ಅವಶ್ಯ ಕಷ್ಟಗಳನ್ನು, ಸವಾಲುಗಳನ್ನು, ಪರೀಕ್ಷೆಗಳನ್ನು ಎದುರಿಸಬೇಕಾಗುತ್ತದೆ. ಇದು ದುರ್ಬಲರು ಬದುಕಿನ ಹೋರಾಟದಲ್ಲಿ ಕೊನೆಗೂ ಗೆಲ್ಲುವರು ಎಂಬ ಆಶಾವಾದಿಯಾದ ಆಶಯವನ್ನು ಭರವಸೆಯನ್ನು ತುಂಬುತ್ತದೆ. ದೈಹಿಕವಾಗಿ ಬಲಿಷ್ಠರಲ್ಲದ ಎಳೆಯ ಮಕ್ಕಳಿಗಾಗಿ ಬರೆಯುವ ಸಾಹಿತ್ಯದಲ್ಲಿ ಈ ಬಗೆಯ ದುರ್ಬಲರ ಗೆಲುವಿನ ಆಶಯಗಳು ಅವರಲ್ಲಿ ಇತ್ಯಾತ್ಮಕವಾದ ಪರಿಣಾಮವನ್ನು ಬೀರುವುದಕ್ಕಾಗಿ ಬಂದಿವೆ.

೨. ರಾಜಕುಮಾರರು ಸುಂದರ ರಾಜಕುಮಾರಿಯನ್ನು ಪಡೆಯಲು ಹಲವಾರು ಸವಾಲು, ಪರೀಕ್ಷೆಗಳನ್ನು ಎದುರಿಸುತ್ತಾ ಕೊನೆಗೆ ರಾಜಕುಮಾರಿಯನ್ನು ಪಡೆಯುವ ಆಶಯವು ಅನೇಕ ಕಥೆಗಳಲ್ಲಿ ಕಂಡುಬರುತ್ತದೆ. ಆದರೆ ರಾಜಕುಮಾರಿಯರು ಈ ಬಗೆಯ ಸಾಹಸ ಮಾಡುವುದು ಕಂಡು ಬರುವುದಿಲ್ಲ. ಹೀಗೆ ಜನಪದ ಕಥೆಗಳಲ್ಲಿ ಕಂಡು ಬರುವ ರಾಜಕುಮಾರಿಯರಿಗಿಂತ ಅವರನ್ನು ಪಡೆಯಲು ಪುರುಷರು ಪಡುವ ಸಂಕಷ್ಟದ ಹಾದಿಗಳೇ ದೊಡ್ಡವಿರುತ್ತವೆ. ಈ ಮೂಲಕ ಮಕ್ಕಳ ಸಾಹಿತ್ಯದಲ್ಲಿರುವ ಫ್ಯಾಂಟಸಿಯು ಸಹ ನಮ್ಮ ಸಮಾಜದಲ್ಲಿರುವ ಗಂಡುಹೆಣ್ಣು ಕುರಿತ ಗ್ರಹಿಕೆಗಳನ್ನು ಪ್ರತಿಫಲಿಸುವಂತೆ ತೋರುವುದು. ಪುರುಷರು ಮೂಲತಃ ಹೆಚ್ಚು ಸಾಹಸಿಗಳು, ಮನೆಯನ್ನು ಬಿಟ್ಟು ಹೊರಜಗತ್ತಿಗೆ ಹೋಗುವ ಸ್ವಾತಂತ್ರ್ಯ ಇರುವವರು, ಜೀವನದಲ್ಲಿ ಕಠೋರ ಸನ್ನಿವೇಶಗಳನ್ನು ಎದುರಿಸಿ ಗೆಲ್ಲಬಲ್ಲವರು, ತಾವು ಪ್ರೇಮಿಸಿದ ಮಹಿಳೆಯರಿಗೆ ಆಶ್ರಯ ಕೊಡಬಲ್ಲವರು ಎಂಬ ಗ್ರಹಿಕೆಗಳು ಅಲ್ಲಿ ಕಾಣುತ್ತವೆ. ಹೆಣ್ಣುಮಕ್ಕಳ ಸಾಹಸದ ಕತೆಗಳು ಇದ್ದರೂ ಪ್ರಮಾಣದಲ್ಲಿ ಅವು ಕಡಿಮೆಯಿವೆ.

೩. ಮಕ್ಕಳಿಗಾಗಿ ನಿರೂಪಿಸಿದ ಜನಪದ ಕಥೆಗಳಲ್ಲಿ ಮುದುಕಿ, ಮಾಯದ ಅಜ್ಜಿಯಂಥವರು ವಿವೇಕ ಮತ್ತು ಜೀವನಾನುಭವವನ್ನು ಹೊಂದಿದ್ದಾರೆ. ಅವರು ಕಥೆಗಳಲ್ಲಿ ಒಳಿತಿನ ಪರವಾಗುತ್ತಾ ಮುದುಕಿಯ ದೈವೀಕರಣವಾಗುವಿಕೆಯು ಕಂಡುಬರುತ್ತದೆ. ಮಕ್ಕಳ ಕಥೆಗಳಲ್ಲಿ ಅಜ್ಜಿಯಂದಿರು ಪಾತ್ರವಾಗಿ ಬರುವುದಕ್ಕೂ ಫ್ಯಾಂಟಸಿಗೂ ನೇರವಾದ ಸಂಬಂಧವಿದೆ. ಈ ಮೂಲಕ ಕಥೆಗಳು ನಿಸರ್ಗ, ದೇವರು ಮಾಡಬಹುದಾದ ಕಾರ್ಯಗಳನ್ನು ಮುದುಕಿಯರು, ಹಿರಿಯರು, ಸಾಧುಗಳ ಮೂಲಕ ಅಭಿವ್ಯಕ್ತಿಸಲ್ಪಡುತ್ತವೆ. ಇದು ಮಕ್ಕಳನ್ನು ನಿಸರ್ಗದೆಡೆಗೆ ಪ್ರೀತಿ ತೋರುವ ಆಶಯವನ್ನು ಹೊಂದಿವೆ.

೪. ಪೆದ್ದರಿಗೆ ಅನಿರೀಕ್ಷಿತವಾಗಿ ಸಂಪತ್ತು, ಸುಖ ದೊರಕುವುದು, ಮಲತಾಯಿಯಿಂದ ಹಿಂಸೆಗೊಳಗಾದ ಮಗು ಕೊನೆಯಲ್ಲಿ ಒಳಿತನ್ನು ಪಡೆಯುವುದು ಕಂಡುಬರುತ್ತದೆ. ಹೀಗೆ ನಿರ್ಲಕ್ಷ್ಯಕ್ಕೆ

ಒಳಗಾದವರೇ ಕಥೆಯ ಅಂತ್ಯದಲ್ಲಿ ಗೆಲ್ಲವುದು ಜನಪದ ಕಥೆಗಳಲ್ಲಿ ಕಂಡು ಬರುವ ಪ್ರಮುಖ ಗುಣವಾಗಿದೆ. ಇದೇ ಆಶಯವು ಮಕ್ಕಳಿಗಾಗಿ ನಿರ್ದಿಷ್ಟಪಡಿಸಿದ ಕಥೆಗಳಲ್ಲೂ ಕಂಡುಬರುತ್ತದೆ. ಫ್ಯಾಂಟಸಿಯು ಯಾವತ್ತೂ ಅನಿರೀಕ್ಷಿತೆಯನ್ನು ಹೊಂದಿರುವುದು ಮುಖ್ಯವಾದ ಲಕ್ಷಣವಾಗಿದೆ. ಮುಗ್ಧರು, ಮಕ್ಕಳು, ಬಡವರು, ಮುದುಕರಂತೆಯೇ ಪೆದ್ದರೂ ಕೂಡ ಅಸಹಾಯಕ ವರ್ಗಕ್ಕೆ ಸೇರುತ್ತಾರದ್ದರಿಂದ ಅವರಿಗೆ ಕೂಡ ಸಮಾಜದ ಸಂಪತ್ತಿನ ಸಮಾನ ಹಂಚಿಕೆಯ ಆಶಯವನ್ನು ಇದು ಸೂಚಿಸುತ್ತದೆ.

೫. ಜನಪದದ ಗದ್ಯ ಕತೆಗಳಿಗಿಂತ ಕಾವ್ಯದ ರೂಪದಲ್ಲಿ ಹರಿದು ಬಂದಿರುವ ಕಥೆಗಳು ಬೇರೆಯಾಗಿರುತ್ತದೆ. ಗದ್ಯದ ಫ್ಯಾಂಟಸಿಯು ಪದ್ಯಗಳಲ್ಲಿ ಕಂಡುಬರುವ ಫ್ಯಾಂಟಸಿಗಿಂತ ಹರಹಿನಿಂದ ಕೂಡಿರುತ್ತದೆ. ಕೆಲವು ಕಥನ ಕಾವ್ಯಗಳಲ್ಲಿ ಫ್ಯಾಂಟಸಿ ವ್ಯಾಪ್ತಿಯಿಂದ ಚಿಕ್ಕದಾಗಿರುತ್ತದೆ. ಕೆಲವು ಕಥನಗಳಲ್ಲಿ ಫ್ಯಾಂಟಸಿ ಹೆಚ್ಚು ವಿಸ್ತರಣಾ ಸಾಧ್ಯತೆಯನ್ನು ಹೊಂದಿರುತ್ತದೆ. ಮಕ್ಕಳ ಸಾಹಿತ್ಯದಲ್ಲಿ ಪ್ರಕಾರಕ್ಕೂ, ಫ್ಯಾಂಟಸಿಗೂ ಆಂತರಿಕ ಸಂಬಂಧವಿದೆ. ಸಹಜವಾಗಿ ಗದ್ಯ ಕಥನಗಳಲ್ಲಿ ಇರುವ ದೀರ್ಘವಾದ ಕಥಾ ಹಂದರವು ಫ್ಯಾಂಟಸಿ ಬಿಚ್ಚಿಕೊಳ್ಳಲು ಅವಕಾಶ ನೀಡುತ್ತದೆ. ಆದರೆ ಪದ್ಯವೊಂದರಲ್ಲಿ ಹಾಡು, ಲಯ, ಛಂದಸ್ಸು ಹೀಗೆ ಬಹು ವಿಧದ ಸಂಗತಿಗಳು ಒಳಗೊಳ್ಳಬೇಕಾಗಿರುವುದರಿಂದ ಅಲ್ಲಿ ಫ್ಯಾಂಟಸಿ ಗದ್ಯದಂತೆ ದೀರ್ಘವಾಗಿ ತೆರೆದುಕೊಳ್ಳುವ ಸಾಧ್ಯತೆ ಕಡಿಮೆ ಇರುತ್ತದೆ. ಹಾಗಾಗಿ ಕಥನ ಸ್ವರೂಪಕ್ಕೂ ಫ್ಯಾಂಟಸಿಗೂ ಇರುವ ಸಂಬಂಧವು ಫ್ಯಾಂಟಸಿಯ ವ್ಯಾಪ್ತಿಯನ್ನು ನಿರ್ಧರಿಸುತ್ತದೆ.

೬. ಜನಪದ ಸಾಹಿತ್ಯವನ್ನು ಸಂಕಲಿಸಿ ಮತ್ತು ಪ್ರಕಟಿಸುವ ಸಂದರ್ಭದಲ್ಲಿ ಜನಪದ ಅಧ್ಯಯನದಲ್ಲಿರುವವರು ಈ ಬಗೆಯ ಅಗತ್ಯವನ್ನು ಪರಿಭಾವಿಸುವ ಹಾಗೆ ಮಕ್ಕಳಿಗಾಗಿ ಸಂಗ್ರಹಿಸಿ ನೀಡುವವರು ಭಾವಿಸುವುದಿಲ್ಲ. ಹೀಗೆ ಸಂಗ್ರಹಿಸಿ ನೀಡುವವರೇ ತಮ್ಮ ದೃಷ್ಟಿಯಲ್ಲಿ ಮಕ್ಕಳು, ಬಾಲ ಓದುಗರು ಎನ್ನುವುದನ್ನು ಕಲ್ಪಿಸಿಕೊಂಡು ಪರಿಷ್ಕರಿಸಿ ನೀಡಲು ನೋಡಿರುತ್ತಾರೆ ಎಂದುಕೊಳ್ಳಬಹುದು. ಮಕ್ಕಳಿಗಾಗಿ ಕತೆಗಳನ್ನು ಆರಿಸಿ ಪುಸ್ತಕ ರೂಪದಲ್ಲಿ ನೀಡುವಾಗ ಮೂಲಸ್ಮರಣೆಯ ತಾಂತ್ರಿಕ ಅಗತ್ಯವಿಲ್ಲ ಎಂಬ ಗ್ರಹಿಕೆಯು ಇಲ್ಲಿ ಕೆಲಸ ಮಾಡಿರಬಹುದು. ಬೇರೆಬೇರೆ ದೇಶಗಳಿಗೆ ಭಾಷೆಗಳಿಗೆ ಕಾಲಗಳಿಗೆ ಸೇರಿದ್ದರೂ ಮಕ್ಕಳ ಲೋಕವು ಜಗತ್ತಿನಾದ್ಯಂತ ಸಮಾನ ಆಶಯಗಳನ್ನು ಹೊಂದಿರುತ್ತದೆ. ಮಕ್ಕಳ ಫ್ಯಾಂಟಸಿ ಕಥೆಗಳಿಗಿರುವ ಚಲನಶೀಲತೆಯನ್ನು ಸೂಚಿಸುತ್ತದೆ. ಮಕ್ಕಳ ಸಾಹಿತ್ಯವು ದೇಶ, ಕಾಲ, ಭಾಷಿಕ ಆವರಣಗಳನ್ನು ಮೀರಿ ಎಲ್ಲಾ ಮಕ್ಕಳೊಂದಿಗೆ ಬೆರೆಯುವ ಮತ್ತು ಬೆಳೆಯುವ ಸಾಧ್ಯತೆಯನ್ನು ಹೊಂದಿರುತ್ತದೆ. ಹೀಗಾಗಿ ಕತೆಗಳು ದೇಶ, ಭಾಷೆಗಳ ಗಡಿಗಳನ್ನು ಮೀರುವ ಕ್ರಿಯೆಯಲ್ಲಿ ಫ್ಯಾಂಟಸಿ ಮುಖ್ಯ ಪಾತ್ರವಹಿಸುತ್ತದೆ.

೭. ಜನಪದ ಕಥೆಗಳಲ್ಲಿನ ಫ್ಯಾಂಟಸಿ ಮಕ್ಕಳಿಗೆ ಇನ್ನಿಲ್ಲದಂತೆ ಇಷ್ಟವಾಗಲು ಅಲ್ಲಿನ ರಚನಾ ವಿನ್ಯಾಸ ಮತ್ತು ಸರಳ ಸಂಭಾಷಣೆ, ರಿಪಿಟೇಷನ್ ತಂತ್ರ ಮುಂತಾದವು ಕಾರಣವಾಗಿವೆ. ಕಥೆಗಳು ಮಕ್ಕಳಿಗೆ ಇಷ್ಟವಾಗುವಲ್ಲಿ ಕಥನವಲ್ಲದೇ ರಚನಾ ವಿನ್ಯಾಸವೂ ಪ್ರಧಾನ ಪಾತ್ರವಹಿಸುತ್ತದೆ. ಈ ವಿನ್ಯಾಸವು ಕಥೆಯೊಳಗೆ ಫ್ಯಾಂಟಸಿಯ ಒಳಗೊಳ್ಳುವಿಕೆಗೆ ಅವಕಾಶ ದೊರಕಿಸುವುದಲ್ಲದೇ ಮಕ್ಕಳ ಅವಧಾನವನ್ನೂ ಕೇಂದ್ರೀಕರಿಸಲು ನೆರವಾಗುತ್ತದೆ.

೮. ಜನಪದ ಕತೆಗಳಲ್ಲಿ ಬಳಕೆಯಾಗುವ ಫ್ಯಾಂಟಸಿ ಒಟ್ಟು ಪರಂಪರೆಯ ಫ್ಯಾಂಟಸಿಯಾಗಿದೆ. ಹಾಗಾಗಿ ಇದು ಸಾಮುದಾಯಿಕ ಮನಸ್ಸಿನ ಕಲ್ಪನೆಯಲ್ಲಿ ಹೊಳೆದ ಫ್ಯಾಂಟಸಿಯಾಗಿದೆ. ಮಕ್ಕಳ ಲೋಕದಲ್ಲಿ ಅರಳಿದ ಫ್ಯಾಂಟಸಿ ಅಲ್ಲ. ಈ ಹಿನ್ನೆಲೆಯಲ್ಲಿ ಈ ಕತೆಗಳು ಒಟ್ಟು ಸಮುಯದಾಯದ ಕತೆಗಳೇ ಹೊರತು ಮಕ್ಕಳಿಗಾಗಿ ನಿರ್ದಿಷ್ಟವಾಗಿ ಗಣಿಸಿ ಪ್ರತ್ಯೇಕಗೊಂಡುವಲ್ಲ. ಹಾಗಾಗಿ ಇಲ್ಲಿ ಕಾಣುವ ಫ್ಯಾಂಟಸಿ ಒಟ್ಟು ಸಮುದಾಯದ ಕತೆಗಳ ಲೋಕದಲ್ಲಿ ಕಂಡುಕೊಂಡ ಫ್ಯಾಂಟಸಿಯೇ ಆಗಿದೆ. ಭಾರತದ ರಾಮಾಯಣ, ಮಹಾಭಾರತದ ಕಥೆಗಳು, ಜನಪದ ಪರಂಪರೆಯ ಕಥನಗಳು, ಪುರಾಣಗಳ ಕಥೆಗಳು ಇವೇ ಮರು ನಿರೂಪಣೆಗಳಾಗಿ ಮಕ್ಕಳಿಗಾಗಿ ಕೊಡಲ್ಪಟ್ಟಿವೆ. ಇದನ್ನೇ ಸಾಮುದಾಯಿಕ ಫ್ಯಾಂಟಸಿ ಎಂದು ಕರೆಯಲಾಗಿದೆ. ಎಷ್ಟೇ ವಿದೇಶಿ ಭಾಷೆಗಳಿಂದ ಮಕ್ಕಳ ಸಾಹಿತ್ಯ ಬಂದರೂ ಅದು ಆಯಾ ದೇಶದ ನೆಲದ ಗುಣಗಳನ್ನು ಪಡೆದು ರೂಪಾಂತರವಾದಾಗಲೇ ಬೇರುಬಿಡಲು ಸಾಧ್ಯ ಮತ್ತು ಅರ್ಥಪೂರ್ಣವಾಗಿ ಸಂಹವನಶೀಲತೆಯನ್ನು ಪಡೆಯಲು ಸಾಧ್ಯ ಎಂಬುದನ್ನು ಇದು ಸೂಚಿಸುತ್ತದೆ. ಇದು ಮಕ್ಕಳು ಎಂದುಕೊಳ್ಳುವ ಲೋಕಕ್ಕೂ ಸಾಮುದಾಯಿಕ ಲೋಕಕ್ಕೂ ನಡುವಿರುವ ಸಂಬಂಧವು ಮಕ್ಕಳ ಸಾಹಿತ್ಯದೊಳಗಿನ ಫಾಂಟಸಿಯು ಕೇವಲ ಮಕ್ಕಳಿಗಾಗಿಯಷ್ಟೇ ಎಂದು ಅಖೈರುಗೊಳಿಸಲು ಸಾಧ್ಯವಿಲ್ಲ

೯. ಜನಪದ ಲೋಕವು ವಾಸ್ತವ ಲೋಕಕ್ಕೆ ಹತ್ತಿರವಾದ ಸಂಗತಿಗಳನ್ನು ಒಳಗೊಂಡರೂ ವರ್ತಮಾನಕ್ಕಿಂತ ಭಿನ್ನವಾದ ಸಂದರ್ಭಗಳನ್ನು ಅಭಿವ್ಯಕ್ತಿಸುತ್ತದೆ. ಕೆಲವೊಮ್ಮೆ ವಾಸ್ತವ ಲೋಕಕ್ಕಿಂತ ಭಿನ್ನವಾದ, ಬೇರೆಯದೇ ಆದ ಅತಿವಾಸ್ತವ ಲೋಕದ ಅನಾವರಣವೂ ಕಂಡುಬರುತ್ತದೆ. ಏಕೆಂದರೆ ಮಕ್ಕಳ ಕಥೆಗಳಲ್ಲಿನ ಜಾನಪದೀಯತೆ ಎಲ್ಲಾ ಸಂದರ್ಭಗಲ್ಲೂ ಒಂದೇ ರೀತಿ ಆಗಿರುವುದಿಲ್ಲ. ಹೀಗಾಗಿ ಜನಪದ ಕಥೆಗಳು ಹೈ ಫ್ಯಾಂಟಿಸಿ ಮತ್ತು ಲೋ ಫ್ಯಾಂಟಸಿಗಳೆರಡರ ಗುಣವನ್ನು ಹೊಂದಿರುವುದರಿಂದ ಅವನ್ನು ಹೈ ಮತ್ತು ಲೋ ಮಧ್ಯೆ ಸಮೀಕರಿಸಿಕೊಳ್ಳಬಹುದು.

೧೦. ಜನಪದ, ಪುರಾಣದ ಮೂಲ ಕಥನಗಳಲ್ಲಿ ಅಲ್ಪಮಟ್ಟಿಗೆ ಇರುವಂತಹ ವೈಚಾರಿಕ ಸಂಗತಿಗಳು ಹೊಸಗಾಲದ ಬರಹಗಾರರಲ್ಲಿ ಗುಣಾತ್ಮಕವಾಗಿ ಮಾರ್ಪಾಡೀಕರಣ ಒಳಗಾಗಿರುವುದನ್ನು ಕಾಣಬಹುದು. ಇದು ಕೃತಿಯೊಂದರ ತಾತ್ವಿಕತೆಯು ವರ್ತಮಾನದ ಅಗತ್ಯತೆಗಳಿಗನುಗುಣವಾಗಿ ಬದಲಾಗಿರುವುದನ್ನು ಗುರುತಿಸಬಹುದು.

೧೧. ಮನುಷ್ಯರೊಳಗಿನ ಮೌಲ್ಯ ಪ್ರಜ್ಞೆ ಜಾಗೃತಗೊಳಿಸಲು ಪ್ರಾಣಿಗಳ ಮೂಲಕ ಕಥೆ ಕಟ್ಟಲಾಯಿತು. ಪಂಚತಂತ್ರ ಕಥೆಗಳ ಹುಟ್ಟು ಈ ಹಿನ್ನೆಲೆಯದಾಗಿದೆ. ದೊರೆ ಅಮರಶಕ್ತಿಯ ಮಕ್ಕಳನ್ನು ಮೌಲ್ಯವಂತರನ್ನಾಗಿಸಲು ವಿಷ್ಣುಶರ್ಮ ಐದು ತಂತ್ರಗಳನ್ನು ಹೇಳಬೇಕಾಯಿತು. ಇವು ಬರೀ ರಾಜಕುಮಾರರಿಗಷ್ಟೇ ಅಲ್ಲದೇ ಮಕ್ಕಳಿಗೂ ಅಗತ್ಯದ ಉಣಿಸುಗಳಾಗಿ ಇಂದಿಗೂ ಹೇಳಲ್ಪಡುತ್ತಿವೆ. ಕಥನಸಾಹಿತ್ಯವು ರಾಜನೀತಿಯ ತರಬೇತಿಯ ಉದ್ದೇಶಕ್ಕಾಗಿ ಹುಟ್ಟಿದರೂ, ತನ್ನ ಮೂಲ ಉದ್ದೇಶಕ್ಕಿಂತ ತೀರ ಬೇರೆಯಾದ ಉದ್ದೇಶಕ್ಕಾಗಿ ರೂಪಾಂತರಗೊಳ್ಳುವ ಈ ಪ್ರಕ್ರಿಯೆಯ ಹಿಂದೆ ಚಾಲಕ ಶಕ್ತಿಯಾಗಿ ಫ್ಯಾಂಟಸಿಯು ಕೆಲಸ ಮಾಡಿದೆ. ಫ್ಯಾಂಟಸಿಗೆ ಕಥೆಯ ಮೂಲಾಶಯವನ್ನು ಬದಲಿಸುವ ಗುಣವಿದೆ.

೧೨. ಜಗತ್ತಿನಲ್ಲಿ ಒಳಿತನ್ನು, ಕೆಡುಕನ್ನು ಪ್ರತಿನಿಧಿಸುವ ಪ್ರತಿನಿಧೀಕರಣಗಳ ವಿನ್ಯಾಸದಲ್ಲಿ ಬದಲಾವಣೆ ಇದೆಯೋ ಹೊರತು ಮೂಲಭೂತ ಗುಣ ಲಕ್ಷಣಗಳಲ್ಲಿ ಅಲ್ಲ. ಕೆಡುಕನ್ನು ಬಯಸುವ ಯಾರೇ ಆಗಿರಲಿ ಇತರರಿಗೆ ನೋವುಂಟುಮಾಡುವ ಚಟುವಟಿಕೆಗಳನ್ನು ಮಾಡುತ್ತಿರುತ್ತಾರೆ. ಕಥೆಯ ಭಾಗವಾಗಿ ಪ್ರಾಣಿ ಪಕ್ಷಿಗಳು ಒಳಿತನ್ನು ಕೆಡುಕನ್ನು ಪ್ರತಿನಿಧಿಸುವುದು ಮಕ್ಕಳ ಫ್ಯಾಂಟಸಿ ಕಥೆಗಳಲ್ಲಿ ಕಂಡು ಬರುತ್ತದೆ. ಭಾರತೀಯ ಮಕ್ಕಳ ಸಾಹಿತ್ಯ ಪರಂಪರೆಯಂತೆ ವಿಶ್ವ ಸಾಹಿತ್ಯದ ಬಹುತೇಕ ಕಥನಗಳಲ್ಲೂ ಮಕ್ಕಳ ಕಥಾ ಉದ್ದೇಶಕ್ಕೆ ಪ್ರಾಣಿ ಪಕ್ಷಿಗಳನ್ನು ಸಾಧನವಾಗಿ ಬಳಸಿಕೊಳ್ಳಲಾಗಿದೆ. ಒಳಿತನ್ನು ಮತ್ತು ಕೆಡುಕನ್ನು ಉಂಟುಮಾಡುವ ಪಾತ್ರಲೋಕ ಬದಲಾಗುತ್ತಿರುತ್ತವೆ. ಇಲ್ಲಿ ಅವರ ಸ್ವರೂಪ ವ್ಯತ್ಯಾಸಗಳನ್ನಷ್ಟೇ ಕಾಣಬಹುದೇ ಹೊರತು, ಕೆಡುಕನ್ನು ಬಯಸುವ ಗುಣ ಮಾತ್ರ ಒಂದೇ ಆಗಿರುತ್ತದೆ.

೧೩. ಯಾವುದು ಪ್ರಾಣಿ ಲೋಕದಲ್ಲಿ ಸಹಜವಾಗಿರುತ್ತದೋ ಅದು ಮನುಷ್ಯ ಲೋಕದಲ್ಲಿ ಸಹಜವಲ್ಲ. ಹಾಗೆ ಮನುಷ್ಯ ಲೋಕದಲ್ಲಿ ಸಹಜವಾದದ್ದು ಪ್ರಾಣಿಗಳಿಗೆ ಅಸಹಜವಾಗುತ್ತದೆ. ಇದನ್ನು ಮೀರಿದ ಮಾನುಷ ಸಹಜವಾದ ನಡೆವಳಿಕೆಗಳು ಕಂಡುಬರುತ್ತವೆ. ಮನುಷ್ಯರು ಮಾಡುವ ವಿನೋದ ಚಟುವಟಿಕೆಗಳನ್ನು ತಾನೂ ಮಾಡಬೇಕೆಂದು ಬಯಸಿ, ಪ್ರಾಣಿಯೊಂದು ತನ್ನ ಆಸೆಗಳನ್ನು ಈಡೇರಿಸಿಕೊಳ್ಳುತ್ತದೆ. ಇದನ್ನು ಪಶುವಿನ ಮಾನುಷೀಕರಣ ಎನ್ನಬಹುದು. ಇದಕ್ಕೆ ಪ್ರತಿಯಾಗಿ ಮನುಷ್ಯರು ಪಶುಪಕ್ಷಿ ಗಿಡಮರಗಳಾಗುವ ಕತೆಗಳೂ ಇವೆ. ಫ್ಯಾಂಟಸಿಯು ಮಾನವ ಲೋಕದಲ್ಲಿ ಅಡಗಿರುವ ಮಾನವೇತರ ರೂಪಧಾರಣೆಯ ಆಶಯವನ್ನು, ಇರುವುದನ್ನು ಬಿಟ್ಟು ಇರುದುದೆಡೆಗೆ ತುಡಿಯುವ ಗುಣವನ್ನು ಪ್ರೇರೇಪಿಸುತ್ತದೆ.

೧೪. ಭಾರತೀಯ ಮಕ್ಕಳ ಸಾಹಿತ್ಯದಲ್ಲಿ ಪ್ರಾಣಿ, ಪಕ್ಷಿ ಲೋಕವನ್ನು ಪರಿಸರದ ಕಾಳಜಿಗಳು, ವನ್ಯಜೀವಿಗಳ ಉಳಿಕೆ, ಮನುಷ್ಯನ ಭವಿಷ್ಯದ ಬದುಕನ್ನು ಸಾಂಕೇತಿಕವಾಗಿ ಚಿತ್ರಿಸಲು ಬಳಕೆ ಮಾಡಿಕೊಳ್ಳಲಾಗಿದೆ. ಪಾಶ್ಚಾತ್ಯ ಮಕ್ಕಳ ಸಾಹಿತ್ಯದಲ್ಲಿ ಇದು ಈ ತೆರನಾಗಿಲ್ಲ. ಅಲ್ಲಿ ಮನುಷ್ಯರಂತೆ

ಪ್ರಾಣಿಗಳನ್ನೂ ಪ್ರಾಮುಖ್ಯತೆ ನೀಡಿ ಕೃತಿಗಳು ರಚನೆಗೊಂಡಿವೆ. ಈ ಮೂಲಕ ಮಕ್ಕಳ ಸಾಹಿತ್ಯ ಕಥನಗಳಲ್ಲಿ ಪ್ರಾಣಿ ಪಕ್ಷಿಗಳು ಆಯಾ ಭಾಷೆ, ದೇಶಗಳ ಅಗತ್ಯಗಳ ಅನುಗುಣವಾಗಿ ವಿಭಿನ್ನವಾಗಿ ಬಳಕೆಯಾಗಿರುವುದು ಕಂಡುಬರುತ್ತದೆ.

೧೫. ಮುಗ್ಧತೆ ಎಲ್ಲಿರುತ್ತದೋ ಅಲ್ಲಿ ಯಾವುದೇ ಒತ್ತಾಯವಿಲ್ಲದೆ ಎಲ್ಲವನ್ನೂ ನಂಬುತ್ತದೆ. ಎಲ್ಲಿ ಕಲ್ಪನೆ ಇರುತ್ತದೋ ಅಲ್ಲಿ ಮುಗ್ಧತೆ ಇರುತ್ತದೆ. ಫ್ಯಾಂಟಸಿ ಕಥನಗಳ ಪಾತ್ರಗಳು ಹಾಗೆ ನಂಬಲು ಕಾರಣವೇ ಅವುಗಳ ನಂಬಿಕೆಯೇ ಆಗಿದೆ. ಅದು ಮಕ್ಕಳಲ್ಲಿ ಮಾತ್ರ ಇರುತ್ತದೆ. ಪಾತಾಳ ಲೋಕವನ್ನು ದೊಡ್ಡವರು ಕಲ್ಪಿಸಿಕೊಳ್ಳುವುದು, ಅಲ್ಲಿ ನಡೆಯುವ ಸಂಗತಿಗಳನ್ನು ನಂಬುವುದಾಗಲೀ ಆಗುವುದಿಲ್ಲ. ಇಲ್ಲದ ನಾಡು, ಇಲ್ಲದ ಹಕ್ಕಿ; ಇವೆಲ್ಲಾ ಕಲ್ಪನೆ ಮುಗ್ಧತೆಗಳ ಸಂಗಮದಲ್ಲಿ ಮಾತ್ರ ನಂಬಲು ಸಾಧ್ಯವಾಗುವ ಸಂಗತಿಗಳಾಗಿವೆ. ದೊಡ್ಡವರ ಲೋಕ ಹಾಗಲ್ಲ, ಎಲ್ಲವನ್ನೂ ಅನುಮಾನದ ಕಣ್ಣಿನಿಂದಲೇ ನೋಡುತ್ತದೆ. ಪ್ರಾಣಿಯೊಂದು ಮಕ್ಕಳಂತೆ ಆಸೆ ಆಕಾಂಕ್ಷೆಗಳನ್ನು ಬೆಳೆಸಿಕೊಂಡು ಈಡೇರಿಸಿಕೊಳ್ಳುವುದು ಇದು ಫ್ಯಾಂಟಸಿ ಲೋಕದಲ್ಲಿ ಮಾತ್ರ ನಡೆಯುವಂಥದ್ದು. ಹಾಗಾಗಿ ಮಕ್ಕಳ ಮುಗ್ಧ ಮನಸ್ಸು ಪಶುಪಕ್ಷಿಗಳನ್ನೂ ತಮ್ಮ ಲೋಕದೊಳಗೆ ಎಳೆದುಕೊಳ್ಳುತ್ತದೆ. ಇದಕ್ಕೆ ಮುಗ್ಧತೆಯೊಂದೇ ಮಾನದಂಡವಾಗಿರುತ್ತದೆ ವಿನಃ ವಯಸ್ಸು, ವರ್ಗ, ಪ್ರಭೇಧಗಳಲ್ಲ. ಎನ್ನುವುದು ಇಲ್ಲಿನ ಆಶಯವಾಗಿದೆ.

೧೬. ಮೌಲ್ಯಗಳು ಅಪಮೌಲ್ಯಗಳು ಬರಹದಲ್ಲಿ, ನಿರೂಪಣಾ ಕ್ರಮದಲ್ಲಿ ಇರುತ್ತವೆಯೋ ವಿನಃ ಮಕ್ಕಳಲ್ಲಿ ಇರುವುದಿಲ್ಲ. ಕಥೆಗಳಲ್ಲಿ ಪ್ರಾಣಿಪಕ್ಷಿಗಳ ಮೂಲಕ ಕಥೆ ಹೇಳುವ ಸಂದರ್ಭದಲ್ಲಿ ನರಿಯನ್ನು ಕೆಲವು ಕಥೆಗಳು ಪ್ರಾಮಾಣಿಕವೆನ್ನುವಂತೆ ಚಿತ್ರಿಸಿವೆ. ಕೆಲವು ಕಥೆಗಳಲ್ಲಿ ನರಿ ದುಷ್ಟ ಬುದ್ಧಿಯನ್ನು ಪ್ರದರ್ಶಿಸುತ್ತದೆ. ಆದರೆ ಓದುಗನಾದ ಮಗು ಪಾತ್ರದ ಕುರಿತಾದ ಯಾವುದೇ ಪೂರ್ವಗ್ರಹಗಳನ್ನು ಇಟ್ಟುಕೊಳ್ಳದೆ ಕಥನವನ್ನು ಆಸ್ವಾದಿಸುತ್ತದೆ. ಅಲ್ಲಿನ ತಂತ್ರಗಾರಿಕೆಯನ್ನು ಮೆಚ್ಚಿಕೊಳ್ಳುತ್ತದೆ.

೧೭. ಮನುಷ್ಯ ಮೂಲಭೂತವಾಗಿ ಆದರ್ಶ ಜೀವಿ. ವಾಸ್ತವದಲ್ಲಿ ತನ್ನ ಮೌಲ್ಯ ಪ್ರತಿಪಾದನೆಗೆ ಅವಕಾಶ ದೊರಕದಾದಾಗ ತನ್ನ ಕಲ್ಪನೆಯನ್ನು ವಿಸ್ತರಿಸಿಕೊಳ್ಳುತ್ತಾನೆ. ತಾನು ನಿರೂಪಿಸಬಹುದಾದ ಆದರ್ಶಗಳನ್ನು ಪ್ರಾಣಿಗಳಿಗೆ ಆರೋಪಿಸುತ್ತಾನೆ. ನಿಸರ್ಗಾಧಾರಿತ ಕಥೆ ಕಾದಂಬರಿಯಲ್ಲಿ ಪ್ರಾಣಿಗಳ ಲೋಕದ ನಡೆವಳಿಕೆಗಳನ್ನು ಮನುಷ್ಯರಿಗೆ ಅನ್ವಯಿಸುವ ಕಾರ್ಯ ನಡೆದಿದೆ. ಪೋಕರಿ ಪಾಪಣ್ಣನೆಂಬ ಬೊಂಬೆಗೆ ಹೇಳುವ ನೀತಿ ಪಾಠಗಳು ಶಾಲೆಗೆ ಹೋಗುವ ಮಕ್ಕಳು ಪಾಲಿಸಬೇಕಾದ ನಿಯಮಗಳನ್ನು ಹೇಳುತ್ತವೆ. ಇಲ್ಲಿ ಲೇಖಕರೊಳಗಿನ ಮೌಲ್ಯ ಹೇಳುವ ತುಡಿತವೇ ಪ್ರಧಾನವಾಗಿ ಕಂಡುಬರುತ್ತಿರುತ್ತದೆ. ಈ ಸಂದರ್ಭದಲ್ಲಿ ಫ್ಯಾಂಟಸಿ ಹಿನ್ನೆಲೆಗೆ ಸರಿದು ಹೋಗುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ. ಕೆಲವು ಕಥೆಗಳಲ್ಲಿ ಮಕ್ಕಳನ್ನು ಸ್ವಚ್ಛಂದತೆಯ ಕಡೆ ಕರೆದೊಯ್ಯುವ ಸ್ವರೂಪ ಕಂಡುಬರುತ್ತದೆ. ಇಲ್ಲೂ

ನೀತಿ ಇರಬಹುದು. ಆದರೆ ಮುನ್ನೆಲೆಯಲ್ಲಿ ಇರುವುದಿಲ್ಲ. ಆಗ ಫ್ಯಾಂಟಸಿ ಪ್ರಾಮುಖ್ಯತೆಯನ್ನು ಪಡೆದಿರುತ್ತದೆ.

೧೮. ಭೂತ ಮತ್ತು ಭವಿಷ್ಯತ್ತುಗಳ ನಡುವಿರುವ ವರ್ತಮಾನದ ಸಂಗತಿಗಳಿಗಿಂತ ಹೊರತಾದ ಬರವಣಿಗೆ ರೂಪವು ಫ್ಯಾಂಟಸಿ ಕಥನಗಳಲ್ಲಿ ಕಂಡು ಬರುತ್ತದೆ. ಪೀಟರನ ಇಲ್ಲದ ನಾಡು, ಪಾಪಚ್ಚಿಯ ಪಾತಾಳ ಲೋಕ, ಪಾಪಣ್ಣನ ದಡ್ಡರ ಹುಂಡಿ, ಜೇನುಗ್ರಾಮ ಇವೆಲ್ಲಾ ವಾಸ್ತವ ಪ್ರಪಂಚದಾಚೆ ಇರುವ ಜಗತ್ತುಗಳಾದ್ದರಿಂದ ಫ್ಯಾಂಟಸಿ ಬರವಣಿಗೆ ಇದೆಲ್ಲವನ್ನೂ ಸಾಧ್ಯವಾಗಿಸಿಕೊಂಡಿದೆ. ಕಥೆ ಫ್ಯಾಂಟಸಿದ್ದೇ ಆಗಿದ್ದರೂ ವರ್ತಮಾನದ ತಲ್ಲಣಗಳು, ಕಾಳಜಿಗಳು ಇದರಲ್ಲಿ ಅಡಕವಾಗಿರುತ್ತವೆ. ಇದು ಮಕ್ಕಳ ಸಾಹಿತ್ಯ ರಚನೆಯ ಹಿಂದಿನ ಮನೋಧರ್ಮದ ಅಗತ್ಯತೆಯನ್ನು ಪ್ರತಿಪಾದಿಸುತ್ತದೆ.

೧೯. ವಾಸ್ತವಕ್ಕಿಂತ ಭಿನ್ನವಾದ ಫ್ಯಾಂಟಸಿ ಸಂಗತಿಗಳನ್ನು ಅನುವಾದಿಸುವ ಹೊಣೆಗಾರಿಕೆಯುಳ್ಳ ಲೇಖಕರು ಪ್ರಾದೇಶಿಕತೆಗೆ ಹೊಂದುವಂತೆ ಭಾಷೆ, ಕಥನದ ಸ್ವರೂಪದ ಬದಲಾವಣೆ ಮಾಡಿಕೊಳ್ಳುತ್ತಾರೆ. ಆಲೀಸ್ ಇನ್ ವಂಡರ್‌ಲ್ಯಾಂಡನ್ನು ಪಾತಾಳ ಲೋಕ ಮಾಡಿಕೊಂಡಿದ್ದು, ಪಿನೋಕಿಯ ಪಾಪಣ್ಣನಾದದ್ದು ಈ ಹಿನ್ನೆಲೆಯಲ್ಲಿಯೇ. ಅನುವಾದಕರು ಬರೀ ಭಾಷೆಯನ್ನು ಬದಲಾಯಿಸುವುದು ಅಷ್ಟೇ ಅಲ್ಲ, ಅದರ ಆಶಯವನ್ನೂ ಬದಲಾಯಿಸುತ್ತಾರೆ. ತಮ್ಮ ದೇಶ, ಭಾಷೆ, ಪ್ರದೇಶದ ನಾಡಿಮಿಡಿತ ಕೃತಿಯಲ್ಲಿ ಅಭಿವ್ಯಕ್ತ ಆಗುವಂತೆ ಮಾಡುವುದು ಅನುವಾದಕರ ಕರ್ತವ್ಯಗಳಲ್ಲಿ ಒಂದಾಗಿರುತ್ತದೆ.

೨೦. ಪ್ರಾಣಿಗಳು ಮಾತನಾಡಿಕೊಂಡರೂ, ಮನುಷ್ಯರಂತೆ ಸಂಭಾಷಣೆ ನಡೆಸಿದರೂ, ಮಾತುಕತೆಗಿಳಿದರೂ, ನ್ಯಾಯ ಎಂದು ಪಂಚಾಯಿತಿ ಸೇರಿಸಿದರೂ ಅವು ಪ್ರಾಣಿಲೋಕದ ನಡವಳಿಕೆಗಳೇ ಆಗಿರುತ್ತವೆ. ಆದರೆ ಅವುಗಳ ಆಶಯಗಳು ಮಾತ್ರ ಮನುಷ್ಯ ಲೋಕಕ್ಕೆ ಸಂಬಂಧಿಸಿರುತ್ತವೆ. ಯಾಕೆ ಮನುಷ್ಯರ ನಡೆವಳಿಕೆಗಳು ಪ್ರಾಣಿಲೋಕದ ಆಶಯಗಳನ್ನು ಪ್ರತಿನಿಧಿಸುವುದಿಲ್ಲ? ಏಕೆಂದರೆ ಮನುಷ್ಯರು ತಮಗೋಸ್ಕರ ಪ್ರಾಣಿಲೋಕವನ್ನು ಕಥೆಗಳಲ್ಲಿ ಸೃಷ್ಟಿಸಿಕೊಂಡಿದ್ದಾರೆ. ಹಾಗಾಗಿ ಕಥೆಗಳು ಪ್ರಾಣಿಗಳ ಮೂಲಕವೋ, ಯಾವುದೋ ಜೀವಿ, ನಿರ್ಜೀವಿಗಳ ಮೂಲಕ ನಿರೂಪಿತಗೊಳ್ಳುತ್ತಿರುವ ಕಥೆಗಳಲ್ಲಿ ಅವುಗಳದೇ ಜಗತ್ತಿನ ಕಷ್ಟ ಸುಖಗಳು ಕಂಡುಬಂದಿರುವುದು ತುಂಬಾ ಕಡಿಮೆ. ಆ ಜೀವಿಗಳು ತಮ್ಮ ಮೂಲಕ ಮನುಷ್ಯರ ಜೀವನದ ಆಶಯಗಳನ್ನು ಮತ್ತೆ ಮತ್ತೆ ಪ್ರತಿನಿಧಿಸುತ್ತಿರುತ್ತವೆ.

೨೧. ಮಕ್ಕಳ ಸಾಹಿತ್ಯ ಕೃತಿಗಳ ಮಾಧ್ಯಮ ಬದಲಾದರೆ ಆಶಯವೂ ಬದಲಾಗುತ್ತದೆ. ಪುಸ್ತಕ ರೂಪದಲ್ಲಿರುವ ಕೃತಿಯೊಂದು ದೃಶ್ಯ ಮಾಧ್ಯಮಕ್ಕೆ ಬದಲಾದಾಗ ತಂತ್ರಜ್ಞಾನಕ್ಕೆ ಅದನ್ನು ಒಗ್ಗಿಸುವ ಭಾಗವಾಗಿ ಅದರ ಮೂಲತನ ಭಾಗಶಃ ಬದಲಾಗುತ್ತದೆ. ಬಾಲ ನಾಗಮ್ಮದಂಥಹ ಪರಂಪರೆಯ ಕಥೆಗಳು ಸಿನಿಮಾ, ಅನಿಮೇಟೆಡ್ ರೂಪದಲ್ಲಿ ಪರಿವರ್ತನೆಯಾದಾಗ ಮಕ್ಕಳು

ಕಥೆಯಲ್ಲಿನ ನೀತಿಯ ಬದಲಾಗಿ ಅದರ ಸ್ವರೂಪಕ್ಕೆ, ತಂತ್ರಜ್ಞಾನದ ಕುಶಲತೆಗೆ ಹೆಚ್ಚು ವ್ಯಾಮೋಹಗೊಳ್ಳುತ್ತಾರೆ. ಅಕ್ಷರವನ್ನು ಇಷ್ಟಪಡುವ ಜಾಗದಲ್ಲಿ ಚಿತ್ರವನ್ನು, ಅದರ ಬದಲಿಗೆ ದೃಶ್ಯವನ್ನು ಒಪ್ಪುವ ಸಾಧ್ಯತೆಗಳಿರುತ್ತವೆ. ಹೀಗೆ ಮಾಧ್ಯಮ ಪಲ್ಲಟವಾದಂತೆ ಆಶಯವೂ ಪಲ್ಲಟಗೊಳ್ಳುತ್ತದೆ.

೨೨. ಆಧುನಿಕ ತಂತ್ರಜ್ಞಾನವು ಅಕ್ಷರರೂಪಿಯಾದ ಮಕ್ಕಳ ಸಾಹಿತ್ಯವನ್ನು ನೋಡು ರೂಪೀ ಮತ್ತು ಕೇಳುರೂಪೀ ಪರಿಧಿಗೆ ಒಳಪಡಿಸುತ್ತದೆ. ಮತ್ತೆ ಅದು ವಾಪಾಸ್ಸು ಹೊರಳಿ ತಂತ್ರಜ್ಞಾನದಿಂದ ಪುಸ್ತಕರೂಪೀ ಮಾಧ್ಯಮಕ್ಕೂ ಬದಲಾಗುತ್ತಿರುತ್ತವೆ. ಈ ಬದಲಾವಣೆ ಯಾವತ್ತೂ ಏಕರೂಪೀಯಾಗಿರುವುದಿಲ್ಲ. ಓದು, ಮಾತಿನೊಳಗೇ ಇದ್ದ ಜನಪದ, ಪಂಚತಂತ್ರ, ಪುರಾಣ ಕಥೆಗಳು ಯೂಟ್ಯೂಬ್, ಸಿನಿಮಾ, ಅನಿಮೇಷನ್‌ನಿಂದ ಅಂಗೈಯಲ್ಲಿಯೇ ನೋಡಲು ದಕ್ಕಿದವು. ಹಾಗೆಯೇ ಟಿ.ವಿ. ಧಾರಾವಾಹಿ ಸರಣಿಯಾಗಿಯೇ ಮಕ್ಕಳಿಗಾಗಿ ರೂಪಗೊಂಡ ಟಾಮ್ ಅಂಡ್ ಜೆರ್ರಿ ಇಂದು ಪುಸ್ತಕ ರೂಪದಲ್ಲಿಯೂ, ಕಾಮಿಕ್ಸ್ ರೂಪದಲ್ಲಿಯೂ ಮಕ್ಕಳನ್ನು ಆಕರ್ಷಿಸುತ್ತಿದೆ.

೨೩. ಕೃತಿಯೊಂದು ತಂತ್ರಜ್ಞಾನದ ವ್ಯಾಪ್ತಿಗೆ ಬಂದ ಮೇಲೆ ಅದರ ಮೇಲೆ ಬಂಡವಾಳ ಹೂಡಿದವರ ಉತ್ಪನ್ನವಾಗಿ ಅದು ಹೊರಹೊಮ್ಮುತ್ತದೆ. ಆಗ ಅದರ ಗೆಲುವು ಕಥನದ ಆಯ್ಕೆಯನ್ನು ನಿರ್ಧರಿಸಿರುತ್ತದೆ. ಹಾಗಾಗಿ ತಂತ್ರಜ್ಞಾನದ ಕುಶಲತೆಯಷ್ಟೇ ಚಿತ್ರದ ಗೆಲುವಿಗೆ ಕಾರಣವಾಗುವುದಿಲ್ಲ. ದೇಶದ ಮಾರುಕಟ್ಟೆಯ ವ್ಯಾಪ್ತಿ ಚಿತ್ರದ ವಸ್ತುವಿನ ಆಯ್ಕೆ ಮತ್ತು ನಿರ್ಮಾಣದ ಪ್ರಮಾಣ ಇವು ಗೆಲುವನ್ನು ನಿರ್ಧರಿಸುವ ಅಂಶಗಳಾಗಿರುತ್ತವೆ. ಹಾಗಾಗಿ ಭಾರತದಲ್ಲಿ ಇಲ್ಲಿಯವರೆಗೆ ಅನಿಮೇಟ್, ಸಿನಿಮಾ, ಕಾಮಿಕ್ಸ್ ರೂಪದಲ್ಲಿ ಬಂದಿರುವ ಬಹುತೇಕ ಕಥನಗಳು ಭಾರತದ ಪರಂಪರೆಯ ಸರಕುಗಳನ್ನು ಪ್ರತಿನಿಧಿಸುತ್ತವೆ. ಅಮೆರಿಕ, ಜಪಾನ್ ಮುಂತಾದ ರಾಷ್ಟ್ರಗಳಂತೆ ಹೊಸ ಪ್ರಯೋಗಗಳಿಗೆ ಭಾರತದ ಮನಸ್ಸುಗಳು ಇನ್ನೂ ಮುಕ್ತವಾಗಿ ತೆರೆದುಕೊಳ್ಳದಿರುವುದೇ ನಮ್ಮ ಅನಿಮೇಟ್ ಲೋಕ ಮತ್ತದೇ ಪುರಾಣಗಳ ಛೋಟಾಭೀಮ್, ಲಿಟಲ್‌ಕೃಷ್ಣ, ಹನುಮಾನ್, ಬಾಲಗಣೇಶ್‌ನಂಥಹ ಕಥನಗಳನ್ನು ನಿರ್ಮಿಸುತ್ತಿದೆ.

೨೪. ಕೃತಿಯನ್ನು ಓದುವಾಗ ಲೇಖಕರ–ಓದುಗನ ಮಧ್ಯೆ ಇದ್ದ ಸಾವಯವ ಸಂಬಂಧ ಮೊಬೈಲ್, ಕಂಪ್ಯೂಟರ್ ಮೂಲಕ ನೋಡುವ ವೀಡಿಯೋ, ಸಿನಿಮಾದೊಂದಿಗೆ ಇರಲಾರದು. ಕೃತಿಯನ್ನು ಓದುವಾಗ ಮಗುವು ಲೇಖಕರು ಭಾವಿಸಿದ ಭಾವನೆಗೆ ಹತ್ತಿರಹತ್ತಿರವಾಗಿ ಸ್ಪಂದಿಸುವ ಸಾಧ್ಯತೆಯಿರುತ್ತದೆ. ಈ ಅವಕಾಶ ಅದೇ ಕಥೆ ತಂತ್ರಜ್ಞಾನದ ರೂಪದಲ್ಲಿದ್ದಾಗ ಸಾಧ್ಯವಾಗುವುದಿಲ್ಲ. ಕಾರಣ ಅದನ್ನು ನಿರ್ಮಿಸಿದವರು, ನಿರ್ದೇಶಿಸಿದವರು, ಎಡಿಟಿಂಗ್ ಮಾಡಿದವರು, ಕಲಾವಿದರು ಹೀಗೆ ಬಹು ಜನರ ಪಾಲ್ಗೊಳ್ಳುವಿಕೆಯ ಭಾಗವಾಗಿ ಚಿತ್ರ ತಯಾರಾಗಿರುತ್ತದೆ. ವೀಡಿಯೋ, ಸಿನಿಮಾ ನೋಡುವ ಮಗು ಪ್ಯಾಸಿವ್ ಆಡಿಯನ್ ಆಗಿಯಷ್ಟೇ ಇಲ್ಲಿ ಪಾಲ್ಗೊಂಡಿರುತ್ತದೆ.

ಕಥೆಯನ್ನು ಬರೆದ ಲೇಖಕನೊಂದಿಗೆ ಯಾವುದೇ ರೀತಿಯ ಸಂಬಂಧವಿರುವುದಿಲ್ಲ. ಇದು ತಂತ್ರಜ್ಞಾನದ ಸ್ವರೂಪದ ಕಥನಗಳಿಗಿಂತ ಓದಬಹುದಾದ ಕೃತಿಗಳ ಮಹತ್ವವನ್ನು ಸಾರುತ್ತದೆ. ಮತ್ತು ತಂತ್ರಜ್ಞಾನದ ಮಿತಿಯನ್ನು ಒತ್ತಿ ಹೇಳುತ್ತಿದೆ.

೨೫. ಓದು ಕೃತಿಯೊಂದು ನೋಡು ಕೃತಿಯಾಗಿ ಮಾರ್ಪಾಡುಗೊಳ್ಳಲು ಅದರದೇ ಆದ ಅಗತ್ಯದ ಗುಣಗಳನ್ನು ಹೊಂದಿರುತ್ತದೆ. ಅಂತಹ ಸಾಧ್ಯತೆಯನ್ನು ಕೃತಿ ಹೊಂದಿದ್ದರೆ ಮಾತ್ರ ಅದು ತಂತ್ರಜ್ಞಾನದ ಸ್ವರೂಪದಲ್ಲಿಯೂ ಯಶಸ್ವಿಯಾಗುತ್ತದೆ. ಈ ಗುಣ ಸ್ವಭಾವಗಳಿಲ್ಲದೆಯೂ ಕೃತಿ ಯಶಸ್ವಿಗೊಂಡಿದ್ದರೆ ಅದು ತಂತ್ರಜ್ಞಾನದ ಗೆಲುವೇ ಆಗಿರುತ್ತದೆ. ತಂತ್ರಜ್ಞಾನವನ್ನೇ ವಿಶೇಷವಾಗಿ ಅಪೇಕ್ಷಿಸುವ, ಅಲ್ಲಿನ ಸಾಧ್ಯತೆಗಳ ಹಿನ್ನೆಲೆಯಲ್ಲೇ ಸೃಷ್ಟಿಗೊಳ್ಳುವ ಕೃತಿಗಳು ಕನ್ನಡದಲ್ಲಿ ಇದುವರೆಗೂ ಕಂಡಿಲ್ಲ. ವೈಜ್ಞಾನಿಕ ಕಥೆಗಳಲ್ಲಿ ಈ ಬಗೆಯ ಅವಕಾಶಗಳು ಇರುವ ಸಾಧ್ಯತೆಯಿರುತ್ತದೆ. ಆದರೆ ಅಂಥ ಬರಹಗಳು ಹೆಚ್ಚಾಗಿ ಬರುತ್ತಿಲ್ಲ. 'ಹ್ಯಾರಿಪಾಟರ್' ಕೃತಿಯು ಪಠ್ಯಕ್ಕಿಂತ ಸಿನಿಮಾ ಆಗಿಯೇ ಹೆಚ್ಚು ಯಶಸ್ಸುಗಳಿಸಲು, ಅದರಲ್ಲಿನ ತಾಂತ್ರಿಕತೆಯ ಅಗತ್ಯವೇ ಕಾರಣವಾಗಿದೆ. ತಂತ್ರಜ್ಞಾನದ ಸಾಧ್ಯತೆಗಳಿಲ್ಲದೆಯೂ ಕೃತಿಯೊಂದು ಬಹುದೊಡ್ಡ ಓದುಗ ಮನ್ನಣೆ ಪಡೆದಿದ್ದರೆ; ಅದು ಆ ಕಥನದೊಳಗಿನ ಫ್ಯಾಂಟಸಿಯ ಗೆಲುವಾಗಿರುತ್ತದೆ. ಕನ್ನಡದ ಜನಪದ ಕಥೆಗಳು ಇದಕ್ಕೆ ಬಹು ದೊಡ್ಡ ಉದಾಹರಣೆಗಳಾಗಿ ನಿಲ್ಲುತ್ತವೆ.

೨೬. ಕನ್ನಡ ಮಕ್ಕಳ ಕಥನ ಸಾಹಿತ್ಯದಲ್ಲಿ ಫ್ಯಾಂಟಸಿಯ ಸ್ವರೂಪವು ಏಕನಿರೂಪಣೆಯ ಮಾದರಿಯಲ್ಲಿ ರಚನೆಗೊಂಡಿಲ್ಲ, ಅದು ಆಯಾ ಕಾಲಘಟ್ಟಕ್ಕೆ ತಕ್ಕಂತೆ, ಲೇಖಕರ ಮನೋಧರ್ಮದ ಹಿನ್ನೆಲೆಯಲ್ಲಿ ಆಶಯಕೇಂದ್ರಿತವಾಗಿ, ವಸ್ತು ಕೇಂದ್ರಿತವಾಗಿ ಮತ್ತು ಕಥನಕ್ರಮ, ನಿರೂಪಣಾ ವಿಧಾನ ಮುಂತಾದ ಹಲವು ಬಗೆಗಳ ಮೂಲಕ ತನ್ನೊಳಗೆ ಚಲನಶೀಲತೆಯ ಗುಣವನ್ನು ಅಂತಸ್ಥಗೊಳಿಸಿಕೊಂಡಿರುವ ಪರಿಕಲ್ಪನೆಯಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಫ್ಯಾಂಟಸಿಯ ಸ್ವರೂಪವು ಜನಪದ ಸಾಹಿತ್ಯ, ಪಂಚತಂತ್ರ, ಪಾಶ್ಚಾತ್ಯ ಸಾಹಿತ್ಯದ ಅನುವಾದಗಳು, ಹೊಸಗಾಲದ ಭಿನ್ನ ಪ್ರಯತ್ನಗಳು ಹೀಗೆ ಹಲವು ರೂಪಗಳಲ್ಲಿ ಪ್ರತ್ಯೇಕತೆಯನ್ನು ಒಳಗೊಂಡಿರುವುದನ್ನು ಗುರುತಿಸಲಾಗಿದೆ. ಕನ್ನಡ ಮಕ್ಕಳ ಕಥನ ಸಾಹಿತ್ಯದಲ್ಲಿ ವಾಸ್ತವತೆ ಮತ್ತು ಅತಿವಾಸ್ತವತೆ ಎರಡೂ ಪ್ರಮುಖ ಪರಿಕಲ್ಪನೆಗಳನ್ನು ವರ್ತಮಾನದ ಆಶಯಗಳು ಮತ್ತು ಸಮಸ್ಯೆಗಳಿಗೆ ಮುಖಾಮುಖಿಯಾಗಿಸುವ ಹಿನ್ನೆಲೆಯಲ್ಲಿ ಚರ್ಚಿಸಿರುವುದು ಸದ್ಯದ ಅಗತ್ಯವಾಗಿ ತೋರಿದೆ. ಈ ಅಧ್ಯಯನದಲ್ಲಿ ಕನ್ನಡ ಮಕ್ಕಳ ಕಥನ ಸಾಹಿತ್ಯದ ವಿಶ್ಲೇಷಣೆ ಮಾತ್ರ ಮಾಡಲಾಗಿದ್ದರೂ ಪ್ರಾಸಂಗಿಕವಾಗಿ ದೇಶ, ಭಾಷೆ, ಪ್ರಕಾರಗಳನ್ನು ಪೂರಕವಾಗಿ ಒಳಗೊಂಡಿರುವುದರಿಂದ ಮುಂದಿನ ಹಲವು ಅಧ್ಯಯನಗಳಿಗೆ ದಾರಿ ಮಾಡಿಕೊಟ್ಟಿದೆ.

ಅನುಬಂಧಗಳು

ಅ. ಪ್ರಧಾನ ಆಕರಗಳು

ಆ. ಜಾಲತಾಣ ಮೂಲ ಆಕರಗಳು (ಇಂಗ್ಲಿಷ್)

ಇ. ಪರಾಮರ್ಶನ ಆಕರಗಳು

ಉ. ಪತ್ರಿಕೆಗಳು

ಊ. ಸಂದರ್ಶನಗಳು

(ಅ) ಪ್ರಧಾನ ಆಕರಗಳು

೧. ಆನಂದ ಪಾಟೀಲ, **ಒಂದು ಎರಡು ಮೂರು ನಾಲ್ಕು ಮಕ್ಕಳಿಗಾಗೀ ನಾಟಕ ಅಷ್ಟೂ**, ವಸಂತ ಪ್ರಕಾಶನ, ಬೆಂಗಳೂರು, ೨೦೦೩

೨. ಆನಂದ ಪಾಟೀಲ, **ಅಜ್ಜೀ ಬಿಡಿಕಾಳ್ ಬಿಡಿಕಾಳು ಮೇಲೊಂದೆರಡು ಇಡಿಗಾಳು**, ವಸಂತ ಪ್ರಕಾಶನ, ಬೆಂಗಳೂರು, ೨೦೦೭

೩. ಆನಂದ ಪಾಟೀಲ, **ಎದ್ದು ನಿಂತ ಬಾಲ**, ಅಭಿನವ, ಬೆಂಗಳೂರು, ೨೦೧೪

೪. ಆನಂದ ಪಾಟೀಲ, **ಹತ್ತು ಹತ್ತು ಇಪ್ಪತ್ತು**, ಅಭಿನವ, ಬೆಂಗಳೂರು, ೨೦೦೯

೫. ಆನಂದ ಪಾಟೀಲ, **ಮಟ್ಟಾರಿ ಆನೆ ಮಟ್ ಮಟ್**, ಅಭಿನವ, ಬೆಂಗಳೂರು, ೨೦೦೯

೬. ಕಸ್ತೂರಿ.ನಾ, **ಪಾತಾಳದಲ್ಲಿ ಪಾಪಚ್ಚಿ**, (ಚಾರ್ಲ್ಸ್‌ಡುಡ್‌ಸನ್<ಲೂಯಿ ಕೆರೋಲ್>), ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೭

೭. ಕುವೆಂಪು, **ನರಿಗಳಿಗೇಕೆ ಕೋಡುಗಳಿಲ್ಲ**, ಉದಯರವಿ ಪ್ರಕಾಶನ, ಮೈಸೂರು, ೧೯೯೭

೮. ಕೃಷ್ಣಮೂರ್ತಿ ಬಿಳಿಗೆರೆ, **ಚಗಚೆ ಹೂವಿನ ಹುಡುಗಿ**, ನಮ್ಮ ಪ್ರಕಾಶನ, ತಿಪಟೂರು, ೨೦೦೯

೯. ಗೀತಾ ಕುಲಕರ್ಣಿ, **ಹಾರುವ ಕಂಬಳಿ**, ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ, ಧಾರವಾಡ, ೧೯೭೯

೧೦. ಗೋಪಾಲ ಕೃಷ್ಣ ಉಡುಪ, **ಎಳೆಯರಿಗಾಗಿ ಪಂಚತಂತ್ರ ಕಥೆಗಳು**, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು, ೨೦೦೯

೧೧. ಗೋಪಾಲರಾವ್ ಬಿ., **ಪಂಚತಂತ್ರ ಕಥಾಸಾಗರ**, ಸಪ್ನ ಬುಕ್ ಹೌಸ್ ಬೆಂಗಳೂರು, ೨೦೧೭

೧೨. ಚಂದ್ರಕಾಂತ ಕರದಳ್ಳಿ, **ಉಪ್ಪಿನಗೊಂಬೆ**, ವಿಚಾರ ಪ್ರಕಾಶನ, ಶಹಾಪುರ, ೨೦೧೦

೧೩. ಚಂದ್ರಶೇಖರ ಕಂಬಾರ, **ಮರವೇ ಮರ್ಮರವೇ**, ಅಂಕಿತ ಪುಸ್ತಕ ಬೆಂಗಳೂರು, ೨೦೦೭

೧೪. ಜನಾರ್ಧನ ಭಟ್.ಜಿ (ಜೆ.ಎಂ.ಬೆರ್ರಿ), ಆನಂದ ಪಾಟೀಲ(ಸಂ), **ಪೀಟರ್ ಪ್ಯಾನ್ ಸಾಹಸಗಳು**, ಮಕ್ಕಳ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೬

೧೫. ಡಿಸೋಜ.ನಾ, **ಹಾಡುವ ಹಕ್ಕಿಗೆ ಹಸಿರೆಲೆ ತೋರಣ**, ಗೀತಾಂಜಲಿ ಪ್ರಕಾಶನ ಶಿವಮೊಗ್ಗ, ೨೦೧೨

೧೬. ತಮ್ಮಣ್ಣ ಬೀಗಾರ, **ಜಿಂಕೆ ಮರಿ**, ಉದಯ ಪ್ರಕಾಶನ ಬೆಂಗಳೂರು, ೨೦೦೯

೧೭. ತಯಬ ಅಲಿ ಹೊಂಬಳ, **ಹುಲಿಬಾಬಾ ಮತ್ತು ನಲವತ್ತು ಪ್ರಾಣಿಗಳು**, ಶ್ರೀ ಮೆಹಬೂಬ ಪ್ರಕಾಶನ, ಗದಗ, ೨೦೧೬

೧೮. ತಿರುಮಲಮ್ಮ, **ಪುಟಾಣಿ ಮಕ್ಕಳ ವೈಜ್ಞಾನಿಕ ಕಥೆಗಳು**, ಐ.ಬಿ.ಎಚ್. ಪ್ರಕಾಶನ ಬೆಂಗಳೂರು, ೧೯೮೮

೧೯. ದೇವುಡು, **ಬುದ್ಧಿಯ ಕಥೆಗಳು**, ಹೇಮಂತ ಸಾಹಿತ್ಯ ಪ್ರಕಾಶನ, ಬೆಂಗಳೂರು, ೨೦೧೧

೨೦. ಧನಪಾಲ ನೆಲವಾಗಿಲು (ಸಲೀಂ), **ಮೇಧಾ೦೧೭**, ಧನಪಾಲ್ ನಾಗರಾಜಪ್ಪ ಪ್ರಕಾಶನ, ಬೆಂಗಳೂರು, ೨೦೧೮

೨೧. ನವಗಿರಿ ನಂದ, **ಚೌಕಾಸಿಯ ಪಾಠ** ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೧

೨೨. ನವೀನ್ ಐನಳ್ಳಿ, **ಗೇಗ್ರಾನ್**, ನಿವೇದಿತಾ ಪ್ರಕಾಶನ, ಬೆಂಗಳೂರು, ೨೦೧೭

೨೩. ನೀಲಾಂಬರಿ, **ಸೂರ್ಯನಲ್ಲಿಗೆ ನಿಯೋಗ**, ಇಂಚರ ಪ್ರಕಾಶನ, ಬೆಂಗಳೂರು, ೧೯೯೭

೨೪. ನೀಲಾಂಬರಿ, **ಅಂತರಿಕ್ಷ ಷಟಲ್ ಅಂಗಾರಕ**, ನವಕರ್ನಾಟಕ ಪ್ರಕಾಶನ, ೧೯೯೮

೨೫. ನೀಲಾಂಬರಿ, **ಅಶ್ವಶಕ್ತಿ ೫೦೦೦**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೯

೨೬. ಪಂಜೆ ಮಂಗೇಶರಾಯ, **ಪಂಜೆ ಮಂಗೇಶರಾಯರ ಮಕ್ಕಳ ಕಥೆಗಳು**, ಅಂಕಿತ ಪುಸ್ತಕ, ಬೆಂಗಳೂರು, ೨೦೧೫

೨೭. ಪಾಟೀಲ ಗುಂಡೂರ ಎಸ್.ವಿ., **ವಿಕ್ರಮಬೇತಾಳ**, ಶಾಬಾದಿಮಠ ಬುಕ್ ಪಬ್ಲಿಷರ್ಸ್, ಗದಗ, ೨೦೦೪

೨೮. ಪುಟ್ಟಣ್ಣ.ಎಂ.ಎಸ್., **ನೀತಿ ಚಿಂತಾಮಣಿ** (೧ ರಿಂದ ೧೫ ಭಾಗಗಳು), ಕಾವ್ಯಾಲಯ ಪ್ರಕಾಶಕರು, ಮೈಸೂರು, ೧೯೯೯

೨೯. ಪ್ರಭು ಎಂ.ಎಸ್.ಕೆ., (ಕಾರ್ಲೊ ಕೊಲೋಡಿಯ) **ಪೋಕರಿ ಪಾಪಣ್ಣನ ಪರಾಕು**, ಸಾಹಿತ್ಯ ಭಂಡಾರ, ಬೆಂಗಳೂರು, ೨೦೧೩

೩೦. ಬ್ಯಾಕೋಡ.ಹ.ಸ., **ಹಾರದಿರಲಿ ಪ್ರಾಣಪಕ್ಷಿ**, ಶ್ರೀ ಅಮ್ಮ ಪ್ರಕಾಶನಬೆಂಗಳೂರು, ೨೦೧೩

೩೧. ಬ್ಯಾಕೋಡ.ಹ.ಸ., **ಆಪರೇಷನ್ ಆನೆಮಲೆ**, ಶ್ರೀ ಅಮ್ಮ ಪ್ರಕಾಶನ, ಬೆಂಗಳೂರು, ೨೦೧೪

೩೨. ಭೈರನಟ್ಟಿ .ಹ.ಸಿ., **ಆರೋಹಣ**, ಅಭಿನವ, ಬೆಂಗಳೂರು, ೨೦೦೯

೩೩. ಮತ್ತೂರು ಸುಬ್ಬಣ್ಣ, **ಕುಮಾ ಮತ್ತಿತರ ಕಥೆಗಳು**, ಅನು ಪ್ರಕಾಶನ, ಬೆಂಗಳೂರು, ೨೦೧೨

೩೪. ಮತ್ತೂರು ಸುಬ್ಬಣ್ಣ, **ಅಂಶು, ಅನು ಮತ್ತು ರೋಬೊ**, ಅಭಿನವ, ಬೆಂಗಳೂರು, ೨೦೦೯

೬೫. ಮೀನಾ ಮೈಸೂರು, **ಉಯ್ಯಾಲೆಯಲ್ಲಿ ಹಸು**,(ಜುಜ್ಜಾ ವೈಸಲ್ಯಾಂಡರ್), ನ್ಯಾಷನಲ್ ಬುಕ್ ಟ್ರಸ್ಟ್, ಬೆಂಗಳೂರು. ೨೦೦೫

೬೬. ಮೇವುಂಡಿ ಮಲ್ಲಾರಿ, **ಮೂವರು ಕಳ್ಳರು**, ಸಮಾಜ ಪುಸ್ತಕಾಲಯ, ಧಾರವಾಡ, ೧೯೮೬

೬೭. ಮೇವುಂಡಿ ಮಲ್ಲಾರಿ, **ತಿರುವು ಮುರುವು**, ಸಮಾಜ ಪುಸ್ತಕಾಲಯ, ಧಾರವಾಡ, ೧೯೮೯

೬೮. ಮೇವುಂಡಿ ಮಲ್ಲಾರಿ, **ಮಡ್ಡಮ್ಮನ ಕಥೆಗಳು**, ಸಮಾಜ ಪುಸ್ತಕಾಲಯ, ಧಾರವಾಡ, ೧೯೮೯

೬೯. ಮೇವುಂಡಿ ಮಲ್ಲಾರಿ, **ಬಂಗಾರದ ಕೂದಲಿನ ರಾಕ್ಷಸ**, ಸಮಾಜ ಪುಸ್ತಕಾಲಯ, ಧಾರವಾಡ, ೧೯೮೯

೭೦. ಮೇವುಂಡಿ ಮಲ್ಲಾರಿ, **ಕೆಂಪು ಮೋತಿ ಹಂಪಣ್ಣ**, ಸಮಾಜ ಪುಸ್ತಕಾಲಯ, ಧಾರವಾಡ, ೧೯೯೦

೭೧. ರಘುನಾಥ ಚ.ಹ., **ಪುಟ್ಟಲಕ್ಷ್ಮಿ ಕಥೆಗಳು**, ಅಂಕಿತ ಪುಸ್ತಕ, ಬೆಂಗಳೂರು, ೨೦೧೭

೭೨. ರಾಜರತ್ನಂ ಜಿ.ಪಿ., **ಜಾತಕ ಕಥೆಗಳು**, ಶಾಕ್ಯ ಸಾಹಿತ್ಯ ಮಂಟಪ, ಬೆಂಗಳೂರು, ೧೯೮೧

೭೩. ರಾಜರತ್ನಂ ಜಿ.ಪಿ., **ಕಥಾಕೋಶ**, (ಸಂಗ್ರಹ ಮತ್ತು ನಿರೂಪಣೆ), ಎಸ್.ಬಿ.ಎಸ್.ಪಬ್ಲಿಷರ್ಸ್, ಬೆಂಗಳೂರು, ೨೦೧೨

೭೪. ರಾಜಶೇಖರ ಭೂಸನೂರಮಠ, **ಭಲೆ ಪಿಂಕಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೪

೭೫. ರಾಜಶೇಖರ ಭೂಸನೂರಮಠ, **ನಿಯಮಗಳ ನಾಡಿನಲ್ಲಿ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೬

೭೬. ರಾಜಶೇಖರ ಭೂಸನೂರಮಠ, **ವಿಜಯನ ಕಥೆ**, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೦

೭೭. ರಾಮಚಂದ್ರರಾವ್ ಹೆಚ್.ವಿ., **ಹಾಡುವ ಕೋಗಿಲೆ**, ಅಭಿರುಚಿ ಪ್ರಕಾಶನ, ಬೆಂಗಳೂರು, ೧೯೯೧

೭೮. ಲಿಂಗರಾಜ ರಾಮಾಪುರ, **ಗುಬ್ಬಿಗೊಂದು ಮನೆಯ ಮಾಡಿ**, ಚಿಲಿಪಿಲಿ ಪ್ರಕಾಶನ, ಧಾರವಾಡ, ೨೦೧೫

೭೯. ವೈದೇಹಿ, **ಅಬ್ಬಾಲಕ್ಕ ಅಜ್ಜೀಮನೆಗೆ ಹೋಗಿದ್ದು**, ಜಡಭರತ ಪ್ರಕಾಶನ, ಧಾರವಾಡ, ೨೦೧೪

೮೦. ಶಂಕರಾನಂದ, (ರುಡ್‌ಯಾರ್ಡ್ ಕಿಪ್ಲಿಂಗ್) **ಕಾಡಿನ ಕಥೆ**, ಸ್ನೇಹ ಬುಕ್ ಹೌಸ್, ಬೆಂಗಳೂರು, ೨೦೧೧

೫೧. ಶಾಂತಾ ಸಾಗರಾಜ, **ಕಾಗಜ್ಜನ ನ್ಯಾಯ**, ಅಭಿನವ, ಬೆಂಗಳೂರು, ೨೦೧೩

೫೨. ಶಿವದಾಸ, **ಬೇತಾಳನ ಕಥೆಗಳು**, ಪಾರು ಪ್ರಕಾಶನ, ಗದಗ, ೨೦೧೦

೫೩. ಶಿವಲಿಂಗಪ್ಪ ಹಂದಿಹಾಳು ಕೆ., (ರಾಮೇಂದ್ರ ಕುಮಾರ)**ಶಾವ್ರೋಲಿನ್**, ಅಭಿನವ, ಬೆಂಗಳೂರು, ೨೦೧೨

೫೪. ಶ್ರೀನಿವಾಸ ಉಡುಪ ಎನ್., **ಗೂಬಜ್ಜಿಯ ಗೊರಕೆ**, ನವಕರ್ನಾಟಕ ಪ್ರಕಾಶನ, ಬೆಂಗಳೂರು ೨೦೧೨

೫೫. ಸವಿತಾ ಪ್ರಭಾಕರ್, **ಮಕ್ಕಳ ಕಥಾ ಪ್ರಪಂಚ** (ಸಂ) ಗೀತಾಂಜಲಿ ಪ್ರಕಾಶನ, ಬೆಂಗಳೂರು, ೨೦೧೨

೫೬. ಸೊಂನಾಲ, **ಬುದ್ಧ ಜಾತಕ ಕಥೆಗಳು**, ಕಾವ್ಯಕಲಾ ಪ್ರಕಾಶನ, ಬೆಂಗಳೂರು, ೧೯೯೧

೫೭. ಹೊಯ್ಸಳ, **ಕುಂಟುನಾಯಿ**, ಸಮಾಜ ಪುಸ್ತಕಾಲಯ, ಧಾರವಾಡ,

(ಆ) ಜಾಲತಾಣ ಮೂಲ ಆಕರಗಳು (ಇಂಗ್ಲಿಷ್)

1. Beth Webb, The real purpose of fantasy, The Guardian.com, 2007
2. Isaac Gilman, Shutting the Window: the Loss of Innocence in Twentieth-Century Children's Literature, lib.latrobe.edu.au, 2005
3. Siobhan Lam '08, The Rise of Children's Fantasy Literature: The Fate of Moral Tales-, Undergraduate Research Assistant, Brown University, 2007
4. Trevor Green, Why fantasy is important, beyond dragonsand wizards.blogspot.com, 2010
5. Victoria Flanagan , Children's fantasy literature: why escaping reality is good for kids, theconversation.com, 2014
6. William Gray, Fantasy,Myth and the Measure of Truth, palgrave Macmillan (UK) 2009

(ಇ) ಪರಾಮರ್ಶನ ಆಕರಗಳು

೧. ಆನಂದ ಪಾಟೀಲ, **ಹೀಗೆ ಸ್ವಲ್ಪ ಆಚೀಚೆ**, ಅಭಿನವ, ಬೆಂಗಳೂರು, ೨೦೦೨

೨. ಆನಂದ ಪಾಟೀಲ, **ಅಲರು**, ಅಭಿನವ, ಬೆಂಗಳೂರು, ೨೦೧೨

೩. ಆನಂದ ಪಾಟೀಲ, ಬಸು ಬೇವಿನಗಿಡದ(ಸಂ), ಮಕ್ಕಳ ಬರವಣಿಗೆಯ ಉತ್ಕರ್ಷಕಾಲ, **ಮಕ್ಕಳ ಸಾಹಿತ್ಯ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೫

೪. ಆನಂದ ಪಾಟೀಲ, **ಮುಗುಳು**, ಅಭಿನವ, ಬೆಂಗಳೂರು, ೨೦೧೬

೫. ಆನಂದ ಪಾಟೀಲ, **ಮಕ್ಕಳ ಸಾಹಿತ್ಯ ಓದು: ಒಲವು ಪತ್ರಿಕೆ**, ಧಾರವಾಡ, ೨೦೧೯

೬. ಕುವೆಂಪು, **ಮಕ್ಕಳ ಸಾಹಿತ್ಯದಲ್ಲಿ ಆಧುನಿಕ ಮೌಲ್ಯಗಳು**, ಕುವೆಂಪು ಸಮಗ್ರ ಗದ್ಯ ಸಂ:೨, ಕನ್ನಡ ವಿಶ್ವ ವಿದ್ಯಾಲಯ, ಹಂಪಿ,

೭. ಗಣೇಶ ಕೋಡೂರು ಕೆ, **ನಿಮ್ಮ ಮ್ಮಕಳು ಯಾವ ಪುಸ್ತಕಗಳನ್ನು ಓದಬೇಕು?** ಗೀತಾಂಜಲಿ ಪ್ರಕಾಶನ, ಬೆಂಗಳೂರು, ೨೦೧೯

೮. ದುರ್ಗಸಿಂಹ ವಿರಚಿತ **ಕರ್ಣಾಟಪಂಚತಂತ್ರಂ** ಸಿಪಿಕೆ(ಸಂ), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೯

೯. ದೇವುಡು, **ಬುದ್ಧಿಯ ಕಥೆಗಳು**, ಹೇಮಂತ ಸಾಹಿತ್ಯ, ಬೆಂಗಳೂರು, ೨೦೧೫

೧೦. ನಿರುಪಮಾ, **ಭಾರತೀಯ ಮಕ್ಕಳ ಸಾಹಿತ್ಯ ಸಮೀಕ್ಷೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪

೧೧. ನಿಂಗು ಸೊಲಗಿ, **ಮಕ್ಕಳ ರಂಗಭೂಮಿ:ಪ್ರದರ್ಶನ ಪ್ರಕ್ರಿಯೆ**, ಚಿಲಿಪಿಲಿ ಪ್ರಕಾಶನ, ಧಾರವಾಡ, ೨೦೧೩

೧೨. ಪರಮಶಿವಯ್ಯ ಜೀ.ಶಂ., **ಜಾನಪದ ಕೆಲವು ಮುಖಗಳು**, ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ, ಧಾರವಾಡ, ೧೯೭೫

೧೩. ಪ್ರಭು ಎಂ.ಎಸ್.ಕೆ., **ಸಾಹಿತ್ಯದಲ್ಲಿ ಫ್ಯಾಂಟಸಿ**, ಪ್ರತಿಭಾ ಯುವ ವೇದಿಕೆ, ಬೆಂಗಳೂರು, ೧೯೯೨

೧೪. ಬಸು ಬೇವಿನಗಿಡದ, **ಮಕ್ಕಳ ಸಾಹಿತ್ಯ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೫

೧೫. ರಾಜೇಂದ್ರ ಗಡಾದ, **ಮಕ್ಕಳ ಸಾಹಿತ್ಯ ಹಾಗೂ 'ಸಿಸು' ಸಂಗಮೇಶ'**, ಸಂಗಮ ಪ್ರಕಾಶನ, ಗದಗ, ೨೦೦೯

೧೬. ರೈಟರ್ ಅಂಡ್ ಇಲ್ಲಸ್ಟ್ರೇಟರ್–**ಐಬಿಬಿವೈ ಪತ್ರಿಕೆ**, ದೆಹಲಿ, ೧೯೯೮

೧೭. ವಿಕಿಪಿಡಿಯಾ: ಜಂಗಲ್ ಬುಕ್, ಪೀಟರ್ ಪ್ಯಾನ್ ಅಡ್ವೆಂಚರ್ಸ್, ಪಿನೋಕಿಯ, ಆಲೀಸ್ ಇನ್ ವಂಡರ್‌ಲ್ಯಾಂಡ್, ಜುಜ್ಜಾ ವೈಸ್‌ಲ್ಯಾಂಡರ್, ಜೆ.ಎಂ.ಬೆರ್ರಿ, ಚಾರ್ಲ್ಸ್‌ಡುಡ್‌ಸನ್<ಲೂಯಿ ಕೆರೋಲ್, ಕಾರ್ಲೊ ಕೊಲೋಡಿಯ

೧೮. ವೀರೇಶ ಬಡಿಗೇರ, ಚನ್ನವೀರಪ್ಪ, **ವಿಷ್ಣುಶರ್ಮನ ಪಂಚತಂತ್ರ ಕಥೆಗಳ ಸಾರ ಸಂಗ್ರಹ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೧೯. ಶಿವಲಿಂಗಪ್ಪ ಹಂದಿಹಾಳು ಕೆ., **ಆನಂದಾವಲೋಕನ**, ಅಭಿನವ, ಬೆಂಗಳೂರು, ೨೦೧೯

೨೦. ಶೇಖರ್ ಎಂ.ಎಸ್., (ಸಂ), **ನಮ್ಮ ಮುಸ್ಲಿಂ ಹಿನ್ನೆಲೆಯ ಜನಪದ ಕತೆಗಳು**, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೧

೨೧. ಶೇಷಗಿರಿ ರಾವ್ ಎಲ್.ಎಸ್., **ಹೊಸಗನ್ನಡ ಸಾಹಿತ್ಯ ಚರಿತ್ರೆ**, ಅಂಕಿತ ಪುಸ್ತಕ, ಬೆಂಗಳೂರು, ೧೯೯೯

೨೨. ಸರಸ್ವತಿ ಎಸ್.ಬಿ., **ಜಾನಪದ ಕಥಾಸಂಗ್ರಹ**, ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ೨೦೧೦

೨೩. ಸುಜಾತಾ. ಎಚ್.ಎಸ್., **ಎಂ.ಎಸ್.ಪುಟ್ಟಣ್ಣ ಒಂದು ಅಧ್ಯಯನ**, ಐ.ಬಿ.ಹೆಚ್ ಪ್ರಕಾಶನ, ಬೆಂಗಳೂರು, ೧೯೮೧

(ಈ). ಜಾಲತಾಣಗಳು

24. https://en.wikipedia.org/wiki/Children's_literature
25. https://www.researchgate.net/publication/318180967_Technology_and_Children's_Literature
26. https://www.gov.scot/publications/literature-review-impact-digital-technology-learning-teaching/pages/4/
27. https://www.maacindia.com/blog/evolution-of-indian-animation
28. https://en.wikipedia.org/wiki/Indian_animation_industry
29. https://eduzenith.com/impact-of-technology-on-education
30. https://courses.lumenlearning.com/suny-steps-to-success/chapter/7-influence-of-the-digital-age-on-childrens-literature-and-its-use-in-the-classroom/
31. https://en.wikipedia.org/wiki/Technology
32. https://en.wikipedia.org/wiki/Harry_Potter
33. https://en.wikipedia.org/wiki/List_of_indian_animated_feature_films
34. https://en.wikipedia.org/wiki/Andy_Pirki
35. http://in.youtube.com/
36. https://www.youtube.com/?gl=IN

37. https://en.wikipedia.org/wiki/Indian_comics

38. http://trace.tennessee.edu/cgi/viewcontent.cgi?article=2706&context=utk_chanhonoproj

39. https://en.wikipedia.org/wiki/List_of_Indian_comics

40. https://johnromaniello.com/modern-mythology-superheroes/

41. https://en.m.wikipedia.org/wiki/Indrajal_Comics

42. https://www.pinterest.com/amp/pin/253343509874703/

43. https://comicvine.gamespot.com/indrajal-comics/4050-40270/characters/

44. https://en.m.wikipedia.org/wiki/Bahadur_(comics)

(ಉ) ಪತ್ರಿಕೆಗಳು

೧. ಚಂದಮಾಮಾ

೨. ತುಂತುರು

೩. ಬಾಲ ಮಂಗಳ

(ಊ) ಸಂದರ್ಶನಗಳು


೧. **ಆನಂದ ಪಾಟೀಲ** – ನಿವೃತ್ತ ಆಕಾಶವಾಣಿ ನಿರ್ದೇಶಕರು, ಮೈಸೂರು. ಇವರು ಕನ್ನಡದ ಮಕ್ಕಳ ಸಾಹಿತ್ಯದ ವಿಮರ್ಶಾ ಕ್ಷೇತ್ರದಲ್ಲಿ ಹೆಚ್ಚು ಕೆಲಸ ಮಾಡಿದ ಚಿಂತಕರಾಗಿದ್ದಾರೆ. ಹಾಗೆಯೇ ಆಕಾಶವಾಣಿಯಲ್ಲಿ ಕಾರ್ಯನಿರ್ವಹಿಸಿದ್ದರಿಂದ ಮಕ್ಕಳ ಕಥೆಗಳನ್ನು ತಂತ್ರಜ್ಞಾನದ ವ್ಯಾಪ್ತಿಗೆ ತಂದು ರೇಡಿಯೋ ಮೂಲಕ ಅನೇಕ ಕಾರ್ಯಕ್ರಮಗಳ ಮೂಲಕ ಪ್ರಸಾರ ಮಾಡಿದ್ದಾರೆ. ಇವರನ್ನು ದಿನಾಂಕ ೦೮-೧೦-೨೦೧೭ರಂದು ಧಾರವಾಡದ ಅವರ ನಿವಾಸದಲ್ಲಿ ಸಂದರ್ಶನ ಮಾಡಲಾಯಿತು.

೨. **ನರೇಂದ್ರ ಪಾರೆಕಟ್** – ಇವರು ಬಾಲ ಮಂಗಳ ಮಕ್ಕಳ ಮಾಸ ಪತ್ರಿಕೆಯ ಸಂಪಾದಕರಾಗಿ ಕಳೆದ ಇಪ್ಪತ್ತೈದು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಕನ್ನಡದಲ್ಲಿ ಕಾಮಿಕ್ಸ್ ಪರಂಪರೆಯನ್ನು ಬಹು ದೀರ್ಘಕಾಲದಿಂದ ತಮ್ಮ ಪತ್ರಿಕೆಯ ಮೂಲಕ ನಡೆಸಿಕೊಂಡು ಬಂದಿದ್ದಾರೆ. 'ಡಿಂಗ', 'ಶಕ್ತಿಮದ್ದು' ಕಾಮಿಕ್ಸ್‌ಗಳು ಆಧುನಿಕ ಕಾಲಘಟ್ಟದಲ್ಲಿ ಮುದ್ರಣ ತಂತ್ರಜ್ಞಾನದ ಸಾಧ್ಯತೆಯಾಗಿ ಪಡೆದುಕೊಂಡ ಪ್ರಾಮುಖ್ಯತೆ ಕುರಿತು ಇವರನ್ನು ದಿನಾಂಕ ೦೭-೦೭-೨೦೧೯ರಂದು ಬೆಂಗಳೂರಿನ ಬಾಲಮಂಗಳ ಕಛೇರಿಯಲ್ಲಿ ಸಂದರ್ಶನ ಮಾಡಲಾಯಿತು.

೩. **ಬಸು ಬೇವಿನಗಿಡದ** – ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ ಕಾರ್ಯಕ್ರಮ ಆಯೋಜಕರಾದ ಇವರು ಮಕ್ಕಳ ಸಾಹಿತ್ಯದಲ್ಲೂ ಕೃಷಿ ಮಾಡಿದ್ದಾರೆ. ಇವರನ್ನು ರೇಡಿಯೋ ಮೂಲಕ ಪ್ರಸಾರವಾದ ಮಕ್ಕಳ ಕಥನದ ಕುರಿತು ಮಾಹಿತಿ ಪಡೆಯಲು ದಿನಾಂಕ ೦೮-೧೦-೨೦೧೭ ರಂದು ಧಾರವಾಡದಲ್ಲಿ ಸಂದರ್ಶನ ಮಾಡಲಾಯಿತು.

೪. **ವಿವೇಕ ಬೋಲಾರ** – ಪೋಗೋ ಚಾನಲ್‌ನಲ್ಲಿ ಪ್ರಸಾರವಾಗುವ 'ಆಂಡಿ ಪಿರ್ಕಿ' ಎನ್ನುವ ಸಂಭಾಷಣಾರಹಿತ ಧಾರಾವಾಹಿ ಕಾರ್ಯಕ್ರಮದ ನಿರ್ದೇಶಕರು. ಇವರನ್ನು ದಿನಾಂಕ ೦೪-೧೦-೨೦೧೮ರಂದು ಫೋನಿನ ಮೂಲಕ ಸಂಭಾಷಣೆ ನಡೆಸುವ ಮೂಲಕ ಸಂದರ್ಶನ ಮಾಡಲಾಯಿತು.

* * *



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ